॥ ಶ್ರೀಃ ॥

ಶ್ರೀ ಸಚ್ಚಿದಾನಂದ ಶಿವಾಭಿನವ
ನೃಸಿಂಹಭಾರತೀ ಸ್ವಾಮಿಗಳವರ
ದಿವ್ಯ ಚರಿತ್ರೆ



ಪ್ರಕಾಶಕರು

ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್


ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್

ಶೃಂಗೇರಿ - 577 139



ಶ್ರೀ ಶಾರದಾ ದೇವಿ


ಶ್ರೀ ಶಾರದಾ ಪೀಠಮ್, ಶೃಂಗೇರಿ



ಜಗದ್ಗುರು ಶ್ರೀ ಆದಿಶಂಕರಾಚಾರ್ಯರು
ಕ್ರಿ.ಶ. 788 ರಿಂದ 820



ಶ್ರೀ ಚಂದ್ರಶೇಖರ ಭಾರತೀ ಶ್ರೀಗಳವರು



ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್, ಶೃಂಗೇರಿ

ಶ್ರೀ

ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರ ದಿವ್ಯ ಚರಿತ್ರೆ

ವೇ॥ ಬ್ರ॥ ಶ್ರೀ ನಂಜನಗೂಡು ಶ್ರೀಕಂಠಶಾಸ್ತ್ರೀ

ಪ್ರಕಾಶಕರು
ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್
ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಮ್
ಶೃಂಗೇರಿ - 577 139

SRI SACCHIDANANDA SIVABHINAVA NARASIMHA BHARATI GALAVARA DIVYA CHARITRE
By Nanjangud Srikanta Sastry:
Pub: By Satamanotsava Samithi, Sri Shankara Matha: Shankarapuram, Bangalore : 2007

ಬೆಲೆ: ರೂ. 60/-

ಮೊದಲನೆಯ ಮುದ್ರಣ: 1924
ಪುನರ್‌ಮುದ್ರಣ: 1988
ಮರುಮುದ್ರಣ: 2007.

ಅಕ್ಷರ ಜೋಡಣೆ:
ಅತ್ರಿ ಗ್ರಾಫಿಕ್ಸ್
ಬೆಂಗಳೂರು-50
ದೂರವಾಣಿ: 26799072

ಮುದ್ರಕರು:
ವಾಗರ್ಥ
149, 8ನೇ ಅಡ್ಡರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು-560 019. ದೂರವಾಣಿ: 22427677

ನಿವೇದನೆ

ಪ್ರಾತಃಸ್ಮರಣೀಯ ಪೂಜ್ಯಪಾದ ಜಗದ್ಗುರು ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಸ್ವಾಮಿಗಳವರು ಪರಮ ವಿರಕ್ತರೂ. ಕರುಣಾರ್ದ್ರ ಹೃದಯರೂ, ಅನೇಕ ದರ್ಶನ ಪಾರಂಗತರೂ, ಭಕ್ತಜನ ಕಲ್ಪದ್ರುಮರೂ, ದಿಗಂತ ವಿಶ್ರಾಂತಕೀರ್ತಿಗಳೂ ಆಗಿದ್ದರು. ತಮ್ಮ ಸಮರ್ಥ ನಿರ್ವಹಣ ಕಾಲದಲ್ಲಿ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ ಹಿರಿಮೆಯನ್ನು ಬೆಳೆಸಿದರು. ಪಂಡಿತ ಪಾಮರ ಸಕಲ ಜನರಲ್ಲಿಯೂ ಸಮಾನವಾದ ಅನುಗ್ರಹವನ್ನು ಮಾಡಿದವರು. ವೈಭವೋಪೇತವಾದ ಪೀಠದಲ್ಲಿದ್ದು ಆಗಿನ ರಾಜ ಮಹಾರಾಜರುಗಳಿಂದ ವಂದಿತಚರಣಾರವಿಂದರಾದರೂ ಯತಿಧರ್ಮನಿಷ್ಠರಾದ ವೀತರಾಗರು.

ಈ ಮಹಾಮಹಿಮರ ಜೀವನ ಚರಿತ್ರೆಯು ಆಸ್ತಿಕರ ಜೀವನ ಮಾರ್ಗದಲ್ಲಿ ಒಂದು ಪ್ರಕಾಶಕ ಜ್ಯೋತಿ. ಆ ಕಾರಣದಿಂದಾಗಿ ಅವರ ಚರಿತ್ರೆಯನ್ನು ಮಠದ ಮುಖ್ಯಾಧಿಕಾರಿಗಳಾದ, ಗುರುಭಕ್ತರಾಗಿ ಸಮರ್ಥ ನಿರ್ವಾಹಕರೆಂದು ಕೀರ್ತಿ ಪಡೆದ ವೇ|| ಶ್ರೀ|| ಶ್ರೀಕಂಠ ಶಾಸ್ತ್ರಿಗಳು ಬರೆದರು. ಈ ಚರಿತ್ರೆಯಲ್ಲಿ ಪರಮ ಗುರುಗಳವರ ಭಕ್ತರಾದ ಅನೇಕ ಮಹನೀಯರ ಸಂಪರ್ಕ ಸಂದರ್ಭಗಳನ್ನು ಚಿತ್ರಿಸಿ ಆ ಕಾಲದ ಆಸ್ತಿಕ ಜನಜೀವನದ ಪರಿಚಯವನ್ನು ಮಾಡಿಸಿರುವುದು ಒಂದು ವಿಶೇಷ. ವೇ|| ಬ್ರ|| ಶ್ರೀ ನಂಜನಗೂಡು ಶ್ರೀ ಶ್ರೀಕಂಠ ಶಾಸ್ತ್ರಿಗಳವರು ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಮಹಾಸ್ವಾಮಿಗಳವರ ಈ ಜೀವನ ಚರಿತ್ರೆಯನ್ನು ಸುಮಾರು ಆರು ದಶಕಗಳ ಹಿಂದೆ ರಚಿಸಿ ಪ್ರಕಟಿಸಿದ್ದರು.

ಜಗದ್ಗುರು ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಮಹಾಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿಸಿ ೧೯೦೭ನೇ ಇಸವಿಯಲ್ಲಿ ಈಗ ಶಂಕರಪುರದಲ್ಲಿರುವ ಶ್ರೀ ಶೃಂಗೇರಿ ಶಂಕರ ಮಠವನ್ನು ಆರಂಭಿಸಿ ಮೊಟ್ಟಮೊದಲಿಗೆ ಶ್ರೀ ಆದಿಶಂಕರಾಚಾರ್ಯರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿದರು. ಇದೀಗ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಅದರ ಶತಮಾನೋತ್ಸವಕ್ಕೆಂದು ಬೆಂಗಳೂರಿಗೆ ಚಿತ್ತೈಸಿರುವ ಸಂದರ್ಭದಲ್ಲಿ ಬಹುದಿನಗಳಿಂದ ಅಲಭ್ಯವಾಗಿದ್ದ ಈ ಗ್ರಂಥವನ್ನು ಪುನಃಮುದ್ರಿಸಲಾಗಿದೆ. ಇದರ ಕರಡಚ್ಚು ತಿದ್ದುವ ಕಾಯಕವನ್ನು ಕೈಗೊಂಡ ಶಂಕರಕೃಪಾ ಪತ್ರಿಕೆಯ ಸಂಪಾದಕರಾದ ಡಾ|| ಬಿ. ಎಸ್. ರಾಮಕೃಷ್ಣರಾವ್ ಅವರಿಗೆ ಧನ್ಯವಾದಗಳು.

ಗುರುಸೇವಾಧುರೀಣ

ಬೆಂಗಳೂರು
೯-೪-೨೦೦೭

ವಿ. ಆರ್. ಗೌರೀಶಂಕರ್
ಆಡಳಿತಾಧಿಕಾರಿ, ಶ್ರೀ ಶಾರದಾಪೀಠ, ಶೃಂಗೇರಿ

ಶ್ರೀಗುರುಭ್ಯೋ ನಮಃ

ಪರಮಪವಿತ್ರರೂ ಮಹಾಮಹಿಮರೂ ಮಹಾನುಭಾವರೂ ಜಗತ್ಪೂಜ್ಯರೂ ಆಗಿ ದಕ್ಷಿಣಾಮ್ನಾಯಪೀಠ ಶೃಂಗಗಿರಿವ್ಯಾಖ್ಯಾನ ಸಿಂಹಾಸನದಲ್ಲಿ ದಯಮಾಡಿಸಿದ್ದ **ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರ** 67ನೆಯ ಜಯಂತ್ಯುತ್ಸವವನ್ನು ಶಾಲಿವಾಹನಶಕ 1846ನೆಯ ರುಧಿರೋದ್ಗಾರಿ ಸಂವತ್ಸರ ಫಾಲ್ಗುಣ ಬಹುಳೈಕಾದಶಿಯಲ್ಲಿ ತಚ್ಛಿಷ್ಯವರ್ಯರು ಶೃಂಗೇರಿಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಮೈಸೂರು ರಾಜಧಾನಿಯಲ್ಲಿ ನಡೆಸಿ, ಗುರುಭಕ್ತಿ ಪ್ರದರ್ಶಕವಾಗಿ ಸ್ವಗುರುವರ್ಯಮೂರ್ತಿ ಪ್ರತಿಷ್ಠಾ ಸಮಾರಂಭಮಹೋತ್ಸವವನ್ನು ಆ ಶ್ರೀಗಳವರ ಜನ್ಮಭೂಮಿಯಲ್ಲಿ ನೆರವೇರಿಸಿದ ಸಂದರ್ಭದಲ್ಲಿ, ತದ್ಜ್ಞಾಪಕವಾಗಿ ಈ ದಿವ್ಯಚರಿತ್ರೆಯು ತನ್ಮುಖ್ಯಶಿಷ್ಯತತ್ಸೇವಾ ಧುರಂಧರ **ನಂಜನಗೂಡು ಶ್ರೀಕಂಠಶಾಸ್ತ್ರಿ**ಯಿಂದ ವಿರಚಿತವಾಗಿ ಪ್ರಕಾಶಿತವಾಯಿತು.

ಅ ವ ತ ರ ಣಿ ಕೆ

ಒಂದಾನೊಂದು ಕಾಲದಲ್ಲಿ ವೇದಬಾಹ್ಯಗಳಾದ ಅನೇಕ ಸಿದ್ಧಾಂತಗಳು ಪ್ರಚುರವಾಗಿ ತದನುಯಾಯಿಗಳ ಪ್ರಾಬಲ್ಯವು ಹೆಚ್ಚಿ ಕರ್ಮಭೂಮಿಯಾದ ನಮ್ಮ ಈ ಆರ್ಯಾವರ್ತದಲ್ಲಿ ಶ್ರುತ್ಯುಕ್ತವಾದ ಧರ್ಮಗಳು ವಿರಳವಾಗಿ ಅಧರ್ಮವು ಉಜ್ಜೃಂಭಿಸುತ್ತಿರಲು

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಎಂಬ ಭಗವತ್ಪ್ರತಿಜ್ಞೆಗನುಸಾರವಾಗಿ ಭಗವದಂಶದಿಂದ ಕೂಡಿ ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರೆಂಬ ಮಹಾಪುರುಷರೊಬ್ಬರು ಅವತರಿಸಿ ತಮ್ಮ ಅಪಾರ ಪಾಂಡಿತ್ಯದಿಂದಲೂ, ಅನುಪಮವಾಗ್ವೈಖರಿಯಿಂದಲೂ, ಅಸಾಧಾರಣ ಪ್ರತಿಭೆಯಿಂದಲೂ, ಅವೋಘ ತಪಶ್ಶಕ್ತಿಯಿಂದಲೂ, ಅಪೂರ್ವ ಕಾರುಣ್ಯದಿಂದಲೂ, ಅದೃಷ್ಟಚರ ವೈರಾಗ್ಯದಿಂದಲೂ, ದುರ್ಮತಾವಿಷ್ಟ ಜನರನ್ನು ಶಾಸ್ತ್ರಾನುಸಾರಿಯಾದ ಯುಕ್ತಿಕುಠಾರದಿಂದ ಜಯಿಸಿ, ಪ್ರವೃತ್ತಿ ನಿವೃತ್ತಿರೂಪವಾದ ಧರ್ಮಗಳೆರಡನ್ನೂ ಸರ್ವತ್ರ ರೂಢಮೂಲವಾಗುವಂತೆ ಮಾಡಿ, ಹಾಗೆ ತಾವು ನೆಲೆಗೊಳಿಸಿದ ಧರ್ಮಮಾರ್ಗದ ಪರಿಪಾಲನೆಗಾಗಿ ತಮ್ಮ ಶಿಷ್ಯವರ್ಗದಲ್ಲಿ ಮುಖ್ಯರಾದ ನಾಲ್ವರನ್ನು ನಾಲ್ಕು ದಿಕ್ಕುಗಳಲ್ಲಿಯೂ ಸ್ಥಾಪಿಸಿ ಸ್ವಸ್ಥಾನವನ್ನು ಸೇರಿದರೆಂಬ ಶ್ರೀಮದಾಚಾರ್ಯ ಭಗವತ್ಪಾದ ಚರಿತವು ಮಹನೀಯ ವಿದ್ಯಾರಣ್ಯಾದಿಗಳಿಂದ ರಚಿತವಾದ ಶಂಕರವಿಜಯಾದಿ ಗ್ರಂಥಗಳಿಂದ ವಿಸ್ತಾರವಾಗಿ ತಿಳಿಯಬರುವುದಷ್ಟೆ? ಮೇಲಿನ ಉದ್ದೇಶದಿಂದ ಶ್ರೀಶಂಕರ ಭಗವತ್ಪಾದಾಚಾರ್ಯರವರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಒಂದಾಗಿ ದಕ್ಷಿಣಾಮ್ನಾಯವೆಂದು ಪ್ರಖ್ಯಾತವಾಗಿರುವ ಮಠವು ಈ ಭರತಖಂಡದಲ್ಲಿ ಸುಪ್ರಸಿದ್ಧರೂ ಯದುಕುಲಸಂಭೂತರೂ ಕರ್ಣಾಟ ದೇಶಾಧೀಶರೂ ಆಗಿರುವ ಶ್ರೀಮದ್ಧರ್ಮಮೂಲ ನಾಲ್ವಡಿ ಕೃಷ್ಣರಾಜೇಂದ್ರಸಾರ್ವಭೌಮರಿಂದ ಪರಿಪಾಲಿಸಲ್ಪಡುತ್ತಿರುವ ಮೈಸೂರುಸಂಸ್ಥಾನಕ್ಕೆ ಸೇರಿದ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಋಷ್ಯಶೃಂಗಮಹರ್ಷಿಗಳ ಆಶ್ರಮಕ್ಕೆ ಸಮೀಪವಾಗಿ ಅತ್ಯಂತ ವಿಮಲವಾದ ತುಂಗಾನದಿಯ ತೀರದಲ್ಲಿ ವಿಭಾಂಡಕ ಮಹರ್ಷಿಗಳ ಆಶ್ರಮವಾದ ಶೃಂಗೇರಿ ಎಂಬ ಸ್ಥಳದಲ್ಲಿರುವುದು. ಈ ಮಠದಲ್ಲಿ ಶ್ರೀಮಚ್ಛಂಕರಾಚಾರ್ಯರವರಿಂದ ಸ್ಥಾಪಿತವಾದ ಶ್ರೀಚಕ್ರಯಂತ್ರದಲ್ಲಿ ಸ್ವರ್ಣಮಯವಾದ ಶಾರದಾಂಬಿಕೆಯು ಪ್ರತಿಷ್ಠಿಸಲ್ಪಟ್ಟು ದಕ್ಷಿಣಾಮ್ನಾಯ

ಪೀಠದಲ್ಲಿರುವ ಗುರುಪರಂಪರೆಯವರಿಂದ ಪೂಜಿಸ್ಪಡುತ್ತಲಿರುವುದು ಸುಪ್ರಸಿದ್ಧವು. ಈ ಪೀಠದಲ್ಲಿ ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರು ಮೊದಲಾಗಿ ಇದುವರೆಗೆ ಮೂವತ್ತು ಮೂರು ಮಂದಿ ಮಹನೀಯರು ಆಶ್ರಮಸ್ವೀಕಾರಮಾಡಿ ಪಟ್ಟಾಭಿಷಿಕ್ತರಾದರು. ಈಗ ಮೂವತ್ತು ನಾಲ್ಕನೆಯರು ಈ ವ್ಯಾಖ್ಯಾನ ಭದ್ರಪೀಠವನ್ನಲಂಕರಿಸಿರುವರು. ಈ ವಿಷಯವು ಶೃಂಗಗಿರಿಮಠದ ಹಿಂದಿನ ಕಾಗದ ಪತ್ರಗಳಲ್ಲಿ ದೊರೆತಿರುವ ಒಂದು ಲೇಖನವನ್ನು ಅನುಸರಿಸಿ ಹೇಳಿದ್ದಾಗಿದೆ. ಈ ಲೇಖನದ ಪ್ರಾಮಾಣ್ಯ ವಿಷಯದಲ್ಲಿ ಪ್ರತ್ಯೇಕವಾಗಿ ವಿಚಾರನಡೆಸಿ ಯಾಥಾರ್ಥ್ಯವನ್ನು ನಿರ್ಣಯಿಸುವ ಒಂದು ಕರ್ತವ್ಯವು ಇರಬಹುದು. ಅದು ಹಾಗಿರಲಿ. ಶೃಂಗಗಿರಿಮಠದಲ್ಲಿ ಇದುವರೆಗೆ ಗುರುಗಳಾಗಿದ್ದ ಸ್ವಾಮಿಗಳೊಬ್ಬೊಬ್ಬರೂ ವಿದ್ಯೆಯಲ್ಲಿಯೂ, ಶುದ್ಧ ಚಾರಿತ್ರದಲ್ಲಿಯೂ, ಅನುಷ್ಠಾನದಲ್ಲಿಯೂ, ಆಸೇತುಹಿಮಾಚಲಪರ್ಯಂತವೂ ನಿಷ್ಕಳಂಕವಾದ ಯಶಸ್ಸನ್ನು ಪಡೆದಿದ್ದರೆಂಬ ವಿಷಯದಲ್ಲಿ ಯಾರಿಗೂ ಸಂದೇಹವಿರಲಾರದು. ಇಂತಹ ಮಹನೀಯರುಗಳ ಪುಣ್ಯಚಾರಿತ್ರದ ಪಠನ, ತಚ್ಛ್ರವಣ, ತನ್ಮನನಾದಿಗಳು ಕೇವಲ ಬಹಿರ್ಮುಖರಾದ, ಐಹಿಕ ಸುಖೈಕದೃಷ್ಟಿಯುಳ್ಳ ಜನವರ್ಗಕ್ಕೆ ಬಹಳ ಪ್ರಯೋಜನಕಾರಿಯಾಗುವುದು. ಈ ಉದ್ದೇಶದಿಂದಲಾದರೂ ಹಿಂದಿನವರು ಯಾರಾದರೂ ಆಯಾಕಾಲದಲ್ಲಿಯೇ ಸಂಗ್ರಹಿಸಲು ಸಾಧ್ಯವಾಗಿದ್ದ ಸಂಗತಿಗಳನ್ನು ಸಂಗ್ರಹಿಸಿ ಒಂದು ಕಡೆಯಲ್ಲಿ ಸೇರಿದ ಹಾಗೆ ಆಯಾ ಗುರುಗಳ ಚರಿತ್ರೆಗಳನ್ನು ಬರೆದಿಟ್ಟಿದ್ದರೆ ಆದರಿಂದ ಇಂಥಾ ಕಾಲದಲ್ಲಿ ಮಹಾಪ್ರಯೋಜನವೇ ಉಂಟಾಗುತ್ತಿತ್ತೆಂಬ ವಿಷಯದಲ್ಲಿ ಸಂದೇಹವಿಲ್ಲ. ಆದರೆ ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಹಿಂದಿನ ಮಹನೀಯರ ಚರಿತ್ರೆಗಳನ್ನು ಬರೆದಿಡುವ ವಾಡಿಕೆಯು ಈಚೆಗೆ ವಿರಳಭಾವವನ್ನು ಪಡೆಯುತ್ತ ಬಂದುದರಿಂದ ಶೃಂಗಗಿರಿ ಮಠದಲ್ಲಿದ್ದ ಪ್ರತಿಯೊಬ್ಬ ಗುರುಗಳ ಚರಿತ್ರವು ದೊರೆವುದು ಕಷ್ಟವಾಗಿದೆ. ಬಹುದೀರ್ಘಕಾಲದಿಂದಲೂ ಬಂದಿರುವ ಜನವಾರ್ತೆಯು ಪ್ರಮಾಣವಾದುದಲ್ಲವೆಂದು ಹೇಳುವುದು ಸಾಹಸವೆಂದು ಯಾರೊಬ್ಬರೂ ಹೇಳದಿರಲಾರರಾಗಿ ಜನವಾರ್ತೆಯನ್ನು ಅನುಸರಿಸಿ ಮೂವತ್ತು ಮೂರನೆಯ ಗುರುಗಳೆನಿಸಿ ಶೃಂಗಗಿರಿ ಮಠದ ಗುರುಪರಂಪರೆಯಲ್ಲಿ ನಾಲ್ವತ್ತಾರು ವರ್ಷಗಳಕಾಲ ಪಟ್ಟಾಭಿಷಿಕ್ತರಾಗಿದ್ದು ಈಗ್ಗೆ ಬಹಳ ಸಮೀಪಕಾಲದಲ್ಲಿ ಎಂದರೆ ಕಳೆದ ಪರೀಧಾವಿವರ್ಷದಲ್ಲಿ ಬ್ರಹ್ಮಭೂತರಾದ ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳವರೆಂಬ ಮಹನೀಯರನ್ನು ಅನೇಕಾವೃತ್ತಿ ಸಂದರ್ಶಿಸಿ ಅವರ ಪರಮಾನುಗ್ರಹಕ್ಕೆ ಪಾತ್ರರಾಗಿಯೂ, ಅವರ ಮಾಹಾತ್ಮ್ಯವನ್ನೂ ಅವರ ಭೂತದಯೆಯನ್ನೂ ಆ ಮಹಾನುಭಾವರ ನಿಸ್ಪೃಹತ್ವವನ್ನೂ ಆ ಯತಿವರ್ಯರ ಆಸ್ತಿಕ್ಯವನ್ನೂ ಅವರ ಪ್ರತಿಭೆ ಮತ್ತು ಪಾಂಡಿತ್ಯಗಳನ್ನೂ ಸ್ವತಃ ನೋಡಿ ಅನುಭವಿಸಿದವರಾಗಿಯೂ, ವಿಶೇಷವಾಗಿ ಹಾಗೆ ಅನುಭವಮಾಡಿದವರ ಮೂಲಕ ಕೇಳಿ ತಿಳಿದುಕೊಂಡವರಾಗಿಯೂ ಇರುವ ಅನೇಕರು ಈಗ ನಮಗೆ ದೊರೆಯಬಹುದು. ಮೇಲಿನ ಗುರುಗಳು ಶೃಂಗಗಿರಿಮಠದಲ್ಲಿ ಪಟ್ಟಾಭಿಷಿಕ್ತರಾಗಿದ್ದ ಕಾಲದಲ್ಲಿ ಅವರಿಂದ ನಡೆಸಲ್ಪಟ್ಟ ಅನೇಕ ಮಹಾಕಾರ್ಯಗಳನ್ನು ತಿಳಿದುಕೊಳ್ಳಲು ಅನುಕೂಲವಾದ ಲೇಖನಗಳೂ ಮಠದಲ್ಲಿ ಲಭಿಸಬಹುದು. ಈ ಲೇಖಕನು ಜನ್ಮಾಂತರ ಪುಣ್ಯಪರಿಪಾಕದಿಂದ ಬಾಲ್ಯ ಮೊದಲುಗೊಂಡು ಆ ಮಹಾನುಭಾವರ ಸನ್ನಿಧಿಯನ್ನು ಸೇರಿ ಒಂದು ದಿನವೂ ತಪ್ಪದ ಹಾಗೆ ಇಪತ್ತುಮೂರುವರ್ಷಗಳ ಕಾಲ ಛಾಯೆಯಂತೆ ಅನುವರ್ತಿಸಿ ಆ ಗುರುಗಳ ಸಂಬಂಧವಾದ ಅನೇಕ ಸಂಗತಿಗಳನ್ನು ಅವರ ಮುಖವಚನದಿಂದಲೇ ಕೇಳಿ ತಿಳಿದುಕೊಂಡವನಾಗಿಯೂ ಸ್ವತಃ ಅನುಭವಿಸಿ ಅನೇಕ ವಿಷಯಗಳನ್ನು ತಿಳಿದವನಾಗಿಯೂ ಇರುವನು. ಇಷ್ಟು ಸಲಕರಣಗಳು ಸಿದ್ಧವಾಗಿರತಕ್ಕ ಈ ಸಂದರ್ಭದಲ್ಲಿ ತಿಳಿದಮಟ್ಟಿಗೆ ಪುಣ್ಯಶ್ಲೋಕರ ಚರಿತ್ರವನ್ನು ಲೇಖಿಸಿ ಕೃತಾರ್ಥನಾಗುವನಲ್ಲದೆ ಇದರಿಂದ ಇತರರಿಗೆ ಉಂಟಾಗಬಹುದಾದ ಮಹಾಪ್ರಯೋಜನದಲ್ಲಿಯೂ ಈ ಲೇಖಕನು ಸ್ವಲ್ಪಮಟ್ಟಿಗೆ ಕಾರಣನಾಗುವುದರಿಂದ ಈ ಲೇಖಕನಿಗೆ ಪುಣ್ಯಸಂಪಾದನೆಯೂ ಉಂಟಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲವಾಗಿ ಮಹಾಮಹಿಮ ಭೂಮಿಗಳಾಗಿದ್ದ ಶ್ರೀಮತ್ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳವರ ದಿವ್ಯಚರಿತ್ರೆಯನ್ನು ಸಂಗ್ರಹವಾಗಿ ಬರೆಯಲು ಉದ್ಯುಕ್ತನಾಗಿರುವನು.

★ ★ ★

ವಿಷಯ ಸೂಚಿಕೆ

ಶ್ರೀ ಗುರುಭ್ಯೋ ನಮಃ

ಶ್ರೀ ಜಗದ್ಗುರು ಶೃಂಗೇರಿ

ಶ್ರೀ ಸಚ್ಚಿದಾನಂದ ಶಿವಾಭಿನವ

ನೃಸಿಂಹಭಾರತೀ ಸ್ವಾಮಿಗಳವರ

ದಿವ್ಯ ಚರಿತ್ರೆ

ಅಧ್ಯಾಯ - ೧.

ಶ್ರೀ ಸ್ವಾಮಿಗಳ ಜನನ ಮತ್ತು ಬಾಲಲೀಲೆ

ನತ್ವಾ ವಿಘ್ನವಿದಾರಣಂ ಶಿವಸುತಂ ಸ್ತುತ್ವಾ ಚ ವಾಗೀಶ್ವರೀಂ
ಕೃತ್ವಾಹೃತ್ಕುಹರೇ ಪದದ್ವಯಸರೋಜಾತೇ ನಿತಾನ್ತಂಗುರೋಃ ।
ವಕ್ಷ್ಯೇ ಕಲ್ಮಹರಂ ಯಥಾಮತಿ ಗುರೋಶ್ಚಿತ್ರಂ ಗರಿಷ್ಠಂ ತಥಾ
ಹೃದ್ಯಂ ಜೀವನವೃತ್ತಮತ್ರ ವಿದುಷಾಂ ಮೋದಾಯ ಸಂಕ್ಷೇಪತಃ ॥

ಮೈಸೂರು ಸಂಸ್ಥಾನವನ್ನಾಳುವ ಮಹಾರಾಜರುಗಳಿಗೆ ರಾಜಧಾನಿಯಾಗಿ ಇರುವ ಮೈಸೂರು ಪಟ್ಟಣದಲ್ಲಿ ಹಳೆಯ ಅಗ್ರಹಾರವೆಂಬ ಬ್ರಾಹ್ಮಣಶ್ರೇಣಿಯಲ್ಲಿ ಕುಣಿಗಲ್ ರಾಮಶಾಸ್ತ್ರಿಗಳೆಂಬ ಒಬ್ಬ ಬ್ರಾಹ್ಮಣೋತ್ತಮರು ಇದ್ದರು. ಇವರ ಪೂರ್ವಜರಿಗೆ ಕಾವೇರೀನದಿಯ ತೀರದಲ್ಲಿರುವ ಎಡತೊರೆಯೆಂಬ ಮಹಾ ಕ್ಷೇತ್ರವು ವಾಸಸ್ಥಾನವಾಗಿತ್ತು. ರಾಮಶಾಸ್ತ್ರಿಗಳು ಪರಂಪರೆಯಾಗಿ ವೇದೋಕ್ತ ಸಕಲ ಕರ್ಮಾನುಷ್ಠಾನಪರರಾಗಿಯೂ, ವೇದವೇದಾಂಗಗಳನ್ನು ಅಧ್ಯಯನ ಮಾಡಿ ಪ್ರಸಿದ್ಧವಾದ ಪಾಂಡಿತ್ಯವನ್ನು ಸಂಪಾದಿಸಿದವರಾಗಿಯೂ, ಅತ್ಯಂತ ಪರಿಶುದ್ಧರಾಗಿಯೂ ಇದ್ದ ವೈದಿಕರ ಕುಲದಲ್ಲಿ ಹುಟ್ಟಿದವರು. ಇವರು ಕಶ್ಯಪ ಗೋತ್ರಜರಾಗಿಯೂ, ಆಪಸ್ತಂಬಸೂತ್ರವನ್ನು ಅನುಸರಿಸಿದವರಾಗಿಯೂ ಇದ್ದರು. ಆಂಧ್ರರಲ್ಲಿ ಮುಲಕನಾಡು ಎಂಬ ಒಳಪ್ರಭೇದಕ್ಕೆ ಸೇರಿದವರು. ಇವರ ತಂದೆಯ ಹೆಸರು ನರಸಿಂಹಶಾಸ್ತ್ರಿಗಳೆಂದು ತಿಳಿದುಬಂದಿದೆ. ಈ ನರಸಿಂಹಶಾಸ್ತ್ರಿಗಳು ಎಡತೊರೆಯನ್ನು ಬಿಟ್ಟು ರಾಜಧಾನಿಯಾದ ಮೈಸೂರಿನಲ್ಲಿ ವಾಸಕ್ಕೋಸ್ಕರ ಬಂದು ರಾಜಾಶ್ರಯವನ್ನು ಸಂಪಾದಿಸಿ ಮಹಾರಾಜರಿಂದ ಆದರಿಸಲ್ಪಟ್ಟವರಾಗಿ ಅಲ್ಲಿಯೇ ವಸತಿಯನ್ನು ಮಾಡಿದರು.

ಇವರಿಗೆ ನರಸಿಂಹಶಾಸ್ತ್ರಿಗಳೆಂಬ ದೊಡ್ಡ ಮಗನೂ, ರಾಮಶಾಸ್ತ್ರಿಗಳೆಂಬ ಎರಡನೆಯ ಮಗನೂ ಹುಟ್ಟಿದರು. ಇವರಲ್ಲಿ ನರಸಿಂಹಶಾಸ್ತ್ರಿಗಳು ಚೆನ್ನಾಗಿ ವೇದಾಧ್ಯಯನವನ್ನು ಮಾಡಿದವರಾಗಿಯೂ, ಸಾಮಾನ್ಯವಾಗಿ ಕಾವ್ಯಾಲಂಕಾರಗಳನ್ನು ಮಾತ್ರ ತಿಳಿದವರಾಗಿಯೂ ಇದ್ದರು. ರಾಮಶಾಸ್ತ್ರಿಗಳೆಂಬವರು ಬಾಲ್ಯದಿಂದಲೇ ವಿಲಕ್ಷಣವಾದ ಧೈರ್ಯ ಮತ್ತು ಸ್ಥೈರ್ಯಗಳನ್ನು ಹೊಂದಿದವರಾಗಿಯೂ, ಅತಿ ವಿಸ್ಮಯನೀಯವಾದ ಪ್ರತಿಭೆಯುಳ್ಳವರಾಗಿಯೂ ಇದ್ದುದರಿಂದ ಬಾಲ್ಯದಲ್ಲಿ ಬ್ರಾಹ್ಮಣನಿಗೆ ಮುಖ್ಯವಾದ ವೇದಾಧ್ಯಯನವನ್ನೂ ಕಾವ್ಯನಾಟಕಾಲಂಕಾರಗಳನ್ನೂ ತಮ್ಮ ತಂದೆಯವರಾದ ನರಸಿಂಹಶಾಸ್ತ್ರಿಗಳವರಲ್ಲಿಯೇ ಅಧ್ಯಯನ ಮಾಡಿ, ಸಕಲ ಶಾಸ್ತ್ರೋಪಯೋಗಿಯಾದ ತರ್ಕಶಾಸ್ತ್ರಾಧ್ಯಯನವನ್ನು ಮಾಡುತ್ತಲಿರುವ ಸಂದರ್ಭದಲ್ಲಿ ತಮ್ಮ ತಂದೆಯವರಾದ ನರಸಿಂಹ ಶಾಸ್ತ್ರಿಗಳು ಕಾಲಗತಿಯನ್ನೈದಿದುದರಿಂದ, ಪ್ರಖ್ಯಾತರಾದ ವಿಠಲೋಪಾಧ್ಯಾಯರ ಶಿಷ್ಯರಾದ ತಿರುಪತಿ ಶ್ರೀನಿವಾಸಾಚಾರ್ಯರವರಲ್ಲಿ ಪೂರ್ಣವಾಗಿ ತರ್ಕಶಾಸ್ತ್ರಾಧ್ಯಯನವನ್ನು ಮಾಡಿದರು. ಪ್ರಾಚೀನ ಸಂಪ್ರದಾಯಾನುಗುಣವಾಗಿ ಆ ಕಾಲದಲ್ಲಿ ಸಂಪ್ರತಿಪನ್ನರಾಗಿದ್ದ ಅದ್ವೈತಶಾಸ್ತ್ರವಿದರಾದ ಗೃಹಸ್ಥರಲ್ಲಿ ಬ್ರಹ್ಮಸೂತ್ರ ಭಾಷ್ಯಶಾಂತಿಯನ್ನು ಮಾಡಿ ತಮ್ಮ ಪ್ರತಿಭಾ ಪಾಂಡಿತ್ಯಶಕ್ತಿಗಳಿಂದ ವೇದಾಂತಶಾಸ್ತ್ರವನ್ನು ಸಂಪೂರ್ಣವಾಗಿ ವ್ಯಾಸಂಗಮಾಡಿದರು. ತರ್ಕವೇದಾಂತ ಶಾಸ್ತ್ರಗಳಲ್ಲಿ ರಾಮಶಾಸ್ತ್ರಿಗಳಿಗೆ ಉಂಟಾಗಿದ್ದ ಪಾಂಡಿತ್ಯವು ಅದ್ವಿತೀಯವಾಗಿತ್ತು. ಇವರಲ್ಲಿ ವ್ಯಾಸಂಗ ಮಾಡಿ ತರ್ಕಶಾಸ್ತ್ರದಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದ ಇವರ ಶಿಷ್ಯರುಗಳು ಅನೇಕರು ದಕ್ಷಿಣದೇಶದಲ್ಲಿ ದಿಗ್ದಂತಿಗಳೆನಿಸಿಕೊಂಡಿದ್ದರು. ವೇದಶಾಸ್ತ್ರಪ್ರಚಾರಕ್ಕೆ ಅತ್ಯಂತ ದುರ್ದಶೆಯು ಬಂದಿರುವ ಈಗಿನ ಕಾಲದಲ್ಲಿ ಕೂಡಿ ಹಿಂದಿನ ಪಂಡಿತರಲ್ಲಿ ಯಾರಾದರೂ ನ್ಯಾಯಶಾಸ್ತ್ರ ಪಂಡಿತರು ದಕ್ಷಿಣದೇಶದಲ್ಲಿ ಉಳಿದಿರುವ ಪಕ್ಷದಲ್ಲಿ ಅವರು ರಾಮಶಾಸ್ತ್ರಿಗಳ ಶಿಷ್ಯಪರಂಪರೆಗೆ ಸೇರಿದವರಾಗಿರಬಹುದೇ ಹೊರತು ಬೇರೆ ಇರಲಾರರೆಂದು ಧಾರಾಳವಾಗಿ ಹೇಳಬಹುದು. ನ್ಯಾಯಶಾಸ್ತ್ರ ವಿಷಯದಲ್ಲಿ ತಾವು ಬರೆದಿರುವ ಶತಕೋಟಿ ಮೊದಲಾದ ಅನೇಕ ಗ್ರಂಥಗಳ ಮೂಲಕ ಉತ್ತರ ದೇಶದಲ್ಲಿದ್ದ ಮಹಾ ಪಂಡಿತರುಗಳಲ್ಲಿಯೂ ರಾಮಶಾಸ್ತ್ರಿಗಳ ಪ್ರಸಿದ್ಧಿಯು ಹೆಚ್ಚಾಗಿಯೇ ಇರುತ್ತಲಿತ್ತು. ಈ ಶಾಸ್ತ್ರಿಗಳಿಗೆ ವೇದಶಾಸ್ತ್ರಗಳಲ್ಲಿದ್ದ ನಂಬಿಕೆಯು ಅಸಾಧಾರಣವಾಗಿತ್ತು. ಕರ್ಮಶ್ರದ್ಧೆಗೆ ಇವರು ಜನ್ಮಸ್ಥಾನವಾಗಿದ್ದರು. ಶಿವಭಕ್ತಿಯೂ ಶಿವಪೂಜಾಧುರಂಧರತೆಯೂ ಈ ಶಾಸ್ತ್ರಿಗಳಿಗೆ ಸಹಜವಾದ ಗುಣವಾಗಿತ್ತು, ಇಂಥಾ ಪಂಡಿತೋತ್ತಮರ ಚಾರಿತ್ರವನ್ನು ಕುರಿತು ವಿಚಾರಮಾಡತಕ್ಕದ್ದು ಏನಿದ್ದೀತು ! ವಿದ್ವಚ್ಛಿರೋಮಣಿಯಾದ ಈ ರಾಮಶಾಸ್ತ್ರಿಗಳು ತಮ್ಮ ತಂದೆಯಂತೆ ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜಪ್ರಭುಗಳವರ ಆಶ್ರಯವನ್ನು ಪಡೆದು ಆ ಪ್ರಭುಗಳ

ಸ್ಥಿರವಾದ ಪ್ರೀತಿಗೌರವಗಳಿಗೆ ಪಾತ್ರರಾಗಿ, ಮೈಸೂರು ರಾಜಸಭೆಯಲ್ಲಿ ಮುಖ್ಯರಾದ ಒಬ್ಬ ವಿದ್ವಾಂಸರಾಗಿದ್ದರು. ಇವರ ಧರ್ಮಪತ್ನಿ ಮಹಾಸಾಧ್ವಿಯಾದ ಲಕ್ಷ್ಮಮ್ಮನವರು ಪತಿಶುಶ್ರೂಷಾ ತತ್ಪರರಾಗಿದ್ದುಕೊಂಡು ಪತಿಯ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಈ ದಂಪತಿಗಳು ಗಾರ್ಹಸ್ಥ್ಯ ಧರ್ಮಾನುಷ್ಠಾನವನ್ನು ಯಥಾಶಾಸ್ತ್ರವಾಗಿಯೂ ಯಥಾಕ್ರಮವಾಗಿಯೂ ಆಚರಿಸುತ್ತಲಿದ್ದರು. ಇವರಿಗೆ ಮೂರು ನಾಲ್ಕು ವಂಶಾಂಕುರಗಳು ಹುಟ್ಟಿ ಪ್ರಾರಬ್ಧ ಕರ್ಮವಶದಿಂದ ವೃದ್ಧಿಹೊಂದದೆ ಮಡಿದುಹೋದವು. ಈ ವ್ಯಸನವು ಈ ಸತೀಪತಿಗಳ ಮನಸ್ಸನ್ನು ಬಹಳವಾಗಿ ಬಾಧಿಸುತ್ತಲಿತ್ತು. ಆ ಸಂದರ್ಭದಲ್ಲಿ ಪರಮಾಸ್ತಿಕ ಶಿಖಾಮಣಿಗಳಾದ ರಾಮಶಾಸ್ತ್ರಿಗಳು ಭಕ್ತೈಕವಶ್ಯನಾದ ಶಿವನನ್ನೇ ಶರಣನನ್ನಾಗಿ ಹೊಂದಿದಲ್ಲದೆ ತಮ್ಮ ಕೊರತೆಯನ್ನು ನೀಗಲು ಮಾರ್ಗಾಂತರವಿಲ್ಲವೆಂದು ನಿಶ್ಚೈಸಿಕೊಂಡು ಪತಿವ್ರತಾಗ್ರೇಸರಳಾದ ತಮ್ಮ ಧರ್ಮಪತ್ನಿಯ ಸಹಾಯವನ್ನು ಪಡೆದು ಯಥೋಕ್ತ ನಿಯಮಗಳೊಡನೆ ಶ್ರೀ ಮೇಧಾದಕ್ಷಿಣಾಮೂರ್ತಿಯ ಉಪಾಸನೆಯನ್ನು ಮಾಡಿದರು. ಶುದ್ಧಮನಸ್ಕರಾದ ಈ ಶಾಸ್ತ್ರಿಗಳವರ ಅಕೃತ್ರಿಮವಾದ ಭಕ್ತಿಗೆ ಪರವಶವಾಗಿ ಶ್ರೀ ಪರಮೇಶ್ವರನು ಕುಲಾಲಂಕಾರಭೂತನಾದ ಪುತ್ರ ರತ್ನವನ್ನು ಇವರಿಗೆ ಅನುಗ್ರಹಿಸಿದನು. ಈ ಮಗನು ಶಾಸ್ತ್ರಿಗಳಿಗೆ 34ನೆಯ ವರ್ಷವಾದ ಶಾರ್ವರಿ ಸಂವತ್ಸರದ ವೈಶಾಖ ಶುಕ್ಲ ತ್ರಯೋದಶೀ ದಿವಸ ಜನಿಸಿದನು. ಆ ದಿನದಲ್ಲಿ ನರಸಿಂಹಜಯಂತಿಯಾದುದರಿಂದಲೂ, ತಮ್ಮ ಕುಲದೇವತೆಯಾದ ಲಕ್ಷ್ಮೀನರಸಿಂಹದೇವರ ಹೆಸರನ್ನೇ ಜ್ಯೇಷ್ಠಕುಮಾರನಿಗೆ ಇಡುವದು ತಮ್ಮ ಕುಲಪದ್ಧತಿಯಾಗಿದ್ದುದರಿಂದಲೂ, ಆ ಪದ್ಧತಿಯನ್ನನುಸರಿಸಿ ಈ ಕುಮಾರನಿಗೆ ಲಕ್ಷ್ಮೀನೃಸಿಂಹನೆಂಬ ನಾಮಧೇಯವನ್ನಿತ್ತರು. ರಾಮಶಾಸ್ತ್ರಿಗಳು ತಮ್ಮ ಧರ್ಮಪತ್ನಿಯೊಡನೆ ಕಪಿಲಾತೀರದ ಶ್ರೀಕಂಠೇಶ್ವರ ಸನ್ನಿಧಿಯಲ್ಲಿ ಅತ್ಯಂತ ಭಕ್ತಿಯಿಂದ ದೇವರ ಸೇವೆಯನ್ನು ಮಾಡಿಕೊಂಡು ನಂಜನಗೂಡು ಎಂಬ ಕ್ಷೇತ್ರದಲ್ಲಿ ವಾಸ ಮಾಡಿಕೊಂಡಿದ್ದಾಗ ಅಲ್ಲಿಯೇ ಈ ಪುತ್ರ ಜನನವಾಯಿತು.

ಅನಂತರ ಶಾಸ್ತ್ರಿಗಳು ದಕ್ಷಿಣದೇಶದ ಕಾಂಚೀನಗರದಲ್ಲಿ ವಾಸವಾಗಿದ್ದಾಗ್ಗೆ ಪರಾಭವ ಸಂವತ್ಸರದ ವೈಶಾಖಮಾಸದಲ್ಲಿ ದ್ವಿತೀಯ ಕುಮಾರನು ಹುಟ್ಟಿದನು. ಈತನಿಗೆ ತಮ್ಮ ವಂಶಕ್ಕೆ ಮೂಲಪುರುಷರಾಗಿದ್ದ ಯಜ್ಞನಾರಾಯಣಶಾಸ್ತ್ರಿಗಳವರ ಜ್ಞಾಪಕವಾಗಿ ಅವರ ಹೆಸರಿನಿಂದ ನಾಮಕರಣವನ್ನು ಮಾಡಿದರು. ಈ ವಂಶಕ್ಕೆ ಮೂಲಪುರುಷರಾದ ಯಜ್ಞನಾರಾಯಣಶಾಸ್ತ್ರಿಗಳು ಕಾವೇರೀನದೀ ತೀರದ ಎಡತೊರೆಯೆಂಬ ಕ್ಷೇತ್ರದಲ್ಲಿಯೇ ವಾಸಮಾಡಿಕೊಂಡು ಅರುವತ್ತು ವರ್ಷದ ವಯಸ್ಸಿನವರೆಗೂ ಅಗ್ನಿಹೋತ್ರವನ್ನು ಮಾಡಿಕೊಂಡಿದ್ದು ಅನಂತರ -

ಅಧೀತ್ಯ ವಿಧಿವದ್ವೇದಾನ್ ಪುತ್ರಾನುತ್ಪಾದ್ಯ ಧರ್ಮತಃ ।
ಇಷ್ಟ್ವಾ ಸ್ವಶಕ್ತಿತೋ ಯಜ್ಞೈಃ ಮನೋ ಮೋಕ್ಷೇ ನಿವೇಶಯೇತ್ ॥

ಎಂಬ ಧರ್ಮಶಾಸ್ತ್ರವನ್ನನುಸರಿಸಿ ಸಂಸಾರದಲ್ಲಿ ಮಮತೆಯನ್ನು ಬಿಟ್ಟು ಮನಸ್ಸನ್ನು ಪರೀಕ್ಷಿಸುವುದಕ್ಕೋಸ್ಕರ ಕಾವೇರೀ ತೀರದ ಅರ್ಕಪುಷ್ಕರಿಣೀ ಸಮೀಪದಲ್ಲಿರುವ ಸಂಧ್ಯಾಮಂಟಪದಲ್ಲಿಯೇ ಕೆಲವು ದಿವಸಗಳು ವಾಸಮಾಡಿ ಮನಸ್ಸು ಹಿಂತಿರುಗದೇ ಇದ್ದದ್ದನ್ನು ನೋಡಿ ಬಹಳ ದೂರದೇಶವಾದ ತಾಮ್ರಪರ್ಣೀ ತೀರಕ್ಕೆ ಹೊರಟುಹೋದರು. ತಿನ್ನವೆಲ್ಲಿ ಜಿಲ್ಲಾಕ್ಕೆ ಸೇರಿದ ಶೇರಮಹಾದೇವಿ ಎಂಬ ಬ್ರಾಹ್ಮಣಾಗ್ರಹಾರವು ಬಹಳ ಪ್ರಶಸ್ತವಾಗಿಯೂ ಅನೇಕ ಜನ ಅಗ್ನಿಹೋತ್ರಿಗಳಿಂದ ನಿಬಿಡವಾಗಿಯೂ ಇತ್ತು. ಆ ಅಗ್ರಹಾರವನ್ನು ಸೇರಿ ಅಲ್ಲಿ ನಿಂತರು. ಕೆಲವು ಕಾಲದಮೇಲೆ ನಿಶ್ಚಲವಾದ ತಮ್ಮ ಮನಸ್ಸನ್ನು ತಾವೇ ಚೆನ್ನಾಗಿ ಪರೀಕ್ಷಿಸಿಕೊಂಡು ಸಂನ್ಯಾಸಾಶ್ರಮವನ್ನು ಸ್ವೀಕರಿಸಿದರು. ಇವರು ತಮ್ಮ ಹೆಂಡತಿ ಮಕ್ಕಳನ್ನು ಬಿಟ್ಟು ಮನೆಯಿಂದ ಹೊರಟಮೇಲೆ ಇವರ ಸಂಗತಿಯೇನಾಯಿತೆಂಬ ವಿಷಯವೇ ಮನೆಯ ಜನರಿಗೆ ತಿಳಿಯಲಿಲ್ಲ. ಈ ಪುಣ್ಯಪುರುಷರು ಸಿದ್ಧಿಹೊಂದಿದ ನಂತರ ಆ ಸಂಗತಿಯನ್ನು ಅವರ ಹೇಳಿಕೆಯಂತೆ ಶೇರಮಹಾದೇವೀಗ್ರಾಮದವರು ಬರೆದ ಕಾಗದದಿಂದ ಅವರ ಮಕ್ಕಳು ಮೊದಲಾದವರು ತಿಳಿದು ಅವರಿಗೆ ನಡೆಸಬೇಕಾದ ಸಂಸ್ಕಾರಗಳನ್ನು ವಿಧ್ಯುಕ್ತವಾಗಿ ಎಡತೊರೆಯಲ್ಲಿ ನಡೆಸಿದರೆಂದು ತಿಳಿದುಬರುತ್ತೆ. ಬಳಿಕ ಕೆಲವು ಕಾಲದಮೇಲೆ ರಾಮಶಾಸ್ತ್ರಿಗಳಿಗೆ ಒಬ್ಬ ಹೆಣ್ಣು ಮಗಳು ಹುಟ್ಟಿದಳು. ಶಾಸ್ತ್ರಿಗಳ ಐವತ್ತನೆಯ ವರ್ಷದಲ್ಲಿ ಇವರ ಧರ್ಮಪತ್ನಿಯಾದ ಲಕ್ಷ್ಮಮ್ಮನವರು ಪುನಃ ಗರ್ಭಿಣಿಯಾದರು. ಆಗ ಮತ್ತೆ ಹೆಣ್ಣು ಸಂತಾನವುಂಟಾಗಬಹುದೋ ಎಂಬ ಸಂದೇಹವು ಶಾಸ್ತ್ರಿಗಳ ಮನಸ್ಸಿಗೆ ತಟ್ಟಿತು. ಪ್ರಾರಬ್ಧಕರ್ಮಾನುಗುಣವಾಗಿ ಫಲಪ್ರಾಪ್ತಿಯಾಗುವುದೇ ಹೊರತು ಅನ್ಯಥಾ ಆಗಲಾರದೆಂಬ ನಂಬಿಕೆಯು ಶಾಸ್ತ್ರಿಗಳಿಗೆ ಸಂಪೂರ್ಣವಾಗಿದ್ದರೂ ಅದರಂತೆ ವೇದಶಾಸ್ತ್ರಗಳ ವಿಷಯದಲ್ಲಿಯೂ ನಂಬಿಕೆಯು ಅಭೇದ್ಯವಾಗಿತ್ತು. ಈ ನಂಬಿಕೆಯಿಂದ ತಮ್ಮ ಧರ್ಮಪತ್ನಿಯ ನಾಲ್ಕನೆಯ ಗರ್ಭಕ್ಕೆ ವಿಶೇಷಾಕಾರದಿಂದ ಪುಂಸವನವೆಂಬ ಸಂಸ್ಕಾರವನ್ನು ಮಾಡಿದರು. ಈ ಸಂಸ್ಕಾರವನ್ನು ಮೊದಲನೆಯ ಗರ್ಭಕ್ಕೆ ಮಾತ್ರ ಮಾಡುವುದು ಪ್ರಾಚೀನ ಸಂಪ್ರದಾಯವಾಗಿದ್ದರೂ ಪುತ್ರೇಚ್ಛೆಯುಳ್ಳವನು ಗರ್ಭಕ್ಕೆ ಪುಂಸವನ ಸಂಸ್ಕಾರವನ್ನು ಮಾಡಿದರೆ ಪುರುಷ ಪ್ರಜೆಯೇ ಉಂಟಾಗುವದೆಂಬ ಶಾಸ್ತ್ರವು ಅನ್ಯಥಾ ಆಗುವುದಿಲ್ಲವೆಂಬ ನಂಬಿಕೆಯಿಂದ ಆ ಗರ್ಭಕ್ಕೆ ಮೇಲಿನ ಸಂಸ್ಕಾರವನ್ನು ಶಾಸ್ತ್ರಿಗಳು ನಡೆಸಿದರು. ಈ ನಂಬಿಕೆ ಇವರಿಗೆ ಯಾವ ರೀತಿಯಾಗಿ ಇತ್ತೆಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ಮತ್ತೊಂದು ಸಂದರ್ಭವುಂಟು. ಶಾಸ್ತ್ರಿಗಳ ಕುಟುಂಬವು

ಗರ್ಭಿಣಿಯಾಗಿರುವಾಗ್ಗೆ ಇವರು ಒಂದು ದಿನ ಪಾದಚಾರಿಗಳಾಗಿ ತಮ್ಮ ಒಬ್ಬಿಬ್ಬರು ಶಿಷ್ಯರೊಡನೆ ಈಶ್ವರ ದರ್ಶನಕ್ಕೆಂದು ನಂಜನಗೂಡಿಗೆ ಹೊರಟರು. ಮಾರ್ಗದಲ್ಲಿ ಹೋಗುವಾಗ್ಗೆ ಮುಂದೆ ಹುಟ್ಟುವ ಮಗನಿಗೆ ನಾಮಧೇಯವನ್ನು ಏನೆಂದು ಇಡಬೇಕೆಂಬ ವಿಚಾರವು ಶಾಸ್ತ್ರಿಗಳ ಮನಸ್ಸಿನಲ್ಲಿ ಹುಟ್ಟಿತು. ತಮಗೆ ಸಂತಾನವಿಲ್ಲದೇ ಇದ್ದ ಕೊರತೆಯು ದಕ್ಷಿಣಾಮೂರ್ತಿಯ ಉಪಾಸನೆಯಿಂದ ನಿವೃತ್ತವಾಯಿತು. ಇದುವರೆಗೆ ಹುಟ್ಟಿದ ತಮ್ಮ ಮಕ್ಕಳಿಬ್ಬರಿಗೂ ಬೇರೆ ಬೇರೆ ನಾಮಧೇಯಗಳನ್ನು ಇಟ್ಟಿದ್ದಾಯಿತು. ಶಿವಪ್ರಸಾದ ಲಬ್ಧರಾದ ಮಕ್ಕಳಿಗೆ ಆ ದೇವರ ನಾಮವನ್ನು ಇಡಲಿಲ್ಲ. ಈಗ ಹುಟ್ಟುವ ಮಗನಿಗೆ ಪರಮಶಿವನಾಮ ಗಳಲ್ಲಿ ಒಂದನ್ನು ಇಡಬೇಕು ಎಂದು ನಿಷ್ಕರ್ಷೆ ಮಾಡಿಕೊಂಡರು. ಅದರ ಮೇಲೆ ತಮ್ಮೊಡನೆ ಬರುತ್ತಲಿದ್ದ ಶಿಷ್ಯರಲ್ಲಿ ಒಬ್ಬನಾದ ಚೋಳ ದೇಶದ ಸುಬ್ರಹ್ಮಣ್ಯನೆಂಬ ಹುಡುಗನಲ್ಲಿ ಶಾಸ್ತ್ರಿಗಳಿಗೆ ಬಹಳ ಪ್ರೀತಿಯಿತ್ತು. ಆತನಿಗೆ ಶಾಸ್ತ್ರಿಗಳವರಲ್ಲಿ ಬಹಳ ಭಕ್ತಿಯೂ ಅವರೊಡನೆ ಧಾರಾಳವಾಗಿ ಮಾತನಾಡತಕ್ಕ ಬಳಕೆಯೂ ಇತ್ತು. ಆ ಶಿಷ್ಯನನ್ನು ನೋಡಿ ಎಲೈ ಸುಬ್ರಹ್ಮಣ್ಯ, ಈಗ ನಮಗೆ ಹುಟ್ಟುವ ಮಗನಿಗೆ ಯಾವ ಹೆಸರು ಇಟ್ಟರೆ ಚೆನ್ನಾಗಿರಬಹುದು ? ನಿಮ್ಮ ದೇಶದಲ್ಲಿ ಶಿವಪರವಾದ ನಾಮಗಳಲ್ಲಿ ಯಾವ ನಾಮವನ್ನು ವಿಶೇಷವಾಗಿ ಜನಗಳು ತಮ್ಮ ಮಕ್ಕಳಿಗೆ ಇಡುವ ವಾಡಿಕೆ ಇದೆ ? ಎಂದು ಕೇಳಿದರು. ಆ ಸಮಯದಲ್ಲಿ ಮಹಾಪಂಡಿತರಾದ ರಾಮಶಾಸ್ತ್ರಿಗಳ ಈ ಪ್ರಶ್ನೆಯು ಬಾಲ ವಿದ್ಯಾರ್ಥಿಯಾದ ಸುಬ್ರಹ್ಮಣ್ಯನಿಗೆ ಅನನ್ವಯವಾಗಿ ತೋರಿ ಸುಮ್ಮನಿದ್ದನು. ನಿರುತ್ತರನಾದ ವಿದ್ಯಾರ್ಥಿಯನ್ನು ಕಂಡು ಏಕೆ ಸುಮ್ಮನಿರುವೆ? ಎಂದು ಶಾಸ್ತ್ರಿಗಳು ಕೇಳಿದರು. ಸ್ವಾಮೀ, ತಾವು ಸಕಲವನ್ನೂ ತಿಳಿದವರು. ತಮಗೆ ಹೇಳಲು ನನಗೆ ಶಕ್ತಿ ಎಲ್ಲಿಯದು? ಮುಂದೆ ಹುಟ್ಟುವ ಶಿಶುವು ಗಂಡೋ ಹೆಣ್ಣೋ ಎಂಬುದನ್ನು ನೋಡಿಯಲ್ಲವೇ ಹೆಸರಿಡುವ ವಿಚಾರವನ್ನು ಮಾಡಬೇಕು? ಎಂಬುದಾಗಿ ಆ ಶಿಷ್ಯನು ಸ್ವಲ್ಪ ಹಾಸ್ಯಭಾವದಿಂದ ಆಡಿದ ಮಾತನ್ನು ಕೇಳಿದ ಶಾಸ್ತ್ರಿಗಳವರಿಗೆ ಸ್ವಲ್ಪವಾಗಿ ಅವನ ವಿಷಯದಲ್ಲಿ ಅಸಮಾಧಾನವುಂಟಾಯಿತು. ಅದರ ಮೇಲೆ ಶಿಷ್ಯನನ್ನು ಕುರಿತು ನೀನು ಹುಡುಗ, ನಿನಗೆ ವೇದ ಶಾಸ್ತ್ರಗಳ ವಿಷಯ ತಿಳಿಯದು. ಆದ್ದರಿಂದ ನನ್ನ ಮಾತು ನಿನಗೆ ಅನನ್ವಯವಾಗಿ ತೋರಿತು. ನಾವು ಈ ಗರ್ಭಕ್ಕೆ ಪುಂಸವನ ಸಂಸ್ಕಾರವನ್ನು ಮಾಡಲಿಲ್ಲವೇ? ಆ ಸಂಸ್ಕಾರವನ್ನು ಮಾಡಿದ ಮೇಲೆ ಹುಟ್ಟುವ ಶಿಶುವು ಗಂಡೋ ಹೆಣ್ಣೋ ಎಂಬ ಸಂದೇಹಕ್ಕೆ ಕಾರಣವೆಲ್ಲಿ ಇದೆ ? ಪುಮಾಂಸಂ ಜನಯತಿ (ಆಪಸ್ತಂಬಗೃಹ್ಯಸೂತ್ರ) ಎಂಬ ಶಾಸ್ತ್ರವು ಅಪ್ರಮಾಣವಾದೀತೆ ? ಎಂದಿಗೂ ಆಗುವುದಿಲ್ಲ. ಪುರುಷ ಪ್ರಜೆಯನ್ನೇ ದೇವರು ನಮಗೆ ಕೊಡುತ್ತಾನೆ, ಸಂದೇಹವಿಲ್ಲ. ನನ್ನ ಮಾತನ್ನು ನಂಬಿ ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡು ಎಂದರು. ಆಗಲಾ ವಿದ್ಯಾರ್ಥಿಗೆ ಶಾಸ್ತ್ರಿಗಳವರ ವಿಷಯದಲ್ಲಿದ್ದ ಭಕ್ತಿ

ಗೌರವಗಳಿಂದ ಹೆದರಿಕೆಯುಂಟಾಗಿ ವಿನಯಭಾವದೊಡನೆ, ಸ್ವಾಮೀ, ನನ್ನ ಬಾಲಸ್ವಭಾವದಿಂದುಂಟಾದ ಅಪರಾಧವನ್ನು ಮನ್ನಿಸಬೇಕು. ತಮ್ಮ ಸಂಕಲ್ಪದಂತೆ ತಮ್ಮ ಉಪಾಸ್ಯದೈವವಾದ ಪರಮಶಿವನೇ ಅವತಾರ ಮಾಡಬಹುದು. ಆದ್ದರಿಂದ ಹುಟ್ಟುವ ಮಗನಿಗೆ ಶಿವಸ್ವಾಮಿ ಎಂಬ ಹೆಸರನ್ನು ಇಟ್ಟರೆ ಬಹಳ ಸರಿಯಾಗಿರುವುದು ಎಂದು ಹೇಳಿದನು. ಶಾಸ್ತ್ರಿಗಳು ತಾವು ಯೋಚಿಸಿದ್ದ ನಾಮಕ್ಕೆ ಕೊನೆಯಲ್ಲಿ 'ಸ್ವಾಮಿ' ಶಬ್ದವನ್ನು ಸೇರಿಸಿ ಹೇಳಿದ ಆ ಶಿಷ್ಯನ ಮಾತನ್ನು ಕೇಳಿ ಪರಮಸಂತುಷ್ಟರಾಗಿ ಗರ್ಭದಲ್ಲಿ ಇರುವ ಮಗುವು ಜನಿಸಿದನಂತರ ಶಿವಸ್ವಾಮಿಯೆಂತಲೇ ಹೆಸರು ಇಡತಕ್ಕದ್ದೆಂದು ಆಗಲೇ ನಿಷ್ಕರ್ಷೆ ಮಾಡಿದರು. ಈ ವಿಚಾರದಿಂದ ಶಾಸ್ತ್ರಿಗಳಿಗೆ ವೇದಶಾಸ್ತ್ರಗಳ ವಿಷಯದಲ್ಲಿ ಎಷ್ಟರ ಮಟ್ಟಿಗೆ ನಂಬಿಕೆ ಇತ್ತು ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ರಾಮಶಾಸ್ತ್ರಿಗಳಿಗೆ ಮಗನು ಹುಟ್ಟುವುದಕ್ಕೆ ಮೊದಲೇ ಯಾವ ಹೆಸರನ್ನು ಇಡಬೇಕೆಂಬ ವಿಚಾರವು ನಂಜನಗೂಡಿಗೆ ಶ್ರೀಕಂಠೇಶ್ವರ ಸ್ವಾಮಿಯ ದರ್ಶನಕ್ಕೆಂದು ಹೋಗುತ್ತಲಿರುವ ಸಮಯದಲ್ಲಿ ಉಂಟಾಗಬೇಕಾದರೆ ಹುಟ್ಟುವ ಮಹಾಪುರುಷನ ಭವಿತವ್ಯತೆಗನುಗುಣವಾಗಿ ಈಶ್ವರನ ಪ್ರೇರಣೆಯಿಂದಲೇ ಆ ರೀತಿಯಾಗಿ ಶಾಸ್ತ್ರಿಗಳಿಗೆ ಮನೋವೃತ್ತಿಯು ಹುಟ್ಟಿ ಆಗಲೇ ತೀರ್ಮಾನವಾಯಿತೆಂತಲೂ ಹೇಳಬಹುದು.

ಶಾಸ್ತ್ರಿಗಳ ಧರ್ಮಪತ್ನಿ ಲಕ್ಷ್ಮಮ್ಮನವರ ಗರ್ಭವು ನವಮಾಸಗಳವರೆಗೆ ಪೂರ್ಣವಾಗಿ ಬೆಳೆದಮೇಲೆ ಶಾಲಿವಾಹನಶಕ 1780 ಪೈಂಗಳಸಂವತ್ಸರದ ಫಾಲ್ಗುಣ ಬಹುಳ ಏಕಾದಶಿ ಗುರುವಾರ (1857ನೆಯ ಇಸವಿ) ಶ್ರವಣನಕ್ಷತ್ರದಲ್ಲಿ ಮಕರರಾಶಿಯಲ್ಲಿ ರಾತ್ರಿ ಒಂಬತ್ತು ಗಂಟೆಗೆ ಸರಿಯಾಗಿ ಪುರುಷರತ್ನವು ಜನಿಸಿತು. ಗರ್ಭದಿಂದ ಶಿಶುವು ಭೂಮಿಗೆ ಬಂದಕೂಡಲೆ ರಾಜಧಾನಿಯಲ್ಲಿ ಸ್ವಭಾವವಾಗಿ ರಾತ್ರಿವೇಳೆಯಲ್ಲಿ ಹಾರಿಸತಕ್ಕ ಗುಂಡಿನ ಶಬ್ದವು ಎಲ್ಲರಿಗೂ ಕೇಳಿಸಿತು. ಇದೊಂದು ಶುಭೋದರ್ಕವೆಂದು ಅಲ್ಲಿದ್ದವರೆಲ್ಲರೂ ತಿಳಿದುಕೊಂಡರು. ತಮ್ಮ ನಂಬಿಕೆಗೆ ಸರಿಯಾಗಿ ಭಗವಂತನು ಪುಂಪ್ರಜೆಯನ್ನು ಅನುಗ್ರಹಿಸಿದ್ದನ್ನು ತಿಳಿದು ಶಾಸ್ತ್ರಿಗಳಿಗೆ ಸಂತೋಷವು ಅಪಾರವಾಯಿತು. ಈ ಶಾಸ್ತ್ರಿಗಳವರಿಗೆ ಶಾಸ್ತ್ರದಲ್ಲಿ ಹೇಗೆ ಪಾಂಡಿತ್ಯವಿತ್ತೋ ಹಾಗೆ ಅಗಾಧವಾದ ನೀರಿನಲ್ಲಿ ಈಜುವುದರಲ್ಲಿಯೂ ವಿಶೇಷ ಸಾಮರ್ಥ್ಯವಿತ್ತು. ಕೂಡಲೇ ಮೈಸೂರ ದೊಡ್ಡಕೆರೆಯೆಂಬ ಜಲಾಶಯಕ್ಕೆ ಹೋಗಿ ತಮ್ಮ ಪಿತೃಗಳ ಉತ್ತಾರಣಕ್ಕೋಸ್ಕರ ಎತ್ತರವಾದ ಪ್ರದೇಶದಿಂದ ನೀರಿಗೆ ಧುಮುಕಿ ಆ ವೇಗದಿಂದ ಜಲಕಣಗಳು ಬಹಳ ಮೇಲಕ್ಕೆ ಹಾರುವಂತೆ ಮಾಡಿದರು. ಈ ರೀತಿ ಆವಶ್ಯಕವಾಗಿ ಆಚರಿಸಬೇಕೆಂದು ಧರ್ಮಶಾಸ್ತ್ರದಲ್ಲಿ ಹೇಳಿದೆ. ಶಾಸ್ತ್ರಿಗಳು ಇತರ ಸಾಮಾನ್ಯ ಜನರಿಗೆ ಮೇಲುಪಙ್ಕ್ತಿಯಾಗಿದ್ದದ್ದರಿಂದ ತಮ್ಮ ಆಚರಣೆಯಿಂದ ಧರ್ಮಗಳನ್ನು ಇತರ

ಜನಗಳಿಗೆ ಬೋಧಿಸಲು ಸಾಧ್ಯವಾದ ಮಟ್ಟಿಗೆ ಪ್ರತಿಯೊಂದು ಧರ್ಮವನ್ನೂ ಯಥೋಕ್ತವಾಗಿಯೇ ಆಚರಿಸುತ್ತಲಿದ್ದಂತೆ ತಿಳಿದುಬರುತ್ತೆ. ಬಳಿಕ ಮಗನಿಗೆ ಜಾತಕರ್ಮ ನಾಮಕರಣಾದಿ ಸಂಸ್ಕಾರಗಳನ್ನು ಬಹಳ ವೈಭವದಿಂದ ನಡೆಸಿದರು. ಹನ್ನೊಂದನೆಯ ದಿನದಲ್ಲಿ ಮೊದಲೇ ನಿಷ್ಕರ್ಷೆಮಾಡಿದ್ದಂತೆ ಶಿವಸ್ವಾಮಿ ಎಂತಲೇ ನಾಮಕರಣವಾಯಿತು. ಅನಂತರ ಪ್ರಬುದ್ಧರಾದ ಲಕ್ಷ್ಮೀನರಸಿಂಹಶಾಸ್ತ್ರಿ ಯಜ್ಞನಾರಾಯಣಶಾಸ್ತ್ರಿಗಳೆಂಬ ಇಬ್ಬರು ಪುತ್ರರಿಂದಲೂ ಅತ್ಯಂತ ಬಾಲ್ಯವಯಸ್ಕನಾಗಿದ್ದ ಮೂರನೆಯ ಮಗ ಶಿವಸ್ವಾಮಿಯಿಂದಲೂ ವೃದ್ಧಿಯನ್ನು ಹೊಂದುತ್ತಲಿರುವ ತಮ್ಮ ಈ ಸಂಸಾರದಲ್ಲಿ ತೃಪ್ತಿಯನ್ನು ಪಡೆದು ತಮ್ಮ ಜನ್ಮಾಂತರೀಯವಾದ ಸುಕೃತವನ್ನು ಯೋಚಿಸಿಕೊಂಡು ಸಂತೋಷಡುತ್ತ ಕರ್ಮಾನುಷ್ಠಾನ ದಿಂದಲೂ, ಶಿವಪೂಜೆಯಿಂದಲೂ, ಪಾಠ ಪ್ರವಚನಗಳಿಂದಲೂ ಒಂದು ವರ್ಷವೂ ಹನ್ನೊಂದು ತಿಂಗಳವರೆಗೆ ತಮ್ಮ ಜೀವಿತ ಕಾಲವನ್ನು ಆನಂದವಾಗಿ ಕಳೆಯುತ್ತಲಿದ್ದರು. ಸತ್ಕುಲಪ್ರಸೂತರಾದ ಕುಣಿಗಲ್ ರಾಮಶಾಸ್ತ್ರಿಗಳವರಲ್ಲಿ ಜನಿಸಿ ಶಿವಸ್ವಾಮಿಯೆಂಬ ಅನ್ವರ್ಥನಾಮದಿಂದ ಪ್ರತಿಕ್ಷಣದಲ್ಲಿಯೂ ವೃದ್ಧಿಹೊಂದುತ್ತಲಿದ್ದ ಆ ಬಾಲರತ್ನವು ಒಂದು ವರ್ಷ ವಯಸ್ಸಾಗುವುದರಲ್ಲಿಯೇ ಮಾತನಾಡುವುದಕ್ಕೂ ಕಾಲಿನಿಂದ ನಡೆಯುವುದಕ್ಕೂ ಆರಂಭಿಸಿತು. ತಮ್ಮ ತಂದೆಯಾದ ರಾಮಶಾಸ್ತ್ರಿಗಳು ಸಾಯಂಪ್ರತಃ ಔಪಾಸನವನ್ನು ಮಾಡುವ ಕಾಲದಲ್ಲಿಯೂ, ಈಶ್ವರಪೂಜೆಯನ್ನು ಮಾಡತಕ್ಕ ಸಮಯದಲ್ಲಿಯೂ, ಶಿಷ್ಯರಿಗೆ ಪಾಠಗಳನ್ನು ಹೇಳುವಾಗಲೂ ಅವರ ಸಮೀಪದಲ್ಲಿಯೇ ಪ್ರಾಯಿಕವಾಗಿ ಇರುತ್ತಲಿದ್ದುದರಿಂದಲೂ, ಪ್ರಾಕ್ತನಸದ್ವಾಸನಾಬಲದಿಂದಲೂ ಈ ಶಿವಸ್ವಾಮಿಯು ಅಗ್ನಿಕುಂಡದಲ್ಲಿರುವ ವಿಭೂತಿಯನ್ನು ತನ್ನ ಎರಡು ಕೈಗಳಿಂದಲೂ ಬಾಚಿ ತೆಗೆದುಕೊಂಡು ತನ್ನ ಕೋಮಲವಾದ ಸರ್ವಾಂಗಗಳಿಗೂ ಲೇಪನ ಮಾಡಿಕೊಳ್ಳುವುದು, ಆ ಭಸ್ಮವನ್ನು ತಿನ್ನುವುದು, ಪೂಜೆಯಾದ ನಂತರ ಶಾಸ್ತ್ರಿಗಳು ಸ್ತೋತ್ರಗಳನ್ನು ಹೇಳುತ್ತ ಕರತಾಳವನ್ನು ಹಾಕುತ್ತ ನರ್ತನ ಮಾಡುವಾಗ್ಗೆ ತಾನೂ ಕರತಾಳವನ್ನು ಹಾಕಿಕೊಂಡು ತನ್ನ ಬಾಯಿಗೆ ಬಂದ ಶಿವನಾಮಗಳನ್ನು ಕೀರ್ತಿಸುತ್ತ ನರ್ತನ ಮಾಡುವುದು, ಈ ರೀತಿಯಾದ ತನ್ನ ಬಾಲಲೀಲೆಯನ್ನು ಮಾತಾಪಿತೃಗಳಿಗೆ ತೋರಿಸಿ ಅವರುಗಳ ಸಂತೋಷವನ್ನೂ, ಆಶ್ಚರ್ಯವನ್ನೂ ಪ್ರತಿಯೊಂದು ನಿಮಿಷದಲ್ಲಿಯೂ ವೃದ್ಧಿಗೊಳಿಸುತ್ತ ಲಿದ್ದನು. ಶಿವಸ್ವಾಮಿಯು ತನ್ನ ಸಮಾನ ವಯಸ್ಕರಾಗಿದ್ದ ಬಾಲಕರೊಡನೆ ಸೇರಿ ಬೀದಿಯಲ್ಲಿ ಹುಡುಗರು ಸ್ವಭಾವವಾಗಿ ಆಡುವ ಸಣ್ಣ ಸಣ್ಣ ಆಟಗಳನ್ನು ಆಡುವುದಕ್ಕೆ ಧೈರ್ಯವಾಗಿ ಮನೆಯಿಂದ ಹೊರಗೆ ಬರುತ್ತಲೇ ಇರಲಿಲ್ಲ. ಆಗಿಂದಾಗ್ಗೆ ನೆರೆಹೊರೆ ಮನೆಗಳ ಬಾಲಕರು ತನ್ನ ಮನೆಗೆ ಬಂದು ಸೇರಿದ ಸಂದರ್ಭಗಳಲ್ಲಿ ತನಗೆ ಬಂದ ಸಂಸ್ಕೃತ ಶ್ಲೋಕಗಳನ್ನು ಮುದ್ದುಮುದ್ದಾಗಿ ಆ ಹುಡುಗರಿಗೆ ಹೇಳಿಕೊಟ್ಟು ಅವರ ಬಾಯಿಂದಲೂ ಹೇಳಿಸುತ್ತ

ಅವರೊಡನೆ ಕರತಾಳಪುರಸ್ಸರವಾಗಿ ನರ್ತನ ಮಾಡುವುದೆಂಬುದೊಂದೇ ಆಟವನ್ನು ತಿಳಿದಿದ್ದನು.

ಈ ಕಾಲದ ದೊಡ್ಡವರಾಗಲಿ ಹುಡುಗರಾಗಲಿ ಈ ಗ್ರಂಥವನ್ನು ಓದುವಾಗ ಈ ವಿದ್ಯಮಾನವನ್ನು ಅತಿಶಯೋಕ್ತಿಯೆಂದು ತಿಳಿದುಕೊಳ್ಳಬಹುದು. ಜನ್ಮಾಂತರೀಯವಾದ ಸದ್ವಾಸನೆಯೂ ಬಹಳ ಬಾಲ್ಯದಲ್ಲಿಯೇ ಸತ್ಸಹವಾಸವೂ ಉಂಟಾಗಿದ್ದ ಮಕ್ಕಳ ರೀತಿಯನ್ನು ನೋಡಿದ ಜನಗಳು ಅಲ್ಲಲ್ಲಿ ಈಗಲೂ ಯಾರಾದರೂ ಜೀವಿಸಿರಬಹುದಾಗಿ ಅಂಥಾ ಜನರಲ್ಲಿ ಪ್ರಸ್ತಾಪಿಸುವುದರಿಂದಲೂ ತಮ್ಮ ಬುದ್ಧಿಯಿಂದ ಸ್ವಲ್ಪ ವಿಚಾರಮಾಡಿ ನೋಡುವುದರಿಂದಲೂ ಸತ್ಕುಲಪ್ರಸೂತನಾದ ಮತ್ತು ಹುಟ್ಟಿದ್ದು ಮೊದಲು ಬೇರೊಂದು ಮಾರ್ಗವನ್ನರಿಯದೆ ಸತ್ಸಂಪ್ರದಾಯ ಸತ್ಸಹವಾಸಗಳಲ್ಲಿದ್ದ ಈ ಬಾಲಕನ ವಿದ್ಯಮಾನ ವಿಷಯದ ಈ ಬರವಣಿಗೆ ಎರಡು ವರ್ಷ ಪೂರ್ತಿಯಾಗುವುದರೊಳಗಾಗಿಯೇ ಎಂದರೆ ಸಿದ್ಧಾರ್ಥಿಸಂವತ್ಸರದ ಮಾಘ ಶುಕ್ಲ ಚತುರ್ಥೀ ದಿವಸದಲ್ಲಿ ರಾಮಶಾಸ್ತ್ರಿಗಳು ಸ್ವರ್ಲೋಕಗತರಾದರು. ಈ ಶಿವಸ್ವಾಮಿಯು ಅತ್ಯಂತ ಬಾಲ್ಯದಲ್ಲಿ ಪಿತೃವಿಯೋಗದಿಂದ ಖಿನ್ನನಾಗಿ ತಾಯಿಯಾದ ಲಕ್ಷ್ಮಮ್ಮನವರಿಂದ ಆದರಿಸಲ್ಪಟ್ಟವನಾಗಿ ಬೆಳೆಯುತ್ತಲಿದ್ದನು. ರಾಮಶಾಸ್ತ್ರಿಗಳು ಕಾಲವಾದನಂತರ ಅವರ ಧರ್ಮಪತ್ನಿಯಾದ ಲಕ್ಷ್ಮಮ್ಮನವರು ಪ್ರಾರಬ್ಧಕರ್ಮದಿಂದ ಪ್ರಾಪ್ತವಾದ ವೈಧವ್ಯವನ್ನು ಅನುಭವಿಸುತ್ತ ಯಾವಾಗಲೂ ತಮ್ಮ ಪತಿಯ ಧ್ಯಾನವನ್ನೇ ಮಾಡಿಕೊಂಡು ಶುಕ್ಲವಸ್ತ್ರಧಾರಣೆ ಮಾಡಿ ವಿಭೂತಿರುದ್ರಾಕ್ಷಿಗಳನ್ನು ಧರಿಸಿಕೊಂಡು ಸರ್ವದಾ ಶಿವನಾಮಜಪವನ್ನು ಮಾಡುತ್ತ ಸಾಕ್ಷಾಚ್ಛಿವನಂತೆ ಎಡೆಬಿಡದೆ ತನ್ನ ಕೂಡ ಇದ್ದ ಶಿವಸ್ವಾಮಿಯನ್ನು ನೋಡಿ ಸಂತೋಷಪಡುತ್ತ ಹಿಂದೆ ಹೇಳಿದ ಆಟಗಳನ್ನೇ ಆಡುವುದಕ್ಕೆ ಬೇಕಾದ ಸಾಧನಗಳನ್ನು ಆ ಮಗುವಿಗೆ ಕಲ್ಪಿಸಿಕೊಟ್ಟು ಆ ಬಾಲಕನು ಆಡುವ ಆಟಗಳನ್ನೂ ಆತನ ಚರ್ಯೆಯನ್ನೂ ನೋಡಿ ನೋಡಿ ಹಿಗ್ಗುತ್ತ ಕಾಲವನ್ನು ಕಳೆಯುತ್ತಲಿದ್ದರು.

ರಾಮಶಾಸ್ತ್ರಿಗಳ ಜ್ಯೇಷ್ಠಪುತ್ರರಾದ ಲಕ್ಷ್ಮೀನರಸಿಂಹಶಾಸ್ತ್ರಿಗಳು ಆಗ್ಗೆ ಹತ್ತೊಂಬತ್ತು ವರ್ಷದ ವಯಸ್ಸಿನವರಾಗಿ ತರ್ಕಶಾಸ್ತ್ರದಲ್ಲಿ ಸಂಪೂರ್ಣ ಜ್ಞಾನವನ್ನು ಸಂಪಾದಿಸಿದ್ದರು. ಇವರೇ ತಮ್ಮ ತಂದೆಗಳ ಕಾಲವು ಕಳೆದನಂತರ ಪೂರ್ಣವಾಗಿ ಕುಟುಂಬ ಭಾರವನ್ನು ವಹಿಸಿ ತಮ್ಮ ಸಹೋದರರುಗಳನ್ನೂ ತಾಯಿಯನ್ನೂ ಕಾಪಾಡುತ್ತ ಶಾಸ್ತ್ರಿಗಳವರ ಗೌರವಕ್ಕೂ ಅವರ ಲೋಕೋತ್ತರವಾದ ಯಶಸ್ಸಿಗೂ ಸ್ವಲ್ಪವೂ ಲೋಪ ಬಾರದಂತೆ ನಡೆದುಕೊಳ್ಳುತ್ತಲಿದ್ದರು. ಇವರು ತಮ್ಮ ತಂದೆಯವರಾದ ರಾಮಶಾಸ್ತ್ರಿಗಳಲ್ಲಿಯೇ ಕಾವ್ಯ

ನಾಟಕಾಲಂಕಾರಗಳನ್ನೂ ತರ್ಕಶಾಸ್ತ್ರವನ್ನೂ ಓದಿದರು. ಶಾಸ್ತ್ರಿಗಳವರ ತಪಸ್ಸಿಗೆ ಫಲಭೂತರಾಗಿ ಬಹಳ ಕಾಲದನಂತರ ಹುಟ್ಟಿ ಬದುಕಿದವರಾದುದರಿಂದಲೂ ಬಾಲ್ಯದಲ್ಲಿ ಪದೇ ಪದೇ ಈ ಲಕ್ಷ್ಮೀನರಸಿಂಹಶಾಸ್ತ್ರಿಗಳವರಿಗೆ ಶರೀರದಲ್ಲಿ ರೋಗಬಾಧೆಯುಂಟಾಗುತ್ತಲಿದ್ದುದರಿಂದಲೂ ಇವರಿಗೆ ವಿದ್ಯಾವ್ಯಾಸಂಗವನ್ನು ಮಾಡಿಸುವುದರಲ್ಲಿ ರಾಮಶಾಸ್ತ್ರಿಗಳು ಹೆಚ್ಚಾಗಿ ನಿರ್ಬಂಧ ಮಾಡುತ್ತಿರಲಿಲ್ಲ. ಆದರೆ ಈಶ್ವರಪ್ರಸಾದಲಬ್ಧರಾದುದರಿಂದಲೂ ಜನ್ಮಾಂತರೀಯ ಸಂಸ್ಕಾರ ಬಲದಿಂದಲೂ ಲಕ್ಷ್ಮೀನರಸಿಂಹ ಶಾಸ್ತ್ರಿಗಳ ಪ್ರತಿಭೆಯು ಅನ್ಯಾದೃಶವಾಗಿತ್ತು. ದೊಡ್ಡ ಶಾಸ್ತ್ರಿಗಳವರಲ್ಲಿ ವ್ಯಾಸಂಗ ಮಾಡತಕ್ಕ ತಮ್ಮ ಸಹಪಾಠಿಗಳಿಗೂ ಇತರರಿಗೂ ಈ ಲಕ್ಷ್ಮೀನರಸಿಂಹಶಾಸ್ತ್ರಿಗಳು ಚಿಂತನೆಯನ್ನು ಸ್ವತಂತ್ರವಾಗಿ ಹೇಳುತ್ತಲಿದ್ದರು. ಸ್ವತಃ ವ್ಯಾಸಂಗವು ಕಡಿಮೆಯಾಗಿದ್ದರೂ ಇತರ ವಿದ್ಯಾರ್ಥಿಗಳಿಗೆ ಚಿಂತನೆಯನ್ನು ಹೇಳುವುದರಿಂದಲೂ ಸ್ವಭಾವವಾದ ಪ್ರತಿಭೆಯಿಂದಲೂ ಇವರಿಗೆ ತರ್ಕಶಾಸ್ತ್ರದಲ್ಲಿ ಉತ್ತಮವಾದ ಪಾಂಡಿತ್ಯ ವುಂಟಾಯಿತು. ಲಕ್ಷ್ಮೀನರಸಿಂಹಶಾಸ್ತ್ರಿಗಳು ಹದಿನಾರು ವರ್ಷದ ವಯಸ್ಸಿನವರಾಗಿರುವ ಕಾಲದಲ್ಲಿ ರಾಮಶಾಸ್ತ್ರಿಗಳು ದಕ್ಷಿಣದೇಶಸಂಚಾರಕ್ಕೆಂದು ಹೊರಟು ಹೋಗಿದ್ದರು. ಆ ಸಮಯದಲ್ಲಿ ದೇಶಾಂತರದಿಂದ ಮೈಸೂರು ಸಂಸ್ಥಾನದ ರಾಜಸಭೆಯಲ್ಲಿ ಶಾಸ್ತ್ರವಾದವನ್ನು ನಡೆಸಿ ಬಹುಮತಿಯನ್ನು ಪಡೆಯಲು ವಿದ್ವಾಂಸರು ಬಂದಿದ್ದರು. ಆ ವಿದ್ವಾಂಸರೊಡನೆ ವಾದವನ್ನು ಮಾಡತಕ್ಕವರು ತಮ್ಮ ಆಸ್ಥಾನ ಪಂಡಿತರಲ್ಲಿ ಯಾರು? ಎಂಬ ಆಲೋಚನೆಯು ಪ್ರಭುಗಳವರಿಗೆ ಉಂಟಾದ ಸಮಾಚಾರವನ್ನು ಕೇಳಿ ಲಕ್ಷ್ಮೀನರಸಿಂಹಶಾಸ್ತ್ರಿಗಳು ಆ ದಿನ ರಾಜ ಸಭೆಗೆ ಹೋದರು. ಇವರು ಕೇವಲ ಬಾಲ್ಯವಯಸ್ಕರಾಗಿದ್ದುದರಿಂದ ಪ್ರಭುಗಳಿಗಾಗಲಿ ಬಂದಿದ್ದ ಪಂಡಿತರಿಗಾಗಲಿ ಇವರ ಕಡೆ ಗಮನವಿರಲಿಲ್ಲ. ಶಾಸ್ತ್ರವಾದಕ್ಕೆ ಪ್ರಾರಂಭವಾಗುತ್ತಲೆ ಈ ಶಾಸ್ತ್ರಿಗಳು ತಾವಾಗಿಯೇ ಮುಂದುಬಿದ್ದು ವಿಷಯ ವಿಚಾರಕ್ಕೆ ಪ್ರಾರಂಭ ಮಾಡಿದರು. ಪರ್ಯವಸಾನದಲ್ಲಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳ ಪ್ರತಿಭೆಯ ಮತ್ತು ವಿಜ್ಞಾನದ ಮುಂದೆ ತಮ್ಮ ಕೋಟೆಯು ನಿಲ್ಲಲಾರದೆ ಹೋದ ಸಂಗತಿಯನ್ನು ತಿಳಿದುಕೊಂಡ ದೇಶಾಂತರದ ಪಂಡಿತರೂ ಸಭಿಕರೂ ಆಶ್ಚರ್ಯಸ್ತಂಭಿತರಾದರು. ಈ ಸಂದರ್ಭದಲ್ಲಿ ಪ್ರಭುಗಳವರಿಗೆ ಆನಂದವೂ ಆಶ್ಚರ್ಯವೂ ಉಕ್ಕಿ ತುಳುಕಿತು. ರಾಮಶಾಸ್ತ್ರಿಗಳವರ ಪ್ರಭಾವವನ್ನು ಕುರಿತು ಬಹಳವಾಗಿ ಶ್ಲಾಘನೆಮಾಡಿ ಆ ಸದಸ್ಸಿನಲ್ಲಿ ಬಾಲ್ಯವಯಸ್ಕರಾಗಿದ್ದ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಎರಡು ತೋಡಾ, ಮುತ್ತಿನ ಕಂಠಿ ಮೊದಲಾದ ಸನ್ಮಾನಗಳನ್ನು ಮುಂದಾಗಿ ತೊಡಿಸಿ ಅನಂತರ ದೇಶಾಂತರದ ಪಂಡಿತರಿಗೆ ಬಹುಮತಿಯನ್ನು ಮಾಡಿದರು. ಈ ಲಕ್ಷ್ಮೀನರಸಿಂಹ ಶಾಸ್ತ್ರಿಗಳಲ್ಲಿ ಆ ದಿನ ತಮಗುಂಟಾದ ಪ್ರೀತಿಯಿಂದ ಶ್ರೀಮನ್ಮಹಾರಾಜರವರು "ಅತಿಸ್ನೇಹಃ ಪಾಪಶಂಕೀ" ಎಂಬ ನ್ಯಾಯವನ್ನನುಸರಿಸಿ ಈ ಬಾಲ ಪಂಡಿತರಿಗೆ ದೃಷ್ಟಿದೋಷದಿಂದ

ತೊಂದರೆಯಾದೀತೆಂದು ಭೀತಿಗೊಂಡು ಆ ದೋಷದ ಪರಿಹಾರಕ್ಕೆ ಬೇಕಾದುದನ್ನು ನಡೆಸುವಂತೆ ಶಾಸ್ತ್ರಿಗಳ ತಾಯಿಯವರಿಗೆ ಹೇಳಿ ಕಳುಹಿಸಿ ಲಕ್ಷ್ಮೀನರಸಿಂಹಶಾಸ್ತ್ರಿಗಳನ್ನು ಮರ್ಯಾದೆಯೊಡನೆ ಮನೆಗೆ ಕಳುಹಿಸಿ ಕೊಟ್ಟಂತೆ ತಿಳಿದುಬಂದಿದೆ. ತಮ್ಮ ತಂದೆಯವರಾದ ರಾಮಶಾಸ್ತ್ರಿಗಳು ಸ್ವರ್ಗಸ್ಥರಾದ ಬಳಿಕ ಅವರಲ್ಲಿ ತಾವು ಓದಿದ್ದ ಗ್ರಂಥಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ವ್ಯಾಸಂಗವನ್ನು ಮಾಡಿ ಪಾಂಡಿತ್ಯವನ್ನು ವೃದ್ಧಿಪಡಿಸಿಕೊಂಡು ದೇಶಸಂಚಾರಕ್ಕೆ ಹೊರಟರು. ಇವರು ಕೇರಳ ದೇಶದಲ್ಲಿ ಸಂಚಾರ ಮಾಡಿದಂತೆಯೂ, ಆಗ್ಗೆ ಅನಂತಶಯನ ಸಂಸ್ಥಾನದಲ್ಲಿ ಅನೇಕರು ವಿದ್ವಾಂಸರು ಇದ್ದಂತೆಯೂ, ಆ ಸಂಸ್ಥಾನದಲ್ಲಿ ಲಕ್ಷ್ಮೀನರಸಿಂಹಶಾಸ್ತ್ರಿಗಳ ವಾಕ್ಯಾರ್ಥ ವಿಚಾರವು ನಡೆದು ಅಲ್ಲಿನ ಪಂಡಿತರುಗಳು ಆಶ್ಚರ್ಯಸ್ತಂಭಿತರಾದಂತೆಯೂ ಆ ದೇಶದಲ್ಲಿ ಈಗಲೂ ಪ್ರಸಿದ್ಧಿ ಇದೆ. ಈ ಲಕ್ಷ್ಮೀನರಸಿಂಹಶಾಸ್ತ್ರಿಗಳು ತಮ್ಮ ತಂದೆಯವರಂತೆ ಅನೇಕ ಜನ ಶಿಷ್ಯರಿಗೆ ತರ್ಕಶಾಸ್ತ್ರ ಪಾಠವನ್ನು ಹೇಳಿದರು. ಇವರು ಮೈಸೂರು ಮುಮ್ಮಡಿ ಕೃಷ್ಣರಾಜ ಪ್ರಭುಗಳವರ ಕಾಲದ ಅಂತ್ಯಭಾಗದಲ್ಲಿಯೂ ಚಾಮರಾಜ ಪ್ರಭುಗಳವರ ರಾಜ್ಯಭಾರ ಕಾಲದಲ್ಲಿಯೂ ಕೆಲವು ವರ್ಷಗಳ ಪರ್ಯಂತ ಮೈಸೂರು ಸಂಸ್ಥಾನದ ವಿದ್ವದ್ಗೋಷ್ಠಿಯಲ್ಲಿ ಅಗ್ರಗಣ್ಯರಾಗಿದ್ದರು. ತಮ್ಮ ತಂದೆಯವರಾದ ರಾಮಶಾಸ್ತ್ರಿಗಳಿಂದ ರಚಿಸಲ್ಪಟ್ಟು ಸರ್ವದೇಶ ಪ್ರಸಿದ್ಧವಾದ 'ಶತಕೋಟಿ' ಎಂಬ ಗ್ರಂಥಕ್ಕೆ ಅವರ ಕಾಲಾನಂತರದಲ್ಲಿ ಕೆಲವರು ಪಂಡಿತರು ಖಂಡನೆ ಮಾಡಿರುತ್ತಾರೆಂಬ ವರ್ತಮಾನವನ್ನು ಕೇಳಿ ಆ ಖಂಡನ ಗ್ರಂಥವನ್ನು ತರಿಸಿಕೊಂಡು ಅದನ್ನು ಸಹಸ್ರಪ್ರಕಾರವಾಗಿ ಖಂಡಿಸಿ 'ಶತಕೋಟಿಮಂಡನ' ವೆಂಬ ಹೆಸರಿನಿಂದ ಗ್ರಂಥವನ್ನು ಮಾಡಿರುವರು. ಇದರಂತೆ ಅದ್ವೈತ ವೇದಾಂತಶಾಸ್ತ್ರದಲ್ಲಿ ಅತಿ ಪ್ರೌಢವಾದ 'ಬ್ರಹ್ಮಾನಂದೀಯ'ವೆಂಬ ಗ್ರಂಥಕ್ಕೆ ವಿಶಿಷ್ಟಾದ್ವೈತ ಮತಾವಲಂಬಿಗಳು ಬರೆದ ಖಂಡನವನ್ನು ಖಂಡಿಸಿ 'ನ್ಯಾಯೇಂದುಶೇಖರ'ವೆಂಬ ಹೆಸರಿನಿಂದ ಮಂಡನಗ್ರಂಥವು ಬಂಗಾಲಾ ದೇಶದಿಂದ ಹೊಸದಾಗಿ ಮೈಸೂರು ಸಂಸ್ಥಾನದಲ್ಲಿದ್ದ ಪಂಡಿತರ ದೃಷ್ಟಿಗೆ ಗೋಚರವಾಯಿತು. ಈ ಗ್ರಂಥವು ಮುದ್ರಿತವಾಗಿರಲಿಲ್ಲ, ಲೇಖಕರ ದೋಷದಿಂದ ಅನೇಕವಾದ ಅಶುದ್ಧಗಳಿಂದ ನಿಬಿಡವಾಗಿತ್ತು. ಹಿಂದಿನ ಕಾಲದಲ್ಲಿ ಅಪೂರ್ವವಾದ ಗ್ರಂಥವನ್ನು ಸರಿಯಾಗಿ ಅನ್ವಯಿಸಿಕೊಂಡು ಅರ್ಥ ಮಾಡುವುದು ಇಲ್ಲಿನ ಪಂಡಿತರುಗಳಿಗೆ ಅಸಾಧ್ಯವಾಗಿತ್ತು. ಆ ಸಂದರ್ಭದಲ್ಲಿ ಪ್ರತಿಭಾಶಾಲಿಗಳಾಗಿದ್ದ ಈ ಲಕ್ಷ್ಮೀನರಸಿಂಹಶಾಸ್ತ್ರಿಗಳವರು ರಹಸ್ಯದಲ್ಲಿದ್ದ ಆ ಗ್ರಂಥವನ್ನು ತರಿಸಿಕೊಂಡು ಆಮೂಲಾಗ್ರವಾಗಿ ಪರಿಶೀಲನ ಮಾಡಿ ಅದರಲ್ಲಿ ತುಂಬಿದ್ದ ಅಶುದ್ಧಿಗಳನ್ನೆಲ್ಲಾ ಸರಿಪಡಿಸಿ ತಮ್ಮ ಶಿಷ್ಯರಿಗೆ ಕೂಡಲೆ ಸ್ವತಂತ್ರವಾಗಿ ಪಾಠವನ್ನು ಹೇಳುವುದರ ಮೂಲಕ ಪ್ರಚಾರಗೊಳಿಸಿದರು. ಇದು ಈ ಶಾಸ್ತ್ರಿಗಳ ಶಿಷ್ಯರಾಗಿದ್ದು ಈಚೆಗೆ ಕೆಲವು ಕಾಲ

ಮೈಸೂರು ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅದ್ವೈತವೇದಾಂತ ಪಂಡಿತರಾಗಿದ್ದ ಗೋಪಿಶೆಟ್ಟಿಪಾಳೆಯಂ ರಾಮಸ್ವಾಮಿಶಾಸ್ತ್ರಿಗಳೆಂಬುವರಿಂದ ತಿಳಿದುಕೊಂಡ ವಿಷಯವಾಗಿದೆ. ಹೀಗೆ ಶಾಸ್ತ್ರಿಗಳ ಪ್ರತಿಭಾಶಕ್ತಿಯು ಅತ್ಯಾಶ್ಚರ್ಯಕರವಾಗಿದ್ದಿತು. ಈ ಗ್ರಂಥಕ್ಕೆ ವಿಷಯರಾದ ಶೃಂಗೇರೀ ಶ್ರೀಮಠದ ಶ್ರೀಸಚ್ಚಿದಾನಂದಶಿವಾಭಿನವ ನೃಸಿಂಹ ಭಾರತೀಸ್ವಾಮಿಗಳವರೂ ಈ ಲಕ್ಷ್ಮೀನರಸಿಂಹಶಾಸ್ತ್ರಿಗಳವರಲ್ಲಿಯೇ ತರ್ಕವೇದಾಂತಶಾಸ್ತ್ರಗಳೆರಡನ್ನೂ ವ್ಯಾಸಂಗಮಾಡಿ ಪಾಂಡಿತ್ಯವನ್ನು ಸಂಪಾದಿಸಿದರು. ಈ ಶಾಸ್ತ್ರಗಳೆರಡನ್ನೂ ವ್ಯಾಸಂಗಮಾಡಿ ಪಾಂಡಿತ್ಯವನ್ನು ಸಂಪಾದಿಸಿದರು. ಈ ಶಾಸ್ತ್ರಿಗಳವರಿಗೆ ಇವರಂತೆ ಪ್ರತಿಭಾಶಾಲಿಯಾದ ಒಬ್ಬ ಪುತ್ರನಿದ್ದು ಆತನು ಅಲ್ಪಾಯುಸ್ಸಿನಲ್ಲಿಯೇ ತಪ್ಪಿಹೋದನು. ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಮಾತ್ರ ಇದ್ದು ಅವರ ಸಂತತಿಯು ಈಗ ವೃದ್ಧಿಹೊಂದುತ್ತಲಿದೆ. ಮತ್ತು ಇವರ ಆಜ್ಞೆಗನುಸಾರವಾಗಿ ಇವರ ಧರ್ಮ ಪತ್ನಿಯವರಿಗೆ ಸ್ವೀಕೃತ ಪುತ್ರರಾದ ರಾಮಶಾಸ್ತ್ರಿಗಳೆಂಬವರು ಬಾಲ್ಯದಿಂದಲೂ ಈ ಗ್ರಂಥಕ್ಕೆ ವಿಷಯರಾದ ಶ್ರೀಸ್ವಾಮಿಗಳವರಲ್ಲಿ ತರ್ಕವೇದಾಂತಶಾಸ್ತ್ರಗಳನ್ನು ವ್ಯಾಸಂಗಮಾಡಿ ತಮ್ಮ ಪೂರ್ವಜರಂತೆ ಮೈಸೂರು ಸಂಸ್ಥಾನದ ಪ್ರಭುಗಳವರ ಪ್ರೀತಿಗೌರವಗಳಿಗೆ ಪಾತ್ರರಾಗಿ ಮೈಸೂರು ರಾಜಾಸ್ಥಾನದ ಪಂಡಿತರಾಗಿರುತ್ತ ಸಾಧ್ಯವಾದಮಟ್ಟಿಗೆ ತಮ್ಮ ಕುಲಪದ್ಧತಿಯನ್ನು ಆಚರಿಸಿಕೊಂಡು ಈ ಪಂಡಿತರ ವಂಶಕ್ಕೆ ಅಲಂಕಾರಪ್ರಾಯರಾಗಿರುತ್ತಾರೆ.

ಶಿವಸ್ವಾಮಿಯು ತನಗೆ ಐದನೆಯ ವರ್ಷದಲ್ಲಿಯೇ ಮಾತೃವಿಯೋಗವೂ ಉಂಟಾಗಲು ಮಾತಾಪಿತೃಗಳಿಬ್ಬರಿಂದಲೂ ದೂರಮಾಡಲ್ಪಟ್ಟು ತನ್ನ ತಂದೆತಾಯಿಗಳ ಸ್ಥಾನದಲ್ಲಿದ್ದ ಜ್ಯೇಷ್ಠಭ್ರಾತೃವಿನಿಂದ ವಿಶೇಷವಾಗಿ ಪ್ರೀತಿಸಲ್ಪಟ್ಟು ಅವರ ಅಧೀನದಲ್ಲಿದ್ದುಕೊಂಡು ಅವರಿಂದ ವೃದ್ಧಿಹೊಂದುತ್ತಲಿದ್ದನು.

❋ ❋ ❋

ಅಧ್ಯಾಯ - ೨.

ಸಂನ್ಯಾಸ ಪ್ರಾಪ್ತಿ

ಈಗ್ಗೆ ಸುಮಾರು 40 ವರ್ಷಗಳ ಹಿಂದೆ ಶೃಂಗೇರಿ ಮಠದಲ್ಲಿ ಗುರುಗಳಾಗಿದ್ದ ನರಸಿಂಹಭಾರಿತೀ ಸ್ವಾಮಿಗಳವರು ನಮ್ಮ ಭರತಖಂಡದಲ್ಲಿ ಅನೇಕರಿಗೆ ಸ್ಮೃತಿಪಥದಲ್ಲಿರಬಹುದು. ಇವರು ಶೃಂಗೇರೀ ಸ್ಥಳದಲ್ಲಿಯೇ ಜನಿಸಿದವರು. ಇವರು ಇಪ್ಪತ್ತನೆಯ ವರ್ಷಕ್ಕೆ ಪೂರ್ವವೇ ಕಾಲ್ನಡೆಯಿಂದ ಕಾಶಿ ಮೊದಲಾದ ದಿವ್ಯದೇಶಗಳ ಯಾತ್ರೆಯನ್ನು ಎರಡುಸಾರಿ ಮಾಡಿದ್ದಂತೆ ತಿಳಿದು ಬಂದಿದೆ. ಈ ಮಹಾಪುರುಷರಿಗೆ ಇಪ್ಪತ್ತನೆಯ ವರ್ಷದಲ್ಲಿ ಅಭಿನವ ಸಚ್ಚಿದಾನಂದಭಾರತೀಸ್ವಾಮಿಗಳವರಿಂದ ಶಾಲಿವಾಹನಶಕ 1740ನೆಯ ಈಶ್ವರ ಸಂವತ್ಸರದಲ್ಲಿ (1817ನೆಯ ಇಸವಿ) ತುರೀಯಾಶ್ರಮ ಪ್ರಾಪ್ತಿಯಾಯಿತು. ಈ ಗುರುಗಳು 62 ವರುಷಗಳ ಕಾಲ ಶೃಂಗೇರೀ ವ್ಯಾಖ್ಯಾನಸಿಂಹಾಸನಾಧಿಪತಿಗಳಾಗಿದ್ದು ಎಂಬತ್ತೆರಡನೆಯ ವಯಸ್ಸಿನಲ್ಲಿ ಬ್ರಹ್ಮಭಾವವನ್ನು ಪಡೆದರು. ಇವರ ಚರಿತ್ರವು ಅತ್ಯಾಶ್ಚರ್ಯಕರವಾದದ್ದು. ಈ ನರಸಿಂಹಭಾರತೀ ಸ್ವಾಮಿಗಳವರಿಗೆ ಸನ್ಯಾಸವಾದ ಆರನೆಯ ದಿನದಲ್ಲಿ ಇವರ ಗುರುಗಳು ವಿದೇಹ ಕೈವಲ್ಯವನ್ನು ಪಡೆದರು. ಆಶ್ರಮ ಸಂಪ್ರದಾಯಗಳನ್ನೂ ಸಂಸ್ಥಾನದ ಸಂಪ್ರದಾಯಗಳನ್ನೂ ತಿಳಿದುಕೊಳ್ಳುವುದಕ್ಕೆ ಇವರಿಗೆ ಅವಕಾಶವಿರಲಿಲ್ಲ. ಇಂಥಾ ಸಂದರ್ಭದಲ್ಲಿ ಸ್ವತಃ ಸಂಸ್ಥಾನಭಾರವನ್ನು ವಹಿಸಿ, ಯೋಗ್ಯರಾದ ಯತಿಗಳ ಮೂಲಕವಾಗಿ ಆಶ್ರಮಸಂಪ್ರದಾಯಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು, ತಮ್ಮ ಗುರುಗಳವರ ಕಾಲದಲ್ಲಿ ಅವರ ಸಮೀಪದಲ್ಲಿದ್ದು ಆಸ್ಥಾನ ಪದ್ಧತಿಗಳನ್ನು ತಿಳಿದುಕೊಂಡಿದ್ದರಿಂದ ಯಾವಯಾವ ಸಮಯದಲ್ಲಿ ಯಾವಯಾವ ರೀತಿಯಿಂದ ತಿಳಿದುಕೊಳ್ಳಬಹುದೋ ಆಯಾ ಸಮಯದಲ್ಲಿ ಆಯಾ ರೀತಿಯಿಂದ ಸಂಸ್ಥಾನದ ಪದ್ಧತಿಗಳನ್ನು ಇವರು ತಿಳಿದುಕೊಂಡದ್ದಲ್ಲದೆ ಹೊರಗಿನಿಂದ ಕೆಲವರು ಪಂಡಿತರನ್ನು ಕರೆಸಿ ಅವರಿಗೆ ಜೀವನಕ್ಕೆ ಬೇಕಾದ ಅನುಕೂಲಗಳನ್ನು ಏರ್ಪಡಿಸಿ ಅವರುಗಳನ್ನು ತಮ್ಮ ಸಮೀಪದಲ್ಲಿ ನಿಲ್ಲಿಸಿಕೊಂಡು, ಅವರ ಸಹಾಯದಿಂದ ಶಾಸ್ತ್ರಜ್ಞಾನವನ್ನು ಸಂಪಾದಿಸಿದರು. ಈ ನರಸಿಂಹಭಾರತೀ ಸ್ವಾಮಿಗಳವರು ವಿಶೇಷವಾಗಿ ತಪಸ್ಸನ್ನು ಮಾಡಿ ತಪಸ್ಸಿದ್ಧಿಯನ್ನು ಹೊಂದಿದ್ದರು. ಇವರು ಸುಮಾರು ನಾಲ್ವತ್ತು ವರ್ಷಗಳಿಗಿಂತ ಹೆಚ್ಚಾದ ಕಾಲವನ್ನು ದೇಶಸಂಚಾರದಲ್ಲಿಯೇ ಕಳೆದಂತೆ ತಿಳಿದುಬಂದಿದೆ. ಇವರಿಗೆ ಸ್ವಭಾಷೆಯಾದ ತೆಲುಗು, ದೇಶಭಾಷೆಯಾದ ಕನ್ನಡ, ದೇವಭಾಷೆಯಾದ ಸಂಸ್ಕೃತ, ಅಲ್ಲದೆ ತಮಿಳು,

ಮರಾಠಿ, ಹಿಂದೂಸ್ಥಾನಿ, ಗುಜರಾತಿ, ಇಷ್ಟು ಭಾಷೆಗಳಲ್ಲಿ ಚೆನ್ನಾಗಿ ಪರಿಚಯವಿತ್ತು. ಆಯಾ ದೇಶಗಳಲ್ಲಿಯೇ ದೀರ್ಘಕಾಲ ಸಂಚಾರಮಾಡಿದ್ದರಿಂದ ಆಯಾ ಭಾಷೆಯಲ್ಲಿರುವ ಅತಿ ಸೂಕ್ಷ್ಮವಾದ ಪ್ರಭೇದಗಳೆಲ್ಲವೂ ಇವರಿಗೆ ತಿಳಿದಿತ್ತು. ಆಯಾ ದೇಶದ ಜನರೊಡನೆ ಸಂಭಾಷಣೆ ಮಾಡುವ ಕಾಲದಲ್ಲಿ ಮಾತನಾಡತಕ್ಕ ಧೋರಣೆಯಲ್ಲಿಯಾಗಲಿ, ಸ್ವರಸಂಯೋಜನ ವಿಷಯದಲ್ಲಿಯಾಗಲಿ ಸ್ವಲ್ಪವೂ ಭೇದವಿರಲಿಲ್ಲವೆಂದು ಅನೇಕರ ಮೂಲಕ ತಿಳಿದು ಬಂದಿದೆ. ಇವರು ಆಸೇತುಹಿಮಾಚಲ ಮಧ್ಯಭಾಗಲ್ಲಿರುವ ದೇಶಗಳಲ್ಲಿ ಅನೇಕಾವರ್ತಿ ಸಂಚಾರಮಾಡಿ ಶಿಷ್ಯಜನರಿಗೆ ವರ್ಣಾಶ್ರಮಧರ್ಮಗಳನ್ನು ಚೆನ್ನಾಗಿ ಬೋಧಿಸುತ್ತ ಸನ್ಮಾರ್ಗಪ್ರಚಾರವನ್ನು ಮಾಡಿದರು. ಈ ಸ್ವಾಮಿಗಳವರ ಕಾಲದಲ್ಲಿ ಶೇಖರಿಸಲ್ಪಟ್ಟಿರುವ ದಾನಶಾಸನಗಳೇ ಮೊದಲಾದ ಹಿಂದಿನ ಕಾಗದ ಪತ್ರಗಳಿಂದ ಹಿಂದೂಸ್ಥಾನದಲ್ಲಿ ಪ್ರಸಿದ್ಧರಾದ ಪೂನಾ ಪೇಷ್ವೆಯರು, ಸಿಂಧ್ಯಾ, ಹೋಲ್ಕರ್, ಗಾಯಕವಾಡ, ಮೈಸೂರು, ಅನಂತಶಯನ ಮೊದಲಾದ ದೇಶಗಳ ಮಹಾರಾಜರುಗಳು, ಅನೇಕ ರಾಜರುಗಳು, ಜಮೀನುದಾರರುಗಳು, ಜಹಗೀರ್‌ದಾರರುಗಳು ಇವರ ವಿಷಯದಲ್ಲಿ ಬಹಳ ಭಕ್ತಿ ಶ್ರದ್ಧೆಗಳನ್ನು ವಹಿಸಿ ಅನೇಕ ಪ್ರಕಾರದಿಂದ ಈ ಗುರುಗಳನ್ನು ಆರಾಧಿಸಿರುವಂತೆಯೂ ಹೈದರಾಬಾದು ಸಂಸ್ಥಾನದ ನಿಜಾಮರವರು ಕೂಡ ವಿಶೇಷವಾಗಿ ಗೌರವಿಸಿದ್ದಂತೆಯೂ ಶ್ರೀಗಳವರ ಆಜ್ಞಾಪರಿಪಾಲನೆಯಲ್ಲಿ ಬಹಳ ಆಸಕ್ತರಾಗಿದ್ದು ವರ್ಣಾಶ್ರಮಾಚಾರಗಳ ಪರಿಪಾಲನದ ವಿಷಯದಲ್ಲಿ ವಿಶೇಷವಾಗಿ ಅನುಕೂಲರಾಗಿದ್ದಂತೆಯೂ ತಿಳಿದು ಬರುತ್ತದೆ. ಇವರಲ್ಲಿ ಶಾಪಾನುಗ್ರಹ ಶಕ್ತಿಯು ವಿಶೇಷವಾಗಿತ್ತು. ಇವರು 42 ವರ್ಷಗಳ ಕಾಲ ಕಂದಮೂಲಾಶನ ವ್ರತವನ್ನು ಮಾಡಿದರು. ಈ ವ್ರತವನ್ನು ಇವರು ತಮ್ಮ 40ನೆಯ ವರ್ಷದಲ್ಲಿ ಕೈಕೊಂಡು, ಆಹಾರದಂತೆ ನಿದ್ರೆಯನ್ನೂ ಜಯಿಸಿ, ಪ್ರತಿ ದಿನದಲ್ಲಿಯೂ ಇಪ್ಪತ್ತು ಗಂಟೆಗಳ ಕಾಲದಂತೆ ಮಂತ್ರಜಪದಿಂದಲೂ, ದೇವತಾರಾಧನದಿಂದಲೂ ತಮ್ಮ ಕಾಲವನ್ನು ಕಳೆಯುತ್ತಿದ್ದರು. ಈ ಕಷ್ಟಚರ್ಯೆಯು ಭಾರತೀಯರಿಗೆ ಒಂದು ವೇಳೆ ಆಶ್ಚರ್ಯವನ್ನುಂಟು ಮಾಡದಿದ್ದರೂ ಪಾಶ್ಚಾತ್ಯ ಜನರಿಗೆ ಸುತರಾಂ ಸಂಭಾವಿತವೆಂದು ಕೂಡ ನಂಬುವುದಕ್ಕೆ ಅವಕಾಶವಿಲ್ಲವು. ಒಂದು ಸಂದರ್ಭದಲ್ಲಿ ಈ ಸಂಗತಿಯು ಹೊರಪಟ್ಟಂತೆ ತಿಳಿದು ಬಂದಿದೆ. 1868ನೆಯ ಇಸವಿಯಲ್ಲಿ ಈ ನರಸಿಂಹಭಾರತೀ ಸ್ವಾಮಿಗಳವರು ಸಂಚಾರ ಕ್ರಮದಿಂದ ಬೆಂಗಳೂರಿಗೆ ದಯಮಾಡಿಸಿದ್ದರು. ಆ ಕಾಲದಲ್ಲಿ ಈ ಮೈಸೂರು ಸಂಸ್ಥಾನದ ರಾಜ್ಯಭಾರವು ಬ್ರಿಟಿಷ್ ಸರ್ಕಾರದವರಿಂದ ಜರುಗಿಸಲ್ಪಡುತ್ತಲಿತ್ತು. ಮಿಸ್ಟರ್ ಬೌರಿಂಗ್ ಸಾಹೇಬರು ಆಗ್ಗೆ ಚೀಫ್ ಕಮಿಷನರಾಗಿ ನಿಯಮಿಸಲ್ಪಟ್ಟಿದ್ದರು. ಶೃಂಗೇರಿ ಸ್ವಾಮಿಗಳವರ ವಿಷಯವಾಗಿ ಜನಗಳು ಹೇಳತಕ್ಕ ಆಶ್ಚರ್ಯಚರ್ಯೆಗಳನ್ನು ಕೇಳಿ ಈ ಕಮಿಷನರವರಿಗೆ ಅದ್ಭುತವೂ

ಅಪನಂಬಿಕೆಯೂ ಉಂಟಾದುವು. ನಿಜಸ್ಥಿತಿಯನ್ನು ಕಂಡು ಹಿಡಿಯುವುದರಲ್ಲಿ ಆಸಕ್ತಿಯು ಹೆಚ್ಚಿತು. ಹೀಗಿರುವಲ್ಲಿ ಒಂದು ದಿನ ರಾತ್ರಿ ಸುಮಾರು ಒಂದು ಗಂಟೆಯ ಸಮಯದಲ್ಲಿ ಏಕಾಕಿಯಾಗಿ ಗೂಢಚಾರರಂತೆ ಶ್ರೀ ಸ್ವಾಮಿಗಳವರು ಬಿಡಾರಮಾಡಿದ್ದ ಮಹಾರಾಜರವರ ಛತ್ರದ ಮುಂದುಗಡೆಯಲ್ಲಿ ಬಂದು ನಿಂತು ಬಾಗಿಲಿಗೆದುರಾಗಿ ಹಜಾರದಲ್ಲಿ ಎಳೆದುಬಿಟ್ಟಿದ್ದ ಘರದೆಯನ್ನು ಮೇಲಕ್ಕೆತ್ತುವಂತೆ ಕಾವಲುಗಾರರಿಗೆ ಹೇಳಲು ಕಾವಲುಗಾರರು ಬಂದಿರತಕ್ಕವರು ಯಾರಾಗಿರಬಹುದೆಂಬುದನ್ನು ಅರಿಯಲಾರದವರಾಗಿದ್ದರೂ ಯಾರೋ ದೊಡ್ಡ ಸರದಾರರು ಬಂದಿರುತ್ತಾರೆಂದು ತಿಳಿದು ಒಳಭಾಗದಲ್ಲಿ ಕಾದಿದ್ದ ಬ್ರಾಹ್ಮಣ ಪರಿಜನಕ್ಕೆ ತಿಳಿಸಿದರು. ಅವರು ಬಾಗಿಲಿಗೆ ಬರಲು ಸಾಹೇಬರು ಅವರನ್ನು ಕಂಡು "ಸ್ವಾಮಿಗಳವರು ಏನು ಮಾಡುತ್ತಾರೆ" ಎಂದು ಪ್ರಶ್ನೆ ಮಾಡಿದರು. ಆಗ ಆ ಪರಿಜನರು ಶ್ರೀ ಸ್ವಾಮಿಗಳವರು ಪೂಜೆಯನ್ನು ಮಾಡುತ್ತಲಿದ್ದಾರೆಂದು ಉತ್ತರ ಕೊಟ್ಟರು. ಹಾಗಾದರೆ ಅವರಲ್ಲಿ ತಿಳಿಸಬೇಕಾಗಿಲ್ಲ. ಅಡ್ಡಲಾಗಿ ತೂಗು ಹಾಕಿರುವ ಪರದೆಯನ್ನು ಮೇಲಕ್ಕೆತ್ತಿ ಹಿಡಿದಲ್ಲಿ ದೂರವಾಗಿ ಸ್ವಾಮಿಗಳವರ ದರ್ಶನವನ್ನು ಮಾಡಿಕೊಂಡು ಹೋಗುವುದಾಗಿ ಕಮಿಷನರ್ ಸಾಹೇಬರು ಹೇಳಿದರು. ಅದರಂತೆ ಪರಿಜನರು ಘರದೆಯನ್ನು ಮೇಲಕ್ಕೆತ್ತಿ ಹಿಡಿದರು. ದೇವರ ಬಲಭಾಗದ ಪೀಠದಲ್ಲಿ ಕುಳಿತು ತಲೆಯನ್ನು ಬಗ್ಗಿಸಿಕೊಂಡು ಹಸ್ತದಿಂದ ಅರ್ಚನೆ ಮಾಡುತ್ತಿದ್ದುದನ್ನು ಕಣ್ಣಿಂದ ನೋಡಿದ ಸಾಹೇಬರಿಗೆ ಅತ್ಯಾಶ್ಚರ್ಯವಾಯಿತು. ಕೂಡಲೆ ಟೋಪಿಯನ್ನು ತೆಗೆದು ನಮ್ರ ಭಾವದಿಂದ ಸ್ವಾಮಿಗಳವರಿಗೆ ಸಲಾಮನ್ನು ಮಾಡಿ ಹೊರಟು ಹೋದರು. ಅಂದಿನಿಂದ ಮಿಸ್ಟರ್ ಬೌರಿಂಗ್ ಸಾಹೇಬರಿಗೆ ಶ್ರೀ ಸ್ವಾಮಿಗಳವರ ವಿಷಯದಲ್ಲಿ ವಿಶೇಷವಾದ ಪ್ರತಿಪತ್ತಿಯಿದ್ದ ಸಂಗತಿಯನ್ನು ಮಿ|| ಬೌರಿಂಗ್ ಸಾಹೇಬರವರು ಬರೆದಿರುವ ಒಂದೆರಡು ಲೇಖನಗಳಿಂದ ತಿಳಿಯಬಹುದಾಗಿದೆ.

ಇವರ ಸಂಚಾರ ಕಾಲದಲ್ಲಿ ಗುಜರಾತ್ ದೇಶದಲ್ಲಿ ಒಂಧಾನೊಂದು ಗ್ರಾಮಕ್ಕೆ ಶ್ರೀಸ್ವಾಮಿಗಳವರು ಬರುವುದಾಗಿ ಆ ಗ್ರಾಮದ ಮಹಾಜನರಿಗೆ ಶ್ರೀಮುಖವು ಕಳುಹಿಸಲ್ಪಟ್ಟಿತು. ಆ ಗ್ರಾಮದ ಒಬ್ಬ ದೊಡ್ಡ ಗೃಹಸ್ಥನು ಬಹಳ ದ್ರವ್ಯವನ್ನು ಖರ್ಚುಮಾಡಿ ಬಹಳ ವಿಸ್ತಾರವಾಗಿ ಒಂದು ಮನೆಯನ್ನು ಕಟ್ಟಿಸಿದ್ದನು. ಆ ಮನೆಯನ್ನು ಆತನು ಪ್ರವೇಶಿಸಿದ ಕಾಲದಲ್ಲಿಯೇ ಒಂದು ಬ್ರಹ್ಮರಕ್ಷಸ್ಸು ಪ್ರವೇಶ ಮಾಡಿತ್ತಂತೆ. ಅನೇಕ ಕಾರಣಗಳಿಂದ ಯಜಮಾನನಿಗೆ ನಿಶ್ಚಿತವಾಗಿ ಆ ಬ್ರಹ್ಮರಕ್ಷಸ್ಸಿನ ಬಾಧೆಯನ್ನು ಸಹಿಸಲಾರದೆ ಆ ಹೊಸ ಮನೆಯನ್ನು ಬಿಟ್ಟು ಬೇರೆ ಮನೆಯಲ್ಲಿ ವಾಸಮಾಡಿಕೊಂಡಿದ್ದನು. ಶ್ರೀ ಸ್ವಾಮಿಗಳವರು ತಮ್ಮ ಗ್ರಾಮಕ್ಕೆ ಬರುವ ಸಂಗತಿಯನ್ನು ತಿಳಿದುಕೊಂಡ ಆ ಗೃಹಸ್ಥನು ಬಹುಮುಖದಿಂದ ಸ್ವಾಮಿಗಳವರ ಪ್ರಭಾವವನ್ನು ಕೇಳಿದವನಾಗಿದ್ದುದರಿಂದ ಅವರ ಮೂಲಕವಾಗಿ ತನ್ನ

ತೊಂದರೆಯನ್ನು ನಿವಾರಿಸಿಕೊಳ್ಳುವುದಕ್ಕೆ ಅನುಕೂಲವಾದ ಸಮಯವು ಒದಗಿತೆಂದು ತಿಳಿದು ಆ ಗ್ರಾಮದ ಮಹಾಜನಗಳ ಸಹಾಯದಿಂದ ತನ್ನ ಮನೆಗಿದ್ದ ಅಪವಾದವನ್ನು ಮರೆಮಾಚಿ ಶ್ರೀಸ್ವಾಮಿಗಳವರ ಬಿಡಾರಕ್ಕೆ ತನ್ನ ಮನೆಯನ್ನು ಸಿದ್ಧಪಡಿಸಿದ್ದನು. ಸ್ವಾಮಿಗಳ ಸವಾರಿಯು ಗ್ರಾಮಕ್ಕೆ ಬಂದು ಗ್ರಾಮಪ್ರದಕ್ಷಿಣೆ ಮೊದಲಾದದ್ದು ನಡೆದು, ಅವರ ಬಿಡಾರಕ್ಕೆಂದು ಸಿದ್ಧಪಡಿಸಿದ್ದ ಆ ನೂತನ ಗೃಹದಲ್ಲಿ ವಸತಿ ಮಾಡಲ್ಪಟ್ಟಿತು. ಶ್ರೀಸ್ವಾಮಿಗಳವರ ಪರಿಜನರಿಗಾಗಲಿ ಸ್ವಾಮಿಗಳವರಿಗೇ ಆಗಲಿ ಆ ಮನೆಯಲ್ಲಿರುವ ತೊಂದರೆಯನ್ನು ಕುರಿತು ಯಾರೊಬ್ಬರೂ ತಿಳಿಸಿರಲಿಲ್ಲ. ಆ ದಿನ ರಾತ್ರಿ ಮಹಾನಿಶೆಯಲ್ಲಿ ಶ್ರೀಸ್ವಾಮಿಗಳವರು ಏಕಾಂತವಾಗಿ ಪೂಜೆಯನ್ನು ಮಾಡುತ್ತಿರಲು ಅವರ ಎದುರಿನಲ್ಲಿ ಒಂದು ಸ್ತಂಭವನ್ನು ಒರಗಿಕೊಂಡು ನಿಂತಿದ್ದ ಒಂದು ಪುರುಷಾಕೃತಿಯು ಸ್ವಾಮಿಗಳ ದೃಷ್ಟಿಗೆ ಗೋಚರವಾಯಿತು. ನೋಡಿದ ಕೂಡಲೇ ಶ್ರೀಮಠದಲ್ಲಿರುತ್ತಿದ್ದ ಒಬ್ಬ ವಿದ್ವಾಂಸರ ಬಟ್ಟೆಗಳನ್ನು ಧರಿಸಿಕೊಂಡು ಒಂದು ಶಾಲನ್ನು ಹೆಗಲಮೇಲೆ ಹಾಕಿಕೊಂಡು ನಿಂತಿದ್ದ ವ್ಯಕ್ತಿಯನ್ನು ಆ ಶಾಸ್ತ್ರಿಗಳೆಂದು ತಿಳಿದು ಅವರನ್ನು ಕುಳಿತುಕೊಳ್ಳುವಂತೆ ಸ್ವಾಮಿಗಳವರು ಕಣ್ಣಿನಿಂದ ಸಂಜ್ಞೆ ಮಾಡಿದರು. ಒಂದೆರಡು ಸಾರಿ ಸ್ವಾಮಿಗಳು ಸಂಜ್ಞೆ ಮಾಡಿದರೂ ಆ ವ್ಯಕ್ತಿಯು ಕುಳಿತಿರದೇ ಇದ್ದುದನ್ನು ನೋಡಿದ ಕ್ಷಣದಲ್ಲಿ ಶ್ರೀಗಳವರಿಗೆ ಸಂದೇಹವುಂಟಾಯಿತು. ಅನಂತರ ಎದುರಿಗೆ ನಿಂತಿದ್ದ ಆ ಪುರುಷಾಕೃತಿಯನ್ನು ಕಾಲಿನಿಂದ ಶಿರಸ್ಸಿನವರೆಗೂ ಒಂದಾವೃತ್ತಿ ನೋಡಿದೊಡನೆಯೇ ಸ್ವಾಮಿಗಳವರ ಮನಸ್ಸಿಗೆ ವಿಷಯವು ಗೋಚರವಾಯಿತು. ತಕ್ಷಣವೇ ತಮ್ಮ ದಕ್ಷಿಣ ಹಸ್ತದಲ್ಲಿ ಜಲವನ್ನು ತೆಗೆದುಕೊಂಡು ನಾರಸಿಂಹ ಮಂತ್ರದಿಂದ ಅಭಿಮಂತ್ರಿಸಿ ಆ ಜಲವನ್ನು ನಿಂತಿದ್ದ ವ್ಯಕ್ತಿಯ ಮೇಲೆ ಪ್ರೋಕ್ಷಿಸಲಾಗಿ ಆ ಮಂತ್ರದ ಪ್ರಭಾವದಿಂದ ಉಂಟಾದ ಜ್ವಾಲೆಯನ್ನು ಸಹಿಸಲಾರದೆ ಉರಿ ಉರಿ ಎಂದು ಗಟ್ಟಿಯಾಗಿ ಶಬ್ದ ಮಾಡಿಕೊಂಡು ಓಡಿಹೋಗಿ ಆ ಮನೆಯ ಹಿಂಭಾಗದಲ್ಲಿದ್ದ ಬಾವಿಯಲ್ಲಿ ಹಾರಿಬಿದ್ದಿತು. ಈ ಶಬ್ದವನ್ನು ಕೇಳಿದ ಕೂಡಲೇ ಮಲಗಿದ್ದ ಜನರೆಲ್ಲಾ ಗಾಬರಿಯಿಂದ ಎದ್ದು ನೋಡಲು, ಅಲ್ಲಿ ಯಾರೂ ಕಣ್ಣಿಗೆ ಕಾಣಲಿಲ್ಲ. ಬಟ್ಟೆಗಳು ಮಾತ್ರ ನೀರಿನ ಮೇಲೆ ತೇಲುತ್ತಿದ್ದುದನ್ನು ತೆಗೆಸಿ ನೋಡಿದರೆ ಆ ಬಟ್ಟೆಗಳು ಮಠದಲ್ಲಿದ್ದ ವಿದ್ವಾಂಸರುಗಳಲ್ಲಿ ಒಬ್ಬರದಾಗಿತ್ತು. ಈ ಆಶ್ಚರ್ಯವನ್ನು ಮಠದ ಜನರು ಕಂಡು ಗದ್ದಲವಾದ ಕೂಡಲೇ ಮನೆಯ ಯಜಮಾನನೂ ಊರಿನ ಜನಗಳೂ ಗಾಬರಿಪಟ್ಟು ಬಂದು ನೋಡಿ ಬ್ರಹ್ಮರಕ್ಷಸ್ಸಿನಿಂದ ಉಂಟಾಗಿದ್ದ ತೊಂದರೆಯನ್ನು ತಿಳಿಸಿಕೊಂಡರು. ಸ್ವಾಮಿಗಳವರು ಅತಿ ಕರುಣೆಯಿಂದ ಲಾಲಿಸಿ ಇನ್ನು ನಿಮ್ಮ ತೊಂದರೆ ಪರಿಹಾರವಾಯಿತು. ಹೆದರಬೇಕಾಗಿಲ್ಲವೆಂತಲೂ ನಿರ್ಭಯದಿಂದ ಇನ್ನು ಮುಂದೆ ಮನೆಯಲ್ಲಿ ವಾಸಮಾಡಬಹುದೆಂತಲೂ ಅನುಗ್ರಹ ಮಾಡಲು ಎಲ್ಲರೂ ಆಶ್ಚರ್ಯ ಸ್ತಂಭಿತರಾದರು.

ಈ ಭಾಗವನ್ನು ಶ್ರೀಸ್ವಾಮಿಗಳವರು ತಮ್ಮ ಶಿಷ್ಯರಾದ ಈ ಗ್ರಂಥಕ್ಕೆ ವಿಷಯರಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರಿಗೆ ಸ್ವತಃ ಹೇಳಿದ್ದರು. ಅವರಿಂದ ಈ ಗ್ರಂಥ ಲೇಖಕನು ಇದನ್ನು ಕೇಳಿ ತಿಳಿದುಕೊಂಡಿದ್ದನು. ಮತ್ತು ಶ್ರೀ ಸ್ವಾಮಿಗಳವರ ಮುಖವಚನದಿಂದ ಕೇಳಿ ತಿಳಿದುಕೊಂಡಿದ್ದ ಇವರ ಮುಖ್ಯ ಶಿಷ್ಯರಲ್ಲಿ ಒಬ್ಬರಾದ ಜಡ್ಜಿ ರಾಮಚಂದ್ರಯ್ಯರವರ ಹೇಳಿಕೆಯೂ ಈ ವಿಷಯದಲ್ಲಿ ಒಂದು ಪ್ರಮಾಣವಾಗಿರುವುದು. ಈ ರೀತಿಯಿಂದ ಶ್ರೀ ನೃಸಿಂಹಭಾರತೀ ಸ್ವಾಮಿಗಳವರ ನಿಗ್ರಹಾನುಗ್ರಹ ಸಾಮರ್ಥ್ಯವು ಜಗದ್ವಿಖ್ಯಾತವಾಗಿತ್ತು. ಈ ನೃಸಿಂಹ ಭಾರತೀ ಸ್ವಾಮಿಗಳವರಲ್ಲಿ ತಾವು ಸಂಕಲ್ಪಿಸಿದ ಕಾರ್ಯವು ನಡೆದೇ ತೀರಬೇಕೆಂಬ ಭಾವವು ಸಹಜವಾಗಿತ್ತು. ಇದರಿಂದ ತಮಗೆ ಎಷ್ಟು ತೊಂದರೆಗಳುಂಟಾಗಲಿ ಸಂಸ್ಥಾನಕ್ಕೆ ಎಷ್ಟು ನಷ್ಟವಾಗಲಿ ಆ ಭಾಗವನ್ನು ಯಾವ ಸಂದರ್ಭದಲ್ಲಿಯೂ ಗಮನಕ್ಕೆ ತರುತ್ತಿರಲಿಲ್ಲ. ಇದನ್ನು ಪ್ರಾಯಃ ಉತ್ತಮ ಗುಣವೆಂದು ಕೆಲವರು ಅಭಿಪ್ರಾಯಪಡಲಾರರು. ಮಹನೀಯರಿಗೆ ಇದು ಉತ್ತಮವಾದ ಗುಣವೆಂತಲೇ ಹೇಳಬಹುದು. ಈ ಗುಣವು ಅವರ ಮನೋನಿಶ್ಚಯವನ್ನು ತೋರಿಸತಕ್ಕದ್ದು. ಅಂಥಾ ಮನೋದಾರ್ಢ್ಯವಿಲ್ಲದವರನ್ನೇ ಸಾಮಾನ್ಯರೆಂದು ಲೋಕದಲ್ಲಿ ವ್ಯವಹರಿಸಬೇಕು. ಯಾವ ಸಂದರ್ಭದಲ್ಲಿಯೂ ಎಷ್ಟು ಕಷ್ಟವಾದರೂ ತಾವು ಹಿಡಿದಿದ್ದನ್ನು ಬಿಡದೆ ಸಾಧಿಸತಕ್ಕ ಮನೋದಾರ್ಢ್ಯವಿರುವವರನ್ನೇ ಮಹನೀಯರೆಂದು ಹೇಳತಕ್ಕದ್ದು. ಆ ಸ್ವಭಾವವು ಈ ಉತ್ತಮ ಪುರುಷರಲ್ಲಿ ಇಲ್ಲದಿದ್ದರೆ ಇವರು 40 ವರ್ಷಕ್ಕೆ ಮೇಲ್ಪಟ್ಟ ಕಾಲ ಕಂದಮೂಲಾಶನ ವ್ರತದಲ್ಲಿರುವುದು ಸಾಧ್ಯವಾಗುತ್ತಲಿತ್ತೋ? ಇವರ ಜೀವಿತ ಕಾಲದ ಅರ್ಧಭಾಗಕ್ಕಿಂತ ಹೆಚ್ಚಾದ ಕಾಲದಲ್ಲಿ ದೇಶ ಸಂಚಾರ ಮಾಡುವುದಕ್ಕೂ ಅದರಿಂದುಂಟಾದ ಶ್ರಮವನ್ನು ಸಹಿಸುವುದಕ್ಕೂ ಅವಕಾಶವಿರುತ್ತಲಿತ್ತೋ? ಈ ಗುರುಗಳಿಗೆ ಆಶ್ರಮವಾದ 5-6 ದಿನಗಳಲ್ಲಿಯೇ ತಮ್ಮ ಗುರುಗಳು ಸಿದ್ಧಿ ಹೊಂದಿದ ಮಹಾಕಷ್ಟಕಾಲದಲ್ಲಿ ಧೈರ್ಯವನ್ನವಲಂಬಿಸಿ, ಸಂಸ್ಥಾನಭಾರವನ್ನು ವಹಿಸಿ, ದುಷ್ಟ ಪರಿವಾರವನ್ನು ನಿಗ್ರಹಿಸಿ, ಸಂಸ್ಥಾನವನ್ನು ಉತ್ತಮಸ್ಥಿತಿಗೆ ತರಲು ಹೇಗೆ ಸಾಧ್ಯವಾಗುತ್ತಲಿತ್ತು? ಆದ್ದರಿಂದಲೇ ಈ ಗುಣವನ್ನು ಬಹಳವಾಗಿ ಅನುಮೋದಿಸಿ ಮುಮ್ಮಡಿ ಶ್ರೀ ಕೃಷ್ಣರಾಜ ಪ್ರಭುಗಳವರು ತಾವು ರಚಿಸಿರುವ ಈ ನೃಸಿಂಹ ಭಾರತೀ ಸ್ವಾಮಿಗಳವರ ಅಷ್ಟೋತ್ತರ ಶತನಾಮಾವಳಿಯಲ್ಲಿ ''ಪ್ರತಿಜ್ಞಾತಾರ್ಥ ಸಾಧಕಃ'' ಎಂಬ ಅನ್ವರ್ಥವಾದ ಒಂದು ವಿಶೇಷಣವನ್ನು ಶ್ರೀ ಸ್ವಾಮಿಗಳವರಿಗೆ ಅಲಂಕಾರಪ್ರಾಯವಾಗಿ ಹೇಳಿರುವರು. ಮೇಲೆ ಹೇಳಿದಂತೆ ಈ ನೃಸಿಂಹಭಾರತೀ ಸ್ವಾಮಿಗಳವರಲ್ಲಿ ಮನೋದಾರ್ಢ್ಯವು ಹೆಚ್ಚಾಗಿದ್ದುದರಿಂದಲೇ ಪ್ರಪಂಚದ ವಿಷಯದಲ್ಲಿ ಉದಾಸೀನ ಭಾವವೂ ಹೆಚ್ಚಾದ ವೈರಾಗ್ಯವೂ ಇವರಲ್ಲಿ ಸ್ಥಿರವಾಗಿ ನೆಲೆಗೊಂಡಿದ್ದುವೆಂದು

ಧಾರಾಳವಾಗಿ ಹೇಳಬಹುದು. ಒಂದು ಸಮಯದಲ್ಲಿ ನಮ್ಮ ಮೈಸೂರು ಕೃಷ್ಣರಾಜ ಪ್ರಭುಗಳವರಿಗೆ ತಮ್ಮ ವಿಷಯದಲ್ಲಿ ಆದರವು ಸ್ವಲ್ಪ ಕಡಿಮೆಯಾದಂತೆ ತೋರಿಬಂತು. ಆ ಸಮಯದಲ್ಲಿ ಮೈಸೂರು ದೇಶವನ್ನು ಬಿಟ್ಟು ಉತ್ತರದೇಶ ಸಂಚಾರಕ್ಕೆ ಹೊರಟು ಅನೇಕ ವರ್ಷಗಳಾದರೂ ಸ್ವಾಮಿಗಳವರು ತಾವು ಎಲ್ಲಿ ಸಂಚಾರ ಮಾಡುತ್ತ ಇರುತ್ತಾರೆಂಬ ಸಂಗತಿಯನ್ನೇ ಪ್ರಭುಗಳಿಗೆ ತಿಳಿಯಪಡಿಸಲಿಲ್ಲ. ಆಗ ಸ್ವಾಮಿಗಳವರು ಅತೃಪ್ತಿಯಿಂದ ತಮ್ಮ ದೇಶವನ್ನು ಬಿಟ್ಟು ದೂರದೇಶಕ್ಕೆ ಹೊರಟುಹೋದರೆಂಬ ಸಂಗತಿಯು ಪ್ರಭುಗಳಿಗೆ ಗೋಚರವಾಯಿತು. ಅದಕ್ಕೆ ಅನುಸಾರವಾಗಿ ಸ್ವಾಮಿಗಳವರಿಂದ ತಮಗೆ ಯಾವ ವರ್ತಮಾನವೂ ಬಾರದೆ ಇದ್ದುದು ಮನಸ್ಸಿಗೆ ತುಂಬಾ ವ್ಯಾಕುಲತೆಯನ್ನು ಹೆಚ್ಚಿಸಿತು. ಈ ಸಂದರ್ಭದಲ್ಲಿ ಪ್ರಭುಗಳು ತಮ್ಮ ಕಡೆಯಿಂದ ಜನರನ್ನು ಕಳುಹಿಸಿ ಸ್ವಾಮಿಗಳವರಿರುವ ಸ್ಥಳವನ್ನೂ ಅವರ ಕ್ಷೇಮಲಾಭಗಳನ್ನೂ ತಿಳಿದು ಶ್ರೀ ಸ್ವಾಮಿಗಳವರಿಗೆ ಹಿಂತಿರುಗಿ ಈ ದೇಶಕ್ಕೆ ಬಂದು ತಮಗೆ ದರ್ಶನವನ್ನು ಕೊಟ್ಟು ಕೃತಾರ್ಥರನ್ನಾಗಿ ಮಾಡಬೇಕೆಂದು ವಿಜ್ಞಾಪನ ಪತ್ರಿಕೆಗಳ ಮೂಲಕ ತಿಳಿಸಿಕೊಂಡರು. ಮತ್ತು ಅವರ ಪ್ರಯಾಣದ ಖರ್ಚಿಗಾಗಿ ಮೈಸೂರಿನಲ್ಲಿದ್ದ ಸಾಹುಕಾರ್ ದಾಮೋದರದಾಸ್ ಎಂಬುವರ ಮೂಲಕ ಮೂವತ್ತು ಸಾವಿರ ರೂಪಾಯಿಗಳ ಹುಂಡಿಯನ್ನು ಕೂಡ ಮಾಡಿಸಿ ಕಳುಹಿಸಿಕೊಟ್ಟರು. ಶ್ರೀಕೃಷ್ಣರಾಜ ಪ್ರಭುಗಳವರಿಂದ ಅನುಸ್ಯೂತವಾಗಿ ಒಂಬತ್ತು ಬಿನ್ನವತ್ತಳೆಗಳು ಶ್ರೀ ಸ್ವಾಮಿಗಳವರಿಗೆ ಕಳುಹಿಸಲ್ಪಟ್ಟವು. ಅದುವರೆಗೆ ಸ್ವಾಮಿಗಳವರು ಒಂದು ಉತ್ತರ ಶ್ರೀಮುಖವನ್ನಾದರೂ ಕಳುಹಲಿಲ್ಲ. ಮೇಲೆ ಮೇಲೆ ಮಹಾರಾಜರಿಂದ ಬರತೊಡಗಿದ ವಿಜ್ಞಾಪನ ಪತ್ರಗಳಿಂದ ಆ ಪ್ರಭುಗಳಿಗೆ ತಮ್ಮ ವಿಷಯದಲ್ಲಿರತಕ್ಕ ಭಕ್ತಿಗೌರವಗಳನ್ನು ತಿಳಿದು ಅವಕ್ಕೆ ವಶವರ್ತಿಗಳಾಗಿ ಬಹುದೂರದಲ್ಲಿ ಸಂಚರಿಸುತ್ತಲಿದ್ದ ಸ್ವಾಮಿಗಳವರು ಏಕಾಏಕೀ ಪ್ರಯಾಣ ಮಾಡಿ ಮೈಸೂರಿಗೆ ಬಂದು ತಮ್ಮ ಪರಮಭಕ್ತರಾದ ಶ್ರೀಕೃಷ್ಣರಾಜ ಪ್ರಭುಗಳವರಿಗೆ ದರ್ಶನವನ್ನು ಕೊಟ್ಟು ಅವರಿಂದ ವಿಶೇಷವಾಗಿ ಸತ್ಕರಿಸಲ್ಪಟ್ಟು ಪ್ರಭುಗಳವರನ್ನೂ ಈ ದೇಶದಲ್ಲಿದ್ದ ಶಿಷ್ಯ ಜನರನ್ನೂ ಸಂತೋಷಪಡಿಸಿದರು. ಈ ಸಂಗತಿಯು ಶೃಂಗೇರೀ ಸಂಸ್ಥಾನದಲ್ಲಿರುವ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದೂರವರ ವಿಜ್ಞಾಪನ ಪತ್ರಿಕೆಗಳಿಂದ ಸ್ಪಷ್ಟ ಪಟ್ಟಿದೆ.

ಈ ನರಸಿಂಹಭಾರತೀ ಸ್ವಾಮಿಗಳವರ ಆಜ್ಞಾಶಕ್ತಿಯು ಜನಗಳಲ್ಲಿ ಅಪ್ರತಿಹತವಾಗಿ ನಡೆಯುತ್ತಲಿತ್ತು. ಇವರು ಶಾ|| ಶಕ 1795ನೇ ಆಂಗೀರಸ ಸಂವತ್ಸರದಲ್ಲಿ (1872ನೆಯ ಇಸವಿ) ದಕ್ಷಿಣ ದೇಶದಲ್ಲಿ ಪ್ರಸಿದ್ಧವಾಗಿರುವ ಹಾಲಾಸ್ಯ ಕ್ಷೇತ್ರಕ್ಕೆ (ಮಧುರೆ) ದಯಮಾಡಿಸಿದ್ದರು. ಶೃಂಗೇರೀ ಗುರುಗಳಿಗೆ ಮಾತ್ರ ಪೂರ್ವದಿಂದಲೂ ಏರ್ಪಟ್ಟಿರತಕ್ಕ ಸಂಪ್ರದಾಯವನ್ನನುಸರಿಸಿ ಮೀನಾಕ್ಷೀ ಸುಂದರೇಶ್ವರರ ದೇವಸ್ಥಾನದ ಒಂದು ಭಾಗವಾದ

ಕಲ್ಯಾಣ ಮಂಟಪದಲ್ಲಿ ಶ್ರೀ ಸ್ವಾಮಿಗಳವರು ಬಿಡಾರ ಮಾಡಿದ್ದರು. ಇವರು ದೇವರ ದರ್ಶನಕ್ಕೆ ಹೋದ ಕಾಲದಲ್ಲಿ ಹಿಂದಿನ ಪದ್ಧತಿಯಂತೆ ಗರ್ಭಗೃಹಕ್ಕೆ ದಯಮಾಡಿಸಿ ತಮ್ಮ ಹಸ್ತದಿಂದಲೇ ಮೀನಾಕ್ಷಿ ಅಮ್ಮನವರಿಗೆ ಅರ್ಚನೆ ಮಾಡಲು ಪ್ರಾರಂಭಿಸಿದರು. ಆ ಕಾಲದಲ್ಲಿ ಅಲ್ಲಿನ ಅರ್ಚಕರುಗಳು ಗುಂಪುಕೂಡಿಕೊಂಡು ಶ್ರೀ ಸ್ವಾಮಿಗಳವರು ಸ್ವಂತವಾಗಿ ದೇವರಿಗೆ ಅರ್ಚನೆಯನ್ನು ಮಾಡಕೂಡದೆಂದು ಆಕ್ಷೇಪಿಸಿದರು. ಶ್ರೀ ಸ್ವಾಮಿಗಳವರಿಗೆ ಅರ್ಚಕರ ದುರಾಕ್ಷೇಪಣೆಯಿಂದ ಮನಸ್ಸಿಗೆ ಸ್ವಲ್ಪ ಅಸಮಾಧಾನವುಂಟಾಯಿತು. ಕೂಡಲೇ ಎರಡು ತೆಂಗಿನಕಾಯಿಗಳಲ್ಲಿ ಅಮ್ಮನವರ ಶಕ್ತಿಯನ್ನು ಆಕರ್ಷಿಸಿಕೊಂಡು ಹೊರಗೆ ಬಂದು ಅಲ್ಲಿ ಕಾದುಕೊಂಡಿದ್ದ ಅನೇಕ ಸಹಸ್ರ ಜನ ಶಿಷ್ಯರನ್ನು ಕುರಿತು ಮೀನಾಕ್ಷಿ ಅಮ್ಮನವರು ತಮ್ಮ ಸಂಗಡವೇ ಬಂದಿರಲು ಅನುಗ್ರಹ ಮಾಡಿರುವರೆಂತಲೂ ತಾವು ಎರಡನೆಯ ಅಪ್ಪಣೆ ಕೊಡುವ ಪರ್ಯಂತ ತಮ್ಮ ಶಿಷ್ಯರು ಯಾರೊಬ್ಬರೂ ಈ ದೇವಸ್ಥಾನದ ಅರ್ಚಕರ ಮೂಲಕ ದೇವರಿಗೆ ಫಲಸಮರ್ಪಣೆಯನ್ನು ಮಾಡಿಸಿ ಈ ದೇವಸ್ಥಾನದಲ್ಲಿ ಪ್ರಸಾದಗಳನ್ನು ಸ್ವೀಕರಿಸಬಾರದೆಂತಲೂ ಅಪ್ಪಣೆ ಮಾಡಿ ತಮ್ಮ ವಾಸಸ್ಥಾನಕ್ಕೆ ದಯಮಾಡಿಸಿದರು. ತಾವು ದೇವಸ್ಥಾನದಿಂದ ಮೀನಾಕ್ಷಿ ಅಮ್ಮನವರ ಕಲಾಕರ್ಷಣ ಮಾಡಿ ತಂದಿದ್ದ ತೆಂಗಿನ ಕಾಯಿಗಳನ್ನು ಮಠದ ದೇವತಾ ಸನ್ನಿಧಿಯಲ್ಲಿಟ್ಟು ಬಹಳ ವೈಭವದಿಂದಲೂ ನಿಯಮದಿಂದಲೂ ಪೂಜಾ ನಿವೇದನಗಳನ್ನು ಮಾಡಿ ಎಲ್ಲಾ ಜನಗಳಿಗೂ ಮನದಲ್ಲಿಯೇ ಪ್ರಸಾದವನ್ನು ಅನುಗ್ರಹಿಸಿದರು. ಅಂದಿನಿಂದ ಮಧುರಾಪಟ್ಟಣದಲ್ಲಿದ್ದ ಎಲ್ಲಾ ಜನರೂ ದೇವಸ್ಥಾನಕ್ಕೆ ಹೋಗಿ ಬಲಿಪೀಠದ ಸಮೀಪದಲ್ಲಿ ನಿಂತು ಸ್ವತಃ ತೆಂಗಿನಕಾಯಿಗಳನ್ನು ಒಡೆದು ಅಲ್ಲಿಯೇ ದೇವರಿಗೆ ಸಮರ್ಪಣೆ ಮಾಡಿ ಕರ್ಪೂರವನ್ನು ಹಚ್ಚಿಟ್ಟು ದೂರವಾಗಿ ನಮಸ್ಕಾರ ಮಾಡಿ ಬರುವುದಕ್ಕೆ ಪ್ರಾರಂಭಿಸಿದರು. ಈ ರೀತಿಯಲ್ಲಿ ಗುರುಗಳವರ ಅಪ್ರತಿಹತವಾದ ಆಜ್ಞೆಯನ್ನು ಅನುಷ್ಠಾನಕ್ಕೆ ತರತಕ್ಕ ವಿಷಯದಲ್ಲಿ ಆಗ ಮಧುರೆಯಲ್ಲಿ ಪ್ರಸಿದ್ಧರಾಗಿದ್ದು ಈಚೆಗೆ ಮದರಾಸ್ ಹೈಕೋರ್ಟಿನಲ್ಲಿ ವಕೀಲರಾಗಿಯೂ ಹೈಕೋರ್ಟು ಜಡ್ಜಿಗಳಾಗಿಯೂ ವಿಶೇಷವಾದ ಪ್ರಖ್ಯಾತಿಯನ್ನು ಪಡೆದು ಈಗ ವ್ಯವಹಾರ ಮಾರ್ಗದಲ್ಲಿ ಲೋಕ ಹಿತವನ್ನು ಕುರಿತು ಪ್ರಯತ್ನ ಮಾಡುತ್ತಲಿರುವ ಡಾಕ್ಟರ್ ಸುಬ್ರಹ್ಮಣ್ಯಯ್ಯರ್‌ರವರು (ಮಣಿ ಅಯ್ಯರ್) ಮೊದಲನೆಯವರಾಗಿದ್ದರು.

ಶ್ರೀ ಸ್ವಾಮಿಗಳವರು ಮಹಾತಪಸ್ವಿಗಳು, ಪರಮಶುದ್ಧ ಚಾರಿತ್ರವುಳ್ಳವರು. ಇಂತಹ ಮಹನೀಯರಿಗೆ ಅಪರಾಧವನ್ನು ಮಾಡಿದ ಮಧುರಾ ದೇವಸ್ಥಾನದ ಅರ್ಚಕರಲ್ಲಿ ಅನೇಕರಿಗೆ "ಕೃತ್ವಾ ಸತಾಂ ಹಿ ಸಂತಾಪಂ ಶಾಪಂ ದೇಹೀತಿ ನೋ ವದೇತ್" ಎಂಬಂತೆ ಶ್ರೀ ಸ್ವಾಮಿಗಳವರ ಅತೃಪ್ತಿಯೇ ಶಾಪವಾಗಿ ಪರಿಣಮಿಸಿ ಅದರಿಂದ ಅನೇಕ ವಿಧವಾದ

ಅನರ್ಥಗಳುಂಟಾದವು. ವರಮಾನವಿಲ್ಲದೆ ಜೀವನಕ್ಕೆ ಬಹಳ ತೊಂದರೆಯೂ ಒದಗಿತು. ಇದರ ಮೇಲೆ ತಮ್ಮ ಅಪರಾಧವು ತಮಗೆ ಚೆನ್ನಾಗಿ ಗೋಚರವಾಯಿತು. ಅನಂತರ ಮಧುರೆಯಲ್ಲಿ ಪ್ರಮುಖರಾಗಿದ್ದ ಡಾಕ್ಟರ್ ಸುಬ್ರಹ್ಮಣ್ಯಯ್ಯರವರು ಇವರ ಚಿಕ್ಕ ತಂದೆ ಶಂಕರಯ್ಯರು ಮೊದಲಾದವರ ಆಶ್ರಯ ಮಾಡಿ ಅವರ ಸಹಾಯದೊಡನೆ ಶ್ರೀ ಸ್ವಾಮಿಗಳವರು ಸಂಚರಿಸುತ್ತಿದ್ದಲ್ಲಿಗೆ ಹೋಗಿ ವಿಧೇಯತೆಯಿಂದ ಬಹಳ ವಿಧವಾಗಿ ಸ್ವತಃ ಶ್ರೀ ಸ್ವಾಮಿಗಳವರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಂಡು ಮಧುರಾಪಟ್ಟಣದಲ್ಲಿ ಪ್ರಮುಖರಾದ ಶ್ರೀಸ್ವಾಮಿಗಳವರ ಶಿಷ್ಯರಿಂದಲೂ ಶ್ರೀಗಳವರಿಗೆ ವಿಜ್ಞಾಪನೆ ಮಾಡಿಸಿ ಅವರ ಪ್ರಸಾದವನ್ನು ಹೊಂದಿ ಶ್ರೀಗಳವರನ್ನು ಮತ್ತೆ ಮಧುರೆಗೆ ಕರೆದುಕೊಂಡು ಬಂದರು. ಭಕ್ತಪರಾಧೀನರಾದ ಶ್ರೀಸ್ವಾಮಿಗಳವರು ಮಧುರೆಗೆ ದಯಮಾಡಿಸಿ ಮೀನಾಕ್ಷೀ ಸುಂದರೇಶ್ವರರಲ್ಲಿ ವಿಶೇಷವಾಗಿ ಪೂಜಾರಾಧನೆಗಳನ್ನು ನಡೆಸಿ ಅತ್ಯಂತ ಸಂತೋಷಚಿತ್ತರಾಗಿ ತಾವು ಮೊದಲು ಮಾಡಿದ್ದ ಅಪ್ಪಣೆಯನ್ನು ತಕ್ಷಣವೇ ಅನುಷ್ಠಾನಕ್ಕೆ ತಂದು ಅವಿವೇಕಿಗಳಿಗೆ ಬುದ್ಧಿಯನ್ನು ಕಲಿಸಿದ ಶಿಷ್ಯ ಜನಗಳಿಗೆ ಪೂರ್ಣಾನುಗ್ರಹ ಮಾಡಿ ಇಂದಿನಿಂದ ಯಥಾಪೂರ್ವವಾಗಿ ಎಲ್ಲಾ ಜನರೂ ಅರ್ಚಕರ ಮೂಲಕವಾಗಿಯೇ ದೇವರಿಗೆ ಫಲಸಮರ್ಪಣೆ ಅರ್ಚನೆ ಮೊದಲಾದವುಗಳನ್ನು ನಡೆಸಿ ಅವರಿಂದ ಪ್ರಸಾದವನ್ನು ಸ್ವೀಕರಿಸತಕ್ಕದ್ದೆಂದು ಆಜ್ಞೆಯನ್ನು ಮಾಡಿದರು. ಈ ಸ್ವಾಮಿಗಳವರು ಯಾವ ದಿನ ಮೀನಾಕ್ಷಿ ಸುಂದರೇಶ್ವರರುಗಳ ಶಕ್ತಿಯನ್ನು ತೆಂಗಿನಕಾಯಿಗಳಲ್ಲಿ ಆಕರ್ಷಿಸಿಕೊಂಡು ಬಂದು ತಮ್ಮಲಿಟ್ಟು ಪೂಜೆ ನಡೆಸಲು ಪ್ರಾರಂಭಿಸಿದರೋ ಅಂದು ಮೊದಲು ಇಂದಿನವರೆಗೂ ಅವಿಚ್ಛಿನ್ನವಾಗಿ ಶೃಂಗೇರಿ ಮಠದಲ್ಲಿ ಆ ದೇವರುಗಳ ಉದ್ದೇಶದಿಂದ ಮಹಾನಿವೇದನವು ಪ್ರತಿದಿನವೂ ಶ್ರೀ ಚಂದ್ರಮೌಳೀಶ್ವರದೇವರ ಪೂಜಾಕಾಲದಲ್ಲಿ ನಡೆದುಬರುತ್ತಲಿದೆ.

ಈ ನರಸಿಂಹಭಾರತೀ ಸ್ವಾಮಿಗಳವರು ಶಾ|| ಶಕ 1760ನೆಯ ವಿಳಂಬಿ ಸಂವತ್ಸರದಲ್ಲಿ 1838ನೆಯ ಇಸವಿ ಮೊದಲನೆಯ ಸಾರಿ ರಾಮೇಶ್ವರ ಯಾತ್ರಾರ್ಥವಾಗಿ ದಯ ಮಾಡಿಸಿದರು. ಆ ಕಾಲದಲ್ಲಿ ರಾಮೇಶ್ವರ ಕ್ಷೇತ್ರದಲ್ಲಿದ್ದ ಆರ್ಯಬ್ರಾಹ್ಮಣರೆಂಬ ಒಂದು ಪ್ರಭೇದದ ಜನರಿಗೂ ಇತರ ಬ್ರಾಹ್ಮಣ ಸಮೂಹದವರಿಗೂ ಭೋಜನ ಪ್ರತಿಭೋಜನ ಗಳಾಗಲಿ ಇತರ ವಿಧವಾದ ಸವ್ಯವಹಾರಗಳಾಗಲಿ ಇರಲಿಲ್ಲ. ಆ ಜನರುಗಳು ಆ ಕ್ಷೇತ್ರಕ್ಕೆ ಬಂದ ಬ್ರಾಹ್ಮಣೇತರ ಜನರಿಗೆ ಸ್ವಲ್ಪ ಮಟ್ಟಿಗೆ ಪೌರೋಹಿತ್ಯವನ್ನು ಮಾಡಿಸುತ್ತಲಿದ್ದರು. ಆ ಕ್ಷೇತ್ರದ ದೇವಸ್ಥಾನದೊಳಗೆ ದೇವರಿಗೆ ಉತ್ತರ ಭಾಗದಲ್ಲಿ ಕೋಟಿತೀರ್ಥವೆಂಬ ಹೆಸರಿನಿಂದ ಒಂದು ತೀರ್ಥವಿದೆ. ಯಾತ್ರಾರ್ಥಿಗಳಾಗಿ ಹೋಗತಕ್ಕವರೆಲ್ಲರೂ ಎಲ್ಲಾ ತೀರ್ಥಗಳಲ್ಲಿಯೂ ಸ್ನಾನ ಮಾಡಿದ ಬಳಿಕ ಕೋಟಿತೀರ್ಥದಲ್ಲಿ ಸ್ನಾನ ಮಾಡಿ ಆ ತೀರ್ಥವನ್ನು ತಮ್ಮ ತಮ್ಮ

ಊರುಗಳಿಗೆ ತಂದು ಕೋಟಿತೀರ್ಥ ಸಂತರ್ಪಣೆಯನ್ನು ಮಾಡುವುದು ವಾಡಿಕೆಯಾಗಿತ್ತು. ಈ ವಾಡಿಕೆಯನ್ನು ಈಗಲೂ ಕೆಲವರು ಆಚರಿಸುತ್ತಾರೆ. ಈ ಕೋಟಿತೀರ್ಥಕ್ಕೆ ಮಾತ್ರ ಅಲ್ಲಿನ ಆರ್ಯ ಬ್ರಾಹ್ಮಣರು ಒಂದು ಬಾಗಿಲನ್ನು ಮಾಡಿಸಿ ಆ ಬಾಗಿಲಿಗೆ ಬೀಗವನ್ನು ಹಾಕಿಕೊಂಡು ಆ ತೀರ್ಥವನ್ನು ತಮ್ಮ ಅಧೀನವಾಗಿ ಮಾಡಿಕೊಂಡು ಬಂದ ಯಾತ್ರಾರ್ಥಿಗಳಿಂದ ಒಂದು ಕೊಡದ ತೀರ್ಥಕ್ಕೆ ಮೂರು ಕಾಸಿನಂತೆ ದಕ್ಷಿಣೆಯನ್ನು ತೆಗೆದುಕೊಂಡು ಆ ಜಾತಿಯ ಜನರುಗಳೇ ತೀರ್ಥವನ್ನು ಮೇಲಕ್ಕೆತ್ತಿ ಯಾತ್ರಾರ್ಥಿಗಳಿಗೆ ಸ್ನಾನ ಮಾಡಿಸುತ್ತಲಿದ್ದರು. ಈಗಲೂ ಈ ಪದ್ಧತಿಯೇ ನಡೆದು ಬರುತ್ತಲಿದೆ. ಈ ಸಂದರ್ಭದಲ್ಲಿ ಶ್ರೀಸ್ವಾಮಿಗಳವರು ತೀರ್ಥಸ್ನಾನಕ್ಕೆ ದಯಮಾಡಿಸಿದರು. ಆಗಲೂ ಆ ಆರ್ಯಜಾತಿಯ ಜನರು ಕೋಟಿ ತೀರ್ಥವನ್ನು ತಾವೇ ತೆಗೆದು ಶ್ರೀ ಸ್ವಾಮಿಗಳವರಿಗೆ ಸ್ನಾನ ಮಾಡಿಸಬೇಕೆಂದು ತಿಳಿಸಿಕೊಂಡರು. ಆಗ ಶ್ರೀ ಸ್ವಾಮಿಗಳವರು ತಮ್ಮ ವಿಷಯದಲ್ಲಿ ಮಾತ್ರ ಈ ನಿರ್ಬಂಧವು ಇರತಕ್ಕದ್ದಲ್ಲವೆಂದು ಎಷ್ಟು ವಿಧವಾಗಿ ಹೇಳಿದರೂ ಅವರುಗಳು ಅದನ್ನು ಅಂಗೀಕರಿಸದೆ ಹಟವನ್ನೇ ಮಾಡುತ್ತ ಬಂದರು. ಶ್ರೀಗಳವರಿಗೆ ಆ ಜನರ ಮೌರ್ಖ್ಯವು ಸ್ವಲ್ಪ ಅಸಮಾಧಾನವನ್ನುಂಟು ಮಾಡಿತು. ಆ ಕ್ಷಣದಲ್ಲಿಯೇ ಹಿಂತಿರುಗಿ ದೇವರಿಗೆ ದಕ್ಷಿಣ ಭಾಗದಲ್ಲಿದ್ದ ಸರ್ವತೀರ್ಥವೆಂಬ ಮತ್ತೊಂದು ತೀರ್ಥದ ಸಮೀಪಕ್ಕೆ ಬಂದು ಕೋಟಿತೀರ್ಥವನ್ನು ಅಡಗಿಸಿಕೊಂಡಿರತಕ್ಕ ಈ ತೀರ್ಥದಲ್ಲಿ ಸ್ನಾನಮಾಡಿದರೆ ಎಲ್ಲಾ ತೀರ್ಥಗಳಲ್ಲಿಯೂ ಸ್ನಾನವನ್ನು ಮಾಡಿದ ಫಲವು ಏಕಕಾಲದಲ್ಲಿಯೇ ಬರುವುದರಿಂದ ಇಂದಿನಿಂದ ಎಲ್ಲರೂ ಸರ್ವತೀರ್ಥಸ್ನಾನವನ್ನೇ ಮಾಡತಕ್ಕದ್ದೆಂದು ಆಜ್ಞೆಯನ್ನಿತ್ತು ತಾವೂ ಸರ್ವತೀರ್ಥದಲ್ಲಿ ಸ್ನಾನಮಾಡಿಕೊಂಡು ಮಠಕ್ಕೆ ದಯಮಾಡಿಸಿದರು. ಈ ರೀತಿಯಲ್ಲಿ ಶ್ರೀ ಸ್ವಾಮಿಗಳವರು ಮಾಡಿದ ಆಜ್ಞೆಯನ್ನು ಸುಮಾರು 35-40 ವರ್ಷಗಳ ಪರ್ಯಂತ ಎಲ್ಲಾ ಜಾತಿಯ ಜನರೂ ಅನುಷ್ಠಾನದಲ್ಲಿ ತಂದು ಕೋಟಿತೀರ್ಥವನ್ನೇ ತಿರಸ್ಕರಿಸಿದರು. ಇದರಿಂದ ಆರ್ಯಜಾತಿಯ ಜನರು ಬಹಳ ನಿಂದಿತರಾಗಿ ಅನೇಕ ಕಷ್ಟಗಳಿಗೆ ಗುರಿಯಾಗುತ್ತ ಬಂದರು. ಅವರಿಂದ ಪೌರೋಹಿತ್ಯವನ್ನು ನಡೆಸಿಕೊಳ್ಳುತ್ತಲಿದ್ದ ಕೆಲವು ಜಾತಿಯ ಜನರು ಕೂಡ ಜಗದ್ಗುರುಗಳವರ ಶಾಪಗ್ರಸ್ತರೆಂದು ಭಾವಿಸಿ ಆ ಜನರಿಂದ ಪೌರೋಹಿತ್ಯವನ್ನು ಮಾಡಿಸಿಕೊಳ್ಳುವುದಕ್ಕೂ ಹಿಂತೆಗೆಯುತ್ತಾ ಬಂದರು. ಕೋಟಿತೀರ್ಥದಿಂದ ಬರುತ್ತಲಿದ್ದ ವರಮಾನವು ಸುತರಾಂ ನಿಂತು ಹೋಗಿ ಆ ತೀರ್ಥವು ಕ್ರಿಮಿಕೀಟಗಳಿಂದ ನಿಬಿಡವಾಗಿ ದುರ್ದಶೆಯನ್ನು ಹೊಂದಿತು. ಹೀಗೆ ಬಹುಕಾಲದವರೆಗೆ ನಡೆದು ಬಂದನಂತರ ಎರಡನೆಯ ಸಾರಿ ದಕ್ಷಿಣದೇಶದ ಯಾತ್ರೆಯಲ್ಲಿ ಶ್ರೀಸ್ವಾಮಿಗಳವರು ಮಧುರೆಯಲ್ಲಿರುವಾಗಲೇ ರಾಮೇಶ್ವರದ ಆರ್ಯ ಬ್ರಾಹ್ಮಣ ಸಂಘದವರು ಮಧುರೆಗೆ ಬಂದು ಶ್ರೀ ಸ್ವಾಮಿಗಳ

ವಿಧೇಯರಾಗಿ ತಮ್ಮ ಅಪರಾಧದಿಂದ ತಮಗೆ ಉಂಟಾದ ಅನರ್ಥ ಪರಂಪರೆಗಳನ್ನು ತಿಳಿಸಿಕೊಂಡು ತಮ್ಮ ಅಪರಾಧಕ್ಕೆ ಇದುವರೆಗೆ ಅನುಭವಿಸಿದ ದುಷ್ಫಲವು ಸಾಕು. ಇನ್ನು ಮುಂದೆ ತಮ್ಮನ್ನು ಅನುಗ್ರಹಿಸಿ ಕಾಪಾಡಬೇಕೆಂದು ಬಹುವಿಧದಲ್ಲಿ ಪ್ರಾರ್ಥನೆ ಮಾಡಿಕೊಂಡರು. ಆಗ್ಗೆ ಶ್ರೀಸ್ವಾಮಿಗಳವರಿಗೆ ಕರುಣೆ ಹುಟ್ಟಿ ಅವರುಗಳಿಗೆ ಅಭಯವನ್ನಿತ್ತು ತಮ್ಮ ಯಾತ್ರಾಶ್ರಮದಿಂದ ಶಾ|| ಶಕ 1796ನೆಯ ಶ್ರೀಮುಖ ಸಂವತ್ಸರದಲ್ಲಿ (1873ನೆಯ ಇಸವಿ) ಎರಡನೆಯ ಸಾರಿ ರಾಮೇಶ್ವರಕ್ಕೆ ದಯಮಾಡಿಸಿದರು. ಅಲ್ಲಿಯೂ ಪೂರ್ವಪದ್ಧತಿಯಂತೆ ರಾಮನಾಥಸ್ವಾಮಿಯವರ ದೇವಸ್ಥಾನದ ಮೂರನೆಯ ಪ್ರಾಕಾರದ ಮಂಟಪದಲ್ಲಿ ವಸತಿ ಮಾಡಿದರು. ಧನುಷ್ಕೋಟಿ ಸ್ನಾನ ಮಾಡಿ ರಾಮನಾಥ ಸ್ವಾಮಿಯವರ ಪೂಜಾದಿಗಳನ್ನು ಸಾಂಗವಾಗಿ ಶ್ರೀ ಸ್ವಾಮಿಗಳವರು ಸ್ವತಃ ನಡೆಸಿದ ನಂತರ ತೀರ್ಥಗಳಲ್ಲಿ ಸ್ನಾನ ಮಾಡಿ ಸರ್ವತೀರ್ಥಸ್ನಾನವನ್ನೂ ಮಾಡಿಕೊಂಡು ಸರ್ವತೀರ್ಥದಿಂದ ತಮ್ಮ ಕಮಂಡಲುವಿನಲ್ಲಿ ತೀರ್ಥವನ್ನು ತೆಗೆದುಕೊಂಡು ಕೋಟಿತೀರ್ಥಕ್ಕೆ ದಯಮಾಡಿ ಕಮಂಡಲೋದಕವನ್ನು ಕೋಟಿತೀರ್ಥದಲ್ಲಿ ಬೆರೆಸಿ 'ಇದು ಸರ್ವತೀರ್ಥವೇ ಆಯಿತು' ಎಂದು ತಮ್ಮ ವಾಕ್ಕಿನಿಂದ ಉಚ್ಚರಿಸಿ ಆ ಕೋಟಿತೀರ್ಥದಿಂದ ಉದಕವನ್ನು ಪರಿಜನರಿಂದ ತೆಗೆಸಿ ತಾವು ಸ್ನಾನ ಮಾಡಿ ಶಿಷ್ಯಮಂಡಲಿಗೆ ಸ್ನಾನ ಮಾಡುವಂತೆ ಅಪ್ಪಣೆ ಮಾಡಿದರು. ಅಂದಿನಿಂದ ಆ ಕೋಟಿತೀರ್ಥಕ್ಕೆ ಮೊದಲಿಗಿಂತಲೂ ಹೆಚ್ಚಾದ ಪ್ರಾಶಸ್ತ್ಯವುಂಟಾಯಿತು.

ಈ ಸ್ವಾಮಿಗಳವರು ಉತ್ತರ ದೇಶದ ಯಾತ್ರೆಗೆ ದಯಮಾಡಿಸಿದ ಕಾಲದಲ್ಲಿ ಆಗ್ಗೆ ನಾಗಪುರದಲ್ಲಿ ಒಬ್ಬ ರಾಜರು ಇದ್ದು ಅದು ಒಂದು ಸಂಸ್ಥಾನವಾಗಿತ್ತು. ಆ ಸಂಸ್ಥಾನದಲ್ಲಿ ಶೃಂಗೇರಿ ಜಗದ್ಗುರುಗಳು ತಮ್ಮ ರಾಜಧಾನಿಗೆ ಬಂದರೆ ಅವರನ್ನು ದೊರೆಗಳು ಎದುರುಗೊಂಡು ಶ್ರೀ ಸ್ವಾಮಿಗಳವರ ಪಾಲಕಿಗೆ ತಮ್ಮ ಹೆಗಲನ್ನು ಕೊಟ್ಟು ಕರೆದುಕೊಂಡು ಹೋಗುವ ಸಂಪ್ರದಾಯವು ಇದ್ದಂತೆ ತಿಳಿದುಬರುತ್ತದೆ. ಈ ಹಿಂದಿನ ಪದ್ಧತಿಯನ್ನು ಶ್ರೀ ನರಸಿಂಹಭಾರತಿಗಳವರು ದಯಮಾಡಿಸಿದ ಕಾಲದಲ್ಲಿ ಯಾವ ಕಾರಣದಿಂದಲೋ ಆಗಿನ ರಾಜರು ಆಚರಿಸಲಿಲ್ಲ. ಇದರಿಂದ ಆ ರಾಜರಿಗೂ ಸ್ವಾಮಿಗಳವರಿಗೂ ಪರಸ್ಪರ ಅಸಮಾಧಾನವುಂಟಾಯಿತು. ಈ ಅಸಮಾಧಾನದಿಂದ ಸ್ವಾಮಿಗಳವರು ಆ ಸ್ಥಳವನ್ನು ಬಿಟ್ಟು ಕೂಡಲೇ ಕಾಮಟಿ ಎಂಬ ಸೇನಾನಿವೇಶಸ್ಥಾನಕ್ಕೆ (ಲಷ್ಕರ್) ಬಂದು ಅಲ್ಲಿ ನಿಂತರು. ಎರಡು ವರ್ಷ ಕಾಲ ಅಲ್ಲಿಯೇ ವಸತಿಯನ್ನು ಮಾಡಿದರು. ಈ ಕಾಲದಲ್ಲಿ ಮಠದಲ್ಲಿ ನಡೆಯಬೇಕಾದ ವೆಚ್ಚಗಳಿಗೆ ಬಹಳ ಅನಾನುಕೂಲವಾಯಿತು. ಹಾಗಿದ್ದರೂ ಆ ಭಾಗವನ್ನು ಸ್ವಾಮಿಗಳವರು ಸ್ವಲ್ಪವೂ ಗಮನಕ್ಕೆ ತಾರದೆ ತಮ್ಮ ಕಾಲದಲ್ಲಿ ಸಂಸ್ಥಾನಕ್ಕೆ ಉಂಟಾದ ಕೊರತೆಯನ್ನು ನಿವೃತ್ತಿ ಮಾಡಿಕೊಂಡೇ ಅಲ್ಲಿಂದ ಮುಂದಕ್ಕೆ ಹೊರಡತಕ್ಕದ್ದೆಂದು

ದೃಢಸಂಕಲ್ಪವನ್ನು ಮಾಡಿದರು. ಸಂಸ್ಥಾನದ ವೆಚ್ಚಗಳಿಗಾಗಿ ಮಠದಲ್ಲಿದ್ದ ಅನೇಕ ಪದಾರ್ಥಗಳನ್ನು ಅಡವಿಟ್ಟು ಹೇರಳವಾಗಿ ಸಾಲ ಮಾಡಿ ಸಂಸ್ಥಾನದ ಧರ್ಮಗಳಿಗೆ ಲೋಪವಿಲ್ಲದಂತೆ ಪೂಜಾದಿಗಳನ್ನು ನಡೆಸುತ್ತಿದ್ದರು. ಅನಂತರ ನಾಗಪುರದ ರಾಜರಿಗೆ ಅನೇಕ ವಿಧದಿಂದ ತೊಂದರೆಗಳು ಉಂಟಾಗಲು ತೊಡಗಿದವು. ಆಗ ಇದೆಲ್ಲವೂ ಶ್ರೀ ಸ್ವಾಮಿಗಳವರ ತಿರಸ್ಕಾರದಿಂದ ಆದುವೆಂದು ಪ್ರತಿಕ್ಷಣದಲ್ಲಿಯೂ ತೋರುತ್ತ ಬಂತು. ಆಮೇಲೆ ಕೇವಲ ಪಶ್ಚಾತ್ತಾಪದಿಂದ ರಾಜನು ಶ್ರೀ ಸ್ವಾಮಿಗಳವರು ಇದ್ದಲ್ಲಿಗೆ ಪಾದಚಾರಿಯಾಗಿ ಬಂದು ಅವರ ದರ್ಶನವನ್ನು ಮಾಡಿ ಅವರಲ್ಲಿ ಶರಣಾಗತನಾದನು. ಅನಂತರ ಆ ರಾಜನ ಪ್ರಾರ್ಥನೆಗನುಸಾರವಾಗಿ ನಾಗಪುರಕ್ಕೆ ತಿರುಗಿ ಬಂದು ತಮ್ಮ ಕಾಲದಲ್ಲಿ ನಿಂತುಹೋಗಿದ್ದ ಮರ್ಯಾದೆಯ ಕೊರತೆಯನ್ನು ಹೋಗಲಾಡಿಸಿಕೊಂಡು ಆ ರಾಜನಿಗೆ ಅನುಗ್ರಹ ಮಾಡಿ ಮುಂದಕ್ಕೆ ಹೊರಟರು. ಈ ವಿದ್ಯಮಾನವು ಶ್ರೀ ಸ್ವಾಮಿಗಳವರೇ ತಮ್ಮ ಶಿಷ್ಯರಿಗೆ ಹೇಳಿದ್ದೆಂದು ಅವರಿಂದ ತಿಳಿದುಕೊಂಡದ್ದಾಗಿದೆ. ಎರಡು ವರ್ಷಗಳ ಕಾಲ ಕಾಮಟೀ ಲಷ್ಕರಿನಲ್ಲಿ ನಿಂತಿದ್ದು ಹೇರಳವಾಗಿ ಸಂಸ್ಥಾನಕ್ಕೆ ಸಾಲ ಮಾಡಿದರೆಂಬ ಭಾಗವನ್ನು ಲೆಕ್ಕದಿಂದ ತಿಳಿಯಬಹುದಾಗಿದೆ. ಈ ನರಸಿಂಹಭಾರತೀಗಳವರ ಕಾಲದಲ್ಲಿ ಇವರಿಗೆ ಆಪ್ತರಾಗಿಯೂ ಕಾರ್ಯದಕ್ಷರಾಗಿಯೂ ಸ್ವಾಮಿಭಕ್ತಿಯುಳ್ಳವರಾಗಿಯೂ ಇದ್ದ ಪರಿಜನವು ಬಹಳ ಕಡಿಮೆಯಾಗಿದ್ದಂತೆ ಕಂಡುಬಂದಿದೆ. ಈ ಸಂಗತಿಯು ಶ್ರೀ ಸ್ವಾಮಿಗಳವರು ತಿರುಪತಿಗೆ ದೇವರ ದರ್ಶನಕ್ಕೋಸ್ಕರ ಹೋಗಿದ್ದ ಕಾಲದಲ್ಲಿ ಹೇಳಿದ ವೆಂಕಟೇಶಸ್ತೋತ್ರದ ಮಧ್ಯದಲ್ಲಿರುವ ''ದಾರಿದ್ರ್ಯಂ ಮಮ ದುಷ್ಟಭೃತ್ಯಜನಿತಂ'' ಎಂಬ ಶ್ಲೋಕದಿಂದ ಸ್ಪಷ್ಟವಾಗುತ್ತೆ. ಮತ್ತು ಈ ಸ್ವಾಮಿಗಳವರ ಪರಮಾನುಗ್ರಹಪಾತ್ರರಾಗಿ ಶ್ರೀ ಮಠದ ಅಭಿವೃದ್ಧಿ ವಿಷಯದಲ್ಲಿಯೂ ಸ್ವಾಮಿಗಳವರ ಕೀರ್ತಿ ವಿಷಯದಲ್ಲಿಯೂ ಅನವರತವೂ ದೃಷ್ಟಿಯುಳ್ಳವರಾಗಿ ಅದಕ್ಕೆ ಅನುಗುಣವಾದ ಸಲಹೆಗಳನ್ನು ಶ್ರೀ ಸ್ವಾಮಿಗಳವರಿಗೆ ಕೊಡುತ್ತಲೂ ಬೇಕಾದ ಸಹಾಯಗಳನ್ನು ಮಾಡುತ್ತಲೂ ಇದ್ದ ಮುಮ್ಮಡಿ ಶ್ರೀ ಕೃಷ್ಣರಾಜಪ್ರಭುಗಳವರು ಒಂದು ಸಂದರ್ಭದಲ್ಲಿ ಶ್ರೀಗಳವರಿಗೆ ಬರೆದು ಕಳುಹಿಸಿರುವ ಪತ್ರಿಕೆಯಿಂದಲೂ ಮೇಲಿನ ಅಂಶವು ಸ್ಪಷ್ಟಪಡುತ್ತದೆ.

ಸದ್ಭೃತ್ಯರ ಸಹಾಯವಿಲ್ಲದಿದ್ದರೂ ಶ್ರೀ ಸ್ವಾಮಿಗಳವರು ತಮ್ಮ ಕಾಲದಲ್ಲಿ ಸಂಸ್ಥಾನದ ಕೀರ್ತಿಯನ್ನು ಬಹಳವಾಗಿ ಹೆಚ್ಚಿಸಿದರು. ಶಾಶ್ವತವಾಗಿ ಬರತಕ್ಕ ವರಮಾನವನ್ನೂ ಅನೇಕ ಗ್ರಾಮಗಳನ್ನೂ ವರ್ಷಾಶನಗಳನ್ನೂ ಕಾಣಿಕೆಗಳನ್ನೂ ಮಹಾರಾಜರುಗಳಿಂದಲೂ ಇತರ ಶಿಷ್ಯಜನರಿಂದಲೂ ಸಂಪಾದಿಸುವುದರ ಮೂಲಕ ಸಂಸ್ಥಾನದ ಉತ್ಪತ್ತಿಯನ್ನು ಹೆಚ್ಚಿಸಿದರು. ಅನರ್ಘ್ಯವಾದ ರತ್ನಾಭರಣಗಳನ್ನೂ ಶೇಖರಿಸಿದರು. ವಿದ್ವಾಂಸರುಗಳಿಗೂ ಆಶ್ರಿತಜನಗಳಿಗೂ

ಜೀವನಕ್ಕೋಸ್ಕರ ಶೃಂಗೇರಿ ಜಹಗೀರಿಯಲ್ಲಿ ಇನಾಮತಿಗಳನ್ನು ಕೊಟ್ಟು ಕಾಪಾಡಿದರು. ಇವರ ಪ್ರಭಾವವೂ ಕೀರ್ತಿಯೂ ಎಲ್ಲಾ ದೇಶಗಳಲ್ಲಿಯೂ ಈಗಲೂ ಸೂರ್ಯಕಿರಣಗಳಂತೆ ಪ್ರಸರಿಸಿವೆ. ಮೇಲೆ ಹೇಳಿದಂತೆ ಶ್ರೀನರಸಿಂಹಭಾರತೀಸ್ವಾಮಿಗಳವರ ಮನೋದಾರ್ಢ್ಯದಿಂದಲೂ ಅವರ ತಪಃ ಪ್ರಭಾವದಿಂದಲೂ ಅವರ ಕಾಲದಲ್ಲಿ ಅನೇಕ ಸಂಗತಿಗಳು ನಡೆದಿವೆ. ಗ್ರಂಥವಿಸ್ತಾರವಾಗುವುದೆಂಬ ಭಯದಿಂದ ಇಲ್ಲಿಗೆ ವಿರಮಿಸಿದೆ.

ಶ್ರೀ ಸ್ವಾಮಿಗಳವರು ತಮಗೆ ಆಶ್ರಮ ಸ್ವೀಕಾರವಾದ ಆರನೆಯ ದಿನದಲ್ಲಿಯೇ ತಮ್ಮ ಗುರುಗಳು ಕೈವಲ್ಯವನ್ನೈದಲು ತಮಗುಂಟಾದ ಅನಾನುಕೂಲಗಳನ್ನು ಚೆನ್ನಾಗಿ ತಿಳಿದವರಾಗಿದ್ದುದರಿಂದ ತಮ್ಮ ಶರೀರವು ದೃಢವಾಗಿರತಕ್ಕ ಕಾಲದಲ್ಲಿಯೇ ಯೋಗ್ಯಶಿಷ್ಯ ಪರಿಗ್ರಹವನ್ನು ಮಾಡಿ ಅವರ ವಿದ್ಯಾಭ್ಯಾಸವನ್ನು ಕ್ರಮವಾಗಿ ನಡೆಸಿ ಅವರಿಗೆ ಆಶ್ರಮ ಸಂಪ್ರದಾಯಗಳನ್ನೂ ಸಂಸ್ಥಾನ ಪದ್ಧತಿಗಳನ್ನೂ ಚೆನ್ನಾಗಿ ತಿಳಿಸಿ ಸಂಸ್ಥಾನದ ಆಧಿಪತ್ಯಕ್ಕೆ ಅರ್ಹರಾಗುವಂತೆ ಮಾಡಬೇಕೆಂಬ ಕುತೂಹಲವು ತಮ್ಮ ಅರುವತ್ತನೆಯ ವರ್ಷದಲ್ಲಿಯೇ ಶ್ರೀಗಳವರ ಮನಸ್ಸಿನಲ್ಲಿ ಅಂಕುರಿತವಾಗಿ ದಿನೇ ದಿನೇ ವೃದ್ಧಿಹೊಂದುತ್ತಲಿತ್ತು. ಈ ಸಂದರ್ಭದಲ್ಲಿ ಶೃಂಗೇರೀ ಸ್ಥಳದಲ್ಲಿಯೂ ಇತರ ಸ್ಥಳಗಳಲ್ಲಿಯೂ ಇರುವವರನೇಕರ ಜಾತಕಗಳನ್ನು ತರಿಸಿ ತಾವು ನೋಡುತ್ತಲೂ, ಶ್ರೀ ಕೃಷ್ಣರಾಜ ಪ್ರಭುಗಳವರಲ್ಲಿಗೆ ಕಳುಹಿಸಿ ಅವರ ಮೂಲಕವಾಗಿಯೂ ಜಾತಕ ಭಾವಗಳನ್ನು ಕುರಿತು ವಿಚಾರ ಮಾಡುತ್ತಲೂ ಇದ್ದರು. ಆಲೋಚನೆಯಲ್ಲಿ ಎಂಟು ವರ್ಷಗಳು ಕಳೆದು ಒಂಬತ್ತನೆಯ ವರ್ಷವು ಪ್ರಾರಂಭಿಸಿತು. ಅದುವರೆಗೆ ತಮ್ಮಲ್ಲಿಗೆ ಬಂದಿದ್ದ ಯಾವ ಜಾತಕವೂ ಶ್ರೀ ಸ್ವಾಮಿಗಳವರ ಮನಸ್ಸಿಗೆ ತೃಪ್ತಿಕರವಾಗಿರಲಿಲ್ಲ. ಸ್ವಾಮಿಗಳವರಿಗೆ ದಿನದಿನಕ್ಕೆ ಆತಂಕವೇನೋ ಹೆಚ್ಚುತ್ತಲಿತ್ತು. ಹೀಗಿರುವಾಗ್ಗೆ ಒಂದು ದಿನ ಶ್ರೀಸ್ವಾಮಿಗಳವರು ರಾತ್ರಿ ಏಕಾಂತದಲ್ಲಿದ್ದು ಪೂಜೆ ಮಾಡುತ್ತಿರುವ ಸಮಯದಲ್ಲಿ ಇವರ ಎದುರಾಗಿ ಒಬ್ಬ ಸುವಾಸಿನಿಯು ಬಂದು ''ಸ್ಥಳ ಬಿಡು'' ಎಂದು ಹೇಳಿದಂತೆ ಇವರ ಮನಸ್ಸಿಗೆ ತೋರಿತು. ಕೂಡಲೇ ಬಹಳ ಗಾಬರಿಯಿಂದಲೂ ಆಶ್ಚರ್ಯದಿಂದಲೂ ನೋಡುವಾಗ್ಗೆ ಯಾರೂ ಇರಲಿಲ್ಲ. ಅದರ ಮೇಲೆ ಆಕಾಶವಾಣಿಯಂತೆ ತಮ್ಮ ಮನಸ್ಸಿಗೆ ಗೋಚರವಾಗಿ ಆ ಶಬ್ದಕ್ಕೆ ಅರ್ಥ ಮಾಡತೊಡಗಿದರು. ಸ್ಥಳ ಬಿಡು ಎಂಬ ಮಾತಿಗೆ ಮೂರು ವಿಧವಾಗಿ ಅರ್ಥವಾಗಬಹುದು. ಒಂದನೆಯದು ಸ್ಥೂಲ ಶರೀರವನ್ನು ಬಿಡು ಎಂದು ಹೇಳಬಹುದು. ಆದರೆ ಇದು ನ್ಯಾಯವಲ್ಲವಾಗಿ ಈ ಅರ್ಥದಿಂದ ಹುಟ್ಟಿದ ಶಬ್ದವಲ್ಲವೆಂದು ನಿಷ್ಕರ್ಷೆಯಾಯಿತು. ಎರಡನೆಯ ಅರ್ಥವು ಪ್ರಕೃತ ವಾಸಮಾಡುತ್ತಲಿದ್ದ ಶೃಂಗೇರಿಯನ್ನು ಬಿಟ್ಟು ಹೊರಗೆ ಹೊರಡತಕ್ಕದ್ದು. ಇದರಿಂದ ಸಂಚಾರ ಹೊರಡಲು ಅಮ್ಮನವರ ಅನುಮತಿಯು ದೊರಕಿದಂತೆ ಆಯಿತು. ಮೂರನೆಯದಾಗಿ ತಾವು ಇರುವ

ವ್ಯಾಖ್ಯಾನಪೀಠವನ್ನು ಬಿಡು ಎಂದು ಅರ್ಥವಾಗಬಹುದು. ಇದರಿಂದ ಶಿಷ್ಯ ಪರಿಗ್ರಹಕ್ಕೋಸ್ಕರ ಶೃಂಗೇರಿಯನ್ನು ಬಿಟ್ಟು ಹೊರಡಲು ಅಮ್ಮನವರ ಅಪ್ಪಣೆಯೇ ತಮಗೆ ಈ ವಿಧದಿಂದ ಲಬ್ಧವಾಯಿತೆಂದು ತೀರ್ಮಾನಿಸಿದರು. ಆಗಿನ ಸಂದರ್ಭದಲ್ಲಿ ಸಂಚಾರಕ್ಕೆ ಆವಶ್ಯಕವಾದ ಅನುಕೂಲತೆಗಳೆಲ್ಲವನ್ನೂ ಕಲ್ಪಿಸಿಕೊಂಡು ತತ್‌ಕ್ಷಣವೇ ಸ್ಥಳದಿಂದ ಹೊರಡುವುದು ಸುಲಭವಾಗಿರಲಿಲ್ಲ. ಹಾಗಿದ್ದರೂ ಮಾರನೆಯ ದಿನವೇ ಶ್ರೀ ಶಾರದಾಂಬೆಯವರ ಸನ್ನಿಧಿಗೆ ಹೋಗಿ ಸಾವಕಾಶವಾಗಿ ಅಮ್ಮನವರ ಪೂಜೆಯನ್ನು ಮಾಡಿ ಪ್ರಾರ್ಥನೆಯನ್ನು ಮಾಡಿಕೊಂಡು ಪಾದಚಾರಿಗಳಾಗಿಯೇ ಶೃಂಗೇರಿಯಿಂದ ಹೊರಟು ಒಂದು ಮೈಲುದೂರದಲ್ಲಿರುವ ಸಚ್ಚಿದಾನಂದಪುರವೆಂಬ ಅಗ್ರಹಾರಕ್ಕೆ ಬಂದರು. ಅಲ್ಲಿ ಸ್ವಲ್ಪ ದಿನಗಳವರೆಗೆ ನಿಂತು ಪ್ರಯಾಣಕ್ಕೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಂಡು ಅಲ್ಲಿಂದ ಹೊರಟು ಮೈಸೂರು ರಾಜಧಾನಿಗೆ ಬಂದರು.

ಶ್ರೀ ನರಸಿಂಹಭಾರತೀ ಸ್ವಾಮಿಗಳವರ ಅರುವತ್ತನೆಯ ವರ್ಷವಾದ ಪೈಂಗಳ ಸಂವತ್ಸರದಲ್ಲಿ ಶಿಷ್ಯ ಪರಿಗ್ರಹ ಮಾಡಬೇಕೆಂಬ ವೃತ್ತಿಯು ಸ್ವಾಮಿಗಳವರ ಹೃದಯದಲ್ಲಿ ಅಂಕುರಿತವಾದಂತೆ ಹಿಂದೆ ಹೇಳಿದೆಯಷ್ಟೆ. ಅದೇ ಸಂವತ್ಸರದಲ್ಲಿ ಮೈಸೂರಿನಲ್ಲಿ ಕೃಷ್ಣರಾಜಪ್ರಭುಗಳವರ ಆಸ್ಥಾನದ ಪಂಡಿತರಾಗಿದ್ದ ಕುಣಿಗಲ್ ರಾಮಶಾಸ್ತ್ರಿಗಳಿಗೆ ಮೂರನೆಯ ಕುಮಾರರಾದ ಶಿವಸ್ವಾಮಿ ಎಂಬುವರು ಜನಿಸಿದರು. ಸ್ವಾಮಿಗಳವರಿಗೆ ಈ ಸಂಗತಿಯು ಗೋಚರವಾಗಿತ್ತೋ ಹೇಗೋ ಆ ವಿಷಯವನ್ನು ನಿಷ್ಕರ್ಷೆ ಮಾಡಲು ಹೆಚ್ಚಾಗಿ ಅವಕಾಶವಿಲ್ಲವಾದರೂ ಮೈಸೂರಿಗೆ ಬಂದ ಕೂಡಲೇ ತಮ್ಮ ಭಕ್ತಶಿಖಾಮಣಿಗಳಾದ ಶ್ರೀ ಕೃಷ್ಣರಾಜ ಪ್ರಭುಗಳವರನ್ನು ಕಂಡು ಅವರಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿ ಅವರ ಮೂಲಕ ರಾಮಶಾಸ್ತ್ರಿಗಳ ಜ್ಯೇಷ್ಠ ಪುತ್ರರಾದ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಹೇಳಿಕಳುಹಿಸಿ ಅವರ ಅಧೀನರಾಗಿದ್ದು ಅವರಿಂದಲೇ ಪೋಷಿತರಾಗಿದ್ದ ಕುಣಿಗಲ್ ರಾಮಶಾಸ್ತ್ರಿಗಳ ಮೂರನೆಯ ಮಕ್ಕಳಾದ ಶಿವಸ್ವಾಮಿ ಎಂಬುವರನ್ನು ತಮ್ಮಲ್ಲಿಗೆ ಕರೆಸಿಕೊಂಡು ಅವರನ್ನು ನೋಡಿದರು. ಇದರಿಂದ ಶ್ರೀ ಸ್ವಾಮಿಗಳವರು ಶೃಂಗೇರಿಯಿಂದ ಹೊರಡುವಾಗಲೇ ಅಥವಾ ಅದಕ್ಕಿಂತಲೂ ಪೂರ್ವಭಾವಿಯಾಗಿಯೇ ಶಿವಸ್ವಾಮಿಯೇ ತಮಗೆ ತಕ್ಕ ಶಿಷ್ಯರೆಂದು ಈ ಮಹನೀಯರಿಗೆ ಗೋಚರವಾಗಿದ್ದಂತೆ ಧಾರಾಳವಾಗಿ ಹೇಳಬಹುದು. ತಮ್ಮ ದರ್ಶನಕ್ಕೋಸ್ಕರ ಅಣ್ಣಂದಿರ ಕೂಡ ಬಂದಿದ್ದ ಒಂಬತ್ತು ವರ್ಷದ ವಯಸ್ಸಿನ ಶಿವಸ್ವಾಮಿಯನ್ನು ನೋಡಿ ಸಮೀಪದಲ್ಲಿ ಕುಳ್ಳಿರಿಸಿಕೊಂಡು ಅತ್ಯಾದರದಿಂದ 'ನಿನಗೆ ಏನು ಬೇಕಪ್ಪಾ ಮಗುವೇ ?' ಎಂದು ಪ್ರಶ್ನೆ ಮಾಡಿದರು. ಆ ಪ್ರಶ್ನೆಗೆ ಉತ್ತರವಾಗಿ ಬೇರೆ ಏನೊಂದು ಮಾತನ್ನೂ ಆಡದೆ ಆ ಶಿವಸ್ವಾಮಿಯು

ಅಯಂ ದಾನಕಾಲಸ್ತ್ವಹಂ ದಾನಪಾತ್ರಂ
ಭವಾನೇವ ದಾತಾ ತ್ವದನ್ಯಂ ನ ಯಾಚೇ ।
ಭವದ್ಭಕ್ತಿಮೇವ ಸ್ಥಿರಾಂ ದೇಹಿ ಮಹ್ಯಂ
ಕೃಪಾಶೀಲಶಂಭೋ ಕೃತಾರ್ಥೋಽಸ್ಮಿ ತಸ್ಮಾತ್ ।

ಎಂಬುದಾಗಿ ಹೇಳಿದನು. ಈ ರೀತಿಯಲ್ಲಿ ಶಿವಸ್ವಾಮಿಯಿಂದ ಬಂದ ಉತ್ತರವನ್ನು ಕೇಳಿದ ಸ್ವಾಮಿಗಳವರಿಗೆ ಆ ಕಾಲದಲ್ಲಿ ಉಂಟಾದ ಸಂತೋಷವು ಎಂಥಾದ್ದಾಗಿರಬಹುದೆಂದು ಹೇಳಲಶಕ್ಯವು. ಆದರೆ ಒಂಬತ್ತು ವರ್ಷಗಳು ಕೂಡ ತುಂಬದಿರುವ ಮತ್ತು ಪ್ರಪಂಚ ವ್ಯವಹಾರದಲ್ಲಿ ಸುತರಾಂ ಪ್ರವೇಶವೇ ಇಲ್ಲದ ಶಿವಸ್ವಾಮಿಯಿಂದ ಸ್ವಾಮಿಗಳ ಪ್ರಶ್ನೆಗೆ ಬಂದ ಉತ್ತರವನ್ನು ಕುರಿತು ಆಲೋಚಿಸಿದರೆ ಈ ನಡವಳಿಕೆಯು ನಿಜವೆಂದು ಅನೇಕರು ನಂಬದಿರಬಹುದು. ಆದರೆ ನಂಬುವುದಕ್ಕೆ ಬಲವತ್ತರವಾದ ಪ್ರತ್ಯಕ್ಷ ಪ್ರಮಾಣವೇ ಇದ್ದದ್ದರಿಂದ ಬಲಾತ್ಕಾರದಿಂದ ನಂಬಲಾರೆನೆಂದು ತಿರಸ್ಕರಿಸಲು ಅವಕಾಶವಿಲ್ಲ. ಇದರಿಂದ ಜನ್ಮಾಂತರೀಯ ವಾಸನೆಯು ಪ್ರಾಣಿಗಳನ್ನು ಅನುಸರಿಸಿರುವುದೆಂಬ ಶಾಸ್ತ್ರದಲ್ಲಿ ಪ್ರಾಮಾಣ್ಯ ಬುದ್ಧಿಯನ್ನು ಮಾಡಿಯೇ ತೀರಬೇಕು. ಇದರಂತೆಯೇ ಅತ್ಯಾಶ್ಚರ್ಯಕರವಾದ ಮತ್ತೊಂದು ಸಂಗತಿಯು ನಡೆದಿರುವುದನ್ನು ಮುಂದೆ ಹೇಳಲಾಗುವುದು.

ಶ್ರೀ ಸ್ವಾಮಿಗಳವರು ಬಹುಕಾಲದಿಂದ ಪ್ರತಿಯೊಂದು ದಿನವೂ ತಾವು ಪೂಜಿಸುವಾಗ ಶ್ರೀ ಚಂದ್ರಮೌಳೀಶ್ವರ ಸ್ವಾಮಿಯಲ್ಲಿ, 'ಸಚ್ಛಿಷ್ಯೋ ಮೇ ಭೂಯಾತ್, ಮಚ್ಛಿಷ್ಯಃ ಪಂಡಿತೋ ಭವತು' ಎಂಬುದಾಗಿ ಮಾಡುತ್ತಲಿದ್ದ ಪ್ರಾರ್ಥನೆಯ ಫಲವು ಆ ದಿನಕ್ಕೆ ಕೈಗೂಡಿತೆಂದು ನಿಶ್ಚಯಿಸಿಕೊಂಡು ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಸನ್ಮಾನ ಮಾಡಿ ಶಿವಸ್ವಾಮಿಗೂ ವಯೋನುಗುಣವಾದ ಫಲವಸ್ತ್ರಗಳಿಂದ ಅನುಗ್ರಹ ಮಾಡಿ ಮನೆಗೆ ಕಳುಹಿಸಿಕೊಟ್ಟರು. ಶಿವಸ್ವಾಮಿಯು ಮಾತಾಪಿತೃವಿಯೋಗಾನಂತರ ಅಣ್ಣಂದಿರಾದ ಲಕ್ಷ್ಮೀನರಸಿಂಹಶಾಸ್ತ್ರಿಗಳವರಿಂದ ವಿಶೇಷವಾಗಿ ಪ್ರೀತಿಸಲ್ಪಟ್ಟು ಅವರ ಪೋಷಣೆಯಲ್ಲಿದ್ದಂತೆ ಹಿಂದೆ ಹೇಳಿದೆಯಷ್ಟೆ. ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಈ ಅನುಜನು ಪ್ರಾಣವಾಗಿದ್ದನು. ಶಾಸ್ತ್ರಿಗಳು ಈತನನ್ನು ಯಾವಾಗಲೂ ತಮ್ಮ ತೊಡೆಯ ಮೇಲೆಯೇ ಕುಳ್ಳಿರಿಸಿಕೊಂಡು ಈತನಿಗೆ ಹೆಚ್ಚಾಗಿ ಶ್ರಮವನ್ನು ಕೊಡದೆ ಅನೇಕ ದೇವತಾಸ್ತುತಿಗಳನ್ನು ಹೇಳಿಕೊಟ್ಟು ಅದರ ಅರ್ಥವನ್ನು ಸುಲಭವಾಗಿ ತಿಳಿಸುತ್ತ ಈತನ ಬುದ್ಧಿಶಕ್ತಿಯನ್ನೂ ಸದ್ವಾಸನಾ ಬಲವನ್ನೂ ನೋಡಿ ನೋಡಿ ಹಿಗ್ಗುತ್ತಲಿದ್ದರು. ಇಂತಹ ತಮ್ಮನಿಗೆ ಕ್ರೋಧನ ಸಂವತ್ಸರದ ಜ್ಯೇಷ್ಠ ಶುದ್ಧದಲ್ಲಿ ವಿಧ್ಯುಕ್ತವಾಗಿ ಉಪನಯನ ಸಂಸ್ಕಾರವನ್ನು ಮಾಡಿ, ಶ್ರಾವಣ ಮಾಸದಲ್ಲಿ ಪ್ರಥಮೋಪಾಕರ್ಮವಾದ ಕೂಡಲೇ ಬ್ರಾಹ್ಮಣನಿಗೆ ಮುಖ್ಯವಾದ ವೇದಾಧ್ಯಯನವನ್ನು ಮಾಡಿಸಲು ಪ್ರಾರಂಭಿಸಿದ್ದರು.

ಶ್ರೀ ಸ್ವಾಮಿಗಳವರು ತಮ್ಮ ಸಂಸ್ಥಾನದ ವಿಷಯದಲ್ಲಿ ವಿಶೇಷವಾದ ಅಭಿಮಾನವುಳ್ಳವರಾಗಿಯೂ ತಮ್ಮ ವಿಷಯದಲ್ಲಿ ಹೆಚ್ಚಾದ ಭಕ್ತಿಯುಳ್ಳವರಾಗಿಯೂ ಪ್ರಾಜ್ಞರಾಗಿಯೂ ಇದ್ದ ಮುಮ್ಮಡಿ ಶ್ರೀಮತ್ಕೃಷ್ಣರಾಜ ಪ್ರಭುಗಳವರಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಿ ಅವರೊಡನೆ ದೀರ್ಘವಾಗಿ ಆಲೋಚನೆಯನ್ನು ಮಾಡಿ ಕುಣಿಗಲ್ ರಾಮಶಾಸ್ತ್ರಿಗಳ ಮೂರನೆಯ ಕುಮಾರನಾದ ಶಿವಸ್ವಾಮಿಯನ್ನೇ ಶೃಂಗೇರಿಪೀಠಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡತಕ್ಕದ್ದೆಂದು ನಿಷ್ಕರ್ಷೆ ಮಾಡಿದರು. ಈ ವಿಷಯವನ್ನು ಶ್ರೀಸ್ವಾಮಿಗಳವರು ಲಕ್ಷ್ಮೀನರಸಿಂಹ ಶಾಸ್ತ್ರಿಗಳವರಿಗೆ ಆಪ್ತರಾದ ಜನಗಳ ಮೂಲಕವಾಗಿ ಹೇಳಿ ಕಳುಹಿಸಿದರು. ಆಗ್ಗೆ ಲಕ್ಷ್ಮೀನರಸಿಂಹ ಶಾಸ್ತ್ರಿಗಳಿಗೆ ಪುತ್ರ ಸಂತತಿಯಿರಲಿಲ್ಲ. ತಮ್ಮನಾದ ಶಿವಸ್ವಾಮಿಯನ್ನೇ ಪುತ್ರನನ್ನಾಗಿ ಭಾವಿಸಿಕೊಂಡು ಅತಿಯಾಗಿ ಪ್ರೀತಿಸುತ್ತ ಮಾತಾಪಿತೃವಿಯೋಗದಿಂದ ದುಃಖಿತನಾಗಿದ್ದ ಆ ಬಾಲಕನಿಗೆ ತಮ್ಮ ಆದರದಿಂದ ಆ ದುಃಖವನ್ನು ಮರೆಯಿಸಿ ಸಂರಕ್ಷಣೆ ಮಾಡುತ್ತಲಿದ್ದರು. ಅಷ್ಟು ಪ್ರೀತಿಗೆ ಪಾತ್ರನಾಗಿದ್ದು ಲೋಕ ವ್ಯಾಪಾರವನ್ನೇ ತಿಳಿಯದ ಆ ಬಾಲಕನಿಗೆ ಸಂನ್ಯಾಸವನ್ನು ಕೊಡಿಸಿ ಆತನ ಸಂಬಂಧವನ್ನು ಕಳೆದುಕೊಳ್ಳುವುದು ಈ ಲಕ್ಷ್ಮೀನರಸಿಂಹ ಶಾಸ್ತ್ರಿಗಳಿಗೆ ಇಷ್ಟವಾಗಿದ್ದೀತೆ ? ಎಂದಿಗೂ ಇಷ್ಟವಾಗಿರಲಿಲ್ಲ. ಸ್ವಾಮಿಗಳ ಅಭಿಪ್ರಾಯವನ್ನು ತಿಳಿಸುವುದಕ್ಕೆ ಬಂದ ಜನರು ತಮಗೆ ಮಿತ್ರರಾಗಿಯೂ ಹಿತಚಿಂತಕರಾಗಿಯೂ ಇದ್ದರೂ ಆ ಸಂದರ್ಭದಲ್ಲಿ ಅವರುಗಳು ತಮಗೆ ಶತ್ರುಗಳೆಂಬ ಭಾವನೆಯು ಶಾಸ್ತ್ರಿಗಳವರಿಗುಂಟಾಯಿತು. ಇದರಿಂದ ಮಧ್ಯಸ್ಥರಾಗಿ ಬಂದವರಿಗೆ ಶಾಸ್ತ್ರಿಗಳವರಲ್ಲಿ ತಿರಸ್ಕಾರ ಸಂಪಾದನೆಯಾಯಿತೇ ಹೊರತು ಕಾರ್ಯಸಿದ್ಧಿಯಾಗಲಿಲ್ಲ. ಮಾಧ್ಯಸ್ಥ್ಯಕ್ಕೆ ಬಂದ ಜನರು ಧರ್ಮಸಂಕಟವಾಗಿದ್ದ ಈ ವಿಚಾರದಲ್ಲಿ ಇತಿಕರ್ತವ್ಯತಾ ಮೂಢರಾಗಿ ಈ ಕಾರ್ಯವು ನಮಗೆ ಸಾಧ್ಯವಾಗಲಾರದೆಂದು ಶ್ರೀಸ್ವಾಮಿಗಳವರಿಗೆ ತಿಳಿಯಪಡಿಸಿದರು. ಸ್ವಾಮಿಗಳವರೇ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರನ್ನು ತಮ್ಮಲ್ಲಿಗೆ ಕರೆಸಿಕೊಂಡು ಅವರಿಗೆ ಶಾಸ್ತ್ರ ಮರ್ಯಾದೆಯನ್ನನುಸರಿಸಿಯೂ, ಲೋಕಮರ್ಯಾದಾನುಗುಣವಾಗಿಯೂ ಅನೇಕವಾಗಿ ಹಿತಬೋಧನೆಯನ್ನು ಮಾಡಿ ತಮಗೆ ಗುರುದಕ್ಷಿಣೆಯಾಗಿ ಅವರ ಅನುಜನನ್ನು ಕೊಡಬೇಕೆಂದು ನಿರ್ಬಂಧಿಸಿದರು. ಶಾಸ್ತ್ರಿಗಳವರು ಸ್ವತಃ ಪಂಡಿತರಾಗಿದ್ದು ಪ್ರಾಣಿಗಳಿಗೆ ಎಲ್ಲವೂ ಕರ್ಮಾನುಸಾರವಾಗಿ ನಡೆವುವಲ್ಲದೆ ಅನ್ಯಥಾ ಮಾಡಲು ಯಾರಿಗೂ ಸಾಧ್ಯವಲ್ಲವೆಂಬ ಅಂಶವನ್ನೂ ಶ್ರೀಸ್ವಾಮಿಗಳವರ ಗೌರವ, ಅವರ ಪ್ರಭಾವ, ಅವರಿಗೆ ಇರತಕ್ಕ ರಾಜ ಸಹಾಯ ಇವು ಮೊದಲಾದ ಸಂಗತಿಗಳನ್ನೂ ಚೆನ್ನಾಗಿ ತಿಳಿದವರಾಗಿದ್ದರೂ, ತಮಗೆ ಅನುಜನಲ್ಲಿರತಕ್ಕ ಪ್ರೀತಿಯು ಈ ಶಾಸ್ತ್ರಿಗಳನ್ನು ಯಾವ ವಿಧದಿಂದಲೂ ಶ್ರೀಸ್ವಾಮಿಗಳವರ ಅಪ್ಪಣೆಯನ್ನು ಕುರಿತು ವಿಚಾರ ಮಾಡಿ ಉತ್ತರ ಹೇಳುವುದಕ್ಕೆ ಅವಕಾಶ ಕೊಡದೆ ಶ್ರೀಸ್ವಾಮಿಗಳವರ ಇಷ್ಟಕ್ಕನುಸಾರವಾಗಿ ನಡೆಯುವುದು ಸಾಧ್ಯವಲ್ಲವೆಂಬುದೊಂದನ್ನೇ ಉತ್ತರವನ್ನಾಗಿ ಹೇಳುವಂತೆ ಮಾಡಿತು.

ಈ ಲಕ್ಷ್ಮೀನರಸಿಂಹ ಶಾಸ್ತ್ರಿಗಳಿಗೆ ತಮ್ಮಲ್ಲಿರತಕ್ಕ ಭಕ್ತಿಗೌರವಗಳನ್ನು ತಿಳಿದಿದ್ದ ಶ್ರೀಗಳವರು ಅನುಜನಲ್ಲಿರತಕ್ಕ ಅಪೂರ್ವವಾದ ಪ್ರೇಮದಿಂದ ಶಾಸ್ತ್ರಿಗಳು ತಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ಹೇಳುತ್ತಲಿರುವುದನ್ನು ಅರಿತು ಸಂತೋಷಿಸಿದರೇ ಹೊರತು ಅಸಮಾಧಾನ ಪಡಲಿಲ್ಲ. ಹಾಗಿದ್ದರೂ ಈಶ್ವರ ಪ್ರೇರಣೆಯಿಂದಲೂ ಶಿವಸ್ವಾಮಿಯ ಪ್ರಾಕ್ತನ ಸತ್ಕರ್ಮ ಪರಿಪಾಕ ಕಾಲವು ಒದಗಿ ಬಂದುದರಿಂದಲೂ ಶ್ರೀಸ್ವಾಮಿಗಳವರ ಪ್ರಯತ್ನವು ನಡೆಯುತ್ತಲಿದ್ದದ್ದರಿಂದಲೂ ಪುನಃ ಪುನಃ ಶಾಸ್ತ್ರಿಗಳಿಗೆ ಸಮಾಧಾನೋಕ್ತಿಗಳನ್ನು ಹೇಳುತ್ತ ಆ ಬಾಲಕನ ಜಾತಕದಂತೆ ಹದಿನಾರನೆಯ ವರ್ಷದಲ್ಲಿ ಆತನಿಗೆ ಪ್ರಬಲವಾದ ಒಂದು ಗಂಡವಿರುವುದಾಗಿ ಶಾಸ್ತ್ರಿಗಳಿಗೆ ಸೂಚಿಸಿದರು. ಈ ಸೂಚನೆಯು ತಮಗೆ ಸ್ವಲ್ಪ ಸಾಧಕವಾದುದೆಂದೇ ಶಾಸ್ತ್ರಿಗಳು ತಿಳಿದುಕೊಂಡು ಜಾತಕದಂತೆ ಸಮೀಪ ಕಾಲದಲ್ಲಿಯೇ ಮಾರಕ ದಶೆಯು ಪ್ರಾಪ್ತವಾಗುವುದಾದರೆ ಈ ವಿಷಯವನ್ನು ಪೂರ್ವಭಾವಿಯಾಗಿಯೇ ತಿಳಿದಿರತಕ್ಕ ಸ್ವಾಮಿಗಳವರು ಅಲ್ಪಾಯುಷ್ಯವುಳ್ಳ ಈ ಬಾಲಕನನ್ನು ಸಂಸ್ಥಾನಾದಿಪತ್ಯಕ್ಕೆ ನಿಯಮಿಸೋಣವು ಯುಕ್ತವಲ್ಲವಾಗಿ ಬೇರೆ ಜಾತಕವನ್ನು ನೋಡಿ ದೀರ್ಘಾಯುಷ್ಯವುಳ್ಳ ಶಿಷ್ಯರನ್ನು ಪರಿಗ್ರಹಿಸುವುದು ಆವಶ್ಯಕವೆಂದು ತಿಳಿಸಿಕೊಂಡರು. ಶ್ರೀ ಶ್ರೀಗಳವರು ಶಾಸ್ತ್ರಿಗಳವರ ಮಾತನ್ನು ಕೇಳಿ ಸ್ವಲ್ಪ ನಕ್ಕು ಜಾತಕರೀತಿಯಿಂದ ನಿಮ್ಮ ತಮ್ಮನಾದ ಶಿವಸ್ವಾಮಿಯು ಅಲ್ಪಾಯುರ್ಯೋಗವುಳ್ಳವನೇ ನಿಜ. ಆದ್ದರಿಂದಲೇ ಈತನಿಗೆ ಬರಬಹುದಾದ ಗಂಡವು ತುರೀಯಾಶ್ರಮದ ಪ್ರಭಾವದಿಂದಲೂ ಶ್ರೀ ಶಾರದಾಪೀಠದ ಮಹಿಮೆಯಿಂದಲೂ ಪರಿಹೃತವಾಗಿ ಶ್ರೀ ಶಂಕರಭಗವತ್ಪಾದರಂತೆ ಜೀವಿಸುವನೆಂಬ ನಂಬಿಕೆಯು ನಮಗೆ ಸಂಪೂರ್ಣವಾಗಿರುವುದರಿಂದಲೇ ನಾವು ಇಷ್ಟು ವಿಧವಾಗಿ ನಿಮ್ಮನ್ನು ಬಲಾತ್ಕರಿಸುತ್ತೇವೆ ಎಂದು ಹೇಳಿದರು. ಇದರ ಮೇಲೆ ಶಾಸ್ತ್ರಿಗಳಿಗೆ ಸ್ವಲ್ಪ ಭೀತಿಯುಂಟಾಯಿತು. ಆದರೂ ಅವರು ಸ್ವಾಮಿಗಳವರ ಇಷ್ಟವನ್ನು ಅಂಗೀಕರಿಸದೆಯೇ ಅಪ್ಪಣೆಯನ್ನು ಪಡೆದು ಮನೆಗೆ ಹೊರಟುಹೋದರು.

ಅನಂತರ ಸ್ವಾಮಿಗಳವರಿಗೂ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೂ ನಡೆದ ಸಂಭಾಷಣೆಯು ಶ್ರೀಮತ್ಕೃಷ್ಣರಾಜ ಪ್ರಭುಗಳವರಿಗೆ ಶ್ರುತವಾಯಿತು. ಅವರು ಲಕ್ಷ್ಮೀನರಸಿಂಹಶಾಸ್ತ್ರಿಗಳನ್ನು ಕರೆಸಿಕೊಂಡು ಶ್ರೀ ಸ್ವಾಮಿಗಳವರು ನಿಮ್ಮ ತಮ್ಮಂದಿರಾದ ಶಿವಸ್ವಾಮಿ ಶಾಸ್ತ್ರಿಗಳನ್ನು ತಮಗೆ ಗುರುದಕ್ಷಿಣೆಯಾಗಿ ಕೊಡಬೇಕೆಂದು ನನ್ನನ್ನು ಕೇಳಿರುವರು. ನಿಮ್ಮ ತಂದೆಗಳಾದ ರಾಮಶಾಸ್ತ್ರಿಗಳವರು ನಿರ್ಯಾಣ ಕಾಲದಲ್ಲಿ ತಮ್ಮ ಮೂರು ಜನ ಮಕ್ಕಳನ್ನೂ ನನಗೆ ಒಪ್ಪಿಸಿ ಹೊರಟು ಹೋದರು. ಅವರಲ್ಲಿ ಒಬ್ಬರು ಅಂದರೆ ಮಧ್ಯಮರಾದ ಯಜ್ಞನಾರಾಯಣ ಶಾಸ್ತ್ರಿಗಳು ವಿಧಿವಶರಾದರು. ಉಳಿದವರಲ್ಲಿ ನಿಮ್ಮನ್ನು ನನಗೋಸ್ಕರ ನಿಲ್ಲಿಸಿಕೊಂಡು

ಶಿವಸ್ವಾಮಿಶಾಸ್ತ್ರಿಗಳನ್ನು ನಮ್ಮ ಗುರುಗಳಿಗೆ ದಕ್ಷಿಣೆಯಾಗಿ ಕೊಡಲು ಸಂಕಲ್ಪಿಸಿರುವೆನು. ಈ ವಿಷಯದಲ್ಲಿ ಸಂಪೂರ್ಣವಾದ ಅಧಿಕಾರವು ನನಗಿರುವುದು. ಇದಕ್ಕೆ ಅನ್ಯಥಾ ಹೇಳಬಾರದೆಂದು ನುಡಿದು ಲಕ್ಷ್ಮೀನರಸಿಂಹ ಶಾಸ್ತ್ರಿಗಳಿಗೆ ಬದಲು ಮಾತನಾಡಲು ಅವಕಾಶವನ್ನು ಕೊಡದೆ ಅವರನ್ನು ಮನೆಗೆ ಕಳುಹಿಸಿ, ತಾ|| 1789ನೆಯ ಅಕ್ಷಯ ಸಂವತ್ಸರದ (1866ನೆಯ ಇಸವಿ) ಆಷಾಢ ಬಹುಳ ಷಷ್ಠೀ ದಿವಸ ಕುಣಿಗಲ್ ರಾಮಶಾಸ್ತ್ರಿಗಳವರ ಮೂರನೆಯ ಪುತ್ರರಾದ ಶಿವಸ್ವಾಮಿ ಶಾಸ್ತ್ರಿಗಳವರಿಗೆ ಶೃಂಗೇರೀ ಗುರುಪೀಠದ ಆಶ್ರಮ ಸ್ವೀಕಾರಕ್ಕೆ ಲಗ್ನವನ್ನು ನಿಶ್ಚಯ ಮಾಡಿ ಅದಕ್ಕೆ ಬೇಕಾಗುವ ಸಲಕರಣೆಗಳನ್ನೆಲ್ಲಾ ಸಿದ್ಧ ಪಡಿಸುವಂತೆ ಅರಮನೆಯ ಅಧಿಕಾರಿಗಳಿಗೆ ಅಪ್ಪಣೆ ಮಾಡಿದರು. ಅಕ್ಷಯ ಸಂವತ್ಸರದ ಆಷಾಢ ಬಹುಳ ಪಂಚಮಿಯ ದಿವಸ ಮಧ್ಯಾಹ್ನ ನಾಲ್ಕು ಗಂಟೆಯ ಸಮಯದಲ್ಲಿ ಅರಮನೆಯಿಂದ ಜನರನ್ನು ಕಳುಹಿಸಿ (ಮ್ಯಾನಾದ) ಮೇಲೆ ಶಿವಸ್ವಾಮಿಶಾಸ್ತ್ರಿಗಳನ್ನು ತಮ್ಮ ಅಂತಃಪುರಕ್ಕೆ ಬರಮಾಡಿಕೊಂಡರು. ಅರಮನೆಗೆ ಬಂದ ಆ ಬಾಲಕರನ್ನು ಅತಿಪ್ರೇಮದಿಂದ ತಮ್ಮ ಉತ್ಸಂಗದ ಮೇಲೆ ಕುಳ್ಳಿರಿಸಿಕೊಂಡು ಅವರನ್ನು ಮಾತನಾಡಿಸುತ್ತ ಬಿಚ್ಚಿಹೋಗಿದ್ದ ಅವರ ಶಿಖೆಯನ್ನು ಕಟ್ಟುವುದಕ್ಕೆ ಎಷ್ಟು ಸಾರಿ ಪ್ರಭುಗಳವರು ಪ್ರಯತ್ನ ಮಾಡಿದರೂ ಹೆಚ್ಚಾದ ಕೇಶಪಾಶಗಳು ಇರಲಿಲ್ಲವಾಗಿ ಕಟ್ಟುವುದಕ್ಕೆ ಬಾರದಿದ್ದುದನ್ನು ಕಂಡು, 'ಏನಪ್ಪಾ ಮಗುವೇ. ನಿಮ್ಮ ಶಿಖೆಯು ಎಷ್ಟು ಕಟ್ಟಿದರೂ ನಿಲ್ಲುವುದೇ ಇಲ್ಲವಲ್ಲ' ಎಂಬುದಾಗಿಯೂ ಹಸನ್ಮುಖದೊಡನೆ ಸಂತೋಷದಿಂದ ಕೂಡಿ 'ಈ ದಿನ ನಿಮ್ಮನ್ನು ಸುಲಭವಾಗಿ ಕರೆದು ನನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡಿರುವೆನು. ನಾಳೆಯ ದಿನ ನಿಮಗೆ ನಾನು ನಮಸ್ಕಾರ ಮಾಡಿ ದೂರದಲ್ಲಿ ನಿಲ್ಲಬೇಕಾಗುವುದಲ್ಲಾ' ಎಂಬುದಾಗಿಯೂ ಕೆಲವು ಮಾತುಗಳನ್ನು ಆ ಬಾಲಕನ ಸಂಗಡ ನುಡಿಯುತ್ತ ಅವರ ಧೈರ್ಯವನ್ನು ಪರೀಕ್ಷಿಸಿದರು. ಬಳಿಕ ಅಂತಃಪುರದ ಜನರಿಗೆಲ್ಲಾ 'ಈ ಶಾಸ್ತ್ರಿಗಳು ನಾಳೆಯ ದಿನ ನಮ್ಮಗಳಿಗೆ ಗುರುಗಳಾಗುತ್ತಾರೆ. ಇವರಿಗೆ ಎಲ್ಲರೂ ನಮಸ್ಕಾರ ಮಾಡಬೇಕು' ಎಂದು ಹೇಳಿ ಎಲ್ಲರಿಂದಲೂ ನಮಸ್ಕಾರಗಳನ್ನು ಮಾಡಿಸಿ ಶಿವಸ್ವಾಮಿಗಳಿಗೆ ಅನೇಕ ವಿಧವಾದ ಫಲಗಳನ್ನು ತರಿಸಿಕೊಟ್ಟು ಆ ದಿನವೇ ರಾಜ ಮರ್ಯಾದೆಯಿಂದ ಅವರನ್ನು ಮನೆಗೆ ಕಳುಹಿಸಿದರು.

ಅನುಜನಾದ ಶಿವಸ್ವಾಮಿಯ ಬಲವತ್ತರವಾದ ಕರ್ಮಕ್ಕನುಸಾರವಾಗಿ ಆ ಕಾಲದಲ್ಲಿ ಒದಗಿ ಬಂದ ರಾಜನಿರ್ಬಂಧವನ್ನೂ ಮಹಾಪುರುಷರಾದ ಗುರುಗಳ ನಿರ್ಬಂಧವನ್ನೂ ತಿಳಿದವರಾಗಿ ಈ ವಿಷಯದಲ್ಲಿ ತಾವು ಮಾಡುವ ಪ್ರತಿಬಂಧವು ಫಲಕಾರಿಯಾಗಲಾರದೆಂದು ಲಕ್ಷ್ಮೀನರಸಿಂಹ ಶಾಸ್ತ್ರಿಗಳ ಮನಸ್ಸಿಗೆ ನಿಶ್ಚಯವಾಯಿತು. ಹಾಗಿದ್ದರೂ ತಮ್ಮನ ಮೇಲಣ ಮಮತೆಯು ಬಹಳವಾಗಿ ಬಾಧಿಸಿತು. ಇದರಿಂದ ಅವರು ಮನೆಯಿಂದ ಈಚೆಗೆ ಹೊರಡದೆ

ಕೇವಲ ಚಿಂತಾಕ್ರಾಂತರಾಗಿದ್ದರು. ಅಕ್ಷಯ ಸಂವತ್ಸರದ ಆಷಾಢ ಬಹುಳ ಷಷ್ಠೀ ದಿವಸ ಪ್ರಾತಃಕಾಲ 6 ಗಂಟೆಗೆ ಶಿವಸ್ವಾಮಿಯನ್ನು ಶ್ರೀಮಠಕ್ಕೆ ಕರೆದುಕೊಂಡು ಬರಲು ಅರಮನೆಯಿಂದ ಮ್ಯಾನಾ ಛತ್ರ ಚಾಮರ ಮೊದಲಾದ ಮರ್ಯಾದೆಗಳೊಡನೆ ಅರಮನೆಯ ಇಲಾಖೆಯವರೂ ಮಠದ ಜನರೂ ಲಕ್ಷ್ಮೀನರಸಿಂಹಶಾಸ್ತ್ರಿಗಳ ಮನೆಗೆ ಬಂದರು. ಬಾಲಕನಾದ ಶಿವಸ್ವಾಮಿಶಾಸ್ತ್ರಿಗೆ ಮೊದಲನೆಯ ದಿನ ಅರಮನೆಯಿಂದ ಮನೆಗೆ ಬಂದದ್ದು ಮೊದಲುಗೊಂಡು ವಿಲಕ್ಷಣವಾದ ತಲೆಶೂಲೆ ಪ್ರಾರಂಭವಾಗಿ ಆ ರಾತ್ರಿಯೆಲ್ಲಾ ಬಹಳ ತೊಂದರೆ ಪಡಿಸಿತು. ಪ್ರಾತಃಕಾಲದಲ್ಲಿಯೂ ಅದರ ಬಾಧೆಯು ಪೂರ್ಣವಾಗಿ ತಪ್ಪಿರಲಿಲ್ಲ. ಆಗ ರಾಮಶಾಸ್ತ್ರಿಗಳವರ ಕಾಲದಿಂದಲೂ ಅವರ ಮನೆಯಲ್ಲಿಯೇ ಇದ್ದುಕೊಂಡು ಶಾಸ್ತ್ರಿಗಳವರ ಹೆಚ್ಚಾದ ಪ್ರೀತಿಗೆ ಪಾತ್ರರಾಗಿ ಅವರ ಅನಂತರ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರಲ್ಲಿಯೂ ಮೊದಲಿನಂತೆ ಪ್ರೀತಿಯನ್ನು ಸಂಪಾದಿಸಿಕೊಂಡು ಆ ಮನೆಯ ಜನರಂತೆಯೇ ಇರುತ್ತಲಿದ್ದ ಜೋಳ ದೇಶೀಯರಾದ ಸುಬ್ರಹ್ಮಣ್ಯ ಶಾಸ್ತ್ರಿಗಳೆಂಬುವರು ಧೈರ್ಯವನ್ನು ತೆಗೆದುಕೊಂಡು ಶಿವಸ್ವಾಮಿಗೆ ಸ್ನಾನ ಮಾಡಿಸಿ ಪ್ರಾತಸ್ಸಂಧ್ಯಾವಂದನೆ, ಅಗ್ನಿಕಾರ್ಯಗಳನ್ನು ಮಾಡಿಸಿ ವ್ಯಸನಾಕ್ರಾಂತರಾಗಿ ಮಲಗಿದ್ದ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಕಾಲೋಚಿತವಾಗಿ ಸಮಾಧಾನೋಕ್ತಿಗಳನ್ನು ಹೇಳಿ ಶಿವಸ್ವಾಮಿಯಿಂದ ಅಣ್ಣಂದಿರಿಗೆ ನಮಸ್ಕಾರ ಮಾಡಿಸಿ ಅವರನ್ನು ಎತ್ತಿಕೊಂಡು ಬಂದು ಮ್ಯಾನಾದಲ್ಲಿ ಕುಳ್ಳಿರಿಸಿ, ಅವರ ಸಂಗಡ ತಾವು ಇದ್ದು ಮಠಕ್ಕೆ ಕರೆದುಕೊಂಡು ಬಂದು ಶ್ರೀಗಳವರ ದರ್ಶನ ಮಾಡಿಸಿದರು.

ಶ್ರೀ ಸ್ವಾಮಿಗಳವರು ತಮ್ಮ ಅಭಿಪ್ರಾಯಕ್ಕನುಗುಣವಾಗಿ ಸಂನ್ಯಾಸವನ್ನು ಸ್ವೀಕರಿಸುವುದಕ್ಕೆ ಬಂದಿರುವ ಬಾಲಕನನ್ನು ನೋಡಿ ಪರಮ ಸಂತೋಷದಿಂದ ಅನುಗ್ರಹಿಸಿ ಮುಂದಿನ ಕೆಲಸಗಳನ್ನು ನೆರವೇರಿಸಲು ಮೊದಲೇ ನಿಷ್ಕರ್ಷೆಯಾಗಿದ್ದ ಲಕ್ಷ್ಮೀರಮಣ ಸ್ವಾಮಿಯವರ ದೇವಸ್ಥಾನಕ್ಕೆ ಕಳುಹಿಸಿದರು. ಅಲ್ಲಿ ಶಿವಸ್ವಾಮಿ ಶಾಸ್ತ್ರಿಗಳಿಗೆ ಸ್ನಾನವನ್ನು ಮಾಡಿಸಿ ಸಂನ್ಯಾಸಾಂಗವಾದ ಅಷ್ಟಶ್ರಾದ್ಧಗಳು, ಪುರುಷಸೂಕ್ತಹೋಮ, ವಿರಜಾಹೋಮ ಇವು ಮೊದಲಾದ ಕರ್ಮಕಲಾಪಗಳೆಲ್ಲವೂ ವಿಧಿವತ್ತಾಗಿ ಜರುಗಿಸಲ್ಪಟ್ಟವು. ಪ್ರೈಷೋಚ್ಚಾರಣೆಗೋಸ್ಕರ ಪಾದಚಾರಿಯಾಗಿ ಶಿವಸ್ವಾಮಿಯವರನ್ನು ಮೈಸೂರು ಕಾರಂಜಿಕೆರೆಯೆಂಬ ಜಲಾಶಯಕ್ಕೆ ಕರೆದುಕೊಂಡು ಹೋದರು. ಶ್ರೀ ನರಸಿಂಹಭಾರತೀ ಸ್ವಾಮಿಗಳವರು ತಟಾಕಕ್ಕೆ ದಯಮಾಡಿಸಿ ಶಿವಸ್ವಾಮಿಯವರು ಯಥೋಕ್ತವಾಗಿ ನೀರಿನಲ್ಲಿ ಇಳಿದು ಪ್ರೈಷಮಂತ್ರವನ್ನು ಉಚ್ಚಾರಣೆ ಮಾಡಿದ ಕೂಡಲೇ ತಮ್ಮ ಸಮೀಪಕ್ಕೆ ಕರೆದುಕೊಂಡು ಅವರಿಗೆ ಆಶ್ರಮೋಚಿತವಾದ ಕೌಪೀನ ಕಟಿಸೂತ್ರ ಕಾಷಾಯಗಳನ್ನೂ ದಂಡಕಮಂಡಲು ಪಾದುಕೆಗಳನ್ನೂ ಕೊಟ್ಟು ತಮ್ಮ ಸಂಗಡವೇ ಶಿಷ್ಯರನ್ನು ಕರೆದುಕೊಂಡು ಮತ್ತೆ ಲಕ್ಷ್ಮೀರಮಣ

ದೇವಸ್ಥಾನಕ್ಕೆ ಬಂದರು. ಅಲ್ಲಿಯೇ ಶ್ರೀನರಸಿಂಹ ಭಾರತೀ ಸ್ವಾಮಿಗಳವರಿಂದ ಈ ಬಾಲಯತಿಗಳಿಗೆ ಮಹಾವಾಕ್ಯೋಪದೇಶವು ಮಾಡಲ್ಪಟ್ಟು ಯೋಗಪಟ್ಟಾದಿ ಸಕಲ ಸಂಸ್ಕಾರಗಳೂ ನೆರವೇರಿಸಲ್ಪಟ್ಟವು. ಆ ಸಮಯದಲ್ಲಿ ಮುಮ್ಮಡಿ ಶ್ರೀಮತ್ಕೃಷ್ಣರಾಜ ಮಹಾಪ್ರಭುಗಳವರು ಮತ್ತು ಆಸ್ಥಾನದ ವಿದ್ವಾಂಸರುಗಳು, ಮೈಸೂರು ಸ್ಥಳದ ಮಹಾಜನ ಬ್ರಾಹ್ಮಣರುಗಳು ಮೊದಲಾದವರಿಂದ ಸಭೆಯು ನಿಬಿಡೀಕೃತವಾಗಿತ್ತು. ಶಿಷ್ಯಸ್ವಾಮಿಗಳಿಗೆ ಯೋಗ ಪಟ್ಟವನ್ನು ಕೊಡತಕ್ಕ ಕಾಲದಲ್ಲಿ ವಿಚಾರವುಂಟಾಗಿ ಶ್ರೀಗಳವರು ತಮ್ಮ ಪರಮಗುರುಗಳು ಬಹಳ ಪ್ರಸಿದ್ಧರಾಗಿಯೂ ಮಹಾತಪಸ್ವಿಗಳಾಗಿಯೂ ಇದ್ದುದರಿಂದ ಅವರ ಹೆಸರಿನಿಂದಲೇ ತಮ್ಮ ಈ ಶಿಷ್ಯರಿಗೆ ಯೋಗಪಟ್ಟವನ್ನು ಕೊಡಬೇಕೆಂದು ಅಭಿಪ್ರಾಯಪಟ್ಟರು. ಸಭೆಯನ್ನು ಅಲಂಕರಿಸಿದ್ದ ಶ್ರೀ ಮತ್ಕೃಷ್ಣರಾಜ ಪ್ರಭುಗಳವರು ತಮ್ಮ ಗುರುಗಳಾದ ನರಸಿಂಹಭಾರತೀಸ್ವಾಮಿಗಳವರ ಹೆಸರಿಗೆ ಅನುವೃತ್ತಿ ಇರಬೇಕೆಂದು ತಿಳಿಸಿದರು. ಸಭಾಮಧ್ಯದಲ್ಲಿದ್ದ ಪಂಡಿತರುಗಳೂ ಇತರರೂ ಚಿಕ್ಕಸ್ವಾಮಿಗಳವರಿಗೆ ಜನನ ಮೊದಲುಗೊಂಡು ಈಶ್ವರಪ್ರೇರಣೆಯಿಂದ ಅನ್ವರ್ಥನಾಮವಾಗಿ ಬಂದಿರತಕ್ಕ ಶಿವಶಬ್ದಕ್ಕೂ ಅನುವೃತ್ತಿ ಇರುವುದು ಆವಶ್ಯಕವೆಂದು ಅಭಿಪ್ರಾಯ ಪಟ್ಟರು. ಬಹಳ ಸರ್ವಸಮ್ಮತವಾಗಿ ಶ್ರೀ ಶ್ರೀ ಗುರುಸ್ವಾಮಿಗಳಾದ ನರಸಿಂಹಭಾರತಿಗಳವರಿಂದ ತಮ್ಮ ಶಿಷ್ಯರಿಗೆ ''ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತಿ' ಎಂಬುದಾಗಿ ಯೋಗಪಟ್ಟವು ಮಾಡಲ್ಪಟ್ಟಿತು.

ಈ ರೀತಿಯಿಂದ ವಿಧ್ಯುಕ್ತವಾದ ಎಲ್ಲಾ ಸಂಸ್ಕಾರಗಳೂ ಪೂರ್ಣವಾಗಬೇಕಾದರೆ ಸಾಯಂಕಾಲವು ಪ್ರಾಪ್ತವಾಯಿತು. ಚಿಕ್ಕ ಶ್ರೀಗಳವರು ಬಾಲ್ಯ ವಯಸ್ಸಿನವರಾಗಿದ್ದುದರಿಂದಲೂ ಮೊದಲನೆಯ ದಿನವೇ ತಲೆಶೂಲೆಯಿಂದ ಶ್ರಮಪಟ್ಟವರಾಗಿದ್ದುದರಿಂದಲೂ ಆ ದಿನ ಸೂರ್ಯೋದಯ ಮೊದಲುಗೊಂಡು ಸೂರ್ಯಾಸ್ತಮಯ ಪರ್ಯಂತ ಆಹಾರವಿಲ್ಲದೆ ಶ್ರಮಪಟ್ಟಿದ್ದುದರಿಂದಲೂ ಬಹಳ ಬಳಲಿದ್ದರು. ಇವರಿಗೆ ಸ್ನಾನವನ್ನು ಮಾಡಿಸಿ ದೊಡ್ಡ ಸ್ವಾಮಿಗಳವರು ತಮ್ಮ ಸಮೀಪದಲ್ಲಿ ಕುಳ್ಳಿರಿಸಿಕೊಂಡು ಸಾಯಂಕಾಲದ ಆಹ್ನಿಕವನ್ನು ಮಾಡಿಸಿ ಆ ರಾತ್ರಿ ಲಘುವಾಗಿರತಕ್ಕ ಆಹಾರಮಾಡಿಸಿ ತಾವು ಆಹ್ನಿಕಕ್ಕೆ ಕುಳಿತುಕೊಂಡಿದ್ದ ಸ್ಥಳದಲ್ಲಿಯೇ ಒಂದು ಕೃಷ್ಣಾಜಿನದ ಮೇಲೆ ಚಿಕ್ಕ ಶ್ರೀಗಳವರನ್ನು ಮಲಗಿಸುವಂತೆ ಅಪ್ಪಣೆ ಮಾಡಿ ತಮ್ಮ ಆಹ್ನಿಕ, ಪೂಜೆ ಮೊದಲಾದುವುಗಳನ್ನು ನೆರವೇರಿಸಿಕೊಳ್ಳುತ್ತಲಿದ್ದರು.

ತಮ್ಮ ವಯಸ್ಸಿಗೆ ಮೀರಿದ್ದಾಗಿಯೂ ಅನಭ್ಯಸ್ತವಾಗಿಯೂ ಇದ್ದ ಶ್ರಮದಿಂದ ಬಳಲಿದ್ದ ಚಿಕ್ಕ ಸ್ವಾಮಿಗಳವರಿಗೆ ಮಲಗಿದ ಕೂಡಲೇ ಚೆನ್ನಾಗಿ ನಿದ್ರೆಯು ಹಿಡಿಯಿತು. ಸ್ವಲ್ಪ ಕಾಲದ ಮೇಲೆ ಈ ಚಿಕ್ಕ ಶ್ರೀಗಳವರು ಸ್ವಪ್ನದಲ್ಲಿ ಸರ್ವೋಽಹಂ, ಸರ್ವೋಽಹಂ, ಸರ್ವೋಽಹಂ

ಎಂದು ಮೂರುಸಾರಿ ಸ್ಪಷ್ಟವಾಗಿ ಹೇಳಿದರು. ಸಮೀಪದಲ್ಲಿಯೇ ಅನುಷ್ಠಾನದಲ್ಲಿದ್ದ ದೊಡ್ಡ ಶ್ರೀಗಳವರಿಗೆ ಈ ಶಬ್ದವು ಕೇಳಿತು. ಆ ಸಂದರ್ಭದಲ್ಲಿ ಇವರಿಗುಂಟಾದ ಆಶ್ಚರ್ಯವೂ ಸಂತೋಷವೂ ಎಂಥದ್ದಾಗಿರಬಹುದೋ ! ಈ ಬಾಲಯತೀಶ್ವರರ ಪ್ರಾಕ್ತನ ವಾಸನಾಬಲವು ಎಂಥಾದ್ದೋ !! ಈಶ್ವರನ ಸಂಕಲ್ಪವು ಎಂಥದ್ದೋ !!! ಈ ಅಂಶವನ್ನು ಕುರಿತು ಯೋಚಿಸುವುದಕ್ಕೂ ಈಗಿನವರಿಗೆ ಅಸಾಧ್ಯವೆಂದು ಹೇಳುವುದರಲ್ಲಿ ಸಂಕೋಚ ಪಡಬೇಕಾದ ಆವಶ್ಯಕತೆಯೇನೂ ತೋರುವುದಿಲ್ಲ. ವಾಮದೇವಾದಿ ಮಹರ್ಷಿಗಳಂತೆ ಆಜನ್ಮ ಸಿದ್ಧವಾದ ಆತ್ಮಸ್ವರೂಪಜ್ಞಾನವುಳ್ಳವರೆಂದು ಹೇಳಬಹುದಾಗಿರುವಲ್ಲಿ ಆಶ್ರಮಕ್ಕೆ ಮೊದಲು ಶ್ರೀ ನರಸಿಂಹಭಾರತಿಸ್ವಾಮಿಗಳವರು ಇವರನ್ನು ನೋಡುವುದಕ್ಕೆ ಕರೆಸಿಕೊಂಡಿದ್ದ ಕಾಲದಲ್ಲಿ ನಿಮಗೆ ಏನು ಬೇಕು ಎಂದು ಕೇಳಿದ ಪ್ರಶ್ನೆಗೆ ಈ ಬಾಲ ಯತೀಂದ್ರರು ಹೇಳಿದ್ದಾಗಿ ಹಿಂದೆ ತಿಳಿಸಿರುವ ಉತ್ತರವು ಏನಾಶ್ಚರ್ಯ? ಬಾಲ್ಯವಾಗಲಿ, ಯೌವನವಾಗಲಿ, ವೃದ್ಧತ್ವವಾಗಲಿ. ಇಂಥಾ ವಿಷಯಗಳಲ್ಲಿ ವಯಸ್ಸಿನಿಂದ ಪ್ರಯೋಜನವೇನು? ಮುಖ್ಯವಾಗಿ ಮನುಷ್ಯನಿಗೆ ವಾಸನೆಯಿಂದ ಅಲ್ಲವೇ ಎಲ್ಲವೂ ನಡೆಯುವವು? ಈ ಸಣ್ಣಸ್ವಾಮಿಗಳ ಚರ್ಯೆಯನ್ನು ತಿಳಿದುಕೊಂಡರೆ ಇವರ ವಯಸ್ಸು, ಅನುಭವ, ಜ್ಞಾನ ಇವುಗಳನ್ನು ಕುರಿತು ಯೋಚಿಸಲಾಗಿ ಪೂರ್ವ ಕರ್ಮಸಂಸ್ಕಾರ, ಜನ್ಮಾಂತರ ಇವುಗಳನ್ನು ಯಾರು ತಾನೆ ಅಂಗೀಕರಿಸದೆ ಇರಬಹುದು? ಆದ್ದರಿಂದ ಆಸ್ತಿಕನಾದ ಪ್ರತಿಯೊಬ್ಬನೂ ಜನ್ಮಾಂತರವನ್ನೂ, ಕರ್ಮವನ್ನೂ, ಅದೃಷ್ಟವನ್ನೂ ಒಪ್ಪಿಕೊಂಡಲ್ಲದೆ ಮನಸ್ಸಿನಲ್ಲಿ ಉಂಟಾಗುವ ಸಂದೇಹಗಳನ್ನು ಪರಿಹರಿಸಿಕೊಳ್ಳುವುದಕ್ಕೂ ಬರತಕ್ಕ ಆಕ್ಷೇಪಣೆಗಳನ್ನು ಸಮಾಧಾನಗೊಳಿಸುವುದಕ್ಕೂ ಎಂದಿಗೂ ಸಾಧ್ಯವಾಗಲಾರದು.

ಚಿಕ್ಕಸ್ವಾಮಿಗಳವರಿಗೆ ಸಂನ್ಯಾಸಸ್ವೀಕಾರವಾದ ಎರಡನೆಯದಿನ ಸಂಸ್ಥಾನದ ಪದ್ಧತಿಯನ್ನು ಅನುಸರಿಸಿ ಲೌಕಿಕವಾಗಿ ಪಟ್ಟಾಭಿಷೇಕವೆಂಬ ಮಹೋತ್ಸವವು ಜರುಗಿಸಲ್ಪಟ್ಟಿತು. ಈ ಮಹೋತ್ಸವು ನಡೆದಾಗ ಶ್ರೀಕೃಷ್ಣರಾಜ ಪ್ರಭುಗಳವರು ಆಗಿನ ಕಾಲದಲ್ಲಿ ಚೀಫ್ ಕಮೀಷನರಾಗಿದ್ದ ಮಿಸ್ಟರ್ ಬೌರಿಂಗ್ ಸಾಹೇಬರವರೊಡನೆ ಮಠಕ್ಕೆ ದಯಮಾಡಿಸಿ ಚಿಕ್ಕಸ್ವಾಮಿಗಳವರಿಗೆ ವ್ಯಾಖ್ಯಾನ ಸಿಂಹಾಸನದಲ್ಲಿ ಪಟ್ಟಾಭಿಷೇಕವನ್ನು ನಡೆಸಿ ರಾಜಕೀಯವಾದ ಮರ್ಯಾದೆಗಳನ್ನು ವಿಶೇಷವಾಗಿ ನಡೆಸಿರುವುದು ಮಠದ ಕಾಗದ ಪತ್ರಗಳಿಂದ ತಿಳಿದುಬರುತ್ತೆ. ಪಟ್ಟಾಭಿಷೇಕ ನಡೆದನಂತರ ಶ್ರೀಕೃಷ್ಣರಾಜಪ್ರಭುಗಳವರು ವಿವಿಕ್ತರಾಗಿ ಚಿಕ್ಕ ಶ್ರೀಗಳವರ ದರ್ಶನಕ್ಕೆ ಬಂದ ಕಾಲದಲ್ಲಿ 'ತಮಗೆ ಅಪೇಕ್ಷಿತವಾದದ್ದು ಏನು?' ಎಂದು ಕೇಳಿದರು. ಅದಕ್ಕೆ ಶ್ರೀಗಳವರು ಎರಡು ಆನೆ ಮರಿಗಳು ಬೇಕು ಎಂಬುದಾಗಿ ಉತ್ತರಕೊಟ್ಟರು. ಇದನ್ನು ಕೇಳಿದ ಮಹಾರಾಜರಿಗೆ ಅತ್ಯಾಶ್ಚರ್ಯವುಂಟಾಗಿ ಆನೆ ಮರಿಗಳ

ಪ್ರಯೋಜನವೇನೆಂದು ಪುನಃ ಪ್ರಶ್ನೆಮಾಡಿದರು. ಅದಕ್ಕೆ ಆ ಬಾಲಯತೀಂದ್ರರು ಶೃಂಗೇರಿಯಲ್ಲಿ ಶ್ರೀ ಶಾರದಾಂಬೆಯವರ ದೇವಸ್ಥಾನದ ಬಾಗಿಲಿನ ಉಭಯ ಪಾರ್ಶ್ವಗಳಲ್ಲಿಯೂ ನಿಲ್ಲಿಸಿ ಚಾಮರಗಳನ್ನು ಹಾಕಿಸಲು ಬೇಕಾಗಿದೆ ಎಂದು ಹೇಳಿದ್ದನ್ನು ಕೇಳಿ ರಾಜರ ಸಂತೋಷವು ಉಕ್ಕಿತುಳುಕಿತು. ಕೂಡಲೇ ಗಜಶಾಲೆಗೆ ಹೇಳಿಕಳುಹಿಸಿ ಒಂದು ಹೆಣ್ಣಾನೆ ಮರಿಯು ಸಿದ್ಧವಾಗಿದ್ದಂತೆ ತಿಳಿಯ ಬರಲಾಗಿ ಅದನ್ನೇ ತರಿಸಿ ಚಿಕ್ಕಸ್ವಾಮಿಗಳವರಲ್ಲಿಗೆ ಕಳುಹಿಸಿದರು. ಈ ಆನೆ ಮರಿಯು ಶ್ರೀ ಸ್ವಾಮಿಗಳವರ ಒಡನೆಯೇ ಇದ್ದು ಮಠದಲ್ಲಿ ಬೆಳೆದು ಈಚೆಗೆ ಕಳೆದ 1909ನೆಯ ಇಸವಿಯಲ್ಲಿ ಶ್ರೀಗಳವರ ಸಂಚಾರ ಕಾಲದಲ್ಲಿ ಪಾಪವಿನಾಶವೆಂಬ ಸ್ಥಳದಲ್ಲಿ ಅಳರ್ಕದಷ್ಟವಾಗಿ ಗತಿಸಿತು. ಆ ಕಾಲದಲ್ಲಿ ಶ್ರೀಗಳವರು ಆ ಗಜವು ಮಠಕ್ಕೆ ಬಂದು ಸೇರಿದ ವಿಷಯದಲ್ಲಿ ಮೇಲೆ ತಿಳಿಸಿದ ಪೂರ್ವಕಥೆಯನ್ನು ಎಲ್ಲರಿಗೂ ಹೇಳಿ ಬಹಳವಾಗಿ ವ್ಯಸನಪಟ್ಟರು. ಈ ವಿಷಯವು ಅತಿ ಬಾಲ್ಯದಿಂದಲೂ ಈ ಪುರುಷಶ್ರೇಷ್ಠರ ಸ್ವಭಾವವು ಎಷ್ಟು ಗಂಭೀರವಾಗಿತ್ತೆಂಬುದನ್ನು ತಿಳಿಯುವುದಕ್ಕೋಸ್ಕರ ಇಲ್ಲಿ ಪ್ರಸ್ತಾಪಿಸಿದ್ದಾಗಿದೆ.

ಎಂಟು ವರ್ಷಗಳ ಕಾಲದಿಂದಲೂ ಪ್ರಯತ್ನಪಡುತ್ತಲಿದ್ದ ಸಚ್ಛಿಷ್ಯ ಸಂಪಾದನ ರೂಪವಾದ ಕಾರ್ಯವು ಶ್ರೀ ಶಾರದಾಂಬೆಯವರ ಅನುಗ್ರಹದಿಂದ ಪ್ರಬಲವಾದ ರಾಜಸಾಹಾಯ್ಯವೊದಗಿ ಸುಲಭವಾಗಿ ನೆರವೇರಿದ ವಿಷಯದಲ್ಲಿ ಶ್ರೀನರಸಿಂಹಭಾರತೀ ಸ್ವಾಮಿಗಳವರು ಅತ್ಯಂತ ಸಂತುಷ್ಟರಾಗಿ ಆ ಸಂವತ್ಸರದ ಚಾತುರ್ಮಾಸ್ಯ ಸಂಕಲ್ಪ, ವ್ಯಾಸಪೂಜೆ ಮೊದಲಾದ ಆಶ್ರಮ ಧರ್ಮಗಳನ್ನು ಕಾವೇರೀ ನದೀತೀರದಲ್ಲಿ ನೆರವೇರಿಸಬೇಕೆಂದು ಆಲೋಚಿಸಿ ಪ್ರಭುಗಳ ಸಹಾಯದೊಡನೆ ಶ್ರೀರಂಗಪಟ್ಟಣದ ಸಮೀಪಕ್ಕೆ ದಯಮಾಡಿಸಿ ಪಶ್ಚಿಮವಾಹಿನಿಯೆಂಬ ಸ್ಥಳದಲ್ಲಿ ತಮ್ಮ ಶಿಷ್ಯರೊಡನೆ ಚಾತುರ್ಮಾಸ್ಯ ದೀಕ್ಷೆಯನ್ನು ಕೈಕೊಂಡರು.

★ ★ ★

ಅಧ್ಯಾಯ - ೩.

ವಿದ್ಯಾಭ್ಯಾಸ ಮತ್ತು ತೀರ್ಥಯಾತ್ರೆ

ಶ್ರೀ ನರಸಿಂಹಭಾರತೀಸ್ವಾಮಿಗಳವರು ತಾವು ದೃಢಕಾಯರಾಗಿರುವ ಕಾಲದಲ್ಲಿಯೇ ಮುಂದಿನ ಪೀಠಾಧಿಪತ್ಯಕ್ಕೆ ಸರಿಯಾದ ಶಿಷ್ಯರನ್ನು ಪರಿಗ್ರಹಿಸಿ, ಆಶ್ರಮ ಸಂಪ್ರದಾಯಗಳನ್ನೂ ಸಂಸ್ಥಾನ ಪದ್ಧತಿಗಳನ್ನೂ ಚೆನ್ನಾಗಿ ಅವರ ತಿಳಿವಳಿಕೆಗೆ ತಂದು, ತಮ್ಮ ಆ ಶಿಷ್ಯರ ಮೂಲಕವಾಗಿಯೂ ಸಂಸ್ಥಾನದ ಪ್ರಖ್ಯಾತಿಯನ್ನು ಹೆಚ್ಚಿಸಬೇಕೆಂಬ ಅಭಿಪ್ರಾಯದಿಂದ ಶಿಷ್ಯ ಪರಿಗ್ರಹಕ್ಕೋಸ್ಕರ ಯತ್ನಮಾಡಿದರೆಂದು ಹಿಂದೆ ಹೇಳಿದೆಯಷ್ಟೆ. ತಮ್ಮ ಸಂಕಲ್ಪಕ್ಕನುಸಾರವಾಗಿ ಸತ್ಕುಲಪ್ರಸೂತರಾಗಿಯೂ, ಅತ್ಯಂತ ಮೇಧಾಶಕ್ತಿಯುಳ್ಳವರಾಗಿಯೂ, ಜನ್ಮಾಂತರೀಯ ಸದ್ವಾಸನಾವಿಶಿಷ್ಟರಾಗಿಯೂ ದೊರೆತ ಈ ಚಿಕ್ಕಸ್ವಾಮಿಗಳಿಗೆ ವಿದ್ಯಾವ್ಯಾಸಂಗ ಮಾಡಿಸಿ, ಅವರನ್ನು ಪಂಡಿತರನ್ನಾಗಿ ಮಾಡಬೇಕಾದ್ದಲ್ಲದೆ ಬಾಲ್ಯವಯಸ್ಸಿನಲ್ಲಿಯೇ ತಮ್ಮೊಡನೆ ದೇಶಾಟನವನ್ನು ಮಾಡಿಸಿ, ಶಿಷ್ಯ ಜನರ ವಿಷಯದಲ್ಲಿ ತಮಗಿರತಕ್ಕ ಕರ್ತವ್ಯವನ್ನು ಅವರಿಗೆ ತಿಳಿಸುವುದು ಕೂಡ ಆವಶ್ಯಕವೆಂದು ಆಲೋಚಿಸಿ, ಚಾತುರ್ಮಾಸ್ಯ ಸಂಕಲ್ಪಾನುಷ್ಠಾನವು ಪೂರ್ಣವಾದ ಕೂಡಲೆ ತಮ್ಮ ಯಾತ್ರೆಯನ್ನು ಮುಂದಕ್ಕೆ ಬೆಳೆಸಿದರು.

ಈ ಚಿಕ್ಕಸ್ವಾಮಿಗಳವರಿಗೆ ಬಾಲ್ಯೋಚಿತವಾದ ಅಮರ, ಶಬ್ದ, ಕಾವ್ಯ ಮೊದಲಾದ ಪಾಠಗಳನ್ನು ಹೇಳಲು ವಯಸ್ಸಾದವರಾಗಿಯೂ, ಕುಣಿಗಲ್ ರಾಮಶಾಸ್ತ್ರಿಗಳವರಲ್ಲಿ ವಿದ್ಯಾವ್ಯಾಸಂಗ ಮಾಡಿ ಪಂಡಿತರಾಗಿಯೂ ಇದ್ದ ಕಣಗಾಲ ಶಾಮಶಾಸ್ತ್ರಿಗಳೆಂಬುವರನ್ನು ಏರ್ಪಡಿಸಿ, ಅವರ ಮೂಲಕವಾಗಿ ಶ್ರೀಗಳವರ ವ್ಯಾಸಂಗಕ್ಕೆ ಅನುಕೂಲಪಡಿಸಿದರು. ದೊಡ್ಡಗುರುಗಳಿಗೆ ಚಿಕ್ಕಸ್ವಾಮಿಗಳವರ ವಿಷಯದಲ್ಲಿದ್ದ ಪ್ರೀತಿಯು ಅತಿ ವಿಲಕ್ಷಣವಾಗಿತ್ತು. ಇವರೊಡನೆ ವಿದ್ಯಾವ್ಯಾಸಂಗವನ್ನು ಮಾಡುವುದಕ್ಕೆ ಬೇರೆ ಬೇರೆ ದೇಶದ ವಿದ್ಯಾರ್ಥಿಗಳನ್ನು ಬರಮಾಡಿ ಸೇರಿಸಿದರು. ಈ ಚಿಕ್ಕಸ್ವಾಮಿಗಳವರ ಆಹಾರ ವ್ಯವಹಾರಗಳನ್ನು ಕ್ಲುಪ್ತಕಾಲಗಳಲ್ಲಿ ವಿಚಾರಿಸಿಕೊಳ್ಳುವುದಕ್ಕೆ ಯಾವ ವಿಧವಾದ ಸಂಬಂಧವೂ ಇಲ್ಲದ ದಕ್ಷಿಣದೇಶದ ಜನರನ್ನು ನೇಮಿಸಿದರು. ರಾತ್ರಿಕಾಲದಲ್ಲಿ ತಮ್ಮ ಶಿಷ್ಯರು ಸಮೀಪದಲ್ಲಿ ತಮ್ಮ ದೃಷ್ಟಿಗೆ ಬೀಳುವಂತೆ ಮಲಗಲು ಏರ್ಪಾಡನ್ನು ಮಾಡಿದ್ದರು. ಪ್ರತಿಯೊಂದು ದಿನವೂ ತಮ್ಮ ಅವಕಾಶಕಾಲಗಳಲ್ಲಿ ಶಿಷ್ಯರನ್ನು ಸಮೀಪದಲ್ಲಿ ಕುಳ್ಳಿರಿಸಿಕೊಂಡು, ಅವರ ವಯೋನುಗುಣವಾಗಿ ಒಂದೆರಡು ಗಂಟೆಗಳ ಕಾಲವಾದರೂ ದೊಡ್ಡ ಸ್ವಾಮಿಗಳವರು ಧರ್ಮಸೂಕ್ಷ್ಮಗಳನ್ನೂ, ಆಸ್ತಿಕ್ಯವನ್ನೂ

ಭಕ್ತಿಯನ್ನೂ, ತುರೀಯಾಶ್ರಮದ ಪ್ರಾಶಸ್ತ್ಯವನ್ನೂ ಕುರಿತು ಬೋಧನೆ ಮಾಡುತ್ತಲಿದ್ದರು.ಸ್ವಲ್ಪ ಕಾಲ ಶಿಷ್ಯರು ತಮ್ಮ ದೃಷ್ಟಿಗೆ ಬೀಳದೆ ಇರುವ ಸಂಭವವುಂಟಾದಲ್ಲಿ, ಆ ವಿಳಂಬವನ್ನು ಸಹಿಸುವುದು ದೊಡ್ಡಗುರುಗಳಿಗೆ ಅಸಾಧ್ಯವಾಗುತ್ತಲಿತ್ತು. ಈ ರೀತಿಯಲ್ಲಿ ತಮ್ಮ ಶಿಷ್ಯರನ್ನು ಕಾಪಾಡುವುದರಲ್ಲಿಯೂ, ಅವರನ್ನು ಉತ್ತಮಸ್ಥಿತಿಗೆ ತರುವುದರಲ್ಲಿಯೂ, ಅವರಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದರಲ್ಲಿಯೂ, ಶ್ರೀನರಸಿಂಹಭಾರತೀಸ್ವಾಮಿಗಳವರು ತಮ್ಮ ಕೋರಿಕೆಯಂತೆ ದಶರಥಮಹಾರಾಜನಿಂದ ಅತಿಬಾಲ್ಯದಲ್ಲಿ ಕಳುಹಿಸಲ್ಪಟ್ಟ ರಾಮಲಕ್ಷ್ಮಣರ ವಿಷಯದಲ್ಲಿ ವಿಶ್ವಾಮಿತ್ರ ಮಹರ್ಷಿಗಳು ವಹಿಸಿಕೊಂಡಿದ್ದ ಭಾರಕ್ಕಿಂತಲೂ ಹೆಚ್ಚಾದ ಭಾರವನ್ನು ವಹಿಸಿದ್ದರೆಂದು ಹೇಳುವುದು ಅತಿಶಯೋಕ್ತಿಯಾಗಲಾರದು.

ಸನ್ಯಾಸಾಶ್ರಮ ಸ್ವೀಕಾರಕ್ಕೋಸ್ಕರ ಮನೆಯನ್ನು ಬಿಟ್ಟು ಮಠಕ್ಕೆ ಬಂದ ಚಿಕ್ಕಸ್ವಾಮಿಗಳವರು ಅಂದಿನಿಂದ ಕೆಲವುಕಾಲ ಪರ್ಯಂತ ತಮ್ಮ ಪೂರ್ವಾಶ್ರಮದ ಅಣ್ಣಂದಿರನ್ನಾಗಲಿ, ಅನುಬಂಧಿಗಳನ್ನಾಗಲಿ ನೋಡುವುದಕ್ಕೆ ಕೂಡ ಅವಕಾಶವಿರಲಿಲ್ಲ. ಹಾಗಿದ್ದರೂ ಒಂದು ದಿನವಾದರೂ ಒಬ್ಬರನ್ನಾದರೂ ಸ್ಮರಿಸಲೇ ಇಲ್ಲವೆಂದು ತಿಳಿದು ಬಂದಿದೆ. ಈ ಸ್ವಭಾವವು ಈ ಮಹನೀಯರಲ್ಲಿ ನಿರ್ಯಾಣ ಕ್ಷಣದವರೆಗೂ ರೂಢಮೂಲವಾಗಿದ್ದ ಸಂಗತಿಯನ್ನು ಈ ಲೇಖಕನು ಚೆನ್ನಾಗಿ ತಿಳಿದಿರುವುದರಿಂದ, ಬಾಲ್ಯದಿಂದಲೂ ಈ ಸ್ವಭಾವವು ಸಹಜವಾಗಿ ಇವರಲ್ಲಿತ್ತೆಂಬ ವಿಷಯದಲ್ಲಿ ಸಂದೇಹವಿಲ್ಲ. ತಮ್ಮಲ್ಲಿ ಅತಿಯಾಗಿ ಪ್ರೀತಿಮಾಡುತ್ತಲೂ ತಮ್ಮನ್ನು ಅನುಗ್ರಹಿಸುತ್ತಲೂ ಇರುವ ದೊಡ್ಡಸ್ವಾಮಿಗಳನ್ನೇ ತಾಯಿ, ತಂದೆ, ಅಣ್ಣ ಗುರು, ದೇವರು ಇವರೆಲ್ಲರ ಸ್ವರೂಪವೆಂದು ದೃಢವಾಗಿಯೂ ನಂಬಿ, ಅವರ ಚಿತ್ತಾನುವರ್ತಿಗಳಾಗಿದ್ದು ಅವರ ಸಂತೋಷವನ್ನು ಪ್ರತಿ ನಿಮಿಷದಲ್ಲಿಯೂ ಹೆಚ್ಚಿಸುತ್ತಲಿದ್ದರು. ಗುರ್ವಾಜ್ಞಾನುಸಾರವಾಗಿ ಪ್ರಾತಃಕಾಲ ಆರು ಗಂಟೆಗೆ ಸರಿಯಾಗಿ ಸ್ನಾನಮಾಡಿ, ಆಹ್ನಿಕವನ್ನು ನೆರವೇರಿಸಿ, ತಮಗಾಗಿ ಗುರುಗಳವರು ಹೊಸದಾಗಿ ಅನುಗ್ರಹಿಸಿದ ಚಂದ್ರಮೌಳೀಶ್ವರಲಿಂಗವನ್ನು ಪೂಜಿಸಿ, ಆಶ್ರಮಸಂಪ್ರದಾಯವನ್ನನುಸರಿಸಿ ಗುರುಗಳವರಿಗೆ ನಮಸ್ಕಾರ ಮಾಡಿ, ಅವರ ಅಪ್ಪಣೆಯಂತೆ ಹನ್ನೊಂದು ಗಂಟೆಯ ಸಮಯದಲ್ಲಿ ಭಿಕ್ಷವನ್ನು ಮಾಡುತ್ತಲಿದ್ದರು. ಬಳಿಕ ಸಹಪಾಠಿಗಳೊಡನೆ ವಯೋನುಗುಣವಾದ ಕೆಲವು ಆಟಗಳಲ್ಲಿ ಸ್ವಲ್ಪ ಕಾಲವನ್ನು ಕಳೆದು ಶಾಸ್ತ್ರಿಗಳು ಬಂದಕೂಡಲೆ ಪಾಠವನ್ನು ಓದುತ್ತಾ ಇದ್ದರು. ಆದರೆ ವ್ಯಾಸಂಗವಿಷಯದಲ್ಲಿ ಹೆಚ್ಚಾಗಿ ಪ್ರಯಾಸವನ್ನು ವಹಿಸುತ್ತಾ ಇರಲಿಲ್ಲ, ಇದನ್ನು ಕಂಡು ಪಾಠ ಹೇಳತಕ್ಕ ಶಾಸ್ತ್ರಿಗಳು ನಯಭಯಗಳನ್ನು ತೋರಿಸಿ, ಆಯಾ ದಿನದ ಪಾಠಭಾಗವನ್ನು ಗಟ್ಟಿಮಾಡಿ ತಾವು ಮರುದಿನ ಪಾಠ ಹೇಳುವುದಕ್ಕೆ ಬಂದಾಗ ಒಪ್ಪಿಸಬೇಕೆಂದು ನಿರ್ಬಂಧಪಡಿಸುತ್ತ ಬಂದರು. ಆ ಸಂದರ್ಭದಲ್ಲಿಯೂ ಈ ಸ್ವಾಮಿಗಳವರು ಪುಸ್ತಕವನ್ನು

ಹಿಡಿದು ನಿಶ್ಚಲವಾಗಿ ಕುಳಿತುಕೊಂಡು ವ್ಯಾಸಂಗಮಾಡುತ್ತಾ ಇರಲಿಲ್ಲ. ಜೊತೆಗಾರರು ಬಲಾತ್ಕರಿಸಿ ಶಾಸ್ತ್ರಿಗಳು ಕೋಪಿಸುವರೆಂದು ಹೇಳಿದರೆ, ಬಾಧಕವಿಲ್ಲ; ನೀವು ಓದಿರಿ; ನಾನು ಕೇಳುತ್ತಾ ಇರುವೆನೆಂದು ಅವರಿಗೆ ಸಮಾಧಾನವನ್ನು ಹೇಳಿ, ಸ್ವಲ್ಪಹೊತ್ತು ಇತರ ವಿದ್ಯಾರ್ಥಿಗಳು ಓದುವುದನ್ನು ಗಮನಿಸಿ ಕೇಳುತ್ತಲಿದ್ದರೇ ಹೊರತು ತಾವು ವ್ಯಾಸಂಗ ಮಾಡುತ್ತಲಿರಲಿಲ್ಲ. ಶಾಸ್ತ್ರಿಗಳು ಬಂದು ಮೊದಲು ದಿನದ ಪಾಠವನ್ನು ಕೇಳಿದ ಕೂಡಲೆ ಶ್ರೀಸ್ವಾಮಿಗಳವರು ಸ್ವಲ್ಪವೂ ಸಂದೇಹವಿಲ್ಲದಂತೆ ಸ್ವಷ್ಟವಾಗಿ ಒಪ್ಪಿಸಿಬಿಡುತ್ತಿದ್ದರು. ಈ ಸಂಗತಿಯನ್ನು ಅನೇಕಾವೃತ್ತಿ ಪರೀಕ್ಷಿಸಿ ತಿಳಿದುಕೊಂಡ ಶಾಸ್ತ್ರಿಗಳು ಸ್ವಾಮಿಗಳನ್ನು ನಿರ್ಬಂಧಿಸುವುದನ್ನು ಬಿಟ್ಟರು. ಕಾವ್ಯಪಾಠದಲ್ಲಿ ಒಂದೆರಡು ಸರ್ಗಗಳು ಪೂರ್ಣವಾಗುವುದರಲ್ಲಿಯೇ, ಇವರು ಓದದೇ ಇದ್ದ ಅನೇಕ ಗ್ರಂಥಗಳ ಶ್ಲೋಕಗಳನ್ನು ನೋಡಿ ನೋಡಿ ಗಟ್ಟಿಮಾಡಿದರು. ಪಾಠಮಧ್ಯದಲ್ಲಿ ತಮಗೆ ಉಂಟಾಗತಕ್ಕ ಸಂದೇಹದ ನಿವೃತ್ತಿಗಾಗಿ ಶಾಸ್ತ್ರಿಗಳನ್ನು ಪ್ರಶ್ನೆ ಮಾಡತೊಡಗಿದರು. ರಘುವಂಶದಲ್ಲಿ ಎರಡು ಸರ್ಗ, ಕುಮಾರಸಂಭವದಲ್ಲಿ ಎರಡು ಸರ್ಗ, ಮಾಘದಲ್ಲಿ ಒಂದು ಸರ್ಗ, ಈ ರೀತಿ ಕಾವ್ಯದಲ್ಲಿ ಐದು ಸರ್ಗಗಳು. ಚಂಪೂ ರಾಮಾಯಣದಲ್ಲಿ ನಾಲ್ಕು ಕಾಂಡಗಳು, ಇಷ್ಟನ್ನು ಮಾತ್ರ ಕಣಗಾಲ ಶಾಮಶಾಸ್ತ್ರಿಗಳಲ್ಲಿ ಓದಿದರು. ಆ ವೇಳೆಗೆ ಪರಶ್ಲೋಕಾರ್ಥಜ್ಞಾನವು ಧಾರಾಳವಾಗಿ ಆಗುವಂತೆ ವ್ಯುತ್ಪತ್ತಿಯುಂಟಾಯಿತು. ನೈಷಧವೆಂಬ ಮಹಾಕಾವ್ಯವನ್ನು ಹೇಳುವುದಕ್ಕೆ ಆ ಶಾಮ ಶಾಸ್ತ್ರಿಗಳೇ ಪ್ರಾರಂಭಮಾಡಿದರು. ಸ್ವಲ್ಪ ದೂರ ಪಾಠವಾಗುವುದರಲ್ಲಿ ಶ್ರೀಗಳವರು ಕೇಳತಕ್ಕ ಆಕ್ಷೇಪಣೆಗೆ ಆ ಶಾಸ್ತ್ರಿಗಳಿಂದ ಬರುವ ಸಮಾಧಾನವು ಅಷ್ಟು ಸಮಂಜಸವಾದದ್ದಾಗಿರಲಿಲ್ಲ. ಆದರೂ ಆ ಶಾಸ್ತ್ರಿಗಳ ವಿಷಯದಲ್ಲಿ ತಿರಸ್ಕಾರಭಾವವುಂಟಾಗಲಿಲ್ಲ. ಈ ಅಂಶವನ್ನು ತಿಳಿದುಕೊಂಡು ಕಣಗಾಲ ಶಾಮಶಾಸ್ತ್ರಿಗಳು ಮಹಾಪಂಡಿತರಾದ ಕುಣಿಗಲ್ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಈ ವಿಷಯವನ್ನೆಲ್ಲಾ ತಿಳಿಸಿ, ಇನ್ನು ಮುಂದೆ ಚಿಕ್ಕಶ್ರೀಗಳವರಿಗೆ ತಾವೇ ಪಾಠ ಹೇಳುವುದು ಉತ್ತಮವೆಂದು ಸೂಚಿಸಿದ್ದಲ್ಲದೆ, ದೊಡ್ಡ ಶ್ರೀ ಗುರುಗಳವರಲ್ಲಿಯೂ ಬಾಲಯತೀಂದ್ರರ ಬುದ್ಧಿಶಕ್ತಿಯನ್ನೂ ಪ್ರತಿಭಾವಿಶೇಷವನ್ನೂ ಕುರಿತು ವಿಶೇಷವಾಗಿ ಪ್ರಸ್ತಾಪಿಸಿ, ಅವರಿಗೆ ಲಕ್ಷ್ಮೀನರಸಿಂಹಶಾಸ್ತ್ರಿಗಳವರೇ ಪಾಠ ಹೇಳುವಂತೆ ನಿಯಮಿಸಬೇಕೆಂದು ವಿಜ್ಞಾಪಿಸಿಕೊಂಡರು.

ಬಾಲಪಾಠಕ್ಕೆ ಏರ್ಪಡಿಸಲ್ಪಟ್ಟ ಶಾಮಶಾಸ್ತ್ರಿಗಳು ಪಂಡಿತರಾಗಿದ್ದರೂ, ಚಿಕ್ಕಶ್ರೀಗಳವರಿಗೆ ಪಾಠವನ್ನು ಹೇಳುವ ವಿಷಯದಲ್ಲಿ ತಾವಾಗಿಯೇ ಹಿಂತೆಗೆದದ್ದನ್ನು ತಿಳಿದ ದೊಡ್ಡಶ್ರೀಗಳವರಿಗೂ, ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೂ ಉಂಟಾದ ಸಂತೋಷಕ್ಕೆ ಪಾರವಿರಲಿಲ್ಲ. ಅದು ಮೊದಲುಗೊಂಡು ಲಕ್ಷ್ಮೀನರಸಿಂಹಶಾಸ್ತ್ರಿಗಳವರೇ ಚಿಕ್ಕಶ್ರೀಗಳವರಿಗೆ ಪಾಠ ಹೇಳುವುದಕ್ಕೆ ಪ್ರಾರಂಭಮಾಡಿ ನೈಷಧದಲ್ಲಿ ಎರಡುಮೂರು ಸರ್ಗಗಳನ್ನು ಹೇಳಿದರು.

ಕಾವ್ಯದಲ್ಲಿ ಶ್ರೀಗಳವರಿಗೆ ಒಳ್ಳೆಯ ವ್ಯುತ್ಪತ್ತಿಯುಂಟಾಯಿತು. ಇಲ್ಲಿಗೆ ಚಿಕ್ಕಶ್ರೀಗಳವರಿಗೆ ಹನ್ನೊಂದು ವರ್ಷಗಳ ವಯಸ್ಸು ಆಯಿತು. ಹನ್ನೆರಡನೆಯ ವರ್ಷದಲ್ಲಿ ಲಕ್ಷ್ಮೀನರಸಿಂಹ ಶಾಸ್ತ್ರಿಗಳು ತಮ್ಮ ಕುಲಕ್ರಮವಾಗಿ ಬಂದಿದ್ದ ಸಕಲಶಾಸ್ತ್ರೋಪಯೋಗಿಯಾದ ನ್ಯಾಯಶಾಸ್ತ್ರವನ್ನು ಹೇಳುವುದಕ್ಕೆ ಪ್ರಾರಂಭಮಾಡಿದರು. ಚಿಕ್ಕಸ್ವಾಮಿಗಳೊಡನೆ ವ್ಯಾಸಂಗಮಾಡಲು ಇವರಂತೆ ಬುದ್ಧಿಕುಶಲತೆಯೂ ಪ್ರತಿಭೆಯೂ ಇದ್ದ ಮೂರು ನಾಲ್ಕು ಜನ ದ್ರಾವಿಡ ದೇಶದ ಬಾಲಕರನ್ನು ಸೇರಿಸಿ ತರ್ಕಪಾಠವನ್ನು ಹೇಳುತ್ತಾಬಂದರು. ತರ್ಕಸಂಗ್ರಹ, ದೀಪಿಕೆ, ಮುಕ್ತಾವಳಿ ಈ ಮೂರು ಗ್ರಂಥಗಳನ್ನು ಸ್ವಾಮಿಗಳವರು ಓದಿದ ಕೂಡಲೆ ಇವರು ಸ್ವತಃ ವಿದ್ಯಾರ್ಥಿಗಳಿಗೆ ತರ್ಕಸಂಗ್ರಹ ಮೊದಲುಗೊಂಡು ಪಾಠವನ್ನು ಹೇಳುತ್ತಾ ಬರುವಂತೆ ಏರ್ಪಡಿಸಿದರು. ತಾವು ಮುಂದಿನ ಗ್ರಂಥಗಳನ್ನು ಓದಿ ವ್ಯಾಸಂಗಮಾಡುತ್ತಲೂ, ಹಿಂದಿನ ಗ್ರಂಥಗಳಲ್ಲಿ ಸಣ್ಣ ಸಣ್ಣ ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳುತ್ತಲೂ ಬಂದಿದ್ದರಿಂದ ಶ್ರೀಗಳವರಿಗೆ ಬಹಳ ಜಾಗ್ರತೆಯಾಗಿ ತರ್ಕಶಾಸ್ತ್ರದಲ್ಲಿ ಪ್ರವೇಶವುಂಟಾಯಿತು. ಚಿಕ್ಕಸ್ವಾಮಿಗಳವರಿಗೆ ಆಶ್ರಮವಾದದ್ದು ಮೊದಲುಗೊಂಡು ಪರಸ್ಥಳ ಸಂಚಾರಕ್ರಮದಲ್ಲಿಯೇ ವ್ಯಾಸಂಗವು ನಡೆಯಬೇಕಾಗಿ ಬಂದಿದ್ದರಿಂದ ನಿರ್ವಿಘ್ನವಾಗಿ ಪಾಠ ನಡೆಯುವುದಕ್ಕೆ ಅವಕಾಶವಿರಲಿಲ್ಲ ವಾಗಿ, ಒಂದೇ ಶಾಸ್ತ್ರವನ್ನು ವ್ಯಾಸಂಗಮಾಡುವುದರಲ್ಲಿ ದೀರ್ಘಕಾಲವನ್ನು ಕಳೆಯಬೇಕಾದ ಸಂಭವವುಂಟಾಯಿತು.

ತಮ್ಮ ಶಿಷ್ಯರೊಡನೆ ದೇಶಸಂಚಾರಕ್ಕೆ ಹೊರಟ ಶ್ರೀನರಸಿಂಹಭಾರತೀಸ್ವಾಮಿಗಳವರು ಮೈಸೂರಿನಿಂದ ನಂಜನಗೂಡಿಗೆ ಶ್ರೀಕಂಠೇಶ್ವರಸ್ವಾಮಿ ದರ್ಶನಕ್ಕೆ ದಯಮಾಡಿಸಿದರು. ಅಲ್ಲಿ ಚಿಕ್ಕಸ್ವಾಮಿಗಳವರಿಗೆ ಶರೀರದಲ್ಲಿ ಸ್ವಲ್ಪ ಆಲಸ್ಯವುಂಟಾಯಿತು. ದೊಡ್ಡ ಶ್ರೀಗಳವರು ದೇವಸ್ಥಾನಕ್ಕೆ ದಯಮಾಡಿಸಿ ಭವರೋಗ ವೈದ್ಯನಾದ ಶ್ರೀಕಂಠೇಶ್ವರನಿಗೆ ತಮ್ಮ ಹಸ್ತದಿಂದ ವಿಶೇಷವಾಗಿ ಪೂಜೆಯನ್ನು ಮಾಡಿ, ತಮ್ಮ ಪ್ರಾಣಭೂತರಾದ ಶಿಷ್ಯರ ಆರೋಗ್ಯಕ್ಕೋಸ್ಕರ ಪ್ರಾರ್ಥನೆಮಾಡಿ, ಕೂಡಲೆ ಚಿಕ್ಕಸ್ವಾಮಿಗಳಂತೆ ಒಂದು ಸುವರ್ಣಪ್ರತಿಕೃತಿಯನ್ನು ಮಾಡಿಸಿ, ಶ್ರೀಕಂಠೇಶ್ವರನ ಪೀಠದಲ್ಲಿ ಆ ಪ್ರತಿಕೃತಿಯು ಯಾವಾಗಲೂ ಇರುವಂತೆ ಸ್ಥಿರವಾಗಿ ಇಡಿಸಿದರು. ಆ ದಿನವೇ ಚಿಕ್ಕಶ್ರೀಗಳವರಿಗೆ ಆರೋಗ್ಯವುಂಟಾಗಿ ತಮ್ಮ ಗುರುಗಳ ಸಂಗಡ ಹೊರಟು ದೇವರ ದರ್ಶನವನ್ನು ಮಾಡಿ, ತಾವು ಆನಂದಪಟ್ಟು ತಮ್ಮ ಗುರುಗಳನ್ನೂ ಆನಂದಗೊಳಿಸಿದರು. ಮೇಲೆ ಹೇಳಿದ ಸುವರ್ಣಪ್ರತಿಮೆಯು ಈಗಲೂ ಶ್ರೀಕಂಠೇಶ್ವರನ ಉತ್ಸವಮೂರ್ತಿಯ ಬೆಳ್ಳಿಯ ಪೀಠದಲ್ಲಿ ಮುಂದುಗಡೆ ನೆಲೆಗೊಂಡಿದೆ. ನಂಜನಗೂಡಿನಿಂದ ಚಾಮರಾಜನಗರದ ಮಾರ್ಗವಾಗಿ ಕಣಿವೆಯಿಳಿದು ಮದ್ರಾಸಾಧಿಪತ್ಯಕ್ಕೆ ಸೇರಿದ ಕೊಯಮುತ್ತೂರು, ಸೇಲಂ, ತಿರುಚನಾಪಳ್ಳಿ, ಮಧುರೆ, ಚಂಗಲಪಟ್ಟು, ಚಿತ್ತೂರು, ಕಡಪ

ಕರ್ನೂಲು, ಮದರಾಸು ಮೊದಲಾದ ಸ್ಥಳಗಳನ್ನು ಸಂಚರಿಸಿ ಅಲ್ಲಿರುವ ಪುಣ್ಯಕ್ಷೇತ್ರಗಳ ಯಾತ್ರೆಯನ್ನು ಮಾಡಿಕೊಂಡು, ಚಿಕ್ಕ ಶ್ರೀಗಳವರ ಕೋರಿಕೆಯಂತೆ ಶ್ರೀಶಾರದಾಂಬೆಯವರ ದರ್ಶನವನ್ನು ಅವರಿಗೆ ಮಾಡಿಸುವುದಕ್ಕೋಸ್ಕರ ಶಾ॥ ಶಕ 1800 ಈಶ್ವರ ಸಂವತ್ಸರದ (1878 ನೆ ಇಸವಿ) ಆಷಾಢ ಬಹುಳ ತದಿಗೆ ಶುಕ್ರವಾರದಲ್ಲಿ ಶೃಂಗೇರಿಗೆ ಹಿಂತಿರುಗಿ ದಯಮಾಡಿಸಿದರು. ಶ್ರೀ ನರಸಿಂಹಭಾರತೀಸ್ವಾಮಿಗಳವರು ಕ್ರೋಧನ ಸಂವತ್ಸರದಲ್ಲಿ ಶೃಂಗೇರಿಯನ್ನು ಬಿಟ್ಟು ಹೊರಟವರು, ತಮ್ಮ ಶಿಷ್ಯರೊಡನೆ ಈಶ್ವರಸಂವತ್ಸರದಲ್ಲಿ ಮತ್ತೆ ಸ್ಥಳಕ್ಕೆ ಹಿಂತಿರುಗಿ ಬಂದಿದ್ದರಿಂದ, ಹನ್ನೆರಡು ವರ್ಷಗಳ ಕಾಲವೂ ಸಂಚಾರದಲ್ಲಿ ಇದ್ದಂತಾಯಿತು. ಅಲ್ಲಿಗೆ ದೊಡ್ಡ ಶ್ರೀಗಳವರಿಗೆ 80 ವರ್ಷದ ವಯಸ್ಸಾಯಿತು. ಚಿಕ್ಕಸ್ವಾಮಿಗಳು ಇಪ್ಪತ್ತು ವರ್ಷದ ವಯಸ್ಸಿನವರಾದರು.

ಆ ಕಾಲದಲ್ಲಿ ಮೈಸೂರು ಕೃಷ್ಣರಾಜಪ್ರಭುಗಳವರ ಮಕ್ಕಳು ಚಾಮರಾಜ ಪ್ರಭುಗಳವರು ಪ್ರಾಪ್ತವಯಸ್ಕರಾಗಿರಲಿಲ್ಲ. ಹಾಗಿದ್ದರೂ ಕೃಷ್ಣರಾಜಪ್ರಭುಗಳವರ ಪಟ್ಟಮಹಿಷಿಯರಾಗಿದ್ದ ಸೀತಾವಿಳಾಸದ ದೇವರಾಜಮ್ಮಣ್ಣಿಯವರು ಶ್ರೀನರಸಿಂಹಭಾರತೀ ಸ್ವಾಮಿಗಳವರ ಮಾಹಾತ್ಮ್ಯವನ್ನು ಚೆನ್ನಾಗಿ ತಿಳಿದವರಾಗಿದ್ದುದರಿಂದ, ಆ ಮಹಾನುಭಾವರ ವಯೋಧರ್ಮವನ್ನು ಆಲೋಚಿಸಿ, ತಮ್ಮ ಪುತ್ರರಾದ ಚಾಮರಾಜ ಒಡೆಯವರಿಗೆ ಒಂದಾವೃತ್ತಿ ಅವರ ದರ್ಶನವನ್ನು ಮಾಡಿಸಿ, ಅವರಿಂದ ಶಿವಪಂಚಾಕ್ಷರೀ ಮಂತ್ರೋಪದೇಶವನ್ನು ಕೊಡಿಸಿ ಅನುಗ್ರಹ ಮಾಡಿಸಬೇಕೆಂಬ ಸಂಕಲ್ಪವುಂಟಾಗಿ ವಿಜ್ಞಾಪನಪತ್ರಿಕೆಯ ಮೂಲಕ ತಮ್ಮ ಅಭಿಪ್ರಾಯವನ್ನು ಶ್ರೀ ನರಸಿಂಹಭಾರತೀ ಸ್ವಾಮಿಗಳವರಿಗೆ ತಿಳಿಸಿಕೊಂಡರು. ಶ್ರೀಗಳವರಿಗೂ ತಮ್ಮ ಶಿಷ್ಯರಾದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳ ದರ್ಶನವನ್ನು ಕರ್ಣಾಟಕದೇಶಕ್ಕೆ ಪ್ರಭುಗಳಾಗಿ ಬರತಕ್ಕ ಶ್ರೀ ಚಾಮರಾಜ ಒಡೆಯರವರಿಗೆ ಮಾಡಿಸಿ, ಪರಸ್ಪರ ಪ್ರೀತಿಯನ್ನುಂಟು ಮಾಡಬೇಕಾದ ಕರ್ತವ್ಯವೊಂದು ಉಳಿದಿತ್ತು. ಮೈಸೂರು ಮಹಾರಾಣಿಯವರಿಂದ ಬಂದ ಬಿನ್ನಹವನ್ನು ಅಂಗೀಕರಿಸಿ, ತಮ್ಮ ಶಿಷ್ಯರೊಡನೆ ಮೈಸೂರು ರಾಜಧಾನಿಗೆ ಶಾ॥ 1801ನೆಯ ಬಹುಧಾನ್ಯ ಸಂವತ್ಸರದ (1879 ನೆಇಸವಿ) ಫಾಲ್ಗುಣ ಶುದ್ಧ ಬಿದಿಗೆ ಭಾನುವಾರದಲ್ಲಿ ದಯಮಾಡಿಸಿದರು. ಮಹಾರಾಣಿಯವರಾದ ಸೀತಾವಿಳಾಸದ ಅಮ್ಮನವರಿಂದ ವಿಶೇಷವಾಗಿ ಉಪಚರಿಸಲ್ಪಟ್ಟು ಅವರ ಕೋರಿಕೆಯಂತೆ ಚಾಮರಾಜ ಪ್ರಭುಗಳವರಿಗೆ ಶಿವಪಂಚಾಕ್ಷರೀ ಮಂತ್ರವನ್ನು ಉಪದೇಶಿಸಿ, ಆ ಕಾಲದಲ್ಲಿ ಶ್ರೀಮತ್ಕೃಷ್ಣರಾಜ ಪ್ರಭುಗಳವರು ಪುತ್ರಸ್ವೀಕಾರಕ್ಕೆ ಮಾಡಿದ ಪ್ರಯತ್ನವನ್ನೂ, ತಾವು ಶಿಷ್ಯಪರಿಗ್ರಹಕ್ಕೆ ಮಾಡಿದ ಪ್ರಯತ್ನವನ್ನೂ ಸಂಗ್ರಹವಾಗಿ ಚಾಮರಾಜ ಒಡೆಯರವರಿಗೆ ತಿಳಿಸಿ, ತಮ್ಮ ವಿಷಯದಲ್ಲಿ ತಮಗೆ ಯಾವ ವಿಧವಾದ

ಅನುಗ್ರಹವಿತ್ತೋ ಅದೇ ರೀತಿಯಲ್ಲಿ ಮುಂದೆ ಪ್ರಭುಗಳಿಗೂ ಬಾಲಯತೀಂದ್ರರಿಗೂ ಭಕ್ತ್ಯನುಗ್ರಹಗಳು ಇರಬೇಕೆಂದು ಅನುಗ್ರಹಿಸಿ, ಚಿಕ್ಕಸ್ವಾಮಿಗಳವರಿಂದ ಪ್ರಭುಗಳಿಗೆ ರಾಜಯೋಗ್ಯವಾದ ಮುತ್ತಿನ ಕಂಠಿಯನ್ನೂ, ಫಲಮಂತ್ರಾಕ್ಷತೆಗಳನ್ನೂ ಕೊಡಿಸಿ, ಸಂತೋಷಚಿತ್ತದಿಂದ ಶೃಂಗೇರಿಗೆ ತಿರುಗಿ ಪ್ರಯಾಣವನ್ನು ಬೆಳೆಸಿದರು. ಚಿಕ್ಕಶ್ರೀಗಳವರಿಗೆ ಇಪ್ಪತ್ತು ವರ್ಷದ ವಯಸ್ಸಾಗುವುದರೊಳಗಾಗಿಯೇ ಅವರ ಗುರುಗಳಾದ ನರಸಿಂಹಭಾರತೀ ಸ್ವಾಮಿಗಳವರಿಂದ ಶೃಂಗೇರಿ ಸಂಸ್ಥಾನದಲ್ಲಿ ಪರಂಪರೆಯಿಂದ ಉಪಾಸನೆಯಲ್ಲಿ ಬಂದಿದ್ದ ಶ್ರೀ ವಿದ್ಯಾ-ನಾರಸಿಂಹ-ದಕ್ಷಿಣಾಮೂರ್ತಿ ಇವೇ ಮೊದಲಾದ ಮಂತ್ರಗಳೆಲ್ಲವೂ ಉಪದೇಶಿಸಲ್ಪಟ್ಟು, ಉಪಾಸನಾ ಕ್ರಮಗಳೆಲ್ಲವೂ ತಿಳಿಸಲ್ಪಟ್ಟವು. ಯೋಗಮಾರ್ಗದಲ್ಲಿ ಮುಖ್ಯವಾದ ಕೆಲವು ಭಾಗಗಳನ್ನೂ, ಜ್ಞಾನಮಾರ್ಗದಲ್ಲಿ ನಿರ್ಗುಣಧ್ಯಾನಮಾಡತಕ್ಕ ಸಂಪ್ರದಾಯವನ್ನೂ ತಮ್ಮ ಶಿಷ್ಯರಿಗೆ ಉಪದೇಶಿಸಿ, ಯೋಗಸಿದ್ಧಿಯೂ ಜ್ಞಾನಪ್ರಾಪ್ತಿಯೂ ಶ್ರೀಶಾರದಾಂಬೆಯವರ ಅನುಗ್ರಹದಿಂದ ಪೂರ್ಣವಾಗುವುದೆಂದು ಅನುಗ್ರಹಿಸಿದಂತೆ ತಿಳಿದುಬಂದಿದೆ. ಈ ಸಂಗತಿಯು ಈಚೆಗೆ ಈ ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳವರಿಂದ ರಚಿಸಲ್ಪಟ್ಟಿರುವ ಶಾರದಾಸ್ತೋತ್ರದ ಒಂದು ಶ್ಲೋಕದಿಂದ ಸ್ಪಷ್ಟಪಡುವುದು.

ಆಜ್ಞಾಸೀದ್ಗೌರವೀಮೇ ತವಖಲುಕರುಣಾವಾರಿಃಶಾರದಾಂಬಾ
ಸಾಷ್ಟಾಂಗಂ ಯೋಗಮಾರಾದುಪದಿಶತಿ ಭವಾನೌರಸಸೂನುರಸ್ಯಾಃ।
ಇತ್ಯಪ್ಯದ್ಯಾಪಿಮಾತರ್ನಹಿಖಲು ಕರುಣಾಜಾಯತೇ ಮಯ್ಯನಾಥೇ
ಕಿಂವಾಕುರ್ಯಾಂ ವದಾಂಬ ಪ್ರಣತಭಯಹರೇ ಶಾರದೇ ಚಾಪಲೋಽಹಮ್ ॥

ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳವರ ಪೂರ್ವವಾಸನಾ ಕ್ರಮವು ಹಿಂದೆ ಹೇಳಿರುವ ಅವರ ಕೆಲವು ಆಶ್ಚರ್ಯಕರವಾದ ಚರ್ಯೆಗಳಿಂದ ತಿಳಿದು ಬರುವುದಷ್ಟೆ? ಇವರಿಗೆ ಗುರುಗಳಿಂದ ಯೋಗಮಾರ್ಗದ ಉಪದೇಶವಾದ ಮೇಲೆ ಯೋಗದಲ್ಲಿ ಹೆಚ್ಚಾಗಿ ಆದರವುಂಟಾಯಿತು. ಅದರ ಮೇಲೆ ಆ ಗ್ರಂಥಗಳನ್ನು ನೋಡುವುದು, ಆ ಮಾರ್ಗದಲ್ಲಿ ಶ್ರಮಪಟ್ಟಿರತಕ್ಕವರು ದೊರೆತರೆ ಅಂತಹ ಜನರೊಡನೆ ವಿಚಾರಮಾಡುವುದು ಈ ರೀತಿಯಲ್ಲಿ ವ್ಯವಸಾಯ ಮಾಡುತ್ತಲಿದ್ದರು. ಈ ವಿಷಯವು ದೊಡ್ಡಸ್ವಾಮಿಗಳವರ ಗಮನಕ್ಕೆ ಬಂದೂ ಇತ್ತು. ತಮ್ಮ ಶಿಷ್ಯರ ವ್ಯವಸಾಯವನ್ನು ಕುರಿತು ಸಂತೋಷಿಸುತ್ತ, ಅವರಿಗೆ ಪ್ರೋತ್ಸಾಹವನ್ನು ಕೊಡುತ್ತಲೇ ಬಂದರು. ಹಾಗಿದ್ದರೂ, ಮಂತ್ರ ಪುರಶ್ಚರಣೆಯನ್ನು ಮಾಡುವುದಕ್ಕಾಗಲಿ, ಯೋಗಾಭ್ಯಾಸವನ್ನು ಮಾಡುವುದಕ್ಕಾಗಲಿ ಇದು

ಸಮಯವಲ್ಲವೆಂತಲೂ, ಈಗ ಶಾಸ್ತ್ರಾಭ್ಯಾಸಂಗ ರೂಪವಾದ ಸರಸ್ವತ್ಯುಪಾಸನೆಯನ್ನು ಮಾಡಬೇಕೆಂತಲೂ, ಶಾಸ್ತ್ರಾಭ್ಯಾಸಂಗವು ಪೂರ್ಣವಾದ ಬಳಿಕ ಯೋಗಾಭ್ಯಾಸದಲ್ಲಿಯೂ ಮಂತ್ರೋಪಾಸನೆಯಲ್ಲಿಯೂ ಪ್ರಯತ್ನಪಡುವುದು ಸುಲಭವೆಂತಲೂ ಆಗಾಗ್ಗೆ ತಮ್ಮ ಶಿಷ್ಯರಿಗೆ ಹೇಳುತ್ತಲೇ ಇದ್ದರು.

ಯಾರು ಎಷ್ಟು ಹೇಳಿದರೂ ಸ್ವತಃ ಆಲೋಚಿಸಿದರೂ ಪ್ರಾಕ್ತನವಾದ ವಾಸನೆಯು ಪ್ರಬಲವಾದದ್ದಷ್ಟೆ? ಅಂಥಾ ವಾಸನೆಗನುರೂಪವಾಗಿ ಮನುಷ್ಯನು ವರ್ತಿಸಬೇಕಾದದ್ದೇ ಹೊರತು ಅನ್ಯಥಾ ಹೋಗಲು ಹೇಗೆ ಸಾಧ್ಯವಾದೀತು? ಚಿಕ್ಕಶ್ರೀಗಳವರ ಸದ್ವಾಸನಾಬಲ ದಿಂದ ಇವರಿಗೆ ವಿದ್ಯಾಭ್ಯಾಸಂಗದಲ್ಲಿಯೂ ಇತರವಾದ ಲೋಕ ವ್ಯವಹಾರದಲ್ಲಿಯೂ ಉದಾಸೀನಭಾವವು ಹುಟ್ಟಿತು. ಏಕಾಂಗಿಯಾಗಿ ಅರಣ್ಯದಲ್ಲಿ ಸಂಚರಿಸುತ್ತ ಯೋಗಾಭ್ಯಾಸ ದಿಂದ ಚಿತ್ತನಿರೋಧವನ್ನು ಮಾಡಬೇಕೆಂದೂ, ಜ್ಞಾನಾಭ್ಯಾಸದಿಂದ ಮುಕ್ತಿಯನ್ನು ಸಂಪಾದಿಸಬೇಕೆಂದೂ ಮನೋವೃತ್ತಿಯುಂಟಾಗಿ ಪ್ರಬಲಿಸುತ್ತ ಬಂತು. ಇದರಿಂದ ದಿನದಿನಕ್ಕೆ ಸಂತೋಷವು ತಗ್ಗುತ್ತ ಬಂದಿತು. ಉತ್ಸಾಹವು ಓಡಿಹೋಯಿತು. ಆಹಾರ ವ್ಯವಹಾರಗಳಲ್ಲಿ ಕೂಡ ಉದ್ಯಮವು ಮಂದವಾಯಿತು. ಯಾವ ಸಂದರ್ಭದಲ್ಲಿಯೂ ಚಿಂತಾಕ್ರಾಂತರಾಗಿಯೇ ಇರುವಂತೆ ಕಾಣಿಸಿಕೊಂಡರು. ಈ ಸಂದರ್ಭದಲ್ಲಿ ಸಹಪಾಠಿಗಳಾದ ಅನೇಕರು ಶ್ರೀಗಳವರನ್ನು ನಿರ್ಬಂಧಿಸಿ, ಚಿಂತೆಗೆ ಕಾರಣವನ್ನು ತಿಳಿಯಲು ಯತ್ನಿಸಿದರು. ಅವರುಗಳಿಂದ ತಿಳಿಯಲು ಸಾಧ್ಯವಾಗಲಿಲ್ಲ. ಅನಂತರ ಲಕ್ಷ್ಮೀನರಸಿಂಹಶಾಸ್ತ್ರಿಗಳವರಿಗೆ ಇತರ ಶಿಷ್ಯರ ಮೂಲಕ ಶ್ರೀಗಳವರ ವಿದ್ಯಮಾನವು ಗೊತ್ತಾಯಿತು. ಅವರು ಬಹಳ ಉಪಾಯದಿಂದಲೂ, ತಮ್ಮ ಚಮತ್ಕಾರಗಳಿಂದಲೂ ಶ್ರೀಗಳವರ ಮನೋಗತವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟರು. ಆ ಕಾಲದಲ್ಲಿ ವಸಿಷ್ಠಮಹರ್ಷಿಗಳಿಂದ ಅತ್ಯಂತ ಬಾಲ್ಯದಲ್ಲಿ ಉಪದಿಷ್ಟನಾಗಿ ಅದರ ಪರಿಪಾಕದಿಂದ ಶ್ರೀರಾಮಚಂದ್ರನು ವಸಿಷ್ಠಮಹರ್ಷಿಗಳು ತನ್ನ ಚಿಂತೆಗೆ ಕಾರಣವನ್ನು ಕೇಳಿದಾಗ ಹೇಳಿದ ಉತ್ತರವನ್ನು ನೆನಪಿನಲ್ಲಿಟ್ಟುಕೊಂಡಿದ್ದ ಚಿಕ್ಕಸ್ವಾಮಿಗಳವರು, ತಮ್ಮ ಚಿಂತೆಗೆ ಕಾರಣವೇನೆಂದು ಪ್ರಶ್ನೆಮಾಡಿದ ತಮ್ಮ ಪೂರ್ವಾಶ್ರಮ ಸಂಬಂಧದಲ್ಲಿ ಭ್ರಾತೃಗಳಾಗಿಯೂ, ತಮಗೆ ವಿದ್ಯಾಗುರುಗಳಾಗಿಯೂ ಇರುವ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಬೇರೆ ಯಾವುದೊಂದು ಸಂಗತಿಯನ್ನೂ ಹೇಳದೆ,

ಪ್ರಾಕ್ತನಂ ವಾಸನಾಜಾಲಂ ನಿಯೋಜಯತಿ ಮಾಂ ಯಥಾ।
ಮುನೇ ತಥೈವ ಶಿಷ್ಠಾಮಿ ಕೃಪಣಃ ಕಿಂ ಕರೋಮ್ಯಹಮ್ ॥

ಎಂಬುದಾಗಿ ಉತ್ತರವನ್ನು ಕೊಟ್ಟರು.

ಬಾಲಯತೀಂದ್ರರ ಮನಃಪರಿಪಾಕವನ್ನು ತಿಳಿದು ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ ಆಶ್ಚರ್ಯವೂ, ಭೀತಿಯೂ ಉಂಟಾಯಿತು. ಅದರ ಮೇಲೆ ಶಾಸ್ತ್ರಿಗಳು ಶ್ರೀಗಳವರ ಮನೋಭಾವವನ್ನು ಬದಲಾಯಿಸಲು, ವೈದಿಕ ಲೌಕಿಕಗಳಾದ ಹಲವು ಇತಿಹಾಸಗಳನ್ನೂ ಅನುಭವಗಳನ್ನೂ ಹೇಳಿ, ಶ್ರೀಗಳವರ ವರ್ತನೆಯಿಂದ ತಮಗೆ ಲೋಕದಲ್ಲಿ ಅಪವಾದ ವುಂಟಾಗಬಹುದಾಗಿ, ಅದಕ್ಕೆ ಅವಕಾಶವಿಲ್ಲದಂತೆ ಈ ಬಾಲ್ಯದಲ್ಲಿ ಹುಟ್ಟಿರತಕ್ಕ ವೃತ್ತಿಯನ್ನು ನಿರೋಧಿಸಬೇಕೆಂದು ತಿಳಿಸಿಕೊಂಡರು. ಲಕ್ಷ್ಮೀನರಸಿಂಹಶಾಸ್ತ್ರಿಗಳವರ ಮಾತಿನಲ್ಲಿ ಚಿಕ್ಕಶ್ರೀಗಳವರಿಗೆ ಎಷ್ಟು ಪ್ರತಿಪತ್ತಿಯಿದ್ದರೂ, ಈ ಸಂದರ್ಭದಲ್ಲಿ ಅದು ಪ್ರಯೋಜನಕ್ಕೆ ಬರಲಿಲ್ಲ. ಶಾಸ್ತ್ರಿಗಳು ಈ ಸಂಗತಿಯನ್ನು ದೊಡ್ಡಶ್ರೀಗಳವರಿಗೆ ತಿಳಿಸಿ ಅವರಿಂದಲೇ ಚಿಕ್ಕಸ್ವಾಮಿಗಳವರಿಗೆ ಹಿತ ಬೋಧನೆಯನ್ನು ಮಾಡಿಸಬೇಕಲ್ಲದೆ ಅನ್ಯಥಾ ಸಾಧ್ಯವಿಲ್ಲವೆಂದು ನಿಷ್ಕರ್ಷೆಮಾಡಿದರು. ತಮ್ಮ ಶಿಷ್ಯವರ್ಯರ ತತ್ಕಾಲಸ್ಥಿತಿಯು ಶ್ರೀ ನರಸಿಂಹಭಾರತೀ ಸ್ವಾಮಿಗಳವರಿಗೆ ವಿಶೇಷವಾಗಿ ಸಂತೋಷವನ್ನುಂಟು ಮಾಡತಕ್ಕದ್ದಾಗಿದ್ದರೂ, ಅವರನ್ನು ಸಂಸ್ಥಾನಕ್ಕೆ ತಂದ ತಮ್ಮ ಉದ್ದೇಶವು ನೆರವೇರಲು ಅವಕಾಶವಿಲ್ಲದಂತೆ ಆಗುವುದೆಂಬ ಭೀತಿಯುಂಟಾದುದರಿಂದ, ದೊಡ್ಡಶ್ರೀಗಳವರಿಗೆ ಲಕ್ಷ್ಮೀನರಸಿಂಹಶಾಸ್ತ್ರಿಗಳವರ ಮೂಲಕವಾಗಿ ತಿಳಿದುಬಂದ ವರ್ತಮಾನವು ಸಂತೋಷವನ್ನುಂಟುಮಾಡಲಿಲ್ಲ. ಸರ್ವಪ್ರಕಾರದಿಂದಲೂ ಕೆಲವು ವರ್ಷಗಳ ಪರ್ಯಂತವಾದರೂ ಚಿಕ್ಕಶ್ರೀಗಳವರ ತತ್ಕಾಲವೃತ್ತಿಯನ್ನು ನಿರೋಧಿಸುವುದು ಆವಶ್ಯಕವೆಂದು ಶ್ರೀಗಳವರು ನಿಷ್ಕರ್ಷೆ ಮಾಡಿಕೊಂಡು, ಅಂತರಂಗವಾಗಿ ತಮ್ಮ ಶಿಷ್ಯರನ್ನು ಬರಮಾಡಿ ಅವರ ಅಭಿಪ್ರಾಯವನ್ನು ತಿಳಿಯುವುದಕ್ಕೆ ಪ್ರಯತ್ನಪಟ್ಟರು. ದೊಡ್ಡ ಶ್ರೀಗಳವರಿಗೆ ಸ್ವಲ್ಪ ಬಾಧಿರ್ಯವಿದ್ದುದರಿಂದ, ಮಾತನಾಡಿ ಎಲ್ಲಾ ಸಂಗತಿಗಳನ್ನೂ ಅವರಿಗೆ ತಿಳಿಸುವುದು ಕಷ್ಟವೆಂದು ತಿಳಿದು ಚಿಕ್ಕಶ್ರೀಗಳವರು ತಮ್ಮ ಅಭಿಪ್ರಾಯವನ್ನು ತಿಳಿದುಕೊಂಡು ಅದಕ್ಕೆ ಸಮರ್ಪಕವಾದ ಸಮಾಧಾನವನ್ನು ಬರೆದು ತೋರಿಸುವುದು ಈ ರೀತಿಯಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿ, ಅರಣ್ಯಕ್ಕೆ ಹೋಗಬೇಕೆಂಬ ತಮ್ಮ ಅಭಿಪ್ರಾಯಕ್ಕನುಸಾರವಾಗಿ ನಡೆಯಲು ಹೇಳುತ್ತಬಂದ ಯುಕ್ತಿಗಳನ್ನೂ, ಕಾರಣಗಳನ್ನೂ ತಿರಸ್ಕರಿಸುವಂತಹ ಯುಕ್ತಿಗಳನ್ನಾಗಲಿ ಕಾರಣಗಳನ್ನಾಗಲಿ ಹೇಳಿ ಅವರನ್ನು ಸಮಾಧಾನಪಡಿಸತಕ್ಕ ಸಂಭವವು ಇರಲಿಲ್ಲ. ಹೇಗಾದರೂ ಚಿಕ್ಕಶ್ರೀಗಳವರ ತತ್ಕಾಲಸ್ಥಿತಿಯನ್ನು ಬದಲಾಯಿಸುವುದು ಆವಶ್ಯಕ ವಾಗಿದ್ದದ್ದರಿಂದ ಅವರಿಗೆ ನಾನಾವಿಧವಾಗಿ ಭಯೋತ್ಪಾದನವನ್ನು ಮಾಡಿ, ತಮ್ಮ ಅನುಮತಿಯಿಲ್ಲದೆ ಮಾಡುವ ಪ್ರಯತ್ನದಿಂದ ಫಲವಾಗಲಾರದೆಂದು ನಿಗ್ರಹರೂಪ ವಾಗಿಯೂ, ಶಾರದಾಂಬೆಯವರ ಅನುಗ್ರಹದಿಂದ ಸದಾಶಿವ ಬ್ರಹ್ಮೇಂದ್ರರಂತೆ ನೀವು

ಆಗುವುದರಲ್ಲಿ ಸಂದೇಹವಿಲ್ಲವು; ಆದರೆ ನಮ್ಮ ಎದುರಿನಲ್ಲಿ ಆಗುವುದಿಲ್ಲವೆಂದು ಅನುಗ್ರಹರೂಪವಾಗಿಯೂ, ಚಿಕ್ಕಶ್ರೀಗಳವರಿಗೆ ಹೇಳಿ, ಅವರ ಮನೋಭಾವವನ್ನು ಕ್ರಮೇಣ ಬದಲಾಯಿಸುವಂತೆ ಮಾಡುತ್ತ ಬಂದದ್ದಲ್ಲದೆ, ಶೃಂಗೇರಿಯು ಏಕಾಂತವಾಸಕ್ಕೂ, ಜ್ಞಾನಾಭ್ಯಾಸಕ್ಕೂ, ತಪಸ್ಸಿಗೂ ಬಹಳ ಅನುರೂಪವಾದ ಸ್ಥಳವಾಗಿದೆ. ವಿಶಾಲವಾದ ಮತ್ತು ರಮಣೀಯವಾದ ಅರಣ್ಯವು ಸಮೀಪದಲ್ಲಿಯೇ ಇದೆ. ಅಲ್ಲಿಗೆ ಹೋದನಂತರ ನಿಮ್ಮ ಇಷ್ಟವಿದ್ದಂತೆ ಆಚರಿಸಬಹುದೆಂತಲೂ ಸಮಾಧಾನೋಕ್ತಿಗಳನ್ನು ಹೇಳಿ, ಅವರ ಚಿಂತೆಯನ್ನು ಹೋಗಲಾಡಿಸಿದರು. ಈ ಅರ್ಥವು ಸ್ವಲ್ಪಮಟ್ಟಿಗೆ ಈ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತಿಗಳಿಂದ ಹೇಳಲ್ಪಟ್ಟಿರುವ ಶಾರದಾ ಸ್ತುತಿಯಿಂದಲೂ ತಿಳಿಯಬಹುದಾಗಿದೆ.

ಆಶಾವಸ್ತ್ರಸ್ಸದಾತ್ಮನ್ಯವಿರತಹೃದಯಸ್ತ್ಯಕ್ತಸರ್ವಾನುರಾಗಃ
ಕಾಯೇ ಚಕ್ಷುರ್ಮುಖೇಷ್ವಪ್ಯನುದಿತಮಮತಃ ಕ್ವಾಪಿ ಕಸ್ಮಿಂಶ್ಚ ಕಾಲೇ।
ಶೈಲಾಗ್ರೇಽರಣ್ಯಕೋಣೇ ಕ್ವಚಿದಪಿ ಪುಳಿನೇ ಕ್ವಾಪಿ ರೇವಾತಟೇ ವಾ
ಗಂಗಾತೀರೇಽಥತುಂಗಾತಟಭುವಿ ಚ ಕದಾಸ್ವೈರಚಾರೀ ಭವೇಯಮ್॥

ದೊಡ್ಡಶ್ರೀಗಳವರು ಚಿಕ್ಕಸ್ವಾಮಿಗಳವರಿಗೆ ಪ್ರಸ್ಥಾನತ್ರಯ ಭಾಷ್ಯಶಾಂತಿಯನ್ನು ಕ್ರಮವಾಗಿ ಮಾಡಿಸಿ, ಶೃಂಗೇರಿಗೆ ಬಂದನಂತರ ಸೂತ್ರ ಭಾಷ್ಯವನ್ನು ಆಮೂಲಾಗ್ರವಾಗಿ ಒಂದು ಸಾರಿ ಪಾಠ ಹೇಳಿ ಶಾಂತಿಯನ್ನು ಮಾಡಿಸಿದರು.

❀❀❀

ಅಧ್ಯಾಯ - ೪.

ಯೋಗಾಭ್ಯಾಸ; ಶ್ರೀನರಸಿಂಹಭಾರತೀಸ್ವಾಮಿಗಳ ನಿರ್ಯಾಣ

ಶ್ರೀನರಸಿಂಹಭಾರತೀ ಸ್ವಾಮಿಗಳವರಿಗೆ 82 ವರ್ಷಗಳಾಗುತ್ತ ಬಂದವು. ವೃದ್ಧತ್ವದಿಂದ ಶರೀರವು ಬಹಳ ಗಳಿತವಾಯಿತು. ಇವರ ಕಾಲದಲ್ಲಿ ಒಂದು ದಿವಸದಲ್ಲಿಯಾದರೂ ವಿಚ್ಛಿತ್ತಿಯಿಲ್ಲದಂತೆ ನಡೆಸಿಕೊಂಡು ಬಂದ ಶ್ರೀಚಂದ್ರಮೌಳೀಶ್ವರ ಪೂಜೆಯನ್ನು ತಮ್ಮ ಶಿಷ್ಯರಿಗೆ ವಹಿಸಬೇಕಾಯಿತು. ಹೀಗಿದ್ದರೂ, ಗೋಕರ್ಣ ಕ್ಷೇತ್ರಯಾತ್ರೆಯನ್ನು ಮಾಡಿಕೊಂಡು ಬರಬೇಕೆಂಬ ಒಂದು ಸಂಕಲ್ಪವು ಇವರಿಗೆ ತಪ್ಪಿಯೇ ಇರಲಿಲ್ಲ. ಆದರೆ ಶ್ರೀಗಳವರ ವಯೋಧರ್ಮವನ್ನೂ, ಅವರ ಶರೀರ ಸ್ಥಿತಿಯನ್ನೂ, ನೋಡಿದರೆ ಅವರ ಸಂಕಲ್ಪವನ್ನು ನೆರವೇರಿಸುವುದಕ್ಕೆ ಯಾರಿಗೂ ಧೈರ್ಯವುಂಟಾಗುವಂತೆ ಇರಲಿಲ್ಲವಾಗಿ ಗೋಕರ್ಣಯಾತ್ರೆಗೆ ತಕ್ಕ ಪ್ರಯತ್ನವು ನಡೆಸಲ್ಪಡಲಿಲ್ಲ.

''ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥

ಎಂಬ ಭಗವದುಕ್ತಿಯಂತೆ, ಶ್ರೀಗಳವರು ಯಾವಾಗಲೂ ಗೋಕರ್ಣ ಕ್ಷೇತ್ರವನ್ನೂ ಮಹಾಬಲೇಶ್ವರನನ್ನೂ ಕುರಿತು ಚಿಂತಿಸುತ್ತಲಿದ್ದದ್ದರಿಂದ ಆ ಭಗವಂತನೇ ಇವರ ಸಂಕಲ್ಪವನ್ನು ನೆರವೇರಿಸಿದ್ದಾಗಿ ತಿಳಿಯಲು ಒಂದು ಆಶ್ಚರ್ಯ ಸಂಗತಿ ನಡೆಯಿತು. ಈ ಸತ್ಯಸಂಕಲ್ಪರ ನಿರ್ಯಾಣಕ್ಕೆ ಮೊದಲದಿನ ಮಲಗಿರುವಾಗ್ಗೆ ತಾವಾಗಿಯೇ ಸಮೀಪದಲ್ಲಿದ್ದವರಿಗೆಲ್ಲಾ ಕೇಳುವಂತೆ ಮಾತನಾಡತೊಡಗಿದರು. ಇದು ಸ್ವಪ್ನಭಾಷಣವೆಂದಾದರೂ ಹೇಳಬಹುದು. ಅಥವಾ ಸ್ವಭಾವವಾದ ಬುದ್ಧಿಗೆ ಅಶಕ್ತಿಯುಂಟಾಗಿದ್ದ ಸಂದರ್ಭದಲ್ಲಿ ಮಾಡಿದ ಭಾಷಣವೆಂದಾದರೂ ಸಮೀಪವರ್ತಿಗಳು ತಿಳಿದುಕೊಳ್ಳುವ ಹಾಗಿತ್ತು. ಸಂಭಾಷಣ ಕ್ರಮವು- ''ತಮ್ಮನ್ನು ಕರೆದುಕೊಂಡು ಹೋಗಲು ಗೋಕರ್ಣದಿಂದ ಬ್ರಾಹ್ಮಣರು ಬಂದಿರುತ್ತಾರೆ, ಹೊರಡುವುದಕ್ಕೆ ಮ್ಯಾನಾ ಸಿದ್ಧವಾಗಲಿ'' ಎಂದೂ, 23 ನಿಮಿಷವಾದ ಮೇಲೆ ಮತ್ತೆ ''ಮ್ಯಾನಾಸಿದ್ಧ ವಾಗಿರುತ್ತೋ? ಅದರಲ್ಲಿ ನಮ್ಮನ್ನು ಕುಳ್ಳಿರಿಸಿ'' ಎಂದೂ ಹೇಳಿದ ಹಾಗೆ ಕೇಳಿಬಂತು. ಇದಾದ ಸುಮಾರು ಒಂದು ಗಂಟೆಯ ಮೇಲೆ ''ಇದೇನು ಆಶ್ಚರ್ಯ ! ಇಷ್ಟು ಜಾಗ್ರತೆಯಿಂದ ನಮ್ಮನ್ನು ಗೋಕರ್ಣಕ್ಕೆ ಕರೆದುಕೊಂಡು ಹೋಗಿ ಮತ್ತೆ ಹಿಂದಕ್ಕೆ ಕರೆತಂದುಬಿಟ್ಟರು?

ನಮ್ಮ ಪಾಲಕಿಯ ಬೋಯಿಜನರು ಬಹಳ ಶಕ್ತರು. ಅವರಿಗೆ ಇನಾಮನ್ನು ಕೊಡಿ'' ಎಂಬುದಾಗಿ ಹೇಳಿದ ಮಾತು ಕೇಳಿತು. ಇದು ಹೊರತು ಬೇರೆ ಯಾವ ಮಾತನ್ನೂ ಶ್ರೀಗಳವರು ಆಡಲೇ ಇಲ್ಲ. ಮಾರನೆಯ ದಿನವಾದ ಶಾ॥ ಶಕ 1802ನೆಯ ಪ್ರಮಾಥಿ ಸಂವತ್ಸರದ (1879ನೆ ಇಸವಿ) ಜ್ಯೇಷ್ಠಶುಕ್ಲ ದ್ವಿತೀಯ ಶುಕ್ರವಾರ ಪ್ರಾತಃಕಾಲ 9 ಘಂಟೆಯ ಸಮಯದಲ್ಲಿ ಶ್ರೀನರಸಿಂಹಭಾರತೀ ಸ್ವಾಮಿಗಳವರು ಪಾಂಚಭೌತಿಕ ದೇಹವನ್ನು ಬಿಟ್ಟು ವಿದೇಹ ಮುಕ್ತಿಯನ್ನು ಪಡೆದರು. ಆ ಕಾಲದಲ್ಲಿ ಇವರ ಶಿಷ್ಯರಾದ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳವರಿಗೆ ಇಪ್ಪತ್ತೆರಡು ವರ್ಷದ ವಯಸ್ಸಾಗಿತ್ತು. ಕೇವಲ ಬಾಲ್ಯವಯಸ್ಸಿನಲ್ಲಿ ತಮ್ಮ ಸನ್ನಿಧಿಗೆ ಬರಮಾಡಿಕೊಂಡು ಹದಿಮೂರು ವರ್ಷಗಳಕಾಲ ಒಂದು ದಿನವಾದರೂ ಎಡಬಿಡದೆ ತಮ್ಮೊಡನೆ ಇಟ್ಟುಕೊಂಡು, ಎಲ್ಲಾ ವಿಧದಿಂದಲೂ ತಮ್ಮನ್ನು ಆದರಿಸಿ ವೃದ್ಧಿಗೆ ತಂದ ಗುರುಗಳು ಮುಕ್ತರಾದ ಕೂಡಲೆ ಶ್ರೀಸ್ವಾಮಿಗಳಿಗೆ ಉಂಟಾದ ದುಃಖಕ್ಕೆ ಪಾರವಿರಲಿಲ್ಲದಂತಾಯಿತು. ಈ ದುಃಖವು ಸ್ವತಃ ಸಮಾಧಾನ ಮಾಡಿಕೊಳ್ಳುವುದರಿಂದಾಗಲಿ, ಇತರರು ಸಮಾಧಾನಗೊಳಿಸುವುದರಿಂದಾಗಲಿ, ಯಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಾಗಿರಲಿಲ್ಲ. ಅನಂತರ ಸಂಸ್ಥಾನದ ಹಿಂದಿನ ಪದ್ಧತಿಯನ್ನನುಸರಿಸಿ ಶ್ರೀನರಸಿಂಹಭಾರತೀ ಸ್ವಾಮಿಗಳವರ ಕಳೇಬರಕ್ಕೆ ನಡೆಸಬೇಕಾದ ಸಂಸ್ಕಾರಗಳೆಲ್ಲವೂ ಯಥಾವಿಧಿಯಾಗಿ ನಡೆಯಿಸಲ್ಪಟ್ಟವು. ಇದೆಲ್ಲವೂ ಪೂರ್ಣವಾಗು ವುದರಲ್ಲಿ ರಾತ್ರಿ ಹನ್ನೆರಡು ಗಂಟೆಯ ಸಮಯವಾಯಿತು. ಆ ದಿನ ಶ್ರೀಸ್ವಾಮಿಗಳವರು ಭಿಕ್ಷೆಯನ್ನು ಸ್ವೀಕರಿಸಲೇ ಇಲ್ಲ. ನಿದ್ರೆಯೂ ಬರಲಿಲ್ಲ. ತಮ್ಮ ಗುರುಗಳನ್ನೇ ನೆನೆನೆನೆದು ಅವರ ಗುಣಕಥನ ಮಾಡುತ್ತ, ಆ ಮಹಾನುಭಾವರು ತಮ್ಮ ವಿಷಯದಲ್ಲಿ ಮಾಡಿದ ಪ್ರೀತಿಯನ್ನೂ ಅನುಗ್ರಹವನ್ನೂ ಸ್ಮರಿಸಿ, ಪ್ರಲಾಪಿಸುತ್ತ ಆಹಾರವೂ ನಿದ್ರೆಯೂ ಇಲ್ಲದೆ ಬಳಲಿದ್ದ ಸ್ವಾಮಿಗಳವರಿಗೆ ಸ್ವಲ್ಪ ಮಬ್ಬು ಬಂದಂತಾಗಿ ಆ ಕಾಲದಲ್ಲಿ ತಮ್ಮ ಗುರುಗಳನ್ನು ನೋಡಿ ನಮಸ್ಕಾರ ಮಾಡಿದಂತೆಯೂ, ''ಇದೇನು ? ಹೆಂಗಸರಂತೆ ಅನ್ನ ನೀರು ಬಿಟ್ಟು ಅಳುವುದೇಕೆ ? ನಾವು ಎಲ್ಲಿಹೋಗಿದ್ದೇವೆ ? ಇಲ್ಲಿಯೇ ಇರುತ್ತೇವಲ್ಲಾ ?'' ಎಂದು ಗದರಿಸಿ ಹೇಳಿದಂತೆಯೂ ಕೇಳಿತು. ಈ ಸಂಗತಿಯು ನಡೆದಕೂಡಲೆ ಗಾಬರಿಯಿಂದ ನೋಡುವಾಗ್ಗೆ ಯಾವುದೂ ತಿಳಿಯಲಿಲ್ಲ. ಆಗ ದೊಡ್ಡ ಗುರುಗಳು ಇದ್ದ ಕಾಲದಲ್ಲಿ ಅವರುಹೇಳುತ್ತಲಿದ್ದ ಮಾತುಗಳು ಶ್ರೀಗಳವರ ಸ್ಮೃತಿಗೆ ಬಂದುವು. ಅದು ಹೇಗೆಂದರೆ ''ನಮ್ಮ ವಿಯೋಗವು ನಿಮಗೆ ಸೈರಿಸಲುಶಕ್ಯವಾಗುವುದು. ಈಗ ನಾವು ಈ ದೇಹದಲ್ಲಿ ಪರಿಚ್ಛಿನ್ನರಾಗಿರುತ್ತೇವೆ. ಈ ದೇಹವನ್ನು ಬಿಟ್ಟನಂತರ ಎಲ್ಲಾ ಕಡೆಯಲ್ಲಿಯೂ ವ್ಯಾಪಕರಾಗಿರುತ್ತೇವೆ. ಇಷ್ಟೇ ಪ್ರಭೇದ ಹೊರತು ಬೇರೆಯಿಲ್ಲ. ಆದರೆ ಕಣ್ಣಿಗೆ ಕಾಣುವುದಿಲ್ಲ'' ಎಂಬುದಾಗಿ ಹೇಳುತ್ತಲಿದ್ದುದಕ್ಕೆ

ಸರಿಯಾಗಿ, ಗುರುಗಳು ವಿಯೋಗಾನಂತರದಲ್ಲಿಯೂ ತಮಗೆ ಹೇಳಿದ ಮಾತನ್ನು ಕೇಳಿ ಪರಮಾಶ್ಚರ್ಯಭರಿತರಾಗಿ, ಧೈರ್ಯವನ್ನು ಅವಲಂಬಿಸಿ, ದುಃಖವನ್ನು ತಾವಾಗಿಯೇ ಸಮಾಧಾನಕ್ಕೆ ತಂದುಕೊಳ್ಳುತ್ತ ಬಂದರು.

ದೊಡ್ಡ ಗುರುಗಳು ಮುಕ್ತರಾದ ಸಂಗತಿಯು ಶ್ರೀಮುಖಗಳನ್ನು ಕಳುಹಿಸುವುದರ ಮೂಲಕ ಎಲ್ಲಾ ದೇಶಗಳ ಶಿಷ್ಯಜನರುಗಳಿಗೂ ತಿಳಿಸಲ್ಪಟ್ಟಿತು. ಅದರಂತೆ ಗೋಕರ್ಣದಲ್ಲಿರುವ ಮಠದ ದೇವರಪೂಜೆಯನ್ನು ಮಾಡುವವನಾಗಿಯೂ, ಆ ಪ್ರಾಂತ್ಯದ ಮಠಾಧಿಕಾರಿಯಾಗಿಯೂ ಇದ್ದ ಗೋಪಾಲಶಾಸ್ತ್ರಿ ಎಂಬಾತನಿಗೂ ಒಂದು ಶ್ರೀಮುಖವು ಕಳುಹಿಸಲ್ಪಟ್ಟಿತ್ತು. ತನಗೆ ತಲುಪಿದ ಶ್ರೀಮುಖದಿಂದ ಶ್ರೀನರಸಿಂಹಭಾರತೀ ಸ್ವಾಮಿಗಳವರು ಸಿದ್ಧಿಹೊಂದಿದ ಸಮಾಚಾರವನ್ನು ತಿಳಿದ ಆ ಗೋಪಾಲಶಾಸ್ತ್ರಿಗೆ ಬಹಳ ಆಶ್ಚರ್ಯವಾಯಿತು. ಅದಕ್ಕೆ ಕಾರಣವೇನೆಂದರೆ - ಯಾವದಿನ ಶ್ರೀನರಸಿಂಹಭಾರತೀ ಸ್ವಾಮಿಗಳವರು ಮುಕ್ತರಾದರೋ ಅದಕ್ಕೆ ಮೊದಲನೆಯದಿನ ಆತನ ಸ್ವಪ್ನದಲ್ಲಿ ತಾನು ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದಲ್ಲಿದ್ದಂತೆಯೂ, ಅಲ್ಲಿಗೆ ನರಸಿಂಹಭಾರತೀ ಸ್ವಾಮಿಗಳವರು ಯಾನಾರೂಢರಾಗಿ ಬಂದಂತೆಯೂ, ತಾನು ಗಾಬರಿಯಿಂದ ಎದ್ದು ಅವರಿಗೆ ನಮಸ್ಕಾರ ಮಾಡಿ ನಿಂತಿರಲು ಶ್ರೀಸ್ವಾಮಿಗಳವರು ತನ್ನ ಯೋಗಕ್ಷೇಮಗಳನ್ನು ವಿಚಾರಿಸಿ, ಅತಿ ವೇಗದಿಂದ ಮಹಾಬಲೇಶ್ವರ ಸ್ವಾಮಿಯ ಸಮೀಪಕ್ಕೆ ದಯಮಾಡಿ ದೇವರಿಗೆ ಪೂಜೆ ಮಾಡಿ ಕರ್ಪೂರದಿಂದ ನೀರಾಜನವನ್ನು ಮಾಡಿದಂತೆಯೂ ಕಂಡುಬಂದಿತ್ತು. ಅದಕ್ಕೆ ಮಾರನೆಯ ದಿನವೇ ಗುರುಗಳವರು ನಿರ್ಯಾಣಹೊಂದಿದರೆಂಬ ಅಂಶವು ಆತನಿಗೆ ತಿಳಿದುಬಂದಿತು. ಆ ಗೋಪಾಲಶಾಸ್ತ್ರಿಯು ತಾನೇ ಶೃಂಗೇರಿಗೆ ಬಂದು ಮೇಲಿನ ಸಂಗತಿಯನ್ನು ಶ್ರೀಸ್ವಾಮಿಗಳವರಲ್ಲಿ ತಿಳಿಸಲಾಗಿ ಶ್ರೀಸ್ವಾಮಿಗಳವರಿಗೂ ಇತರರಿಗೂ ಪರಮಾಶ್ಚರ್ಯವಾಗಿ ಆ ದೊಡ್ಡ ಗುರುಗಳ ದೃಢ ಸಂಕಲ್ಪಾನುಗುಣವಾಗಿ ಈಶ್ವರನೇ ಅವರನ್ನು ಗೋಕರ್ಣಕ್ಕೆ ಬರಮಾಡಿಕೊಂಡು ದರ್ಶನಕ್ಕೆ ಕೊಟ್ಟಿರಬಹುದೆಂತಲೂ ಸರ್ವದಾ ಅವರ ಭಾವನೆಯು ಗೋಕರ್ಣಕ್ಷೇತ್ರ ಯಾತ್ರಾ ವಿಷಯವಾಗಿದ್ದುದರಿಂದ ನಿರ್ಯಾಣಕಾಲದಲ್ಲಿಯೂ ಇದ್ದ ಅದೇ ಭಾವನೆಯು

''ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಳೇಬರಮ್ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥''

ಎಂಬಂತೆ ಆ ಮಹನೀಯರಿಗೆ ಫಲಿಸಿತೆಂತಲೂ, ಅವರು ಹೇಳುತ್ತಲಿದ್ದಂತೆ ಪರಿಚ್ಛಿನ್ನವಾದ ಶರೀರವನ್ನು ಬಿಟ್ಟು ವ್ಯಾಪಕತೆಯನ್ನು ಹೊಂದಿದ್ದೇ ನಿಜವೆಂತಲೂ, ನಾನಾಪ್ರಕಾರವಾಗಿ ಅವರ ಪ್ರಭಾವವನ್ನು ಸ್ಮರಿಸಿಕೊಂಡು ಎಲ್ಲರೂ ಆಶ್ಚರ್ಯಪಟ್ಟರು.

ಆ ಗುರುಸ್ವಾಮಿಗಳವರು ನಿರ್ಯಾಣಹೊಂದಿದ ಬಳಿಕ ಶೃಂಗೇರಿಪುರನಿವಾಸಿಗಳ ಕೋರಿಕೆಯಂತೆ ಈ ಶ್ರೀಗಳವರಿಗೆ ವ್ಯಾಖ್ಯಾನ ಸಿಂಹಾಸನದಲ್ಲಿ ಪುನಃ ಪಟ್ಟಾಭಿಷೇಕ ಮಹೋತ್ಸವವು ಪ್ರಮಾಥಿ ಸಂವತ್ಸರದ ಆಷಾಢ ಶುದ್ಧ ಅಷ್ಟಮಿ ಶುಕ್ರವಾರದಲ್ಲಿ ನಡೆಸಲ್ಪಟ್ಟಿತು. ತಮ್ಮ ಗುರುಗಳು ಸಿದ್ಧಿಹೊಂದಿದ ದಿನಮೊದಲುಗೊಂಡು ಆರು ವರ್ಷಗಳ ಕಾಲ ಒಂದುದಿನವೂ ವಿಚ್ಛಿತ್ತಿಯಿಲ್ಲದಂತೆ ಬಹಳ ಭಕ್ತಿಶ್ರದ್ಧೆಯಿಂದ ಪ್ರತಿದಿನವೂ ಈ ಸ್ವಾಮಿಗಳವರು ಗುರುಗಳಸಮಾಧಿಯಲ್ಲಿ ಪೂಜೆಯನ್ನು ಮಾಡಿದರು. ಸಂಸ್ಥಾನದ ಯಾವ ಕೆಲಸವು ಮಾಡತಕ್ಕುದಾಗಿರಲಿ, ಪೂರ್ವಭಾವಿಯಾಗಿ ತಾವು ಗುರುಗಳ ಸಮಾಧಿಯಲ್ಲಿ ಪೂಜೆಗಾಗಿ ಹೋಗಿ ಗುರುಗಳವರ ಸನ್ನಿಧಿಯಲ್ಲಿ ತಿಳಿಸಿಕೊಂಡು ಅವರ ಅನುಮತಿಯು ದೊರೆತಲ್ಲದೆ ಯಾವ ಕೆಲಸವನ್ನೂ ಮಾಡುವುದಿಲ್ಲವೆಂದು ನಿಷ್ಕರ್ಷೆಮಾಡಿಕೊಂಡು ಅದರಂತೆಯೇ ನಡೆಯುತ್ತ ಬಂದರು. ಇವರ ಭಕ್ತಿಗೆ ಅನುಗುಣವಾಗಿ ಗುರುಗಳವರ ಪ್ರಸಾದವು ಈ ಮಹನೀಯರಿಗೆ ಇವರ ಜೀವಿತ ಕಾಲದಲ್ಲೆಲ್ಲಾ ಆಗುತ್ತಲೇಬಂತು. ಪ್ರಮಾಥಿವರ್ಷದಿಂದ ಪಾರ್ಥಿವಸಂವತ್ಸರದವರೆಗೆ ಶ್ರೀಗಳವರು ಶೃಂಗೇರಿಯಲ್ಲಿದ್ದುಕೊಂಡು, ತಮ್ಮ ಆಶ್ರಮೋಚಿತವಾದ ಕರ್ಮಾನುಷ್ಠಾನಗಳಿಂದಲೂ, ಸಕಲದೇವತಾಸ್ವರೂಪರಾದ ತಮ್ಮ ಗುರುಗಳ ಪೂಜೆ ಶಾರದಾಚಂದ್ರಮೌಳೀಶ್ವರಾರಾಧನೆ ಇವುಗಳಿಂದಲೂ, ಶಿಷ್ಯರಿಗೆ ತರ್ಕ ವೇದಾಂತ ಶಾಸ್ತ್ರಗಳನ್ನು ಪಾಠಹೇಳಿ ಸ್ವತಃ ಗ್ರಂಥಾವಲೋಕನವನ್ನು ಮಾಡಿ ಪಾಂಡಿತ್ಯವನ್ನು ಹೆಚ್ಚಾಗಿ ಸಂಪಾದಿಸಿಕೊಳ್ಳುವುದರಿಂದಲೂ ಬಹಳ ಆನಂದವಾಗಿ ಕಾಲವನ್ನು ಕಳೆಯುತ್ತಲಿದ್ದರು.

ಈ ಗುರುಗಳಿಗೆ ಬಾಲ್ಯದಿಂದಲೂ ಯೋಗಮಾರ್ಗದಲ್ಲಿ ಆಸಕ್ತಿಯು ಬಹಳ ಹೆಚ್ಚಾಗಿದ್ದಂತೆ ಹಿಂದೆ ಸೂಚಿಸಿದೆಯಷ್ಟೆ? ತಮ್ಮ ಗುರುಗಳ ನಿರ್ಯಾಣದನಂತರ ಶೃಂಗೇರಿಯಲ್ಲಿ ವಸತಿಮಾಡಿದ್ದ ಕಾಲದಲ್ಲಿ ಕೆಲವು ವರ್ಷಗಳು ಗುರೂಪದಿಷ್ಟವಾಗಿದ್ದ ಮಾರ್ಗವನ್ನು ಅನುಸರಿಸಿ ಹಠಯೋಗಾಭ್ಯಾಸವನ್ನು ಮಾಡಿದರು. ಯೋಗದಲ್ಲಿ ಹಠಯೋಗವೆಂತಲೂ, ರಾಜಯೋಗವೆಂತಲೂ, ಲಯಯೋಗವೆಂತಲೂ, ಮಂತ್ರಯೋಗವೆಂತಲೂ ನಾಲ್ಕು ಪ್ರಭೇದಗಳುಂಟು. 3-4ನೆಯ ಪ್ರಭೇದಗಳಾದ ಲಯಯೋಗ ಮಂತ್ರಯೋಗಗಳಿಗೆ 2ನೆಯ ರಾಜಯೋಗದಲ್ಲಿಯೇ ಅಂತರ್ಭಾವವನ್ನು ಹೇಳಬಹುದು. ಹಾಗೆ ಹೇಳಿದರೆ ಎರಡು ಪ್ರಭೇದಗಳೇ ಮುಖ್ಯವಾದವುಗಳಾಗಿ ಏರ್ಪಡುವುವು. ಯೋಗಾಭ್ಯಾಸದಿಂದ ಚಿತ್ತ ನಿರೋಧವಾಗಿ, ಜ್ಞಾನಾಭ್ಯಾಸದಲ್ಲಿ ಯೋಗವು ಪರಂಪರಾಕಾರಣವೆನ್ನಿಸಿಕೊಳ್ಳುವುದು. ಹಠಯೋಗ ರಾಜಯೋಗಗಳೆರಡೂ ಚಿತ್ತನಿರೋಧದಲ್ಲಿ ಸಮಾನವಾದ ಸಾಧಕಗಳಾಗಿದ್ದರೂ ಹಠಯೋಗಾಭ್ಯಾಸದಿಂದ ಚಿತ್ತವು ಎಷ್ಟು ಜಾಗ್ರತೆಯಿಂದ ನಿರುದ್ಧವಾಗಬಹುದೋ ಅಷ್ಟು

ಜಾಗ್ರತೆಯಾಗಿ ರಾಜಯೋಗಾಭ್ಯಾಸದಿಂದ ಆಗುವುದಿಲ್ಲ. ಈ ಅರ್ಥವನ್ನು ಯುಕ್ತಿಯಿಂದಲೂ ತಿಳಿದುಕೊಳ್ಳಬಹುದು. ಹಠಯೋಗದಲ್ಲಿ ಪ್ರಾಣನಿರೋಧವು ಮುಖ್ಯಭಾಗವಾಗಿರುವುದು. ಪ್ರಾಣಕ್ಕೂ ಮನಸ್ಸಿಗೂ ಪರಸ್ಪರ ಹೆಚ್ಚಾದ ಸಂಬಂಧವಿರುವುದರಿಂದ ಬಲಾತ್ಕಾರವಾಗಿ ಪ್ರಾಣನಿರೋಧವನ್ನು ಮಾಡಿದಕೂಡಲೆ ಅತ್ಯಂತ ಸಮೀಪ ಸಂಬಂಧವಿರುವ ಚಿತ್ತವು ನಿರುದ್ಧವಾಗುವುದು. ರಾಜಯೋಗದಲ್ಲಿ ಲಕ್ಷ್ಯಾನುಸಂಧಾನವೇ ಮುಖ್ಯಭಾಗವಾಗಿರುವುದು. ಲಕ್ಷ್ಯಾನುಸಂಧಾನಮಾಡಬೇಕಾದರೆ ಚಿತ್ತವು ನಿಶ್ಚಲವಾಗಿರಬೇಕು. ಚಿತ್ತನಿರೋಧವಮಾಡುವುದನ್ನು ಸ್ವಲ್ಪಮಟ್ಟಿಗಾದರೂ ಅಭ್ಯಾಸವಮಾಡಿದಲ್ಲದೆ ರಾಜಯೋಗಾಭ್ಯಾಸಮಾಡುವುದು ಸುಲಭವಲ್ಲವು. ಆದ್ದರಿಂದ ಹಠಯೋಗಾಭ್ಯಾಸವೇ ಚಿತ್ತನಿರೋಧದಲ್ಲಿ ಸುಲಭವಾದ ಕಾರಣವೆಂದು ಯೋಗಶಾಸ್ತ್ರಜ್ಞರ ಸಿದ್ಧಾಂತವಾಗಿರುವುದು. ಪ್ರಾಣಾಯಾಮವು ಪೂರಕ, ಕುಂಭಕ, ರೇಚಕಗಳೆಂದು ಮೂರುವಿಧವಾಗಿ ಭಾಗಿಸಲ್ಪಟ್ಟಿರುವುದು. ಹೃದಯಾಕಾಶದಲ್ಲಿರುವ ಗಾಳಿಯನ್ನು ಪೂರ್ತಿಯಾಗಿ ಹೊರಡಿಸಿದನಂತರ ಪುನಃ ನಾಸಾಮಾರ್ಗದಿಂದ ಗಾಳಿಯನ್ನು ಒಳಗೆ ಸೆಳೆಯುವುದಕ್ಕೆ ಪೂರಕವೆಂದು ಹೆಸರು. ಹಾಗೆ ಒಳಕ್ಕೆ ತೆಗೆದುಕೊಂಡ ವಾಯುವನ್ನು ಶರೀರದ ಯಾವ ಮಾರ್ಗದಿಂದಲೂ ಹೊರಗೆ ಹೋಗದಂತೆ ನಿಶ್ಚಲವಾಗಿ ನಿಲ್ಲಿಸುವುದು ಕುಂಭಕವೆನಿಸುವುದು. ಹಾಗೆ ನಿಲ್ಲಿಸಲ್ಪಟ್ಟ ಗಾಳಿಯನ್ನು ಮತ್ತೆ ನಿಶ್ಶೇಷವಾಗಿ ಹೊರಗೆ ಬಿಡುವುದಕ್ಕೆ ರೇಚಕವೆಂದು ಹೆಸರು. ಈ ರೀತಿಯಿಂದ ಪ್ರಾಣಾಯಾಮವನ್ನು ಅಭ್ಯಾಸವಮಾಡುತ್ತ ಬಂದಲ್ಲಿ ಅತಿಚಂಚಲಸ್ವಭಾವದಿಂದ ಓಡಾಡುತ್ತಲಿರುವ ಮನಸ್ಸಿಗೆ ಬಹಳ ನಿರ್ಬಂಧವುಂಟಾಗಿ ಅದು ತಟ್ಟನೆ ಸ್ವಾಧೀನವಾಗುವುದು. ಪ್ರಾಣಾಯಾಮ ಸಿದ್ಧಿಗೆ ಆರಂಭ ಸ್ವೇದವು, ಮಧ್ಯಭಾಗದಲ್ಲಿ ಕಂಪನವು. ಅಂತ್ಯಭಾಗದಲ್ಲಿ ಚಲನವು, ಉಂಟಾಗುವುದೆಂದು ಲಕ್ಷಣವನ್ನು ಹೇಳಿರುವರು. ಈ ಅಭ್ಯಾಸಕ್ಕೆ ಆಹಾರ ನಿಯಮವನ್ನೂ, ಆಸನ ನಿಯಮವನ್ನೂ, ಸ್ಥಳನಿಯಮವನ್ನೂ ಹೇಳಿರುವರು. ಶಾಸ್ತ್ರೋಕ್ತವಾದ ನಿಯಮಗಳನ್ನು ಅನುಸರಿಸಿ ಗುರೂಪದಿಷ್ಟವಾದ ಮಾರ್ಗದಿಂದ ಪ್ರಾಣಾಯಾಮಾಭ್ಯಾಸವನ್ನು ಪೂರ್ತಿಯಾಗಿ ಮಾಡಿದವರು ಬಹಳ ಸುಲಭವಾಗಿ ಚಿತ್ತವನ್ನು ಸ್ವಾಧೀನಮಾಡಿಕೊಂಡು, ಸರ್ವೋತ್ತಮವಾದ ಜ್ಞಾನಾಭ್ಯಾಸವನ್ನು ಸುಲಭವಾಗಿ ಮಾಡಿ ನಿತ್ಯಸುಖವನ್ನು ಅನುಭವಿಸುವರು.

ಈ ಗುರುಗಳಿಗೆ ಪ್ರಾಣಾಯಾಮ ಸಿದ್ಧಿಯು ಬಹಳಮಟ್ಟಿಗೆ ಆಗಿದ್ದಂತೆ ಹೇಳಬಹುದು. ಇವರು ಪ್ರಾಣಾಯಾಮಕ್ಕೆ ಕುಳಿತುಕೊಂಡ ಕಾಲದಲ್ಲಿ ವಿಶೇಷವಾದ ಸ್ವೇದಕ್ಕೆ ಪ್ರಾರಂಭವಾಗಿ, ಶರೀರದಲ್ಲಿ ಪಾದಾಗ್ರದಿಂದ ಶಿರಸ್ಸಿನವರೆಗೆ ನಡುಕವುಂಟಾಗುತ್ತಲಿದ್ದದ್ದು ಈ ಲೇಖಕನು ಕಣ್ಣಿಂದ ನೋಡಿ ತಿಳಿದುಕೊಂಡು ವಿಷಯವಾಗಿದೆ. ಚಲನವುಂಟಾಗುತ್ತಲಿದ್ದದ್ದು ಇತರರಿಗೆ

ಗೋಚರವಾಗುತ್ತಿರಲಿಲ್ಲ. ಹಠಯೋಗದಲ್ಲಿ ಖೇಚರೀಸಿದ್ಧಿಯೆಂದು ಕಷ್ಟತರವಾದ ಒಂದು ಭಾಗವಿರುವುದು. ಈ ಸಿದ್ಧಿಯನ್ನು ಪಡೆದವರಿಗೆ ಜರಾಮರಣಗಳು ಇಲ್ಲವೆಂಬುದು ಯೋಗಶಾಸ್ತ್ರಸಿದ್ಧಾಂತವು. ಇದರ ಕ್ರಮವು ಛೇದನ, ದೋಹನ, ಚಾಲನಗಳೆಂಬ ಮೂರು ಸಂಸ್ಕಾರಗಳನ್ನು ಮಾಡಿ ನಾಲಿಗೆಯನ್ನು ಉದ್ದವಾಗಿ ಬೆಳೆಸಿ, ಒಳಗಿನ ನಾಸಾ ರಂಧ್ರದ ಮೂಲಕ ಭ್ರೂಮಧ್ಯದಲ್ಲಿ ನಾಲಗೆಯನ್ನು ನಿಲ್ಲಿಸುವುದು. ಹಾಗೆ ಭ್ರೂಮಧ್ಯದಲ್ಲಿ ನಾಲಗೆಯನ್ನು ತ್ರಿಮಹೂರ್ತಕಾಲದವರೆಗೆ ನಿಲ್ಲಿಸುತ್ತ ಬಂದಲ್ಲಿ ಸಹಸ್ರಾರ ಕಮಲದಿಂದ ಅಮೃತ ಬಿಂದು ಸ್ರಾವವಾಗಿ ಅಮರತ್ವಪ್ರಾಪ್ತಿಯಾಗುವುದೆಂದು ಯೋಗಶಾಸ್ತ್ರದಲ್ಲಿ ಹೇಳಲ್ಪಟ್ಟದೆ. ಇದಕ್ಕೆ ಲಂಬಿಕಾ ಯೋಗವೆಂತಲೂ ಪ್ರಸಿದ್ಧಿಯಿದೆ. ಈ ಯೋಗವನ್ನು ಶೃಂಗೇರಿ ಮಠದಲ್ಲಿ ಈಗ್ಗೆ 600 ವರ್ಷಗಳ ಹಿಂದೆ ಗುರುಗಳಾಗಿದ್ದ ಪ್ರಸಿದ್ಧ ವಿದ್ಯಾರಣ್ಯ ಸ್ವಾಮಿಗಳವರ ಗುರುಗಳಾದ ವಿದ್ಯಾಶಂಕರ (ವಿದ್ಯಾತೀರ್ಥ)ರೆಂದು ವಿಖ್ಯಾತರಾಗಿದ್ದ ಸ್ವಾಮಿಗಳವರು ಅಭ್ಯಾಸಮಾಡಿ ಸಿದ್ಧಿಯನ್ನು ಪಡೆದಿದ್ದರಂತೆ ಅವರ ಚರಿತ್ರದಿಂದ ತಿಳಿದುಬಂದಿದೆ.

ಇಂತಹ ಕಷ್ಟತರವಾದ ಯೋಗವನ್ನು ಈ ಗುರುಗಳು ಅಭ್ಯಾಸಮಾಡಬೇಕೆಂದು ಆಲೋಚಿಸುತ್ತಿದ್ದ ಸಮಯದಲ್ಲಿ, ಉತ್ತರದೇಶದಿಂದ ಗಂಗಾದಾಸ್ ಎಂಬ ಒಬ್ಬ ವಿರಕ್ತನು ಶೃಂಗೇರಿಗೆ ಬಂದನು. ಆತನು ಹಠಯೋಗಾಭ್ಯಾಸವನ್ನು ಮಾಡಿ ಆ ಮಾರ್ಗವನ್ನು ಚೆನ್ನಾಗಿ ಬಲ್ಲವನೆಂದು ಸ್ವಾಮಿಗಳವರಿಗೆ ತಿಳಿದುಬಂತು. ಆತನು ಬ್ರಾಹ್ಮಣೇತರನಾಗಿದ್ದರೂ ಆತನನ್ನು ತಮ್ಮ ಸಮೀಪಕ್ಕೆ ಕರೆಸಿಕೊಂಡು ಆತನ ಯೋಗ್ಯತೆಯನ್ನು ಪರೀಕ್ಷೆಮಾಡಿ, ಆತನಲ್ಲಿದ್ದ ವಿಶೇಷಗಳನ್ನು ಕುರಿತು ತುಂಬಾ ಸಂತೋಷಪಟ್ಟರು. ಕೆಲವು ಕಾಲದವರಿಗೆ ಆತನನ್ನು ಶೃಂಗೇರಿಯಲ್ಲಿರುವಂತೆ ವ್ಯವಸ್ಥೆಮಾಡಿ ಖೇಚರೀ ವಿಷಯವಾಗಿ ಆ ಗಂಗಾದಾಸರೊಡನೆ ವಿಚಾರ ನಡೆಸಿ, ಆರು ತಿಂಗಳಕಾಲ ಕ್ಷಾರಲವಣ ವರ್ಜಿತವಾದ ಆಹಾರ ನಿಯಮವನ್ನು ಆಚರಿಸಿ ಛೇದನ, ದೋಹನ, ಚಾಲನಾದಿ ಸಂಸ್ಕಾರಗಳಿಂದ ನಾಲಗೆಯನ್ನು ಬೆಳೆಸಿ, ಕೇವಲ ಉಚ್ಛ್ವಾಸಮಾತ್ರದಿಂದ ನಾಲಗೆಯು ನಾಸಾರಂಧ್ರ ಮಾರ್ಗದಿಂದ ಭ್ರೂಮಧ್ಯವನ್ನು ಪ್ರವೇಶಿಸುವಂತೆ ಅಭ್ಯಾಸಮಾಡಿದರು. ಈ ಅಭ್ಯಾಸವನ್ನೇ ಪ್ರಬಲಪಡಿಸಿ ಅದರ ಸಿದ್ಧಿಯನ್ನು ಪಡೆಯಲು ಸಾಕಾದಷ್ಟು ಅವಕಾಶವು ಶ್ರೀ ಸ್ವಾಮಿಗಳವರಿಗೆ ದೊರೆಯಲಿಲ್ಲವಾದಕಾರಣ, ಭ್ರೂಮಧ್ಯವನ್ನು ಪ್ರವೇಶಿಸಿದ ನಾಲಗೆಯು ಹೆಚ್ಚಾದಕಾಲ ಅಲ್ಲಿನಿಂತು ಫಲಕಾರಿಯಾದಂತೆ ತಿಳಿದುಬರಲಿಲ್ಲ. ಇದರಂತೆ ವಜ್ರೋಳಿಯೋಗವೆಂಬುದೂ ಒಂದು ಕಠಿಣವಾದ ಭಾಗ. ಅದರ ಸಿದ್ಧಿಯನ್ನು ಪಡೆದವರು ಊರ್ಧ್ವರೇತಸ್ಕರಾಗುವರೆಂಬುದು ಯೋಗಶಾಸ್ತ್ರ ಸಿದ್ಧಾಂತವು. ಅಭ್ಯಾಸಕಾಲದಲ್ಲಿ ಮೂತ್ರದ್ವಾರದಿಂದ ಹಾಲನ್ನು ಮೇಲಕ್ಕೆ ಸೆಳೆದು ಮತ್ತೆ

ಹೊರಕ್ಕೆ ಬಿಡುವುದನ್ನು ಕಲಿಯಬೇಕು. ಇದರಿಂದ ತಮ್ಮ ರೇತಸ್ಸನ್ನು ಹೊರಗೆ ಬಿಡದಂತೆ ನಿಲ್ಲಿಸತಕ್ಕ ಸಾಮರ್ಥ್ಯವುಂಟಾಗುವುದು. ಈ ಅಭ್ಯಾಸಕ್ಕೆ ಶ್ರೀಸ್ವಾಮಿಗಳವರು ಕೆಲವುಕಾಲದವರೆಗೆ ಪ್ರಯತ್ನಮಾಡುತ್ತಲಿದ್ದದ್ದೂ ಈ ಲೇಖಕನಿಗೆ ಸ್ವತಃ ತಿಳಿದುಬಂದಿದೆ. ರಾಜಯೋಗ ವಿಷಯವಾಗಿಯೂ ವಿಚಾರಮಾಡಿ, ಆ ಮಾರ್ಗದಲ್ಲಿಯೂ ಕೆಲವು ಕಾಲದವರೆಗೆ ಪ್ರಯತ್ನವನ್ನು ನಡೆಸಿದ್ದರು. ಈ ಗುರುಗಳು, ಯೋಗವಿಷಯದಲ್ಲಿ ಶ್ರಮಪಟ್ಟವರು ಯಾವಜಾತಿಯ ಯಾರೇ ಆಗಲಿ ತಮ್ಮ ದೃಷ್ಟಿಗೆ ಗೋಚರವಾದಲ್ಲಿ, ಅವರವರ ಜ್ಞಾನವನ್ನು ಅನುಸರಿಸಿ, ಏಕಾಂತದಲ್ಲಿ ಅಂತಹ ಜನರ ಸಂಗಡ ಕೆಲವು ಕಾಲವಾದರೂ ಸಂಭಾಷಣೆ ಮಾಡದೆ ಇರುತ್ತಿರಲಿಲ್ಲ. ಹೀಗೆ ಇವರ ಗುರುಗಳ ನಿರ್ಯಾಣದ ಬಳಿಕ ಶೃಂಗೇರಿಯಲ್ಲಿ ವಸತಿಮಾಡಿದ್ದ ಆರುವರ್ಷಗಳ ಕಾಲದಲ್ಲಿ ಯೋಗಾಭ್ಯಾಸವನ್ನು ಮಾಡುವುದರಲ್ಲಿಯೇ ಹೆಚ್ಚಾದ ಕಾಲವನ್ನು ಉಪಯೋಗಿಸಿದಂತೆ ತಿಳಿದು ಬಂದಿದೆ.

ಶ್ರೀ ಚಾಮರಾಜ ಒಡೆಯರವರು ಶೃಂಗೇರಿಗೆ ದಯಮಾಡಿಸಿದ್ದು

ಪಾರ್ಥಿವ ಸಂವತ್ಸರದಲ್ಲಿ ಮೈಸೂರು ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರು ಶ್ರೀ ಸ್ವಾಮಿಗಳವರ ದರ್ಶನಕ್ಕೆ ಶೃಂಗೇರಿಗೆ ಬರುವುದಾಗಿ ಸ್ವಾಮಿಗಳವರಿಗೆ ಶ್ರುತವಾಯಿತು. ಮೈಸೂರು ರಾಜಸಂತತಿಯವರಲ್ಲಿ ಈ ಚಾಮರಾಜಪ್ರಭುಗಳೇ ಶೃಂಗೇರಿಗೆ ಬರುವುದರಲ್ಲಿ ಮೊದಲನೆಯವರಾಗಿದ್ದರು. ಇವರನ್ನು ಶೃಂಗೇರಿಗೆ ಬರಮಾಡಿಕೊಳ್ಳಲು ಬೇಕಾದ ಸಲಕರಣೆಗಳನ್ನೆಲ್ಲಾ ತಮ್ಮ ಅಧಿಕಾರಿಗಳಿಂದ ಸಿದ್ಧಪಡಿಸಿಕೊಂಡು ಬಹಳ ಆದರದಿಂದ ಪ್ರಭುಗಳವರನ್ನು ಶೃಂಗೇರಿಗೆ ಬರಮಾಡಿಕೊಂಡರು. ಪಾರ್ಥಿವಸಂವತ್ಸರದ ಮಾರ್ಗಶಿರ ಶುದ್ಧ ಪ್ರತಿಪತ್ ಸೋಮವಾರ 1885ನೇ ಇಸವಿ ಡಿಸೆಂಬರ್ 7ನೆಯ ತಾರೀಖಿನಲ್ಲಿ ಚಾಮರಾಜಪ್ರಭುಗಳವರು, ತಮ್ಮ ದಿವಾನ್ ಶೇಷಾದ್ರಯ್ಯರು, ಬ್ರಿಟಿಷ್ ರೆಸಿಡೆಂಟ್ ಮಿಸ್ಟರ್ ಗರ್ಲಿಸ್ಟ್ ಸಾಹೇಬರು ಮೊದಲಾದ ಪರಿವಾರದೊಡನೆ ದಯಮಾಡಿಸಿ, ಎರಡು ದಿನಗಳಿದ್ದು ಶ್ರೀ ಸ್ವಾಮಿಗಳವರ ಸಂದರ್ಶನವನ್ನು ಮಾಡಿಕೊಂಡರು. ಕರ್ನಾಟಕ ದೇಶಕ್ಕೆ ಅಧಿಪತಿಗಳಾದ ಮೈಸೂರು ರಾಜಸಂತತಿಯವರು ಶೃಂಗೇರಿಗೆ ಬಂದ ಕಾಲದಲ್ಲಿ ಅವರಿಗೆ ಅನುಗ್ರಹ ಮಾಡಬೇಕೆಂದು ತಮ್ಮ ಗುರುಗಳಾದ ನರಸಿಂಹಭಾರತೀ ಸ್ವಾಮಿಗಳವರಿಗೆ ಇದ್ದ ಸಂಕಲ್ಪವು ಶ್ರೀಗಳವರಿಗೆ ತಿಳಿದಿತ್ತು. ಅವರ ಸಂಕಲ್ಪದಂತೆ ಶ್ರೀಮಚ್ಚಾಮರಾಜ ಪ್ರಭುಗಳವರು ಶೃಂಗೇರಿಗೆ ದಯಮಾಡಿಸುವುದು ಒದಗಿತು. ಆ ಸಮಯದಲ್ಲಿ ತಮ್ಮ ಪರಂಪರಾಗತರಾಗಿದ್ದ ವಿದ್ಯಾರಣ್ಯ ಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ

ಕರ್ನಾಟಕ ಸಿಂಹಾಸನಾಧಿಪತ್ಯವನ್ನು ಅನುಭವಿಸುತ್ತಲಿರುವ ಈ ಪ್ರಭುಗಳವರು ರತ್ನಕಿರೀಟಾಧಿಪತ್ಯವನ್ನೂ ಅನುಭವಿಸುವಂತೆ ಅನುಗ್ರಹ ಮಾಡುವುದು ತಮಗೆ ಕರ್ತವ್ಯವೆಂದು ಎಣಿಸಿ ಶ್ರೀ ಶಾರದಾಂಬೆಯವರ ಸನ್ನಿಧಿಯಲ್ಲಿ 1885ನೇ ಇಸವಿ ಡಿಸೆಂಬರ್ ತಾರೀಖು 7ರಲ್ಲಿ ಸಂಸ್ಥಾನದ ಬೊಕ್ಕಸದಲ್ಲಿದ್ದ ರತ್ನಕಿರೀಟವನ್ನು ತರಿಸಿ, ಅಮೃತಮಯವಾದ ತಮ್ಮ ಹಸ್ತಗಳಿಂದ ಪ್ರಭುಗಳವರ ಶಿರಸ್ಸಿನಲ್ಲಿ ಧಾರಣ ಮಾಡಿಸಿ, ತಮ್ಮ ಗುರುಗಳವರ ಸಂಕಲ್ಪವು ಇಂದಿಗೆ ಪೂರ್ಣವಾಯಿತೆಂತಲೂ, ಪ್ರಭುಗಳ ಆಸ್ಥಾನದಲ್ಲಿರತಕ್ಕ ಸಿಂಹಾಸನವು ತಮ್ಮ ಪರಂಪರಾಗತರಾಗಿದ್ದ ಮಹನೀಯ ವಿದ್ಯಾರಣ್ಯಸ್ವಾಮಿಗಳವರಿಂದ ವಿಜಯನಗರ ಸಂಸ್ಥಾನ (ಆನೆಗುಂದಿ) ದಲ್ಲಿ ಸ್ಥಾಪಿಸಲ್ಪಟ್ಟಿದ್ದು, ಈಚೆಗೆ ಮೈಸೂರು ಸಂಸ್ಥಾನದ ಮಹಾರಾಜರುಗಳಿಂದ ಅಲಂಕರಿಸಲ್ಪಟಿರುವುದೆಂತಲೂ, ಅಂತಹ ಪುರಾತನವಾದ ಸಿಂಹಾಸನವನ್ನು ಪ್ರಭುಗಳವರು ಆರೋಹಣಮಾಡತಕ್ಕ ಕಾಲದಲ್ಲಿ ಶ್ರೀ ರಾಮಚಂದ್ರಮೂರ್ತಿಯಂತೆ ಕಿರೀಟವನ್ನು ಧರಿಸಿಕೊಂಡು ಸಿಂಹಾಸನಾರೂಢರಾಗುವುದು ಆವಶ್ಯಕವೆಂತಲೂ, ಈ ಅಭಿಪ್ರಾಯವು ತಮ್ಮ ಗುರುಗಳವರಿಗೆ ಬಹುಕಾಲದಿಂದ ಮನಸ್ಸಿನಲ್ಲಿದ್ದು ಅವರು ಸಿದ್ಧಸಂಕಲ್ಪರಾದ್ದರಿಂದ ಅವರ ಆಜ್ಞೆಯಂತೆ ತಮ್ಮ ಮೂಲಕ ನೆರವೇರಿಸಲ್ಪಟ್ಟಿತೆಂತಲೂ, ಸಂಸ್ಥಾನ ಪಾರಂಪರ್ಯವಾಗಿ ಸಿಂಹಾಸನಾಧಿಪತ್ಯದಂತೆ ಕಿರೀಟಾಧಿಪತ್ಯವನ್ನೂ ಅನುಭವಿಸುತ್ತ ಬರಬೇಕೆಂತಲೂ ಪ್ರಭುಗಳವರಿಗೆ ಹಿಂದಿನ ಚರಿತ್ರೆಯನ್ನು ವಿಸ್ತಾರವಾಗಿ ತಿಳಿಸಿ ಅನುಗ್ರಹ ಮಾಡಿದರು. ಈ ಕಿರೀಟವು ಈಗಲೂ ಮೈಸೂರಿನ ಅರಮನೆಯಲ್ಲಿ ಪೂಜಿಸಲ್ಪಡುತ್ತಿದೆ.

ಶ್ರೀ ಸ್ವಾಮಿಗಳವರ ಪಾಂಡಿತ್ಯವು ವಿಸ್ಮಯನೀಯವಾಗಿತ್ತು. ಅನುಭವವೂ ಧೈರ್ಯವೂ ಮೂರ್ತಿಮತ್ತಾಗಿ ಅವರನ್ನು ಅವಲಂಬಿಸಿದ್ದುವು. ಈ ಕಾಲದಲ್ಲಿ ತಮ್ಮ ಗುರುಗಳ ಆಜ್ಞೆಗನುಸಾರವಾಗಿ ಸನ್ಮಾರ್ಗ ಪ್ರಚಾರರೂಪವಾದ ತಮ್ಮ ಕರ್ತವ್ಯವನ್ನು ನೆರವೇರಿಸುವುದಕ್ಕೋಸ್ಕರ ದೇಶಸಂಚಾರ ಮಾಡಬೇಕೆಂಬ ವಿಷಯದಲ್ಲಿ ಶ್ರೀಗಳವರಿಗೆ ಶ್ರೀ ಶಾರದಾಂಬೆಯವರ ಪ್ರೇರಣೆಯು ಉಂಟಾಗುತ್ತ ಬಂದಿತು. ಆಗ ಉತ್ತರ ಪ್ರಾಂತ್ಯದಲ್ಲಿ ಬಹಳಪ್ರಸಿದ್ಧರಾಗಿಯೂ ಅನೇಕ ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗಿಯೂ ಇದ್ದ ಅಣ್ಣಾಸಾಹೇಬವಿಂಚೂರುಕರ್ ಎಂಬ ಒಬ್ಬ ಜಹಗೀರ್‌ದಾರರು ಶೃಂಗೇರಿಗೆ ಶ್ರೀಗಳವರ ದರ್ಶನಾರ್ಥವಾಗಿ ಬಂದಿದ್ದರು. ಇವರೇ ಪ್ರಸಿದ್ಧವಾದ ಶೃಂಗೇರಿ ವಿದ್ಯಾಶಂಕರ ದೇವಾಲಯಕ್ಕೆ ಬಂಗಾರದ ಪಂಚಕಲಶಗಳನ್ನು ಹಾಕಿಸಿದವರು. ಇವರು ಸ್ವಾಮಿಗಳವರ ದರ್ಶನ ಮಾಡಿ, ಉತ್ತರದೇಶ ಯಾತ್ರೆಗಾಗಿ ಶ್ರೀಗಳವರು ಬಿಜಯಮಾಡಬೇಕೆಂತಲೂ, ಆ ಯಾತ್ರೆಯಕಾಲದಲ್ಲಿ ತಾನು ಸಂಸ್ಥಾನದ ಸಂಗಡಲೇ ಇದ್ದು ಎಲ್ಲಾ ಕಾರ್ಯಗಳನ್ನೂ ಜರುಗಿಸುವೆನೆಂತಲೂ, ಅನೇಕ ಸಹಸ್ರಜನ ಶಿಷ್ಯರುಗಳು ಶ್ರೀಗಳವರ ದರ್ಶನಕ್ಕೆ ಕಾದಿರುವರೆಂತಲೂ ತಿಳಿಸಿಕೊಂಡರು. ಇವರ ಪ್ರಾರ್ಥನೆಯೂ ಶ್ರೀಗಳವರ ಸಂಕಲ್ಪವನ್ನು ಬಲಪಡಿಸಿತು.

ತಮ್ಮ ಪದ್ಧತಿಯಂತೆ ಗುರುಗಳವರಲ್ಲಿಯೂ ಅಮ್ಮನವರಲ್ಲಿಯೂ ಅನುಮತಿಯನ್ನು ಕೇಳಿದರು. ಎರಡು ಕಡೆಯಿಂದಲೂ ಆಜ್ಞಾ ಸೂಚನೆಯು ಬಂದಿತು. ಆದರೆ ಆರುವರ್ಷಗಳಿಂದ ವಿಚ್ಛಿತ್ತಿಯಿಲ್ಲದಂತೆ ನಡೆಸಿಕೊಂಡು ಬಂದ ತಮ್ಮ ಗುರುಗಳ ಪೂಜೆಯನ್ನು ಬಿಟ್ಟು ಹೊರಡುವುದರಲ್ಲಿ ಮಾತ್ರ ಶ್ರೀಗಳವರ ಚಿತ್ತವೂ ಒಡಂಬಡದೆ ಬಹಳವಾಗಿ ಹಿಂತೆಗೆಯುತ್ತಲಿತ್ತು. ಈ ಸಂಗತಿಯು ಯಾರಿಗೂ ಗೋಚರವಾಗಿರಲಿಲ್ಲ. ಈ ಸಂದರ್ಭದಲ್ಲಿ ಶ್ರೀಗಳವರು ಪದ್ಧತಿಯ ಪ್ರಕಾರ ಪೂಜೆಗಾಗಿ ಹೋದಕಾಲದಲ್ಲಿ ತಮ್ಮ ಗುರುಗಳ ಸಮಾಧಿಯಲ್ಲಿ ಪ್ರತಿಷ್ಠಿತವಾಗಿರುವ ಶಿವಲಿಂಗದ ಪಾಣಿಪೀಠದ ಮೇಲೆ ಒಂದು ಸಣ್ಣ ಬಾಣಲಿಂಗವು ಇಡಲ್ಪಟ್ಟಿತ್ತು. ಆ ಲಿಂಗವು ಎಲ್ಲಿಂದ ಬಂದಿತು? ಯಾರು ತಂದಿಟ್ಟರು? ಎಂದು ವಿಚಾರ ಮಾಡಿದ್ದರಲ್ಲಿ ಸಂಗತಿಯು ಸ್ಪಷ್ಟಪಡಲಿಲ್ಲ. ಇದನ್ನು ನೋಡಿದ ಶ್ರೀಗಳವರಿಗೆ ಬಹಳ ತೃಪ್ತಯುಂಟಾಯಿತು. ತಾವು ಸಂಚಾರ ಹೊರಡುವ ವಿಷಯದಲ್ಲಿ ಹಿಂಜರಿಯುತ್ತ ಇದ್ದುದನ್ನು ತಿಳಿದು ತಮ್ಮ ಗುರುಗಳವರೇ ತಮಗೇ ಪ್ರತಿನಿಧಿಯಾಗಿ ಆ ಬಾಣಲಿಂಗವನ್ನು ಸಂಗಡ ತೆಗೆದುಕೊಂಡು ಹೋಗಿ ನಿತ್ಯವೂ ಪೂಜೆಮಾಡತಕ್ಕದ್ದೆಂದು ಆಜ್ಞಾಪಿಸಿದರೆಂದು ನಂಬಿಕೆ ಹುಟ್ಟಿತು. ಆ ಬಾಣಲಿಂಗವನ್ನು ತಾವು ಯಾತ್ರೆಗೆ ಹೊರಡುವ ಪರ್ಯಂತ ಗುರುಗಳ ಸಮಾಧಿಯಲ್ಲಿಯೇ ಇಟ್ಟು ಪೂಜಿಸುತ್ತಿದ್ದರು. ತಮ್ಮ ಪ್ರಯಾಣಕ್ಕೆ ಗುರುಗಳವರು ಅನುಗ್ರಹಿಸಿದ ಅನೇಕ ಸೂಚನೆಗಳಿಂದ ತೃಪ್ತರಾಗಿ, ಉತ್ತರದೇಶ ಯಾತ್ರೆಯನ್ನು ಸಂಕಲ್ಪಿಸಿ, ಪ್ರಯಾಣಕ್ಕೆ ಬೇಕಾದ ಸಲಕರಣಗಳನ್ನೆಲ್ಲಾ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಅಪ್ಪಣೆ ಮಾಡಿದರು. ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜಪ್ರಭುಗಳವರಿಂದ ಆನಂದ ಸಂವತ್ಸರದಲ್ಲಿ ಶ್ರೀನರಸಿಂಹಭಾರತೀಸ್ವಾಮಿಗಳವರಿಗೆ ಒಪ್ಪಿಸಲ್ಪಟ್ಟಿದ್ದ ಬಂಗಾರದ ಪಾಲಕಿಯು ತುಂಬಾ ಶಿಥಿಲವಾಗಿತ್ತು. ಆ ಪಾಲಕಿಯನ್ನು ಮೈಸೂರಿಗೆ ಕಳುಹಿಸಿ ಅಲ್ಲಿನ ಶಿಲ್ಪಿಗಳಿಂದ ಹೊಸದಾಗಿ ಮಾಡಿಸಲಾಯಿತು. ಇದರಂತೆ ಸಂಸ್ಥಾನದ ಗೌರವಕ್ಕೆ ತಕ್ಕ ಎಲ್ಲಾ ಸಲಕರಣೆಗಳೂ ಸಿದ್ಧವಾದುವು. ಶಾ ll 1807ನೆಯ ಪಾರ್ಥಿವ ಸಂವತ್ಸರದ (1885 ನೆಯ ಇಸವಿ) ಮಾರ್ಗಶೀರ್ಷ ಶುದ್ಧ ಪಂಚಮಿ ಶುಕ್ರವಾರದಲ್ಲಿ ಶೃಂಗೇರಿಯಿಂದ ಪರಿವಾರದೊಡನೆ ಹೊರಟು ಪರಂಪರಾಗತವಾದ ಶ್ರೀ ಚಂದ್ರಮೌಳೀಶ್ವರ, ರತ್ನಗರ್ಭಗಣಪತಿ ಮೊದಲಾದ ದೇವರುಗಳನ್ನೂ ಗುರುಗಳಿಂದ ಅನುಗ್ರಹಿಸಲ್ಪಟ್ಟ ಬಾಣಲಿಂಗನ್ನೂ ಸಂಗಡ ತೆಗೆಸಿಕೊಂಡು, ಶೃಂಗೇರಿಗೆ ಸಮೀಪದಲ್ಲಿರುವ ಸಚ್ಚಿದಾನಂದಪುರವೆಂಬ ಅಗ್ರಹಾರಕ್ಕೆ ದಯಮಾಡಿಸಿದರು.

★ ★ ★

ಅಧ್ಯಾಯ - ೫.

ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳವರ ಎರಡನೆಯ ಯಾತ್ರೆ

ಮೈಸೂರು ದೇಶಕ್ಕೆ ಸೇರಿದ ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ 11 ತಿಂಗಳ ಕಾಲ ಸಂಚಾರ ಮಾಡಿಕೊಂಡು ತಮ್ಮ ಗುರುಗಳವರು ಸಂಕಲ್ಪಿಸಿದ್ದ ಗೋಕರ್ಣ ಕ್ಷೇತ್ರಯಾತ್ರೆಯನ್ನು ಮೊದಲು ಪೂರ್ತಿಮಾಡಬೇಕೆಂದು ಆಲೋಚಿಸಿ, ಬನವಾಸಿ ಶಿರಸಿ ಇವುಗಳ ಮಾರ್ಗವಾಗಿ ಉತ್ತರ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿದರು. ಗೋಕರ್ಣ ಕ್ಷೇತ್ರಕ್ಕೆ ಶಾ ll 1809ನೆಯ ವ್ಯಯ ಸಂವತ್ಸರದ (1887ನೆಯ ಇಸವಿ) ಮಾಘ ಬಹುಳ ಪಂಚಮೀ ಶನಿವಾರ ಪ್ರಾತಃಕಾಲ 8 ಘಂಟೆಗೆ ದಯಮಾಡಿಸಿ ಗ್ರಾಮಪ್ರದಕ್ಷಿಣೆಯಾಗಿ ಹೊರಟು ಮಹಾಬಲೇಶ್ವರ ಸ್ವಾಮಿಯ ದರ್ಶನವನ್ನು ಮಾಡಿಕೊಂಡು ಸಂಸ್ಥಾನಕ್ಕೆ ಸೇರಿದ ಮಠದಲ್ಲಿ ವಸತಿಯನ್ನು ಮಾಡಿದರು. ಗೋಕರ್ಣ ಕ್ಷೇತ್ರವು ಪಶ್ಚಿಮ ಸಮುದ್ರ ತೀರದಲ್ಲಿರುವುದು. ಆ ಕ್ಷೇತ್ರದಲ್ಲಿ ಮಹಾಬಲೇಶ್ವರಸ್ವಾಮಿ ಲಿಂಗವು ಪಶ್ಚಿಮಾಭಿಮುಖವಾಗಿ ಆವಿರ್ಭವಿಸಿರುತ್ತದೆ. ಇದರಿಂದ ಆ ಕ್ಷೇತ್ರವು ಸರ್ವೋತ್ತಮವೆಂದು ಪುರಾಣ ಪ್ರಸಿದ್ಧವಾಗಿದೆ. ಆ ಕ್ಷೇತ್ರದ ದರ್ಶನಕ್ಕೋಸ್ಕರ ಭರತ ಖಂಡದ ಎಲ್ಲಾ ಭಾಗಗಳಿಂದಲೂ ಹಿಂದೂ ಮತಸ್ಥರಾದ ಎಲ್ಲಾ ಜಾತಿಯ ಜನರುಗಳೂ ವಿಶೇಷವಾಗಿ ಬರುತ್ತಾರೆ. ಆ ದೇವಸ್ಥಾನದಲ್ಲಿ ಪಂಚಮಜಾತಿಯ ಜನರು ಹೊರತು ಮಿಕ್ಕ ಎಲ್ಲಾ ಜನರೂ ಭೇದವಿಲ್ಲದಂತೆ ಗರ್ಭಗೃಹವನ್ನು ಪ್ರವೇಶಿಸಿ ತಮ್ಮ ತಮ್ಮ ಹಸ್ತದಿಂದ ದೇವರಿಗೆ ಪೂಜೆ ಮಾಡುವ ಪದ್ಧತಿಯು ಅನಾದಿಯಾಗಿ ಏರ್ಪಟ್ಟಿದೆ. ರಾಮಾಯಣದಲ್ಲಿ ಹೇಳಿರುವ ಲಂಕಾನಗರಾಧಿಪತಿ ರಾವಣನೆಂಬ ರಾಕ್ಷಸರಾಜನು ಕೈಲಾಸದಲ್ಲಿ ಉಗ್ರತಪಸ್ಸನ್ನು ಮಾಡಿ ಈಶ್ವರ ಪ್ರಸಾದಲಬ್ಧವಾದ ಲಿಂಗವನ್ನು ತನ್ನ ಪಟ್ಟಣದಲ್ಲಿ ಪ್ರತಿಷ್ಠಿಸಿ ಪೂಜಿಸುವ ಉದ್ದೇಶದಿಂದ ತರುತ್ತಿದ್ದಂತೆಯೂ, ಗೋಕರ್ಣ ಕ್ಷೇತ್ರವಿರುವ ಸ್ಥಳಕ್ಕೆ ಬಂದಾಗ ಹಸ್ತದಲ್ಲಿ ಧರಿಸಿಕೊಂಡಿದ್ದ ಲಿಂಗವನ್ನು ಭೂಮಿಯಲ್ಲಿಡಬೇಕಾದ ಆವಶ್ಯಕತೆಯುಂಟಾದಂತೆಯೂ, ಭೂಮಿಯಲ್ಲಿಡಲು ಇಷ್ಟವಿಲ್ಲದೆ ಯೋಚಿಸುತ್ತಿರುವಲ್ಲಿ ಗಣಪತಿಯು ಅಲ್ಲಿಗೆ ಬಂದಂತೆಯೂ, ರಾವಣನು ಆತನನ್ನು ಕುರಿತು ತನ್ನ ಹಸ್ತದಲ್ಲಿರುವ ಶಿವಲಿಂಗವನ್ನು ಸ್ವಲ್ಪ ಹಿಡಿದುಕೊಂಡಿರುವಂತೆ ಕೇಳಿದಂತೆಯೂ, ಗಣಪತಿಯು ಅದಕ್ಕೆ ಸಮ್ಮತಿಸಿ ತಾನು ಮೂರು ಸಾರಿ ಕೂಗುವಷ್ಟರೊಳಗೆ ಬರಬೇಕು, ಬಾರದಿದ್ದಲ್ಲಿ ಲಿಂಗವನ್ನು

ಭೂಮಿಯಲ್ಲಿಟ್ಟು ಹೊರಟುಹೋಗುವುದಾಗಿ ನಿಷ್ಕರ್ಷೆ ಮಾಡಿಕೊಂಡು ರಾವಣನನ್ನು ಮೂರುಸಾರಿ ಕರೆಯುವುದರೊಳಗಾಗಿ ಆತನು ಬಾರದಿರಲಾಗಿ ಲಿಂಗವನ್ನು ಭೂಮಿಯಲ್ಲಿಟ್ಟು ಹೊರಟುಹೋದಂತೆಯೂ, ರಾವಣಾಸುರನು ಬಂದು ಭೂಮಿಯಲ್ಲಿಟ್ಟಿದ್ದ ಲಿಂಗವನ್ನು ಹಸ್ತಗಳಿಂದ ಮೇಲಕ್ಕೆತ್ತಲು ಎಷ್ಟು ಪ್ರಯತ್ನ ಮಾಡಿದರೂ ಶಕ್ಯವಾಗದೆ ಹೋದಂತೆಯೂ, ತನ್ನ ಯಾವಚ್ಛಕ್ತಿಯನ್ನೂ ಉಪಯೋಗಿಸಿ ಆ ಶಿವಲಿಂಗವನ್ನು ಕೀಳುವುದರಲ್ಲಿ ಪ್ರಯತ್ನ ಪಟ್ಟರೂ ಅದು ಸಮೂಲವಾಗಿ ಮೇಲಕ್ಕೆ ಬಾರದೆ ಸ್ವಲ್ಪ ಭಾಗವು ಭೂಮಿಯಲ್ಲಿ ನಿಂತುಹೋದಂತೆಯೂ, ಅನಂತರ ಈಶ್ವರ ಸಂಕಲ್ಪವನ್ನು ತಿಳಿದುಕೊಂಡು ಆ ರಾಕ್ಷಸಶ್ರೇಷ್ಠನು ನಿಷ್ಫಲಪ್ರಯತ್ನನಾಗಿ ಅಲ್ಲಿಯೇ ಪೂಜೆಯನ್ನು ಮಾಡಿ ಹೊರಟುಹೋದಂತೆಯೂ ಅಲ್ಲಿಯ ಇತಿಹಾಸವಿದೆ. ದೇವರು ಇರುವ ಆಕಾರವನ್ನು ನೋಡಿದರೆ ಇತಿಹಾಸದಲ್ಲಿ ವಿಶ್ವಾಸ ವುಂಟಾಗುವಂತೆ ಇದೆ. ಮಹಾಶಿವರಾತ್ರಿಯಲ್ಲಿ ದೇವರ ದರ್ಶನ, ಪೂಜೆ ಮೊದಲಾದುದು ಬಹಳ ವಿಶೇಷವೆಂದು ತಿಳಿದು ಆ ದಿನ ಸುಮಾರು ಮೂರುನಾಲ್ಕು ಲಕ್ಷ ಪ್ರಜೆಗಳು ಆ ಕ್ಷೇತ್ರದಲ್ಲಿ ಸೇರುವುದು ವಾಡಿಕೆಯಾಗಿದೆ. ಶ್ರೀಸ್ವಾಮಿಗಳವರ ಸವಾರಿಯೂ ಶಿವರಾತ್ರಿ ಮಹೋತ್ಸವ ಕಾಲಕ್ಕೆ ಸರಿಯಾಗಿ ಗೋಕರ್ಣ ಕ್ಷೇತ್ರಕ್ಕೆ ದಯಮಾಡಿದ್ದುದರಿಂದ ಆ ಸಂವತ್ಸರದಲ್ಲಿ ಯಾತ್ರಾರ್ಥಿಗಳ ಸಂಖ್ಯೆಯು ಇಮ್ಮಡಿಯಾಗಿದ್ದಂತೆ ಅಲ್ಲಿನ ಜನರು ಹೇಳಿಕೊಳ್ಳುತ್ತಲಿದ್ದರು. ಆ ಸಂದರ್ಭದಲ್ಲಿ ಪ್ರತಿಯೊಬ್ಬರು ಒಳಗೆ ಹೋಗಿ ದೇವರನ್ನು ಪೂಜಿಸುವಲ್ಲಿ ಎಷ್ಟು ಪ್ರಯಾಸವಾಗಬಹುದು ! ಹಾಗಿದ್ದರೂ ಬಂದ ಜನರಿಗೆ ಸ್ವಭಾವವಾಗಿ ಶ್ರೀಗಳವರ ವಿಷಯದಲ್ಲಿ ಭಕ್ತಿ ಗೌರವಗಳು ಇದ್ದುದರಿಂದ ಶ್ರೀ ಸ್ವಾಮಿಗಳವರು ಏಕಾಂತವಾಗಿ ದೇವಸ್ಥಾನದಲ್ಲಿ ಪ್ರವೇಶಿಸಿ ಸಾಂಗವಾಗಿ ದೇವರನ್ನು ಪೂಜಿಸಿ ಲೋಕಕ್ಕೆ ಶ್ರೇಯಃ ಪ್ರಾರ್ಥನೆ ಮಾಡಿ ಬರುವಷ್ಟು ಅವಕಾಶವನ್ನು ಜನಗಳೂ ಕೊಟ್ಟರಲ್ಲದೆ ದೇವಸ್ಥಾನದ ಮುಖ್ಯಾಧಿ ಕಾರಿಗಳ ಪ್ರಯತ್ನದಿಂದಲೂ ಒಳಗೆ ಗಲಭೆಯಿಲ್ಲದಂತೆ ಮಾಡಲ್ಪಟ್ಟಿತು. ಶ್ರೀಗಳವರು ಮೂರನೆಯ ಯಾಮವಾದ ಮಹಾನಿಶೆಯಲ್ಲಿ ದೇವಸ್ಥಾನಕ್ಕೆ ದಯಮಾಡಿಸಿ ಒಂದು ಯಾಮದವರೆಗೆ ಸಾವಕಾಶದಿಂದ ಪರಮಾನಂದಭರಿತರಾಗಿ ವಿಶೇಷವಾದ ಪೂಜೆಯನ್ನು ಮಾಡಿ ಬೆಲೆಯುಳ್ಳ ವಜ್ರಪದಕದಿಂದ ಯುಕ್ತವಾದ ಐದೆಳೆಯ ಮುತ್ತಿನ ಹಾರವನ್ನೂ, ಶ್ಲಾಘ್ಯತರವಾದ ರುದ್ರಾಕ್ಷಕಂಠಿಯನ್ನೂ, ಉತ್ತಮವಾದ ವಸ್ತ್ರಗಳನ್ನೂ ಸಮರ್ಪಿಸಿ, ಪ್ರಾಚೀನ ಪದ್ಯಗಳಿಂದಲೂ ಆಗ ತಾವು ರಚಿಸಿದ ಅನೇಕ ಪದ್ಯಗಳಿಂದಲೂ ಸ್ತುತಿಸಿ, ಆ ಕಾಲದಲ್ಲಿ ಕಾದಿದ್ದ ಶಿಷ್ಯಮಂಡಲಿಗೆಲ್ಲಾ ಪ್ರಸಾದವನ್ನನುಗ್ರಹಿಸಿ ಮಠಕ್ಕೆ ದಯಮಾಡಿಸಿದರು.

ಗೋಕರ್ಣದಲ್ಲಿರುವಾಗ್ಗೆ ಶ್ರೀಗಳವರ ಶರೀರಕ್ಕೆ ಆಲಸ್ಯವುಂಟಾಯಿತು. ಇದು ಮೂತ್ರಸಂಬಂಧವಾದುದರಿಂದ ಬಹಳ ಪ್ರಬಲವಾಗಿದ್ದು ಎಲ್ಲರಿಗೂ ತುಂಬಾ

ಆತಂಕವನ್ನುಂಟುಮಾಡಿತು. ಆದರೆ ಪರಮೇಶ್ವರಪ್ರಸಾದಲಬ್ಧವಾಗಿದ್ದ ಹದಿನಾರು ವರ್ಷಗಳು ಕಳೆದ ಕೂಡಲೇ ಶ್ರೀ ಶಂಕರ ಭಗವತ್ಪಾದಾಚಾರ್ಯರಿಗೆ ವ್ಯಾಸಮಹರ್ಷಿಗಳು ದರ್ಶನಕೊಟ್ಟು ಈ ಭಾರತ ಭೂಮಿಯಲ್ಲಿ ವೇದವಿರೋಧಿಗಳನೇಕರನ್ನು ಜಯಿಸಿ ಅಧ್ಯಾತ್ಮವಿದ್ಯೆಯನ್ನು ಸ್ಥಿರಗೊಳಿಸುವುದು ಆವಶ್ಯಕವಾಗಿದ್ದುದರಿಂದ ಇನ್ನೂ ಹದಿನಾರು ವರ್ಷಗಳ ಆಯುಸ್ಸನ್ನು ಅನುಗ್ರಹಿಸಿದಂತೆ ಈ ಶ್ರೀಗಳವರು ನಡೆಸಬೇಕಾದ ಅನೇಕ ಮಹಾಕಾರ್ಯಗಳು ಅವಶಿಷ್ಟ ವಾಗಿದ್ದುದರಿಂದ ಈ ಮಹನೀಯರಿಗೆ ವ್ಯಾಧಿಯು ಬಹಳ ಸುಲಭವಾಗಿ ಉಪಶಾಂತಿಯನ್ನು ಹೊಂದುವಂತೆ ಶ್ರೀ ಮಹಾಬಲೇಶ್ವರನು ಅನುಗ್ರಹಿಸಿದನು.

ಎರಡು ತಿಂಗಳಕಾಲ ಆ ಮಹಾಕ್ಷೇತ್ರದಲ್ಲಿ ವಸತಿ ಮಾಡಿ ಚರ್ಚಾಸ್ಪದವಾಗಿದ್ದ ವರ್ಣಾಶ್ರಮ ಧರ್ಮದ ಕೆಲವು ವಿಷಯಗಳನ್ನು ವಿಚಾರದಿಂದ ತೀರ್ಮಾನಿಸಿ ಅಲ್ಲಿಂದ ಮುಂದೆ ಪ್ರಯಾಣವನ್ನು ಬೆಳೆಸಿದರು. ಧಾರ್ವಾಡಾ ಜಿಲ್ಲೆಯ ಮಾರ್ಗವಾಗಿ ಹೊರಟು ಮುಂಬೈ ಆಧಿಪತ್ಯಕ್ಕೆ ಸೇರಿದ ಅನೇಕ ಸ್ಥಳಗಳಲ್ಲಿ ಸಂಚರಿಸುತ್ತಿರುವ ಸಂದರ್ಭದಲ್ಲಿ ಹಿಂದೆ ಪುಣೆಯ ಪೇಷ್ವೆಯವರ ಕಾಲದಲ್ಲಿ ಪ್ರಸಿದ್ಧರಾಗಿದ್ದ ಪರಶುರಾಮಬಾವೂ ಎಂಬುವರ ವಂಶಕ್ಕೆ ಸೇರಿದ ರಾಮಚಂದ್ರರಾವ್ ಅಪ್ಪಾಸಾಹೇಬರೆಂಬುವರು ಜಮಖಂಡಿಯಲ್ಲಿ ರಾಜರಾಗಿದ್ದರು. ಅವರು ವಿದ್ಯಾವಂತರಾಗಿಯೂ ಧೈರ್ಯಶಾಲಿಗಳಾಗಿಯೂ ಸ್ವಾಯತ್ತ ಸಿದ್ಧಿಗಳಾಗಿಯೂ ಇದ್ದು ತಮ್ಮ ಸಂಸ್ಥಾನವು ಬಹಳ ಸಣ್ಣದಾಗಿದ್ದರೂ ತಮ್ಮ ಬುದ್ಧಿ ಕೌಶಲದಿಂದಲೂ ಮನೋದಾರ್ಢ್ಯದಿಂದಲೂ ಅನೇಕ ವಿಧದಿಂದ ಸಂಸ್ಥಾನದ ವರಮಾನಗಳನ್ನು ಹೆಚ್ಚಿಸಿ ಬಹಳ ವಿಚಕ್ಷಣತೆಯಿಂದ ಸಂಸ್ಥಾನವನ್ನು ಆಳುತ್ತಿದ್ದರು. ಅವರು ಚಿತ್ಪಾವನ ಬ್ರಾಹ್ಮಣರು. ಬಾಲ್ಯದಿಂದ ಅವರ ವೃತ್ತಿಯೆಲ್ಲವೂ ಬಹಿರ್ಮುಖವಾಗಿಯೇ ಇದ್ದುದರಿಂದ ಪಾರಮಾರ್ಥಿಕ ವಿಷಯದಲ್ಲಿ ನಂಬಿಕೆಯೂ ಆಸಕ್ತಿಯೂ ವಿಶೇಷವಾಗಿರಲಿಲ್ಲ. ಇಂತಹ ರಾಜರಿಗೆ ಜನ್ಮಾಂತರ ಸಂಸ್ಕಾರ ವಿಶೇಷದಿಂದ ಆಸ್ತಿಕ್ಯ ಬುದ್ಧಿಯು ಅಂಕುರಿತವಾಗಿತ್ತು. ಅದಕ್ಕೆ ಸೂಚಕವಾಗಿ ತಮ್ಮ ಸ್ಥಳದಲ್ಲಿ ಅಮೃತಶಿಲೆಯಿಂದ ಬಹುವಿಚಿತ್ರವಾಗಿ ಒಂದು ಆಲಯವನ್ನು ನಿರ್ಮಿಸಿ ಅದರಲ್ಲಿ ತ್ರಿಪುರಸುಂದರಿ ಅಮ್ಮನವರ ಪ್ರತಿಷ್ಠೆ ಮಾಡಿಸಿ ನಿತ್ಯ ಪೂಜಾದಿಗಳೂ ನವರಾತ್ರಿಯ ಉತ್ಸವಗಳೂ ನಡೆಯಲು ತಕ್ಕ ವ್ಯವಸ್ಥೆಯನ್ನು ಮಾಡಿ ಅತ್ಯಂತ ವಿಶ್ವಾಸದಿಂದ ನಡೆಸಿಕೊಂಡು ಬರುತ್ತಿದ್ದರು. 1887ನೆಯ ಇಸವಿಯಲ್ಲಿ ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳವರು ದೇಶ ಸಂಚಾರಾರ್ಥವಾಗಿ ತಮ್ಮ ಪ್ರಾಂತಕ್ಕೆ ಬಂದಿರುವರೆಂತಲೂ ಅವರು ಬಹಳ ದೊಡ್ಡವ ರೆಂತಲೂ ಅಪ್ಪಾ ಸಾಹೇಬರಿಗೆ ತಿಳಿದು ಬಂದಿತು. ಸಾಮಾನ್ಯವಾಗಿ ಯತಿಗಳೆಂದರೆ ಆ ರಾಜರಿಗೆ ವಿಶ್ವಾಸವುಂಟಾಗುತ್ತಿರಲಿಲ್ಲ. ಹೀಗಿದ್ದರೂ ಅವರಿಗೆ ಸುಕೃತ ಪರಿಪಾಕದಿಂದ

ಶ್ರೀಗಳವರ ವಿಷಯದಲ್ಲಿ ವಿಲಕ್ಷಣವಾದ ಭಕ್ತಿ ಗೌರವಗಳುಂಟಾಗಿ ಇವರ ದರ್ಶನದಲ್ಲಿ ಆದರವೂ ಆತುರವೂ ಹೆಚ್ಚಿತು. ಶ್ರೀ ಸಂಸ್ಥಾನದ ಸವಾರಿಯು ಜಮಖಂಡಿಗೆ ಬಹಳ ದೂರದಲ್ಲಿರುವಾಗಲೇ ಅಪ್ಪಾ ಸಾಹೇಬರು ತಮಗೆ ಆಪ್ತರಾದ ಜನಗಳನ್ನು ಶ್ರೀಗಳವರ ಸನ್ನಿಧಿಗೆ ಕಳುಹಿಸಿ ತಮ್ಮ ಅಭಿಪ್ರಾಯವನ್ನು ಅವರುಗಳ ಮೂಲಕವಾಗಿ ಶ್ರೀ ಸ್ವಾಮಿಗಳವರಲ್ಲಿ ಶ್ರುತಪಡಿಸಿ ಶ್ರೀಗಳವರು ತಮ್ಮ ರಾಜಧಾನಿಗೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡರು. ಜಂಖಂಡಿಯ ರಾಜರ ಕಡೆಯಿಂದ ಬಂದ ಜನರುಗಳ ಮುಖದಿಂದಲೂ ಆ ಪ್ರಾಂತದಲ್ಲಿರುವ ಇತರರ ಮೂಲಕವಾಗಿಯೂ ಅಪ್ಪಾ ಸಾಹೇಬರ ಪೂರ್ವಸ್ಥಿತಿಯನ್ನೂ ಪ್ರಕೃತಸ್ಥಿತಿಯನ್ನೂ ಆಮೂಲಾಗ್ರವಾಗಿ ತಿಳಿದು ಆ ರಾಜರ ಪೂರ್ವಸಂಸ್ಕಾರವು ಉತ್ತಮವಾದದ್ದೆಂತಲೂ, ಆ ಸಂಸ್ಕಾರಕ್ಕೆ ಅನುಗುಣವಾದ ಹಿತಬೋಧನೆಯಿಂದ ಆ ರಾಜರನ್ನು ವಿಶೇಷ ಆಸ್ತಿಕರನ್ನಾಗಿ ಮಾಡುವುದಕ್ಕೆ ತಕ್ಕ ಅನುಕೂಲತೆಯು ಒದಗದೆ ಇದ್ದುದರಿಂದ ಅವರ ಆಸ್ತಿಕ್ಯವು ಮಂದವಾಗಿರುವುದೆಂತಲೂ, ಆ ರಾಜರ ಕೋರಿಕೆಯಂತೆ ಅವರ ರಾಜಧಾನಿಯನ್ನು ಪ್ರವೇಶಿಸಿ ಅವರಿಗೆ ದರ್ಶನ ಕೊಟ್ಟು ಅವರ ಆಸ್ತಿಕ್ಯವನ್ನು ವೃದ್ಧಿಗೊಳಿಸುವುದು ತಮಗೆ ಅತ್ಯವಶ್ಯ ಕರ್ತವ್ಯವೆಂತಲೂ ಭಾವಿಸಿ ಜಂಖಂಡಿಗೆ ಬರುವುದಾಗಿ ಶ್ರೀಮುಖವನ್ನು ಬರೆಸಿ ಆ ರಾಜರಿಗೆ ಕಳುಹಿಸಿದರು. ತಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ಶ್ರೀ ಸ್ವಾಮಿಗಳವರು ಅನುಗ್ರಹಿಸಿದ ಶ್ರೀಮುಖವನ್ನು ಅತ್ಯಾದರದಿಂದ ಬರಮಾಡಿಕೊಂಡು ಶ್ರೀಗಳವರು ದಯಮಾಡಿಸುವುದಕ್ಕೆ ಆವಶ್ಯಕವಾದ ಸಲಕರಣೆಗಳೆಲ್ಲವನ್ನೂ ಜಗದ್ಗುರುಗಳವರ ಗೌರವಕ್ಕೂ ತಮ್ಮ ವಿಭವಕ್ಕೂ ತಕ್ಕ ರೀತಿಯಿಂದ ಸಿದ್ಧಪಡಿಸಿಕೊಂಡು ಅತ್ಯಂತ ವೈಭವದಿಂದ ತಮ್ಮ ಪರಿವಾರದೊಡನೆ ಆ ರಾಜರು ಜಂಖಂಡಿಯಿಂದ ಒಂದೂವರೆ ಮೈಲಿಯ ದೂರದಲ್ಲಿರುವ ಕಟ್ಟೇಗಿರಿ ಎಂಬ ತಟಾಕದ ಸಮೀಪದಲ್ಲಿ ವಿಶಾಲವಾದ ಚಪ್ಪರವನ್ನು ಹಾಕಿಸಿ ಅಲ್ಲಿಗೆ ಶ್ರೀಗಳವರನ್ನು ಬರಮಾಡಿಕೊಂಡು ಮೊದಲನೆಯ ಸಾರಿ ಆ ಸ್ಥಳದಲ್ಲಿ ಶ್ರೀಗಳವರ ದರ್ಶನವನ್ನು ಮಾಡಿದರು. ಆಗ ಮಂದಹಾಸಪೂರ್ವಕವಾಗಿ ಶ್ರೀಗಳವರಿಂದ ಯೋಗಕ್ಷೇಮಗಳು ವಿಚಾರಿಸಲ್ಪಟ್ಟ ಕೂಡಲೇ ಆ ರಾಜರಿಗೆ ಸ್ವಲ್ಪ ಹೊತ್ತಿನವರೆಗೆ ಯಾವ ಸಂಗತಿಯೂ ತಿಳಿಯದಂತೆ ವಿಸ್ಮೃತಿಯುಂಟಾಯಿತು ಎಂದು ಹೇಳಿದರೆ ಅದೇನೂ ಆಶ್ಚರ್ಯವಲ್ಲ. ಆನಂದವು ತುಂಬಿ ತುಳುಕಿತು. ಶರೀರದಲ್ಲೆಲ್ಲಾ ರೋಮಾಂಚವುಂಟಾಯಿತು. ಕಣ್ಣುಗಳಲ್ಲಿ ಧಾರೆಧಾರೆಯಾಗಿ ನೀರು ಸುರಿಯಲು ಪ್ರಾರಂಭಿಸಿತು. ಸ್ವರವು ಗದ್ಗದವಾಯಿತು. ಹೀಗೆ ಆ ರಾಜರ ಜನ್ಮಾಂತರೀಯ ಸಂಸ್ಕಾರದಿಂದ ಉಂಟಾದ ತೀವ್ರಭಕ್ತಿಗೆ ಚಿಹ್ನೆಗಳು ತೋರಿದುವು. ಸರ್ವಜಿತ್ಸಂವತ್ಸರದ ಭಾದ್ರಪದ ಕೃಷ್ಣ ಚತುರ್ದಶೀ (1887ನೆಯ ಇಸವಿ ಸೆಪ್ಟೆಂಬರ್ 16) ದಿನ ಪ್ರಾತಃಕಾಲ 8 ಘಂಟೆಗೆ ಉಭಯ ಸಂಸ್ಥಾನಗಳ ಬಿರುದುಗಳಿಂದ

ಯುಕ್ತರಾಗಿ ಶ್ರೀ ಸ್ವಾಮಿಗಳವರು ಜಂಖಂಡಿಯನ್ನು ಪ್ರವೇಶಿಸಿ, ರಾಮತೀರ್ಥವೆಂಬ ಸ್ಥಳದಲ್ಲಿ ವಿಶಾಲವಾಗಿಯೂ ನಿರ್ಮಲವಾಗಿಯೂ ಇದ್ದ ರಾಜಭವನದಲ್ಲಿ ಬಿಡಾರ ಮಾಡಿದರು. ಸ್ವಾಮಿಗಳವರ ದರ್ಶನವಾದ ಕ್ಷಣ ಮೊದಲುಗೊಂಡು ಪ್ರತಿಕ್ಷಣದಲ್ಲಿಯೂ ಶ್ರೀಗಳವರ ವಿಷಯದಲ್ಲಿ ರಾಜರಭಕ್ತಿಯು ಹೆಚ್ಚುತ್ತಲೇ ಬಂದಿತು. ಶ್ರೀಗಳವರನ್ನು ತಮ್ಮ ರಾಜಧಾನಿಯಲ್ಲಿ ಕೆಲವು ದಿನ ನಿಲ್ಲಿಸಿಕೊಂಡು ಶ್ರೀಗಳವರಿಗೆ ಆ ರಾಜರು ಆತಿಥ್ಯವನ್ನು ನಡೆಸಿದರು. ಬಹಳ ನಾಗರಿಕತೆಯಿಂದ ಯುರೋಪು ದೇಶದಲ್ಲಿ ರಚಿಸಲ್ಪಟ್ಟು ಸುಮಾರು ಹನ್ನೆರಡು ಸಾವಿರ ರೂಪಾಯಿಗಳ ಬೆಲೆಯುಳ್ಳ ಒಂದು ವಜ್ರಕಂಠಿಯನ್ನು ಅದರಲ್ಲಿರತಕ್ಕ ಪದಕದ ಹಿಂಭಾಗದಲ್ಲಿ ತಮ್ಮ ಸ್ವೀಕೃತಪುತ್ರರಾಗಿ ಭಾವಿಸಿದ್ದ ರಾಜೀ ಸಾಹೇಬರ ಪ್ರತಿಕೃತಿಯನ್ನಿಡಿಸಿ ಶ್ರೀಗಳವರಿಗೆ ಸಮರ್ಪಿಸಿದರು. ಪ್ರತಿವರ್ಷವೂ ಶೃಂಗೇರಿಯ ಶ್ರೀ ಶಾರದಾಸನ್ನಿಧಿಯಲ್ಲಿ ನಡೆಯುವ ನವರಾತ್ರಿ ಮಹೋತ್ಸವ ಕಾಲದಲ್ಲಿ ಮೂಲಾನಕ್ಷತ್ರ ದಿವಸದ ಎಲ್ಲಾ ಖರ್ಚುಗಳೂ ತಮ್ಮ ಸಂಸ್ಥಾನದಿಂದ ಆಗಬೇಕೆಂಬುದಾಗಿಯೂ, ಇದಕ್ಕೆ ತಮ್ಮ ಪ್ರತಿನಿಧಿಗಳ ಮೂಲಕ ಪ್ರತಿವರ್ಷವೂ ಒಂದು ಸಹಸ್ರ ರೂಪಾಯಿಗಳನ್ನು ತಮ್ಮ ಸಂಸ್ಥಾನದಿಂದ ಪರಂಪರೆಯಾಗಿ ಶೃಂಗೇರಿಗೆ ಕಳುಹಿಸುತ್ತ ಬರುವುದಾಗಿಯೂ ಶ್ರೀಗಳವರ ಸನ್ನಿಧಿಯಲ್ಲಿ ಶ್ರುತಪಡಿಸಿಕೊಂಡು ಅದರಂತೆ ವಿಜ್ಞಾಪನ ಪತ್ರಿಕೆಯನ್ನು ಬರೆದು ಒಪ್ಪಿಸಿದರು. ಅಂದಿನಿಂದ ಇದುವರೆಗೆ ಮೇಲಿನ ಸೇವೆಯು ಅವಿಚ್ಛಿನ್ನವಾಗಿ ನಡೆದು ಬರುತ್ತಲಿದೆ. ಈ ರೀತಿಯಿಂದ ಶ್ರೀಗಳವರಿಗೆ ಅನೇಕ ವಿಧವಾದ ಸೇವೆಗಳನ್ನು ಮಾಡಿ ಅವರ ಪರಮಾನುಗ್ರಹಕ್ಕೆ ಪಾತ್ರರಾಗಿ ಅವರ ಸದುಪದೇಶಗಳನ್ನು ಕೇಳಿ ತಿಳಿದುಕೊಂಡದ್ದಲ್ಲದೆ ಶ್ರೀಗಳವರಿಂದ ಮಂತ್ರೋಪದೇಶವನ್ನು ತೆಗೆದುಕೊಂಡು ಪರಮಾಸ್ತಿಕ ಶಿರೋಮಣಿಗಳಾಗಿ ಶ್ರೀ ಸ್ವಾಮಿಗಳ ಶಿಷ್ಯಕೋಟಿಯಲ್ಲಿ ಪ್ರಾಮುಖ್ಯವನ್ನು ಪಡೆದರು.

ಶ್ರೀಗಳವರು ತಮ್ಮ ಯಾತ್ರೆಗಳನ್ನು ಪೂರ್ತಿಮಾಡಿಕೊಂಡು ಶೃಂಗೇರಿಗೆ ಹಿಂತಿರುಗಿ ದಯಮಾಡಿಸುವುದರೊಳಗಾಗಿ ಬಳ್ಳಾರಿಯಲ್ಲಿ ಶ್ರೀಗಳವರು ವಸತಿ ಮಾಡಿರುವ ಕಾಲದಲ್ಲಿ ರಾಮಚಂದ್ರರಾವ್ ಅಪ್ಪಾ ಸಾಹೇಬರು ಬಂದು ಸ್ವಾಮಿಗಳವರ ಸಂದರ್ಶನವನ್ನು ತೆಗೆದುಕೊಂಡು ತಮ್ಮ ಮಗನಿಗೆ ಶ್ರೀಗಳವರಿಂದ ಉಪದೇಶವನ್ನು ಮಾಡಿಸಿ ತಮ್ಮ ಸ್ಥಳಕ್ಕೆ ಹೊರಟುಹೋದದ್ದಲ್ಲದೆ ಶೃಂಗೇರಿಗೆ ಶ್ರೀಗಳವರ ಸವಾರಿಯು ಹಿಂತಿರುಗಿ ಬಂದ ನಂತರ ಮತ್ತೆ ತಮ್ಮ ಪರಿವಾರದೊಡನೆ ಶೃಂಗೇರಿಗೆ ಬಂದು ಶ್ರೀಮಠದ ಕಡೆಯಿಂದ ಅನುಗ್ರಹರೂಪವಾಗಿ ಮಾಡಲ್ಪಟ್ಟ ಆತಿಥ್ಯವನ್ನು ಸ್ವೀಕರಿಸಿ ಶೃಂಗೇರಿಯಲ್ಲಿ ಶ್ರೀಗಳವರಿಗೆ ಸುವರ್ಣದ ನಾಣ್ಯಗಳಿಂದ ಪಾದಪೂಜೆಯನ್ನು ಮಾಡಿ ಶ್ರೀಗಳವರ ಉಪಯೋಗಕ್ಕೋಸ್ಕರ ಹೊಸದಾಗಿ ತಮ್ಮಿಂದ ಮಾಡಿಸಲ್ಪಟ್ಟಿದ್ದ ದಿವ್ಯವಾದ ರಜತಮಯ ಭದ್ರಾಸನವನ್ನು ಶ್ರೀ

ಶಾರದಾಂಬಾ ಸನ್ನಿಧಿಯಲ್ಲಿಡಿಸಿ ಅದರ ಕೆಳಭಾಗದಲ್ಲಿ ತಮ್ಮ ಮಕ್ಕಳು ದಾಜೀ ಸಾಹೇಬರು ಅತಿ ಬಾಲ್ಯವಯಸ್ಕರಾಗಿದ್ದರೂ ಅವರನ್ನು ಮಲಗಿಸಿ ಅವರ ಬೆನ್ನಿನ ಮೇಲೆ ಶ್ರೀಗಳವರು ಪಾದವನ್ನಿಟ್ಟುಕೊಂಡು ಭದ್ರಾಸನಾರೋಹಣಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಶ್ರೀಗಳವರು ಅವರ ಭಕ್ತಿಗೆ ಪರವಶರಾಗಿ ಅವರು ಒಪ್ಪಿ ಭದ್ರಾಸನವನ್ನು ಸ್ವೀಕರಿಸಿ ರಾಜರಿಗೂ ಅವರ ಅಭಿಪ್ರಾಯಕ್ಕೆ ಸ್ವಲ್ಪವೂ ನ್ಯೂನತೆಯಿಲ್ಲದಂತೆ ನಡೆದುಕೊಳ್ಳುತ್ತಲಿದ್ದ ಅವರ ಮಕ್ಕಳಿಗೂ ರಾಜಯೋಗ್ಯವಾದ ಮರ್ಯಾದೆಗಳೊಡನೆ ಪರಮಾನುಗ್ರಹವನ್ನು ಮಾಡಿ ಕಳುಹಿಸಿದರು. ಈ ಭದ್ರಾಸನವು ಈಗ ಶ್ರೀಮಠದಲ್ಲಿ ನಡೆಯತಕ್ಕ ಎಲ್ಲಾ ವಿಶೇಷ ಸಂದರ್ಭಗಳಲ್ಲಿಯೂ ಶ್ರೀಗಳವರಿಂದ ಉಪಯೋಗಿಸಲ್ಪಡುತ್ತಿದೆ.

ಅಲ್ಲಿಂದ ಹೊರಟು ಮಿರಜ, ಸಾಂಗಲಿ, ಕುರಂದವಾಡ ಇವು ಮೊದಲಾದ ಚಿಕ್ಕಚಿಕ್ಕ ಸಂಸ್ಥಾನಗಳ ರಾಜರುಗಳಿಂದ ಪ್ರಾರ್ಥಿಸಲ್ಪಟ್ಟು ಅವರ ರಾಜಧಾನಿಗಳನ್ನು ಪ್ರವೇಶಿಸಿ ಆಯಾ ರಾಜರುಗಳನ್ನೂ ಪ್ರಜೆಗಳನ್ನೂ ಅನುಗ್ರಹಿಸಿ ಕೊಲ್ಲಾಪುರಕ್ಕೆ ದಯಮಾಡಿಸಿದರು. ಕೊಲ್ಲಾಪುರದ ರಾಜರು ಆಗ ಪ್ರಾಪ್ತವಯಸ್ಕರಾಗಿರಲಿಲ್ಲ. ರಾಜಮಾತೃಗಳಿಂದ ವಿಶೇಷವಾಗಿ ಸತ್ಕರಿಸಲ್ಪಟ್ಟು ಕೊಲ್ಲಾಪುರದ ಮಹಾಲಕ್ಷ್ಮೀ ಸಂದರ್ಶನವನ್ನು ಮಾಡಿದರು. ಈ ಕೊಲ್ಲಾಪುರ ಸಂಸ್ಥಾನದಲ್ಲಿ ಒಂದು ಮಠವಿದೆ. ಅದಕ್ಕೆ ಸಂಕೇಶ್ವರಮಠವೆಂದು ಪ್ರಸಿದ್ಧಿಯಿದೆ. ಆ ಮಠವೂ ಜಗದ್ಗುರು ಶೃಂಗೇರಿ ಸಂಸ್ಥಾನದ ಶಾಖೆಯೆಂದು ಆ ದೇಶೀಯರು ಆ ಮಠದ ಸ್ವಾಮಿಗಳನ್ನು ಆರಾಧಿಸುತ್ತ ವಿಶೇಷವಾಗಿ ಗೌರವಿಸುತ್ತಾರೆ. ಕೊಲ್ಲಾಪುರದ ರಾಜರು ಆ ಮಠದ ಧರ್ಮಗಳು ನಡೆಯುವುದಕ್ಕೋಸ್ಕರ ಕೆಲವು ಗ್ರಾಮಗಳನ್ನು ಇನಾಮತಿಯಾಗಿ ಕೊಟ್ಟು ನಡೆಸುತ್ತ ಬರುತ್ತಾರೆ. ಆ ಮಠವು ಯಾರ ಕಾಲದಲ್ಲಿ ಯಾರಿಂದ ಹೇಗೆ ಸ್ಥಾಪಿಸಲ್ಪಟ್ಟಿತೆಂಬ ವಿಷಯವನ್ನು ಸರಿಯಾದ ಆಧಾರಗಳಿಂದ ಕಂಡುಹಿಡಿಯಲು ಅವಕಾಶವು ಇದುವರೆಗೆ ದೊರೆತಿಲ್ಲವು. ಶ್ರೀ ಜಗದ್ಗುರು ಸ್ವಾಮಿಗಳವರು ಕೊಲ್ಲಾಪುರಕ್ಕೆ ದಯಮಾಡಿದ ಕಾಲದಲ್ಲಿ ಸಂಕೇಶ್ವರ ಮಠದ ಸ್ವಾಮಿಗಳು ಶ್ರೀಗಳವರನ್ನು ತಮ್ಮ ಮಠಕ್ಕೆ ಬರಬೇಕೆಂದು ಪ್ರಾರ್ಥಿಸಿಕೊಂಡು ಶ್ರೀಗಳವರು ದಯಮಾಡಿದಾಗ ಅಧೀನ ಮಠಾಧಿಪತಿಗಳ ಕ್ರಮದಿಂದ ನಡೆದುಕೊಂಡು ಶ್ರೀಗಳವರ ಅನುಗ್ರಹವನ್ನು ಸಂಪಾದಿಸಿದರು. ಕೊಲ್ಲಾಪುರದಲ್ಲಿ ಸಾಮಾನ್ಯವಾಗಿ ವೈದಿಕ ಲೌಕಿಕರೆಲ್ಲರೂ ಧಾರಾಳವಾಗಿ ವ್ಯವಹರಿಸತಕ್ಕಷ್ಟು ಸಂಸ್ಕೃತ ಭಾಷೆಯಲ್ಲಿ ಯೋಗ್ಯತೆಯುಳ್ಳವ ರಾಗಿದ್ದುದನ್ನು ತಿಳಿದು ಶ್ರೀಗಳವರು ಬಹಳ ಸಂತುಷ್ಟರಾಗಿ ಅಲ್ಲಿ ವಸತಿ ಮಾಡಿದ್ದ ಕಾಲದಲ್ಲಿ ಮಹಾರಾಷ್ಟ್ರ ಭಾಷೆಯನ್ನು ಬಿಟ್ಟು ಪ್ರತಿ ದಿನವೂ ಸಂಸ್ಕೃತ ಭಾಷೆಯಲ್ಲಿಯೇ ಧರ್ಮವಿಷಯಕವಾದ ಉಪನ್ಯಾಸಗಳನ್ನೂ ಶಾಸ್ತ್ರಾರ್ಥವಿಚಾರವನ್ನೂ ನಡೆಸಿ ಅಲ್ಲಿಯ ಶಿಷ್ಯಮಂಡಲಿಯವರೆಲ್ಲರನ್ನೂ ಆನಂದಪಡಿಸಿದರು. ಆ ಯಾತ್ರೆಯಲ್ಲಿ ಪುಣೆಯ

ಸಮೀಪದವರೆಗೂ ಶ್ರೀಗಳವರು ದಯಮಾಡಿ ಆ ದೇಶದ ಜನರ ಭಕ್ತಿವಿಶ್ವಾಸಗಳಿಗೆ ಬಹಳ ಸಂತೋಷಪಟ್ಟವರಾಗಿದ್ದರೂ ಕಾಲರೀತಿಯಿಂದ ಬದಲಾಯಿಸಿರುವ ಅನೇಕವಾದ ಆಚಾರಗಳು ಶ್ರೀಗಳವರ ಮನಸ್ಸಿಗೆ ತೃಪ್ತಿಕರವಾಗಿರಲಿಲ್ಲ. ನವನಾಗರಿಕತೆಯಿಂದ ಸರಕಾರದವರು ಕಲ್ಪಿಸಿರುವ ಜಲವಸತಿಯೇ ಮೊದಲಾದ ವಿಷಯಗಳು ಶ್ರೀಗಳವರಿಗೆ ಆಜನ್ಮಸಿದ್ಧವಾದ ಅಭ್ಯಾಸದಿಂದ ರುಚಿಸಲಿಲ್ಲ. ಇವು ಮೊದಲಾದ ಕೆಲವು ಕಾರಣಗಳಿಂದ ಶ್ರೀಗಳವರಿಗೆ ತಮ್ಮ ಸಂಕಲ್ಪದಂತೆ ಉತ್ತರದೇಶ ಸಂಚಾರದ ಅಭಿಪ್ರಾಯವು ಕಡಿಮೆಯಾಗುತ್ತ ಬಂದಿತು. ಆದುದರಿಂದ ತಮ್ಮ ಯಾತ್ರೆಯನ್ನು ಮುಂದುವರಿಸದೆ ಸೋಲಾಪುರ, ಬಿಜಾಪುರಗಳ ಮಾರ್ಗವಾಗಿ ಹಿಂತಿರುಗಿದರು.

ಮದರಾಸಾಧಿಪತ್ಯಕ್ಕೆ ಸೇರಿದ ಬಳ್ಳಾರಿಯೆಂಬ ಗ್ರಾಮವು ಬಹಳ ದೊಡ್ಡದು. ಆ ಪ್ರಾಂತ್ಯದಲ್ಲಿ ಲಿಂಗಾಯಿತರು ಬಹಳವಾಗಿರುತ್ತಾರೆ. ಇವರಲ್ಲಿ ಅನೇಕರು ಉಪಪನ್ನರಾಗಿಯೂ ಮಾತುಬರಿಯುಳ್ಳವರಾಗಿಯೂ ಇರುವರು. ಸುಮಾರು ಮೂವತ್ತು ವರ್ಷಗಳಿಂದ ಬಳ್ಳಾರಿಯಲ್ಲಿ ಬ್ರಾಹ್ಮಣರಿಗೂ ಲಿಂಗಾಯಿತರಿಗೂ ಏರ್ಪಟ್ಟಿದ್ದ ಅಸಮಾಧಾನದಿಂದ ಅಲ್ಲಿಗೆ ಯಾವ ಮಠಾಧಿಪತಿಗಳೂ ಪ್ರವೇಶಿಸದಂತೆ ನಿರ್ಬಂಧ ಮಾಡಲ್ಪಟ್ಟಿತ್ತು. ಈ ಸಂದರ್ಭದಲ್ಲಿ ಜಗದ್ಗುರುಗಳವರು ಯಾತ್ರಾಕ್ರಮದಿಂದ ಬಳ್ಳಾರಿ ಜಿಲ್ಲೆಗೆ ದಯಮಾಡಿದ ವಾರ್ತೆಯನ್ನು ತಿಳಿದು ಬಳ್ಳಾರಿಯ ಬ್ರಾಹ್ಮಣರೂ ಇತರ ಜನಗಳೂ ಸೇರಿ, ಗುರುಗಳವರು ಬಳ್ಳಾರಿಗೆ ದಯಮಾಡಿಸಿ ಯಾವ ಮಠಾಧಿಪತಿಗಳೂ ಅಲ್ಲಿಗೆ ಪ್ರವೇಶ ಮಾಡಕೂಡದೆಂಬ ನಿರ್ಬಂಧವನ್ನು ಹೋಗಲಾಡಿಸಿ ಶಿಷ್ಯಮಂಡಲಿಗೆ ದರ್ಶನವನ್ನು ಕೊಟ್ಟು ಅನುಗ್ರಹಿಸ ಬೇಕೆಂದು ತಿಳಿಸಿಕೊಂಡರು. ಸಂಸ್ಥಾನದ ಶಿಷ್ಯ ಜನರಿಂದಲ್ಲದೆ ಬ್ರಾಹ್ಮಣ ಸಾಮಾನ್ಯರಿಂದಲೂ ಲಿಂಗಾಯತರು ಹೊರತು ಇತರ ಜಾತಿಯ ಅನೇಕ ಜನರಿಂದಲೂ ಮಾಡಲ್ಪಟ್ಟ ಆ ಪ್ರಾರ್ಥನೆಯ ತಿರಸ್ಕರಿಸತಕ್ಕುದಾಗಿರಲಿಲ್ಲವು. ಈ ಕಾರಣದಿಂದ ಬಳ್ಳಾರಿಪಟ್ಟಣ ಪ್ರವೇಶವು ಮಾಡತಕ್ಕುದು ಎಂದು ನಿಷ್ಕರ್ಷೆಯಾಯಿತು. ಈ ಸಂಗತಿಯು ಅಲ್ಲಿಯ ಕಲೆಕ್ಟರಿಗೆ ತಿಳಿಸಲ್ಪಟ್ಟಿತಲ್ಲದೆ ಲಿಂಗಾಯಿತರಿಗೂ ಇತರ ಮತಸ್ಥರಿಗೂ ಇರುವ ಚರ್ಚೆಗಳನ್ನು ವಿಚಾರಿಸಿ ನ್ಯಾಯರೀತಿಯಿಂದ ತೀರ್ಮಾನ ಮಾಡಿ, ಶ್ರೀಗಳವರು ಬಳ್ಳಾರಿಯನ್ನು ಪ್ರವೇಶಿಸುವುದರಲ್ಲಿ ಯಾವ ವಿಧವಾದ ಅನಾನುಕೂಲಗಳೂ ಉಂಟಾಗದಂತೆ ವ್ಯವಸ್ಥೆಯನ್ನೂ ಮಾಡಬೇಕೆಂದು ಕಲೆಕ್ಟರು ಕೋರಲ್ಪಟ್ಟರು. ಇದರಂತೆ ಲಿಂಗಾಯಿತರೂ ಕಲೆಕ್ಟರಲ್ಲಿ ತಮ್ಮ ದಾವಾ ತಿಳಿಸಿಕೊಂಡು ಜಗದ್ಗುರುಗಳು ಅಲ್ಲಿಗೆ ಬರುವ ವಿಷಯದಲ್ಲಿಯೂ ತಮ್ಮ ಮತದ ಗುರುಗಳೂ ಬಳ್ಳಾರಿಗೆ ಬರಬಹುದೆಂಬ ವಿಷಯದಲ್ಲಿಯೂ ಸರ್ಕಾರದವರು ವಿಚಾರ ಮಾಡಿ ನ್ಯಾಯವಾದ ತೀರ್ಮಾನವನ್ನು ಕೊಡಬೇಕಾಗಿಯೂ ಅದರಂತೆ ತಾವು ನಡೆದುಕೊಳ್ಳುವುದಾಗಿಯೂ

ತಿಳಿಸಿಕೊಂಡರು. ವಿವಾದಾಂಶವನ್ನು ವಿಚಾರ ಮಾಡಲಾಗಿ ಲಿಂಗಾಯತರ ಗುರುಗಳು ಹಿಂದಿನ ಪದ್ಧತಿಗಳಿಗೆ ವಿರುದ್ಧವಾಗಿಯೂ, ಇತರರಿಗೆ ಅಸಮಾಧಾನಕರವಾಗಿಯೂ ಇರತಕ್ಕ ಕೆಲವು ಬಿರುದುಗಳನ್ನು ಧರಿಸಿ ಬಳ್ಳಾರಿಗೆ ಬರಬೇಕೆಂದು ಯತ್ನ ಮಾಡಿದ ಕಾಲದಲ್ಲಿ ಇತರ ಮತಸ್ಥರು ಹೊಸ ಪದ್ಧತಿಗಳಿಗೆ ಅವಕಾಶ ಕೊಡದೆ ನಿರೋಧ ಮಾಡಿದ್ದೇ ಕಾರಣವೆಂದು ತಿಳಿದು ಬಂದಿತು. ಜಿಲ್ಲೆಯ ಕಲೆಕ್ಟರು ಉಭಯ ಪಕ್ಷದವರಲ್ಲಿಯೂ ಇರುವ ಬಿರುದುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ತರಿಸಿಕೊಂಡು ಚೆನ್ನಾಗಿ ಪರಿಶೀಲನೆ ಮಾಡಿ ಶೃಂಗೇರಿಯ ಜಗದ್ಗುರುಗಳು ಇಂತಹ ಬಿರುದುಗಳನ್ನು ಉಪಯೋಗಿಸಿಕೊಂಡು ಬಳ್ಳಾರಿ ಪಟ್ಟಣವನ್ನು ಪ್ರವೇಶಿಸಬಹುದಾಗಿಯೂ, ಲಿಂಗಾಯತರ ಗುರುಗಳು ಇಂಥಾ ಬಿರುದುಗಳನ್ನೇ ಉಪಯೋಗಿಸಬಹುದಾಗಿಯೂ ತೀರ್ಮಾನಿಸಿ ಜಗದ್ಗುರುಗಳವರು ಬಳ್ಳಾರಿಗೆ ದಯಮಾಡಿಸಬಹುದೆಂತಲೂ, ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿರುವಂತೆಯೂ, ಶ್ರೀಗಳವರ ಪಟ್ಟಣ ಪ್ರವೇಶಕ್ಕೆ ಯಾವ ತೊಂದರೆಯೂ ಉಂಟಾಗಲಾರದೆಂತಲೂ ತಿಳಿಸಿದರು. ಈ ತೀರ್ಮಾನವು ಲಿಂಗಾಯತರಿಗೆ ಅಷ್ಟು ತೃಪ್ತಿಕರವಾಗಿದ್ದಂತೆ ತೋರಲಿಲ್ಲ. ಶ್ರೀಗಳವರು ಸೊಂಡೂರು ಮಾರ್ಗವಾಗಿ ಬಳ್ಳಾರಿಗೆ ದಯಮಾಡಿಸಿದರು. ಆ ದಿನ ಆ ಪಟ್ಟಣದಲ್ಲಿ ಸೇರಿದ್ದ ಜನಗಳನ್ನು ಲೆಕ್ಕಿಸಲು ಶಕ್ಯವಾಗಿರಲಿಲ್ಲ. ವಿಶೇಷವಾದ ಕಲಹವುಂಟಾಗಿ ಜನಗಳ ನೆಮ್ಮದಿಗೆ ಭಂಗವಾಗಬಹುದೆಂಬ ನಿರೀಕ್ಷಣೆಯು ಸರ್ಕಾರದವರಿಗೂ ಜನಗಳಿಗೂ ಸಂಪೂರ್ಣವಾಗಿಯೇ ಇದ್ದಂತೆ ತೋರುತ್ತಲಿತ್ತು. ಈ ನಿರೀಕ್ಷಣೆಯಿಂದ ಸರ್ಕಾರದವರು ಮಾಡಿದ್ದ ಏರ್ಪಾಡು ನೋಡಿದವರಿಗೆಲ್ಲಾ ಭಯವನ್ನೂ ಆಶ್ಚರ್ಯವನ್ನೂ ಉಂಟುಮಾಡ ತಕ್ಕುದಾಗಿತ್ತು. ಶ್ರೀಗಳವರು ತಮ್ಮ ಸಹಜವಾದ ಬಿರುದುಗಳೊಡನೆ ಹೊರಟು ಪಟ್ಟಣ ಪ್ರವೇಶ ಮಾಡಿದ ಕೂಡಲೇ ಇವರ ದರ್ಶನ ಮಾಡಿದ ಪ್ರತಿಯೊಬ್ಬರ ಹೃದಯದಲ್ಲಿಯೂ ಶ್ರೀ ಸ್ವಾಮಿಗಳವರಲ್ಲಿದ್ದ ಶಾಂತಸ್ವಭಾವದ ಪ್ರತಿಫಲನವುಂಟಾಗಿ ಬಹುಕಾಲದಿಂದ ವಜ್ರಲೇಪವಾಗಿದ್ದ ದ್ವೇಷಬುದ್ಧಿಯು ಯಾವ ದಿಕ್ಕಿಗೆ ಓಡಿತೆಂಬ ಅಂಶವೇ ಯಾರಿಗೂ ತಿಳಿಯದೆ ಶ್ರೀಗಳವರ ಆಗಮನವು ಒಂದೇ ವಿಧವಾಗಿ ಎಲ್ಲಾ ಜನರನ್ನೂ ಆನಂದದಲ್ಲಿ ಮುಳುಗಿಸಿತು. ಆ ರೀತಿಯಾಗಿ ಪರಿಣಮಿಸಿದ್ದು ಈ ಮಹನೀಯರ ಸಮತ್ವ ಬುದ್ಧಿಯಿಂದಲ್ಲದೆ ಬೇರೆ ಯಾವ ಕಾರಣದಿಂದಲೂ ಅಲ್ಲವೆಂದು ಧಾರಾಳವಾಗಿ ಹೇಳಬಹುದು.

ಬಳ್ಳಾರಿಯಲ್ಲಿ ಶ್ರೀ ಸ್ವಾಮಿಗಳವರು ತಮ್ಮ ಚಾತುರ್ಮಾಸ್ಯ ಸಂಕಲ್ಪವನ್ನು ಆಚರಿಸಿ ಅಲ್ಲಿ ಎರಡು ತಿಂಗಳಿಗೆ ಮೇಲ್ಪಟ್ಟ ಕಾಲ ವಸತಿಯನ್ನು ಮಾಡಿದರು. ಆಗ ಅಲ್ಲಿನ ಶಿಷ್ಯರುಗಳಿಂದ ಸಂಸ್ಥಾನದ ಎಲ್ಲಾ ಖರ್ಚುಗಳೂ ವಹಿಸಲ್ಪಟ್ಟು ವಿಶೇಷವಾಗಿ ಸೇವೆ ಸತ್ಕಾರಗಳು ಬೆಳೆದವು. ಶ್ರೀಗಳವರು ಬಳ್ಳಾರಿಯಲ್ಲಿ ವಸತಿ ಮಾಡಿದ್ದ ಕಾಲದಲ್ಲಿ ಇವರ

ದರ್ಶನಕ್ಕೆಂದು ಜಂಖಂಡಿಯ ರಾಜರು ಬಂದಿದ್ದರೆಂದು ಹಿಂದೆ ಪ್ರಸ್ತಾಪಿಸಿರುತ್ತೆಯಷ್ಟೆ! ಶ್ರೀಗಳವರ ವಿಷಯದಲ್ಲಿ ಈಶ್ವರ ಭಾವನೆಯಿಂದ ವಿಶೇಷವಾಗಿ ಭಕ್ತಿಯನ್ನು ಹೊಂದಿದವರಾಗಿಯೂ ಮೈಸೂರು ಸಂಸ್ಥಾನದಲ್ಲಿ ಸರ್ವೋತ್ತಮವಾಗಿ ಅಮಾತ್ಯ ಪದವಿಯನ್ನು ವಹಿಸಿದವರಾಗಿಯೂ ಇದ್ದು ಈಗ ಕೀರ್ತಿಶೇಷರಾಗಿರುವ ರಾಜ್ಯಧುರಂಧರ, ಸರ್. ಕೆ. ಶೇಷಾದ್ರಯ್ಯರ್, ಕೆ.ಸಿ.ಎಸ್.ಐ.,ಯವರು ಶ್ರೀಗಳವರ ದರ್ಶನಕ್ಕೆ ಬಳ್ಳಾರಿಗೆ ಬಂದು ಶ್ರೀಗಳವರಲ್ಲಿ ಸೂತ್ರಭಾಷ್ಯಶಾಂತಿಯನ್ನು ಮಾಡಿ ಶ್ರೀಗಳವರ ಅನುಗ್ರಹವನ್ನು ಪಡೆದರು. ಈ ಸ್ಥಳದಲ್ಲಿ ಶೇಷಾದ್ರಯ್ಯರವರ ಸಂಬಂಧವಾಗಿ ಸ್ವಲ್ಪ ಪ್ರಸ್ತಾಪಿಸುವುದು ಅಪ್ರಕೃತವಾದುದೆಂದು ಅಭಿಪ್ರಾಯಪಡಲು ಅವಕಾಶವಿರಲಾರದು. ಶೇಷಾದ್ರಯ್ಯರವರು ಮದರಾಸಾಧಿಪತ್ಯಕ್ಕೆ ಸೇರಿದ ಪಾಲಘಾಟಿನಲ್ಲಿ ಹುಟ್ಟಿದವರು. ಇವರು ಸಾಮಾನ್ಯವಾದ ಅನುಕೂಲಸ್ಥರ ಕುಟುಂಬದಲ್ಲಿ ಜನಿಸಿದರು. ಇವರು ಅಣ್ಣಂದಿರ ಸಹಾಯದಿಂದ ಹೂಣ ವಿದ್ಯಾಭ್ಯಾಸವನ್ನು ಮಾಡಿ ಅದರಲ್ಲಿ ಗಣನೀಯರಾಗಿ ತೇರ್ಗಡೆ ಹೊಂದಿದರು. ಇವರ ಪ್ರತಿಭೆಯನ್ನೂ ಮನೋದಾರ್ಢ್ಯವನ್ನೂ ಬಾಲ್ಯದಿಂದಲೂ ನೋಡಿ ಈ ಶೇಷಾದ್ರಯ್ಯರು ಬಹಳ ಪ್ರಸಿದ್ಧರಾಗತಕ್ಕವರೆಂದು ತಿಳಿದುಕೊಂಡಿದ್ದ ದೂರದೃಷ್ಟಿಯುಳ್ಳ ರಂಗಾಚಾರ್ಯರವರ ಸಹಾಯದಿಂದ ಇವರು ಮೈಸೂರು ದೇಶಕ್ಕೆ ಬಂದು ಇಲ್ಲಿ ರೂಢಮೂಲರಾಗಿ ನಿಂತು ಹದಿನೆಂಟು ವರ್ಷಗಳ ಕಾಲ ಮುಖ್ಯಾಮಾತ್ಯ ಪದವಿಯನ್ನು ಅವಿಚ್ಛಿನ್ನವಾಗಿ ಅನುಭವಿಸಿ ದಿಗಂತವಿಶ್ರಾಂತವಾದ ಕೀರ್ತಿಯನ್ನು ಪಡೆದರು. ಇವರ ಸಹವಾಸವೂ ಅಭ್ಯಾಸವೂ ಅನುಷ್ಠಾನವೂ ಎಲ್ಲವೂ ಲೋಕವ್ಯವಹಾರಕ್ಕೆ ಸಂಬಂಧಿಸಿದ್ದಾಗಿತ್ತೇ ಹೊರತು ಪಾರಮಾರ್ಥಿಕ ವಿಷಯದಲ್ಲಿ ಒಂದು ಕ್ಷಣಮಾತ್ರವೂ ಇವರ ಮನಸ್ಸು ಪ್ರವರ್ತಿಸುವುದಕ್ಕೆ ಕಾರಣವೇ ಇರಲಿಲ್ಲ. ಆದರೆ ಇವರ ಜನ್ಮಾಂತರೀಯ ಸಂಸ್ಕಾರವು ಬಹಳ ಪ್ರಬಲವಾಗಿದ್ದುದರಿಂದ, ''ಹ್ರಿಯತೇ ಹ್ಯವಶೋಪಿ ಸಃ'' ಎಂಬ ಭಗವದುಪದೇಶದಂತೆ ಪೂರ್ವವಾಸನೆಯು ಇವರನ್ನು ಬಲಾತ್ಕಾರದಿಂದ ಪಾರಮಾರ್ಥಿಕ ಮಾರ್ಗದಲ್ಲಿಯೂ ಪ್ರವರ್ತಿಸುವಂತೆ ಮಾಡಿತು. ಇವರು ಪಾರಮಾರ್ಥಿಕ ಮಾರ್ಗದಲ್ಲಿ ಪ್ರವರ್ತಿಸುವುದಕ್ಕೆ ಉದ್ಬೋಧಕ ಸಾಮಗ್ರಿಯು ಸ್ವಲ್ಪ ಬೇಕಾಗಿತ್ತು. ಅದಕ್ಕೆ ತಕ್ಕಂತೆ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ಸಂಗಡ 1885ನೆಯ ಇಸವಿಯಲ್ಲಿ ಶೃಂಗೇರಿಗೆ ಹೋಗತಕ್ಕ ಸಂದರ್ಭವೊದಗಿತು. ಆ ಕಾಲದಲ್ಲಿ ಇವರಿಗೆ ಶ್ರೀಗಳವರ ದರ್ಶನವಾದಕೂಡಲೇ ತಮ್ಮ ಮನಸ್ಸಿನ ಮೇಲೆ ತೆರೆಯಂತೆ ಅಡ್ಡವಾಗಿದ್ದ ದುರ್ವಾಸನಾರೂಪ ಪ್ರತಿಬಂಧಕವು ನಿವೃತ್ತವಾಗಲು, ಅಕಸ್ಮಾತ್ತಾಗಿ ಒಂದು ಬೆಳಕು ಉಂಟಾದಂತೆ ತೋರಿತು. ಆ ದಿನವೇ ತುಂಗಾನದಿಯಲ್ಲಿ ಸ್ನಾನ ಮಾಡುವುದರಲ್ಲಿಯೂ, ತಮ್ಮ ಕುಲಕ್ರಮಾಗತವಾದ ವಿಭೂತಿಯನ್ನು ಧರಿಸುವುದರಲ್ಲಿಯೂ,

ನದೀತೀರದಲ್ಲಿ ಸಂಧ್ಯಾವಂದನವನ್ನು ಮಾಡಬೇಕೆಂಬ ವಿಷಯದಲ್ಲಿಯೂ, ಇವರಿಗೆ ಬಲವಾದ ಚಿತ್ತವೃತ್ತಿಯು ಹುಟ್ಟಿ ಅದರಂತೆ ಆಚರಿಸಿದರು. ಏಕಾಂತವಾಗಿ ಶ್ರೀ ಸ್ವಾಮಿಗಳವರ ದರ್ಶನಕ್ಕೆ ಬಂದು ತಮ್ಮ ಮೊದಲಿನ ರೀತಿಯನ್ನೂ ಶೃಂಗೇರಿಗೆ ಬಂದಮೇಲೆ ಶ್ರೀಗಳವರ ದರ್ಶನವಾದ ಕೂಡಲೇ ತಮಗುಂಟಾದ ಅನುಭವವನ್ನೂ ತಾವಾಗಿಯೇ ಶ್ರೀಸ್ವಾಮಿಗಳವರಲ್ಲಿ ತಿಳಿಸಿಕೊಂಡರು. ಶ್ರೀಗಳವರು ಶೇಷಾದ್ರಯ್ಯರು ತಮ್ಮಲ್ಲಿ ಶ್ರುತಪಡಿಸಿದ ಸಂಗತಿಯಿಂದ ಬಹಳ ತೃಪ್ತರಾಗಿ ಅವರಿಗೆ ಆಸ್ತಿಕ್ಯ ಬುದ್ಧಿಯು ಹೆಚ್ಚಾಗುವಂತೆ ಪ್ರೋತ್ಸಾಹಗೊಳಿಸಿ ಆ ಕಾಲದಲ್ಲಿ ಅವರಿಗೆ ವರ್ತಮಾನ ಜನ್ಮ ಸಹವಾಸಗಳಿಂದ ಉಂಟಾಗಿದ್ದ ಕೆಲವು ಸಂದೇಹಗಳನ್ನು ಶಾಸ್ತ್ರೀಯವಾದ ಯುಕ್ತಿಗಳಿಂದಲೂ ಲೋಕ ದೃಷ್ಟಾಂತಗಳಿಂದಲೂ ಪರಿಹರಿಸಿ ವೇದಶಾಸ್ತ್ರಗಳ ವಿಷಯದಲ್ಲಿಯೂ ಸದಾಚಾರ ಸದ್ಧರ್ಮಗಳ ವಿಷಯದಲ್ಲಿಯೂ ನಂಬಿಕೆಯುಂಟಾಗುವಂತೆ ಮಾಡಿದರು. ಅದು ಮೊದಲುಗೊಂಡು ತಮ್ಮ ಅಂತ್ಯಕಾಲದ ವರೆಗೂ ಶೇಷಾದ್ರಯ್ಯರಿಗೆ ಶ್ರೀ ಸ್ವಾಮಿಗಳವರ ವಿಷಯದಲ್ಲಿದ್ದ ಗೌರವವೂ ಭಕ್ತಿಯೂ ಅನ್ಯಾದೃಶವಾಗಿತ್ತು. ಶ್ರೀಗಳವರಿಂದ ಅನೇಕವಾಗಿ ಮಂತ್ರೋಪದೇಶವನ್ನು ಮಾಡಿಸಿಕೊಂಡರು. ಯೋಗಶಾಸ್ತ್ರ ವಿಷಯವಾಗಿ ಕೆಲವು ಮುಖ್ಯಸಂಗತಿಗಳನ್ನು ಶ್ರೀಗಳವರಿಂದ ತಿಳಿದುಕೊಂಡು ಆ ಮಾರ್ಗದಲ್ಲಿ ಶ್ರಮಪಟ್ಟಿದ್ದವರ ಸಹಾಯದಿಂದ ಕೆಲವು ಕಾಲ ಸ್ವತಃ ಶ್ರಮಪಟ್ಟು ಅಭ್ಯಾಸ ಮಾಡಿದರು. ಅನೇಕಾವೃತ್ತಿ ಶ್ರೀ ಸ್ವಾಮಿಗಳವರ ದರ್ಶನ ಮಾಡಿ ಅವರ ಅಂತರಂಗ ಶಿಷ್ಯರಾಗಿದ್ದು ನಿರ್ಗುಣ ಬ್ರಹ್ಮಧ್ಯಾನ ಮಾಡತಕ್ಕ ರೀತಿಯನ್ನು ತಿಳಿದುಕೊಂಡು ಆ ಸುಖವನ್ನು ಅನುಭವಿಸಲು ಪ್ರಯತ್ನ ಪಟ್ಟಿದ್ದರು. ಆದರೆ ಇವರು ರಾಷ್ಟ್ರ ಪರಿಪಾಲನ ಕಾರ್ಯದಲ್ಲಿ ಶ್ರೀಮನ್ಮಹಾರಾಜರವರಿಗೆ ಪ್ರಧಾನ ಮನುಷ್ಯರಾಗಿದ್ದು ಲೌಕಿಕ ವ್ಯವಹಾರದಲ್ಲಿಯೇ ಹೆಚ್ಚಾಗಿ ತಮ್ಮ ಕಾಲವನ್ನು ಉಪಯೋಗಿಸಬೇಕಾದ ನಿರ್ಬಂಧವು ಇದ್ದುದರಿಂದ ಬೇರೆ ಮಾರ್ಗದಲ್ಲಿ ಹೆಚ್ಚಾದ ಕಾಲವನ್ನು ವಿನಿಯೋಗಿಸಲು ಅವಕಾಶವಿಲ್ಲದೆ ಪಾರಮಾರ್ಥಿಕವಾದ ಯಾವ ಅಭ್ಯಾಸವನ್ನೂ ಪೂರ್ತಿಮಾಡಲು ಸಾಧ್ಯವಿಲ್ಲವಾಯಿತು. ಲೌಕಿಕ ನಿರ್ಬಂಧದಿಂದ ಬಿಡುಗಡೆಯಾದ ನಂತರ ಕೆಲವು ಕಾಲ ಸ್ಥಿರವಾಗಿ ಶ್ರೀ ಸ್ವಾಮಿಗಳವರ ಸನ್ನಿಧಿಯಲ್ಲಿ ವಾಸ ಮಾಡಿ ತಮ್ಮ ಅಭ್ಯಾಸವನ್ನು ಹೆಚ್ಚಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದಿದ್ದ ಇವರ ಆಶೆಯು ದುರದೃಷ್ಟದಿಂದ ನೆರವೇರದಂತಾಯಿತು. ಇಂತಹ ನಿರ್ಮಲಚಿತ್ತರಾದ ಅಂತರಂಗ ಶಿಷ್ಯರ ವಿಯೋಗವು ಶ್ರೀಗಳವರಿಗೆ ಬಹಳ ದುಸ್ಸಹವಾಗಿತ್ತು. ಈ ಗುರುಶಿಷ್ಯರಿಗೆ ಪರಸ್ಪರವುಂಟಾಗಿದ್ದ ಋಣಾನುಬಂಧಕ್ಕೆ ನಿಜವಾಗಿದ್ದ ಕಾರಣವು ಅಷ್ಟು ಪ್ರಕಾಶವಾಗಿ ಜನಗಳಿಗೆ ತಿಳಿಯುವಂತೆ ಇರಲಿಲ್ಲ. ಸಾಮಾನ್ಯವಾಗಿ ಅವರ ಪದವಿಯನ್ನು ತಿಳಿದು ಸಂಸ್ಥಾನದ ಕಾರ್ಯಗಳ

ಸಹಾಯಕ್ಕೋಸ್ಕರ ಅವರಲ್ಲಿ ಶ್ರೀ ಸ್ವಾಮಿಗಳವರು ಪ್ರೀತಿಮಾಡುತ್ತಲಿದ್ದಂತೆಯೂ, ಶೇಷಾದ್ರಯ್ಯರು ಸ್ಮಾರ್ತ ಬ್ರಾಹ್ಮಣರಾದುದರಿಂದ ತಮಗಿರುವ ಅಧಿಕಾರ ಬಲದಿಂದ ಸ್ಮಾರ್ತಮತಕ್ಕೆ ಉಪಕಾರ ಮಾಡುವುದು ತಮ್ಮ ಕರ್ತವ್ಯವೆಂಬ ಅಭಿಮಾನದಿಂದ ಶ್ರೀ ಸ್ವಾಮಿಗಳವರಲ್ಲಿ ಭಕ್ತಿಗೌರವಗಳನ್ನು ತೋರಿಸುತ್ತಲಿದ್ದಂತೆಯೂ ಇಷ್ಟೇ ಜನಗಳ ಭಾವನೆಯಾಗಿರಬಹುದು. ಈ ಲೇಖಕನು ಈ ಗುರುಶಿಷ್ಯರ ವಿಷಯವನ್ನು ಅನೇಕ ಸಂದರ್ಭಗಳಲ್ಲಿ ನಾನಾ ಪ್ರಕಾರದಿಂದ ನೋಡಿ ತಿಳಿದುಕೊಂಡಿರುವನು. ಇವರಿಬ್ಬರಿಗೂ ಅಧಿಕಾರ, ಸಂಪತ್ತು, ಸಾಧಾರಣ - ಪ್ರಯೋಜನ ಇವುಗಳ ವಿಷಯದಲ್ಲಿ ಆದರವೂ ಉತ್ಸಾಹವೂ ಇರಲಿಲ್ಲ. ಅತ್ಯಂತ ಪ್ರತಿಭಾಶಾಲಿಗಳಾದ ಈ ಗುರುಶಿಷ್ಯರು ಅನೇಕ ಸಂದರ್ಭಗಳಲ್ಲಿ ಪಾರಮಾರ್ಥಿಕ ವಿಷಯವಾಗಿ ಪರಸ್ಪರ ನಡೆಸಿದ ವಿಚಾರದಿಂದ ಪರಸ್ಪರವಾಗಿ ಉಂಟಾದ ಪ್ರೀತಿಗೌರವಗಳೇ ಈ ಗುರುಶಿಷ್ಯರ ಋಣಾನುಬಂಧಕ್ಕೆ ಮುಖ್ಯ ಕಾರಣವೆಂದು ಧಾರಾಳವಾಗಿ ಈ ಲೇಖಕನು ಹೇಳಬಲ್ಲನು. ಈ ಮಂತ್ರಿಶೇಷ್ಠರ ಲೌಕಿಕ ವ್ಯವಹಾರ ದಕ್ಷತೆಯು ಸ್ವದೇಶ ಪರದೇಶಗಳೆರಡರಲ್ಲಿಯೂ ಸುಪ್ರಸಿದ್ಧವಾಗಿಯೇ ಇರುವುದಷ್ಟೆ! ಪರಮಾರ್ಥ ವಿಚಾರದಲ್ಲಿಯೂ ಇವರ ಯೋಗ್ಯತೆಯು ಕಡಿಮೆಯಾಗಿರಲಿಲ್ಲ. ಆದ್ದರಿಂದ ''ಯದ್ಯದ್ವಿಭೂತಿಮತ್ಸತ್ವಂ'' ಎಂಬ ಗೀತಾಶಾಸ್ತ್ರವನ್ನನುಸರಿಸಿ ಈ ಪುರುಷಶ್ರೇಷ್ಠರನ್ನು ಅಂಶಪುರುಷರೆಂದು ಹೇಳುವುದರಲ್ಲಿ ಸಂಕೋಚಪಡಬೇಕಾಗಿಲ್ಲ.

ಬಳ್ಳಾರಿಯಿಂದ ಹೊರಟು ಮಾರ್ಗದಲ್ಲಿ ಸಿಕ್ಕಿದ ರಾಯದುರ್ಗದ ತಾಲ್ಲೂಕಿಗೆ ಸೇರಿದ ಬೆಳಗುಪ್ಪೆ ಎಂಬ ಗ್ರಾಮದಲ್ಲಿ ಶ್ರೀ ಸ್ವಾಮಿಗಳವರು ವಸತಿ ಮಾಡಿದ್ದರು. ಆ ಗ್ರಾಮದಲ್ಲಿ ಬ್ರಾಹ್ಮಣರ ಮನೆಗಳು ವಿಶೇಷವಾಗಿರಲಿಲ್ಲ. ಅಲ್ಲಿ ಶ್ರೀಗಳವರ ಬಿಡಾರಕ್ಕೆ ಎರಡು ಮನೆಗಳನ್ನು ಸಿದ್ಧಪಡಿಸಿದ್ದರು. ಆ ಮನೆಗಳೆರಡೂ ಒಂದಕ್ಕೊಂದು ಸೇರಿದ ಹಾಗೆ ಇದ್ದುವು. ವಿಶಾಲವಾಗಿರಲಿಲ್ಲ. ಸ್ಥಳ ಸಂಕೋಚದಿಂದ ಒಂದು ಮನೆಯು ಶ್ರೀಚಂದ್ರಮೌಳೀಶ್ವರ ಪೂಜೆ, ನೈವೇದ್ಯ, ಭಿಕ್ಷೆ, ಈ ಕಾರ್ಯಗಳಿಗಾಗಿಯೂ ಮತ್ತೊಂದು ಮನೆಯು ಶ್ರೀ ಸ್ವಾಮಿಗಳವರ ಸ್ನಾನ, ಆಹ್ನಿಕ, ವಿಶ್ರಾಂತಿ ಇವು ಮೊದಲಾದ ಕಾರ್ಯಗಳಿಗಾಗಿಯೂ ಉಪಯೋಗಿಸಲ್ಪಟ್ಟಿತ್ತು. ಮಧ್ಯಾಹ್ನದಲ್ಲಿ ಪೂಜಾಭಿಕ್ಷಾದಿಗಳು ನೆರವೇರಿದ ಬಳಿಕ ಸಾಯಂಕಾಲ ಸ್ನಾನಾಹ್ನಿಕಗಳನ್ನು ನೆರವೇರಿಸುವುದಕ್ಕೆ ಶ್ರೀಗಳವರ ಸವಾರಿಯು ಮತ್ತೊಂದು ಗೃಹಕ್ಕೆ ದಯಮಾಡಿಸಿತು. ಸಂಸ್ಥಾನದಲ್ಲಿ ಪರಂಪರಾಗತವಾಗಿ ಬಂದಿರುವ ಶ್ರೀ ಚಂದ್ರಮೌಳೀಶ್ವರ ಲಿಂಗಕ್ಕೆ ಶ್ರೀಗಳವರು ಮಧ್ಯಾಹ್ನದಲ್ಲಿ ಮಾತ್ರ ಅಭಿಷೇಕಾದಿ ಮಹಾಪೂಜೆಯನ್ನು ಮಾಡಿ ಶ್ರೀಚಂದ್ರಮೌಳೀಶ್ವರ ಲಿಂಗವನ್ನೂ ರತ್ನಗರ್ಭ ಗಣಪತಿಯನ್ನೂ ಒಂದು ಸಂಪುಟದಲ್ಲಿ ಭದ್ರಪಡಿಸಿ ಆ ಸಂಪುಟವನ್ನು ತಾವು ರಾತ್ರಿಕಾಲದಲ್ಲಿ

ವಿಶ್ರಮಿಸಿಕೊಳ್ಳತಕ್ಕ ಸ್ಥಳದಲ್ಲಿ ಒಂದು ದೊಡ್ಡ ಪೆಟ್ಟಿಗೆಯಲ್ಲಿಟ್ಟು ಕಾಪಾಡುವುದು ಸಂಸ್ಥಾನದ ಹಿಂದಿನ ಪದ್ಧತಿಯಾಗಿತ್ತು. ಅದರಂತೆ ಆ ದಿನವೂ ಪೂಜಾನಂತರ ಚಂದ್ರಮೌಳೀಶ್ವರ ಲಿಂಗವನ್ನೂ ರತ್ನಗರ್ಭ ಗಣಪತಿಯನ್ನೂ ಇಟ್ಟು ಬೀಗಹಾಕಿದ್ದ ಸಂಪುಟವನ್ನು ಶ್ರೀಗಳವರ ಸಂಗಡವೇ ಮತ್ತೊಂದು ಗೃಹಕ್ಕೆ ತಂದು ಅಲ್ಲಿ ಒಂದು ಮರದ ಪೆಟಾರಿಯಲ್ಲಿ ಇಟ್ಟು ಬೀಗಹಾಕಿದ್ದರು. ಚೋರಬಾಧಾ ವಿಷಯದಲ್ಲಿ ಬಳ್ಳಾರಿ ಜಿಲ್ಲೆಯು ಯಾವಾಗಲೂ ಪ್ರಸಿದ್ಧಿಯನ್ನು ಪಡೆದಿರುವುದಷ್ಟೆ ! ಬೆಳಗುಪ್ಪೆಗೆ ಶ್ರೀಸ್ವಾಮಿಗಳವರ ಸವಾರಿಯು ದಯಮಾಡಿಸಿದ ದಿನದ ರಾತ್ರಿಯೇ ಮಠವು ಇಳಿದಿದ್ದ ಮನೆಗೆ ಚೋರರು ಪ್ರವೇಶಿಸಿದರು. ಶ್ರೀಗಳವರು ಬಿಡಾರ ಮಾಡಿದ್ದ ಮನೆಗಳು ಮಣ್ಣಿನ ಮಾಳಿಗೆಯ ಹಳೆಯ ಮನೆಗಳಾಗಿದ್ದುದರಿಂದ ಈ ಸ್ಥಳವನ್ನು ಪ್ರವೇಶಿಸುವುದು ಕಳ್ಳರಿಗೆ ಸುಲಭವಾಗಿಯೇ ಇತ್ತು. ಬಿಡಾರ ಮಾಡಿದ್ದ ಮನೆಗಳೆರಡೂ ಒಂದಕ್ಕೊಂದು ಸೇರಿಕೊಂಡಿದ್ದುವೆಂದು ಮೇಲೆ ಹೇಳಿದೆಯಷ್ಟೆ! ಎರಡು ಮನೆಗಳಿಗೂ ಮಧ್ಯದಲ್ಲಿದ್ದ ಒಂದು ಕೊಠಡಿಯ ಮೇಲುಭಾಗದ ಛಾವಣಿಯು ಬಿದ್ದುಹೋಗಿ ಗೋಡೆಗಳು ಮಾತ್ರ ಅವಶಿಷ್ಟವಾಗಿದ್ದುವು. ಆದರೆ ಆ ಕೊಠಡಿಗೆ ಬಾಗಿಲು ಮಾತ್ರ ಇದ್ದು ಆ ಬಾಗಿಲಿಗೆ ಬೀಗವನ್ನು ಹಾಕಿದ್ದುದರಿಂದ ಒಳ ವಿಷಯವು ಯಾರ ಗಮನಕ್ಕೂ ಬಂದಿರಲಿಲ್ಲ. ಬಂದಕಳ್ಳರು ಛಾವಣಿಯಿಲ್ಲದ ಆ ಕೊಠಡಿಯಲ್ಲಿಳಿದು ಮಧ್ಯಾಹ್ನದಲ್ಲಿ ಶ್ರೀ ಸ್ವಾಮಿಗಳವರು ಪೂಜೆಯನ್ನು ನಡೆಸಿದ ಮನೆಗೆ ಪ್ರವೇಶ ಮಾಡುವುದಕ್ಕೆ ಗೋಡೆಯನ್ನು ಅಗೆಯಲು ಪ್ರಯತ್ನ ಪಟ್ಟಂತೆಯೂ ಆ ಪ್ರಯತ್ನವು ಸುಲಭಸಾಧ್ಯವಾಗಲಿಲ್ಲ ವೆಂತಲೂ ಅನಂತರ ತಿಳಿದು ಬಂತು. ಬೀಗಹಾಕಿ ಮುಚ್ಚಿದ್ದ ಆ ಬಾಗಿಲಿನಿಂದ ಶ್ರೀಗಳವರು ವಿಶ್ರಮಿಸಿಕೊಂಡಿದ್ದ ಮನೆಯ ಒಳಭಾಗಕ್ಕೆ ಪ್ರವೇಶ ಮಾಡಿ ಅಲ್ಲಿದ್ದ ಶ್ರೀಸ್ವಾಮಿಗಳವರು ಆಹ್ನಿಕದಲ್ಲಿ ಉಪಯೋಗಿಸತಕ್ಕ ಬೆಳ್ಳಿಯ ಪಾತ್ರೆಗಳನ್ನೂ ಬಂಗಾರದಲ್ಲಿ ಸುತ್ತಿದ್ದ ಕೆಲವು ಭಾರೀ ರುದ್ರಾಕ್ಷ ಕಂಠಿಗಳನ್ನೂ ಮರದ ಪೆಟಾರಿಯಲ್ಲಿಟ್ಟಿದ್ದ ಶ್ರೀ ಚಂದ್ರಮೌಳೀಶ್ವರ ಲಿಂಗ ರತ್ನಗರ್ಭ ಗಣಪತಿಗಳನ್ನೊಳಗೊಂಡಿದ್ದ ತಾಮ್ರದ ಸಂಪುಟವನ್ನೂ ಬಲಮುರಿಶಂಖ, ಬಂಗಾರದ ಗಣಪತಿ ಲಿಂಗ ಮೊದಲಾದ ಬಹಳ ಬೆಲೆಬಾಳತಕ್ಕ ಪದಾರ್ಥಗಳನ್ನೂ ಅಪಹರಿಸಿಕೊಂಡು ಹೊರಟುಹೋದರು. ಇಷ್ಟು ಸುಲಭವಾಗಿ ಸಂಸ್ಥಾನದ ಪದಾರ್ಥಗಳನ್ನು ಕದಿಯಲು ಕಳ್ಳರಿಗೆ ಅವಕಾಶವು ಹೇಗೆ ದೊರೆಯಿತೆಂಬ ಸಂದೇಹವು ಬರುವುದಕ್ಕೆ ಕಾರಣವಿದೆ. ಆದರೆ ಸಂಸ್ಥಾನದ ಸ್ವತ್ತುಗಳ ಸಂರಕ್ಷಣೆಗಾಗಿ ಮೈಸೂರು ಮಹಾರಾಜರವರಿಂದ ಶ್ರೀಸ್ವಾಮಿಗಳವರ ಸಂಗಡ ಕಳುಹಿಸಲ್ಪಟ್ಟಿದ್ದ ಬಾರುಪಹರೆಯ ಜನರು ಮತ್ತೊಂದು ಮನೆಯಲ್ಲಿ ಬೆಳ್ಳಿ ಬಂಗಾರ ಮಂಟಪಗಳನ್ನು ಇಟ್ಟು ಪೂಜೆಯಾಗಿದ್ದ ಸ್ಥಳದಲ್ಲಿ ಕಾವಲಿದ್ದರು. ರಾತ್ರಿಯಾದುದರಿಂದ ಕುದುರೆ ಸವಾರರೆಲ್ಲರೂ ದೂರದಲ್ಲಿ ವಿಶ್ರಾಂತರಾಗಿದ್ದರು. ಶ್ರೀಗಳವರು

ವಿಶ್ರಮಿಸಿಕೊಂಡಿದ್ದ ಗೃಹದ ಹೊರಭಾಗದಲ್ಲಿ ಬಹಳ ಮಿತವಾದ ಪರಿಜನರು ಮಾತ್ರ ಅಲ್ಲಲ್ಲಿ ಮಲಗಿ ನಿದ್ರೆ ಮಾಡುತ್ತಲಿದ್ದರು. ಇಂತಹ ಸಮಯವೂ ಕಾಲಕ್ಕೆ ತಕ್ಕಂತೆ ಉಂಟಾದ ಮಠದವರ ಅಜಾಗರೂಕತೆಯೂ ಬಂದ ಕಳ್ಳರಿಗೆ ಬಹಳ ಸಾಧಕವಾಗಿತ್ತು. ಪ್ರಾತಃಕಾಲ 5 ಗಂಟೆಗೆ ಎದ್ದು ಪರಿಜನರು ಸ್ನಾನಮಾಡಿ ಶ್ರೀಗಳವರ ಸ್ನಾನಕ್ಕೆ ಮಡಿಯ ವಸ್ತ್ರಗಳನ್ನು ಸಿದ್ಧ ಪಡಿಸಲು ಬಂದು ನೋಡುವಲ್ಲಿ ಶ್ರೀಗಳವರ ವಸ್ತ್ರದ ಪೆಟ್ಟಿಗೆಗಳು ಮೊದಲು ಇಟ್ಟಂತೆ ಇರದೆ ವ್ಯತ್ಯಸ್ತವಾಗಿದ್ದುದನ್ನು ಆ ಪರಿಜನರು ನೋಡಿ ಗಾಬರಿಯಿಂದ ಆಡಿಕೊಳ್ಳುತ್ತಲಿದ್ದ ಮಾತು ಶ್ರೀಗಳವರ ಕಿವಿಗೆ ಬಿತ್ತು. ಕೂಡಲೇ ಶ್ರೀಗಳವರು ಗಾಬರಿಯಿಂದ ದೇವರನ್ನು ಇಟ್ಟಿದ್ದ ಪೆಟ್ಟಿಗೆಯು ಹಾಗೆಯೇ ಇದೆಯೋ ? ಎಂದು ಪ್ರಶ್ನೆ ಮಾಡಿದ ನಂತರ ದೇವರ ಪೆಟಾರಿಯನ್ನು ನೋಡಲು ಅದರ ಬೀಗವು ತೆಗೆದುಹಾಕಿತ್ತು. ಬಾಗಿಲನ್ನು ತೆರೆದು ಒಳಗೆ ನೋಡುವಲ್ಲಿ ದೇವರ ಸಂಪುಟವಿರಲಿಲ್ಲ. ಈ ಸಂಗತಿಯು ಶ್ರೀಗಳವರಿಗೆ ತಿಳಿಸಲ್ಪಟ್ಟಿತು. ದೇವರ ಸಂಪುಟವಿಲ್ಲವೆಂಬ ಶಬ್ದವು ಶ್ರೀಗಳವರ ಕಿವಿಗೆ ಬಿದ್ದ ಕೂಡಲೇ ಆ ಸಮಯದಲ್ಲಿ ಅವರ ಭಾವವು ಹೇಗಿತ್ತೆಂಬುದನ್ನು ವಿವರಿಸುವುದು ಯಾರಿಂದಲೂ ಸಾಧ್ಯವಿಲ್ಲ. ಶ್ರೀಗಳವರು ಯಾವ ಮಾತನ್ನೂ ಆಡಲೇ ಇಲ್ಲ. ಗಾಬರಿಯಿಂದ ಮಠದ ಅಧಿಕಾರಿಗಳನ್ನಾಗಲಿ ಇತರರನ್ನಾಗಲಿ ಬರಮಾಡಿಕೊಂಡು ಚಿಂತಿಸುತ್ತಿರಲಿಲ್ಲ. ಕೂಡಲೇ ಹೊರಟು ಸ್ನಾನ ಮಾಡಿದರು. ಪೆಟ್ಟಿಗೆಗಳಲ್ಲಿದ್ದ ವಸ್ತ್ರಗಳು ಅಶುದ್ಧವಾಗಿದ್ದುದರಿಂದ ಆರ್ದ್ರವಸ್ತ್ರಗಳನ್ನೇ ಧರಿಸಿಕೊಂಡು ಆಹ್ನಿಕಕ್ಕೆ ಬಂದು ಪೀಠವನ್ನಲಂಕರಿಸಿದರು. ಯಾರೊಡನೆಯೂ ಯಾವ ಮಾತನ್ನೂ ಆಡಲಿಲ್ಲ. ಒಂದು ನಿಮಿಷವನ್ನಾದರೂ ವ್ಯರ್ಥವಾಗಿ ಕಳೆಯಲಿಲ್ಲ. ಅತ್ಯುಗ್ರ ರೂಪವನ್ನು ತಾಳಿ ನಾರಸಿಂಹ ಮಂತ್ರೋಪಾಸನೆಗೆ ಪ್ರಾರಂಭ ಮಾಡಿದರು. ಇತ್ತಲಾಗಿ ಮಠದಲ್ಲಿ ಕಳುವಾದ ವಾರ್ತೆಯು ಹರಡಿದೊಡನೆಯೇ ಕುದುರೆ ಸವಾರರುಗಳು ದಿಕ್ಕು ದಿಕ್ಕಿಗೆ ಓಡಿದರು. ತಕ್ಷಣವೇ ಸರಕಾರದ ಪೋಲೀಸು ಇಲಾಖೆಯವರಿಗೆ ವರ್ತಮಾನವು ಕೊಡಲ್ಪಟ್ಟಿತು. ಜಿಲ್ಲಾ ಕಲೆಕ್ಟರಿಗೂ ಪೋಲೀಸು ಸೂಪರಿಂಟೆಂಡೆಂಟರಿಗೂ ತಂತಿಗಳ ಮೂಲಕವಾಗಿ ಕಳವಿನ ಸಂಗತಿಯು ತಿಳಿಸಲ್ಪಟ್ಟಿತು. ಸಾಯಂಕಾಲದವರೆಗೂ ಎಷ್ಟು ದೂರ ಹೋಗಿ ಸುತ್ತಿ ನೋಡಿದರೂ ಯಾರಿಗೂ ಯಾವ ವಿಧವಾಗಿಯೂ ಕಳ್ಳರನ್ನಾಗಲಿ ಅವರ ಮಾರ್ಗವನ್ನಾಗಲಿ ಕಂಡುಹಿಡಿಯಲು ಸ್ವಲ್ಪವೂ ಚಿಹ್ನೆಗಳೇನೂ ದೊರೆಯದೆ ಹೋದ ಜನರೆಲ್ಲಾ ಭ್ರಾಂತರಾಗಿ ಹಿಂತಿರುಗಿ ಬಂದರು.

ಶ್ರೀಗಳವರ ಸನ್ನಿಧಿಗೆ ಹೋಗಿ ಎದುರಾಗಿ ನಿಲ್ಲುವುದಕ್ಕಾಗಲಿ ಯಾವ ಮಾತನ್ನಾದರೂ ಆಡುವುದಕ್ಕಾಗಲಿ ಯಾರಿಗೂ ಧೈರ್ಯವುಂಟಾಗಲಿಲ್ಲ. ಆದಿನ ಮುಂದೇನು ನಡೆಯಬೇಕು ? ಪೂಜಾದಿಗಳು ನಡೆಯುವುದು ಹೇಗೆ ? ಭೋಜನಾದಿ ವ್ಯವಹಾರಗಳು

ನಡೆವುದೆಂತು ? ಎಂಬ ವಿಷಯವನ್ನು ಹೇಳತಕ್ಕವರೇ ಯಾರೂ ಇರಲಿಲ್ಲ. ಕೇವಲ ಅರಾಜಕದಂತೆ ಆಗಿ ಪ್ರತಿಯೊಬ್ಬರ ಚಿತ್ತವೂ ಸ್ತಬ್ಧವಾಗಿ ಒಬ್ಬರೊಡನೆ ಮತ್ತೊಬ್ಬರು ಮಾತನ್ನು ಕೂಡ ಆಡದೆ ಎಲ್ಲೆಲ್ಲಿದ್ದವರು ಅಲ್ಲಲ್ಲಿಯೇ ಚಿತ್ರದಲ್ಲಿ ಬರೆದ ಬೊಂಬೆಗಳಂತೆ ವರ್ತಿಸಿದರು. ಈ ಸಂಭವವು ಜರುಗಿ ಇದುವರೆಗೆ 33 ವರ್ಷಗಳು ಕಳೆದುಹೋಗಿವೆ. ಆಗ ನಡೆದ ಕೃತ್ಯವನ್ನು ಸ್ಮರಿಸುವುದು ಕೂಡ ಅತಿದುಸ್ಸಹವೆಂದು ಈಗಲೂ ಮನಸ್ಸು ಭಯಪಡುವುದೆನಲು ಆಗಿನ ಸ್ಥಿತಿಯು ಹೇಗೆ ತಾನೆ ಇದ್ದಿರಬಹುದೆಂಬ ಅಂಶವನ್ನು ವಾಚಕರೇ ಯೋಚಿಸಬಹುದು. ಆ ಸಮಯದಲ್ಲಿ ಈ ಲೇಖಕನು ಸಂಗಡಲೇ ಇದ್ದು ಆ ಮಹಾಪತ್ತನ್ನು ಅನುಭವಿಸುವುದರಲ್ಲಿ ಭಾಗಿಯಾಗಿದ್ದುದರಿಂದ ಇಲ್ಲಿ ಬರೆದಿರುವ ಯಾವ ಸಂಗತಿಯೂ ಅತಿಶಯೋಕ್ತಿ ಎನ್ನುವುದಕ್ಕೆ ಅವಕಾಶವಿರುವುದಿಲ್ಲ. ತಿರ್ಯಗ್ಜಂತುಗಳಾದ ಆನೆ ಕುದುರೆ, ದನಕರುಗಳು ಕೂಡ ತಮ್ಮ ತಮ್ಮ ಆಹಾರವನ್ನೂ ತೆಗೆದುಕೊಳ್ಳದೆ ನಿಂತಿದ್ದುವು. ಮಠದಲ್ಲಿದ್ದ ಎಲ್ಲಾ ಬ್ರಾಹ್ಮಣರೂ ತಮತಮಗೆ ತಿಳಿದಿದ್ದ ಮಂತ್ರಗಳನ್ನು ಜಪಿಸುತ್ತ ಸ್ಥಿರಚಿತ್ತರಾಗಿ ಈಶ್ವರಪ್ರಾರ್ಥನೆಯನ್ನು ಮಾಡುತ್ತಲಿದ್ದರು. ಸಾಯಂಕಾಲ 6-7 ಘಂಟೆಯವರೆಗೂ ಯಾರೂ ಧೈರ್ಯವನ್ನು ತಾಳಿ ಆ ದಿನದ ಕೃತ್ಯವನ್ನು ಜರುಗಿಸಲು ಪ್ರಯತ್ನಪಡದೆಯೇ ಇದ್ದರು. ಅನಂತರ ಇತರ ದೇವರುಗಳಿಗೆ ಪೂಜೆಯನ್ನು ನಡೆಸಿ ರಾತ್ರಿಯಲ್ಲಿ ಪಾಕಮಾಡಿಸಿ ಇದ್ದ ಜನರಿಗೆ ಭೋಜನ ಮಾಡಿಸಲು ಮಠದ ಅಧಿಕಾರಿಗಳು ಯತ್ನಿಸಿದರು. ಆ ರಾತ್ರಿ ಸುಮಾರು ಒಂದು ಘಂಟೆಯ ಸಮಯದಲ್ಲಿ ಇತರ ಪರಿಜನರು ಆಹಾರ ಶಾಸ್ತ್ರವನ್ನು ಮಾಡಿದರು. ಪ್ರಾತಃಕಾಲ ಆರುಘಂಟೆಗೆ ಉಪಾಸನೆಗಾಗಿ ಪೀಠದಲ್ಲಿ ಕುಳಿತುಕೊಂಡು ಶ್ರೀಗಳವರು ರಾತ್ರಿ ಹತ್ತುಘಂಟೆಯಾದ ಬಳಿಕ ತಾವಾಗಿಯೇ ಎದ್ದು ಮತ್ತೆ ಸ್ನಾನಮಾಡಿ ತೀರ್ಥಪ್ರಾಶನಕ್ಕೆ ಕೂಡ ಅವಕಾಶವಿಲ್ಲದಂತೆ ಆಗಿದ್ದುದರಿಂದ ಹಾಗೆಯೇ ವಿಶ್ರಾಂತಿಯನ್ನು ಹೊಂದಿದರು. ಆಗ ಶ್ರೀಸ್ವಾಮಿಗಳವರು ತಾವಾಗಿಯೇ ಯಾರನ್ನಾದರೂ ಕರೆದು ಕೇಳಿದರೆ ಕೇಳಿದಷ್ಟು ಪ್ರಶ್ನೆಗೆ ಉತ್ತರವನ್ನು ಹೇಳತಕ್ಕ ಸ್ಥಿತಿಯು ಇತ್ತೇ ಹೊರತು ಬೇರೆ ಯಾವ ಮಾತನ್ನೂ ಆಡುವುದಕ್ಕೆ ಯಾರೊಬ್ಬರಿಗೂ ಧೈರ್ಯವೇ ಇರಲಿಲ್ಲ. ಮಾರನೆಯ ದಿನ ಎಂದರೆ ಕಳವುನಡೆದ ಮಾರನೆಯದಿನ ಇದರ ಪರಿಶೀಲನೆಗಾಗಿ ಸರ್ಕಾರದವರಿಂದ ಕಳುಹಿಸಲ್ಪಟ್ಟ ರಾಯದುರ್ಗದ ತಾಲ್ಲೂಕು ಪೋಲೀಸು ಇನ್‌ಸ್ಪೆಕ್ಟರು ಬೆಳಗುಪ್ಪೆಗೆ ಬಂದರು. ಆತನು ಶ್ರೀವೈಷ್ಣವ ಬ್ರಾಹ್ಮಣ. ಶ್ರೀಗಳವರ ಪೂರ್ವಾಶ್ರಮದ ತಂದೆಯವರಾದ ಕುಣಿಗಲ್ ರಾಮಶಾಸ್ತ್ರಿಗಳವರ ಮುಖ್ಯಶಿಷ್ಯರಾಗಿದ್ದ ವಿಜಯರಾಘವಾಚಾರ್ಯರ ಸಂತತಿಗೆ ಸೇರಿದವರು. ಆ ಇನ್‌ಸ್ಪೆಕ್ಟರು ಇಂತಹ ಕೃತ್ಯಗಳನ್ನು ಕಂಡುಹಿಡಿಯುವುದರಲ್ಲಿ ಬಹಳ ಸಮರ್ಥರೆಂಬ ಪ್ರಸಿದ್ಧಿಯೂ ನಂಬಿಕೆಯೂ ಅವರ ವಿಷಯದಲ್ಲಿ ಸರ್ಕಾರದವರಿಗೂ ಜನಗಳಿಗೂ ಉಂಟಾಗಿತ್ತು.

ಇನ್‌ಸ್ಪೆಕ್ಟರು ಊರಿಗೆ ಬಂದೊಡನೆಯೇ ಶ್ರೀಗಳವರ ದರ್ಶನಕ್ಕೆ ಬಂದರು. ಆ ಕಾಲದಲ್ಲಿ ಶ್ರೀಸ್ವಾಮಿಗಳವರು ಆಹ್ನಿಕದಲ್ಲಿದ್ದರು. ಆ ಸಮಯದಲ್ಲಿಯೇ ಶ್ರೀಗಳವರ ಸಂದರ್ಶನವನ್ನು ಮಾಡಿ ತಮ್ಮ ವಂಶಾವಳಿಯನ್ನು ತಿಳಿಸಿ ತಮ್ಮಲ್ಲಿ ಒಂದು ವಿಶ್ವಾಸವು ಶ್ರೀಗಳವರಿಗೆ ಹುಟ್ಟುವಂತೆ ಮಾಡಿಕೊಂಡರು. ಅನಂತರ ಈ ಕೃತ್ಯವನ್ನು ಅತಿಸುಲಭವಾಗಿ ಕಂಡುಹಿಡಿದು ಚಂದ್ರಮೌಳೀಶ್ವರ ದೇವರನ್ನು ತಂದು ಒಪ್ಪಿಸುತ್ತೇನೆ. ಆ ವಿಷಯದಲ್ಲಿ ಚಿಂತೆಪಡ ಬೇಕಾಗಿಯೇ ಇಲ್ಲ. ಶ್ರೀಗಳವರು ಇಷ್ಟು ಪ್ರಯಾಸದಿಂದ ಉಪಾಸನೆಯನ್ನು ಮಾಡತಕ್ಕ ಆವಶ್ಯಕತೆಯು ಈ ಕಾರ್ಯದಲ್ಲಿ ಇರುವುದಿಲ್ಲ. ದಯೆಯಿಟ್ಟು ಭಿಕ್ಷೆಮಾಡಬೇಕೆಂದು ಬಹಳ ಧೈರ್ಯದಿಂದ ತಿಳಿಸಿಕೊಂಡರು.

ಇನ್‌ಸ್ಪೆಕ್ಟರ ರೂಪವನ್ನು ಅದಕ್ಕೆ ಸದೃಶವಾದ ಅವರ ಧೈರ್ಯವನ್ನೂ ಕೇಳಿದ ಶ್ರೀಸ್ವಾಮಿಗಳವರಿಗೆ ಅವರಲ್ಲಿ ತುಂಬಾ ಪ್ರೀತಿ ಜನಿಸಿತು. ಆಗ ಶ್ರೀಗಳವರು ಆತನನ್ನು ಕುರಿತು, ತಾವು ನರಸಿಂಹನನ್ನೇ ನಂಬಿ ಆ ಮೂರ್ತಿಯ ಧ್ಯಾನದಲ್ಲಿಯೇ ಇರುತ್ತೇವೆ. ಶ್ರೀಶಂಕರಾಚಾರ್ಯರವರಿಗೆ ಮತಸ್ಥಾಪನೆಗಾಗಿ ನಡೆಸುತ್ತಿದ್ದ ಕಾರ್ಯಭಾಗಗಳಿಂದ ಸಂಭವಿಸಿದ ಮಹತ್ತರವಾದ ಆಪತ್ತುಗಳು ಲಕ್ಷ್ಮೀನೃಸಿಂಹನ ಅನುಗ್ರಹದಿಂದಲೇ ಪರಿಹೃತವಾದುದೆಂದು ಶಂಕರವಿಜಯ ಗ್ರಂಥದಿಂದ ತಿಳಿದುಬರುತ್ತೆ. ನಮ್ಮ ಗುರುಗಳವರು ನೃಸಿಂಹೋಪಾಸಕ ರಾಗಿದ್ದು ಅದರಿಂದ ಮಹಾ ಪ್ರಯೋಜನವನ್ನು ಪಡೆದಿರುವ ಅಂಶವು ನಮಗೆ ತಿಳಿದಿದೆ. ಈಗ ನಮಗೆ ಪ್ರಾಪ್ತವಾಗಿರುವ ವಿಪತ್ತಿಗಿಂತ ದೊಡ್ಡದಾದುದು ಯಾವುದೂ ಅಲ್ಲ. ಜಾತಕರೀತಿಯಿಂದ ಈ ಕಾಲವು ಪಾಂಚಭೌತಿಕವಾದ ಈ ಶರೀರಕ್ಕೆ ಅಪಾಯವನ್ನುಂಟು ಮಾಡತಕ್ಕದ್ದೆಂದು ಕೇಳಿರುತ್ತೇವೆ. ಇಂತಹ ಕಾಲದಲ್ಲಿ ವೈಷ್ಣವಮತವನ್ನವಲಂಬಿಸಿರುವ ನಿಮ್ಮನ್ನು ಕಾರ್ಯನಿರ್ವಾಹಕ್ಕೆ ನಮ್ಮ ಉಪಾಸ್ಯದೈವವಾದ ನರಸಿಂಹನೇ ಕರೆತಂದು ಬಿಟ್ಟಿರುವನೆಂಬ ಭಾವನೆಯು ನಮಗೆ ದೃಢವಾಗಿದೆ. ಅದು ನಿಜವಾಗಿರುವ ಪಕ್ಷದಲ್ಲಿ ಅಂತರ್ಧಾನವನ್ನು ಹೊಂದಿರುವ ಪರಶಿವಮೂರ್ತಿಯು ಪ್ರಸನ್ನನಾಗಿ ನಿಮ್ಮ ಪ್ರಯತ್ನದಿಂದ ನಮಗೆ ದೃಷ್ಟಿಗೋಚರನಾಗಲೇಬೇಕು. ಹಾಗಾಗುವುದಾದರೆ ಜಾತಕರೀತಿಯಿಂದ ಬಂದಿರಬಹುದಾದ ಮಾರಕದಶೆಯು ನಿವೃತ್ತವಾಗಲೂಬಹುದು. ನಿಮ್ಮ ಕೋರಿಕೆಯಂತೆ ಅನ್ನಮಯವಾದ ಈ ಶರೀರದ ಪೋಷಣೆಗಾಗಿ ಭಿಕ್ಷೆಯೂ ನಮಗೆ ದೊರೆಯಬಹುದು. ಅದಕ್ಕೆ ಬೇರೆಯಾಗಿ ಈಶ್ವರಸಂಕಲ್ಪವಿದ್ದರೆ ಅದರಂತೆ ನಡೆವುದೇ ಹೊರತು ನಮ್ಮ ಪ್ರಯತ್ನದಿಂದ ಈಶ್ವರಸಂಕಲ್ ವಿರುದ್ಧಾಚರಣೆಯು ಎಂದಿಗೂ ಆಗಲಾರದು. ಮತ್ತು ನಮಗೆ ಅಪೇಕ್ಷಿತವಾದ ದೇವರೇ ಹೊರತು ಇತರ ಪದಾರ್ಥಗಳಲ್ಲ. ಅವಲ್ಲವೂ ಅವುಗಳಿಂದ ಪ್ರಾಣಿಗಳ ಉಪಯೋಗಕ್ಕೋಸ್ಕರವೇ ಇರಬಹುದು, ಎಂದು ಅತಿ ಗಂ

ನಡೆವುದೆಂತು ? ಎಂಬ ವಿಷಯವನ್ನು ಹೇಳತಕ್ಕವರೇ ಯಾರೂ ಇರಲಿಲ್ಲ. ಕೇವಲ ಅರಾಜಕದಂತೆ ಆಗಿ ಪ್ರತಿಯೊಬ್ಬರ ಚಿತ್ತವೂ ಸ್ತಬ್ಧವಾಗಿ ಒಬ್ಬರೊಡನೆ ಮತ್ತೊಬ್ಬರು ಮಾತನ್ನು ಕೂಡ ಆಡದೆ ಎಲ್ಲೆಲ್ಲಿದ್ದವರು ಅಲ್ಲಲ್ಲಿಯೇ ಚಿತ್ರದಲ್ಲಿ ಬರೆದ ಬೊಂಬೆಗಳಂತೆ ವರ್ತಿಸಿದರು. ಈ ಸಂಭವವು ಜರುಗಿ ಇದುವರೆಗೆ 33 ವರ್ಷಗಳು ಕಳೆದುಹೋಗಿವೆ. ಆಗ ನಡೆದ ಕೃತ್ಯವನ್ನು ಸ್ಮರಿಸುವುದು ಕೂಡ ಅತಿದುಸ್ಸಹವೆಂದು ಈಗಲೂ ಮನಸ್ಸು ಭಯಪಡುವುದೆನಲು ಆಗಿನ ಸ್ಥಿತಿಯು ಹೇಗೆ ತಾನೆ ಇದ್ದಿರಬಹುದೆಂಬ ಅಂಶವನ್ನು ವಾಚಕರೇ ಯೋಚಿಸಬಹುದು. ಆ ಸಮಯದಲ್ಲಿ ಈ ಲೇಖಕನು ಸಂಗಡಲೇ ಇದ್ದು ಆ ಮಹಾಪತ್ತನ್ನು ಅನುಭವಿಸುವುದರಲ್ಲಿ ಭಾಗಿಯಾಗಿದ್ದುದರಿಂದ ಇಲ್ಲಿ ಬರೆದಿರುವ ಯಾವ ಸಂಗತಿಯೂ ಅತಿಶಯೋಕ್ತಿ ಎನ್ನುವುದಕ್ಕೆ ಅವಕಾಶವಿರುವುದಿಲ್ಲ. ತಿರ್ಯಗ್ಜಂತುಗಳಾದ ಆನೆ ಕುದುರೆ, ದನಕರುಗಳು ಕೂಡ ತಮ್ಮ ತಮ್ಮ ಆಹಾರವನ್ನೂ ತೆಗೆದುಕೊಳ್ಳದೆ ನಿಂತಿದ್ದುವು. ಮಠದಲ್ಲಿದ್ದ ಎಲ್ಲಾ ಬ್ರಾಹ್ಮಣರೂ ತಮತಮಗೆ ತಿಳಿದಿದ್ದ ಮಂತ್ರಗಳನ್ನು ಜಪಿಸುತ್ತ ಸ್ಥಿರಚಿತ್ತರಾಗಿ ಈಶ್ವರಪ್ರಾರ್ಥನೆಯನ್ನು ಮಾಡುತ್ತಲಿದ್ದರು. ಸಾಯಂಕಾಲ 6-7 ಘಂಟೆಯವರೆಗೂ ಯಾರೂ ಧೈರ್ಯವನ್ನು ತಾಳಿ ಆ ದಿನದ ಕೃತ್ಯವನ್ನು ಜರುಗಿಸಲು ಪ್ರಯತ್ನಪಡದೆಯೇ ಇದ್ದರು. ಅನಂತರ ಇತರ ದೇವರುಗಳಿಗೆ ಪೂಜೆಯನ್ನು ನಡೆಸಿ ರಾತ್ರಿಯಲ್ಲಿ ಪಾಕಮಾಡಿಸಿ ಇದ್ದ ಜನರಿಗೆ ಭೋಜನ ಮಾಡಿಸಲು ಮಠದ ಅಧಿಕಾರಿಗಳು ಯತ್ನಿಸಿದರು. ಆ ರಾತ್ರಿ ಸುಮಾರು ಒಂದು ಘಂಟೆಯ ಸಮಯದಲ್ಲಿ ಇತರ ಪರಿಜನರು ಆಹಾರ ಶಾಸ್ತ್ರವನ್ನು ಮಾಡಿದರು. ಪ್ರಾತಃಕಾಲ ಆರುಘಂಟೆಗೆ ಉಪಾಸನೆಗಾಗಿ ಪೀಠದಲ್ಲಿ ಕುಳಿತುಕೊಂಡು ಶ್ರೀಗಳವರು ರಾತ್ರಿ ಹತ್ತುಘಂಟೆಯಾದ ಬಳಿಕ ತಾವಾಗಿಯೇ ಎದ್ದು ಮತ್ತೆ ಸ್ನಾನಮಾಡಿ ತೀರ್ಥಪ್ರಾಶನಕ್ಕೆ ಕೂಡ ಅವಕಾಶವಿಲ್ಲದಂತೆ ಆಗಿದ್ದುದರಿಂದ ಹಾಗೆಯೇ ವಿಶ್ರಾಂತಿಯನ್ನು ಹೊಂದಿದರು. ಆಗ ಶ್ರೀಸ್ವಾಮಿಗಳವರು ತಾವಾಗಿಯೇ ಯಾರನ್ನಾದರೂ ಕರೆದು ಕೇಳಿದರೆ ಕೇಳಿದಷ್ಟು ಪ್ರಶ್ನೆಗೆ ಉತ್ತರವನ್ನು ಹೇಳತಕ್ಕ ಸ್ಥಿತಿಯು ಇತ್ತೇ ಹೊರತು ಬೇರೆ ಯಾವ ಮಾತನ್ನೂ ಆಡುವುದಕ್ಕೆ ಯಾರೊಬ್ಬರಿಗೂ ಧೈರ್ಯವೇ ಇರಲಿಲ್ಲ. ಮಾರನೆಯ ದಿನ ಎಂದರೆ ಕಳವುನಡೆದ ಮಾರನೆಯದಿನ ಇದರ ಪರಿಶೀಲನೆಗಾಗಿ ಸರ್ಕಾರದವರಿಂದ ಕಳುಹಿಸಲ್ಪಟ್ಟ ರಾಯದುರ್ಗದ ತಾಲ್ಲೂಕು ಪೋಲೀಸು ಇನ್‌ಸ್ಪೆಕ್ಟರು ಬೆಳಗುಪ್ಪೆಗೆ ಬಂದರು. ಆತನು ಶ್ರೀವೈಷ್ಣವ ಬ್ರಾಹ್ಮಣ. ಶ್ರೀಗಳವರ ಪೂರ್ವಾಶ್ರಮದ ತಂದೆಯವರಾದ ಕುಣಿಗಲ್ ರಾಮಶಾಸ್ತ್ರಿಗಳವರ ಮುಖ್ಯಶಿಷ್ಯರಾಗಿದ್ದ ವಿಜಯರಾಘವಾಚಾರ್ಯರ ಸಂತತಿಗೆ ಸೇರಿದವರು. ಆ ಇನ್‌ಸ್ಪೆಕ್ಟರು ಇಂತಹ ಕೃತ್ಯಗಳನ್ನು ಕಂಡುಹಿಡಿಯುವುದರಲ್ಲಿ ಬಹಳ ಸಮರ್ಥರೆಂಬ ಪ್ರಸಿದ್ಧಿಯೂ ನಂಬಿಕೆಯೂ ಅವರ ವಿಷಯದಲ್ಲಿ ಸರ್ಕಾರದವರಿಗೂ ಜನಗಳಿಗೂ ಉಂಟಾಗಿತ್ತು.

ಇನ್‌ಸ್ಪೆಕ್ಟರು ಊರಿಗೆ ಬಂದೊಡನೆಯೇ ಶ್ರೀಗಳವರ ದರ್ಶನಕ್ಕೆ ಬಂದರು. ಆ ಕಾಲದಲ್ಲಿ ಶ್ರೀಸ್ವಾಮಿಗಳವರು ಆಹ್ನಿಕದಲ್ಲಿದ್ದರು. ಆ ಸಮಯದಲ್ಲಿಯೇ ಶ್ರೀಗಳವರ ಸಂದರ್ಶನವನ್ನು ಮಾಡಿ ತಮ್ಮ ವಂಶಾವಳಿಯನ್ನು ತಿಳಿಸಿ ತಮ್ಮಲ್ಲಿ ಒಂದು ವಿಶ್ವಾಸವು ಶ್ರೀಗಳವರಿಗೆ ಹುಟ್ಟುವಂತೆ ಮಾಡಿಕೊಂಡರು. ಅನಂತರ ಈ ಕೃತ್ಯವನ್ನು ಅತಿಸುಲಭವಾಗಿ ಕಂಡುಹಿಡಿದು ಚಂದ್ರಮೌಳೀಶ್ವರ ದೇವರನ್ನು ತಂದು ಒಪ್ಪಿಸುತ್ತೇನೆ. ಆ ವಿಷಯದಲ್ಲಿ ಚಿಂತೆಪಡ ಬೇಕಾಗಿಯೇ ಇಲ್ಲ. ಶ್ರೀಗಳವರು ಇಷ್ಟು ಪ್ರಯಾಸದಿಂದ ಉಪಾಸನೆಯನ್ನು ಮಾಡತಕ್ಕ ಆವಶ್ಯಕತೆಯು ಈ ಕಾರ್ಯದಲ್ಲಿ ಇರುವುದಿಲ್ಲ. ದಯೆಯಿಟ್ಟು ಭಿಕ್ಷೆಮಾಡಬೇಕೆಂದು ಬಹಳ ಧೈರ್ಯದಿಂದ ತಿಳಿಸಿಕೊಂಡರು.

ಇನ್‌ಸ್ಪೆಕ್ಟರ ರೂಪವನ್ನು ಅದಕ್ಕೆ ಸದೃಶವಾದ ಅವರ ಧೈರ್ಯವನ್ನೂ ಕೇಳಿದ ಶ್ರೀಸ್ವಾಮಿಗಳವರಿಗೆ ಅವರಲ್ಲಿ ತುಂಬಾ ಪ್ರೀತಿ ಜನಿಸಿತು. ಆಗ ಶ್ರೀಗಳವರು ಆತನನ್ನು ಕುರಿತು, ತಾವು ನರಸಿಂಹನನ್ನೇ ನಂಬಿ ಆ ಮೂರ್ತಿಯ ಧ್ಯಾನದಲ್ಲಿಯೇ ಇರುತ್ತೇವೆ. ಶ್ರೀಶಂಕರಾಚಾರ್ಯರವರಿಗೆ ಮಠಸ್ಥಾಪನೆಗಾಗಿ ನಡೆಸುತ್ತಿದ್ದ ಕಾರ್ಯಭಾಗಗಳಿಂದ ಸಂಭವಿಸಿದ ಮಹತ್ತರವಾದ ಆಪತ್ತುಗಳು ಲಕ್ಷ್ಮೀನೃಸಿಂಹನ ಅನುಗ್ರಹದಿಂದಲೇ ಪರಿಹೃತವಾದುದೆಂದು ಶಂಕರವಿಜಯ ಗ್ರಂಥದಿಂದ ತಿಳಿದುಬರುತ್ತೆ. ನಮ್ಮ ಗುರುಗಳವರು ನೃಸಿಂಹೋಪಾಸಕ ರಾಗಿದ್ದು ಅದರಿಂದ ಮಹಾ ಪ್ರಯೋಜನವನ್ನು ಪಡೆದಿರುವ ಅಂಶವು ನಮಗೆ ತಿಳಿದಿದೆ. ಈಗ ನಮಗೆ ಪ್ರಾಪ್ತವಾಗಿರುವ ವಿಪತ್ತಿಗಿಂತ ದೊಡ್ಡದಾದುದು ಯಾವುದೂ ಅಲ್ಲ. ಜಾತಕರೀತಿಯಿಂದ ಈ ಕಾಲವು ಪಾಂಚಭೌತಿಕವಾದ ಈ ಶರೀರಕ್ಕೆ ಅಪಾಯವನ್ನುಂಟು ಮಾಡತಕ್ಕದ್ದೆಂದು ಕೇಳಿರುತ್ತೇವೆ. ಇಂತಹ ಕಾಲದಲ್ಲಿ ವೈಷ್ಣವಮತವನ್ನವಲಂಬಿಸಿರುವ ನಿಮ್ಮನ್ನು ಕಾರ್ಯನಿರ್ವಾಹಕ್ಕೆ ನಮ್ಮ ಉಪಾಸ್ಯದೈವವಾದ ನರಸಿಂಹನೇ ಕರೆತಂದು ಬಿಟ್ಟಿರುವನೆಂಬ ಭಾವನೆಯು ನಮಗೆ ದೃಢವಾಗಿದೆ. ಅದು ನಿಜವಾಗಿರುವ ಪಕ್ಷದಲ್ಲಿ ಅಂತರ್ಧಾನವನ್ನು ಹೊಂದಿರುವ ಪರಶಿವಮೂರ್ತಿಯು ಪ್ರಸನ್ನನಾಗಿ ನಿಮ್ಮ ಪ್ರಯತ್ನದಿಂದ ನಮಗೆ ದೃಷ್ಟಿಗೋಚರನಾಗಲೇಬೇಕು. ಹಾಗಾಗುವುದಾದರೆ ಜಾತಕರೀತಿಯಿಂದ ಬಂದಿರಬಹುದಾದ ಮಾರಕದಶೆಯು ನಿವೃತ್ತವಾಗಲೂಬಹುದು. ನಿಮ್ಮ ಕೋರಿಕೆಯಂತೆ ಅನ್ನಮಯವಾದ ಈ ಶರೀರದ ಪೋಷಣೆಗಾಗಿ ಭಿಕ್ಷೆಯೂ ನಮಗೆ ದೊರೆಯಬಹುದು. ಅದಕ್ಕೆ ಬೇರೆಯಾಗಿ ಈಶ್ವರಸಂಕಲ್ಪವಿದ್ದರೆ ಅದರಂತೆ ನಡೆವುದೇ ಹೊರತು ನಮ್ಮ ಪ್ರಯತ್ನದಿಂದ ಈಶ್ವರಸಂಕಲ್ಪಕ್ಕೆ ವಿರುದ್ಧಾಚರಣೆಯು ಎಂದಿಗೂ ಆಗಲಾರದು. ಮತ್ತು ನಮಗೆ ಅಪೇಕ್ಷಿತವಾದ ವಸ್ತು ದೇವರೇ ಹೊರತು ಇತರ ಪದಾರ್ಥಗಳಲ್ಲ. ಅವೆಲ್ಲವೂ ಅವುಗಳಿಂದ ಜೀವಿಸತಕ್ಕ ಪ್ರಾಣಿಗಳ ಉಪಯೋಗಕ್ಕೋಸ್ಕರವೇ ಇರಬಹುದು, ಎಂದು ಅತಿ ಗಂಭೀರವಾಗಿ ತಮ್ಮ

ಅಭಿಪ್ರಾಯವನ್ನು ಸೂಚಿಸಿದರು. ಶ್ರೀ ಸ್ವಾಮಿಗಳವರ ದೃಢಸಂಕಲ್ಪವನ್ನು ತಿಳಿದುಕೊಂಡ ಆ ಅಧಿಕಾರಿಯು ಬೇರೆ ಯಾವುದೊಂದು ಮಾತನ್ನು ತಿಳಿಸಲೂ ಧೈರ್ಯವಿಲ್ಲದೆ ಶ್ರೀಗಳವರಿಗೆ ಸಾಷ್ಟಾಂಗವಾಗಿ ನಮಸ್ಕಾರಮಾಡಿ ತನ್ನ ಪ್ರಯತ್ನವು ಸಫಲವಾಗುವಂತೆ ಅನುಗ್ರಹಿಸಬೇಕೆಂಬುದನ್ನು ಮಾತ್ರ ಪ್ರಾರ್ಥಿಸಿಕೊಂಡು ಹೊರಟು ಹೋದರು. ಇಲ್ಲಿಗೆ ಮೂರು ದಿನಗಳು ಕಳೆದುಹೋದುವು. ಶ್ರೀಸ್ವಾಮಿಗಳವರ ಮನಸ್ಸು ಚಲಿಸಲಿಲ್ಲ. ಧೈರ್ಯವು ಕುಂದಲಿಲ್ಲ. ಆಯಾಸವು ತೋರಲಿಲ್ಲ. ಉಪಾಸನೆಯಲ್ಲಿ ಆಲಸ್ಯವುಂಟಾಗಲಿಲ್ಲ. ಅದುವರೆಗೆ ಅನುಕೂಲವಾದ ಸೂಚನೆ ಯಾವುದೂ ಸ್ವಲ್ಪ ಮಾತ್ರವೂ ಶ್ರೋತ್ರಗೋಚರವಾಗಲೇ ಇಲ್ಲ. ಐದನೆಯ ದಿನ ಮಧ್ಯಾಹ್ನ ಹನ್ನೆರಡು ಗಂಟೆಯ ಸಮಯದಲ್ಲಿ ಬೆಳಗುಪ್ಪೆಯಿಂದ 3-4 ಮೈಲಿಗಳ ದೂರದಲ್ಲಿ ಒಂದು ಭೂಮಿಯನ್ನು ಒಬ್ಬ ರೈತನು ಉಳುತ್ತಿರಲು ಆತನ ನೇಗಿಲ ಕೊನೆಯು ತಗಲಿದುದರಿಂದ ಉಂಟಾದ ಶಬ್ದದ ಮೇಲೆ ಅಲ್ಲಿ ನೋಡುವಾಗ್ಗೆ ಸಣ್ಣದಾದ ಒಂದು ತಾಮ್ರದ ಪೆಟ್ಟಿಗೆಯು ಸಿಕ್ಕಿದಂತೆ ತಮಗೆ ವರ್ತಮಾನ ಬಂದಿರುವುದಾಗಿಯೂ ಆ ಸ್ಥಳಕ್ಕೆ ತಾವು ಹೋಗಿ ನೋಡಿ ನಿಜಸ್ಥಿತಿಯನ್ನು ಹೇಳಿ ಕಳುಹಿಸುವುದಾಗಿಯೂ ಒಂದು ಸಮಾಚಾರವು ಇನ್‌ಸ್ಪೆಕ್ಟರ ಕಡೆಯಿಂದ ಬಂತು. ಈ ವರ್ತಮಾನವು ಕಿವಿಗೆ ಬಿದ್ದಕೂಡಲೆ ಹೋಗಿದ್ದ ಪ್ರಾಣಗಳು ಮತ್ತೆ ಹಿಂತಿರುಗಿ ಬಂದಂತೆ ಮಠದಲ್ಲಿದ್ದ ಎಲ್ಲಾ ಜನರೂ ತಾವು ತಾವು ಮಾಡುತ್ತಲಿದ್ದ ಜಪ ತಪಗಳನ್ನೂ ಇತರ ಕಾರ್ಯಗಳನ್ನೂ ಬಿಟ್ಟು ವರ್ಷಬಿಂದುಗಳನ್ನು ಚಾತಕ ಪಕ್ಷಿಗಳು ನಿರೀಕ್ಷಿಸುವಂತೆ ಇನ್‌ಸ್ಪೆಕ್ಟರಿಂದ ಮುಂದೆ ಬರುವ ವರ್ತಮಾನಕ್ಕೋಸ್ಕರ ನಿರೀಕ್ಷಣೆ ಮಾಡುತ್ತ ಇದ್ದರು. ಸುಮಾರು ಮಧ್ಯಾಹ್ನ ಎರಡು ಗಂಟೆಯ ಸಮಯಕ್ಕೆ ದೇವರು ಸಿಕ್ಕಿರುವುದು ನಿಜ. ಮಠದ ಕಡೆಯವರು ಬಂದು ನೋಡಿ ದೇವರನ್ನು ತೆಗೆದುಕೊಂಡು ಹೋಗಬಹುದೆಂದು ಇನ್‌ಸ್ಪೆಕ್ಟರ ಕಡೆಯಿಂದ ಎರಡನೆಯ ಸಾರಿ ವರ್ತಮಾನವು ಬಂತು. ಕೂಡಲೆ ಶ್ರೀ ಮಠದಿಂದ ಪಾಲಕಿ ಬಿರುದುಗಳೊಡನೆ ಎಲ್ಲಾ ಜನರೂ ಬಹಳ ಉತ್ಸಾಹದಿಂದ ಹೊರಟು ದೇವರು ಸಿಕ್ಕಿದ ಭೂಮಿಯ ಸಮೀಪಕ್ಕೆ ಹೋದರು. 3-4 ಮೈಲಿ ದೂರ ಆಬಾಲವೃದ್ಧರೂ ಓಡಿದರಲ್ಲದೆ ಸಾಧಾರಣವಾದ ನಡೆಯಿಂದ ಯಾರೊಬ್ಬರೂ ಹೋಗಲಿಲ್ಲ. ಆಗ ಇದ್ದ ಬಿಸಿಲ ತಾಪವನ್ನು ವರ್ಣಿಸುವುದು ಅಸಾಧ್ಯವಾಗಿತ್ತು. ಮಠದಿಂದ ಶ್ರೀ ಸ್ವಾಮಿಗಳ ಪರಿವಾರವು ಅಲ್ಲಿಗೆ ಸೇರಿದ ಸಮಯದಲ್ಲಿ ಪೋಲೀಸ್ ಇನ್‌ಸ್ಪೆಕ್ಟರು ತಮ್ಮ ಪರಿಜನರೊಡನೆ ಪೆಟ್ಟಿಗೆಯನ್ನು ತಮ್ಮ ಹಸ್ತದಿಂದ ಹಿಡಿದುಕೊಂಡು ನಿಂತಿದ್ದರು. ತೆಗೆದು ನೋಡುವಲ್ಲಿ ದೇವರುಗಳಿಗೆ ಹಾಕಿದ್ದ ಬಂಗಾರದ ಕವಚಗಳನ್ನು ತೆಗೆದುಕೊಂಡು ಚಂದ್ರಮೌಳೀಶ್ವರಲಿಂಗ, ರತ್ನಗರ್ಭಗಣಪತಿ, ಬಲಮುರಿಶಂಖ ಈ ಮೂರು ಪದಾರ್ಥಗಳನ್ನು ಮಾತ್ರ ಆ ಸಣ್ಣ

ಪೆಟ್ಟಿಗೆಯಲ್ಲಿಟ್ಟು ನೆಲದಲ್ಲಿ ಹೂತಿದ್ದಂತೆ ತಿಳಿದು ಬಂತು. ಅಲ್ಲಿಗೆ ಹೋದ ಜನರೆಲ್ಲರೂ ಈ ದೇವರನ್ನು ಕಣ್ಣಿನಿಂದ ನೋಡಿದ ಎರಡನೆಯ ಕ್ಷಣದಲ್ಲಿ ಅಕಸ್ಮಾತ್ತಾಗಿ ವೃಷ್ಟಿಗೆ ಪ್ರಾರಂಭವಾಯಿತು. ಆಗ ಮಳೆಗಾಲವಾಗಿರಲಿಲ್ಲ. ಅದಕ್ಕೆ ಬೇಕಾದ ಸೂಚನೆಯು ಸ್ವಲ್ಪವಾದರೂ ಇರಲಿಲ್ಲ. ಇಂಥಾದ್ದರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮಳೆಯು ಬರೋಣವೆಂದರೆ ಇದರ ಕಾರಣವನ್ನು ಯಾರೊಬ್ಬರೂ ಊಹಿಸುವಂತೆ ಇರಲಿಲ್ಲ. ಅಲ್ಲಿ ಸಿಕ್ಕಿದ ದೇವರ ಪೆಟ್ಟಿಗೆಯನ್ನು ಪಾಲಕಿಯಲ್ಲಿಟ್ಟುಕೊಂಡು ಸತತ ಧಾರೆಯಾಗಿ ಬೀಳುತ್ತಿದ್ದ ಮಳೆಯಲ್ಲಿ ನೆನೆದುಕೊಂಡು ಎಲ್ಲರೂ ಸುಮಾರು ಸಾಯಂಕಾಲ ಐದು ಗಂಟೆಗೆ ಮಠದ ಬಾಗಿಲಿಗೆ ಬಂದು ಸೇರಿದರು. ದೇವರು ಮಠದ ಬಾಗಿಲೊಳಗೆ ಪ್ರವೇಶಮಾಡಿದ ಕ್ಷಣವೇ ಮಳೆಯು ಅದೃಶ್ಯವಾಯಿತು. ಇದೇನು ಆಶ್ಚರ್ಯ! ಇನ್‌ಸ್ಪೆಕ್ಟರು ಸಂಗಡ ಇದ್ದು ದೇವರ ಪೆಟ್ಟಿಗೆಯನ್ನು ಶ್ರೀಗಳವರ ಸನ್ನಿಧಾನದಲ್ಲಿ ತಂದಿಟ್ಟಕೂಡಲೆ ಪೀಠದಲ್ಲಿ ಕುಳಿತಿದ್ದ ಶ್ರೀಸ್ವಾಮಿಗಳವರ ಶರೀರವು ಪೀಠದಿಂದ ಹಾರಿ ಕೆಳಗೆ ಬಿದ್ದಿತು. ಕಣ್ಣುಗಳಲ್ಲಿ ಧಾರೆಧಾರೆಯಾಗಿ ನೀರಿನ ಪ್ರವಾಹವು ಹೊರಟಿತು. ಶರೀರವೆಲ್ಲಾ ನಡುಗುವುದಕ್ಕೆ ಪ್ರಾರಂಭವಾಯಿತು. ಮಾತು ಹೊರಗೆ ಹೊರಡದಂತೆ ಸ್ತಂಭಿತವಾಯಿತು. ಈ ರೀತಿಯಲ್ಲಿ ಸುಮಾರು ಅರ್ಧ ಗಂಟೆಯ ಕಾಲ ಶ್ರೀಗಳವರ ಚಿತ್ತವೃತ್ತಿಯು ಪರವಶವಾಯಿತು. ಸ್ವಲ್ಪಹೊತ್ತಿನ ಮೇಲೆ ಅತಿ ಕರುಣೆಯಿಂದ ಇನ್‌ಸ್ಪೆಕ್ಟರನ್ನು ತಮ್ಮ ಸಮೀಪಕ್ಕೆ ಕರೆದು ಆತನನ್ನು ಬಾಚಿ ತಬ್ಬಿಕೊಂಡು ಆತನ ಶಿರಸ್ಸಿನಲ್ಲಿ ತಮ್ಮ ಅಮೃತಮಯವಾದ ಹಸ್ತವನ್ನಿಟ್ಟು ಆತನಿಗೆ ಅನೇಕ ಜನರ ಸಮಕ್ಷಮದಲ್ಲಿ ಶ್ರೀಗಳವರು ಮಾಡಿದಂಥ ಪರಮಾನುಗ್ರಹವು ಅನನ್ಯಸಾಧಾರಣವಾಯಿತು. ಇಂಥಾ ಮಹನೀಯರಿಂದ ಈ ವಿಧವಾದ ಅನುಗ್ರಹವನ್ನು ಪಡೆದುಕೊಳ್ಳಲು ಆತನ ಸುಕೃತವೆಂಥಾದ್ದಾಗಿರಬಹುದೋ? ಅದನ್ನು ತಿಳಿವುದು ಅಸಾಧ್ಯವಾಗಿತ್ತು. ಇಲ್ಲಿಗೆ ಆ ದಿನದ ಸಾಯಂಕಾಲ 6ll ಗಂಟೆಯ ಸಮಯವಾಗಿ ಸೂರ್ಯಾಸ್ತಮಯವಾಯಿತು. ರಾತ್ರಿ 7 ಗಂಟೆಗೆ ಸ್ನಾನಾಹ್ನಿಕಗಳನ್ನು ಮುಗಿಸಿಕೊಂಡು ಚಂದ್ರಮೌಳೀಶ್ವರ ದೇವರನ್ನು ಪೂಜಿಸುವುದಕ್ಕೆ ಕುಳಿತುಕೊಂಡ ಶ್ರೀ ಸ್ವಾಮಿಗಳವರು ಪ್ರಾತಃಕಾಲ 6 ಗಂಟೆಗೆ ಪೂಜೆಯನ್ನು ಮುಗಿಸಿದರು. ಆ ದಿನದ ಸಂತೋಷವೆಂಥಾದ್ದಾಗಿರಬಹುದೆಂಬುದನ್ನು ಯಾವ ರೀತಿಯಿಂದಲೂ ತಿಳಿಸಲು ಶಕ್ಯವಲ್ಲ. ಸ್ವಾನುಭವೈಕ ವೇದ್ಯವಾಗಿತ್ತು.

ಈ ರೀತಿಯಿಂದ ಸ್ವಾಮಿಗಳವರಿಗೆ 32ನೆಯ ವರ್ಷದಲ್ಲಿ ಬಂದದೊಡ್ಡಗಂಡವು ಅವರ ನಿಯಮಾಚರಣೆಯಿಂದ ಪರಿಹೃತವಾಯಿತು. ಈ ಜಗದ್ಗುರು ಸಂಸ್ಥಾನದ ಚಂದ್ರಮೌಳೀಶ್ವರ ಲಿಂಗವೂ ರತ್ನಗರ್ಭ ಗಣಪತಿಯೂ ಶ್ರೀ ಶಂಕರ ಭಗವತ್ಪಾದಾಚಾರ್ಯರವರಿಂದ ಪೂಜಿಸಲ್ಪಟ್ಟು ಅವರಿಂದ ಈ ದಕ್ಷಿಣಾಮ್ನಾಯ ಪೀಠದಲ್ಲಿ ನಿಯಮಿತರಾದ

ಅವರ ಸಾಕ್ಷಾಚ್ಛಿಷ್ಯರಾದ ಸುರೇಶ್ವರಾಚಾರ್ಯರವರಿಗೆ ಬಂದಂತೆಯೂ ಅಂದಿನಿಂದ ಇದುವರೆಗೂ ಆ ಪರಂಪರೆಯ ಗುರುಗಳಿಂದ ಪೂಜಿಸ್ಪಡುತ್ತಿರುವಂತೆಯೂ ತಿಳಿದುಬಂದಿದೆ. ಶ್ರೀ ಮದಾಚಾರ್ಯ ಸ್ವಾಮಿಗಳವರು ಕಾಶೀಕ್ಷೇತ್ರದಲ್ಲಿರುವಾಗ್ಗೆ ವಿಶ್ವೇಶ್ವರನು ಪ್ರತ್ಯಕ್ಷನಾಗಿ ಆಚಾರ್ಯರಿಗೆ ಐದು ಲಿಂಗಗಳನ್ನು ಕೈಲಾಸದಿಂದಲೇ ತಂದು ಪೂಜಿಸುವಂತೆ ಅನುಗ್ರಹ ಮಾಡಿ ಕೊಟ್ಟನೆಂದು ಶಿವರಹಸ್ಯವೆಂಬ ಪುರಾಣದಲ್ಲಿ ಹೇಳಲ್ಪಟ್ಟಿದೆ. ಆಚಾರ್ಯಸ್ವಾಮಿಗಳವರು ವಿಶ್ವೇಶ್ವರ ಪ್ರಸಾದ ಲಬ್ಧವಾಗಿ ಬಂದ ಆ ಲಿಂಗಗಳನ್ನು ತಮ್ಮ ಕಾಲದಲ್ಲಿ ಪೂಜಿಸುತ್ತಲಿದ್ದು ಸನ್ಮಾರ್ಗಪ್ರಚಾರಕ್ಕೋಸ್ಕರ ತಾವು ಸ್ಥಾಪಿಸಿದ ಚತುರಾಮ್ನಾಯ ಪೀಠಗಳಲ್ಲಿಯೂ ಒಂದೊಂದು ಲಿಂಗವನಿಟ್ಟು ಪೂಜಿಸುವಂತೆ ತಮ್ಮ ಶಿಷ್ಯರಿಗೆ ಆಜ್ಞೆಮಾಡಿದ್ದಾಗಿ ಇದುವರೆಗಿನ ಜನವಾರ್ತೆಯಿಂದ ತಿಳಿದುಬರುತ್ತೆ. ಬಹಳಕಾಲದ ಹಿಂದಿನ ನಡೆವಳಿಕೆಯನ್ನು ಕುರಿತು ಈಗ ವಿಚಾರಮಾಡಿ ನಿಷ್ಕರ್ಷೆ ಮಾಡುವಷ್ಟು ಸಾಮರ್ಥ್ಯವು ಈಗಿನವರಾದ ನಮಗೆ ಇರುವುದಿಲ್ಲ. ಇಂಥಾ ಅದ್ಭುತವಾದ ವಿಷಯಗಳನ್ನು ಹೇಳತಕ್ಕ ನಮ್ಮ ಪುರಾಣಾದಿಗಳನ್ನು ನಂಬಿ ನಮಗೆ ಹುಟ್ಟಬಹುದಾದ ಅಪ್ರಯೋಜಕಶಂಕೆಗಳನ್ನು ಪರಿಹರಿಸಿಕೊಳ್ಳಲು ನಮ್ಮ ಪ್ರಾರಬ್ಧಕರ್ಮವು ನಮಗೆ ಅವಕಾಶಕೊಡುವಂತಿಲ್ಲ. ಈ ಕಾರಣದಿಂದ ನಾವು ನೋಡಿರತಕ್ಕ ಪ್ರಪಂಚ, ಅದರಲ್ಲಿ ನಮಗೆ ಇರತಕ್ಕ ಅನುಭವ, ಇದರ ಮೇಲೆ ನಮಗೆ ಒದಗತಕ್ಕ ಬುದ್ಧಿ ಇವುಗಳ ಸಹಾಯದಿಂದ ಯಾವಾಗಲೂ ವಿಚಾರಮಾಡುತ್ತ ಬರುವುದರಲ್ಲಿಯೇ ಕಾಲವನ್ನು ವ್ಯರ್ಥವಾಗಿ ಕಳೆದು ಕಷ್ಟಪಡಬೇಕಾಗಿದೆಯಲ್ಲದೆ ಯಾವುದಾದರೂ ಒಂದು ವಿಷಯದಲ್ಲಿ ನಮ್ಮ ಪ್ರಾಚೀನರು ಹೇಳಿರುವ ಸಂಗತಿಯನ್ನು ನಂಬಿ ಅದಕ್ಕೆ ಅನುಕೂಲವಾದ ಯುಕ್ತಿಯನ್ನು ಹುಡುಕಿ ವಿಚಾರಮಾಡಿ ವಿಷಯವನ್ನು ನಿಷ್ಕರ್ಷೆಮಾಡಿಕೊಂಡು ಸುಖವನ್ನು ಪಡೆಯತಕ್ಕ ಅದೃಷ್ಟವು ಆಧುನಿಕರಿಗೆ ಎಲ್ಲಿಂದ ಬರಬೇಕು? ಇದು ಹೇಗಾದರೂ ಇರಲಿ. ಈಗ ನಾವು ಶೃಂಗೇರಿ ಮಠದಲ್ಲಿರತಕ್ಕ ಶ್ರೀ ಚಂದ್ರಮೌಳೀಶ್ವರ ರತ್ನಗರ್ಭ ಗಣಪತಿಗಳನ್ನು ನೋಡಿದರೆ ಇದು ಸ್ಫಟಿಕ ಶಿಲೆಯಂತೆ ಕಾಣುತ್ತೆ. ರತ್ನ ಪರೀಕ್ಷಕರಿಂದ ಪರೀಕ್ಷೆಮಾಡಿಸಿ ನೋಡಿದರೂ ಉತ್ತಮವಾದ ಸ್ಫಟಿಕಶಿಲೆಯನ್ನು ಇದರೊಡನಿಟ್ಟು ಒಂದಕ್ಕೊಂದನ್ನು ಸಾಟಿ ಮಾಡಿದರೂ ಈ ದೇವರ ಪ್ರಮಾಣವುಳ್ಳ ಸ್ಫಟಿಕಶಿಲೆಯನ್ನೂ ಈ ಚಂದ್ರಮೌಳೀಶ್ವರ ದೇವರನ್ನೂ ತುಲಾಯಂತ್ರದ ಮೂಲಕ ತೂಗಿ ನೋಡಿದರೂ ಸ್ಫಟಿಕಶಿಲೆಯಲ್ಲವೆಂದು ಧಾರಾಳವಾಗಿ ನಿಷ್ಕರ್ಷೆಮಾಡಬಹುದಾಗಿದೆ. ಈ ಕಾರಣದಿಂದ ಇದು ನವರತ್ನಗಳಲ್ಲಿ ಒಂದು ಜಾತಿಯ ಪ್ರಭೇದಕ್ಕೆ ಸೇರಿದ್ದಾಗಿ ತಿಳಿಯಬೇಕು. ಹಾಗೆ ತಿಳಿವುದರಲ್ಲಿ ಪುಷ್ಯರಾಗ ಜಾತಿಗೆ ಸೇರಿದ್ದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಇದುವರೆಗೆ ರತ್ನಜಾತಿಯಲ್ಲಿ ಸೇರಿದ ಇಷ್ಟು ದೊಡ್ಡ ಆಕಾರವುಳ್ಳ ರತ್ನದಲ್ಲಿ ದೇವರನ್ನು ಮಾಡಿರುವುದು ಸಾಧಾರಣವಾಗಿ ಯಾರದೃಷ್ಟಿಗೂ

ಗೋಚರವಾಗಿರುವಂತೆ ತೋರಲಿಲ್ಲ. ಈ ಒಂದೇ ಕಾರಣವನ್ನು ನಾವು ಯೋಚಿಸಿಕೊಂಡರೂ ಇದು ಬಹಳ ಅಪೂರ್ವವಾದದ್ದೆಂದು ಒಪ್ಪಲೇಬೇಕಾಗಿಬರುವುದು.

ಆ ಸಂದರ್ಭದಲ್ಲಿ ಇದು ಅಮಾನುಷವಾದುದೆಂದು ಪುರಾಣಗಳಲ್ಲಿ ಹೇಳಿರುವ ಸಂಗತಿಯನ್ನು ನಾವು ನಂಬಿದ ಮಾತ್ರದಿಂದ ನಮಗೆ ಕೊರತೆ ಏನೂ ಇರುವುದಿಲ್ಲ. ಆದರೆ ಆ ನಂಬಿಕೆಯಿಂದ ವಿಶೇಷವಾದ ಒಂದು ಭಾವನೆಯು ಮನಸ್ಸಿನಲ್ಲಿ ಉಂಟಾಗಿ ಆ ದೇವರನ್ನು ನಾವು ಆರಾಧಿಸುವುದರಿಂದ ಹೆಚ್ಚಾದ ಪ್ರಯೋಜನವುಂಟಾಗಬಹುದಾಗಿದೆ. ಒಂದುವೇಳೆ ಈ ಮೇಲೆ ಹೇಳಿರುವುದನ್ನು ನಂಬುವುದರಲ್ಲಿಯೂ ನಮಗೆ ಕೆಲವು ಸಂದೇಹಗಳು ಹುಟ್ಟಿ ನಮ್ಮನ್ನು ಪೀಡಿಸುವುವಾದರೂ ಈ ದೇವರು ಬಹಳ ದೊಡ್ಡವರಾಗಿಯೂ ಪರಮಶುದ್ಧ ಚಾರಿತ್ರವುಳ್ಳವರಾಗಿಯೂ ಮಹನೀಯರಾಗಿಯೂ ಇದ್ದ ಶೃಂಗೇರಿಮಠದ ಅನೇಕ ಗುರುಗಳಿಂದ ಪೂಜಿಸಲ್ಪಟ್ಟದ್ದಾಗಿರುತ್ತೆಂಬ ಅಂಶವನ್ನು ನಂಬುವುದರಲ್ಲಿಯಾದರೂ ಸಂದೇಹವೇನೂ ಹುಟ್ಟಲಾರದಷ್ಟೆ? ''ಪ್ರತಿಮಾಯಾಂ ತು ಸಾನ್ನಿಧ್ಯಂ ಅರ್ಚಕಸ್ಯ ತಪೋಬಲಾತ್'' ಎಂಬಂತೆ ಈ ಮೂರ್ತಿಗಳಲ್ಲಿ ಈಶ್ವರಸಾನ್ನಿಧ್ಯವು ವಿಶೇಷವಾಗಿರುವುದರಿಂದ ಇಂಥಾ ಬಿಂಬಗಳು ಅಂತರಿತವಾಗಿ ಹೋದಲ್ಲಿ ಇದಕ್ಕಿಂತಲೂ ಹೆಚ್ಚಾದ ನಷ್ಟವೂ ಮಹತ್ತರವಾದ ವಿಪತ್ತೂ ಮತ್ತಾವುದು ಇರಬಹುದು ? ಈ ಕಾರಣದಿಂದ ಶ್ರೀಗಳವರು ಶ್ರೀ ಚಂದ್ರಮೌಳೀಶ್ವರ ವಿಯೋಗಕಾಲದಲ್ಲಿ ಅಷ್ಟು ತೀವ್ರವಾದ ತಪಸ್ಸನ್ನು ಮಾಡಿ ಈಶ್ವರ ಪ್ರಸಾದದಿಂದ ಮತ್ತೆ ದೇವರನ್ನು ಪಡೆದು ಪ್ರಪಂಚದ ಕ್ಷೇಮಾರ್ಥವಾಗಿ ಆ ದೇವರನ್ನು ಪೂಜಿಸುತ್ತಲಿದ್ದು ಮುಂದೆಯೂ ತಮ್ಮ ಪರಂಪರೆಯವರು ಪೂಜಿಸುತ್ತಾ ಬರಲು ಅನುಕೂಲಮಾಡಿದರೆಂದು ಹೇಳಬೇಕಲ್ಲದೆ ಬೇರೆ ಒಂದು ಪ್ರಯೋಜನವೂ ಅವರಿಗೆ ಸ್ವಾರ್ಥವಾಗಿರಲಿಲ್ಲ. ಇದು ನಡೆದ ಬಳಿಕ ಶೃಂಗೇರಿಗೆ ಹಿಂತಿರುಗಿ ಬಂದು ತಮ್ಮ ಕಾಲದಲ್ಲಿ ಕೈತಪ್ಪಿ ಹೋಗಿದ್ದ ಸಂಸ್ಥಾನದ ಮುಖ್ಯಪ್ರಾಣಭೂತವಾದ ದೇವರನ್ನು ತಮ್ಮ ಗುರುಗಳ ಅಧಿಷ್ಠಾನದಲ್ಲಿ ಒಪ್ಪಿಸಿ ಅವರ ಅನುಗ್ರಹವನ್ನು ಪಡೆದು ಬಳಿಕ ಮುಂದಿನ ಯಾತ್ರೆಯನ್ನು ಜರುಗಿಸತಕ್ಕದ್ದೆಂದು ಸಂಕಲ್ಪಿಸಿ ಬಹಳ ವೇಗದಿಂದ ಪ್ರಯಾಣಮಾಡಿ ಶಾ|| 1811ನೇ ಸರ್ವಧಾರಿ ಸಂವತ್ಸರ ಮಾಘ ಶುದ್ಧ ತ್ರಯೋದಶೀ ಬುಧವಾರ 1889ನೆಯ ಇಸವಿ ಫೆಬ್ರವರಿ 13ರಲ್ಲಿ ಶೃಂಗೇರಿಯನ್ನು ಸೇರಿದರು.

★ ★ ★

ಅಧ್ಯಾಯ - ೬.

ಶ್ರೀ ಸ್ವಾಮಿಗಳವರ ಮೂರನೆಯ ಸಾರಿ ಯಾತ್ರೆ.

ಎರಡನೆಯ ಸಾರಿ ಯಾತ್ರೆಯನ್ನು ಮಾಡಿಕೊಂಡು ಶೃಂಗೇರಿಗೆ ಹಿಂತಿರುಗಿ ಬಂದು ಸ್ವಾಮಿಗಳವರು ಎರಡು ವರ್ಷಗಳ ಕಾಲ ಸ್ವಸ್ಥಾನದಲ್ಲಿಯೇ ವಸತಿಯನ್ನು ಮಾಡಿ, ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳುವದರಿಂದಲೂ ಸ್ವತಃ ಗ್ರಂಥಗಳನ್ನು ಪರಿಶೀಲಿಸುವುದ ರಿಂದಲೂ ವಿದ್ಯಾಪ್ರಚಾರವನ್ನು ಮಾಡುತ್ತ ತಮ್ಮ ಗುರುಗಳ ಪೂಜೆಯನ್ನೂ, ಶ್ರೀ ಚಂದ್ರಮೌಳೀಶ್ವರ ಪೂಜೆಯನ್ನೂ ಆಚರಿಸಿಕೊಂಡು ಆನಂದಭರಿತರಾಗಿದ್ದರು.

ತರುವಾಯ ಶ್ರೀಗಳವರಿಗೆ ಅಮ್ಮನವರ ಪ್ರೇರಣೆಯಿಂದ ತಾವು ಅತ್ಯಂತ ಬಾಲ್ಯವಯಸ್ಸಿನಲ್ಲಿರುವಾಗ ತಮ್ಮ ಗುರುಗಳ ಸಂಗಡ ಮಾಡಿಬಂದಿದ್ದ ದಕ್ಷಿಣದೇಶ ಯಾತ್ರೆಯ ವಿಷಯವಾದ ಸಂಕಲ್ಪವುಂಟಾಯಿತು. ಕೂಡಲೆ ಯಾತ್ರೆಗೆ ಬೇಕಾದ ಸಲಕರಣೆಗಳೆಲ್ಲವೂ ಸಿದ್ಧವಾದುವು. ಪದ್ಧತಿ ಪ್ರಕಾರ ಸರಕಾರದವರಿಂದ ಯಾತ್ರೆಗೆ ಆಗಬೇಕಾದ ಸಹಾಯಗಳ ವಿಷಯವಾಗಿ ಸೂಚಿಸಿ ದಕ್ಷಿಣದೇಶ ಯಾತ್ರಾಸಂಕಲ್ಪವು ಶ್ರೀಮನ್ಮಹಾರಾಜ ಚಾಮರಾಜ ಒಡೆಯರವರಿಗೆ ತಿಳಿಸಲ್ಪಟ್ಟಿತು. ಹಿಂದಿನ ಶ್ರೀ ನರಸಿಂಹ ಭಾರತೀಸ್ವಾಮಿಗಳವರ ಪರಮಾನುಗ್ರಹದಿಂದಲೂ, ಕುಲದೇವತೆಯಾದ ಚಾಮುಂಡೇಶ್ವರೀ ಪ್ರಸಾದದಿಂದಲೂ, ಮೈಸೂರು ಮಹಾರಾಜ ಚಾಮರಾಜೇಂದ್ರ ಪ್ರಭುಗಳವರಿಗೆ ಸಂತಾನಾಭಿವೃದ್ಧಿಯಾಗಿ, ರಾಜಗೃಹವು ನಂದಗೋಕುಲದಂತೆ ಪ್ರಕಾಶಮಾನವಾಗಿತ್ತು. ಈ ಸಮಯದಲ್ಲಿ ಶ್ರೀ ಸ್ವಾಮಿಗಳವರನ್ನು ರಾಜಧಾನಿಗೆ ಬರಮಾಡಿಕೊಂಡು, ಈಶ್ವರಾನುಗ್ರಹದಿಂದ ಲಬ್ಧವಾಗಿರುವ ಸಂತತಿರೂಪವಾದ ಸಂಪತ್ತನ್ನು ಶ್ರೀಗಳವರ ಕರುಣಕಟಾಕ್ಷಕ್ಕೆ ಭಾಜನವಾಗಿ ಮಾಡಿ ಅವರ ಅನುಗ್ರಹವನ್ನು ಪಡೆಯಬೇಕೆಂಬ ಕುತೂಹಲವು ಮನಸ್ಸಿನಲ್ಲಿದ್ದುದರಿಂದ, ಪ್ರಭುಗಳವರು ಶ್ರೀಗಳವರ ಯಾತ್ರಾವಿಷಯವಾಗಿ ಕಳುಹಿಸಲ್ಪಟ್ಟ ಶ್ರೀಮುಖವನ್ನು ಅತ್ಯಾದರದಿಂದ ಬರಮಾಡಿಕೊಂಡು, ಶ್ರೀಗಳವರು ಸಂಕಲ್ಪಾನುಗುಣವಾಗಿ ಪ್ರಯಾಣ ಬೆಳೆಸಿ ರಾಜಧಾನಿಗೆ ದಯಮಾಡಿ ತಮಗೆ ದರ್ಶನವನ್ನು ಕೊಟ್ಟು, ಆ ಸಮಯಕ್ಕೆ ಒದಗಿ ಬರಬಹುದಾದ ಚಾತುರ್ಮಾಸ್ಯ ಸಂಕಲ್ಪ ವ್ಯಾಸಪೂಜಾದಿ ಧರ್ಮಗಳನ್ನು ಮೈಸೂರಿನಲ್ಲಿಯೇ ಜರುಗಿಸಿ, ತಮಗೂ ತಮ್ಮ ಸಂತತಿಗೂ ಪರಮಾನುಗ್ರಹವನ್ನು ಮಾಡಿ ಮುಂದೆ ಯಾತ್ರೆಯನ್ನು ಕೈಕೊಳ್ಳಬೇಕಾಗಿಯೂ, ಪದ್ಧತಿ ಪ್ರಕಾರ ತಮ್ಮ ಸರಕಾರದಿಂದಲೂ ಬ್ರಿಟಿಷ್ ಸರಕಾರ

ದಿಂದಲೂ ಯಾತ್ರೆಗೆ ಆಗಬೇಕಾದ ಸಹಾಯಗಳನ್ನು ಮಾಡಿಸಿಕೊಡುವಂತೆ ತಮ್ಮ ಮುಖ್ಯಾಮಾತ್ಯರಿಗೆ ಅಪ್ಪಣೆಮಾಡಿರುವುದಾಗಿಯೂ ಬಿನ್ನವತ್ತಳೆಯಮೂಲಕ ಶ್ರೀಗಳವರನ್ನು ಪ್ರಾರ್ಥಿಸಿದರು. ಶಾ॥ ಶಕ 1814ನೆಯ ಖರಸಂವತ್ಸರದ (1891ನೆಯ ಇಸವಿ) ಜ್ಯೇಷ್ಠ ಬಹುಳ ಪಂಚಮೀ ಶುಕ್ರವಾರದಲ್ಲಿ ತಮ್ಮ ಪರಿವಾರದೊಡನೆ ಶ್ರೀಗಳವರು ಶೃಂಗೇರಿಯಿಂದ ಹೊರಟು ಋಷ್ಯಶೃಂಗ ಮಹರ್ಷಿಗಳ ಆಶ್ರಮವಾದ ಕಿಗ್ಗವೆಂಬ ಅಗ್ರಹಾರಕ್ಕೆ ದಯಮಾಡಿಸಿ ಅಲ್ಲಿ ವಸತಿಯನ್ನು ಮಾಡಿದರು. ಮಾರನೆಯ ದಿನ ಋಷ್ಯಶೃಂಗೇಶ್ವರ ಸ್ವಾಮಿಯವರಿಗೆ ಮಹಾಪೂಜೆಯನ್ನು ಮಾಡಿ, ಆ ದೇವರ ಪ್ರಸಾದವನ್ನು ಪಡೆದುಕೊಂಡು, ಚಿಕ್ಕಮಗಳೂರು, ಬೇಲೂರು, ಹಾಸನಗಳ ಮಾರ್ಗವಾಗಿ ಪ್ರಯಾಣ ಬೆಳೆಸಿ ಆಷಾಢ ಶುಕ್ಲ ದ್ವಿತೀಯಾ ಶುಕ್ರವಾರದಲ್ಲಿ ಮೈಸೂರು ರಾಜಧಾನೀ ಪ್ರವೇಶ ಮಾಡಿದರು. ಹಿಂದಿನ ಪದ್ಧತಿಯನ್ನು ಅನುಸರಿಸಿ ವಿಶೇಷವಾದ ಮರ್ಯಾದೆಗಳೊಡನೆ ಪ್ರಭುಗಳವರು ಶ್ರೀಗಳವರನ್ನು ಬರಮಾಡಿಕೊಂಡು, ಅರಮನೆಯಲ್ಲಿ ಧೂಳಿ ಪಾದಪೂಜೆಯಾದನಂತರ ತಮ್ಮ ಪುತ್ರೀಪುತ್ರರುಗಳಿಗೆ ಶ್ರೀಗಳವರ ದರ್ಶನವನ್ನು ಮಾಡಿಸಿ, ಆ ಮಕ್ಕಳನ್ನು ಶ್ರೀಗಳವರ ಅನುಗ್ರಹಪಾತ್ರರನ್ನಾಗಿ ಮಾಡಿದರು. ಪ್ರಭುಗಳವರ ಭಕ್ತಿವಿಶ್ವಾಸಗಳನ್ನೂ,ಅದಕ್ಕೆ ಅನುಗುಣವಾಗಿ ಫಲಭೂತರಾಗಿರುವ ರಾಜಕುಮಾರರುಗಳನ್ನೂ ನೋಡಿ ಪರಮಾನಂದ ಭರಿತರಾಗಿ, ಶ್ರೀ ಶಾರದಾ ಪ್ರಸಾದರೂಪವಾದ ರತ್ನಾಭರಣಗಳಿಂದ ರಾಜಪುತ್ರೀಪುತ್ರರು ಗಳನ್ನು ಅನುಗ್ರಹಿಸಿ, ಪ್ರಭುಗಳವರನ್ನು ಕುರಿತು, ಗುರುಗಳವರ ಅನುಗ್ರಹದಿಂದ ಪೂರ್ಣರಾದಿರಿ, ''ಪ್ರಜಯಾ ಹಿ ಮನುಷ್ಯಃ ಪೂರ್ಣಃ'' ಎಂಬುದಾಗಿ ಶ್ರುತ್ಯರ್ಥವನ್ನು ಜ್ಞಾಪಿಸಿ ಅನುಗ್ರಹಿಸಿ ಅರಮನೆಯಿಂದ ಹೊರಟು ತಮ್ಮ ವಾಸಕ್ಕೆಂದು ಸಿದ್ಧಪಡಿಸಿದ್ದ ನಂಜರಾಜ ಬಹದ್ದೂರರವರ ಛತ್ರದಲ್ಲಿ ಬಿಡಾರವನ್ನು ಮಾಡಿ, ಅಲ್ಲಿಯೇ ಚಾತುರ್ಮಾಸ್ಯ ಸಂಕಲ್ಪ ವ್ಯಾಸಪೂಜಾದ್ಯಾಶ್ರಮಧರ್ಮಗಳನ್ನೂ, ಶರನ್ನವರಾತ್ರಿ ಪ್ರಯುಕ್ತವಾದ ಶಾರದಾಪೂಜಾದಿ ಮಹೋತ್ಸವಗಳನ್ನೂ ನೆರವೇರಿಸಿದರು. ಚಾತುರ್ಮಾಸ್ಯ ದೀಕ್ಷಾಕಾಲವಾದ ಎರಡು ತಿಂಗಳು ಸಂಸ್ಥಾನದ ಎಲ್ಲಾ ಖರ್ಚುಗಳೂ ಅರಮನೆಯಿಂದ ವಹಿಸಲ್ಪಟ್ಟವು. ಮತ್ತೆರಡು ತಿಂಗಳು ಶ್ರೀಗಳವರನ್ನೂ ಶಿಷ್ಯಮಂಡಲಿಯವರು ಸತ್ಕರಿಸಿದರು. ಈ ರೀತಿಯಿಂದ ನಾಲ್ಕುತಿಂಗಳು ರಾಜಧಾನಿಯಲ್ಲಿ ಶ್ರೀಸ್ವಾಮಿಗಳವರು ವಸತಿಯನ್ನು ಮಾಡಿದ್ದರು. ಆ ಸಂವತ್ಸರದಲ್ಲಿ ವೃಷ್ಟ್ಯಭಾವದಿಂದ ಕ್ಷಾಮವು ತಲೆದೋರಿತ್ತು. ಶ್ರೀಗಳವರು ನಾಲ್ಕು ತಿಂಗಳಕಾಲ ಎಡೆಬಿಡದೆ ರಾಜಧಾನಿಯಲ್ಲಿ ಮಾಡಿದ ಅನ್ನದಾನದಿಂದ ಅನೇಕರು ಕ್ಷಾಮಬಾಧೆಯಿಂದ ತಪ್ಪಿಸಿಕೊಂಡರು.

ಮೈಸೂರು ಸಂಸ್ಥಾನವು ವೈದಿಕ ವಿದ್ಯಾವಿಶಾರದರಾದ ಪಂಡಿತರಿಗೆ ಮುಖ್ಯವಾದ

ಒಂದು ಆಶ್ರಯಸ್ಥಾನವಾಗಿದೆ. ಪುಣೆಯ ಶ್ರೀಮಂತ ಬಾಜಿರಾಯರವರ ಅವಲಂಬವು ತಪ್ಪಿದನಂತರ ಆ ಸಂಸ್ಥಾನದಲ್ಲಿದ್ದ ಮಹಾಪಂಡಿತರುಗಳೆಲ್ಲರೂ, ಒಣಗಿಹೋದ ಕಾಸಾರದಲ್ಲಿರುವ ಪದ್ಮಗಳನ್ನು ಬಿಟ್ಟು ರಾಜಹಂಸಗಳು ಬೇರೊಂದು ಜಲಾಶಯದಲ್ಲಿ ಇರುವ ಪದ್ಮರಾಜಿಗಳನ್ನು ಸೇರುವಂತೆ, ಮೈಸೂರು ಸಂಸ್ಥಾನದ ಮುಮ್ಮಡಿ ಕೃಷ್ಣರಾಜಪ್ರಭುಗಳವರನ್ನು ಸೇರಿ, ಅದು ಮೊದಲಾಗಿ ಈ ಸಂಸ್ಥಾನದ ಮಹಾರಾಜರುಗಳಿಂದ ಆದರಿಸಲ್ಪಟ್ಟವರಾಗಿ ಮೈಸೂರು ರಾಜಧಾನಿಯಲ್ಲಿ ಸ್ಥಿರವಸತಿಯನ್ನು ಮಾಡಿದರು. ಶ್ರೀ ಸ್ವಾಮಿಗಳವರು ಖರಸಂವತ್ಸರದಲ್ಲಿ ಮೈಸೂರಿಗೆ ದಯಮಾಡಿದ್ದ ಕಾಲದಲ್ಲಿಯೂ ಪ್ರಖ್ಯಾತರಾದವರಲ್ಲಿ, ಪಂಡಿತರತ್ನಂ ಸೀತಾರಾಮಾಶಾಸ್ತ್ರಿಗಳು, ಪಂಡಿತರತ್ನಂ ಕಸ್ತೂರಿ ರಂಗಾಚಾರ್ಯರು, ಧರ್ಮಾಧಿಕಾರಿ ಕಾಶೀ ರಾಮಶಾಸ್ತ್ರಿಗಳು, ಧರ್ಮಾಧಿಕಾರಿ ಕುಂಭಕೋಣಂ ಶೇಷಾಚಾರ್ಯರು, ತಂಜಾವೂರು ಜಿಲ್ಲಾ ಪಳಮೂರನೇರಿ ಸ್ಥಳದ ಸುಂದರಶಾಸ್ತ್ರಿಗಳು, ನಾಮಗುಂಡ್ಲು ಶಾಮಾಚಾರ್ಯರು, ವಿಭಾಗಂ ಶ್ರೀಕಂಠಶಾಸ್ತ್ರಿಗಳು, ನರಸಿಂಹ ಘನಪಾಠಿಗಳು, ದ್ವಿವೇದಿ ಸುಬ್ಬಾವಧಾನಿಗಳು ಇವರೇ ಮೊದಲಾದ ಕೆಲವು ಪಂಡಿತರು ತರ್ಕವ್ಯಾಕರಣ ವೇದವೇದಾಂತಶಾಸ್ತ್ರಗಳಲ್ಲಿ ನಿಷ್ಕೃಷ್ಟವಾದ ಜ್ಞಾನವುಳ್ಳವರಾಗಿ, ಆಸ್ಥಾನದ ವಿದ್ವಾಂಸರಾಗಿದ್ದರು. ಸಂಸ್ಕೃತ ವಿದ್ಯಾಭಿವೃದ್ಧಿಗಾಗಿ ಶ್ರೀಮನ್ಮಹಾರಾಜ ಚಾಮರಾಜ ಒಡೆಯರವರಿಂದ ಪಾಠಶಾಲೆಯು ಸ್ಥಾಪಿಸಲ್ಪಟ್ಟು, ಮೇಲಿನ ಪಂಡಿತರುಗಳೇ ಆ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವೇದಶಾಸ್ತ್ರಾಧ್ಯಯನವನ್ನು ಮಾಡಿಸುವ ಕಾರ್ಯದಲ್ಲಿ ನಿಯೋಜಿಸಲ್ಪಟ್ಟವರಾಗಿದ್ದರು. ಮುಮ್ಮಡಿ ಕೃಷ್ಣರಾಜ ಪ್ರಭುಗಳವರ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿದ್ದ ಪಂಡಿತರನ್ನೂ, ಅವರು ಪಾರಮಾರ್ಥಿಕವಾಗಿ ಮಾಡುತ್ತ ಬಂದ ವಿದ್ಯಾಪ್ರಚಾರ ಸ್ಥಿತಿಯನ್ನೂ ತಿಳಿದವರಿಗೆ ಅಲ್ಲಿಂದೀಚಿನ ಸ್ಥಿತಿಯು ಸಾಮಾನ್ಯವಾದ ರೀತಿಯಲ್ಲಿದ್ದಂತೆ ತೋರುತಲಿತ್ತು. ಆದರೆ ಈಗಿನ ಸ್ಥಿತಿಯನ್ನು ಯೋಚಿಸಿದರೆ ಅತ್ಯಾಶ್ಚರ್ಯವಾಗುವುದು. ನಮ್ಮ ಮಹಾರಾಜರು ನಾಲ್ವಡಿ ಕೃಷ್ಣರಾಜ ಪ್ರಭುಗಳವರಿಗೆ ವೇದಶಾಸ್ತ್ರಗಳ ವಿಷಯದಲ್ಲಿ ಅಸಾಧಾರಣವಾದ ಪ್ರಾಮಾಣ್ಯಗ್ರಹವು ಸ್ಥಿರವಾಗಿದೆ. ಸಂಸ್ಕೃತ ವಿದ್ಯಾಪ್ರಚಾರಕ್ಕೂ ಪಂಡಿತರುಗಳ ಸಂರಕ್ಷಣೆಗೂ, ವ್ಯಯವು ಪೂರ್ವಕ್ಕಿಂತ ದಶಗುಣಾಧಿಕವಾಗಿ ಮಾಡಲ್ಪಡುತ್ತಿದೆ ಆದರೂ ಹಿಂದಿನ ರೀತಿಯ ಸಂಸ್ಕೃತ ವಿದ್ಯಾಪ್ರಚಾರ ಮತ್ತು ನಿಷ್ಕೃಷ್ಟವಾದ ಪಾಂಡಿತ್ಯ ಇವುಗಳಲ್ಲಿ ಶತತಮಾಂಶ ಅಥವಾ ಸಹಸ್ರತಮಾಂಶ ಕೂಡ ಈಗ ಇಲ್ಲದಂತೆ ಆಗುತ್ತಲಿರುವುದು ಕಾಲಮಹಿಮೆಯೋ ? ವಿಚಾರವಿಲ್ಲದ ಅವಿವೇಕ ಫಲವೋ ? ಇಲ್ಲವೇ ಈಶ್ವರ ಸಂಕಲ್ಪವೋ ? ಯಾವುದು ಕಾರಣವಾಗಿರಬಹುದೆಂಬುದನ್ನು ನಿರ್ಧರಿಸಲಶಕ್ಯವಾಗಿದೆ. ವೈದಿಕ ವಿದ್ಯೆಯನ್ನು ವಿದ್ಯೆ ಎಂದು ಪರಿಗಣಿಸುವುದಕ್ಕೆ ಕೂಡ ಹಿಂಜರಿಯಬೇಕಾಗಿ ಬಂತು. ಹಿಂದೆ ವೇದಶಾಸ್ತ್ರಾಧ್ಯಯನಮಾಡಿ

ಪಂಡಿತರೆನ್ನಿಸಿಕೊಂಡವರು ಕೂಡ ಈಗಿನ ಕಾಲದಲ್ಲಿ ತಮ್ಮ ವಿಷಯವಾಗಿ ಜನಗಳಿಗೆ ಉಂಟಾಗಿರುವ ಉದಾಸೀನಭಾವದಿಂದ ಭ್ರಾಂತರಾಗಿ, ತಮ್ಮ ಪ್ರಯಾಸವು ನಿಷ್ಫಲವಾದದ್ದು; ತಮ್ಮ ಕಾಲವನ್ನು ವೇದಶಾಸ್ತ್ರಾಧ್ಯಯನದಲ್ಲಿ ವ್ಯರ್ಥವಾಗಿ ಕಳೆದು ಬುದ್ಧಿಹೀನರಾದೆವೆಂದು ತಮ್ಮೊಳಗೆ ತಾವೇ ವ್ಯಸನಪಡುವಂತಾಯಿತು. ತಮ್ಮ ಮಕ್ಕಳನ್ನು ತಮ್ಮಂತೆ ವ್ಯರ್ಥವಾಗಿ ಕಾಲ ಕಳೆದು ವೈದಿಕವಿದ್ಯೆಯಲ್ಲಿ ಪ್ರವರ್ತಿಸದಂತೆ ನೋಡಿಕೊಳ್ಳುವುದರಲ್ಲಿ ಜಾಗರೂಕತೆಯನ್ನು ವಹಿಸುವಂತಾಯಿತು. ಬ್ರಾಹ್ಮಣರಲ್ಲಿ ರಕ್ತದೊಡನೆ ಸಹಜವಾಗಿ ಬೆರೆತು ಬಂದಿದ್ದ ಸಂತುಷ್ಟಿಯು ಹೋದ ಮಾರ್ಗವೇ ತಿಳಿಯದಂತಾಯಿತು. ಆಶಾ ಪಿಶಾಚಿಯು ಆಪಾದಮಸ್ತಕವನ್ನು ಪ್ರವೇಶಿಸಿ ಸರ್ವಕಾಲದಲ್ಲಿಯೂ ತನ್ನ ಚೇಷ್ಟೆಯನ್ನು ತೋರಿಸತಕ್ಕ ಅವಸರವು ಒದಗಿಬಂತು. ಅಂಥಾ ದುಷ್ಟಗ್ರಹೋಚ್ಚಾಟನಕ್ಕೆ ಬ್ರಾಹ್ಮಣರ ಹಸ್ತಗತವಾಗಿದ್ದ ಮಂತ್ರಗಳ ಶಕ್ತಿಯು ಅತಿ ಮಂದವಾಯಿತು. ಅದೆಲ್ಲವೂ ಈಗಿನ ಸ್ಥಿತಿಯಿಂದ ಉಂಟಾಗತಕ್ಕ ದುಷ್ಫಲವನ್ನು ಅನುಭವಿಸಬೇಕಾದ ಪ್ರಾಣಿಗಳ ಅದೃಷ್ಟದ ಪ್ರಭಾವವಲ್ಲದೆ ಮತ್ತಾವುದರ ಪ್ರಭಾವವೆಂದು ಹೇಳಬಹುದು?

ವರ್ತಮಾನಪ್ರಪಂಚದಲ್ಲಿ ಪುರುಷಶ್ರೇಷ್ಠರು, ಪೂರ್ವಾಪರವಿಚಾರಪರರು, ಸೂಕ್ಷ್ಮಬುದ್ಧಿಯುಳ್ಳವರು, ಪ್ರಪಂಚೋದ್ಧಾರಕರು ನಾವುಗಳೇ ಎಂಬೀ ಅಭಿಮಾನವು ಆಬಾಲವೃದ್ಧರಲ್ಲಿಯೂ ಒಂದೇ ವಿಧವಾಗಿ ನಿಂತಿತು; ಪರಮತೃಪ್ತರಾಗಿಯೂ, ದೂರದರ್ಶಿಗಳಾಗಿಯೂ, ಅಭಿಮಾನರಹಿತರಾಗಿಯೂ, ಶುದ್ಧಚಾರಿತ್ರ್ಯವುಳ್ಳವರಾಗಿಯೂ ಇದ್ದ ಹಿಂದಿನವರು ನಮ್ಮಿಂದ ತಿರಸ್ಕೃತರಾದರು. ಅವರಿಂದ ಆದೃತವಾಗಿದ್ದ ವೇದಶಾಸ್ತ್ರಗಳು ಬುದ್ಧಿಶೂನ್ಯರಾದವರ ಉಪಯೋಗಕ್ಕೋಸ್ಕರ ಭದ್ರಪಡಿಸಲ್ಪಟ್ಟವು. ಆದರೆ ಈ ಕಾಲದ ಜನರ ತೀರ್ಮಾನವು ಮನುಷ್ಯರ ತಾರತಮ್ಯಕ್ಕನುಗುಣವಾಗಿ ದೇವರು ಕೊಟ್ಟಿರುವ ಬುದ್ಧಿಯಿಂದ ವಿಚಾರಮಾಡಿ ನಿಷ್ಕರ್ಷಿಸಲ್ಪಟ್ಟದ್ದೇ? ಅಥವಾ ಅವಿವೇಕದಿಂದ ಮಾಡಲ್ಪಟ್ಟದ್ದೇ? ಎಂಬ ಸಂದೇಹವು ಕೆಲವರನ್ನು ಬಾಧಿಸತಕ್ಕದ್ದಾಗಿದೆ. ಈಗಿನ ನಮ್ಮ ಸಿದ್ಧಾಂತವೇ ನ್ಯಾಯವಾಗಿಯೂ, ಯುಕ್ತಿಯುಕ್ತವಾಗಿಯೂ ಇರುವ ಪಕ್ಷದಲ್ಲಿ, ಪ್ರತಿಯೊಂದು ಪ್ರಾಣಿಗೂ ಸುಖದಲ್ಲಿ ಇಚ್ಛೆಯೂ ದುಃಖದಲ್ಲಿ ದ್ವೇಷವೂ ಸಹಜವಾಗಿರುವದೆಂಬುದರಲ್ಲಿ ಯಾರಿಗೂ ಸಂದೇಹವಿಲ್ಲವಷ್ಟೆ? ಹಾಗೆ ಅಪೇಕ್ಷಿಸತಕ್ಕವರು ಪ್ರಯತ್ನದಿಂದಲೇ ತಾವು ಇಷ್ಟವಾದಂತೆ ಸುಖವನ್ನು ಪಡೆವುದರಲ್ಲಿಯೂ, ದುಃಖವನ್ನು ನಿವಾರಿಸಿಕೊಳುವುದರಲ್ಲಿಯೂ ಸಮರ್ಥರಾಗಿರುವಲ್ಲಿ, ಯಾರೊಬ್ಬರೂ ಯಾವ ಸಂದರ್ಭದಲ್ಲಿಯೂ ದುಃಖಭಾಗಿಗಳಾಗದೆ ಸುಖಿಗಳಾಗಿಯೇ ಇರಬೇಕು. ಇದು ಮಾತ್ರ ಯಾರಿಗೂ ಅನುಭವದಲ್ಲಿ ಬಂದಿರುವಂತೆ ಹೇಳುವುದಕ್ಕೆ ಅವಕಾಶವಿಲ್ಲವಾಗಿ, ನಮ್ಮ ಸಿದ್ಧಾಂತವು ಅವಿಚಾರದಿಂದ ಉಂಟಾದುದೆಂದು

ಕೆಲವರಾದರೂ ಅಭಿಪ್ರಾಯಪಡದಿರಲಾರರು. ಆದ್ದರಿಂದ ನಮ್ಮ ಈ ಸಿದ್ಧಾಂತವನ್ನು ಸ್ವಲ್ಪಮಟ್ಟಿಗಾದರೂ ವಿಚಾರಮಾಡಿ ಸ್ಥಿರಪಡಿಸಿಕೊಳ್ಳುವುದು ಆವಶ್ಯಕವು.

ಸಕಲಪ್ರಾಣಿ ಕಾಮನಾವಿಷಯವಾದ ಸುಖಸಂಪಾದನೆಯಲ್ಲಿ ದ್ರವ್ಯವೊಂದೇ ಮುಖ್ಯವಾದ ಕಾರಣವು. ಈ ವಿಷಯದಲ್ಲಿ

''ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ
ಸ ಪಂಡಿತಸ್ಸ ಶ್ರುತವಾನ್ ಗುಣಜ್ಞಃ ।
ಸ ಏವ ವಕ್ತಾ ಸ ಚ ದರ್ಶನೀಯಃ
ಸರ್ವೇ ಗುಣಾಃ ಕಾಂಚನಮಾಶ್ರಯಂತಿ ॥''

ಎಂಬ ಭರ್ತೃಹರಿ ಸುಭಾಷಿತವು ಪ್ರಮಾಣವು. ದ್ರವ್ಯವನ್ನು ಸಂಪಾದಿಸಬೇಕಾದರೆ ವಿದ್ಯಾಭ್ಯಾಸವು ಅತ್ಯಾವಶ್ಯಕವಾದದ್ದು. ದ್ರವ್ಯಾರ್ಜನದ ಕಾರಣವಾದ ವಿದ್ಯೆ ಎಂದರೆ ಆಂಗ್ಲೇಯ ಭಾಷಾಜ್ಞಾನವು. ಈ ಜ್ಞಾನವಿಲ್ಲದವರು ಪಶು ಸಮಾನರು. ಆದ್ದರಿಂದ ಇಂಗ್ಲೀಷ್ ಭಾಷೆಯನ್ನು ಅಭ್ಯಾಸಮಾಡಬೇಕು. ವ್ಯಾಪಾರವನ್ನು ನಡೆಸಬೇಕು. ಸರಕಾರದ ಉದ್ಯೋಗ ವನ್ನು ಸಂಪಾದಿಸಬೇಕು. ಸರಕಾರದವರಿಂದ ಸನ್ನದನ್ನು ಪಡೆದು ನ್ಯಾಯಸ್ಥಾನಗಳಲ್ಲಿ ವಾದ ಗಳನ್ನು ಮಾಡಬೇಕು. ಭೌತಿಕಶಾಸ್ತ್ರಾಧ್ಯಯನ ಮಾಡಿ ಅದರಲ್ಲಿ ಉತ್ತೀರ್ಣರಾಗಿ ಪಾಂಚಭೌತಿಕ ಸಂಯೋಜನೆಯಿಂದ ನಡೆಯಬಹುದಾದ ವ್ಯವಹಾರಗಳನ್ನು ನಡೆಸಲು ಪ್ರಯತ್ನ ಪಡಬೇಕು. ದ್ವೀಪಾಂತರವಾಸದಿಂದಲೂ ಅಲ್ಲಿನವರ ಸಹಾಯದಿಂದಲೂ ದ್ರವ್ಯ ಸಂಪಾದನೆಯನ್ನು ಮಾಡತಕ್ಕ ರೀತಿಗಳನ್ನು ತಿಳಿದುಕೊಳ್ಳಬೇಕು. ಪ್ರತಿಯೊಬ್ಬನೂ ವಿವೇಚನೆಯಿಲ್ಲದಂತೆ ಯಾವುದಾದರೊಂದು ಕೈಗಾರಿಕೆಯನ್ನು ಮಾಡುವುದರಲ್ಲಿ ಶಕ್ತಿಯನ್ನು ಸಂಪಾದಿಸಬೇಕು. ಸ್ತ್ರೀಪುರುಷರೆಂಬ ಎರಡು ಪ್ರಭೇದಗಳಲ್ಲದೆ ಮತ್ತಾವ ಪ್ರಭೇದಗಳೂ ನಿರ್ಬಂಧಗಳೂ ಜನಗಳಿಗೆ ಇರಬಾರದು. ಪ್ರತಿಯೊಬ್ಬನಿಗೂ ಸ್ವಾತಂತ್ರ್ಯವಿರಬೇಕಲ್ಲದೆ ನಿಯಮ್ಯನಿಯಾಮಕ ಭಾವವು ಯಾವ ಸಂದರ್ಭದಲ್ಲಿಯೂ ಇರಕೂಡದು. ಈ ರೀತಿಯಲ್ಲಿ ಎಲ್ಲಾ ಜನರೂ ಆಚರಿಸುವಂತಾದರೆ ಆಗ್ಗೆ ದೇಶವು ಮಹೋನ್ನತ ಸ್ಥಿತಿಗೆ ಬರುವುದು. ವಿದ್ವತ್ತು ಅಂದಿಗೆ ಬಂದಂತಾಗುವುದು. ಇದು ದ್ರವ್ಯಾರ್ಜನೆಗೆ ಮುಖ್ಯವಾಗಿ ಕಾರಣ ವಾಗುವುದು. ದ್ರವ್ಯ ಪ್ರಾಪ್ತಿಯಾದಲ್ಲಿ ಕಾಮನಾವಿಷಯವಾದ ಸುಖ ಪ್ರಾಪ್ತಿಯಾಗುವುದು ಎಂಬುದು ನಮ್ಮ ಈಗಿನ ಸಿದ್ಧಾಂತವು.

ಈ ಸಿದ್ಧಾಂತವು ಯುಕ್ತಿಯುಕ್ತವಾದದ್ದೋ? ಅಲ್ಲವೋ? ಇದರ ಮೇಲೆ ಉಂಟಾಗತಕ್ಕ ಆಕ್ಷೇಪಗಳನ್ನು ಸಮಾಧಾನಗೊಳಿಸಿ ಇದನ್ನು ಸಮರ್ಥಿಸುವುದು ಸಾಧ್ಯವೋ?

ಅಸಾಧ್ಯವೋ? ಇದು ಹೇಗಾದರೂ ಇರಲಿ. ಸರ್ವಜನಾದರಣೀಯವಾದ ಮತ್ತು ಕಾಮನಾವಿಷಯವಾದ ಸುಖವು ಯಾವುದು? ಅದರ ಸ್ವರೂಪವೇನು? ಈ ಅಂಶವನ್ನು ಮುಂದಾಗಿ ತೀರ್ಮಾನಮಾಡಿಕೊಳ್ಳಬೇಕು. ಹಾಗೆ ವಿಚಾರದಿಂದ ನಿಷ್ಕರ್ಷಿಸಲ್ಪಡುವ ಸುಖದ ಪ್ರಾಪ್ತಿಯಲ್ಲಿ ನಮ್ಮ ಸಿದ್ಧಾಂತಾಭಿಮತವಾದ ದ್ರವ್ಯವೊಂದೇ ಕಾರಣವೋ? ಅಥವಾ ಅದಕ್ಕಿಂತಲೂ ಹೆಚ್ಚಾದ ಕಾರಣಗಳು ಇರಬೇಕೋ? ದ್ರವ್ಯ ಸಂಪಾದನೆಯು ಈಗಿನವರಿಂದ ಕಂಡುಹಿಡಿಯಲ್ಪಟ್ಟಿರುವ ಕ್ರಮವನ್ನು ಆಚರಿಸುವುದರಿಂದ ಯಾವ ಸಂದರ್ಭದಲ್ಲಿಯೂ ವಿಫಲವಾಗದಂತೆ ಸಿದ್ಧಿಸುವುದೋ? ಅಥವಾ ದ್ರವ್ಯಸಂಪಾದನರೂಪಕಾರ್ಯ ಸಿದ್ಧಿಗೆ ನಮ್ಮ ಸಿದ್ಧಾಂತದಲ್ಲಿ ಸೇರದಿರತಕ್ಕ ಬೇರೆ ಕಾರಣವು ಯಾವುದಾದರೂ ಇದ್ದು ಅದು ಆವಶ್ಯಕವೋ? ಎಂಬ ವಿಚಾರವನ್ನು ನಡೆಸಿ, ನಮ್ಮ ಪ್ರಕೃತ ಸಿದ್ಧಾಂತವನ್ನು ಸ್ಥಾಪಿಸಿಕೊಂಡರೆ ಪ್ರತಿಯೊಬ್ಬರಿಗೂ ಈ ವಿಷಯದಲ್ಲಿ ಅಭಿಪ್ರಾಯ ಭೇದವಿಲ್ಲದಂತೆ ನಿಶ್ಚಯವುಂಟಾಗಿ, ಎಲ್ಲರೂ ಒಂದೇ ವಿಧವಾಗಿ ಪ್ರಯತ್ನವನ್ನು ನಡೆಸಿ, ಸುಖವನ್ನು ಪಡೆಯುವುದಕ್ಕೆ ಬಹಳ ಅನುಕೂಲ ವಾಗುವುದು. ಮತ್ತು ದೇಶೋನ್ನತಿಯುಂಟಾಗಿ ನಿಯಮ್ಯ ನಿಯಾಮಕ ಭಾವವು ತಪ್ಪಿ ಎಲ್ಲರೂ ಸ್ವತಂತ್ರರೇ ಆಗಬಹುದು.

ಸುಖದುಃಖವೆಂಬ ಪದಾರ್ಥಗಳೆರಡೂ ಪ್ರಾಣಿಗಳಿಗೆ ತತ್ಕಾಲಗಳಲ್ಲಿ ಉಂಟಾಗತಕ್ಕ ಮನೋವೃತ್ತಿ ವಿಶೇಷಗಳೇ ಹೊರತು ಇವುಗಳಿಗೆ ಬೇರೆ ಯಾವ ರೂಪಗಳೂ ಇಲ್ಲ. ಸುಖದುಃಖಗಳು ಎಲ್ಲಾ ಪ್ರಾಣಿಗಳಿಗೂ ಒಂದೇ ವಿಧವಾಗಿರುವದೆಂತಲೂ ನಿಷ್ಕರ್ಷೆ ಮಾಡುವುದು ಸಾಧ್ಯವಾಗಲಾರದು. ನಾವು ತಿಳಿದಿರುವ ಸುಖದುಃಖಗಳಿಗೆ ಕಾರಣ ಸಾಮಗ್ರಿಗಳು ಭಿನ್ನ ಭಿನ್ನವಾಗಿಯೇ ಏರ್ಪಟ್ಟಿರುವುದರಿಂದ, ಅವುಗಳ ಕಾರ್ಯವಾದ ಸುಖದುಃಖಗಳಲ್ಲಿಯೂ ಪ್ರಭೇದಗಳು ಇದ್ದೇ ತೀರಬೇಕಲ್ಲವೇ? ಕ್ಷುದ್ಬಾಧಾನಿವೃತ್ತಿಗಾಗಿಯೂ, ಅನ್ನಮಯವಾದ ಶರೀರದ ಪೋಷಣೆಗಾಗಿಯೂ, ಪ್ರಾಣಿಸಾಮಾನ್ಯಕ್ಕೂ ಆಹಾರವು ಆವಶ್ಯಕವಾದದ್ದು. ಆಹಾರದಿಂದ ಉಂಟಾಗತಕ್ಕ ತೃಪ್ತಿಯು ಎಲ್ಲಾ ಪ್ರಾಣಿಗಳಿಗೂ ಒಂದೇ ವಿಧವಾಗಿರುವುದೆಂದು ಹೇಳುವುದರಲ್ಲಿ ವಿರೋಧಿಗಳು ಪ್ರಾಯಃ ಯಾರೂ ಏರ್ಪಡದೇ ಇರಬಹುದು. ಆದರೆ ಆಹಾರ ವಿಷಯದಲ್ಲಿಯೂ ಕೆಲವು ಸಂದರ್ಭಗಳಲ್ಲಿ ಪ್ರಾಣಿ ವರ್ಗಕ್ಕೆ ದ್ವೇಷಬುದ್ಧಿಯೂ ಜಿಹಾಸೆಯೂ ಉಂಟಾಗುವುದರಿಂದ ಎಲ್ಲಾ ಕಾಲಗಳಲ್ಲಿಯೂ ಎಲ್ಲರೂ ಒಂದೇ ವಿಧವಾಗಿ ಆಹಾರವನ್ನು ಸುಖವೆಂದು ಒಪ್ಪಿಕೊಳ್ಳಲು ಆಗಲಾರದಾಗಿ, ಸುಖಲಕ್ಷಣವು ಇದರಲ್ಲಿ ಬರಲಿಲ್ಲ. ನಿದ್ರೆಯು ಪ್ರಾಣಿ ಸಾಮಾನ್ಯಕ್ಕೂ ಸುಖಕರವಾದದ್ದೆಂತಲೂ ಈ ಸುಖವು ನಿರ್ವಿಶೇಷವಾಗಿ ಎಲ್ಲರಿಂದಲೂ ಒಂದೇ ವಿಧವಾಗಿ ಅಪೇಕ್ಷಿಸಲ್ಪಡುವುದೆಂತಲೂ ಹೇಳಬಹುದು. ಈ ನಿದ್ರೆಯನ್ನು ಕೂಡ ಎಷ್ಟೋ ರಾತ್ರಿಗಳಲ್ಲಿ ನಾವು ಬಿಟ್ಟು, ಬೇರೆ ಬೇರೆ

ಕಾರ್ಯಗಳಲ್ಲಿ ವ್ಯಾಪೃತರಾಗುವುದು ನಮ್ಮ ಅನುಭವದಲ್ಲಿ ಕಂಡು ಬರುವುದರಿಂದ, ನಿದ್ರೆಯು ಎಲ್ಲರಿಗೂ ಒಂದೇ ವಿಧವಾದ ಸುಖವೆಂದು ಹೇಳುವುದು ಹೇಗೆ? ಇದರಲ್ಲಿಯೂ ಸುಖಲಕ್ಷಣವು ಹೇಗೆ ಇದ್ದ ಹಾಗಾಯಿತು? ಮುಖ್ಯವಾಗಿ ಆಹಾರ, ನಿದ್ರೆ ಈ ಎರಡನ್ನಲ್ಲವೇ ನಾವು ಸುಖವೆಂದು ನಂಬಿ, ನಮ್ಮ ಎಲ್ಲಾ ವಿಧವಾದ ಪ್ರಯತ್ನಗಳನ್ನೂ ಇದಕ್ಕೋಸ್ಕರವೇ ನಡೆಸತಕ್ಕವರಾಗಿರುವಂತೆ ದೀರ್ಘವಾಗಿ ವಿಚಾರಮಾಡಿದರೆ ನಿಷ್ಕರ್ಷೆಯಾಗುವುದು? ಇವೆರಡರಲ್ಲಿಯೂ ಸುಖಲಕ್ಷಣವು ಪೂರ್ತಿಯಾಗಿ ಬರಲಿಲ್ಲವೆಂದು ಮೇಲೆ ತೋರಿಸಲ್ಪಟ್ಟಿದೆ. ಇವುಗಳೆರಡೂ ಸುಖವೆಂದೊಪ್ಪಿಕೊಳ್ಳುವುದಾದರೆ, ಇದರ ವಿಷಯದಲ್ಲಿ ತೃಪ್ತಿಯುಂಟಾದ ಸಂದರ್ಭದಲ್ಲಿಯಾಗಲಿ, ಕಾರಣಾಂತರಗಳಿಂದ ಜಿಹಾಸೆಯುಂಟಾದ ಸಂದರ್ಭದಲ್ಲಿ ಯಾಗಲೀ ಅಲಂಬುದ್ಧಿಯು ಎಂದರೆ ಇದು ಸಾಕೆಂಬ ಜ್ಞಾನವು ಬರಲೇ ಕೂಡದು. ಅಲಂಬುದ್ಧಿಯು ಯಾವದರಲ್ಲಿ ಕಾದಾಚಿತ್ಕವಾಗಿ ಬಂದರೂ ಅದು ಸುಖಲಕ್ಷಣದಲ್ಲಿ ಸೇರಿದ್ದಲ್ಲವಾಗಿ ಸುಖವೆನ್ನಿಸಿಕೊಳ್ಳುವುದಿಲ್ಲ. ಆಹಾರ ನಿದ್ರೆಗಳ ವಿಷಯವೇ ಹೀಗೆ ಪರಿಣಾಮವನ್ನು ಹೊಂದಿರಲಾಗಿ ಈ ಪ್ರಪಂಚದಲ್ಲಿ ಇನ್ನು ಯಾವುದು ಸುಖವಾಗಿರ ಬಹುದು? ಈ ವಿಷಯದಲ್ಲಿ ಒಂದೊಂದು ಪದಾರ್ಥವನ್ನೂ, ಅದರ ಉಪಯೋಗ ಕ್ರಮವನ್ನೂ, ಅದರ ಪ್ರಯೋಜನವನ್ನೂ, ಸಾವಕಾಶವಾಗಿ ದೇವರು ಕೊಟ್ಟಿರತಕ್ಕ ಬುದ್ಧಿಯನ್ನು ಸ್ವಲ್ಪಮಟ್ಟಿಗೆ ಪ್ರವೇಶಮಾಡಿಸಿ ವಿಚಾರಮಾಡಿದರೆ, ನಾವು ತಿಳಿದುಕೊಂಡಿರತಕ್ಕ ಮತ್ತು ನಾವು ಅನುಭವಿಸತಕ್ಕ ಪ್ರತಿಯೊಂದು ಪದಾರ್ಥವೂ ಸುಖವೂ ಅಲ್ಲ, ಸುಖಸಾಧನವೂ ಅಲ್ಲ ಎಂದು ಸ್ಪಷ್ಟಪಡದೇ ಹೋಗುವುದಿಲ್ಲ. ಇಂಥಾ ಅಪ್ರಯೋಜಕವಾದ ಸುಖವನ್ನು ಸಂಪಾದಿಸುವುದಕ್ಕೂ ಅನುಭವಿಸುವುದಕ್ಕೂ ಮನುಷ್ಯನಾಗಿಯೇ ಹುಟ್ಟಬೇಕೆಂಬ ನಿರ್ಬಂಧವಾಗಲಿ, ಮನುಷ್ಯಜನ್ಮ ಬಂದದ್ದಕ್ಕೆ ಪ್ರಯೋಜನವಾಗಲಿ ಏನೂ ಇರುವುದಿಲ್ಲ. ಆಹಾರ ವ್ಯವಹಾರಗಳು ಪಶುಪಕ್ಷಿಮೃಗಾದಿ ಸಾಧಾರಣವೇ ಹೊರತು ವಿಶೇಷವೇನೂ ಅಲ್ಲ. ಆದ್ದರಿಂದ ಇತರಾಸಾಧಾರಣವಾಗಿಯೂ ಮನುಷ್ಯನಿಂದ ಮಾತ್ರ ಪಡೆಯ ತಕ್ಕದ್ದಾಗಿಯೂ, ಕಾಲತ್ರಯಾಬಾಧ್ಯವಾಗಿಯೂ ಇರತಕ್ಕ ಸುಖವು ಬೇರೊಂದು ಇರುವದೆಂದು ನಂಬಲೇಬೇಕು. ಅಂಥಾ ಸುಖವೇ ಸರ್ವಜನ ಕಾಮನಾವಿಷಯವಾದದ್ದು. ಆ ಸುಖದ ಪ್ರಾಪ್ತಿಗೆ ಸಾಧನವು ಪ್ರತ್ಯೇಕವಾಗಿಯೇ ಇರುವುದೆಂದು ಒಪ್ಪಿಕೊಳ್ಳಬೇಕು. ಆ ಸಾಧನವನ್ನೂ, ಅಂಥಾ ಸಾಧನದಿಂದ ಸಾಧ್ಯವಾಗತಕ್ಕ ಫಲವನ್ನೂ ಬೋಧಿಸತಕ್ಕದ್ದನ್ನೇ ವಿದ್ಯೆಯೆಂದು ಒಪ್ಪಿಕೊಳ್ಳಬೇಕು. ಅಂಥಾ ವಿದ್ಯೆಯ ಅಭ್ಯಾಸವನ್ನು ಮಾಡಿದರೆ, ನಾವು ಕಳೆದುಕೊಂಡಿರುವ ತೃಪ್ತಿಯು ಮತ್ತೆ ನಮ್ಮನ್ನು ಹುಡುಕಿಕೊಂಡು ಬರುವುದು. ಅಂದಿಗೆ ನಮಗೆ ಸ್ವಾತಂತ್ರ್ಯವು ಬರುವುದು. ನಮಗೆ ಬಂದಿರುವ ಮನುಷ್ಯ ಜನ್ಮಕ್ಕೆ ಪ್ರಯೋಜನವು

ಆಗ್ಗೆ ಉಂಟಾಗುವುದು. ಈಗಿನ ನಮ್ಮ ತಿಳಿವಳಿಕೆಯೂ, ನಮ್ಮ ಪ್ರಯತ್ನವೂ, ನಮ್ಮ ಆಚರಣೆಯೂ ಇವುಗಳೆಲ್ಲವೂ ಅಪೇಕ್ಷಣೀಯವಾದ ಸುಖಪ್ರಾಪ್ತಿಯಲ್ಲಿ ಎಂದಿಗೂ ನಿಜವಾದ ಸಾಧನಗಳಲ್ಲವು. ನಾವು ದುಃಖವನ್ನೇ ಸುಖವೆಂದು ಭ್ರಾಂತಿಯಿಂದ ತಿಳಿದುಕೊಂಡು ಬುದ್ಧಿಭ್ರಂಶದಿಂದ ಕೊನೆಗಾಣಲು ಅವಕಾಶವಿಲ್ಲದಂತಾಗಿ, ಉನ್ಮತ್ತರಂತೆ ಪ್ರಲಾಪಿಸುತ್ತಲೂ, ವ್ಯವಹರಿಸುತ್ತಲೂ ಇರುವೆವೆಂಬ ವಿಷಯದಲ್ಲಿ ಸಂಶಯವೇನೂ ಇಲ್ಲವು. ಮದಕರವಾದ ವಸ್ತುವನ್ನು ಸುಖಜನಕವೆಂದು ತಿಳಿದು ಸೇವೆಮಾಡಿದರೆ ಅದರಲ್ಲಿರತಕ್ಕ ಗುಣವನ್ನು ಬಿಟ್ಟು ನಮ್ಮ ಭಾವನೆಗನುಗುಣವಾಗಿ ಸುಖವನ್ನು ಕೊಡತಕ್ಕ ಶಕ್ತಿಯು ಆ ಪದಾರ್ಥಕ್ಕೆ ಎಲ್ಲಿಂದ ಬರಬೇಕು? ಆಯಾ ಪದಾರ್ಥಗಳಲ್ಲಿರತಕ್ಕ ಗುಣಗಳು ಆಯಾ ಪದಾರ್ಥಗಳೊಂದಿಗೆ ಸಹಜವಾಗಿ ಉಂಟಾದವುಗಳಲ್ಲವೇ? ಬೇವಿನಹಣ್ಣು ಮಧುರವೆಂತಲೂ, ಮಾವಿನಹಣ್ಣು ಕಹಿ ಎಂತಲೂ ನಾವು ತಿಳಿದುಕೊಂಡ ಮಾತ್ರಕ್ಕೆ ನಮ್ಮ ತಿಳಿವಳಿಕೆಯಂತೆ ವಸ್ತು ಭಿನ್ನವಾಗುವುದೇ? ಆದರೆ ಅವಿವೇಕದಿಂದಲೋ ಅಭ್ಯಾಸದಿಂದಲೋ ಹಠದಿಂದಲೋ ಅಹಂಕಾರದಿಂದಲೋ ಗುಣವಿಲ್ಲದ ಪದಾರ್ಥಗಳನ್ನು ಗುಣವಿದ್ದಂತೆ ಗ್ರಹಿಸುವುದರಿಂದ ಹಾಗೆ ಗ್ರಹಣಮಾಡತಕ್ಕವರಿಗೆ ಅವು ಸಹ್ಯವಾಗಬಹುದೇ ಹೊರತು, ನಿಜವಾದ ಆಯಾ ಪದಾರ್ಥದ ಗುಣವು ಬದಲಾಯಿಸಿ ಸರ್ವಜನ ಸಾಧಾರಣವಾಗಿ ಸಹ್ಯವಾಗುವುದಿಲ್ಲ.

ಸುಖಸಾಧನವೆಂದು ದ್ರವ್ಯವನ್ನು ಆರ್ಜಿಸುವುದರಲ್ಲಿ ಈ ಕಾಲದ ಮಹನೀಯರು ನಿಷ್ಕರ್ಷಿಸಿರುವದೇ ಕಾರಣವಾಗಿರುವ ಪಕ್ಷದಲ್ಲಿ, ಈ ಮಹಾಪ್ರಯೋಜನಕಾರಿಯಾದ ಧನವು ಯಾರಿಗೆ ತಾನೆ ಬೇಕಾಗಿಲ್ಲ? ಎಲ್ಲರಿಂದಲೂ ಅಪೇಕ್ಷಣೀಯವಾದ ಸುಖಸಾಧನದ ಸಂಪಾದನೆಗಾಗಿ ಬೇರೊಬ್ಬರಿಂದ ಉಪದಿಷ್ಟರಾಗಿ ಪ್ರಯತ್ನಪಡಬೇಕಾದ ಆವಶ್ಯಕತೆ ಉಂಟೋ? ಪ್ರಯತ್ನಪಟ್ಟವರೆಲ್ಲರೂ ಪ್ರಯತ್ನಾನುಗುಣವಾಗಿ ಪ್ರಯೋಜನವನ್ನು ಹೊಂದಿ ಸುಖವನ್ನು ಅನುಭವಿಸಿರುವರೋ? ಯಥೇಚ್ಛವಾಗಿ ದ್ರವ್ಯವನ್ನು ಸಂಪಾದಿಸಿರುವವರಿಗೆ ತೃಪ್ತಿಯುಂಟಾಗಿರುವದೋ? ಅವರುಗಳು ದುಃಖಸಂಬಂಧವೇ ಇಲ್ಲದಹಾಗೆ ಸುಖವನ್ನು ಮಾತ್ರ ಅನುಭವಿಸುತ್ತಿರುತ್ತಾರೋ? ಮನುಷ್ಯಪ್ರಯತ್ನದಿಂದಲೇ ಎಲ್ಲವೂ ಸಾಧ್ಯವೆಂದು ಹೇಳತಕ್ಕವರಾಗಿಯೂ, ಆ ಅಂಶವನ್ನೇ ದೃಢವಾಗಿ ನಂಬಿರುವವರಾಗಿಯೂ, ದೇಶೋನ್ನತಿಗೂ ಸ್ವಾತಂತ್ರ್ಯ ಸಂಪಾದನೆಗೂ ನಮ್ಮ ಈ ಹಿಂದೂಸ್ಥಾನದಲ್ಲಿ ತಾತ್ಕಾಲದಲ್ಲಿ ಅವತರಿಸಿ ಲೋಕಹಿತಕ್ಕೋಸ್ಕರವೇ ಪ್ರಯತ್ನಪಡುತ್ತಲಿರುವವರಲ್ಲಿ ಅನೇಕರ ಅಭಿಪ್ರಾಯ ವನ್ನೂ, ಅವರ ಉಪದೇಶಗಳನ್ನೂ ವಿಚಾರಮಾಡಿ ನೋಡಿದರೆ, ತಮ್ಮ ಸಂಕಲ್ಪಿತಾರ್ಥದ ಸಿದ್ಧಿಗಾಗಿ ತಾವು ಉದಾಸೀನರಾಗಬೇಕು. ಸರಕಾರದ ಅಧಿಕಾರಗಳನ್ನು ಬಿಡಬೇಕು. ಸರಕಾರದವರಿಂದ ಕೊಡಲ್ಪಡುವ ಗೌರವಕ್ಕೂ ಪ್ರತಿಷ್ಠೆಗೂ ಆಶೆ ಪಡಬಾರದು. ದೇಶಾಂತರ

ದ್ವೀಪಾಂತರಗಳಿಂದ ಬರುವ ಪದಾರ್ಥಗಳನ್ನು ಮೋಹಿಸಬಾರದು. ವೈದೇಶಿಕ ವಿದ್ಯಾಭ್ಯಾಸದಲ್ಲಿ ಯತ್ನಮಾಡಬಾರದು. ಐಕಮತ್ಯವನ್ನು ಹೆಚ್ಚಾಗಿ ಸಂಪಾದಿಸಬೇಕು. ಕಾಮಕ್ರೋಧಾದಿಗಳಿಂದ ಪರಸ್ಪರ ಕಲಹಗಳನ್ನುಂಟುಮಾಡಿಕೊಂಡು ಇವರ ತೀರ್ಮಾನಕ್ಕೆ ಬೇರೆಯವರಲ್ಲಿ ಹೋಗಬಾರದು. ಇದೇ ಮೊದಲಾದ ಸೂತ್ರಗಳನ್ನು ಇಟ್ಟುಕೊಂಡು ಇವುಗಳ ಅರ್ಥವನ್ನು ವಿಸ್ತಾರವಾದ ವಾಖ್ಯಾನಗಳ ಮೂಲಕ ಜನಗಳಿಗೆ ಬೋಧಿಸುತ್ತಿರುವಂತೆ ತಿಳಿದುಬರುತ್ತೆ. ಮೇಲಿನ ಉಪದೇಶವನ್ನು ಪಡೆದು, ಅದರ ಅರ್ಥವನ್ನು ಚೆನ್ನಾಗಿ ಯೋಚಿಸಿ, ಅದರಂತೆ ವರ್ತಿಸುವುದಕ್ಕೆ ನಾವುಗಳು ಧೈರ್ಯವನ್ನೂ, ಸ್ಥೈರ್ಯವನ್ನೂ ವಹಿಸುವ ಪಕ್ಷದಲ್ಲಿ ಅದರ ಪರ್ಯವಸಾನವು ಎಲ್ಲಿಗೆ ಬರುವುದು? ಅಂದರೆ ಮೊದಲನೆಯದು ತೃಪ್ತಿಸಂಪಾದನೆ - ಎರಡನೆಯದು ಉದಾಸೀನಭಾವ - ಮೂರನೆಯದು ಚಿತ್ತಸ್ಥೈರ್ಯ - ಇವುಗಳಲ್ಲವೇ ಪ್ರಯೋಜನವಾಗಿ ಏರ್ಪಟ್ಟಂತೆ ಆಗುವುದು? ಈ ಪ್ರಯೋಜನಗಳನ್ನು ಸಂಪಾದಿಸುವುದಕ್ಕೆ ಸರ್ವದಾ ಮನಃಕ್ಲೇಶಕಾರಿಯಾದ ವ್ಯಾಪಾರಗಳನ್ನು ಏಕೆ ಮಾಡಬೇಕು? ದ್ರವ್ಯಸಾಧ್ಯ, ಶ್ರಮಸಾಧ್ಯ ಮತ್ತು ಕ್ಷುದ್ರಫಲವನ್ನು ಕೊಡತಕ್ಕ ಆಂಗ್ಲೇಯಭಾಷಾಭ್ಯಾಸವನ್ನು ಏಕೆ ಮಾಡಬೇಕು ? ದೇಶಾಂತರ ದ್ವೀಪಾಂತವಾಸವೂ, ಅಲ್ಲಿಯ ಜನರ ಸಹವಾಸವೂ ಏತಕ್ಕೆ ಬೇಕಾಗುವುದು ? ಜಾತಿ ಪ್ರಭೇದಗಳನ್ನೂ ಆಹಾರ ವ್ಯವಹಾರ ನಿಯಮಗಳನ್ನೂ ಬಿಡುವುದು ಏಕೆ ? ರಾಜವಿರೋಧದಿಂದ ಆಗತಕ್ಕ ಫಲವೇನು? ಈ ಪ್ರಯಾಸಕ್ಕಿಂತಲೂ, ನಮಗಿರತಕ್ಕ ಅಹಂಕಾರವನ್ನು ಸ್ವಲ್ಪಸ್ವಲ್ಪವಾಗಿ ಕಡಿಮೆಮಾಡುತ್ತ ಬಂದು, ನಮ್ಮ ಹಿಂದಿನವರ ವಿಷಯದಲ್ಲಿಯೂ, ಅವರುಗಳು ಬರೆದಿಟ್ಟಿರತಕ್ಕ ಗ್ರಂಥಗಳ ವಿಷಯದಲ್ಲಿಯೂ ಉಂಟಾಗಿರುವ ತಿರಸ್ಕಾರ ಬುದ್ಧಿಯನ್ನು ಬಿಟ್ಟು, ನಂಬಿಕೆಯನ್ನೂ ಗೌರವವನ್ನೂ ಹೆಚ್ಚಿಸಿಕೊಳ್ಳುತ್ತ ಬಂದ ಪಕ್ಷದಲ್ಲಿ, ಹತ್ತಿರತಕ್ಕ ಮೋಹವು ಕ್ರಮಕ್ರಮವಾಗಿ ಇಳಿದು, ಚಿತ್ತವು ನಿರ್ಮಲವಾಗಿ, ಸುಖಸ್ವರೂಪವನ್ನೂ ಅದರ ಸಾಧನವನ್ನೂ ಹುಡುಕುವುದಕ್ಕೆ ಸಮರ್ಥರಾಗಿ ನಮ್ಮಿಂದ ಪ್ರಾರ್ಥನೀಯವಾದ ಸುಖವನ್ನು ಪಡೆಯುವುದಕ್ಕೂ, ದುಃಖವನ್ನು ದೂರ ಪಡಿಸುವುದಕ್ಕೂ ಶಕ್ತರಾಗಿ, ನಾವುಗಳು ಸುಖಾನುಭವ ಮಾಡಬಹುದೇ ಹೊರತು ಬೇರೆ ಯಾವ ಮಾರ್ಗದಿಂದಲೂ ಅಭಿಮತಾರ್ಥ ಸಿದ್ಧಿಯಾಗಲಾರದು.

ವೇದಶಾಸ್ತ್ರಗಳ ಪ್ರಚಾರದ ವಿಷಯದಲ್ಲಿಯೂ ಪಂಡಿತರುಗಳ ರಕ್ಷಣೆಯ ವಿಷಯದಲ್ಲಿಯೂ ಬದ್ಧಕಂಕಣರಾದ ನಮ್ಮ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಪ್ರಭುಗಳವರು ಎಷ್ಟು ಅನುಕೂಲವನ್ನು ಏರ್ಪಡಿಸಿ ಕೊಟ್ಟಿದ್ದರೂ ಪ್ರತಿಕ್ಷಣದಲ್ಲಿಯೂ ಕ್ಷೀಣದಶೆಯನ್ನು ಹೊಂದುತ್ತಲಿರುವ ವೈದಿಕರನ್ನೂ, ಸಂಸ್ಕೃತ ವಿದ್ಯೆಯನ್ನೂ ನೋಡುವುದರಿಂದ ಉಂಟಾದ ಆಶ್ಚರ್ಯವೂ, ಖೇದವೂ, ಮೇಲಿನ ವಿಷಯವನ್ನು ಸ್ವಲ್ಪ ಮಟ್ಟಿಗೆ ಇಲ್ಲಿ

ವಿಚಾರಮಾಡಲು ಕಾರಣವಾಯಿತು. ಭಗವಂತನು ಸಂಪೂರ್ಣವಾಗಿ ಅಜ್ಞಾನಿಗಳಾದ ಮತ್ತು ಅವಿವೇಕಿಗಳಾದ ನಮ್ಮಗಳ ವಿಷಯದಲ್ಲಿ ಅನುಗ್ರಹಮಾಡಿ, ನಮ್ಮಗಳಿಗೆ ವೇದಶಾಸ್ತ್ರಗಳಲ್ಲಿ ನಂಬಿಕೆಯನ್ನೂ, ತೃಪ್ತಿಯೆಂಬ ಪರಮಭಾಗ್ಯವನ್ನೂ ಕೊಟ್ಟು ನಮ್ಮನ್ನು ಕಾಪಾಡಬೇಕಲ್ಲದೆ, ಅನ್ಯಥಾ ನಮ್ಮ ಏಳಿಗೆಗೆ ಮಾರ್ಗವೇನೂ ಇರುವಂತೆ ತೋರಲಿಲ್ಲ.

ಶ್ರೀಗಳವರ ಚಾತುರ್ಮಾಸ್ಯದೀಕ್ಷಾಸಮಯದಲ್ಲಿ ಸಂಸ್ಥಾನದ ಪದ್ಧತಿ ಪ್ರಕಾರ ಭಾದ್ರಪದ ಮಾಸದಲ್ಲಿ ಸಭಾಗಣಪತಿಯನ್ನಿಟ್ಟು ಪೂಜಿಸುತ್ತಿದ್ದರು. ಈ ಗಣಪತಿಯ ಸಮ್ಮುಖದಲ್ಲಿ ಪ್ರತಿದಿನವೂ ಸಾಯಂಕಾಲ ನಾಲ್ಕು ಗಂಟೆಯಿಂದ ಏಳು ಗಂಟೆಯ ಪರ್ಯಂತ ಶ್ರೀಗಳವರು ಸಭಾಧ್ಯಕ್ಷರಾಗಿದ್ದು, ನ್ಯಾಯ-ವ್ಯಾಕರಣ, ವೇದಾಂತ ಶಾಸ್ತ್ರಗಳಲ್ಲಿ ಆಸ್ಥಾನದ ವಿದ್ವಾಂಸರುಗಳು, ಅರಮನೆಯ ಪಂಡಿತರುಗಳು, ಪಾಠಶಾಲಾ ವಿದ್ಯಾರ್ಥಿಗಳು ಈ ಸಭಿಕರುಗಳಿಂದ ವಾಕ್ಯಾರ್ಥವಿಚಾರಗಳನ್ನು ನಡೆಸುತ್ತಲಿದ್ದರು. "ವಿವಾಹಶ್ಚ ವಿವಾದಶ್ಚ ಸಮಯೋರೇವ ಶೋಭತೇ" ಎಂಬ ನ್ಯಾಯದಂತೆ ಪಾಂಡಿತ್ಯ ವಿಷಯದಲ್ಲಿ ಪರಸ್ಪರ ಸಮಾನರಾದ ಮಹಾಪಂಡಿತರುಗಳು ತಮ್ಮ ತಮ್ಮ ಪಾಂಡಿತ್ಯ ಮತ್ತು ಪ್ರತಿಭೆಗಳಿಂದ ನಡೆಸುತ್ತಲಿದ್ದ ಈ ಶಾಸ್ತ್ರಾರ್ಥವಿಚಾರವು, ಶಾಸ್ತ್ರ ಪರಿಭಾಷಾಜ್ಞಾನವಿಲ್ಲದವರನ್ನು ಕೂಡ ಉತ್ಸಾಹಿಗಳನ್ನಾಗಿ ಮಾಡಿದಂತೆ ತೋರುತ್ತಲಿರುವಾಗ್ಗ್ಯ ಅಭಿಜ್ಞರಾದ ಪಂಡಿತರಿಗೂ, ಶಾಸ್ತ್ರಾಧ್ಯಯನದಲ್ಲಿ ಆಸಕ್ತರಾಗಿ ವ್ಯಾಸಂಗ ಮಾಡುತ್ತಲಿದ್ದ ವಿದ್ಯಾರ್ಥಿಗಳಿಗೂ ಎಷ್ಟು ಸ್ಪರ್ಧೆ ಮತ್ತು ಉತ್ಸಾಹವನ್ನು ಉಂಟುಮಾಡಿರಬಹುದು? ಇಂಥಾ ವಿದ್ವತ್ಸಭೆಯನ್ನು ಅಲಂಕರಿಸಿ ವಿದ್ವಾಂಸರುಗಳ ವೈದುಷ್ಯವನ್ನು ಶ್ರೀ ಸ್ವಾಮಿಗಳವರ ಮುಖದಿಂದ ತಿಳಿದು ಸಂತೋಷಿಸುವದಕ್ಕೋಸ್ಕರ ಒಂದುದಿನ ಶ್ರೀ ಚಾಮರಾಜೇಂದ್ರ ಪ್ರಭುಗಳವರು ಶ್ರೀಮಠಕ್ಕೆ ದಯಮಾಡಿಸಿ, ಸಭಾಲಂಕಾರವಾಗಿದ್ದು ವಾಕ್ಯಾರ್ಥವನ್ನು ನಡೆಸಿ, ಪಂಡಿತರುಗಳಿಗೆ ವಿಶೇಷವಾಗಿ ಉತ್ತೇಜನವನ್ನು ಕೊಟ್ಟರು. ಆಗ ಪ್ರಭುಗಳ ಪ್ರಾರ್ಥನೆಯಂತೆ ಅವರಿಗೆ ಉಂಟಾಗಿದ್ದ ಕೆಲವು ಸಂದೇಹಗಳನ್ನು ಶಾಸ್ತ್ರೀಯವಾದ ಯುಕ್ತಿಗಳಿಂದಲೂ, ಲೌಕಿಕವಾದ ಯುಕ್ತಿದೃಷ್ಟಾಂತಗಳಿಂದಲೂ ಪರಿಹರಿಸುತ್ತ, ಪ್ರಭುಗಳವರ ಆಸ್ತಿಕ್ಯವನ್ನು ವೃದ್ಧಿಪಡಿಸುವ ಉದ್ದೇಶದಿಂದ, ಶ್ರೀ ಸ್ವಾಮಿಗಳವರು ಎರಡು ಗಂಟೆಯ ಕಾಲ, ವಿಗ್ರಹಾರಾಧನೆಯು ಶಾಸ್ತ್ರೀಯವಾದದ್ದು ಇದರಿಂದ ಈಶ್ವರನು ತೃಪ್ತಿಹೊಂದಿ ಅನುಗ್ರಹಿಸುತ್ತಾನೆಂಬ ವಿಷಯದಲ್ಲಿ, ವಿರೋಧಿಗಳ ಯುಕ್ತಿಗಳನ್ನೂ ಆಕ್ಷೇಪಗಳನ್ನೂ ಖಂಡಿಸಿ, ಸಿದ್ಧಾಂತ ಯುಕ್ತಿಗಳಿಂದಲೂ ಅನೇಕ ಪ್ರಮಾಣಗಳಿಂದಲೂ ವಿಗ್ರಹಾರಾಧನೆಯನ್ನು ಸ್ಥಾಪಿಸಿದರು.

ಆಗ ಶ್ರೀ ಶ್ರೀಗಳವರು ಅಪ್ಪಣೆ ಕೊಡಿಸಿದ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಸಂಗ್ರಹವಾಗಿ ಹೇಳಿದೆ :

(1) ವಿಗ್ರಹಾರಾಧನವು, ಪ್ರಮಾಣಭೂತವಾದ ವೇದದ ಸಂಹಿತಭಾಗದಲ್ಲಿ ಹೇಳಲ್ಪಟ್ಟಿಲ್ಲ. ಆದ್ದರಿಂದ ವಿಗ್ರಹಾರಾಧನೆಗೆ ಪ್ರಮಾಣವಿಲ್ಲ. (2) ಸರ್ವತ್ರ ವ್ಯಾಪಕನಾದ ಭಗವಂತನನ್ನು ಮೃಚ್ಛಿಲಾಮಯವಾದ ಬಿಂಬಗಳಲ್ಲಿ ಪರಿಚ್ಛಿನ್ನವಾಗಿರುವಂತೆ ಭಾವನೆ ಮಾಡುವುದರಿಂದ ಆ ಭಗವಂತನ ಮಾಹಾತ್ಮ್ಯವನ್ನು ಕಡಿಮೆ ಮಾಡಿದಂತಾಗುವುದು, ಹೀಗೆ ಮಾಡುವುದರಿಂದ ಸರ್ವಸಮರ್ಥನಾದ ಷಡ್ಗುಣೈಶ್ವರ್ಯ ಸಂಪನ್ನನಾದ ರಾಜನಹಾಗೆ ಉಡುಪುಗಳನ್ನು ಮಾತ್ರ ಧರಿಸಿ ವೇಷಧಾರಿಯು ಆ ರಾಜನನ್ನು ಅಣಕಿಸಿದಂತೆ ಆಗುವುದರಿಂದ ಆ ರೀತಿಯಲ್ಲಿ ನಡೆದುಕೊಳ್ಳುವ ವೇಷಧಾರಿಯು ಆ ರಾಜನ ಅಗ್ರಹಾರಕ್ಕೆ ಹೇಗೆ ಪಾತ್ರನಾಗುವನೋ, ಅದರಂತೆ ವಿಗ್ರಹಾರಾಧಕನು ಈಶ್ವರನ ಅನುಗ್ರಹಕ್ಕೆ ಪಾತ್ರನಾಗುವನೇ ಹೊರತು ಪ್ರಸಾದಕ್ಕೆ ಭಾಜನನಾಗಲಾರನು. (3) ಭಗವದಂಶಸಂಭೂತರೆಂದೂ, ಭಗವಂತನೇ ಲೋಕಹಿತಾರ್ಥವಾಗಿ ದಶಾವತಾರಗಳನ್ನು ಮಾಡಿದನೆಂದೂ ತಿಳಿದು ರಾಮಕೃಷ್ಣಾದಿಗಳ ಬಿಂಬಗಳನ್ನು ಪೂಜಿಸುವುದು ಅವರ ಚರಿತ್ರೆಗಳಿಂದ ಮತಾಂತರೀಯರಿಗೆ ಹಾಸ್ಯಾಸ್ಪದವಾಗಿರುವುದು. (4) ಚೈತನ್ಯವಿಲ್ಲದ ವಿಗ್ರಹಗಳನ್ನು ಇಟ್ಟು ಪೂಜಿಸುವುದರಿಂದ ತೃಪ್ತಿಯನ್ನು ಹೊಂದುವುದಕ್ಕೂ ತಿಳಿದುಕೊಳ್ಳುವುದಕ್ಕೂ, ಜಡವಾದ ಮೃಚ್ಛಿಲಾದಿಗಳಿಗೆ ಸಾಮರ್ಥ್ಯವೆಲ್ಲಿರುವುದು? ಇವು ಮೊದಲಾದ ಕಾರಣಗಳಿಂದ ವಿಗ್ರಹಾರಾಧನೆಯನ್ನು ಮಾಡುವುದು ಅವಿಚಾರರಮಣೀಯವೆಂದು ಪೂರ್ವಪಕ್ಷಿಗಳ ಅಭಿಪ್ರಾಯವು.

ಮೇಲಿನ ಆಕ್ಷೇಪಗಳಿಗೆ ಶ್ರೀ ಶ್ರೀಗಳವರು ಹೇಳಿದ ಉತ್ತರವೇನೆಂದರೆ- ವಿಗ್ರಹಾರಾಧನಕ್ಕೆ, ವೇದಭಾಗವಾದ ಸಂಹಿತೆಯಲ್ಲಿ ಪ್ರಮಾಣವು ಹೇಳಲ್ಪಡಲಿಲ್ಲವಾಗಿ ಅದು ಅಪ್ರಾಮಾಣಿಕವಾದುದೆಂದು ಹೇಳುವುದು ಯುಕ್ತಿಯುಕ್ತವಲ್ಲವು. ''ಅನಂತಾ ವೈ ವೇದಾಃ'' ಎಂಬ ಪ್ರಮಾಣದಿಂದ ವೇದವು ಅನಂತವಾಗಿರುವುದು. ಇದರಲ್ಲಿ ಶಾಖಾಭೇದಗಳು ಅಸಂಖ್ಯಾಕವಾಗಿರುವುವು. ಈಗ ನಮಗೆ ಗೋಚರವಾಗಿರತಕ್ಕ ವೇದವು ಅನಂತವಾದ ವೇದದಲ್ಲಿ ಒಂದು ಭಾಗವೇ ಹೊರತು, ಗೋಚರವಾಗದ ಭಾಗವು ಹೆಚ್ಚಾಗಿಯೇ ಇರುವುದು. ಆದ್ದರಿಂದ, ವೇದಾಭ್ಯಾಸವನ್ನೇ ಪೂರ್ಣವಾಗಿ ಮಾಡದವರು-ಅರ್ಥವಿಚಾರದಿಂದ ಅದರ ತತ್ವವನ್ನೇ ತಿಳಿಯದವರು ವೇದದಲ್ಲಿ ವಿಗ್ರಹಾರಾಧನೆಗೆ ಪ್ರಮಾಣವಿಲ್ಲವೆಂದು ಹೇಳುವುದು, ಕಾಂತಾಶಬ್ದವು ಸ್ತ್ರೀಲಿಂಗವೆಂದು ಮಾತ್ರ ತಿಳಿದುಕೊಂಡಿದ್ದವನು ''ಕಶ್ಚಿತ್ಕಾಂತಾ'' ಎಂದು ಶ್ಲೋಕವನ್ನಾರಂಭಿಸಿದ ಕೂಡಲೆ ಮಹಾಕವಿಯಾದ ಕಾಳಿದಾಸನು ''ಕಾಚಿತ್ಕಾಂತಾ'' ಎಂದು ಹೇಳುವುದಕ್ಕೆ ಬದಲಾಗಿ ''ಕಶ್ಚಿತ್ಕಾಂತಾ'' ಎಂದು ಅಪಶಬ್ದವನ್ನು ಪ್ರಯೋಗಿಸಿರುವನೆಂದು ಆಕ್ಷೇಪಿಸಿದರೆ ಅದು ಹೇಗೆ ಪೂರ್ವಾಪರಜ್ಞಾನವುಳ್ಳವರಿಂದ ಆದರಣೀಯವಾಗ

ಬಹುದೋ, ಅದರಂತೆಯೇ ಆದರಣೀಯವಾಗುವುದು, ವೇದವು ಅನಂತವಾದದ್ದು. ಅದರಲ್ಲಿ ಅನೇಕಭಾಗಗಳು ನಮ್ಮ ದೃಷ್ಟಿಗೋಚರವಾಗಲಿಲ್ಲವು ಎಂಬ ಅಂಶದಲ್ಲಿ ನಂಬಿಕೆಯಿಲ್ಲವಾದರೆ, ಅದು ಹಾಗಿರಲಿ. ವೇದದಲ್ಲಿ ಸಂಹಿತೆಮಾತ್ರ ಪ್ರಮಾಣವಾದದ್ದು ಉಳಿದ ಬ್ರಾಹ್ಮಣ ಉಪನಿಷತ್ತುಗಳು ಅಪ್ರಮಾಣವಾದುವೆಂದು ಯಾವ ಪ್ರಮಾಣದಿಂದ ಸಿದ್ಧವಾಗಿರುವುದು? ಈ ಭಾಗವನ್ನು ಸಿದ್ಧಪಡಿಸಿಕೊಂಡಲ್ಲವೇ ಮುಂದಿನ ವಿಚಾರವನ್ನು ಮಾಡಬೇಕು? ಸಂಹಿತೆಯೊಂದನ್ನೇ ಪ್ರಮಾಣವೆಂದು ಹೇಳಿದರೆ, ಇದರಲ್ಲಿ ಮಂತ್ರಭಾಗ ಮಾತ್ರ ಹೇಳಿರುವುದಲ್ಲದೆ ಮಂತ್ರಕ್ಕೆ ವಿನಿಯೋಗವನ್ನು ಹೇಳಿರುವುದಿಲ್ಲ. ಮಂತ್ರ ವಿನಿಯೋಗವು ಸಂಹಿತೆಗೆ ವ್ಯಾಖ್ಯಾನರೂಪವಾದ ಬ್ರಾಹ್ಮಣದಲ್ಲಿ ಹೇಳಿದೆ. ಆ ಭಾಗವು ಅಪ್ರಮಾಣವಾದ ಮೇಲೆ, ಯಾವ ರೀತಿಯಿಂದ ಉಪಯೋಗಿಸಿ ಪ್ರಯೋಜನವನ್ನು ಪಡೆಯಬೇಕೆಂಬ ವಿಷಯವನ್ನು ತಿಳಿಯದ ಮನುಷ್ಯನು ಗಟ್ಟಿಗಟ್ಟಿಯಾಗಿ ಸುವರ್ಣವನ್ನು ಸಂಪಾದಿಸಿ ಇಟ್ಟುಕೊಂಡಿರುವುದರಿಂದ ಯಾವ ಪ್ರಯೋಜನವನ್ನು ಹೊಂದುವನೋ, ಯಾವ ಸಂತೋಷವನ್ನು ಪಡೆಯುವನೋ, ಅದೇ ಪ್ರಯೋಜನವನ್ನು, ಅದೇ ಸಂತೋಷವನ್ನು, ಮಂತ್ರವಿನಿಯೋಗವನ್ನು ತಿಳಿಯದೇ ಮಂತ್ರಭಾಗವನ್ನು ಮಾತ್ರ ಪ್ರಮಾಣವಾಗಿ ನಂಬಿದವನೂ ಪಡೆಯುವನು. ಆದ್ದರಿಂದ ಮಂತ್ರವಿನಿಯೋಗವನ್ನು ತಿಳಿಯುವುದಕ್ಕೋಸ್ಕರ ಬ್ರಾಹ್ಮಣಭಾಗವು ಆವಶ್ಯಕವಾಯಿತು. ಬ್ರಾಹ್ಮಣಭಾಗವಿಲ್ಲದೆ ಮಂತ್ರವಿನಿಯೋಗವನ್ನು ಆಚರಿಸುವುದಕ್ಕೆ ಆಗಲಾರದಾಗಿ, ಅದನ್ನೂ ಪ್ರಮಾಣವಾಗಿ ನಂಬಬೇಕು. ಮಂತ್ರಬ್ರಾಹ್ಮಣಗಳೆರಡೂ ಕರ್ಮಸ್ವರೂಪವನ್ನೂ ಅನುಷ್ಠಾನ ಕರ್ಮವನ್ನೂ ಹೇಳುವುವು. ವೇದಶಿರಸ್ಸು ಎಂದು ಹೇಳಿಕೊಂಡಿರುವ ಉಪನಿಷತ್ತು ಜ್ಞಾನ ಸ್ವರೂಪವನ್ನೂ ಜ್ಞಾನಸಂಪಾದನೆ ಕ್ರಮವನ್ನೂ ತಿಳಿಸುವುದು. ಇದು ಅಪ್ರಮಾಣವಾಗುವುದಾದರೆ, ಭಗವಂತನು ಸರ್ವವ್ಯಾಪಕನೆಂದು ತಿಳಿವುದಕ್ಕೂ, ಹಾಗೆ ತಿಳಿದುಕೊಂಡಂತೆ ನಡೆಸುವುದಕ್ಕೂ ಅವಕಾಶವಿರುವದಿಲ್ಲವು. ಆದ್ದರಿಂದಲೂ, ಜ್ಞಾನವನ್ನು ಒಪ್ಪಿಕೊಳ್ಳದಿದ್ದಲ್ಲಿ ಸುಖಪ್ರಾಪ್ತಿಗೆ ಮಾರ್ಗವೇ ಇಲ್ಲದುದರಿಂದಲೂ, ಆ ಭಾಗವನ್ನೂ ಪ್ರಮಾಣವೆಂದೇ ನಂಬಬೇಕಾಗುವುದು. ಈ ರೀತಿಯಿಂದ ಭಾಗತ್ರಯಾತ್ಮಕವಾದ ವೇದವನ್ನು ಪ್ರಮಾಣವಾದುದೆಂದು ಒಪ್ಪಿಕೊಂಡನಂತರ, ಸ್ವಯಂಪ್ರಕಾಶವಾದ ವೇದಕ್ಕೆ ವಿಗ್ರಹಾರಾಧನ ಪ್ರಕರಣವನ್ನು ಮಂತ್ರಭಾಗವಾದ ಸಂಹಿತೆಯಲ್ಲಿಯೇ ಹೇಳಬೇಕೆಂತಲೂ ಮತ್ತೊಂದು ಪ್ರಕರಣವನ್ನು ಇನ್ನೊಂದು ಭಾಗದಲ್ಲಿಯೇ ಹೇಳಬೇಕೆಂತಲೂ ನಿರ್ಬಂಧವೇನು? ಸಾಮಾನ್ಯವಾದ ಲೌಕಿಕ ಯುಕ್ತಿಯಿಂದ ವಿಚಾರಮಾಡಿ ನೋಡಿದರೂ, ರಾಷ್ಟ್ರಪರಿಪಾಲನೆಗಾಗಿ ರಾಜನಿಂದ ಮಾಡಲ್ಪಡುವ ಶಾಸನಗಳಲ್ಲಿ (ಕಾನೂನುಗಳು) ಭೂಸಂಬಂಧವಾದ ನಿಯಮಗಳು,

ಖನಿಜಸಂಬಂಧವಾದ ನಿಯಮಗಳು, ಕಾಡಿನ ಕಟ್ಟಳೆಗಳು, ಪ್ರಜೆಗಳ ದಾಯಭಾಗ ಮೊದಲಾದ ವಿಷಯಗಳ ನಿಬಂಧನೆಗಳು, ದಂಡಾರ್ಹವಾದ ಕೃತ್ಯಗಳನ್ನು ನಡೆಸಿದವರಿಗೆ ವಿಧಿಗಳು ಈ ರೀತಿಯಾಗಿ ಅನೇಕ ವಿಧಗಳು ಏರ್ಪಟ್ಟಿವೆಯಷ್ಟೆ ! ಇವುಗಳಲ್ಲಿ ಒಂದು ಶಾಸನವು ಪ್ರಮಾಣವೆಂತಲೂ ಮತ್ತೊಂದು ಅಪ್ರಮಾಣವೆಂತಲೂ, ಭೂಸಂಬಂಧವಾದ ಶಾಸನವು ಬಹಳ ಮುಖ್ಯವಾದದ್ದು. ಇದರಲ್ಲಿಯೇ ದಾಯಭಾಗ ಮೊದಲಾದ ವ್ಯವಹಾರದ ವಿಷಯಗಳನ್ನು ಹೇಳಬೇಕಾಗಿತ್ತು ಇದರಲ್ಲಿ ಆ ವಿಷಯಗಳನ್ನು ಹೇಳಲಿಲ್ಲವಾಗಿ, ಇದು ರಾಜಶಾಸನವಲ್ಲವೆಂತಲೂ, ಇದು ಅಪ್ರಮಾಣವೆಂತಲೂ ಹೇಳುವುದು ಸಾಧ್ಯವೋ? ಹಾಗೆ ಹೇಳಿದ ಮಾತ್ರದಿಂದ ಆ ಶಾಸನದಂತೆ ನಡೆದುಕೊಳ್ಳದೇ ಇರಲು ಆ ರಾಜನ ಪ್ರಜೆಗೆ ಸಾಧ್ಯವಾದೀತೋ? ಆದ್ದರಿಂದ ಸ್ವಯಂಪ್ರಕಾಶವಾದ, ಮತ್ತು ಸೃಷ್ಟ್ಯಾದಿಯಲ್ಲಿ ಭಗವಂತನಿಂದ ಉಚ್ಚರಿಸಲ್ಪಟ್ಟ ವೇದಭಾಗವೆಲ್ಲವೂ ಪ್ರಮಾಣವು. ಆ ವೇದದಲ್ಲಿ ಭಗವಂತನನ್ನು ಸಾಕಾರವಾಗಿ ಉಪಾಸನೆ ಮಾಡುವುದು ಸ್ಪಷ್ಟವಾಗಿಯೇ ಹೇಳಲ್ಪಟ್ಟಿರುವುದು. ಈ ಕಾರಣದಿಂದ ವಿಗ್ರಹಾರಾಧನೆಗೆ ವೇದಪ್ರಮಾಣವು ಇಲ್ಲವೆಂದು ಹೇಳುವುದು ಯುಕ್ತವಲ್ಲವು.

ವ್ಯಾಪಕನಾದ ಭಗವಂತನನ್ನು ಪರಿಚ್ಛಿನ್ನನನ್ನಾಗಿ ಭಾವಿಸುವ ಶಂಕೆಯು ಅಪ್ರಯೋಜಕವಾದದ್ದು. ಭಗವಂತನನ್ನು ವ್ಯಾಪಕನೆಂದು ಒಪ್ಪಿಕೊಳ್ಳುವುದಾದರೆ ಮೃಚ್ಛಿಲಾದಿಗಳಲ್ಲಿಯೂ ಅವನ ವ್ಯಾಪನೆಯಿಲ್ಲವೇ? ಅವುಗಳಲ್ಲಿ ಈಶ್ವರ ಭಾವನೆಯನ್ನು ಮಾಡತಕ್ಕವರು ಮತ್ತೊಂದರಲ್ಲಿ ದೇವರಿಲ್ಲವೆಂದು ಹೇಳಿದ ಹಾಗೆ ಆಗುವುದೋ? ಅಥವಾ ಆರಾಧಿಸಲ್ಪಟ್ಟ ಮೃಚ್ಛಿಲಾದಿ ಬಿಂಬಗಳೇ ಈಶ್ವರನೆಂದು ಹೇಳಿದಹಾಗೆ ಆಗುವುದೋ? ಉಪಾಸಕನ ಯೋಗ್ಯತೆಗನುಗುಣವಾಗಿ ಸಗುಣೋಪಾಸನೆಯೂ, ನಿರ್ಗುಣೋಪಾಸನೆಯೂ ಶಾಸ್ತ್ರಗಳಲ್ಲಿ ಹೇಳಿವೆ. ಆರಂಭದಲ್ಲಿ ಸಗುಣೋಪಾಸನೆಯನ್ನು ಮಾಡಿ ಸಾಕಾರವಾದ ಒಂದು ಮೂರ್ತಿಯನ್ನು ಮನಸ್ಸಿಂದ ಹಿಡಿದುಕೊಳ್ಳದೆ ನಿರ್ಗುಣೋಪಾಸನೆಯನ್ನು ಮಾಡಲು ಮನಸ್ಸಿಗೆ ಶಕ್ತಿಯುಂಟಾಗುವುದಿಲ್ಲವು. ಅದು ಹೇಗೆಂದರೆ ಲೋಹಮೂರ್ತಿಯನ್ನು ಮೊದಲು ಮೇಣದಲ್ಲಿ ಮಾಡುತ್ತಾನೆ. ಅದರ ಮೇಲೆ ಶುದ್ಧವಾದ ಮಣ್ಣನ್ನು ಕಟ್ಟಿ ಅದನ್ನು ಒಣಗಿಸಿ ಮಣ್ಣಿನಲ್ಲಿ ಮೇಣದ ಮೂರ್ತಿಯ ಅಂಗಗಳೆಲ್ಲವನ್ನೂ ಒತ್ತಿ ಅವು ಹಿಡಿದ ನಂತರ ಮೇಣವನ್ನು ಕರಗಿಸಿ ತೆಗೆದು, ಲೋಹವನ್ನು ಕಾಸಿ ಆ ಮಣ್ಣಿನ ಮೂಸೆಯಲ್ಲಿ ಬಿಡುತ್ತಾನೆ ದ್ರವವಾಗಿರುವ ಲೋಹವು ಮಣ್ಣಿನ ಮೂಷೆಯಲ್ಲಿರುವ ಮೂರ್ತಿಯ ಅಂಗಸ್ಥಾನವಾದ ಪ್ರತಿಯೊಂದು ನಿಮ್ನೋನ್ನತ ಪ್ರದೇಶವನ್ನೂ ಸೇರಿ ನಿಲ್ಲುವುದು. ಅದು ಶೀತಲವಾದನಂತರ ದ್ರವವಾಗಿದ್ದ ಲೋಹವು ಗಟ್ಟಿಯಾಗಿ ಮೂರ್ತಿಯಾಗುವುದು. ಇದರಂತೆ ಸಾಕಾರ

ಮೂರ್ತಿಯನ್ನು ದೀರ್ಘಕಾಲ ಪರ್ಯಂತ ಧ್ಯಾನಿಸುತ್ತ ಬಂದರೆ, ಧ್ಯಾನಮಾಡಿದ ಮೂರ್ತಿಯ ಎಲ್ಲಾ ಅಂಗಗಳೂ ಉಪಾಸಕನ ಮನಸ್ಸಿನಲ್ಲಿ ನಿಲ್ಲುವುವು. ಇದನ್ನು ಮನಸ್ಸು ಹಿಡಿದು ಕೊಳ್ಳುವುದು. ಹಾಗೆ ಮನಸ್ಸು ಗಟ್ಟಿಯಾಗಿ ಹಿಡಿದುಕೊಳ್ಳುವ ಪರ್ಯಂತ ವಿಗ್ರಹಾರಾಧನವನ್ನು ಮಾಡುತ್ತ ಬಂದರೆ ಅಲ್ಲಿಗೆ ಸಗುಣೋಪಾಸನೆಯು ಪೂರ್ಣವಾಗಿ ಈ ಉಪಾಸಕನು, ನಿರ್ಗುಣನಾಗಿಯೂ ಸರ್ವತ್ರವ್ಯಾಪಕನಾಗಿಯೂ ಭಗವಂತನು ಇರುವನೆಂದು ಧ್ಯಾನಮಾಡಲು ಶಕ್ತನಾಗುವನು. ಈ ಕ್ರಮವು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವುದೇ ಹೊರತು ಸರ್ವಶಕ್ತನಾದ ಭಗವಂತನ ಮಾಹಾತ್ಮ್ಯವನ್ನೂ ಅವನ ವ್ಯಾಪಕತೆಯನ್ನೂ ಕಡಿಮೆ ಮಾಡುವುದಕ್ಕೋಸ್ಕರ ಯಾರಿಂದಲೂ ಹೊಸದಾಗಿ ಕಲ್ಪಿಸಲ್ಪಟ್ಟ ಮಾರ್ಗವಲ್ಲವು. ಸಗುಣೋಪಾಸನೆಗಿಂತಲೂ ನಿರ್ಗುಣೋಪಾಸನೆಯು ಪರಮ ಶ್ರೇಷ್ಠವಾದದ್ದೆಂಬ ವಿಷಯದಲ್ಲಿ ಸಂಶಯವಿಲ್ಲ. ಆದರೆ ಅಭ್ಯಾಸ ಕಾಲದಲ್ಲಿಯೇ ಉಪಾಸಕರು ಅಂಥಾ ಶ್ರೇಷ್ಠವಾದ ನಿರ್ಗುಣೋಪಾಸನೆಗೆ ಸಮರ್ಥರಾಗುವುದಿಲ್ಲ. ಲೋಕದಲ್ಲಿ ಸಣ್ಣದಾಗಿಯೂ ಸ್ಪಷ್ಟವಾಗಿಯೂ ನೇರವಾಗಿಯೂ ಸುಂದರವಾಗಿಯೂ ಅಕ್ಷರಗಳನ್ನು ಬರೆದರೆ ಅದನ್ನು ನೋಡಿ ಯಾರು ತಾನೇ ಶ್ಲಾಘಿಸಲಾರರು ? ಹಾಗೆ ಅಕ್ಷರಗಳನ್ನು ಬರೆಯತಕ್ಕವರು ಪ್ರಾರಂಭದಲ್ಲಿ ದೊಡ್ಡದೊಡ್ಡದಾಗಿ ಮಣ್ಣಿನ ಮೇಲೂ, ಹಲಗೆಯ ಮೇಲೂ, ಬಳಿಕ ಕಾಗದದ ಮೇಲೂ, ಬಹುಕಾಲದವರೆಗೆ ಬರೆದು ಬರೆದು ಚೆನ್ನಾಗಿ ಕೈ ತಿದ್ದಿದನಂತರ ಸರ್ವಜನ ಶ್ಲಾಘ್ಯವಾಗಿ ಬರೆಯಲು ಶಕ್ತರಾಗುವರೊ ? ಅಥವಾ ಅಕ್ಷರಾಭ್ಯಾಸಕಾಲದಲ್ಲಿಯೇ ಚೆನ್ನಾಗಿ ತಿದ್ದಿದ ಅಕ್ಷರಗಳನ್ನೂ ಬರೆಯಬಲ್ಲರೋ ? ಇದರಂತೆಯೇ ಮೊದಲು ಸಾಕಾರವಾಗಿಯೂ ಪರಿಚ್ಛಿನ್ನವಾಗಿಯೂ ಭಗವಂತನನ್ನು ಭಜಿಸಿ ಚೆನ್ನಾಗಿ ಅಭ್ಯಾಸವಾದ ನಂತರ, ನಿರಾಕಾರವಾಗಿಯೂ ಅಪರಿಚ್ಛಿನ್ನವಾಗಿಯೂ ಭಗವಂತನನ್ನು ಧ್ಯಾನಿಸಬಹುದಾದ್ದರಿಂದ ವಿಗ್ರಹಾರಾಧನವು ಆವಶ್ಯಕವು. ಇದರಿಂದ ವೇಷಧಾರಿಯು ರಾಜನಂತೆ ಉಡುಪುಗಳನ್ನು ಧರಿಸಿ, ತಾನು ರಾಜನೆಂಬ ಭ್ರಾಂತಿಯನ್ನು ಇತತರಿಗೆ ಉಂಟುಮಾಡಿ, ರಾಜನಂತೆ ಸ್ವತಂತ್ರವಾಗಿ ರಾಜಕಾರ್ಯಗಳಲ್ಲಿ ಪ್ರವರ್ತಿಸಿ, ರಾಜನ ಶಕ್ತಿಗೆ ಕುಂದನ್ನುಂಟುಮಾಡತಕ್ಕ ಯತ್ನವನ್ನು ಮಾಡಿದರೆ, ಅಂಥಾ ಮನುಷ್ಯನು ರಾಜದ್ರೋಹಿಯೆನ್ನಿಸಿಕೊಂಡು, ರಾಜಕೋಪಕ್ಕೆ ಪಾತ್ರನಾಗಿ ದಂಡಾರ್ಹನಾಗುವನು. ಸಗುಣೋಪಾಸಕನ ವರ್ತನವು ಅದರಂತಾಗುವುದಿಲ್ಲ. ಇವನು ತನ್ನಲ್ಲಿಯೇ ಈಶ್ವರ ಭಾವನೆಯನ್ನು ಮಾಡಿ ತಾನೇ ಈಶ್ವರನೆಂಬ ಅಹಂಕಾರದಿಂದ ವರ್ತಿಸುವುದಿಲ್ಲ. ಈಶ್ವರ ಭಾವನೆಯನ್ನು ಬೇರೊಂದು ಪದಾರ್ಥದಲ್ಲಿ ಮಾಡಿ ಯಾವ ಸಂದರ್ಭದಲ್ಲಿಯೂ ತಾನು ಭವ್ಯನಾಗಿಯೇ ಇದ್ದುಕೊಂಡು ನಮ್ರಭಾವದೊಡನೆ ಆರಾಧಿಸುವುದರಿಂದ, ಇವನ ವಿಷಯದಲ್ಲಿ ಈಶ್ವರನು ಪ್ರಸಾದಮಾಡುವನೇ ಹೊರತು

ಕೋಪಮಾಡಲು ಕಾರಣವಿಲ್ಲವು. ಈ ವರ್ತನವು ಭಗವಂತನ ನಿಗ್ರಹಕ್ಕೆ ಕಾರಣವಾದದ್ದೆಂದು ಹೇಳುವುದಾದರೆ, ದ್ವೀಪಾಂತರದಲ್ಲಿರುವ ನಮ್ಮ ಚಕ್ರವರ್ತಿಗಳ ಪ್ರತಿಕೃತಿಯನ್ನು ಹಿಂದೂಸ್ಥಾನದಲ್ಲಿರುವ ಜನಗಳು ಇಟ್ಟು ಗೌರವಿಸುವುದರಿಂದಲೂ, ಪ್ರತಿಕೃತಿಗೆ ಉತ್ಸವಾದಿಗಳನ್ನು ನಡೆಸುವುದರಿಂದಲೂ, ತಮಗೆ ಅಪಮಾನ ಮಾಡಿದಂತೆ ಚಕ್ರವರ್ತಿಗಳು ತಿಳಿದು, ಹಾಗೆ ಮಾಡುವ ತಮ್ಮ ಪ್ರಜೆಗಳನ್ನು ನಿಗ್ರಹಿಸ ಬೇಕಲ್ಲವೇ ? ಈ ಭಾಗವು ಅನುಭವದಿಂದ ತಿಳಿದಿರುವದಷ್ಟೇ ? ಇದರಿಂದ ಸಾಕ್ಷಾತ್ತಾಗಿಯೇ ಚಕ್ರವರ್ತಿಗಳ ಸಮೀಪದಲ್ಲಿದ್ದು ಅವರನ್ನು ಆರಾಧಿಸಲು ಅವಕಾಶವಿಲ್ಲದವರು ಅವರ ಪ್ರತಿಕೃತಿಯಲ್ಲಿ ಆ ಚಕ್ರವರ್ತಿಗಳ ಭಾವನೆಯನ್ನು ಮಾಡಿ, ಅದನ್ನು ಗೌರವಿಸುವುದರ ಮೂಲಕ ಚಕ್ರವರ್ತಿಗಳ ಪ್ರೀತಿಗೆ ಪಾತ್ರರಾಗುವಂತೆ, ಭಗವಂತನ ಪ್ರತಿಕೃತಿ ರೂಪವಾದ ಬಿಂಬಗಳಲ್ಲಿ ದೇವರ ಭಾವನೆಯನ್ನು ಮಾಡಿ ಆರಾಧಿಸುವುದರಿಂದ ಆರಾಧಕರು ದೇವರ ಅನುಗ್ರಹಕ್ಕೆ ಭಾಜನರಾಗುವರಲ್ಲದೆ, ನಿಗ್ರಹಕ್ಕೆ ಎಂದಿಗೂ ಭಾಗಿಗಳಾಗಲಾರರು.

ರಾಮಕೃಷ್ಣಾದಿ ಲೀಲಾಮೂರ್ತಿಗಳನ್ನು ಆರಾಧಿಸುವುದರಿಂದ, ಅವರ ಚರಿತ್ರೆಗಳನ್ನು ತಿಳಿದ ಮತಾಂತರೀಯರ ಉಪಹಾಸಕ್ಕೆ ಪಾತ್ರರಾಗಬೇಕಾಗಿ ಬರುವುದೆಂಬ ಶಂಕೆಯು ಹುಟ್ಟಬೇಕಾದರೆ, ಆ ಮಹನೀಯರ ಚರಿತ್ರೆಗಳ ವಿಷಯದಲ್ಲಿ ಮತಾಂತರೀಯರಂತೆ ಆರಾಧಕರಿಗೂ ಒಂದೊಂದು ಸಮಯದಲ್ಲಿ ಜಿಗುಪ್ಸೆಯುಂಟಾಗದೆ ಇದ್ದಲ್ಲಿ, ತಾವು ಹಾಸ್ಯಾಸ್ಪದರಾಗುವೆವೆಂಬ ಶಂಕೆಗೆ ಅವಕಾಶವಿಲ್ಲವು. ಆದರೆ ಉಪಾಸಕರಿಗೂ ಭಗವಂತನ ವಿಲಾಸಗಳನ್ನು ಪುರಾಣಗಳಿಂದ ತಿಳಿದುಕೊಳ್ಳಲಾರಂಭಿಸುವಾಗ ಆತನ ವಿಷಯವಾಗಿ ಹೇಯಬುದ್ಧಿಯುಂಟಾದಲ್ಲಿ ಇದನ್ನು ಬಲಪಡಿಸುವುದಕ್ಕೆ ಮತಾಂತರೀಯರ ಸಹವಾಸವು ಏರ್ಪಟ್ಟು ತನ್ಮೂಲಕ ಮೇಲಿನ ಶಂಕೆಗೆ ಅವಕಾಶವಾಗುವುದು. ಈ ಶಂಕೆಯನ್ನು ವಿಚಾರಮಾಡಿ ಹೋಗಲಾಡಿಸಿಕೊಳ್ಳುವುದರಿಂದ, ಪ್ರಪಂಚ ರಕ್ಷಣೆಗಾಗಿ ಅವತಾರಮಾಡಿದ ರಾಮಕೃಷ್ಣಾದಿಗಳ ವಿಷಯದಲ್ಲಿ ಭಕ್ತಿಯು ದೃಢವಾಗುವುದು. ರಾಮಾವತಾರವು ಲೋಕದಲ್ಲಿ ಧರ್ಮವನ್ನು ಸ್ಥಾಪಿಸಲೋಸುಗವೇ ಆದದ್ದೆಂದು ತಿಳಿಯಬೇಕು. ಆ ಮಹಾಪುರುಷನು ಮಹಾವಿಷ್ಣುವಿನ ಅಂಶವಲ್ಲದೆ ಬೇರೊಬ್ಬನಲ್ಲವು. ಈತನ ಅತಿಬಾಲ್ಯಾವಸ್ಥೆಯಲ್ಲಿಯೇ ಯಾಗರಕ್ಷಣೆಗಾಗಿ ಈತನನ್ನು ಕಳುಹಿಸಬೇಕೆಂದು ವಿಶ್ವಾಮಿತ್ರ ಮಹರ್ಷಿಗಳು ಕೋರಲು ದಶರಥಮಹಾರಾಜನು ಎಲ್ಲಾ ಸೈನ್ಯದೊಡನೆ ತಾನೇ ಬಂದು ಯಾಗರಕ್ಷಣೆಯನ್ನು ಮಾಡುವೆನೆಂದು ಎಷ್ಟು ವಿಧವಾಗಿ ತಿಳಿಸಿಕೊಂಡರೂ, ಆ ರಾಮಮೂರ್ತಿಯ ಸ್ವರೂಪವನ್ನು ತಿಳಿದಿದ್ದ ವಿಶ್ವಾಮಿತ್ರಮಹರ್ಷಿಗಳು ಅಸಹಾಯನಾದ ಮತ್ತು ಬಾಲನಾದ ರಾಮನನ್ನು ಮಾತ್ರ ತನಗೆ ಸಹಾಯನಾಗಲು ಅಪೇಕ್ಷಿಸಿ ಕರೆದುಕೊಂಡು ಹೋಗಿ ಯಾಗರಕ್ಷಣೆಯನ್ನು

ಮಾಡಿಕೊಂಡರೆಂಬ ಚರಿತ್ರವನ್ನು ತಿಳಿವುದರಿಂದಲೇ ರಾಮನು ಸಾಮಾನ್ಯ ಮನುಷ್ಯನಲ್ಲವೆಂದು ಸಂಗತಿಯು ಸ್ಪಷ್ಟಪಡುವುದು. ಇಂಥಾ ಮಾಹಾತ್ಮ್ಯವೂ, ಅದಕ್ಕೆ ಅನುಗುಣವಾದ ಪರಾಕ್ರಮವೂ ತನ್ನಲ್ಲಿರುವುದನ್ನು ತಿಳಿದಿದ್ದ ರಾಮನು, ನ್ಯಾಯಪ್ರಾಪ್ತವಾಗಿ ತನಗೆ ಬರತಕ್ಕ ರಾಜ್ಯವನ್ನು ಬಿಟ್ಟು ಅರಣ್ಯವಾಸಕ್ಕೆ ಹೋಗುವಂತೆ ತನ್ನ ತಂದೆಯು ನಿಷ್ಕಾರಣವಾಗಿ ಮಾಡಿದ ಆಜ್ಞೆಗೆ ಬದ್ಧನಾಗಿ, ಚೀರವಸನಾದಿಗಳನ್ನು ಧರಿಸಿ, ಕಂದಮೂಲಾಶನವನ್ನು ಮಾಡಿಕೊಂಡು ಋಷಿಚರ್ಯೆಯಲ್ಲಿರುವುದಕ್ಕೋಸ್ಕರ ಹೊರಟು ಹೋದದ್ದು; ಅನಂತರ ತನ್ನ ಸಹೋದರನಾದ ಭರತನು ಬಂದು ಚಿತ್ರಕೂಟದಲ್ಲಿ ಎಷ್ಟು ವಿಧವಾಗಿ ಹಿಂತಿರುಗಿ ಬರಬೇಕೆಂದು ಪ್ರಾರ್ಥಿಸಿ ಕೊಂಡರೂ ಪಿತೃವಾಕ್ಯ ಪರಿಪಾಲನೆಯೆಂಬ ಧರ್ಮವನ್ನು ಬಿಡಲು ಎಷ್ಟು ಮಾತ್ರವೂ ಅಭಿಪ್ರಾಯವಿಲ್ಲದವನಾಗಿ, ಹಿಂತಿರುಗಿ ಬರಲು ಸಮ್ಮತಿಸದೆಯೇ ಪೂರ್ವನಿರ್ದಿಷ್ಟವಾದ ಅರಣ್ಯ ನಿವಾಸಕ್ಕೇ ಮುಂದುವರಿದದ್ದು ಇವು ಮೊದಲಾದ ಆತನ ಚರಿತ್ರವನ್ನು ತಿಳಿವುದರಿಂದ, ಆ ಮಹಾನುಭಾವನು ಧರ್ಮಸ್ಥಾಪನೆಗಾಗಿಯೇ ಭೂಮಿಯಲ್ಲವತರಿಸಿದನೆಂದು ಹೇಳುವುದರಲ್ಲಿ ಸಂದೇಹವೇನಿರುವುದು? ಅಧರ್ಮ ಪ್ರವೃತ್ತನಾದ ರಾವಣಾಸುರನನ್ನೂ, ಅವನ ದುಷ್ಟಪ್ರವೃತ್ತಿಗೆ ಸಹಾಯಕರಾಗಿದ್ದ ಇತರ ಘೋರರಾಕ್ಷಸರನ್ನೂ ಯುದ್ಧದಲ್ಲಿ ಜಯಿಸಿದ ಆ ಮಹಾಪುರುಷನ ಪರಾಕ್ರಮ, ಧೈರ್ಯ, ಸ್ಥೈರ್ಯ ಇವು ಮೊದಲಾದ ಗುಣಗಳನ್ನು ತಿಳಿದುಕೊಂಡರೆ, ಆತನು ಮನುಷ್ಯನೆಂದು ಹೇಳಲು ಯಾರಿಂದಲಾದರೂ ಸಾಧ್ಯವೋ? ಅಂಥಾ ದುಷ್ಟ ರಾಕ್ಷಸರನ್ನು ಸಂಹರಿಸಿದ್ದು ಧರ್ಮಸ್ಥಾಪನೆಗಲ್ಲದೆ ತನ್ನ ಕಳತ್ರವನ್ನು ಪಡೆಯಲು ಮಾಡಿದ ಪ್ರಯತ್ನವೆಂದು ಆಮೂಲಾಗ್ರವಾಗಿ ಆತನ ಚರಿತ್ರೆಯನ್ನು ತಿಳಿದುಕೊಂಡವರು ಅಭಿಪ್ರಾಯಪಡಲು ಅವಕಾಶವಿರುವುದೋ? ರಾಮಚರಿತ್ರದಲ್ಲಿ ಯಾವ ಭಾಗದಲ್ಲಿಯಾದರೂ ಆತನ ವಿಷಯದಲ್ಲಿ ಅನಾದರವುಂಟಾಗುವ ಚರ್ಯೆಯು ಕಂಡು ಬಂದಿರುವುದೋ? ಕಾಂತಾವಿಯೋಗಕಾಲದಲ್ಲಿ ಸಾಮಾನ್ಯರಂತೆ ಆತನು ಅನುಭವಿಸಿದ್ದಾಗಿ ರಾಮಾಯಣದಲ್ಲಿ ಹೇಳಿರುವ ದುಃಖವನ್ನು ಮಾತ್ರ ಮುಖ್ಯವಾಗಿಟ್ಟುಕೊಂಡು ಆತನು ಸಾಮಾನ್ಯನೆಂದು ತಿಳಿಯಕೂಡದು. ಅಸಾಧಾರಣವಾದ ಇತರ ಚರ್ಯೆಗಳಿಂದ ಆತನು ಮಾನುಷ ಶರೀರವನ್ನು ಪಡೆದು ಮನುಷ್ಯರಂತೆ ವರ್ತಿಸುತ್ತಲಿದ್ದುದರಿಂದ ಆ ಭಾವವನ್ನು ಆ ರೀತಿಯಾಗಿ ತೋರ್ಪಡಿಸಿಕೊಂಡನೆನ್ನಬೇಕಲ್ಲದೆ ಅನ್ಯಥಾ ಹೇಳುವುದಕ್ಕೆ ಅವಕಾಶವಿಲ್ಲವಾಗಿ ಆ ಮಹಾಪುರುಷನ ವಿಷಯದಲ್ಲಿ ಯಾವ ಸಂದರ್ಭದಲ್ಲಿಯೂ ತಿರಸ್ಕಾರ ಬುದ್ಧಿಯನ್ನು ಮಾಡುವುದು ಉಚಿತವಲ್ಲವು.

ಇದರಂತೆ ಕೃಷ್ಣಚರಿತ್ರದಲ್ಲಿ ಆತನ ಲೀಲೆಗಳು ಕೆಲವು ಹೇಳಲ್ಪಟ್ಟಿವೆ. ಈ ಲೀಲೆಗಳನ್ನು

ಆ ಚರಿತ್ರಗಳಿಂದ ತಿಳಿದುಕೊಳ್ಳುವಾಗ ಭ್ರಾಂತಿಯುಂಟಾಗುವುದು, ಇದಕ್ಕೆ ಕಾರಣವು ವಿಚಾರವಿಲ್ಲದಿರುವಿಕೆಯಲ್ಲದೆ ಬೇರೆಯಲ್ಲವು. ಯುದ್ಧಾಭಿಮುಖನಾಗಿ ಬಂದ ಅರ್ಜುನನು ಅಜ್ಞಾನದಿಂದ ಶೋಕಮೋಹಾವಿಷ್ಟನಾಗಿ ಪರಾಙ್ಮುಖನಾಗಲು, ಆ ಸಂದರ್ಭದಲ್ಲಿ ಕೃಷ್ಣನಿಂದ ಉಪದೇಶಿಸಲ್ಪಟ್ಟಿರುವ ಭಗವದ್ಗೀತೆಯ ಅರ್ಥವನ್ನು ಮಹನೀಯರು ರಚಿಸಿರುವ ವ್ಯಾಖ್ಯಾನಗಳ ಸಹಾಯದಿಂದ ಚೆನ್ನಾಗಿ ವಿಚಾರಮಾಡಿ ತಿಳಿದುಕೊಂಡಲ್ಲಿ ಆ ಮಹೋಪದೇಶಕನು ಯಾರೆಂದು ಗೋಚರವಾಗುವುದು. ಭಗವದ್ಗೀತೆಯಲ್ಲಿ ಹನ್ನೊಂದನೆಯದಾದ ವಿಶ್ವ ರೂಪಾಧ್ಯಾಯವನ್ನು ಓದಿ ಅದರ ಅರ್ಥವನ್ನು ಚೆನ್ನಾಗಿ ಗ್ರಹಿಸುವುದರಿಂದ, ಕೃಷ್ಣಾವತಾರವನ್ನು ಮಾಡಿದವರು ಯಾರೆಂಬುದು ಸ್ಪಷ್ಟಪಡುವುದು, ಇಂಥಾ ಮಹಾಪುರುಷನು ನಡೆಸಿರುವ ಒಂದೊಂದು ಕಾರ್ಯವೂ ಆಯಾ ಸಂದರ್ಭಕ್ಕನುಗುಣವಾಗಿ ಲೋಕಹಿತಕ್ಕಲ್ಲದೆ, ಸ್ವಪ್ರಯೋಜನಕ್ಕಾಗಲಿ, ಮೂಢರಂತೆ ಅಜ್ಞಾನದಿಂದಾಗಲಿ ನಡೆಸಿದವುಗಳಲ್ಲವು. ಈ ಅರ್ಥವನ್ನು ವಿಚಾರದಿಂದ ತಿಳಿದುಕೊಳ್ಳಬೇಕು. ಧರ್ಮಶಾಸ್ತ್ರವು ವಿಧಿಶಾಸ್ತ್ರವೆಂತಲೂ ನಿಷೇಧ ಶಾಸ್ತ್ರವೆಂತಲೂ ಎರಡು ವಿಧವಾಗಿ ವಿಂಗಡಿಸಲ್ಪಟ್ಟಿದೆ. ವಿಧಿ ಶಾಸ್ತ್ರವು ಕೆಲವು ಕರ್ಮಗಳನ್ನು ಮಾಡುವುದಕ್ಕೋಸ್ಕರವೂ, ನಿಷೇಧಶಾಸ್ತ್ರವು ಕೆಲವು ಕಾರ್ಯಗಳನ್ನು ಬಿಡುವುದಕ್ಕೋಸ್ಕರವೂ ಹೇಳಲ್ಪಟ್ಟಿದೆ. ಈ ಶಾಸ್ತ್ರಗಳಿಗೆ ಅಜ್ಞಾನಿಗಳು ವಿಷಯರಲ್ಲದೆ ಜ್ಞಾನಿಗಳು ವಿಷಯರಲ್ಲವು. ಅದು ಹೇಗೆಂದರೆ, ಕೇವಲ ಬಾಲ್ಯದ ಮತ್ತು ಅಜ್ಞಾನದ ದಶೆಯಲ್ಲಿರುವ ಮಗುವು ಸ್ವಭಾವವಾಗಿ ಮಣ್ಣನ್ನು ತಿನ್ನುವುದು, ಹಾಲನ್ನು ಕುಡಿಯಬೇಕಾದರೆ ಅಳುವುದು ಈ ಅನುಭವವು ಎಲ್ಲರಿಗೂ ಇರುತ್ತಷ್ಟೆ! ಇದಕ್ಕೆ ಕಾರಣವು ಹಿತಾಹಿತಪರಿಜ್ಞಾನವಿಲ್ಲದಿರುವಿಕೆಯೇ. ಆ ಮಗುವಿಗೆ ಮಣ್ಣನ್ನು ತಿನ್ನುವುದು ಪ್ರತಿಕೂಲ ವೆಂತಲೂ ಹಾಲನ್ನು ಕುಡಿವುದು ಅನುಕೂಲವೆಂತಲೂ ಪರಿಜ್ಞಾನವುಳ್ಳ ಮಾತಾಪಿತೃಗಳು ಮಗುವು ಮಣ್ಣನ್ನು ತಿನ್ನದಂತೆ ನಿಷೇಧಿಸುವರು. ಕೈ ಕಾಲುಗಳನ್ನು ಹಿಡಿದು ನಿರ್ಬಂಧಿ ಸಿಯಾದರೂ ಹಾಲನ್ನು ಕುಡಿಸುವರು. ಈ ವಿಧಿ ನಿಷೇಧಗಳಿಗೆ ಒಳಪಟ್ಟು ಆ ಮಗುವು ಸ್ವಭಾವವಾಗಿ ವೃದ್ಧಿಹೊಂದುವುದು. ಆದ್ದರಿಂದ ಮೇಲಿನ ವಿಧಿ ನಿಷೇಧಗಳಿಗೆ ಅಜ್ಞಾನದಶೆಯ ಆ ಮಗುವು ವಿಷಯವೆಂಬುದು ಸ್ಪಷ್ಟವು ಮತ್ತು ಮಣ್ಣು, ತಿನ್ನತಕ್ಕ ಪದಾರ್ಥವಲ್ಲವು, ಅನ್ನಾದಿಗಳನ್ನು ಭುಂಜಿಸುವುದರಿಂದ ದೇಹವು ಪುಷ್ಟವಾಗುವುದು ಎಂದು ತಿಳಿದವರ ವಿಷಯದಲ್ಲಿಯೂ, ಮೊದಲು ಅಜ್ಞಾನದಶೆಯಲ್ಲಿ ವಿಧಿನಿಷೇಧಗಳಿಗೆ ಬದ್ಧರಾಗಿದ್ದು ಸ್ವಲ್ಪ ವಯಸ್ಸಾದಮೇಲೆ ಹಿತಾಹಿತಪರಿಜ್ಞಾನವನ್ನು ಹೊಂದಿದ ಮಕ್ಕಳ ವಿಷಯದಲ್ಲಿಯೂ ಮೇಲಿನ ವಿಧಿನಿಷೇಧಗಳಿಗೆ ಅವಕಾಶವಿಲ್ಲವೆಂಬುದೂ ವ್ಯಕ್ತವಾಗುವುದಷ್ಟೇ? ಹೀಗೆ ವಿಧಿ ನಿಷೇಧಶಾಸ್ತ್ರಗಳು ಅಜ್ಞಾನಿಗಳನ್ನು ಕುರಿತು ಪ್ರವೃತ್ತವಾಗಿರುವುವಲ್ಲದೆ ಜ್ಞಾನಿಗಳ ವಿಷಯದಲ್ಲಿ

ಪ್ರವೃತ್ತವಾಗಿಲ್ಲವು. ಆದುದರಿಂದ ಅಜ್ಞಾನಿಗಳಾದ ನಮಗೆ ಧರ್ಮಶಾಸ್ತ್ರಗಳಲ್ಲಿ ಹೇಳಿರುವ ನಿಷಿದ್ಧಕರ್ಮಗಳನ್ನು ಭಗವಂತನು ಆಚರಿಸಿದನೆಂದು ನಾವು ತಿಳಿದು ಆತನ ವಿಷಯದಲ್ಲಿ ತಿರಸ್ಕಾರಬುದ್ಧಿಯನ್ನು ಮಾಡಕೂಡದು. ಆ ಕರ್ಮವು ಅಜ್ಞಾನಿಗಳಾದ ನಮ್ಮ ದೃಷ್ಟಿಗೆ ನಿಷಿದ್ಧವಾಗಿ ನಮಗೆ ಬಾಧಕವಾದರೂ ಜ್ಞಾನಿಯಾದ ಭಗವಂತನಿಗೆ ಬಾಧಕವಾಗಲಾರದು. ಅದು ಹೇಗೆಂದರೆ, ಲೋಕದಲ್ಲಿ ಭೂ ಪರೀಕ್ಷಕನು ಮಣ್ಣನ್ನು ತಿನ್ನತಕ್ಕ ಪದಾರ್ಥವಲ್ಲವೆಂದು ತಿಳಿದಿದ್ದರೂ ಕೆಲವು ಸಂದರ್ಭಗಳಲ್ಲಿ ಆ ಮಣ್ಣಿನ ಗುಣವನ್ನು ಕಂಡು ಹಿಡಿಯಲು ಅದನ್ನು ಬಾಯಿಯಲ್ಲಿ ಹಾಕಿಕೊಳ್ಳುವುದುಂಟಷ್ಟೆ? ಅದರಿಂದ ತನಗೆ ಬಾಧೆಯುಂಟಾಗುವಂತೆ ಮಾಡಿಕೊಳ್ಳುವನೋ? ಇದರಂತೆ ಜ್ಞಾನಿಯು ಯಾವುದೇ ಒಂದು ಉದ್ದೇಶಕ್ಕೋಸ್ಕರ ನಡೆಸುವ ಕಾರ್ಯದಿಂದ ತನಗೆ ಅದರ ಸಂಬಂಧವಿಲ್ಲದಂತೆ ಮಾಡಿಕೊಳ್ಳಬಲ್ಲನು.

ಆದ್ದರಿಂದಲೇ ವಿಧಿನಿಷೇಧಗಳಿಗೆ ಆತನು ವಿಷಯನಲ್ಲವೆಂದು ಶಾಸ್ತ್ರಸಿದ್ಧಾಂತವು. ಮತ್ತೊಂದು ವಿಧವಾಗಿ ಯೋಚಿಸಿ ನೋಡೋಣ. ರಾಸಕ್ರೀಡಾಕಾಲದಲ್ಲಿ ಇಬ್ಬರಿಬ್ಬರು ಸ್ತ್ರೀಯರ ಮಧ್ಯದಲ್ಲಿ ಒಬ್ಬೊಬ್ಬ ಕೃಷ್ಣನಂತೆ ಅನೇಕಸ್ತ್ರೀಯರೂ ಅನೇಕ ಕೃಷ್ಣರೂ ಇದ್ದಂತೆ ಹೇಳಲ್ಪಟ್ಟಿದೆ. ಅವರೆಲ್ಲರ ಮಧ್ಯದಲ್ಲಿ ಯಾರ ಸಂಬಂಧವೂ ಇಲ್ಲದ ಮತ್ತೊಬ್ಬ ಕೃಷ್ಣನು ಗಾನ ಮಾಡುತ್ತ ಇದ್ದಂತೆಯೂ ತಿಳಿದು ಬರುತ್ತದೆ. ಇವರಲ್ಲಿ ಯಾವ ಕೃಷ್ಣನು ಅಧರ್ಮ ಪ್ರವೃತ್ತನೆಂದು ನಿರ್ಣಯ ಮಾಡಬಹುದು? ಇದನ್ನು ಯೋಚಿಸುವುದರಿಂದಲೂ, ಕೃಷ್ಣನಿಂದ ನಡೆಸಲ್ಪಟ್ಟ ಲೀಲೆಗಳೆಲ್ಲವೂ ಅಮಾನುಷಗಳೇ ಆಗಿರುವುದರಿಂದ ಆತನು ಸರ್ವಶಕ್ತನಾದ ಭಗವಂತನಲ್ಲದೆ ಬೇರೆಯಲ್ಲವಾಗಿ, ಆತನ ವಿಷಯದಲ್ಲಿ ಯಾವ ಸಂದರ್ಭದಲ್ಲಿಯೂ ಹೇಯಬುದ್ಧಿಯು ಮಾಡತಕ್ಕದ್ದಲ್ಲವು. ಮತಾಂತರ ಪ್ರವಿಷ್ಟರು ಇಷ್ಟು ವಿಚಾರವನ್ನು ನಡೆಸಿ ಹೇಳನವನ್ನು ಮಾಡತಕ್ಕವರಲ್ಲವಾದುದರಿಂದಲೂ ಉಪವಾಸಮಾಡಿ ಅನ್ಯರ ಮನಸ್ಸನ್ನು ಕಲಕುವುದೇ ಅವರ ಮುಖ್ಯೋದ್ದೇಶ್ಯವಾದುದರಿಂದಲೂ, ಇದಕ್ಕೋಸ್ಕರ ರಾಮಕೃಷ್ಣಾದಿಗಳ ವಿಗ್ರಹಗಳನ್ನು ಆರಾಧಿಸುವುದು ಅವಿಚಾರರಮಣೀಯವೆಂದು ಅಭಿಪ್ರಾಯ ಪಡುವುದು ಉಚಿತವಲ್ಲವು.

ನಾಲ್ಕನೆಯ ಕೋಟಿಯು ನಿಲ್ಲತಕ್ಕದ್ದೇ ಅಲ್ಲ. ದೇವರು ಸರ್ವವ್ಯಾಪಿಯೆಂದು ಹೇಳತಕ್ಕವರು. ಸರ್ವ ಎಂಬುದರ ಅಂತರ್ಗತವಾದ ಮೃಚ್ಛಿಲಾದಿಗಳಲ್ಲಿ ಚೈತನ್ಯವಿಲ್ಲ ವೆಂತಲೂ ಅವು ಜಡವೆಂತಲೂ ಹೇಳುವುದು ಹೇಗೆ? ಈಶ್ವರಭಾವನೆಯಿಂದ ನಾವು ಎಲ್ಲಿ ಆತನನ್ನು ಪೂಜಿಸಿದರೂ, ಭಜಿಸಿದರೂ, ಸರ್ವವ್ಯಾಪಕನಾದ ಆತನು ತಿಳಿದುಕೊಳ್ಳುವ ಸಾಮರ್ಥ್ಯವುಳ್ಳವನಾದ್ದರಿಂದ, ನಾವು ಮಾಡತಕ್ಕ ಪ್ರತಿಯೊಂದು ಸತ್ಕಾರವೂ ಆತನ ವಿಷಯವಾಗಿಯೇ ಇರುವುದರಿಂದ, ಆತನೇ ಅದಕ್ಕೆ ಅನುರೂಪವಾದ ಫಲವನ್ನು

ಕೊಡುತ್ತಾನಾಗಿ, ವಿಗ್ರಹಾರಾಧನೆಯು ಮಂದಾಧಿಕಾರಿಗಳಿಗೆ ಅತ್ಯಾವಶ್ಯಕವಾದುದೆಂದು ಶಾಸ್ತ್ರದಿಂದಲೂ ಯುಕ್ತಿಗಳಿಂದಲೂ ಸಿದ್ಧಿಸುವುದರಿಂದ ವಿಗ್ರಹಾರಾಧನೆಯು ಕರ್ತವ್ಯವು ಎಂದು ಶ್ರೀ ಶ್ರೀಗಳವರು ಅಪ್ಪಣೆ ಕೊಡಿಸಿದರು. ಆ ಕಾಲದಲ್ಲಿ ಶ್ರೀಗಳವರ ವಾಗ್ಧೋರಣೆಯನ್ನೂ, ಅವರಿಗಿರತಕ್ಕ ಜ್ಞಾನವನ್ನೂ, ಅವರ ಪ್ರತಿಭೆಯನ್ನೂ, ಬೋಧನ ಸಾಮರ್ಥ್ಯವನ್ನೂ, ಅವರಿಗೆ ವೇದಶಾಸ್ತ್ರಗಳ ವಿಷಯದಲ್ಲಿದ್ದ ನಂಬಿಕೆಯನ್ನೂ ಪ್ರಭುಗಳು ಮತ್ತು ಪಂಡಿತ ಪಾಮರರೂ ಕೂಡ ತಿಳಿದು ಆನಂದಮಗ್ನರಾದರು.

ಅದೇ ಸಮಯದಲ್ಲಿ ಬಾಲ್ಯವಿವಾಹದಿಂದ ಹೆಚ್ಚಾದ ಅನರ್ಥಗಳುಂಟಾಗುವುವೆಂತಲೂ, ಈ ನಿರ್ಬಂಧಕ್ಕೆ ಒಳಪಟ್ಟ ಜನರು ಬಹಳ ವಿಧವಾದ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗಿರುವುದೆಂತಲೂ, ಈ ಕಾರಣದಿಂದ ಬಾಲ್ಯವಿವಾಹ ನಿರೋಧಕವಾದ ರಾಜಕೀಯ ಶಾಸನವನ್ನುಂಟುಮಾಡಿ ಸರ್ಕಾರದವರು ಬಾಲ್ಯವಿವಾಹವನ್ನು ನಿರೋಧಿಸುವುದು ಆವಶ್ಯಕವೆಂತಲೂ ದೇಶೀಯ ಜನರಿಂದ ಪ್ರಾರ್ಥನೆಯು ತರಲ್ಪಟ್ಟು ಮಹಾರಾಜರ ಸರ್ಕಾರದವರ ಆಲೋಚನೆಯಲಿತ್ತು. ಈ ಸಂದರ್ಭದಲ್ಲಿ ಹಿಂದೂ ಧರ್ಮಶಾಸ್ತ್ರ ಪ್ರಮಾಣಗಳನ್ನು ಅನುಸರಿಸಿ ವಿಚಾರ ನಡೆಸಿ ಶಾಸ್ತ್ರ ವಿರೋಧವಿಲ್ಲದಂತೆಯೂ, ಜನಗಳಿಗೆ ಅನುಕೂಲಿಸುವಂತೆಯೂ ಶ್ರೀ ಸ್ವಾಮಿಗಳವರ ಅಭಿಪ್ರಾಯವನ್ನು ಪಡೆದು ಕಾನೂನನ್ನು ಮಾಡತಕ್ಕದ್ದೆಂದು ಆಸ್ತಿಕ ಶಿಖಾಮಣಿಗಳಾದ ಚಾಮರಾಜ ಪ್ರಭುಗಳವರು ತಮ್ಮ ಅಮಾತ್ಯರಿಗೆ ಅಪ್ಪಣೆ ಮಾಡಿದರು. ಪ್ರಭುಗಳವರ ಅಭಿಪ್ರಾಯವನ್ನು ದಿವಾನ್ ಶೇಷಾದ್ರಯ್ಯರವರು ಶ್ರೀಗಳವರಲ್ಲಿ ತಿಳಿಸಿಕೊಂಡರು. ಧರ್ಮಪರಿಪಾಲನ ವಿಷಯದಲ್ಲಿ ಪ್ರಭುಗಳಿಗಿದ್ದ ಆದರವನ್ನೂ, ಅವರ ನಂಬಿಕೆಯನ್ನೂ ಶ್ರೀಗಳವರು ತಿಳಿದು ಬಹಳ ತೃಪ್ತಿಯನ್ನು ಹೊಂದಿದರು. ಒಂದು ದಿನ ಮಧ್ಯಾಹ್ನ ಮೂರು ಗಂಟೆಗೆ ಮೊದಲಾಗಿ ರಾತ್ರಿ ಒಂಬತ್ತು ಗಂಟೆಯ ಪರ್ಯಂತ ಶ್ರೀ ಮಠದಲ್ಲಿ ಉಭಯ ಸಂಸ್ಥಾನದ ಪಂಡಿತರುಗಳೂ, ರಾಜಕೀಯ ಮುಖ್ಯಾಧಿಕಾರಿಗಳೂ ಶ್ರೀಗಳವರ ಸನ್ನಿಧಾನದಲ್ಲಿ ಸಭೆ ಸೇರಿ ಶಾಸ್ತ್ರವಿಚಾರವನ್ನು ನಡೆಸಿದರು. ವಿಚಾರಾನಂತರದಲ್ಲಿ ಗರ್ಭಾಷ್ಟಮವರ್ಷಕ್ಕೆ ಮೊದಲು ಬಾಲೆಯರಿಗೆ ವಿವಾಹವನ್ನು ನಡೆಸುವುದೂ, ಐವತ್ತು ವರ್ಷದ ವಯಸ್ಸಾದ ಬಳಿಕ ಪುರುಷರು ವಿವಾಹವನ್ನು ಮಾಡಿಕೊಳ್ಳುವುದೂ ಅಸಾಧುವೆಂದು ರಾಜಶಾಸನವನ್ನು ಮಾಡಿ ಬಾಲ್ಯವಿವಾಹವನ್ನು ನಿರೋಧಿಸಬಹುದೆಂಬುದಾಗಿ ಶ್ರೀಗಳವರು ತಮ್ಮ ಅಭಿಪ್ರಾಯವನ್ನು ಸೂಚಿಸಿ ಶ್ರೀಮುಖದಿಂದಲೂ ತಮ್ಮ ಅನುಮತಿಯನ್ನು ಕೊಟ್ಟರು. ಈ ಅಭಿಪ್ರಾಯವು ಆಗಿನ ಸಂದರ್ಭದಲ್ಲಿ ಸರ್ವಸಮ್ಮತವಾಗಿಯೇ ಇದ್ದುದರಿಂದ ಬಾಲೆಯರುಗಳಿಗೆ ಎಂಟು ವರ್ಷಗಳು ಪೂರ್ಣವಾಗುವುದಕ್ಕೆ ಮುಂದಾಗಿಯೂ, ಪುರುಷರಿಗೆ ಐವತ್ತು ವರ್ಷಗಳ ವಯಸ್ಸಾದ

ಮೇಲೆಯೂ ವಿವಾಹವನ್ನು ತಮ್ಮ ರಾಜ್ಯದಲ್ಲಿ ನಡೆಸಕೂಡದೆಂದು ರಾಜಶಾಸನದ ಮೂಲಕ ಬಾಲ್ಯವಿವಾಹವು ನಿರೋಧಿಸಲ್ಪಟ್ಟಿತು. ಮೇಲಿನ ಕಾನೂನನ್ನು ಮತ್ತೆ ಬದಲಾಯಿಸಿ ವಯಃಪರಿಮಿತಿಯನ್ನು ಹೆಚ್ಚಿಸಬೇಕೆಂದು ಇದುವರೆಗೂ ಎಷ್ಟು ಜನರು ಎಷ್ಟು ಸಾರಿ ತಿಳಿಸಿಕೊಳ್ಳುತ್ತಲಿದ್ದರೂ, ಈ ವಿಷಯದಲ್ಲಿ ಇತರ ಹಿಂದೂ ರಾಜರುಗಳು ಶಾಸನಗಳನ್ನು ಕಲ್ಪಿಸಿ ಅವುಗಳನ್ನು ಅನುಷ್ಠಾನದಲ್ಲಿ ತಂದಿದ್ದರೂ, ವೇದಶಾಸ್ತ್ರಗಳಲ್ಲಿ ಸಂಪೂರ್ಣವಾದ ನಂಬಿಕೆಯೂ, ಧರ್ಮಸೂಕ್ಷ್ಮಗಳನ್ನೂ ಲೋಕಹಿತವನ್ನೂ ತಿಳಿದಿದ್ದ ಮಹನೀಯರ ವಿಷಯದಲ್ಲಿ ಇರತಕ್ಕ ಗೌರವಬುದ್ಧಿಯೂ ನಮ್ಮ ನಾಲ್ವಡಿ ಕೃಷ್ಣರಾಜ ಪ್ರಭುಗಳವರಲ್ಲಿ ಸ್ಥಿರವಾಗಿ ನೆಲೆಗೊಂಡಿರುವುದರಿಂದ ಇವರು ಅವಿಚಾರರಮಣೀಯವಾದ ಜನಗಳ ಪ್ರಾರ್ಥನೆಯನ್ನು ಅನುಷ್ಠಾನಕ್ಕೆ ತರಲು ಇದುವರೆಗೂ ಅವಕಾಶವನ್ನು ಕೊಟ್ಟಿರುವುದಿಲ್ಲ.

ಒಂದು ಸಮಯದಲ್ಲಿ ಹೂಣ ವಿದ್ಯಾವಿಶಾರದರಾಗಿಯೂ ಲೌಕಿಕ ವ್ಯವಹಾರದಲ್ಲಿ ಅಸಾಧಾರಣವಾದ ಸಾಮರ್ಥ್ಯವನ್ನು ಸಂಪಾದಿಸಿದವರಾಗಿಯೂ, ಮೈಸೂರು ಸಂಸ್ಥಾನದಲ್ಲಿ ಮುಖ್ಯಾಧಿಕಾರಿಗಳಾಗಿಯೂ ಇದ್ದ ದಿವಾನ್ ಶೇಷಾದ್ರಯ್ಯರವರು, ಕೌನ್ಸಿಲರ್ ಚಂಚಲರಾವು ಪಂತುಲುರವರು, ಆನಂದರಾಯರು, ಜಡ್ಜಿ ನರಹರಿರಾಯರು ಇವರೇ ಮೊದಲಾಗಿ ಸುಮಾರು ನೂರು ಜನರಿಗೆ ಮೇಲ್ಪಟ್ಟ ಲೌಕಿಕ ಮಹಾಜನರು ಶ್ರೀಗಳವರ ದರ್ಶನಕ್ಕೋಸ್ಕರ ಗುಂಪು ಸೇರಿ ಮಠಕ್ಕೆ ಬಂದರು. ಶ್ರೀಗಳವರು ತಮ್ಮಲ್ಲಿಗೆ ಬಂದ ಶಿಷ್ಯರನ್ನು ಅತ್ಯಾದರದಿಂದ ಬರಮಾಡಿಕೊಂಡು ಅವರುಗಳಿಗೆ ಧರ್ಮಸೂಕ್ಷ್ಮಗಳನ್ನು ಕುರಿತು ಬೋಧನೆ ಮಾಡಿದರು. ಆಗ ಅಧಿಕಾರಿಗಳು ತಮ್ಮ ಸಮಯ ಬಂಧ (ಸಂಕೇತ)ವನ್ನು ಅನುಸರಿಸಿ ಕೆಲವು ಸಂದೇಹ ವಿಷಯಗಳನ್ನು ಶ್ರೀ ಸ್ವಾಮಿಗಳವರಲ್ಲಿ ತಿಳಿಯಪಡಿಸಿದರು. ಅವುಗಳಲ್ಲಿ ಮುಖ್ಯವಾದ ವಿಷಯವೇನೆಂದರೆ : ಹಿಂದೂ ಧರ್ಮಶಾಸ್ತ್ರಗಳೆಲ್ಲವೂ ಹಿಂದೂಸ್ಥಾನದಲ್ಲಿರುವ ಆಸ್ತಿಕ ಜನಗಳ ಪರಿಪಾಲನೆಗಾಗಿ ಮಹರ್ಷಿಗಳಿಂದ ಕಲ್ಪಿಸಲ್ಪಟ್ಟು ಆಯಾ ಕಾಲದಲ್ಲಿ ರಾಷ್ಟ್ರ ಪರಿಪಾಲನೆಯನ್ನು ಮಾಡುವ ಹಿಂದೂ ರಾಜರುಗಳಿಂದ ವಿಶೇಷವಾಗಿ ಆದರಿಸಲ್ಪಟ್ಟು ಬಹುದೀರ್ಘ ಕಾಲದಿಂದ ಪ್ರಚಾರದಲ್ಲಿ ತರಲ್ಪಟ್ಟಿವೆ. ವಿದೇಶೀಯರ ಪ್ರಭುತ್ವವು ಹಿಂದೂಸ್ಥಾನದಲ್ಲಿ ನೆಲೆಗೊಳ್ಳುವ ಪರ್ಯಂತ ಈ ಜನಗಳ ಲೌಕಿಕ ಪಾರಮಾರ್ಥಿಕ ವ್ಯವಹಾರಗಳೆಲ್ಲವೂ ಬಹಳಮಟ್ಟಿಗೆ ಧರ್ಮಶಾಸ್ತ್ರಗಳನ್ನನುಸರಿಸಿಯೇ ನಡೆಸಲ್ಪಡುತ್ತಿದ್ದವು. ವಿದೇಶೀಯರ ಪ್ರಭುತ್ವವು ನಮ್ಮ ದೇಶಕ್ಕೆ ಬಂದನಂತರ ಕೆಲವು ವಿಷಯಗಳಲ್ಲಿ ಮಾತ್ರ ಧರ್ಮಶಾಸ್ತ್ರಗಳಲ್ಲದೆ ಹಿಂದೂ ಜನರ ತಾತ್ಕಾಲಿಕವಾದ ಆಚರಣೆಗಳನ್ನೂ ಬಹುಮಟ್ಟಿಗೆ ಅನುಸರಿಸಿ ಭಾಷಾಂತರದಲ್ಲಿ ಕೆಲವು ಕಾನೂನುಗಳನ್ನು ಕಲ್ಪಿಸಿ ಅನುಷ್ಠಾನದಲ್ಲಿ ತಂದಿದ್ದರೂ, ಮಿಕ್ಕ ಅನೇಕ ವಿಷಯಗಳಲ್ಲಿ ಧರ್ಮಶಾಸ್ತ್ರಗಳನ್ನೇ

ರಾಜಶಾಸನದಂತೆ ಭಾವಿಸಿ ಎಲ್ಲಾ ಜನರೂ ಈ ಶಾಸ್ತ್ರವನ್ನೇ ಅನುಸರಿಸಿ ನಡೆಯಬೇಕಾದ ನಿರ್ಬಂಧವಿರುವುದು. ಈ ಧರ್ಮಶಾಸ್ತ್ರಗಳು ಬಹಳ ಕಾಲಕ್ಕೆ ಹಿಂದೆ ಮಾಡಲ್ಪಟ್ಟವುಗಳು. ಈಚೆಗೆ ಯಾವ ಸಂದರ್ಭದಲ್ಲಿಯೂ ಆಯಾ ಕಾಲಕ್ಕನುಗುಣವಾಗಿ ಬದಲಾಯಿಸಲ್ಪಟ್ಟಂತೆ ತೋರುವುದಿಲ್ಲ. ಈಗಿನ ಕಾಲದ ಜನರಿಗೆ ಈ ಧರ್ಮಶಾಸ್ತ್ರಗಳನ್ನು ಅನುಸರಿಸಿ ನಡೆಯಲು ಸುತರಾಂ ಸಾಧ್ಯವೇ ಇಲ್ಲ. ರಾಜರುಗಳು ಜನಗಳ ನೆಮ್ಮದಿಗೆ ಕುಂದಕವಿಲ್ಲದಂತೆ ರಾಷ್ಟ್ರಪರಿಪಾಲನೆಯನ್ನು ಮಾಡುವುದಕ್ಕೋಸ್ಕರ ತಮ್ಮಿಂದ ಕಲ್ಪಿಸಲ್ಪಟ್ಟಿರುವ ಕಾನೂನುಗಳಲ್ಲಿ ಕಾಲವನ್ನೂ ಜನಗಳ ರೀತಿಯನ್ನೂ ಅನುಸರಿಸಿ, ಆಗಿಂದಾಗ್ಗೆ ತಿದ್ದುಪಾಡುಗಳನ್ನು ಮಾಡಿದಂತೆ ಹಿಂದಿನ ರಾಜರ ಚರಿತ್ರೆಗಳಿಂದಲೂ, ಅನುಭವದಿಂದಲೂ ಕಂಡುಬಂದಿದೆ. ಅದರಂತೆ ಲೋಕ ಕ್ಷೇಮಾರ್ಥವಾಗಿ ಕರುಣಾನಿಧಿಗಳಾದ ಮಹರ್ಷಿಗಳಿಂದ ರಚಿಸಲ್ಪಟ್ಟಿರುವ ಧರ್ಮಶಾಸ್ತ್ರಗಳನ್ನು ಸುಲಭರೀತಿಯಿಂದ ಬದಲಾಯಿಸಲು, ಆ ಮಹರ್ಷಿಗಳಿಗೆ ಸಮಾನರಾಗಿ ಸರ್ವಲೋಕಮಾನ್ಯರಾದ ಶ್ರೀ ಸ್ವಾಮಿಗಳವರೊಬ್ಬರೇ ಸಮರ್ಥರೆಂಬ ಭಾವನೆಯು ನಮ್ಮಗಳಿಗೆ ದೃಢವಾಗಿರುವುದರಿಂದ, ಕಾಲಾನುಗುಣವಾಗಿ ಹಿಂದಿನ ಧರ್ಮಶಾಸ್ತ್ರಗಳಲ್ಲಿ ಆವಶ್ಯಕವಾದ ತಿದ್ದುಪಾಡುಗಳನ್ನು ಮಾಡಿಕೊಡಬೇಕು ಎಂದು ಕೇಳಿಕೊಂಡ ಶಿಷ್ಯರ ಪ್ರಾರ್ಥನೆಯನ್ನು ಸಾವಧಾನವಾಗಿ ಕೇಳಿ ಶ್ರೀಗಳವರು ತಮ್ಮ ಅಭಿಪ್ರಾಯವನ್ನು ಆ ಸಭೆಯಲ್ಲಿ ಈ ರೀತಿ ವ್ಯಕ್ತಗೊಳಿಸಿದರು. ಹಿಂದಿನ ಮಹರ್ಷಿಗಳಲ್ಲಿದ್ದ ಯೋಗ್ಯತೆ, ಜ್ಞಾನ, ಅನುಷ್ಠಾನ, ಶಕ್ತಿ ಇವು ಮೊದಲಾದ ಗುಣಗಳಲ್ಲಿ ಒಂದಾದರೂ ನಮ್ಮಲ್ಲಿ ಇಲ್ಲದಿದ್ದರೂ, ಆ ಮಹರ್ಷಿಗಳಿಗೆ ಸಮರೆಂದು ನಮ್ಮಲ್ಲಿ ಜನಗಳಿಗೆ ಭಾವನೆಯಿರುವುದು ಬಹಳ ಸಂತೋಷಕರವೇ ಸರಿ. ಜನಗಳು ಯಾವ ಪದಾರ್ಥದಲ್ಲಿ ಯಾವ ಭಾವನೆಯನ್ನು ದೃಢತರವಾಗಿ ಮಾಡುತ್ತಾರೋ ಆ ಪದಾರ್ಥದಲ್ಲಿ ಆ ಭಾವನೆಗೆ ತಕ್ಕಗುಣವು ಇರಬೇಕೆಂಬ ನಿರ್ಬಂಧವೇನೂ ಇಲ್ಲ. ಆದರೆ ಭಾವನಾನುಗುಣವಾಗಿ ಫಲಪ್ರಾಪ್ತಿಯಾಗುವುದರಲ್ಲಿ ಸಂದೇಹವೇನೂ ಇರುವುದಿಲ್ಲ. ಯಾವ ದೃಷ್ಟಾಂತವನ್ನು ಮುಂದಿರಿಸಿಕೊಂಡು ನೀವುಗಳು ಧರ್ಮಶಾಸ್ತ್ರಗಳಲ್ಲಿ ತಿದ್ದುಪಾಡುಗಳನ್ನು ಮಾಡಿಕೊಡಬೇಕೆಂದು ಕೇಳಿಕೊಂಡಿರುವಿರೋ ಆ ದೃಷ್ಟಾಂತವು ವಿಷಮವಾದ್ದರಿಂದ ಪ್ರಕೃತ ವಿಷಯದಲ್ಲಿ ಸಮನ್ವಯವಾಗುವುದಿಲ್ಲ. ರಾಜಕೀಯವಾದ ನಿಬಂಧನೆಗಳನ್ನು ಕಲ್ಪಿಸತಕ್ಕ ಸಭಾಸದರುಗಳು ವಿದ್ಯಾವಂತರಾಗಿಯೂ, ಪೂರ್ವಾಪರ ವಿಚಾರದಕ್ಷರಾಗಿಯೂ ದೂರದೃಷ್ಟಿಯುಳ್ಳವರಾಗಿಯೂ ಇರುವರೆಂಬ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲ. ಅವರು ತಮ್ಮ ಹಿಂದಿನ ಕಾಲದ ರೀತಿಯನ್ನು ಹಿಂದಿನ ಚರಿತ್ರೆಗಳ ಸಹಾಯದಿಂದ ತಿಳಿದುಕೊಂಡು, ಹಿಂದಿನ ರೀತಿಗಳ ಬದಲಾವಣೆಗೆ ಒದಗಿದ ಕಾಲವನ್ನು ಕಂಡುಹಿಡಿದು ವರ್ತಮಾನಕಾಲದಲ್ಲಿ ಮಾಡತಕ್ಕ ನಿಬಂಧನೆಗಳು

ಭವಿಷ್ಯತ್ಕಾಲದಲ್ಲಿ ಎಂದಿನವರೆಗೆ ಬದಲಾಯಿಸದಂತೆ ಇರಬಹುದೆಂಬುದನ್ನು ಊಹಿಸಿ ನಿಬಂಧನೆಗಳನ್ನು ಏರ್ಪಡಿಸುವರು. ಇದಕ್ಕಿಂತಲೂ ಹೆಚ್ಚಾದ ಸಾಮರ್ಥ್ಯವು ಅವರಿಗೆ ಇರಬಹುದೆಂಬುದನ್ನು ಒಪ್ಪಿಕೊಳ್ಳಲು ಅವಕಾಶವಿರುವುದಿಲ್ಲವಾಗಿ ಹಾಗೆ ಮಾಡಿದ ರಾಜಕೀಯವಾದ ನಿಬಂಧನೆಗಳಲ್ಲಿ ಕಾಲಾನುಗುಣವಾಗಿಯೂ, ತತ್ಕಾಲದಲ್ಲಿರುವ ಜನಗಳ ಶಕ್ತಿಯನ್ನು ಅನುಸರಿಸಿಯೂ ತಿದ್ದುಪಾಡುಗಳನ್ನು ಮಾಡುವುದು ಯುಕ್ತವಾಗಿಯೇ ಇರುವುದು.

ಆದರೆ ಹಿಂದೂ ಧರ್ಮಶಾಸ್ತ್ರಗಳನ್ನು ಮಾಡಿರುವ ಮಹರ್ಷಿಗಳು ಸಾಮಾನ್ಯರಲ್ಲ. ಅವರು ಯೋಗಶಕ್ತಿಯಿಂದ ಕಾಲತ್ರಯಜ್ಞಾನಿಗಳೆನಿಸಿಕೊಂಡಿದ್ದರು. ಆದ್ದರಿಂದ ಭವಿಷ್ಯತ್ಕಾಲದ ಸ್ವಭಾವವನ್ನೂ ಜನಗಳ ಶಕ್ತಿಯನ್ನೂ ಊಹೆಯಿಂದ ತಿಳಿಯಬೇಕಾದ ಆವಶ್ಯಕತೆಯು ಅವರಿಗಿರಲಿಲ್ಲ. ಆ ಮಹರ್ಷಿಗಳು ಧರ್ಮಶಾಸ್ತ್ರಗಳನ್ನು ಕಲ್ಪಿಸಿದಾಗಲೇ ಆಯಾ ಕಾಲದ ಜನಗಳ ಶಕ್ತಿಗೆ ತಕ್ಕಂತೆ ಧರ್ಮಗಳನ್ನು ಏರ್ಪಡಿಸಿರುವರೇ ಹೊರತು, ಎಲ್ಲಾ ಕಾಲಗಳಲ್ಲಿಯೂ ಒಂದೇ ವಿಧವಾದ ಧರ್ಮವು ಆಚರಿಸತಕ್ಕದ್ದೆಂತಲೂ, ಅದಕ್ಕೆ ವಿರುದ್ಧವಾದ ಆಚರಣೆಯಿಂದ ಜನಗಳು ದೋಷಿಗಳಾಗುವರೆಂತಲೂ ಹೇಳಿರುವುದಿಲ್ಲ. ಕೃಷಿಕರ್ಮವು ಬ್ರಾಹ್ಮಣನಿಗೆ ಕೃತತ್ರೇತಾದ್ವಾಪರಗಳಲ್ಲಿ ಸಹಜ ಧರ್ಮವೆಂದು ಹೇಳಿಲ್ಲ. ಕಲಿಯುಗದಲ್ಲಿ ಬ್ರಾಹ್ಮಣನಿಗೆ ಸ್ವಯಂಕೃಷಿ ಮಾಡುವುದು ಧರ್ಮವೆಂದು ಹೇಳಿರುವರು. ಇತರ ಯುಗಗಳಲ್ಲಿ ಸ್ವರ್ಣಸ್ತೇಯ, ಸುರಾಪಾನ, ಬ್ರಹ್ಮಹತ್ಯಾದಿ ಪಾತಕಗಳಿಗೆ ಮರಣಾಂತ ಪ್ರಾಯಶ್ಚಿತ್ತವು ಆಚರಿಸಲ್ಪಡತಕ್ಕದ್ದೆಂದೂ ಅಂತಹ ಮಹಾಪಾತಕಗಳು ಕಲಿಯುಗದಲ್ಲಿ ಅಲ್ಪ ಪ್ರಾಯಶ್ಚಿತ್ತಾನುಷ್ಠಾನದಿಂದ ನಿವೃತ್ತವಾಗುವುದೆಂದೂ ಹೇಳಿರುವರು. ಇದರಿಂದಲೇ ಆಯಾಕಾಲದಲ್ಲಿರುವ ಜನಗಳ ಶಕ್ತಿಗೆ ತಕ್ಕಂತೆ ಮಹರ್ಷಿಗಳು ಅನುಗ್ರಹ ಪೂರ್ವಕವಾಗಿ ನಿಬಂಧನೆಗಳನ್ನು ಕಲ್ಪಿಸಿರುವರೆಂದು ಸ್ಪಷ್ಟಪಡುವುದು.

ಮತ್ತೊಂದು ವಿದ್ಯಮಾನವನ್ನು ಯೋಚಿಸುವುದರಿಂದಲೂ ಮಹರ್ಷಿಗಳು ಭೂತಭವಿಷ್ಯತ್ಕಾಲ ಸಂಗತಿಗಳನ್ನು ತಿಳಿದಿದ್ದರೆಂಬ ವಿಷಯವು ಗೊತ್ತಾಗಬಹುದು. ಭಾರತಾದೀತಿಹಾಸಗಳನ್ನು ಹೇಳಿರುವ ವ್ಯಾಸಮಹರ್ಷಿಗಳು ಪ್ರಪಂಚಸ್ಥಿತಿಯು ಕೃತಾದಿ ಯುಗಗಳಲ್ಲಿ ಹೇಗಿತ್ತೆಂಬುದನ್ನೂ, ಕಲಿಯುಗದಲ್ಲಿ ಕೆಲವು ಕಾಲವು ಕಳೆದ ನಂತರ ಯಾವ ರೀತಿಗೆ ಬರಬಹುದೆಂಬ ಅಂಶವನ್ನೂ ಸೂಚಿಸಿರುವರು. ಭಾರತದಲ್ಲಿ ಹೇಳಿರುವ ರೀತಿಯನ್ನೂ ಪ್ರಕೃತದಲ್ಲಿ ಇರುವ ಪ್ರಪಂಚ ರೀತಿಯನ್ನೂ ಪರಸ್ಪರ ಹೋಲಿಸಿ ನೋಡಿದರೆ, ಅನೇಕ ವರ್ಷಗಳ ಹಿಂದೆ ಹೇಳಿರುವ ಸಂಗತಿಗಳಲ್ಲಿ ಕೆಲವು ಈಗ ತಾನೇ ಅನುಭವಕ್ಕೆ

ಬಂದದ್ದಾಗಿಯೂ, ಇನ್ನೂ ಅನೇಕ ವಿಷಯಗಳು ಮುಂದೆ ಸ್ವಲ್ಪ ಕಾಲದಲ್ಲಿಯೇ ನಮ್ಮ ಅನುಭವಕ್ಕೆ ಬರತಕ್ಕವುಗಳಾಗಿಯೂ ಇವೆ. ಈ ಭಾರತವನ್ನು ಬರೆದವರು ವ್ಯಾಸರಲ್ಲವೆಂತಲೂ ಭಾರತವು ಏಕಕರ್ತೃಕವಲ್ಲವೆಂತಲೂ ಭಿನ್ನ ಭಿನ್ನ ಕಾಲಗಳಲ್ಲಿ ಅನೇಕ ಕರ್ತೃಗಳಿಂದ ಬರೆಯಲ್ಪಟ್ಟದ್ದೆಂತಲೂ ಕಲಿಯುಗದ ಮಹನೀಯರ ಸಿದ್ಧಾಂತವೆಂದು ತಿಳಿದು ಬರುತ್ತೆ. ಅದು ಹೇಗಾದರೂ ಇರಲಿ. ಭಾರತ ಗ್ರಂಥವು ಯಾವ ಕಾಲದಲ್ಲಿ; ಯಾರಿಂದ ಬರೆವುದಕ್ಕೆ ಪ್ರಾರಂಭಿಸಲ್ಪಟ್ಟಿತ್ತು ? ಪ್ರಾರಂಭಿಸಿದವರು ಎಷ್ಟು ದೂರ ಬರೆದಿದ್ದರು? ಎರಡನೆಯ ಭಾರತ ಕರ್ತೃ ಯಾರು? ಅವರು ಯಾವಾಗ ಪ್ರಾರಂಭಿಸಿ ಎಲ್ಲಿಯವರೆಗೆ ಬರೆದರು ? ಈ ರೀತಿಯಲ್ಲಿ ಎಷ್ಟು ಸಾರಿ ಎಷ್ಟು ಜನರಿಂದ ಬರೆಯಲ್ಪಟ್ಟಿತ್ತು ? ಎಂಬ ವಿಷಯವು ಇನ್ನೂ ಈ ಯುಗದ ಮಹಾನುಭಾವರಿಂದ ನಿಷ್ಕರ್ಷಿಸಲ್ಪಟ್ಟಿರುವಂತೆ ತೋರಲಿಲ್ಲವಾಗಿ, ಹಾಗೆ ನಿಷ್ಕರ್ಷೆಯಾಗುವ ಪರ್ಯಂತ ನಮ್ಮ ಹಿಂದಿನವರು ಪರಂಪರಾಕ್ರಮದಿಂದ ನಮಗೆ ಕೊಟ್ಟಿರುವ ತಿಳುವಳಿಕೆಯಲ್ಲಿಯೇ ವಿಶ್ವಾಸವಿಟ್ಟು ಭಾರತವು ವ್ಯಾಸಮಹರ್ಷಿಗಳಿಂದ ರಚಿಸಲ್ಪಟ್ಟದ್ದೆಂದು ಒಪ್ಪಿಕೊಳ್ಳುವುದರಿಂದ ಅಪಾಯವೇನೂ ಬರುವಂತಿಲ್ಲ. ಮೇಲೆ ಹೇಳಿದಂತೆ ಭಾರತವು ಹುಟ್ಟಿದ ಕಾಲವಾಗಲಿ, ಕರ್ತೃಗಳಾಗಲಿ ಇದುವರೆಗೆ ನಿಷ್ಕರ್ಷಿಸಲ್ಪಡ ಲಿಲ್ಲವಾದ್ದರಿಂದ, ಈಗಿನವರು ತಿಳಿದಂತೆ ಭಾರತವು ಹುಟ್ಟಿದ್ದಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ಸಂದರ್ಭದಿಂದಲೂ ನಮ್ಮ ಹಿಂದಿನವರಿಗೆ ಮುಂದಿನ ಸಂಗತಿಯನ್ನು ತಿಳಿಯುವ ಸಾಮರ್ಥ್ಯವು ಇದ್ದಂತೆ ನಮ್ಮ ಈಗಿನ ಅನುಭವದಿಂದ ಒಪ್ಪಿಕೊಳ್ಳಬೇಕು. ಅಂಥವರು ದೊಡ್ಡವರೆಂತಲೂ ಜ್ಞಾನಿಗಳೆಂತಲೂ ನಾವು ಏಕೆ ಒಪ್ಪಿಕೊಳ್ಳಬಾರದು ?

ಇದರಿಂದ, ಕಾಲತ್ರಯಜ್ಞಾನಿಗಳಾದ ಮಹರ್ಷಿಗಳಿಂದ ಮುಂದಾಗಿಯೇ ಕಾಲವನ್ನೂ ಜನಗಳ ಸ್ಥಿತಿಯನ್ನೂ ತಿಳಿದು ಮಾಡಲ್ಪಟ್ಟಿರುವ ಧರ್ಮಶಾಸ್ತ್ರಗಳಲ್ಲಿ ತಿದ್ದುಪಾಡುಗಳನ್ನು ಅಲ್ಪಜ್ಞರಾದ ನಾವು ಮಾಡುವುದಕ್ಕೆ ಅವಕಾಶವು ಎಲ್ಲಿಯಿದೆ ? ಒಂದುವೇಳೆ, ಈಗಿನ ನಮ್ಮ ಬುದ್ಧಿಕೌಶಲದಿಂದಲೂ ಒದಗಿರುವ ಸಂದರ್ಭಗಳಿಂದಲೂ ಹಿಂದಿನ ಮಹರ್ಷಿಗಳನ್ನೂ - ಅವರ ಜ್ಞಾನವನ್ನೂ - ಅವರ ಸಾಮರ್ಥ್ಯವನ್ನೂ ಒಪ್ಪಿಕೊಳ್ಳುವುದಕ್ಕೆ ಅವಕಾಶವಿಲ್ಲವೆಂದು ನಾವು ಹೇಳಬಹುದು. ಈ ಕಾರಣದಿಂದ ಕಾಲಾನುಗುಣವಾಗಿ ಧರ್ಮಶಾಸ್ತ್ರಗಳನ್ನು ಬದಲಾಯಿಸಲು ಸಾಕಾದಷ್ಟು ಅವಕಾಶವಿರುವಂತೆಯೂ, ಆ ಕಾರ್ಯದಲ್ಲಿ ನಮ್ಮನ್ನು ಪ್ರವರ್ತಿಸಿ, ಅನುಕೂಲಪಡಿಸಿಕೊಡುವಂತೆಯೂ ನೀವುಗಳು ಕೇಳಬಹುದು. ಈಗಿನ ಕಾಲಸ್ಥಿತಿಯಿಂದ ಅವಿವೇಕಿ ಜನಗಳಿಗೆ ಪರದ್ರವ್ಯಾಪಹರಣ ಪರದಾರಾಭಿಮರ್ಶನಗಳಲ್ಲಿ ಅಪೇಕ್ಷೆಯುಂಟಾಗ ಬಹುದು. ಅಂತಹ ಜನರ ಸಂಘವೇ ಹೆಚ್ಚಾಗಿ ಅವರೆಲ್ಲರೂ ಸೇರಿ ಪರದ್ರವ್ಯಾಪಹಾರ ಪರದಾರಾಭಿಮರ್ಶನಾದಿಗಳು ದಂಡಾರ್ಹಗಳಲ್ಲವೆಂದು ರಾಜಕೀಯವಾದ ನಿಬಂಧನೆಗಳಲ್ಲಿ ತಿದ್ದುಪಾಡುಗಳನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸಿದರೆ ಬಹುಜನರ ಪ್ರಾರ್ಥನೆಯೆಂದು

ಅಂಗೀಕರಿಸಿ ರಾಜರು ಅದರಂತೆ ಕಾನೂನುಗಳನ್ನು ಬದಲಾಯಿಸಿಕೊಡುವರೋ ? ಹಾಗೆ ಬದಲಾಯಿಸಿದಲ್ಲಿ, ಅಂಥಾ ರಾಜರ ರಾಷ್ಟ್ರವು ಕ್ಷೇಮವಾಗಿರುವುದೋ ? ಆ ರಾಜರ ವರ್ತನವು ನ್ಯಾಯವೆಂದು ಸ್ತೋತ್ರಾರ್ಹವಾಗುವುದೋ ? ಆದ್ದರಿಂದ ದೀರ್ಘವಾಗಿ ವಿಚಾರಮಾಡಿ ಗುಣದೋಷಗಳನ್ನು ತಿಳಿದು ಯುಕ್ತಿಯುಕ್ತವಾದ ಸಲಹೆಗಳನ್ನು ಕೊಟ್ಟರೆ ಆ ವಿಷಯದಲ್ಲಿ ಪ್ರವರ್ತಿಸಬಹುದಲ್ಲದೆ, ಅವಿಚಾರದಿಂದ ಕೊಡತಕ್ಕ ಸಲಹೆಗಳಿಗೆ ಅವಕಾಶಕೊಟ್ಟು ಅದರಂತೆ ನಡೆದುಕೊಳ್ಳುವ ರಾಜನು ಲೋಕನಿಂದ್ಯನೇ ಆಗುವನು.

ಅದು ಹಾಗಿರಲಿ. ಈಗಿನ ನಿಮ್ಮ ಪ್ರಾರ್ಥನೆಯು ನಿಮ್ಮಗಳ ಆಚರಣೆಗೆ ತಕ್ಕಂತೆ ನೂತನವಾಗಿ ಶಾಸ್ತ್ರವನ್ನು ಬರೆದುಕೊಡಬೇಕೆಂಬುದಲ್ಲವೆ ! ಶಾಸ್ತ್ರವೆಂದರೇನು ? ಸ್ವೇಚ್ಛೆಯಿಂದ ನಿರಂಕುಶನಾಗಿ ಪ್ರವರ್ತಿಸುವ ಮನುಷ್ಯನನ್ನು ಅಂಕುಶಪ್ರಾಯವಾದ ನಿಯಮದಿಂದ ಹಿಡಿದು ನಿಲ್ಲಿಸತಕ್ಕದ್ದು ತಾನೇ ಶಾಸ್ತ್ರವೆಂಬ ಶಬ್ದದಿಂದ ತೋರುವ ಅರ್ಥವು ? ಇಂಥಾ ಶಾಸ್ತ್ರವು ಈಗ ಸಿದ್ಧವಾಗಿಯೇ ಇರುವುದಲ್ಲಾ ! ಆದರೆ ಈ ಶಾಸ್ತ್ರದ ನಿರ್ಬಂಧಕ್ಕೆ ಒಳಪಟ್ಟು ನಡೆವುದು ಅಸಾಧ್ಯವೆಂದು ನಿಮ್ಮಗಳ ಅಭಿಪ್ರಾಯವಾಗಿದೆ. ನಿಮ್ಮ ಪ್ರವರ್ತನೆಗೆ ತಕ್ಕಂತೆಯೂ, ಯಾವ ಸಂದರ್ಭದಲ್ಲಿಯೂ ನಿಮಗೆ ತಡೆಯನ್ನು ಮಾಡದಂತೆಯೂ ಇರುವ ಹಾಗೆ, ಶಾಸ್ತ್ರವೆಂದು ರೂಢವಾದ ಹೆಸರಿನಿಂದ ಒಂದು ಗ್ರಂಥವನ್ನು ನಾವು ಬರೆದುಕೊಟ್ಟಲ್ಲಿ, ನಿಮ್ಮ ಇಷ್ಟವು ಸಿದ್ಧಿಸಿದಂತಾಗುತ್ತೆ. ಅಂಥಾ ಗ್ರಂಥವನ್ನು ಬರೆದುಕೊಡುವ ನಮ್ಮ ವಿಷಯದಲ್ಲಿ ಮಹರ್ಷಿಸಮರೆಂದು ಗೌರವವನ್ನು ನೀವುಗಳು ಮಾಡುವಿರಿ. ಈ ಫಲಕ್ಕೋಸ್ಕರ ಬರೆದುಕೊಡುವ ಗ್ರಂಥಕ್ಕೆ ಶಾಸ್ತ್ರವೆಂದು ಹೆಸರನ್ನು ಇಟ್ಟ ಮಾತ್ರದಿಂದ ಎಂದಿಗೂ ಅದು ಶಾಸ್ತ್ರವಾಗಲಾರದು. ಶಾಸ್ತ್ರೀಯವಾದ ಅನುಷ್ಠಾನದಿಂದ ಬರತಕ್ಕ ಪ್ರಯೋಜನವೂ ಈ ನೂತನ ಗ್ರಂಥದಂತೆ ಅನುಷ್ಠಾನದಿಂದ ಬರಲಾರದು. ತತ್ಕಾಲದಲ್ಲಿ ನಮಗೆ ಕಷ್ಟವಾಗಿ ತೋರುವುದಾದರೂ ಪರಿಣಾಮದಲ್ಲಿ ಮಹಾಫಲವನ್ನೇ ಕೊಡತಕ್ಕವು ಗಳಾದುದರಿಂದ, ತಾತ್ಕಾಲಿಕ ವೃತ್ತಿಯನ್ನು ನಿರೋಧಿಸಿ ಸಾಧ್ಯವಾದ ಮಟ್ಟಿಗೆ ಶಾಸ್ತ್ರದಲ್ಲಿ ಹೇಳಿರುವ ಧರ್ಮಗಳನ್ನು ಆಚರಿಸುವುದೂ, ಅಧರ್ಮಗಳನ್ನು ಪೂರ್ಣವಾಗಿಯೂ ಆಚರಿಸದೆ ಬಿಡುತ್ತ ಬರುವುದೂ ಶ್ರೇಯಸ್ಕರವು. ಈ ರೀತಿಯಿಂದ ಶ್ರೀಗಳವರು ಹೇಳಿದ ಸಮಾಧಾನದ ಮೇಲೆ ಯಾರೊಬ್ಬರೂ ಆಕ್ಷೇಪಯುಕ್ತಿಗಳನ್ನು ಹೇಳುವಂತಿರಲಿಲ್ಲವಾಗಿ ಎಲ್ಲರೂ ಮೌನವನ್ನು ವಹಿಸಬೇಕಾಯಿತು.

ಈಗ್ಗೆ ಸುಮಾರು 30 ವರ್ಷಗಳ ಹಿಂದೆ ಧರ್ಮಶಾಸ್ತ್ರದಿಂದ ನಿರೋಧಿಸಲ್ಪಟ್ಟಿರುವ ಸಮುದ್ರಯಾನವನ್ನೂ ದ್ವೀಪಾಂತರವಾಸವನ್ನೂ ದಾಕ್ಷಿಣಾತ್ಯ ಬ್ರಾಹ್ಮಣರು ಈಗಿನಷ್ಟು ನಿಶ್ಶಂಕವಾಗಿ ಮಾಡುತ್ತಿರಲಿಲ್ಲವು. ಅದುವರೆಗೆ ನಮ್ಮ ದೇಶೀಯರಾದ ಬ್ರಾಹ್ಮಣರಲ್ಲಿ

ಒಬ್ಬರಿಬ್ಬರು ಸಮುದ್ರಯಾನವನ್ನೂ, ದ್ವೀಪಾಂತರವಾಸವನ್ನೂ ಮಾಡಿ ಬಂದಿದ್ದಂತೆಯೂ, ಅವರು ಬ್ರಾಹ್ಮಣರ ಸಂಘದಿಂದ ದೂರಪಡಿಸಲ್ಪಟ್ಟಂತೆಯೂ ತಿಳಿದು ಬಂದಿದೆಯಲ್ಲದೆ ಇತರರು ಈ ವಿಷಯದಲ್ಲಿ ಪ್ರವೃತ್ತರಾಗಿದ್ದಂತೆ ಕಂಡು ಬಂದಿಲ್ಲವು. ಶ್ರೀಗಳವರು ಮೈಸೂರು ರಾಜಧಾನಿಯಲ್ಲಿ ವಸತಿ ಮಾಡಿದ್ದ ಕಾಲದಲ್ಲಿ ಶ್ರೀಗಳವರ ಅನುಮತಿಯನ್ನು ಪಡೆದು ಸಮುದ್ರಯಾನ ಮಾಡಿ ದ್ವೀಪಾಂತರಗಳಿಗೆ ಹೋಗಿ ಬರಬೇಕೆಂಬ ಉದ್ದೇಶವು ಮೈಸೂರು ದೇಶದಲ್ಲಿ ವ್ಯಪದಿಷ್ಟರಾಗಿಯಿದ್ದ ಕೆಲವರ ಮನಸ್ಸಿನಲ್ಲಿದ್ದಂತೆ ತೋರುತ್ತಲಿತ್ತು. ಈ ಸಂದರ್ಭದಲ್ಲಿ ಆ ವಿಧವಾದ ತಮ್ಮ ಉದ್ದೇಶಕ್ಕೆ ಕಾಲರೀತಿಯಿಂದ ಉಂಟಾಗಿರುವ ಆವಶ್ಯಕತೆಯನ್ನೂ ತೋರಿಸಿ ಆ ಜನರು ಶ್ರೀಗಳವರಲ್ಲಿ ತಿಳಿಸಿಕೊಂಡುದೇನೆಂದರೆ - ''ನಮ್ಮ ಹಿಂದೂಸ್ಥಾನವು ವೈದೇಶಿಕ ಪ್ರಭುಗಳ ಆಳ್ವಿಕೆಗೆ ಒಳಪಟ್ಟಿರುವುದು. ಅವರು ಚಕ್ರವರ್ತಿಗಳಾಗಿಯೂ ನಮ್ಮ ದೇಶದ ರಾಜರುಗಳು ಸಾಮಂತರಾಜರಾಗಿ ಅವರ ಅಧೀನರಾಗಿಯೂ ಏರ್ಪಟ್ಟಿರುವರು. ಇದರಿಂದ ನಮ್ಮ ದೇಶದ ಸಂಪತ್ತು, ಪರಾಕ್ರಮ, ಸ್ವಾತಂತ್ರ್ಯಗಳೆಲ್ಲವೂ ಸಾರ್ವಭೌಮರ ಹಸ್ತಗತವಾಗಿರುವುವೆಂಬುದು ಸಹಜವಾಗಿರುವುದಷ್ಟೆ ? ಈಗಿನ ಸಂದರ್ಭಗಳಿಂದ ದೇಶೀಯ ವಿದ್ಯಾಭ್ಯಾಸದಿಂದಲೂ, ದೇಶಭಾಷಾ ಪರಿಚಯದಿಂದಲೂ ವ್ಯವಹಾರಗಳನ್ನು ನಡೆಸುವುದು ಅಸಾಧ್ಯವಾಗಿರುವುದು ಪ್ರಭುತ್ವ ಪರಿವರ್ತನದಿಂದ ಹೊಸದಾಗಿ ಅಭ್ಯಸ್ತವಾದ ನಮ್ಮ ದೇಶೀಯರ ವರ್ತನಗಳಿಗೆ ಬೇಕಾಗಿರುವ ಅನೇಕ ಪದಾರ್ಥಗಳು ದ್ವೀಪಾಂತರಗಳಿಂದಲೇ ಬರಬೇಕಾದ ಆವಶ್ಯಕತೆಯೂ ಏರ್ಪಟ್ಟಿತು. ಕೆಲವು ಸಂದರ್ಭಗಳಲ್ಲಿ ಭ್ರಾಂತಿಯಿಂದಲೂ, ಕೆಲವು ಸಂದರ್ಭಗಳಲ್ಲಿ ಸುಲಭವಾಗಿ ದೊರೆಯುವುದೆಂಬ ಕಾರಣದಿಂದಲೂ, ಎಲ್ಲಾ ಜನರೂ ಹೊರಗಿನಿಂದ ಬರುವ ಪದಾರ್ಥಗಳನ್ನೇ ಉಪಯೋಗಿಸುತ್ತಾ ಬಂದದ್ದರಿಂದ ನಮ್ಮ ದೇಶೀಯರ ಉಪಯೋಗಕ್ಕೋಸ್ಕರ ನಮ್ಮ ದೇಶದಲ್ಲಿ ಉಂಟಾಗುತ್ತಲಿದ್ದ ಅನೇಕ ಪದಾರ್ಥಗಳು ನಮ್ಮಗಳಿಂದಲೇ ತಿರಸ್ಕರಿಸಲ್ಪಡುತ್ತ ಬಂದು ಆ ಕೆಲಸಗಾರರುಗಳಿಗೆ ಪ್ರೋತ್ಸಾಹವಿಲ್ಲದಂತಾಗಿ ಅವರು ನಿರಾಶ್ರಯರಾದರು. ರಾಜಕೀಯ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ಬೇಕಾದ ಸೌಕರ್ಯಗಳನ್ನು ಸಾರ್ವಭೌಮ ಸರಕಾರದವರು ಕಲ್ಪಿಸಿಕೊಟ್ಟುದರಿಂದ, ದೇಶಿಯ ವಿದ್ಯಾಭ್ಯಾಸವು ಅನಾದರಣೆಗೆ ಬಂದು ವೃದ್ಧಿ ಹೊಂದದಂತಾಗಿರುವುದು. ಇದರಂತೆ ಆಂಗ್ಲೇಯ ವೈದ್ಯಶಾಲೆಗಳು ಪ್ರತಿಯೊಂದು ಸ್ಥಳಗಳಲ್ಲಿಯೂ ಪ್ರಜೆಗಳ ಅನುಕೂಲಕ್ಕೋಸ್ಕರ ಸ್ಥಾಪಿಸಲ್ಪಟ್ಟು ಹೆಚ್ಚಾದ ಸೌಲಭ್ಯವನ್ನುಂಟು ಮಾಡುತ್ತ ಬಂದದ್ದರಿಂದ, ನಮ್ಮ ದೇಶದ ವೈದ್ಯರಿಗೆ ಅವಲಂಬನವಿಲ್ಲದಂತಾಗಿ, ಆಯುರ್ವೇದ ಚಿಕಿತ್ಸೆಯು ನಾಮಾವಶಿಷ್ಟವಾಯಿತು. ಮತ್ತು ಪ್ರತಿಯೊಂದು ವಿಷಯದಲ್ಲಿಯೂ, ಸಾರ್ವಭೌಮ ಸರಕಾರದವರು ತಮ್ಮ ಛತ್ರಚ್ಛಾಯೋಪಜೀವಿಗಳಾದ ಪ್ರಜೆಗಳ

ಯೋಗಕ್ಷೇಮಕ್ಕೋಸ್ಕರ ಮಾಡಿರುವ ವ್ಯವಸ್ಥೆಗಳಿಂದ ಇನ್ನು ಮುಂದೆ ನಮ್ಮ ದೇಶೀಯರು ವಿದೇಶಗಳಿಗೆ ಪ್ರಯಾಣ ಮಾಡಿ ಕೆಲವುಕಾಲ ಅಲ್ಲಿ ವಾಸಮಾಡಿ ಅಲ್ಲಿನ ವಿದ್ಯಾಭ್ಯಾಸದಿಂದಲೂ, ಅಲ್ಲಿನ ಜನರ ಸಹವಾಸದಿಂದಲೂ, ಬೇಕಾದ ತಿಳಿವಳಿಕೆಯನ್ನು ಸಂಪಾದಿಸಿಕೊಂಡು ಬಂದಲ್ಲದೆ, ನಮ್ಮಗಳ ಕ್ಷೇಮಕ್ಕೋಸ್ಕರ ಸರಕಾರದವರಿಂದ ಕೊಡಲ್ಪಟ್ಟಿರುವ ಅನೇಕ ವಿಧವಾದ ಸಹಾಯಗಳನ್ನು ನಾವು ಅನುಭವಿಸುವುದಕ್ಕೂ, ದೇಶೀಯರಲ್ಲಿ ಪರಸ್ಪರ ಮಾಡಬಹುದಾದ ಉಪಕಾರಗಳನ್ನು ಮಾಡುವುದಕ್ಕೂ, ಒಳ್ಳೆಯ ಜೀವಿಕೆಯನ್ನು ಸಂಪಾದಿಸಿಕೊಂಡು ಜೀವಿಸುವುದಕ್ಕೂ ಅವಕಾಶವು ಬಹಳಮಟ್ಟಿಗೆ ಕಡಿಮೆಯಾಗುತ್ತ ಬಂದಿರುವಂತೆ ತೋರಿಬರುವುದರಿಂದ ಪ್ರಬಲವಾದ ಈ ಮೇಲಣ ಸಂದರ್ಭದಿಂದ ದ್ವೀಪಾಂತರಗಳಿಗೆ ಹೋಗಿಬರಬೇಕಾದ ಆವಶ್ಯಕತೆಯು ಹೆಚ್ಚಾಗಿ ಉಂಟಾಗಿರುವುದು. ಈ ಕಾರಣದಿಂದ ಸಮುದ್ರಯಾನ ಮಾಡಿ ದ್ವೀಪಾಂತರವಾಸದಿಂದ ಹಿಂತಿರುಗಿ ಬಂದವರನ್ನು ಧರ್ಮಶಾಸ್ತ್ರಾನುಸಾರವಾಗಿ ನಮ್ಮ ಪಂಗಡದಿಂದ ದೂರಪಡಿಸುತ್ತ ಬಂದಲ್ಲಿ ಕ್ರಮಕ್ರಮವಾಗಿ ಪಂಗಡದಲ್ಲಿ ಜನಸಂಖ್ಯೆಯು ಕಡಿಮೆಯಾಗುತ್ತ ಬಂದು ಸಂಘಬಲವು ಸಡಿಲವಾಗಿ ಹೋಗುವುದು. ಇದರಿಂದ ಪರಸ್ಪರ ಮಮತೆಯೂ ಐಕಮತ್ಯವೂ ತಪ್ಪಿ ಬಹುವಿಧವಾದ ತೊಂದರೆಗಳಿಗೆ ಸಿಕ್ಕಿದವರಾಗುವೆವು. ಆದ್ದರಿಂದ ನಮ್ಮ ಹಿಂದೂಸ್ಥಾನದಲ್ಲಿ ಧರ್ಮ ರಕ್ಷಣಾರ್ಥವಾಗಿ ಏರ್ಪಟ್ಟು ನಮ್ಮಗಳ ಅಭ್ಯುದಯವನ್ನು ಚಿಂತಿಸುತ್ತಲಿರುವ ಶ್ರೀಗಳವರು ಈಗಿನ ಕಾಲಸ್ಥಿತಿಯನ್ನು ಯೋಚಿಸಿ ಬ್ರಾಹ್ಮಣರು ಸಮುದ್ರಯಾನ ಮಾಡಿ ದ್ವೀಪಾಂತರದಲ್ಲಿ ವಾಸಿಸಿ ಹಿಂತಿರುಗಿ ಬರುವುದಕ್ಕೂ, ಹಾಗೆ ಬಂದವರು ಅಲ್ಪ ಪ್ರಾಯಶ್ಚಿತ್ತಾನುಷ್ಠಾನದಿಂದ ತಮ್ಮ ತಮ್ಮ ಪಂಗಡದಲ್ಲಿ ಸೇರಿ ವ್ಯವಹರಿಸುವುದಕ್ಕೂ ಅಪ್ಪಣೆ ಕೊಡಿಸಬೇಕು'' ಎಂದು ತಿಳಿಸಿಕೊಂಡರು. ಶಿಷ್ಯರ ಈ ಪ್ರಾರ್ಥನೆಯನ್ನು ಸಾವಧಾನದಿಂದ ಸಮಗ್ರವಾಗಿ ತಿಳಿದು ಶ್ರೀಗಳವರು ತಮ್ಮ ಅಭಿಪ್ರಾಯವನ್ನು ಮುಂದೆ ಹೇಳುವ ರೀತಿಯಲ್ಲಿ ಸೂಚಿಸಿದರು.

ಸಮುದ್ರಯಾನವು ಹಿಂದೂ ಧರ್ಮಶಾಸ್ತ್ರದಿಂದ ನಿರೋಧಿಸಲ್ಪಟ್ಟಿರುವುದು. ಇಂತಹ ನಿಷಿದ್ಧಾಚರಣೆಯನ್ನು ಇಚ್ಛೆಯಿಲ್ಲದೆ ಒಂದಾವೃತ್ತಿ ಮಾಡಿದವರಿಗೆ ಪ್ರಬಲವಾದ ಪ್ರಾಯಶ್ಚಿತ್ತಾನುಷ್ಠಾನದಿಂದ ಪಾರಲೌಕಿಕವಾದ ಶುದ್ಧಿಯಿರುವುದೆಂತಲೂ, ಇಹಲೋಕದಲ್ಲಿ ಸವ್ಯವಹಾರ ಯೋಗ್ಯತೆ ಉಂಟಾಗುವುದಿಲ್ಲವೆಂತಲೂ, ಶಾಸ್ತ್ರದಿಂದ ಸಿದ್ಧಾಂತಿಸಲ್ಪಟ್ಟಿರುವುದು, ಯದ್ಯಪಿ ಧರ್ಮಶಾಸ್ತ್ರದಲ್ಲಿ ಸಮುದ್ರಯಾನವು ಅಷ್ಟು ಪ್ರಬಲವಾದ ದೋಷವೆಂದು ಅಭಿಪ್ರಾಯ ಪಡುವುದಕ್ಕೆ ಕಾರಣವು ಯಾವುದೊಂದೂ ಹೇಳಿರುವುದಿಲ್ಲವು. ಆದರೂ ವಿಚಾರ ಮಾಡಿದರೆ ಸಮುದ್ರಯಾನವು ಪ್ರಬಲದೋಷವೆಂದು ಹೇಳಲು ಕಾರಣವಿರುವುದೆಂದು ಕಂಡುಹಿಡಿಯುವುದು ಅಸಾಧ್ಯವಲ್ಲವು. ಅದು ಹೇಗೆಂದರೆ :

ಶಮೋದಮಸ್ತಪಶ್ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಕರ್ಮ ಸ್ವಭಾವಜಮ್ ॥ (ಭಗವದ್ಗೀತೆ)

ಎಂಬುದಾಗಿ ಬ್ರಾಹ್ಮಣನಿಗೆ ಸಹಜವಾದ ಕರ್ಮಗಳು ಒಂಬತ್ತೆಂದು ನಿರ್ಣಯ ಮಾಡಿರುವರು. ಇವುಗಳಲ್ಲಿ ಶಮವೆಂದರೆ - ಪ್ರಪಂಚದ ಪ್ರತಿಯೊಂದು ವಿಷಯದಲ್ಲಿಯೂ ದೋಷವಿರುವುದೆಂದು ಅನೇಕಾವೃತ್ತಿ ವಿಚಾರದಿಂದ ತಿಳಿದು ಆ ವಿಷಯಗಳಿಂದ ಮನಸ್ಸನ್ನು ಹಿಂತಿರುಗಿಸಿ ಆತ್ಮವಿಷಯವಾಗಿಯೇ ನಿಲ್ಲುವಂತೆ ಮಾಡತಕ್ಕ ಅಭ್ಯಾಸವು.

ದಮವೆಂದರೆ - ಕರ್ಮೇಂದ್ರಿಯಗಳು ಐದು; ಜ್ಞಾನೇಂದ್ರಿಯಗಳು ಐದು; ಈ ಹತ್ತು ಇಂದ್ರಿಯಗಳನ್ನು ಆಯಾ ವಿಷಯಗಳ ಕಡೆಗೆ ಹೋಗದಂತೆ ನಿರೋಧಿಸತಕ್ಕ ಅಭ್ಯಾಸವು.

ತಪಸ್ಸೆಂಬುದು ಶಾರೀರ, ವಾಙ್ಮಯ ಮಾನಸಿಕ ಎಂದು ಮೂರು ವಿಧವಾಗಿ ವಿಂಗಡಿಸಲ್ಪಟ್ಟಿದೆ. ಇವುಗಳಲ್ಲಿ ಶೌಚ, ಋಜುಭಾವ, ಬ್ರಹ್ಮಚರ್ಯ, ಅಹಿಂಸೆ, ದೇವ ಬ್ರಾಹ್ಮಣರೇ ಮೊದಲಾದವರ ವಿಷಯವಾಗಿ ಮಾಡತಕ್ಕ ನಮಸ್ಕಾರಾದಿ ಪೂಜೆ ಎಂಬಿವುಗಳು ಶರೀರದಿಂದ ಮಾಡತಕ್ಕ ಶಾರೀರ ತಪಸ್ಸು, ಯಾವ ಸಂದರ್ಭದಲ್ಲಿಯೂ ಯಾರೊಬ್ಬರಿಗೂ ಉದ್ವೇಗ ವುಂಟಾಗದಂತೆ ಸತ್ಯವಾಗಿಯೂ ಪ್ರಿಯವಾಗಿಯೂ ಇರುವ ಭಾಷಣ, ವೇದಶಾಸ್ತ್ರಾಧ್ಯಯನ, ಇವು ವಾಙ್ಮಯ ತಪಸ್ಸು. ತೃಪ್ತಿ, ಚಿತ್ತಶುದ್ಧಿ, ವಾಙ್ನಿರ್ಬಂಧ, ವಂಚನೆಯಿಲ್ಲದಿರುವಿಕೆ, ಸರ್ವಪ್ರಕಾರದಿಂದಲೂ ಮನಸ್ಸನ್ನು ನಿರೋಧಿಸುವುದು ಇವು ಮಾನಸಿಕವಾದ ತಪಸ್ಸು.

ಶೌಚವು - ಇದು ಬಾಹ್ಯ ಆಭ್ಯಂತರವೆಂದು ಎರಡು ವಿಧವು. ಆಯಾವರ್ಣಾಶ್ರಮ ಗಳಿಗನುಸಾರವಾಗಿ ಶಾಸ್ತ್ರದಲ್ಲಿ ಹೇಳಿರುವಂತೆ ಮೃತ್ತಿಕಾಜಲಾದಿಗಳಿಂದ ಅಂಗವನ್ನು ತೊಳೆದುಕೊಳ್ಳುವುದು ಬಾಹ್ಯಶೌಚವು. ಕಾಮಕ್ರೋಧಾದಿ ವಿಕಾರಗಳನ್ನು ಬಿಟ್ಟು ವರ್ತಿಸುವುದು ಆಭ್ಯಂತರ ಶೌಚವು.

ಕ್ಷಾಂತಿಯೆಂದರೆ ಕ್ಷಮಾಗುಣವು. ಯಾರಿಂದ ಯಾವ ತೊಂದರೆಯುಂಟಾದರೂ ಅದಕ್ಕೆ ಪ್ರತೀಕಾರವನ್ನು ಮಾಡದೆ ಆ ತೊಂದರೆಯನ್ನು ಸಹಿಸುವುದು.

ಆರ್ಜವವೆಂದರೆ ಋಜುಭಾವವು. ಯಾವ ಸಂದರ್ಭದಲ್ಲಿಯೂ ಯಾರ ವಿಷಯದಲ್ಲಿಯೂ ವ್ಯಗ್ರಸ್ವಭಾವವನ್ನು ಹೊಂದದಿರುವಿಕೆ.

ಜ್ಞಾನವೆಂದರೆ ವೇದಶಾಸ್ತ್ರಾರ್ಥವನ್ನು ತಿಳಿವುದು.

ವಿಜ್ಞಾನವೆಂದರೆ - ತಿಳಿದ ಶಾಸ್ತ್ರಾರ್ಥವನ್ನು ವಿಚಾರ ಮಾಡಿ ತನ್ನ ಅನುಭವಕ್ಕೆ ತಂದುಕೊಳ್ಳುವುದು.

ಆಸ್ತಿಕ್ಯವೆಂದರೆ - ಪ್ರಪಂಚಕ್ಕೆ ಭಿನ್ನನಾಗಿ ಪ್ರಪಂಚಕ್ಕೆ ಕಾರಣನಾದ ಭಗವಂತ ನೊಬ್ಬನಿರುವನೆಂಬ ನಂಬಿಕೆ.

ಈ ರೀತಿಯಿಂದ ಬ್ರಾಹ್ಮಣನಿಗೆ ಒಂಬತ್ತು ಗುಣಗಳು ಸಹಜವೆಂದೂ ಅನುಷ್ಠೇಯ ಗಳೆಂದೂ ಹೇಳಿರುವಲ್ಲಿ, ಈ ಗುಣಗಳಲ್ಲಿ ಯಾವುದೊಂದು ಗುಣವು ಕಡಿಮೆಯಾದರೂ ಅದಕ್ಕೆ ಲೋಪಬಂದರೂ ಅವನು ಬ್ರಾಹ್ಮಣನೆಂದು ಹೇಳಿಸಿಕೊಳ್ಳುವದಿಲ್ಲವಷ್ಟೆ ? ಈ ಗುಣಗಳನ್ನು ಕಾಪಾಡಿಕೊಳ್ಳಬೇಕಾದರೂ, ವೃದ್ಧಿಪಡಿಸಿಕೊಳ್ಳಬೇಕಾದರೂ ಇವುಗಳ ಪ್ರಚಾರವಿರತಕ್ಕ ದೇಶದಲ್ಲಿಯೂ ಆ ಜನಗಳ ಮಧ್ಯದಲ್ಲಿಯೂ ನಿರಂತರವಾಗಿ ವಾಸಮಾಡಿ, ಇವು ತಪ್ಪಿಹೋಗದಂತೆ ಪ್ರಯತ್ನದಿಂದ ನೋಡಿಕೊಂಡರೆ ಇವು ನಿಲ್ಲುವುವಲ್ಲದೆ ಶ್ರೇಷ್ಠವಾದ ಈ ಗುಣಗಳಿಗೆ ಸುತರಾಂ ಪ್ರಚಾರವೇ ಇಲ್ಲದ ದೇಶದಲ್ಲಿ ವಾಸಮಾಡುವುದರಿಂದಲೂ, ಈ ಗುಣಗಳಲ್ಲಿ ಒಂದನ್ನಾದರೂ ಅರಿಯದ ಜನಗಳ ಸಹವಾಸವನ್ನು ಮಾಡುವುದರಿಂದಲೂ ಬ್ರಾಹ್ಮಣನಿಗೆ ಸಹಜವಾದ ಗುಣಗಳೆಲ್ಲವೂ ಸಂಪೂರ್ಣವಾಗಿ ತಪ್ಪಿಹೋಗಿ ಬ್ರಾಹ್ಮಣ್ಯವೇ ಇಲ್ಲದಂತಾಗುವುದು. ಇಂತಹ ಬ್ರಾಹ್ಮಣನು ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೂ ಅವನನ್ನು ಬಿಟ್ಟುಹೋದ ಗುಣಗಳು ಮತ್ತೆ ಹಿಂತಿರುಗಿ ಬರುವುದಕ್ಕೆ ಅವಕಾಶವಿಲ್ಲದುದರಿಂದ ಅವನ ಸಹವಾಸವು ಇತರರಿಗೆ ಸಹಜವಾದ ಗುಣಗಳನ್ನು ಹೋಗಲಾಡಿಸಬಹುದಾಗಿ ಅಂಥಾವನನ್ನು ತಮ್ಮ ಸಮೂಹದಿಂದ ದೂರಮಾಡಬೇಕೆಂದು ಶಾಸ್ತ್ರಗಳಲ್ಲಿ ಹೇಳಿದೆ. ಈ ಅಭಿಪ್ರಾಯವನ್ನು ಲೋಕ ದೃಷ್ಟಾಂತದಿಂದಲೂ ಸಮರ್ಥಿಸಬಹುದು. ಅದು ಹೇಗೆಂದರೆ.... ಒಂದು ಪುಷ್ಪಲತೆಯಲ್ಲಿ ಮಾರ್ದವ, ಸೌಗಂಧ್ಯ, ಕೋಮಲತ್ವವೇ ಮೊದಲಾದ ಗುಣಗಳನ್ನೊಳಗೊಂಡೇ ಪುಷ್ಪಗಳು ಉಂಟಾಗುವುದರಿಂದ ಆ ಪುಷ್ಪಗಳಿಗೆ ಮಾರ್ದವಾದಿಗಳು ಸಹಜ ಧರ್ಮಗಳೆಂದು ಹೇಳಬೇಕು. ಈ ಗುಣಗಳೆಲ್ಲವೂ ತನಗೆ ಉತ್ಪತ್ತಿ ಸ್ಥಾನವಾದ ಲತೆಯಲ್ಲಿ ಪರಸ್ಪರ ಸಹಾಯದೊಡನೆ ಗುಂಪಾಗಿ ಸೇರಿರುವವರೆಗೂ ಪುಷ್ಪಗಳನ್ನು ಬಿಟ್ಟು ಹೋಗುವುದಿಲ್ಲವಾಗಿ ಆ ಪುಷ್ಪಗಳು ರಮಣೀಯವಾಗಿಯೇ ಇರುವುವು. ಅವುಗಳಲ್ಲಿ ಒಂದು ಪುಷ್ಪವನ್ನು ಲತೆಯಿಂದ ಬಿಡಿಸಿ ಮೇಲಿನ ಗುಣಗಳಲ್ಲಿ ಒಂದು ಗುಣವಾದರೂ ಇಲ್ಲದ ಮತ್ತೊಂದು ಪದಾರ್ಥದೊಡನೆ ಸೇರಿಸಿ ಇಟ್ಟಲ್ಲಿ ಪುಷ್ಪದಲ್ಲಿದ್ದ ಗುಣಗಳೆಲ್ಲವೂ ಅತಿ ಶೀಘ್ರಕಾಲದಲ್ಲಿಯೇ ನಷ್ಟವಾಗಿ ಪುಷ್ಪವನ್ನು ಅದು ವಿರೂಪ ಮಾಡುವುದೆಂಬಂಶವು ಅನುಭವಸಿದ್ಧವಾದುದಷ್ಟೆ? ಅಂತಹ ಪುಷ್ಪಕ್ಕೆ ಯಾವ ಸಂಸ್ಕಾರವನ್ನು ಮಾಡುವುದರಿಂದ ಅದರಲ್ಲಿ ಸಹಜವಾಗಿ ಮೊದಲಿದ್ದ ಮಾರ್ದವಾದಿ ಗುಣಗಳು ಹಿಂತಿರುಗಿ ಬರುವಂತೆ ಮಾಡಿ ಅದನ್ನು ಗ್ರಾಹ್ಯವಾಗುವ ಹಾಗೆ ಮಾಡಬಹುದು ? ಸ್ಥಲಾಂತರ ಪ್ರಾಪ್ತಿಯಿಂದಲೂ, ಪದಾರ್ಥಾಂತರ ಸಂಯೋಗದಿಂದಲೂ ಸಹಜವಾದ ಗುಣಗಳಿಂದ

ಹೀನವಾಗಿ ಕೊಳೆತು ವೈರೂಪ್ಯವನ್ನು ಹೊಂದಿ ನಾಮಮಾತ್ರಾವಶಿಷ್ಟವಾದ ಆ ಪುಷ್ಪವನ್ನು ಸಹಜಗುಣಗಳಿಂದ ಯುಕ್ತವಾಗಿರತಕ್ಕ ಪುಷ್ಪಾಂತರಗಳೊಡನೆ ಮತ್ತೆ ಸೇರಿಸುವುದರಿಂದ ಇತರ ಪುಷ್ಪಗಳಲ್ಲಿರತಕ್ಕ ಸಹಜಗುಣಗಳು ಬೇಗನೆ ನಾಶಹೊಂದಿ ಆ ಪುಷ್ಪಗಳೂ ವೈರೂಪ್ಯವನ್ನು ಹೊಂದುವುದು. ಅನುಭವಸಿದ್ಧವಾದ ವಿಷಯವಲ್ಲವೆ ? ಇದರಂತೆ ಸಹಜ ಧರ್ಮಗಳನ್ನು ಹೋಗಲಾಡಿಸಿಕೊಂಡ ಬ್ರಾಹ್ಮಣನು ಯಾವ ಸಂಸ್ಕಾರಗಳಿಂದಲೂ ಮತ್ತೆ ತನ್ನ ಧರ್ಮಗಳನ್ನು ಸಂಪಾದಿಸಲಾರನು ಮತ್ತು ಅಂಥಾ ಬ್ರಾಹ್ಮಣನ ಸಹವಾಸದಿಂದ ಇತರ ಬ್ರಾಹ್ಮಣರಲ್ಲಿರತಕ್ಕ ಸಹಜ ಗುಣಗಳಿಗೆ ಲೋಪವುಂಟಾಗುವದು ಎಂದು ಹೇಳುವುದರಲ್ಲಿಯೂ, ಆ ಅರ್ಥವನ್ನು ನಂಬುವುದರಲ್ಲಿಯೂ, ಅಡ್ಡಿಯೇನಿರುವುದು ? ಈ ಕಾರಣದಿಂದಲೇ ಸಮುದ್ರಯಾನವು ಅಷ್ಟು ವಿಶೇಷವಾದ ಪಾತಕವೆನಿಸುವುದು ಎಂಬಂಶವು ಶಾಸ್ತ್ರಗಳ ತಾತ್ಪರ್ಯವೆಂದು ಧಾರಾಳವಾಗಿ ಹೇಳಬಹುದು. ಸುರಾಪಾನವನ್ನು, ಮಹಾಪಾತಕವೆಂದು ಗಣನೆ ಮಾಡಿರುವರು. ಸಾಮಾನ್ಯವಾಗಿ ನೋಡಿದರೆ ಇದರಿಂದ ಪರರಿಗೆ ಯಾವುದೊಂದು ತೊಂದರೆಯನ್ನೂ, ಹಿಂಸೆಯನ್ನೂ ಮಾಡಿದಂತಾಗುವುದಿಲ್ಲವು. ಪಾನ ಮಾಡುವವನಿಗೆ ಆದರಿಂದ ಉಂಟಾಗಬಹುದಾದ ತೊಂದರೆಯು ಅತ್ಯಲ್ಪವಾಗಿಯೇ ಇರುವಂತೆ ತೋರುವುದು. ಇಂಥಾ ಕೃತ್ಯವನ್ನು ಮಹಾಪಾತಕದಲ್ಲಿ ಸೇರಿಸಿ ಇದಕ್ಕೆ ಮರಣಾಂತ ಪ್ರಾಯಶ್ಚಿತ್ತವು ಶಾಸ್ತ್ರದಲ್ಲಿ ಹೇಳಿರುವುದಷ್ಟೆ ? ಇದರ ಕಾರಣವನ್ನು ವಿಚಾರ ಮಾಡಿದರೆ ಎಲ್ಲಾ ವಿಧವಾದ ಪಾಪಗಳನ್ನು ಮಾಡುವುದಕ್ಕೂ ಸುರಾಪಾನವೆಂಬ ಒಂದು ಪಾತಕವೇ ಮೂಲಕಾರಣವಾಗಬಹುದಾದುದರಿಂದ ಸುರಾಪಾನವನ್ನು ಮಹಾಪಾತಕವೆಂದು ಹೇಳಿರುವುದು ಯುಕ್ತವೆಂದು ತೋರದೇ ಹೋಗಲಾರದು. ಈ ವಿಷಯದಲ್ಲಿ ಒಂದು ಇತಿಹಾಸವನ್ನು ಹೇಳುವುದುಂಟು. ಅದೇನೆಂದರೆ - ಒಬ್ಬ ಬ್ರಾಹ್ಮಣನು ಪಂಡಿತನಾಗಿಯೂ, ಆಚಾರಶೀಲನಾಗಿಯೂ, ಅನುಷ್ಠಾನಪರನಾಗಿಯೂ ಇದ್ದನು. ಈತನು ಒಂದು ದಿನ ಯಾವುದೋ ಒಂದು ಗ್ರಾಮಕ್ಕೆ ಪ್ರಯಾಣ ಮಾಡಿ ಮನೆಯಿಂದ ಏಕಾಕಿಯಾಗಿ ಹೊರಟನು. ಮಾರ್ಗದಲ್ಲಿ ಕೆಲವರು ದುಷ್ಟರು ಹೋಗುತ್ತಲಿದ್ದರು. ಅವರು ತಮ್ಮ ಸ್ವಭಾವವಾದ ದುಷ್ಟಬುದ್ಧಿಯಿಂದ ಅಪರಾಧಿಯಲ್ಲದ ಈ ಬ್ರಾಹ್ಮಣನಿಗೆ ತೊಂದರೆಯನ್ನುಂಟು ಮಾಡಬೇಕೆಂದು ಈತನನ್ನು ಬಲಾತ್ಕಾರವಾಗಿ ಹಿಡಿದುಕೊಂಡರು. ಆಗ ಬ್ರಾಹ್ಮಣನು ತನ್ನನ್ನು ಹಿಂಸೆ ಮಾಡದೇ ಬಿಡಬೇಕೆಂದು ಬಹಳ ವಿಧವಾಗಿ ಅವರಲ್ಲಿ ಹೇಳಿಕೊಂಡನು. ತಾವು ಹೇಳಿದಂತೆ ನಡೆವುದಾದರೆ ಬಿಡುವುದಾಗಿ ಅವರು ಹೇಳಿದರು. ಅವರುಗಳ ಹಿಂಸೆಯನ್ನು ತಡೆಯಲಾರದೆ ಹೇಗಾದರೂ ಆ ದುಷ್ಟ ಜನರಿಂದ ಬಿಡಿಸಿಕೊಂಡು ಹೋಗಬೇಕೆಂಬ ಅಭಿಪ್ರಾಯದಿಂದ ಆ ಬ್ರಾಹ್ಮಣನು ನೀವು ಹೇಳಿದಂತೆ ಕೇಳುವೆನೆಂದನು.

ಆಗ ಅವರು ತಮ್ಮ ಸಂಗಡ ಪ್ರಯಾಣ ಮಾಡುತ್ತಲಿದ್ದ ಶ್ವಪಚೆಯಾದ ಒಬ್ಬ ಹೆಂಗಸನ್ನು ತೋರಿಸಿ ಆಕೆಯಲ್ಲಿ ನೀನು ಕೂಡಿದರೆ ಬಿಡುವೆವೆಂದು ಹೇಳಿದರು. ಈ ಮಾತನ್ನು ಕೇಳಿದ ಬ್ರಾಹ್ಮಣನಿಗೆ ಅದರಂತೆ ನಡೆದುಕೊಳ್ಳುವುದಕ್ಕಿಂತಲೂ, ಇವರುಗಳಿಂದ ತನ್ನ ಪ್ರಾಣಗಳು ಹೋಗುವುದೇ ಮೇಲೆಂದು ತೋರಿ ಆ ದುಷ್ಟರ ಹೇಳಿಕೆಯನ್ನು ನಿರಾಕರಿಸಿದನು. ಬಳಿಕ ಆ ಜನರು ಆ ಹೆಂಗಸಿನ ಕಂಕುಳಲ್ಲಿದ್ದ ಒಂದು ಸಣ್ಣ ಶಿಶುವನ್ನು ಬ್ರಾಹ್ಮಣನ ಮುಂದಿಟ್ಟು ಈ ಶಿಶುವಿನ ಕುತ್ತಿಗೆಯನ್ನು ಮುರಿದು ಕೊಂದರೆ ನಿರ್ಬಂಧಿಸದೆ ಬಿಡುವುದಾಗಿ ತಿಳಿಸಿದರು. ಈ ಮಾತು ಆ ಬ್ರಾಹ್ಮಣನಿಗೆ ಮೊದಲು ಕೇಳಿದ ಮಾತಿಗಿಂತಲೂ ಕರ್ಣ ಕಠೋರವಾಗಿದ್ದು, ತನ್ನ ಕುತ್ತಿಗೆಯನ್ನೇ ಮುರಿದು ಪ್ರಾಣಗಳನ್ನು ತೆಗೆಯಬಹುದೆಂದು ಆ ದುರ್ಜನರುಗಳಿಗೆ ತಿಳಿಸಿ ಕೆಳಗೆ ಕುಳಿತುಕೊಂಡನು. ತರುವಾಯ ಆ ದುರ್ಜನರು ಒಂದು ಪಾತ್ರೆಯಲ್ಲಿ ಮದ್ಯವನ್ನು ಮುಂದಿಟ್ಟು ಅದನ್ನು ಕುಡಿದರೆ ಬಿಡುವೆವೆಂದು ಹೇಳಿದರು. ಆಗ ಆ ಬ್ರಾಹ್ಮಣನು ಸುರಾಪಾನವು ಮಹಾಪಾತಕವೆಂದು ತಿಳಿದಿದ್ದರೂ ಪ್ರಾಣದ ಮೇಲಿರತಕ್ಕ ಮಮತೆಯಿಂದ "ಹೇಗಾದರೂ ಪ್ರಾಣಗಳನ್ನುಳಿಸಿಕೊಳ್ಳಬೇಕು. ತಾನು ಮಾಡುವ ಸುರಾಪಾನದಿಂದ ಇತರರಿಗೆ ಹಿಂಸೆ ಮಾಡಿದಂತೆ ಆಗುವುದಿಲ್ಲ. ತನ್ನ ಇಚ್ಛೆಯಿಂದ ಸುರಾಪಾನವನ್ನು ಮಾಡುವುದಿಲ್ಲ. ಈ ದುಷ್ಟರ ನಿರ್ಬಂಧಕ್ಕೆ ಈ ಸಮಯದಲ್ಲಿ ಸುರಾಪಾನವನ್ನು ಮಾಡಿ ಬಳಿಕ ಶಾಸ್ತ್ರೋಕ್ತವಾದ ಪ್ರಾಯಶ್ಚಿತ್ತಾನುಷ್ಠಾನದಿಂದ ಶುದ್ಧಿಯನ್ನು ಸಂಪಾದಿಸಿಕೊಳ್ಳಬಹುದು" ಎಂದು ಯೋಚಿಸಿ ಕಡೆಗೆ ದೋಷವನ್ನೊಪ್ಪಿಕೊಂಡು ಸುರಾಪಾನವನ್ನು ಮಾಡಿಬಿಟ್ಟನು. ಹಿಂದೆ ಯಾವಾಗಲೂ ಅದನ್ನು ಮಾಡಿದವನಲ್ಲವಾದುದರಿಂದ ಮದಕರವಾದ ಪದಾರ್ಥದ ಸೇವನೆಯಿಂದ ತತ್‌ಕ್ಷಣವೇ ಬುದ್ಧಿಭ್ರಂಶವುಂಟಾಗಿ ಮೊದಲು ತಾನು ನಿರಾಕರಿಸಿದ್ದ ಸ್ತ್ರೀಸಂಗವನ್ನೂ, ಶಿಶುಹತ್ಯೆಯನ್ನೂ ತಾನಾಗಿಯೇ ಮಾಡಿ ಮುಂದೆ ಹೊರಟನಂತೆ. ಈ ಇತಿಹಾಸವನ್ನು ಪರ್ಯಾಲೋಚಿಸಿದರೆ ಸುರಾಪಾನವನ್ನು ಸಕಲಪಾಪಗಳಿಗೂ ಮೂಲಭೂತವಾದ ಪಾಪವೆಂದು ಯಾರು ತಾನೇ ನಂಬಲಾರರು ? ಇದನ್ನು ತಿಳಿದ ಮಹನೀಯರು ಸುರಾಪಾನವನ್ನು ಮಹಾಪಾತಕವೆಂದು ಹೇಗೆ ಹೇಳಿರುವರೋ ಅದರಂತೆ ಬ್ರಾಹ್ಮಣನಿಗೆ ಸಹಜವಾದ ಗುಣಗಳೆಲ್ಲವನ್ನೂ ಹೋಗಲಾಡಿಸಿ, ಸುರಾಪಾನಾದಿ ಮಹಾಪಾತಕ ಸಹಸ್ರವನ್ನು ನಿರ್ಲಕ್ಷ್ಯವಾಗಿಯೂ, ನಿರ್ಲಜ್ಜವಾಗಿಯೂ ಮಾಡುವಂತೆ ಮನೋವೃತ್ತಿಯನ್ನುಂಟು ಮಾಡಬಹುದಾದ ದ್ವೀಪಾಂತರವಾಸಕ್ಕೂ ಅಲ್ಲಿಯ ಜನರ ಸಹವಾಸಕ್ಕೂ ಸಹಕಾರಿಯಾಗಿರುವ ಸಮುದ್ರಯಾನವು ಪ್ರಬಲ ದೋಷವೆಂದು ಅಭಿಪ್ರಾಯಪಟ್ಟು ಶಾಸ್ತ್ರದಲ್ಲಿ ಸಮುದ್ರಯಾನವನ್ನು ಸುತರಾಂ ನಿರೋಧಿಸಿರುವರೆಂದು ಹೇಳಬಹುದು. ಆದ್ದರಿಂದ ಕಾಲಮಹಿಮೆಯಿಂದ ಸ್ವಭಾವವಾಗಿಯೇ ಪ್ರಪಂಚದಲ್ಲಿ ಧರ್ಮಲೋಪವುಂಟಾಗುತ್ತ

ಲಿರುವಲ್ಲಿ, ಧರ್ಮಪ್ರಚಾರಕ್ಕೋಸ್ಕರವೇ ಹಿಂದಿನವರಿಂದ ನಿಯುಕ್ತರಾಗಿರುವ ನಾವು ಪ್ರಬಲವಾಗಿಯೂ, ಸಕಾರಣವಾಗಿಯೂ ಧರ್ಮಶಾಸ್ತ್ರದಿಂದ ನಿರೋಧಿಸಲ್ಪಟ್ಟಿರುವ ಸಮುದ್ರಯಾನವು ಬ್ರಾಹ್ಮಣರಿಗೆ ಕಾಲರೀತಿಯಿಂದ ಆದರಣೀಯವೆಂತಲೂ, ಸಾಮಾನ್ಯ ಪ್ರಾಯಶ್ಚಿತ್ತಗಳಿಂದ ಅಂಥಾ ಜನರು ಇತರರ ಸವ್ಯವಹಾರಗಳಿಗೆ ಅರ್ಹರೆಂತಲೂ, ಅನುಮೋದಿಸಿ ಅಭಿಪ್ರಾಯವನ್ನು ಕೊಡುವುದರಲ್ಲಿ ಸ್ವತಂತ್ರರಲ್ಲವು. ನೀವುಗಳು ಹೇಳುವಂತೆ ನಿಷಿದ್ಧವಾದ ಸಮುದ್ರಯಾನವನ್ನೂ, ದ್ವೀಪಾಂತರ ವಾಸವನ್ನೂ ಅಲ್ಲಿಯ ಜನರ ಸಹವಾಸವನ್ನೂ ಮಾಡಿದಲ್ಲದೆ ನಿಮ್ಮಗಳ ಇಹಲೋಕ ವ್ಯವಹಾರಗಳು ನಡೆದು ನೀವು ಜೀವಿಸುವುದೇ ಕಷ್ಟವೆಂಬಂಶವು ನಿಜವಾಗಿರುವ ಪಕ್ಷದಲ್ಲಿ ಆ ತೊಂದರೆಯನ್ನು ಪರಿಹರಿಸಿಕೊಂಡು ನೀವುಗಳು ಶ್ರೇಯಸ್ಸನ್ನು ಪಡೆಯುವ ವಿಷಯದಲ್ಲಿ ಆಲೋಚಿಸುವುದು ನಿಮ್ಮಗಳಂತೆ ನಿಮ್ಮ ಅಭ್ಯುದಯವನ್ನು ಸರ್ವದಾ ಚಿಂತಿಸುತ್ತಲಿರುವ ನಮಗೂ ಕರ್ತವ್ಯವೇ ಆಗಿರುವುದು. ಯಾವುದಾದರೊಂದು ಕಷ್ಟವು ಪ್ರಾಪ್ತವಾದ ಸಮಯದಲ್ಲಿ ಎಷ್ಟು ವಿವೇಕಶಾಲಿಯಾಗಿದ್ದರೂ, ಎಷ್ಟು ಬುದ್ಧಿಶಾಲಿಯಾಗಿದ್ದರೂ ಆ ಕಷ್ಟವು ಅವನ ವಿವೇಕದ ಮೇಲೂ, ಬುದ್ಧಿಯ ಮೇಲೂ ಅಂಧಕಾರದಂತೆ ಆವರಿಸಿ ಯುಕ್ತಾಯುಕ್ತ ಪರಿಜ್ಞಾನ ವಿಲ್ಲದವನನ್ನಾಗಿ ಮಾಡುವುದು ಸಹಜವು. ಆ ಕಾಲದಲ್ಲಿ ತನಗೆ ಹಿತಚಿಂತಕರೆಂತಲೂ, ಆಪ್ತರೆಂತಲೂ ನಂಬಿರತಕ್ಕವರೊಡನೆ ದೀರ್ಘವಾಗಿ ಆಲೋಚಿಸಿ ಬಂದಕಷ್ಟಗಳನ್ನು ಪರಿಹರಿಸಿಕೊಂಡು ಸುಖವನ್ನು ಪಡೆವುದು ಬುದ್ಧಿಶಾಲಿಯ ಕರ್ತವ್ಯವು. ನಾವು ಯಾವ ಸಂದರ್ಭದಲ್ಲಿಯೂ ನಿಮಗೆ ಅನಿಷ್ಟವನ್ನು ಕೋರತಕ್ಕವರಲ್ಲವೆಂಬುದನ್ನೂ ಅದರಿಂದ ನಮಗೆ ಯಾವ ಪ್ರಯೋಜನವೂ ಇಲ್ಲವೆಂಬ ಅಂಶವನ್ನೂ ನೀವು ಚೆನ್ನಾಗಿ ತಿಳಿದಿರುವಿರಿ. ಆದ್ದರಿಂದ ತತ್ಕಾಲದಲ್ಲಿ ನಿಮಗೆ ಒದಗಿ ಬಂದಿರುವುದಾಗಿ ನೀವುಗಳು ಅಭಿಪ್ರಾಯಪಡುತ್ತಲಿರುವ ತೊಂದರೆಗಳನ್ನು ಯಾವ ವಿಧವಾಗಿಯೂ ಧರ್ಮಲೋಪವಿಲ್ಲದಂತೆ ಪರಿಹರಿಸಿಕೊಳ್ಳಲು ಅನುಕೂಲವಾದ ಒಂದು ಮಾರ್ಗವಿರುವಂತೆ ನಮಗೆ ತೋರುತ್ತಲಿರುವುದು. ಆ ಮಾರ್ಗವನ್ನು ಸಂಕ್ಷೇಪವಾಗಿ ನಿಮ್ಮಗಳಿಗೆ ಸೂಚಿಸುವೆವು. ಅದನ್ನು ತಿಳಿದು ಸಾವಕಾಶವಾಗಿ ಯುಕ್ತಾಯುಕ್ತ ವಿಚಾರ ಮಾಡಿ ಅದು ನಿಮ್ಮಗಳಿಗೆ ಅನುಕೂಲವೂ ಯುಕ್ತವೂ ಆದುದೆಂದು ತೋರಿಬರುವ ಪಕ್ಷದಲ್ಲಿ ಅದರಂತೆ ನಡೆದುಕೊಳ್ಳುವುದು ಶ್ರೇಯಸ್ಕರವು ಎಂದು ಶ್ರೀಗಳವರು ತಿಳಿಸಿ ತಮ್ಮ ಅಭಿಪ್ರಾಯವನ್ನು ಮುಂದೆ ಹೇಳುವ ರೀತಿಯಲ್ಲಿ ವ್ಯಕ್ತಗೊಳಿಸಿದರು.

ಧರ್ಮಶಾಸ್ತ್ರದಲ್ಲಿ ಸಮುದ್ರಯಾನದಿಂದ ನಿರ್ಬಂಧಿಸಲ್ಪಟ್ಟವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ವರ್ಣತ್ರಯದವರೇ ಹೊರತು ನಾಲ್ಕನೆಯ ವರ್ಣದವರಿಗೆ ಈ ನಿರ್ಬಂಧ ವಿರುವುದಿಲ್ಲ. ಹಿಂದೂ ದೇಶದಲ್ಲಿರುವ ನಾಲ್ಕು ವರ್ಣದವರಲ್ಲಿ ಮೊದಲನೆಯ ಮೂರು

ವರ್ಣದವರ ಸಂಖ್ಯೆಯು ಮೂರರಲ್ಲಿ ಒಂದು ಭಾಗವೆಂತಲೂ, ನಾಲ್ಕನೆಯ ವರ್ಣದವರ ಸಂಖ್ಯೆಯು ಮೂರರಲ್ಲಿ ಎರಡು ಭಾಗವೆಂತಲೂ ಹೇಳಬಹುದಾಗಿ ತೋರುತ್ತೆ. ಈ ಸಂದರ್ಭದಲ್ಲಿ ಸಮುದ್ರಯಾನ, ದ್ವೀಪಾಂತರ ವಾಸಗಳನ್ನು ಆಚರಣೆಗೆ ತರದಿದ್ದಲ್ಲಿ ಹಿಂದೂದೇಶದ ಏಳಿಗೆಗೆ ಅವಕಾಶವೇ ಇಲ್ಲವೆಂಬ ನಿಮ್ಮ ಅಭಿಪ್ರಾಯವೇ ನಿಜವಾಗಿರುವ ಪಕ್ಷದಲ್ಲಿ ಅಧಿಕ ಸಂಖ್ಯೆಯುಳ್ಳವರಾಗಿಯೂ, ಧರ್ಮಶಾಸ್ತ್ರದಿಂದ ನಿರ್ಬಂಧಿಸಲ್ಪಡದವ ರಾಗಿಯೂ ಇರುವ ನಾಲ್ಕನೆಯ ವರ್ಣದವರಿಗೆ ಮಿಕ್ಕ ಮೂರು ವರ್ಣದವರೂ ಸೇರಿ ಬೇಕಾದ ಸಹಾಯವನ್ನುಂಟುಮಾಡಿ ಅವರುಗಳನ್ನು ಪ್ರೋತ್ಸಾಹಗೊಳಿಸಿ ದ್ವೀಪಾಂತರಗಳಿಗೆ ಕಳುಹಿಸಿ ಆ ಜನರಿಗೆ ಈಗಿನ ಕಾಲಕ್ಕೆ ಆವಶ್ಯಕವಾದ ವಿದ್ಯಾಭ್ಯಾಸವನ್ನು ಮಾಡಿಸಿ, ಇತರ ವಿಧವಾದ ತಿಳಿವಳಿಕೆಯನ್ನೂ ಕೊಡಿಸಿ, ಅವರುಗಳ ಮೂಲಕವಾಗಿ ದೇಶೋನ್ನತಿಗೆ ಬೇಕಾದ ಪ್ರಯತ್ನಗಳನ್ನು ನಡೆಸಿದರೆ, ನಾಲ್ಕನೆಯ ವರ್ಣದವರ ಸಂಖ್ಯೆಯು ಹೆಚ್ಚಾಗಿರುವುದ ರಿಂದಲೂ, ಹಿಂದಿನಿಂದ ಎಲ್ಲಾ ಕಾಲಗಳಲ್ಲಿಯೂ ಆ ಜನರು ತ್ರೈವರ್ಣಿಕರಿಗೆ ಅಧೀನರಾಗಿ ಇದುವರೆಗೆ ಸಹಾಯಕರಾಗಿಯೇ ಇರುವಂತೆ ತಿಳಿದು ಬರುವುದರಿಂದಲೂ, ಈ ಸಂದರ್ಭದಲ್ಲಿ ಮೂರು ವರ್ಣದವರಿಂದ ಪಡೆಯಬಹುದಾದ ಸಹಾಯಕ್ಕೆ ವಿಶೇಷವಾದ ಕೃತಜ್ಞತೆಯೊಡನೆ ಮೊದಲಿಗಿಂತಲೂ ಹೆಚ್ಚಾಗಿ ಆ ತ್ರೈವರ್ಣಿಕರನ್ನು ಗೌರವಿಸುತ್ತ ಅವರುಗಳಿಗೆ ಸಹಾಯಕರಾಗಿ ನಿಲ್ಲಬಹುದಾದ್ದರಿಂದಲೂ, ಇದರಿಂದ ಐಕಮತ್ಯವು ಹೆಚ್ಚಿ ದೇಶವು ಏಳಿಗೆಗೆ ಬರಬಹುದಾದ್ದರಿಂದಲೂ, ಹಾಗೆ ನಡೆಸುವುದರಿಂದಲೇ ನಿಮ್ಮಗಳ ಉದ್ದೇಶ್ಯವು ಸಿದ್ಧಿಸುವಲ್ಲಿ, ಚಿರಕಾಲದಿಂದಲೂ ಆಚರಣೆಯಲ್ಲಿಲ್ಲದ ಕಾರ್ಯವನ್ನು ಈ ಅನುಷ್ಠಾನದಲ್ಲಿ ತಂದು ದೂರದರ್ಶಿಗಳಾಗಿಯೂ, ರಾಗದ್ವೇಷಾದಿರಹಿತರಾಗಿಯೂ ಇದ್ದ ಹಿಂದಿನ ಮಹನೀಯರಿಂದ ಅಧರ್ಮವೆಂದು ಹೇಳಲ್ಪಟ್ಟಿರುವುದನ್ನು ಸಹಜಧರ್ಮವೆಂದು ಸ್ಥಾಪಿಸಲು ಪ್ರಯತ್ನಪಡುವುದರಿಂದ ಹೆಚ್ಚಿನ ಪ್ರಯೋಜನವೇನಿರುವುದು ? ಹಿಂದೂ ದೇಶದಲ್ಲಿ ಬ್ರಾಹ್ಮಣರು ಮೊದಲಿಂದಲೂ, ಕಾಯಿಕವಾದ ವ್ಯಾಪಾರಗಳಲ್ಲಿ ವಿಶೇಷವಾಗಿ ಪ್ರಯತ್ನಿಸದೆ ಮಾನಸಿಕ ವ್ಯಾಪಾರಗಳನ್ನೇ ಹೆಚ್ಚಾಗಿ ನಡೆಸಿದುದರಿಂದ ವಿದ್ಯಾವಂತರಾಗಿರುವ ರೆಂತಲೂ, ಇದರಿಂದ ಉಂಟಾಗಿರುವ ಬುದ್ಧಿಕೌಶಲದಿಂದ ಯಾವ ಭಾಷೆಯನ್ನಾಗಲಿ ಯಾವ ವಿಷಯವನ್ನಾಗಲಿ ಎಷ್ಟು ಸೂಕ್ಷ್ಮವಾಗಿದ್ದರೂ ಎಷ್ಟು ಅಪೂರ್ವವಾಗಿದ್ದರೂ ಅದನ್ನು ಗ್ರಹಿಸುವುದರಲ್ಲಿ ಬ್ರಾಹ್ಮಣರಿಗಿರತಕ್ಕ ಸೌಲಭ್ಯವು ಇತರರಿಗಿರಲಾರದು. ಬ್ರಾಹ್ಮಣರೇ ದೇಶೋನ್ನತಿಗಾಗಿ ಈಗಿನ ಕಾಲಕ್ಕನುಗುಣವಾದ ಯತ್ನಗಳನ್ನು ಮಾಡಬೇಕಲ್ಲದೆ ಇತರರಿಂದ ನಡೆಸಲು ಅವಕಾಶವಿಲ್ಲವೆಂದು ಕೆಲವರು ಅಭಿಪ್ರಾಯ ಪಡುವಂತೆ ತಿಳಿದು ಬರುವುದು. ಈ ಅಭಿಪ್ರಾಯವನ್ನು ಒಂದೇ ವಿಧವಾಗಿ ಎಲ್ಲಾ ಜನರೂ ಅಂಗೀಕರಿಸಲಾರರು. ಹಾಗಿದ್ದರೂ

ಚಿರಕಾಲದಿಂದ ಬೇರೊಂದು ಕಾರ್ಯದಲ್ಲಿ ಪ್ರವರ್ತಿಸದೆ ನಿಯತವಾದ ತಮ್ಮ ಆಹಾರ ವ್ಯವಹಾರಗಳಿಂದ ಮತ್ತು ಅನುಷ್ಠಾನಗಳಿಂದ ಶಾಂತರಾಗಿಯೂ, ಸಂತುಷ್ಟರಾಗಿಯೂ ಇದ್ದುಕೊಂಡು ವಿದ್ಯಾಭ್ಯಾಸದಲ್ಲಿಯೇ ಕಾಲವನ್ನು ಹೆಚ್ಚಾಗಿ ಕಳೆದು ಅದರ ಸಹಾಯದಿಂದ ಇತರರಿಗಿಂತ ಸ್ವಲ್ಪ ಹೆಚ್ಚಾಗಿ ಬುದ್ಧಿ ಕೌಶಲವನ್ನು ಬ್ರಾಹ್ಮಣರು ಸಂಪಾದಿಸಿರುವರೆಂಬ ಭಾಗವನ್ನು ಸ್ವಲ್ಪ ಮಟ್ಟಿಗೆ ಇತರ ವರ್ಣದವರೂ ಅಂಗೀಕರಿಸದಿರಲಾರರು. ಆದರೆ ಮಾನಸಿಕ ವ್ಯಾಪಾರವನ್ನು ಮಾಡಿ ಅದರ ಪ್ರಯೋಜನವನ್ನು ಪಡೆಯಬೇಕಾದರೆ ಮನಸ್ಸು ಶುದ್ಧವಾಗಿರಬೇಕು. ಮನಶ್ಶುದ್ಧಿಯೆಂದರೆ ಮನಸ್ಸಿಗೆ ಚಾಂಚಲ್ಯವಿಲ್ಲದಿರುವಿಕೆಯೇ ಎಂದು ಹೇಳಬಹುದು. ಹಾಗೆ ಆಗಬೇಕಾದರೆ ರಾಗದ್ವೇಷಾದಿವೃತ್ತಿಗಳು ಮಂದವಾಗಬೇಕು. ಇದಕ್ಕೆ ಸಾಧನವು ಆಹಾರ ಶುದ್ಧಿ, ಸತ್ಕರ್ಮಾಚರಣೆ, ಉದ್ವೇಗಕರವಾದ ವ್ಯಾಪಾರಗಳ ಅಭಾವ, ಇವುಗಳೇ ಮುಖ್ಯವಾದ ಕಾರಣಗಳೆನ್ನಿಸಿಕೊಳ್ಳುವುವು. ಬ್ರಾಹ್ಮಣನಿಗೆ ಕರ್ತವ್ಯವೆಂದು ಶಾಸ್ತ್ರದಿಂದ ವಿಧಿಸಲ್ಪಟ್ಟಿರುವ ಧರ್ಮಗಳನ್ನು ವಿಚಾರಮಾಡಿದರೆ ಪ್ರತಿಯೊಂದು ಧರ್ಮವೂ, ಮನಶ್ಶುದ್ಧಿಗೆ ಅನುಗುಣವಾಗಿರುವುದೇ ಹೊರತು ಒಂದಾದರೂ ಅದಕ್ಕೆ ವಿರುದ್ಧವಾಗಿರುವಂತೆ ಕಂಡುಬರುವುದಿಲ್ಲವು. ಅಂತಹ ಧರ್ಮಗಳನ್ನು ಹಿಂದಿನವರು ಯಥೋಕ್ತವಾಗಿ ತಕ್ಕಮಟ್ಟಿಗೆ ಆಚರಿಸಿಕೊಂಡು ತಮ್ಮ ಧರ್ಮಾಚರಣೆಗಳಿಗೆ ಸಹಾಯಕರಾಗಿದ್ದ ಕ್ಷತ್ರಿಯ, ವೈಶ್ಯ, ಶೂದ್ರರುಗಳ ಶ್ರೇಯಸ್ಸನ್ನು ಕೋರುತ್ತಲಿದ್ದಂತೆಯೂ, ಆ ಕಾಲದಲ್ಲಿ ದೇಶವು ಉತ್ತಮ ಸ್ಥಿತಿಯಲ್ಲಿಯೇ ಇದ್ದು ಯಾವ ವಿಧವಾದ ಕ್ಷೋಭೆಗೂ ಅವಕಾಶವಿರಲಿಲ್ಲವೆಂತಲೂ ತಿಳಿಯಬರುವುದು. ಹಾಗಿರಲಿಲ್ಲವೆಂದು ಹೇಳುವುದಕ್ಕೆ ಆಗಲಾರದಷ್ಟೇ? ಯಾವ ಕಾಲದಲ್ಲಿಯೂ ನಮ್ಮ ದೇಶದಲ್ಲಿ ಸಂಪತ್ತು ಇರಲಿಲ್ಲವೆಂತಲೂ, ಈ ದೇಶದ ಜನರು ಸುಖಿಗಳಾಗಿರಲಿಲ್ಲವೆಂತಲೂ ತಿಳಿಯುವುದಾದರೆ ಇತರ ದೇಶೀಯರು ಪ್ರಯತ್ನಪಟ್ಟು ಹಿಂದೂ ದೇಶದ ಐಶ್ವರ್ಯವನ್ನು ತಮ್ಮ ವಶವರ್ತಿಯಾಗಿ ಮಾಡಿಕೊಂಡರೆಂದು ಈಗ ನೀವುಗಳು ಅಭಿಪ್ರಾಯ ಪಡುವುದಕ್ಕೆ ಅವಕಾಶವೆಲ್ಲಿರುವುದು? ಈ ಒಂದು ಕಾರಣದಿಂದಲೇ ನಮ್ಮ ದೇಶವು ಒಂದಾನೊಂದು ಕಾಲದಲ್ಲಿ ವಿಶೇಷವಾದ ಸಂಪತ್ತನ್ನು ಒಳಗೊಂಡಿತ್ತೆಂದು ಹೇಳಬೇಕಲ್ಲವೆ? ಹಾಗಾದರೆ ಇತರರು ಪ್ರಯತ್ನಪೂರ್ವಕವಾಗಿ ಅಪೇಕ್ಷಿಸಬಹುದಾದಷ್ಟು ಸಂಪತ್ತನ್ನು ಪಡೆದಿದ್ದುದಕ್ಕೆ ನಮ್ಮ ದೇಶೀಯರು ಯಾವ ಪ್ರಯತ್ನವನ್ನು ನಡೆಸಿದ್ದರೆಂಬ ಅಂಶವನ್ನು ವಿಚಾರಿಸಬೇಕಷ್ಟೆ? ಐಶ್ವರ್ಯ ಸಂಪಾದನ ರೂಪಕಾರ್ಯದಲ್ಲಿ ಹಿಂದಿನವರು ಮಾಡಿರಬಹುದಾದ ಪ್ರಯತ್ನವನ್ನು ವಿಚಾರಮಾಡಿದರೆ ಸಕಲಸಂಪತ್ತಿಗೂ, ಸುಖಕ್ಕೂ ಕಾರಣವಾದ ಧರ್ಮಾಚರಣೆಯಲ್ಲಿ ಮಾತ್ರ ಹೆಚ್ಚಾದ ಪ್ರಯತ್ನವನ್ನು ನಡೆಸಿದ್ದಾಗಿ ತಿಳಿಯಲು ತಕ್ಕ ಪ್ರಮಾಣಗಳು ದೊರೆಯುವಂತೆ ತೋರಲಿಲ್ಲವು. ಹಿಂದಿನವರು ಯಾವ ಪ್ರಯತ್ನವನ್ನು

ವಿಶೇಷವಾಗಿ ಮಾಡಿ ಭಾಗ್ಯವನ್ನು ಸಂಪಾದಿಸುತ್ತಲಿದ್ದರೋ ಆ ಪ್ರಯತ್ನವು ಈಗ ಸುತರಾಂ ನಿಂತುಹೋಯಿತು. ಮಹಾಪ್ರಯಾಸದಿಂದ ಹಿಂದಿನವರು ಸಂಪಾದಿಸಿದ್ದ ಭಾಗ್ಯವೆಲ್ಲವೂ, ಈಗಿನವರ ಅವಿವೇಕದಿಂದ ವ್ಯಯವಾಗುತ್ತ ಬಂದಿತು. ಮುಂದಿನ ಸಂಪಾದನೆಗೆ ನ್ಯಾಯವಾದ ಮಾರ್ಗವನ್ನು ಕಂಡುಹಿಡಿಯಲಾರದೆ ಅಕಸ್ಮಾತ್ತಾಗಿ ನೀರಿನಲ್ಲಿ ಮುಳುಗಿದವನು ಅಪಾಯವನ್ನು ತಪ್ಪಿಸಿಕೊಂಡು ದಡವನ್ನು ಸೇರಲು ಯಾವುದಾದರೊಂದು ಅವಲಂಬವು ದೊರಕಿ ತಾನು ಪಾರಾದೇನೆ ಎಂಬ ಗಾಬರಿಯಿಂದ ಹಿತಾಹಿತಪರಿಜ್ಞಾನವಿಲ್ಲದವನಾಗಿ ತನ್ನನ್ನು ಅಪಾಯದಿಂದ ತಪ್ಪಿಸುವುದಕ್ಕೋಸ್ಕರ ಬಂದವರನ್ನು ತಾನು ಬಾಚಿತಬ್ಬಿಕೊಳ್ಳುವುದರಿಂದ ಬಂದವರಿಗೂ ತನಗೂ ಕೂಡ ಅಪಾಯವುಂಟಾಗುವುದೆಂದು ಯೋಚಿಸಲಾರದೆ ತನ್ನನ್ನು ಹಿಡಿಯುವುದಕ್ಕೆ ಬಂದವರಿಗೂ ಗಾಬರಿಯನ್ನುಂಟು ಮಾಡಿ ಅವರನ್ನೂ ಮುಳುಗಿಸಿ ತಾನೂ ಮುಳುಗಿಹೋಗುವ ಹಾಗೆ ಮಾಡತಕ್ಕ ಪ್ರಯತ್ನದಂತೆ ಈಗಿನವರಿಂದ ಮಾಡಲ್ಪಡುವ ಯತ್ನಗಳು ಸರಿಯಾದಮಾರ್ಗವನ್ನು ಕಂಡುಹಿಡಿಯಲಾರದೆ ಬುದ್ಧಿಶೂನ್ಯತೆಯಿಂದ ಮಾಡತಕ್ಕ ಯತ್ನಗಳಾಗಿರುವುದೇ ಹೊರತು ಬೇರೆ ಅಲ್ಲವು. ಅದು ಹೇಗೆಂದರೆ - ದೇಶೋನ್ನತಿಗೂ ಜನಗಳ ಸುಖಕ್ಕೂ ಮುಖ್ಯಕಾರಣವೆಂದು ನಿಮ್ಮಗಳಿಂದ ಭಾವಿಸಲ್ಪಡುವ ದ್ರವ್ಯವು ಕಾರಾಣಾಂತರಗಳಿಂದ ದೇಶಾಂತರ ಗತವಾಗಿರುವುದು ನಿಜವಾಗಿರುವ ಪಕ್ಷದಲ್ಲಿ ಅದು ಯಾವ ಮಾರ್ಗದಿಂದ ಯಾವ ಪ್ರಯತ್ನದಿಂದ ದೇಶಾಂತರವನ್ನು ಸೇರಿರುವುದೋ ಅದೇ ಮಾರ್ಗ ಮತ್ತು ಅದೇ ಪ್ರಯತ್ನಗಳಿಂದ ತಾನೇ ಮತ್ತೆ ನಮ್ಮ ದೇಶಕ್ಕೆ ಹಿಂತಿರುಗಿ ಬರಬೇಕು? ಇದುವರೆಗಿನ ಅನುಭವದಿಂದ ನಿಮ್ಮ ಸಂಪತ್ತನ್ನು ಬಲಾತ್ಕಾರದಿಂದಲೂ, ಮೋಸದಿಂದಲೂ, ಇತರರು ಸ್ವಾಧೀನ ಪಡಿಸಿಕೊಂಡರೆಂದು ಹೇಳುವುದು ಅಷ್ಟು ಯುಕ್ತಿಯುಕ್ತವಲ್ಲವು. ಕಾರಣವಿಲ್ಲದೆ ಕಾರ್ಯವುಂಟಾಗುವುದು ಅನುಭವಸಿದ್ಧವಲ್ಲವಾದುದರಿಂದ ಈ ವಿಷಯದಲ್ಲಿ ಕಾರಣವಿರಲೇಬೇಕು. ಆ ಕಾರಣವನ್ನು ಹಿಂದೂದೇಶೀಯರ ಬುದ್ಧಿಶೂನ್ಯತೆಯೆಂದೇ ಹೇಳುವುದರಲ್ಲಿ ದೋಷವೇನು ? ನಮ್ಮಲ್ಲಿ ಸ್ಥಿರವಾಗಿ ನಿಂತು ಯಾವ ಕಾಲದಲ್ಲಿಯೂ ಯಾವ ವಿಧವಾದ ಪ್ರಮಾದಕ್ಕೂ ಒಳಗಾಗದಂತೆ ನಮ್ಮನ್ನು ಜಾಗರೂಕವಾಗಿ ಕಾದುಕೊಂಡಿದ್ದ ಧರ್ಮವನ್ನು ನಾವು ಬಲಾತ್ಕಾರದಿಂದ ದೂರಮಾಡುತ್ತ ಬಂದದ್ದಾಯಿತು. ಇದರಿಂದ ದುರಾಶೆಯು ಪರಮಮಿತ್ರನಂತೆ ನಮ್ಮ ಸಂಗಡ ಬಂದು ಸೇರಲು ಅವಕಾಶ ಕೊಟ್ಟದ್ದಾಯಿತು. ಈ ಹಿತಶತ್ರುವಿನ ಸಹವಾಸದಿಂದ ನಿರ್ಮಲವಾದ ಬುದ್ಧಿಯ ಮಾಲಿನ್ಯವನ್ನು ಹೊಂದಿ ಅದರ ಶಕ್ತಿಯು ಮಂದವಾಯಿತು. ಬುದ್ಧಿಶೂನ್ಯನಾದ ಮನುಷ್ಯನು ಯಾರಿಗೆ ಅಧೀನನಾಗಲಾರನು ? ಅಂತಹ ಮನುಷ್ಯನು ಯಾವ ಪ್ರಮಾದದಿಂದ ತಾನೇ ತಪ್ಪಿಸಿಕೊಳ್ಳಬಲ್ಲನು ? ಈ ಒಂದು ಕಾರಣದಿಂದಲೇ ಎಲ್ಲಾ ವಿಧವಾದ

ಅನರ್ಥಗಳೂ ಒದಗಿ ಬಂದಿರುವುವಲ್ಲದೆ ಬೇರೊಂದು ಕಾರಣದಿಂದಲ್ಲವು. ಆದ್ದರಿಂದ ಈ ರಹಸ್ಯವನ್ನು ದೀರ್ಘವಾಗಿ ಆಲೋಚಿಸಿ ಪರಮ ಮಿತ್ರನಂತೆ ನಟಿಸುತ್ತ ನಮ್ಮನ್ನು ಸೇರಿ ನಮ್ಮ ಸ್ವರೂಪನಾಶವನ್ನೇ ಮಾಡುತ್ತಲಿರುವ ದುರಾಶೆಯೆಂಬ ಪರಮದ್ರೋಹಿಯನ್ನು ದೂರಪಡಿಸುತ್ತಾ ಬರಬೇಕು. ಹಾಗೆ ಮಾಡಬೇಕಾದರೆ ದೂರಮಾಡಲ್ಪಟ್ಟಿರುವ ಧರ್ಮವನ್ನು ಪರಮಮಿತ್ರನೆಂದು ನಂಬಿ ಹತ್ತಿರ ಸೇರಿಸಿಕೊಳ್ಳುತ್ತಾ ಬರಬೇಕು. ಬಲಿಷ್ಠವಾದ ಧರ್ಮವು ಎಡೆಬಿಡದೆ ನಮ್ಮೊಡನೆ ಸೇರಿದ್ದರೆ ದುರ್ಬಲವಾದ ದುರಾಶೆಗೆ ಅವಕಾಶವು ದೊರೆಯದೆ ನಮ್ಮಲ್ಲಿ ನಿಲ್ಲಲು ಅದಕ್ಕೆ ಧೈರ್ಯವಿಲ್ಲದಂತಾಗುವುದು ಆಗ್ಗ ನಮ್ಮ ಬುದ್ಧಿಯು ನಿರ್ಮಲವಾಗಿ ಅದರ ಶಕ್ತಿಯು ಹೆಚ್ಚುವುದರಿಂದ ನಾವು ಸಮರ್ಥರೂ, ಸ್ವತಂತ್ರರೂ ಆಗುವೆವು. ಆ ಸಂದರ್ಭದಲ್ಲಿ ಇತರರು ನಮ್ಮನ್ನು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳುವುದಕ್ಕೂ, ಪ್ರಮಾದಗಳಿಗೆ ನಾವು ಪಾತ್ರರಾಗುವುದಕ್ಕೂ ಅವಕಾಶವಿಲ್ಲದಂತಾಗಿ ನಾವು ಸುಖಾನುಭವ ವನ್ನು ಮಾಡಬಹುದು. ಇದಕ್ಕೆ ವಿರುದ್ಧವಾಗಿ ನಮ್ಮ ಅವಿವೇಕದಿಂದ ಅವಕಾಶವನ್ನು ಪಡೆದು ನಮ್ಮೊಡನೆ ಸೇರಿ ನಮಗೆ ದ್ರೋಹವನ್ನೇ ಮಾಡುತ್ತಲಿರುವ ದುರಾಶೆಯನ್ನು ಮಿತ್ರನನ್ನಾಗಿ ಭಾವಿಸಿ, ತನ್ನ ಇಚ್ಛಾನುಸಾರ ವೃದ್ಧಿ ಹೊಂದಿ ನಮ್ಮನ್ನು ನಾಶಗೊಳಿಸು ವುದರಲ್ಲಿಯೇ ಪ್ರಯತ್ನಿಸುತ್ತಲಿರುವ ದುರಾಶೆಗೆ ಅನುಕೂಲವನ್ನು ಕಲ್ಪಿಸಿ, ಅದು ವೃದ್ಧಿಹೊಂದುವಂತೆ ಧರ್ಮವಿರುದ್ಧವಾಗಿ ನಡೆವುದು ಬುದ್ಧಿಶಾಲಿಗಳಿಗೆ ಕರ್ತವ್ಯವೋ? ಅದು ನ್ಯಾಯವಾದುದೆಂದು ಯಾರು ತಾನೇ ಒಪ್ಪಿಕೊಳ್ಳುವರು? ಆದ್ದರಿಂದ ಮನುಷ್ಯನಿಗೆ ತೃಪ್ತಿಯೊಂದೇ ಪರಮಭಾಗ್ಯವು. ಆ ಭಾಗ್ಯವನ್ನು ಸಂಪಾದಿಸಿದವನು ಯಾವ ಕಾಲದಲ್ಲಿಯೂ ಕಷ್ಟಪಡಲಾರನು. ಆ ಭಾಗ್ಯವು ಭಾರತೀಯರಲ್ಲಿ ಸ್ವಭಾವವಾಗಿಯೇ ಇವರ ಆಚರಣೆಯಿಂದ ಪೂರ್ಣವಾಗಿ ತುಂಬಿದ್ದಂತೆಯೂ, ಅದರಲ್ಲಿಯೂ ಬ್ರಾಹ್ಮಣರಲ್ಲಿ ಬಹಳ ಹೆಚ್ಚಾಗಿಯೇ ಇದ್ದಂತೆಯೂ ಹೇಳಬಹುದು. ಈಚೆಗೆ ಆ ಮಹಾಭಾಗ್ಯವು ಕಡಿಮೆಯಾಗುತ್ತಾ ಬಂದುದರಿಂದಲೇ ಹಿಂದೂದೇಶದ ಸಂಪತ್ತು ಇತರ ದೇಶೀಯರ ಹಸ್ತಗತವಾದಂತೆಯೂ ಅದರಿಂದ ನಾನಾಪ್ರಕಾರವಾದ ಕಷ್ಟಗಳಿಗೆ ಭಾರತೀಯರು ಭಾಗಿಗಳಾದಂತೆಯೂ ಪ್ರತಿಕ್ಷಣದಲ್ಲಿಯೂ ನಿಮ್ಮ ಮನಸ್ಸಿಗೆ ತೋರುವಂತಾಗಿ ಚಿತ್ತಕ್ಷೋಭದಿಂದ ನೀವುಗಳು ತೊಂದರೆ ಪಡುತ್ತಲಿರುವಿರಿ.

ಇದರಿಂದ ಎಲ್ಲಾ ಜನರೂ ವಿರಕ್ತರಾಗಬೇಕೆಂತಲೂ ಪ್ರಪಂಚವನ್ನು ಮರೆತು ಆತ್ಮಜ್ಞಾನಿಗಳಾಗಬೇಕೆಂತಲೂ ನಮ್ಮ ಆಶಯವಲ್ಲವು. ಇದು ಅಸಂಸ್ಕೃತಚಿತ್ತರಿಗೆ ಸಾಧ್ಯವೆಂದು ನಾವು ತಿಳಿದುಕೊಂಡಿಲ್ಲವು. ನಮ್ಮ ಧರ್ಮಾಚರಣೆಯಲ್ಲಿ ವಿಶ್ವಾಸ ಮಾಡಿ ಸಾಧ್ಯವಾದ ಮಟ್ಟಿಗೆ ಧರ್ಮಲೋಪವಲ್ಲದ ರೀತಿಯಿಂದ ನಡೆದುಕೊಳ್ಳುತ್ತಾ ಬರಲು ಪ್ರಯತ್ನಮಾಡಿದರೆ

ತೃಪ್ತಿಪ್ರತಿಬಂಧಕಗಳಾದ ವ್ಯಾಪಾರಗಳು ಬಹುಮಟ್ಟಿಗೆ ಕಡಿಮೆಯಾಗುವುವು. ಆ ವ್ಯಾಪಾರಗಳು ತಗ್ಗುತ್ತ ಬಂದಹಾಗೆ ಮನಸ್ಸಿನ ಚಾಂಚಲ್ಯವು ಮಂದವಾಗುವುದು. ಇದರಿಂದ ಮನುಷ್ಯನು ತನ್ನ ಜೀವನಯಾತ್ರೆಗೆ ಮಾತ್ರ ಆವಶ್ಯಕವಾದ ಅಶನವಸನಾದಿ ಸಂಪಾದನೆಯಲ್ಲಿ ಪ್ರಯತ್ನವುಳ್ಳವನಾಗಿ ತೃಪ್ತಿಯನ್ನು ಸಂಪಾದಿಸುವನು. ಈ ಪ್ರಯತ್ನವನ್ನು ಮಾಡಿ ತೃಪ್ತಿಯೆಂಬ ಪರಮ ಭಾಗ್ಯವನ್ನು ಪಡೆವುದು ಅವಿರಕ್ತರಾದ ಸಂಸಾರಿಗಳಿಗೂ ಅಸಾಧ್ಯವಲ್ಲವು. ಭಾರತ ಭೂಮಿಯಲ್ಲಿ ಇದುವರೆಗೆ ಪರಂಪರೆಯಿಂದ ಬಂದಿರುವ ಅಭ್ಯಾಸದಿಂದ ಬ್ರಾಹ್ಮಣನಿಗೆ ತೃಪ್ತಿಯನ್ನು ಸಂಪಾದಿಸುವುದು ಬಹಳ ಸುಲಭವು. ಅದರ ಪ್ರಯತ್ನವನ್ನು ನಡೆಸದೆ ಈಚೆಗೆ ಕೆಲವು ಕಾಲದಿಂದ ನಮ್ಮ ದೇಶೀಯರಲ್ಲಿ ಇತರರ ಸಹಾಯದಿಂದ ಅಭ್ಯಸ್ತವಾಗಿ ವೃದ್ಧಿಹೊಂದುತ್ತಲಿರುವ ದುರಾಶೆಯನ್ನೇ ಮೇಲೆ ಮೇಲೆ ವೃದ್ಧಿ ಹೊಂದಿಸುವ ಪ್ರಯತ್ನವನ್ನು ನಡೆಸುತ್ತಾ ಬಂದಲ್ಲಿ ಯಾವ ಕಾಲದಲ್ಲಿಯೂ ಸಂತೋಷ ಗಂಧವೂ ಇಲ್ಲದಂತಾಗುವುದು. ನಮ್ಮ ಈ ಅಭಿಪ್ರಾಯವನ್ನು ಸಾವಧಾನವಾಗಿ ಇದುವರೆಗಿನ ನಿಮ್ಮ ಅನುಭವದಿಂದ ವಿಚಾರಮಾಡಿದರೆ, ಆಗ್ಗ ನಮ್ಮ ಅಭಿಪ್ರಾಯವನ್ನೇ ಅನುಮೋದಿಸಿ ನೀವುಗಳು ನಮ್ಮನ್ನು ಅನುಸರಿಸುವಿರಲ್ಲದೆ ಬೇರೆ ಮಾರ್ಗವನ್ನು ಅನುಸರಿಸಲು ಅವಕಾಶವಿರಲಾರದು. ಆದ್ದರಿಂದ ಅವಿಚಾರದಿಂದ ತತ್ಕಾಲದಲ್ಲಿ ಅನುಕೂಲವೆಂದು ಭ್ರಾಂತಿಯಿಂದ ತೋರುತ್ತಲಿರುವ ಕುಮಾರ್ಗದಲ್ಲಿ ನಡೆವುದನ್ನು ಬಿಟ್ಟು ಚೆನ್ನಾಗಿ ವಿಚಾರಮಾಡಿ ಅನುಕೂಲವಾದ ಮಾರ್ಗದಲ್ಲಿ ವರ್ತಿಸುವುದು ಶ್ರೇಯಸ್ಕರವು. ಭಾರತ ರಾಮಾಯಣಾದಿ ಇತಿಹಾಸಗಳನ್ನೂ ಆಧುನಿಕರ ಚರಿತ್ರೆಗಳನ್ನೂ ನೋಡುವುದರಿಂದ ಪ್ರಪಂಚಸ್ಥಿತಿಯು ಯಾವಾಗಲೂ ಒಂದೇರೀತಿಯಲ್ಲಿ ಇರುವಂತಾಗಲಿ, ಖಡ್ಗಬಲದಿಂದ ಸ್ವಾಧೀನಮಾಡಿಕೊಂಡ ರಾಜ್ಯವು ಸ್ಥಿರವಾಗಿ ಒಬ್ಬರಿಂದಲೇ ಅನುಭವಿಸಲ್ಪಡುವಂತಾಗಲಿ ತಿಳಿಯಬರುವುದೋ ? ಒಂದು ಕಾಲದಲ್ಲಿ ಪರಾಕ್ರಮ ದಿಂದಲೂ ಯುಕ್ತಿಯಿಂದಲೂ ಸಂಪಾದಿಸಿದ ರಾಜ್ಯವನ್ನು ಇನ್ನೊಂದು ಕಾಲದಲ್ಲಿ ಅಂಥಾ ಪರಾಕ್ರಮವೂ, ಅದಕ್ಕೆ ಸಹಾಯಕವಾದ ಚತುರಂಗ ಬಲವೂ, ಪ್ರಯತ್ನವೂ ಮೊದಲಿಗಿಂತ ಯಾವ ಭಾಗದಲ್ಲಿಯೂ, ಕಡಿಮೆಯಾಗದಿದ್ದರೂ, ಅನೇಕರು ಕಳೆದುಕೊಂಡು ಕಷ್ಟಪಟ್ಟಂತೆ ನೀವು ಕೇಳಿ ಅರಿಯಿರೊ ? ಇದರಿಂದ ಕೇವಲ ಮನುಷ್ಯ ಪ್ರಯತ್ನ, ಪರಾಕ್ರಮ, ಸಹಾಯ, ಬುದ್ಧಿ ಕುಶಲತೆಗಳೇ ಸಂಪತ್ತನ್ನು ಸಂಪಾದಿಸುವುದರಲ್ಲಿಯೂ, ಸಂಪಾದಿಸಿದ್ದನ್ನು ಕಳೆದು ಕೊಳ್ಳುವುದಕ್ಕೂ, ಅವಕಾಶವಿಲ್ಲವಷ್ಟೆ? ಮೇಲಿನ ಸಾಮಗ್ರಿಗಳನ್ನು ಒದಗಿಸಿಕೊಟ್ಟು ಯತ್ನ ಮಾಡುವ ಮನುಷ್ಯನಿಗೆ ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಉಂಟುಮಾಡತಕ್ಕ ಬೇರೊಂದು ಪ್ರಬಲ ಕಾರಣವಿರುವುದೆಂದು ಬುದ್ಧಿಶಾಲಿಗಳು ಅಂಗೀಕರಿಸಬೇಕಲ್ಲವೆ ? ಅಂಥಾ ಪ್ರಬಲ ಕಾರಣವನ್ನು ನಂಬಲಿ ನಂಬದಿರಲಿ, ಆ ಕಾರಣವು ಒದಗಿಬಂದ ಕಾಲದಲ್ಲಿ ಮನುಷ್ಯನು

ತಾನು ಮಾಡುವ ಪ್ರಯತ್ನದ ಫಲವನ್ನು ಅನುಭವಿಸುತ್ತಲಿರುವನು. ಅದಕ್ಕೆ ವಿರುದ್ಧವಾದ ಕಾರಣವು ಒದಗಿಬರುವವರೆಗೂ ಇತರರು ಯಾವ ಪ್ರಯತ್ನದಿಂದಲೂ ಯಾವ ತೊಂದರೆಯನ್ನೂ ಉಂಟುಮಾಡಲಾರರು. ಈ ವಿಷಯವನ್ನು ಚೆನ್ನಾಗಿ ನಂಬಿ ಪ್ರತಿಯೊಬ್ಬರೂ ಜ್ಞಾಪಕದಲ್ಲಿಟ್ಟುಕೊಂಡು ಇದಕ್ಕೆ ಅನುಗುಣವಾಗಿ ವರ್ತಿಸುವುದು ಆವಶ್ಯಕವು. ಬ್ರಾಹ್ಮಣನಿಗೆ ಅಧರ್ಮವೆಂದು ಧರ್ಮಶಾಸ್ತ್ರದಲ್ಲಿ ಹೇಳಿರುವ ಸಮುದ್ರಯಾನವನ್ನು ಈಗ ಅನುಷ್ಠಾನದಲ್ಲಿ ತಾರದೆ ಒಂದು ನಿಮಿಷಕಾಲವನ್ನಾದರೂ ಕಳೆಯುವುದು ಕಷ್ಟವಾಗಿರುವುದೆಂಬ ವಿಷಯದಲ್ಲಿ ಅನೇಕ ವಿಧದಿಂದ ನಿಮಗೆ ಒದಗಿರುವ ತೊಂದರೆಗಳನ್ನು ವಿವರಿಸಿ, ಸಮುದ್ರಯಾನವನ್ನು ಮಾಡುವುದು ಯುಕ್ತವೆಂದು ನಮ್ಮ ಅನುಮತಿಯನ್ನು ಪಡೆಯುವುದಕ್ಕೋಸ್ಕರ ನಮ್ಮಲ್ಲಿಗೆ ಬಂದಿರುವ ನಿಮಗೆ ಅತ್ಯಂತಸಂಗ್ರಹವಾಗಿಯೂ ಅರ್ಥಗರ್ಭಿತವಾಗಿಯೂ, ಸೂತ್ರಪ್ರಾಯವಾಗಿಯೂ ಹೇಳಿರುವ ''ತೃಪ್ತಿ ಸಂಪಾದನೆಯು ಅವಶ್ಯಕರ್ತವ್ಯವು'' ಎಂಬ ಒಂದು ಉತ್ತರವನ್ನೇ ಇದುವರೆಗಿನ ನಿಮ್ಮ ಅನುಭವದಿಂದಲೂ, ಬುದ್ಧಿ ಕೌಶಲದಿಂದಲೂ, ವಿಸ್ತಾರವಾಗಿ ವ್ಯಾಖ್ಯಾನಗಳನ್ನು ಮಾಡಿಕೊಂಡು ವಿಚಾರಮಾಡಿ ತಿಳಿದುಕೊಂಡಲ್ಲಿ ನೀವುಗಳು ತೋರಿಸಿದ ಪ್ರತಿಯೊಂದು ತೊಂದರೆಯನ್ನೂ ತಪ್ಪಿಸಿಕೊಂಡು ಸುಖದಿಂದಲೂ, ಸಂತೋಷದಿಂದಲೂ ಜೀವಿಸಲು ಇದೊಂದೇ ಉಪಾಯವು ಸಾಕಾಗಿರುವುದೆಂದು ನಿಮ್ಮಗಳಿಗೆ ವ್ಯಕ್ತವಾಗಬಹುದು. ಕಾಲವು ಮನುಷ್ಯನಿಗೆ ಅಧರ್ಮಪ್ರವೃತ್ತಿಯಲ್ಲಿ ಒಂದು ಕಾರಣವಾಗಿರಬಹುದು. ಕಾಲಸ್ವಭಾವದಿಂದಲೇ ಉಂಟಾಗುವ ಅಧರ್ಮಪ್ರವೃತ್ತಿಯನ್ನು ನಿರೋಧಿಸಲು ಯಾರಿಂದಲೂ ಸಾಧ್ಯವಲ್ಲವು. ಈ ಕಾರಣದಿಂದ ಕೇವಲ ಅಸ್ವತಂತ್ರವೆನಿಸಿ ಕಾಲಾನುಗುಣವಾಗಿ ಅಧರ್ಮಪ್ರವೃತ್ತನಾದವನನ್ನು ಮತ್ತೆ ತಮ್ಮ ಸಂಘದಲ್ಲಿ ಸೇರಿಸಿಕೊಳ್ಳದೆ ದೂರ ಪಡಿಸುತ್ತ ಬರುವುದರಿಂದ ಕ್ರಮವಾಗಿ ಸಂಘಶಕ್ತಿಯು ಕಡಿಮೆಯಾಗಿ ಅದರಿಂದ ಬಲವು ಕುಂದಿಹೋಗುವುದೆಂದು ಯೋಚಿಸುವುದು ವಿಚಾರಪರರಿಗೂ, ನಿಜವಾಗಿ ಆತ್ಮಹಿತವನ್ನು ಕೋರತಕ್ಕವರಿಗೂ ಯುಕ್ತವಾದುದಲ್ಲವು. ನಮ್ಮ ಶರೀರದಲ್ಲಿರುವ ಪ್ರತಿಯೊಂದು ಅಂಗವೂ ನಮ್ಮ ಉಪಯೋಗಕ್ಕೆ ಬರತಕ್ಕದ್ದು. ಶರೀರದಲ್ಲಿರಬೇಕಾದ ಎಲ್ಲಾ ಅಂಗಗಳೂ ಸರಿಯಾಗಿದ್ದರೆ ಶರೀರದ ವ್ಯಾಪಾರಗಳು ಸರಿಯಾಗಿ ನಡೆಯುವುವು. ಯಾವ ಅಂಗವು ಹೀನವಾದರೂ ಅವು ನಡೆಯುವುದಿಲ್ಲವೆಂಬುದು ಅನುಭವಸಿದ್ಧವಾಗಿರುವದಷ್ಟೆ? ಈ ಕಾರಣದಿಂದ ಮನುಷ್ಯನಿಗೆ ತನ್ನ ಎಲ್ಲಾ ಅಂಗಗಳಲ್ಲಿಯೂ ಮಮತೆಯು ಒಂದೇ ವಿಧವಾಗಿರುವುದಲ್ಲದೆ ಅದರಲ್ಲಿ ತಾರತಮ್ಯವೇನೂ ಇರುವುದಿಲ್ಲ. ಹೀಗಿದ್ದರೂ, ಯಾವುದಾದರೊಂದು ಅಂಗವು ಸರ್ಪದಷ್ಟವಾದರೆ, ಅಥವಾ ಒಂದು ಅಂಗದಲ್ಲಿ ವ್ರಣವುಂಟಾದರೆ, ಅದರಿಂದ ಇತರಾಂಗಗಳಿಗೂ ವಿಷಸಂಬಂಧವುಂಟಾಗಿ ಶರೀರವೇ

ನಷ್ಟವಾಗುವುದೆಂಬ ನಂಬಿಕೆಯಿಂದಲೂ, ಭೀತಿಯಿಂದಲೂ, ತನ್ನ ಹಿತವನ್ನುಕೋರತಕ್ಕ ಮನುಷ್ಯನು ಯಾವ ಅಂಗವನ್ನಾಗಲಿ ತತ್‌ಕ್ಷಣವೇ ಛೇದಿಸಿ ನಿರ್ದುಷ್ಟವಾದ ಇತರಾಂಗಗಳನ್ನು ಕಾಪಾಡಿಕೊಳ್ಳುವನೋ ? ಅಥವಾ ದುಷ್ಟವಾದ ಅಂಗವನ್ನು ಛೇದಿಸುವುದರಿಂದ ತನ್ನ ವ್ಯಾಪಾರಗಳಿಗೆ ತೊಂದರೆಯಾಗುವುದೆಂದು ಯೋಚಿಸಿ ವಿಷಯುಕ್ತವಾದ ಅಂಗವನ್ನು ನಿಲ್ಲಿಸಿಕೊಂಡು ಅದರ ಸಂಸರ್ಗದಿಂದ ಪೂರ್ಣ ಶರೀರಕ್ಕೆ ಅಪಾಯ ಬರುವಂತೆ ಮಾಡಿಕೊಳ್ಳುವನೋ ? ಪರಿಶುದ್ಧರಾದ ಅನೇಕರ ಮಧ್ಯದಲ್ಲಿ ದೋಷಿಯಾದವನೊಬ್ಬನು ಸೇರುವುದರಿಂದ ಪ್ರತ್ಯವಾಯವೇನಿರಬಹುದೆಂಬ ಶಂಕೆಯೊಂದಿರಬಹುದು, ಈ ವಿಷಯದಲ್ಲಿ ಹಿಂದೆ ಹೇಳಿರುವ ಪುಷ್ಪದೃಷ್ಟಾಂತದಿಂದ ನಿಮಗೆ ಸಮಾಧಾನವಾಗುವುದು. ಮತ್ತೊಂದು ದೃಷ್ಟಾಂತದಿಂದಲೂ ನಿಮ್ಮ ಶಂಕೆಯನ್ನು ಪರಿಹರಿಸಬಹುದು. ಅದು ಹೇಗೆಂದರೆ ಪರಿಶುದ್ಧವಾದ ಹಾಲನ್ನು ಒಂದು ದೊಡ್ಡ ಪಾತ್ರೆಯಲ್ಲಿ ತುಂಬಿ ಅದರಲ್ಲಿ ಸಣ್ಣದಾದ ಒಂದು ವಿಷ ಬಿಂದುವನ್ನು ಬೆರೆಸುವುದರಿಂದ ಯಾವ ದೋಷವುಂಟಾಗುವುದೋ ಶುದ್ಧರಾದವರ ಮಧ್ಯದಲ್ಲಿ ಪಾಪಿಯಾದವನೊಬ್ಬನನ್ನು ಸೇರಿಸುವುದರಿಂದಲೂ, ಅಂತಹ ದೋಷವೇ ಉಂಟಾಗುವುದಲ್ಲದೆ ಬೇರೆಯಿಲ್ಲವು. ಆದ್ದರಿಂದ ಧರ್ಮಾಚರಣೆಯನ್ನು ಮಾಡತಕ್ಕ ಜನರು ಎಷ್ಟು ಸ್ವಲ್ಪ ಸಂಖ್ಯೆಯಿಂದ ಶುದ್ಧರಾಗಿ ಪ್ರಪಂಚದಲ್ಲಿ ಉಳಿದರೂ, ಅಷ್ಟುಮಂದಿಯಿಂದಲೇ ಬೇಕಾದ ಸಹಾಯವುಂಟಾಗಿ ಪ್ರಪಂಚವು ಉನ್ನತಸ್ಥಿತಿಗೆ ಬರಬಹುದಾದ್ದರಿಂದ ಆ ವಿಷಯದಲ್ಲಿ ಹೆದರಿಕೆಯನ್ನೂ, ಸಂಕೋಚವನ್ನೂ ಮಾಡಬೇಕಾಗಿಲ್ಲವು ಎಂದು ಶ್ರೀಗಳವರು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಈ ರೀತಿಯಾಗಿ ಶ್ರೀಗಳವರು ಯುಕ್ತಿಯುಕ್ತವಾಗಿಯೂ, ಶಾಸ್ತ್ರೀಯವಾಗಿಯೂ ಹೇಳಿದ ಹಿತೋಕ್ತಿಯಲ್ಲಿ ಶಿಷ್ಯರಿಗೆ ಸಂಪೂರ್ಣವಾಗಿ ನಂಬಿಕೆಯು ಬಂದು ಅವರು ತೃಪ್ತರಾಗಿದ್ದರೂ, ಚಿರಕಾಲಿಕವಾದ ಅಭ್ಯಾಸಬಲದಿಂದಲೂ, ಸಂಘದವರಲ್ಲಿದ್ದ ನಿರ್ಬಂಧದಿಂದಲೂ ನಿಶ್ಶಂಕವಾಗಿ ಸಮುದ್ರಯಾನವನ್ನು ಮಾಡುವುದಕ್ಕೆ ಹಿಂಜರಿದರು. ಮೂವತ್ತು ವರ್ಷಗಳಿಂದ ಈಚೆಗೆ ಕಾಲಸ್ವಭಾವದಿಂದ ಜನಗಳಲ್ಲಿ ಅಧರ್ಮಪ್ರವೃತ್ತಿಯು ಹೆಚ್ಚುತ್ತಾ ಬಂದುದರಿಂದಲೂ, ಈ ಕಾರಣದಿಂದಲೇ ಪಂಗಡದವರಲ್ಲಿ ದೀರ್ಘಕಾಲದಿಂದ ರೂಢಮೂಲವಾಗಿದ್ದ ನಿರ್ಬಂಧಗಳು ಸಡಿಲವಾಗುತ್ತ ಬಂದುದರಿಂದಲೂ, ರಾಜ್ಯಭಾರವನ್ನು ಮಾಡತಕ್ಕ ಸರ್ಕಾರದವರು ಕೂಡ ಬೇಕಾದ ಸಹಾಯವನ್ನು ಕೊಟ್ಟು ಪ್ರೋತ್ಸಾಹಿಸುತ್ತ ಬಂದುದರಿಂದಲೂ ಇದುವರೆಗೆ ಅನೇಕರು ಸಮುದ್ರಯಾನದಿಂದ ದ್ವೀಪಾಂತರ ವಾಸಮಾಡಿ ಬಂದಿರುವರು. ಹಾಗೆ ಬಂದವರು ಸಂಘದವರಿಂದ ದೂರಮಾಡಲ್ಪಡದೆ ಪ್ರಾಯಃ ತಮ್ಮ ತಮ್ಮ ಸಂಘದವರೊಡನೆ ಸೇರಿ ವ್ಯವಹಾರಗಳನ್ನು ನಡೆಸುತ್ತಲಿರುವಂತೆಯೂ

ಕಂಡುಬಂದಿರುವುದು. ಈ ಫಲವನ್ನು ತಾನೆ ದೇಶದ ಮತ್ತು ದೇಶೀಯರ ಏಳಿಗೆಗಾಗಿ ಸಂಪಾದಿಸಬೇಕೆಂದು ಮೂವತ್ತು ವರ್ಷಗಳ ಹಿಂದೆ ಕೆಲವರು ಶ್ರೀ ಸ್ವಾಮಿಗಳವರಲ್ಲಿ ತಿಳಿಸಿಕೊಂಡದ್ದು? ಈಗ ನಾವು ಪೂರ್ಣಕಾಮರಾದೆವಷ್ಟೆ? ಇದರಿಂದ ನಮ್ಮ ದೇಶಕ್ಕೆ ಆಗಿರುವ ಪ್ರಯೋಜನವನ್ನೂ, ದೇಶೀಯರಿಗುಂಟಾಗಿರುವ ಸುಖವನ್ನೂ, ದೇಶಾಂತರಗತವಾಗಿದ್ದ ಸ್ವದೇಶೀಯರ ಸಂಪತ್ತು ಹಿಂತಿರುಗಿ ಬಂದ ರೀತಿಯನ್ನೂ ಕುರಿತು ಯೋಚಿಸುವುದಕ್ಕೆ ಇದು ಸರಿಯಾದ ಸಮಯವಲ್ಲವೆ ? ಹಾಗೆ ಯೋಚಿಸಿ ನೋಡಿದರೆ ಧರ್ಮಲೋಪವನ್ನು ಮಾಡಿಕೊಂಡು ಒಂದು ನಿಮಿಷವಾದರೂ ಬುದ್ಧಿಗೆ ಸ್ಥೈರ್ಯವಿಲ್ಲದ ಹಾಗೆ ದ್ರವ್ಯ ಸಂಪಾದನೆಮಾಡಬೇಕೆಂಬ ವಿಷಯದಲ್ಲಿ ಅಪಾರವಾಗಿ ಹೆಚ್ಚಿರುವ ಆಶೆಯೆಂಬ ಫಲವು ಮಾತ್ರ ಸರ್ವತ್ರ ಹರಡಿಕೊಂಡಿರುವುದಲ್ಲದೆ ಬೇರೆ ಯಾವುದೊಂದೂ ಫಲವನ್ನೂ ನಮ್ಮ ದೇಶೀಯರು ಪಡೆಯಲಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಈ ಫಲಕ್ಕೆ ಕಾರಣವನ್ನು ಹೊಸದಾಗಿ ಹುಡುಕಲೇಕೆ ? ಶ್ರೀ ಸ್ವಾಮಿಗಳವರು ಹಿಂದೆ ಅಪ್ಪಣೆಕೊಡಿಸಿದಂತೆ ದೇಶಾಂತರವಾಸ, ಅಲ್ಲಿನ ಜನರ ಸಹವಾಸ ಇವುಗಳಿಂದ ನಮ್ಮ ದೇಶೀಯರಲ್ಲಿ ಇದುವರೆಗೆ ನಾಮಮಾತ್ರದಿಂದಾದರೂ ತಗುಲಿಕೊಂಡಿದ್ದ ಬ್ರಾಹ್ಮಣನಿಗೆ ಮುಖ್ಯವಾದ ಮತ್ತು ಸತ್ವಪ್ರಧಾನವಾದ ಶಾಂತಿ ದಾಂತ್ಯಾದಿಗುಣಗಳೆಲ್ಲವೂ ನಿರ್ಮೂಲಮಾಡಲ್ಪಟ್ಟವು. ಇದಕ್ಕೆ ಬದಲಾಗಿ ರಾಜಸತಾಮಸ ಪ್ರಧಾನಗಳಾದ ಅಹಂಕಾರ, ಮಮಕಾರಾದಿಗಳು ಯಥೇಚ್ಛವಾಗಿ ಬ್ರಾಹ್ಮಣರನ್ನು ಸೇರಿಕೊಂಡವು. ಈ ಗುಣಗಳ ಪ್ರಭಾವದಿಂದ ''ರಾಜಾ ಪ್ರತ್ಯಕ್ಷದೈವತಂ'' ''ಅಷ್ಟಾಭಿರ್ಲೋಕಪಾಲಾನಾಂ ಮಾತ್ರಾಭಿರ್ನಿರ್ಮಿತೋ ನೃಪಃ'' ''ನಾವಿಷ್ಣುಃ ಪೃಥಿವೀಪತಿಃ'' ಎಂಬ ಶಾಸ್ತ್ರಮರ್ಯಾದೆಯಿಂದ ರಾಜರ ವಿಷಯದಲ್ಲಿ ನಮ್ಮ ಭಾರತೀಯರಿಗಿದ್ದ ಭಾವನೆಯು ಯಾವಾಗ ವ್ಯತ್ಯಾಸವನ್ನು ಹೊಂದಿತೋ ಆಗ ನಮ್ಮ ವಿಷಯದಲ್ಲಿ ರಾಜರಿಗೂ ಪ್ರೀತಿ ವಿಶ್ವಾಸಗಳು ಕಡಿಮೆಯಾಗುವುದು ಸಹಜವಷ್ಟೆ? ಈ ಪ್ರಯೋಜನವು ಈಚೆಗೆ ನಮ್ಮ ದೇಶೀಯರು ಪಡೆದ ಪ್ರಯೋಜನಗಳಲ್ಲಿ ಒಂದಾಗಿರುವುದೆಂದು ಗಣನೆ ಮಾಡಬಹುದಾಗಿದೆ. ಯಾವ ಕಾಲದಲ್ಲಿಯೂ ಅಲ್ಪಸಂತುಷ್ಟರಾಗಿ ತಮಗೆ ಧರ್ಮವೆಂದು ಹೇಳಲ್ಪಟ್ಟಿರುವ ವ್ಯಾಪಾರಗಳಲ್ಲದೇ ಬೇರೊಂದರಲ್ಲಿ ಪ್ರವರ್ತಿಸದೆ ಸಾಧ್ಯವಾದ ಮಟ್ಟಿಗೂ ಇತರರು ತಾವಾಗಿಯೇ ಭಕ್ತಿಯನ್ನೂ ಗೌರವವನ್ನೂ ತಮ್ಮಲ್ಲಿ ಮಾಡುವಂತೆಯೂ ಇತರರು ಕ್ಷೇಮಿಗಳಾಗಿದ್ದು ತಮಗೆ ಸಹಾಯರಾಗಿರಲೆಂದು ಮನಃಪೂರ್ವಕವಾಗಿ ಚಿಂತಿಸುವಂತೆಯೂ ಬ್ರಾಹ್ಮಣರಲ್ಲಿದ್ದ ವರ್ತನವು ಅನ್ಯಥಾ ಪರಿಣಾಮವನ್ನು ಹೊಂದಲಾಗಿ ರಾಜಪ್ರೀತಿಯು ಪ್ರಾಯಃ ಕಡಿಮೆಯಾಗುತ್ತಾ ಬಂದಿರಬಹುದೆಂಬ ನಂಬಿಕೆಯಿಂದ, ಬ್ರಾಹ್ಮಣೇತರರೆಲ್ಲರೂ ಸಾಮಾನ್ಯವಾಗಿ ಬ್ರಾಹ್ಮಣರನ್ನು ನಿಂದಿಸುವಂತೆಯೂ, ದ್ವೇಷಿಸುವಂತೆಯೂ ಆಗಿರುವ ಈ

ಮಹಾಪ್ರಯೋಜನವನ್ನೂ ಹೊಸದಾಗಿ ಸಂಪಾದಿಸಿದಂತಾಯಿತು. ಈಶ್ವರಸೃಷ್ಟವಾದ ಪ್ರಪಂಚದಲ್ಲಿ ಆಯಾ ದೇಶಕಾಲಗಳಿಗನುಗುಣವಾಗಿ ಆಯಾ ದೇಶೀಯರ ಜೀವನಕ್ಕೂ, ಅವರವರ ಪ್ರಯೋಜನ ಮತ್ತು ಸುಖಗಳಿಗೂ ದೇವರು ಕಲ್ಪಿಸಿರುವ ಪದಾರ್ಥಗಳೂ ತೋರಿಸಿರುವ ಮಾರ್ಗಗಳೂ ಭಿನ್ನ ಭಿನ್ನವಾಗಿದ್ದರೂ, ನಿಯಾಮಕನಾದ ಮತ್ತೊಬ್ಬನು ನಮ್ಮ ದೃಷ್ಟಿಗೋಚರನಾಗದೆ ಇರುವನೆಂಬ ನಂಬಿಕೆಯು ಜನರಲ್ಲಿ ತಪ್ಪಿಹೋಯಿತು. ಇದರಿಂದ ದೇಶಕಾಲಗಳ ಸಹಾಯವನ್ನು ಯೋಚಿಸದೆ ಯಾವ ದೇಶದಲ್ಲಿಯಾಗಲಿ, ಯಾವ ಕಾಲದಲ್ಲಿಯಾಗಲಿ ಯಾವ ಕೆಲಸವನ್ನಾದರೂ ಮಾಡಿ ಅದರ ಪ್ರಯೋಜನವನ್ನು ಯಾರಾದರೂ ಪಡೆಯಬಹುದೆಂಬ ಆಶೆಯೂ ಅಭಿಮಾನವೂ ಹೆಚ್ಚುತ್ತಬಂದುದರಿಂದ ಕೇವಲ ಖನಿಜಗಳಿಂದಲೇ ತಮ್ಮ ಸೌಖ್ಯವನ್ನೂ ಜೀವನವನ್ನೂ ನಡೆಸಿಕೊಳ್ಳುತ್ತಬಂದ ದೇಶಾಂತರೀಯರನ್ನು ನೋಡಿ ಅವರನ್ನನುವರ್ತಿಸುವುದರಿಂದ ನಮ್ಮ ಸಂಪತ್ತುಗಳನ್ನು ಹೆಚ್ಚಿಸಿಕೊಂಡು ಹೆಚ್ಚಾದ ಸುಖವನ್ನು ಅನುಭವಿಸಬಹುದೆಂಬ ನಂಬಿಕೆಯು ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ರೂಢಮೂಲವಾಗುತ್ತ ಬಂದಿತು. ಅದಕ್ಕೆ ಅನುರೂಪವಾಗಿ ದೇಶೀಯ ಸರಕಾರದವರ ಸಹಾಯವೂ ಪ್ರೋತ್ಸಾಹವೂ ಒದಗಿತು. ಇದರಿಂದ ಚಿರಕಾಲದಿಂದಲೂ ಹಿಂದೂ ದೇಶದಲ್ಲಿ ಸ್ವಭಾವವಾಗಿ ಜನಗಳು ಯಾವ ವ್ಯಾಪಾರಗಳನ್ನು ನಡೆಸುತ್ತಿದ್ದರೋ, ಯಾವ ಮಾರ್ಗದ ಅವಲಂಬನದಿಂದ ತಮ್ಮ ಜೀವಿಕೆಯನ್ನು ನೆರವೇರಿಸಿಕೊಂಡು ಬರುತ್ತಲಿದ್ದರೋ ಆ ವಿಷಯದಲ್ಲಿ ಅನಾದರವುಂಟಾಯಿತು. ಇತರ ದೇಶೀಯರ ವ್ಯಾಪಾರಗಳನ್ನು ನಡೆಸುವುದಕ್ಕೆ ನಮ್ಮ ದೇಶೀಯರ ದ್ರವ್ಯವನ್ನು ಮತ್ತೆ ಮತ್ತೆ ಹೊರಗಿನವರಿಗೆ ಕೊಟ್ಟು ಅನೇಕವಾದ ಯಂತ್ರಸಾಮಗ್ರಿಗಳನ್ನು ತರುವಂತಾಯಿತು. ಆರಂಭದಲ್ಲಿ ನಾವು ಕೊಟ್ಟ ದ್ರವ್ಯವೂ ಮಧ್ಯಕಾಲಗಳಲ್ಲಿ ಆಯಾ ಸಾಧನಗಳ ರಕ್ಷಣೆಗಾಗಿ ಅಸಕೃದಾವೃತ್ತಿ ಕೊಡಬಹುದಾದ ದ್ರವ್ಯವೂ ನಮಗೆ ಹಿಂತಿರುಗಿ ಬರುವುದಿಲ್ಲವೆಂಬ ನಂಬಿಕೆಯಿರಬಹುದಾಗಿದ್ದರೂ ಸ್ವಲ್ಪವಾದರೂ ಆ ಭಾಗವನ್ನು ಯೋಚಿಸದೆ ನೂತನಮಾರ್ಗಾಶ್ರಯಣದಿಂದ ವಿಶೇಷವಾಗಿ ದ್ರವ್ಯವನ್ನು ಸಂಪಾದಿಸುವೆವು ಎಂಬೀ ಅಭಿಮಾನವು ನಮ್ಮ ದೇಶೀಯರಲ್ಲಿ ಸಂಪೂರ್ಣವಾಗಿ ತುಂಬಿರುವಂತೆ ತೋರುತ್ತಲಿರುವುದು. ನದಿಯಲ್ಲಿ ಪ್ರವಾಹವು ಹೆಚ್ಚಾಗಿ ಬಂದಿರುವುದೆಂದು ಹೇಳಬೇಕಾದರೆ, ಮೊದಲಿದ್ದ ನೀರಿಗಿಂತಲೂ ಬೇರೆನೀರು ಬೇರೊಂದುಕಡೆಯಿಂದ ಬಂದು ತುಂಬಿದ ಕಾಲದಲ್ಲಿ ಪ್ರವಾಹವು ಹೆಚ್ಚಾಗಿರುವುದೆಂಬ ವ್ಯವಹಾರಕ್ಕೆ ಅವಕಾಶವಿರುವುದೋ ? ಅಥವಾ ಅಧಿಕವಾದ ಬಿಸಿಲಿನಿಂದ ಬತ್ತಿ ಹೋಗುತ್ತಿರುವ ನೀರಿಗೆ ಕಟ್ಟೆಯನ್ನು ಕಟ್ಟಿ ನೀರು ಮುಂದಕ್ಕೆ ಹರಿಯದಂತೆ ಮಾಡಿ ಕಟ್ಟೆಯ ಹಿಂಭಾಗದಲ್ಲಿ ಅದರ ಪ್ರಮಾಣವಿರುವ ಮಟ್ಟಿಗೆ ನೀರು ನಿಂತದ್ದನ್ನು ನೋಡಿ ನದಿಯಲ್ಲಿ

ನೀರು ಹೆಚ್ಚಿತೆಂತಲೂ ಪ್ರವಾಹವು ಹೆಚ್ಚಾಗಿ ಬಂದಿತೆಂತಲೂ ವ್ಯವಹರಿಸುವರೊ ? ಅದರಂತೆ ಸಂಪತ್ತು ವೃದ್ಧಿಯಾಗುವುದೆಂದರೆ ಬೇರೊಂದು ದೇಶದಿಂದಲೂ, ಬೇರೊಂದು ಮಾರ್ಗದಿಂದಲೂ ದ್ರವ್ಯವು ಬಂದು ನಮ್ಮ ದೇಶದ ದ್ರವ್ಯದಲ್ಲಿ ಸೇರುವದಾದರಷ್ಟೆ ನಮ್ಮ ದೇಶೀಯರ ಭಾಗ್ಯವು ಹೆಚ್ಚಿದಂತೆ ತಿಳಿಯಬಹುದು ಮತ್ತು ಹಾಗೆ ಹೇಳಿಕೊಳ್ಳಬಹುದು ? ಇದುವರೆಗಿನ ಅನುಭವದಿಂದ ಈ ಫಲವನ್ನು ಯಾರಾದರೂ ನೋಡಿರುವರೋ ? ಕಳೆದು ಹೋದ ದ್ರವ್ಯವನ್ನು ಹೊರಗಿನಿಂದ ಬರಮಾಡಿಕೊಳ್ಳುವ ಉದ್ದೇಶದಿಂದ ನಡೆಸುವ ಪ್ರಯತ್ನವು ಫಲಕಾರಿಯಾಗಲಾರದೆಂದು ತಿಳಿಯದೇ ಇಲ್ಲವು. ಆದರೆ ಇನ್ನು ಮುಂದಾದರೂ ನಮ್ಮ ದೇಶದ ವಿಭವವು ಹೊರಗೆ ಹೋಗದಂತೆ ನಿರೋಧಿಸುವುದರಲ್ಲಿ ಮಾತ್ರ ನಮ್ಮ ಪ್ರಯತ್ನವೆಂದು ಕೆಲವರು ಹೇಳುವಂತೆ ಕಂಡುಬಂದಿದೆ. ಈ ಪ್ರಯತ್ನವನ್ನಾದರೂ ನಡೆಸುವುದು ನಿಜವಾಗಿರುವ ಪಕ್ಷದಲ್ಲಿ

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥

ಎಂಬಂತೆ ಉರಿಯುತ್ತಲಿರುವ ಅಗ್ನಿಯನ್ನು ಅಡಗಿಸಲೋಸುಗ ಹೆಚ್ಚಾದ ನೀರನ್ನು ಅಗ್ನಿಯಲ್ಲಿ ಸುರಿದರೆ ಅದು ಶಾಂತವಾಗುವುದೊ ? ಅಥವಾ ಆಜ್ಯಧಾರೆಯನ್ನಾಗಲಿ ಅದಕ್ಕಿಂತಲೂ ವೇಗವಾದ ವಿದೇಶದ ಎಣ್ಣೆಯನ್ನಾಗಲಿ ತುಂಬಿ ತುಂಬಿ ಸುರಿವುದರಿಂದ ಆ ಜ್ವಾಲೆಯನ್ನು ಆರಿಸಬಹುದೋ ? ದೇಶಾಂತರದವರು ತಮ್ಮ ದೇಶಾನುಗುಣವಾಗಿ ವ್ಯವಹಾರಗಳನ್ನು ನಡೆಸುವುದಕ್ಕೂ ಅದರಿಂದ ತಮ್ಮ ಜೀವನಯಾತ್ರಾ ನಿರ್ವಾಹವನ್ನು ಮಾಡಿಕೊಳ್ಳುವುದಕ್ಕೂ, ಅನೇಕ ಕಾಲದಿಂದ ಕಂಡುಹಿಡಿದಿರುವ ಉಪಾಯಗಳನ್ನೂ ಮಾಡುತ್ತಿರುವ ಪ್ರಯತ್ನಗಳನ್ನೂ ನಮ್ಮ ದೇಶೀಯರು ಕಂಡುಹಿಡಿಯುವುದಕ್ಕೂ ಅನಂತರ ಅದನ್ನು ಅನುಸರಿಸಿ ಪ್ರಯತ್ನಗಳನ್ನು ನಡೆಸುವುದಕ್ಕೂ ದೇಶಕಾಲಗಳ ಸ್ವಭಾವವನ್ನು ಗಮನಿಸದೇಹೋದರೂ, ದೇಶಾಂತರದವರ ಸಹಾಯವೇ ಮುಖ್ಯವಾಗಿ ಬೇಕಾಗಿರುವ ದಲ್ಲವೆ ? ಇದುವರೆಗಿನ ಅನುಭವದಿಂದ ದೇಶಾಂತರೀಯರ ಸಹಾಯವೂ, ಅವರಿಂದ ಸಿದ್ಧಿಸಲ್ಪಟ್ಟ ಪದಾರ್ಥಗಳ ಸಹಾಯವೂ, ಇಲ್ಲದೆ ನಮ್ಮ ದೇಶೀಯರು ಯಾರಾದರೂ ಸ್ವತಂತ್ರವಾಗಿ ದೇಶಾಂತರದವರು ನಡೆಸುವ ವ್ಯಾಪಾರಗಳನ್ನೂ ಅವರ ರೀತಿಯನ್ನೂ ಬಿಟ್ಟು ಬೇರೆರೀತಿಯಿಂದ ಆಚರಿಸಿರುವಂತೆಯೂ, ಅದರಿಂದ ಪ್ರಯೋಜನವನ್ನು ಹೊಂದಿರು ವಂತೆಯೂ ತಿಳಿದುಬಂದಿರುವುದೊ ? ಆರಂಭದಲ್ಲಿ ಕೆಲವುಕಾಲದವರೆಗೆ ಇತರರ ಸಹಾಯದಿಂದ ನಮ್ಮ ದೇಶೀಯರು ದೇಶಾಂತರೀಯರ ವ್ಯಾಪಾರಗಳನ್ನು ನಡೆಸುತ್ತ

ಬಂದರೂ ಅದರ ತಿಳಿವಳಿಕೆಯೂ, ಅನುಭವವೂ ಹೆಚ್ಚಿದನಂತರ ಅವರುಗಳ ಸಹಾಯವನ್ನು ಕೋರದೆ ನಾವುಗಳೇ ಸ್ವತಂತ್ರರಾಗಿ ಎಲ್ಲಾ ವ್ಯಾಪಾರಗಳನ್ನೂ ನಡೆಸಬಹುದೆಂಬ ಒಂದು ಸಮಾಧಾನವನ್ನು ಕೆಲವರು ಹೇಳಬಹುದು. ಈ ಅಭಿಪ್ರಾಯವು ಕಾರ್ಯದಿಂದ ಸ್ಥಿರವಾಗಬೇಕಾದರೆ ಬ್ರಾಹ್ಮಣನಿಗೆ ಸಹಜ ಧರ್ಮಗಳೆಂದು ಹಿಂದೆ ಹೇಳಿರುವ ಶಾಂತ್ಯಾದಿಗಳು ಸಂಪೂರ್ಣವಾಗಿ ದೇಶಾಂತರೀಯರನ್ನು ಸೇರಿ, ತೃಪ್ತಿಯೆಂಬ ಮಹಾಭಾಗ್ಯವು ಅವರಲ್ಲಿ ಸ್ಥಿರವಾಗಿ ನಿಲ್ಲುವುದಾದರೆ ಆಗ್ಗೆ ಆ ಜನರಿಗೆ ತಮ್ಮ ವ್ಯಾಪಾರಗಳಲ್ಲಿ ಜಿಹಾಸೆಯೂ, ಔದಾಸೀನ್ಯವೂ ಉಂಟಾಗಿ, ಇತರ ದೇಶೀಯರು ತಮ್ಮ ವ್ಯವಹಾರಗಳನ್ನು ಚೆನ್ನಾಗಿ ತಿಳಿದು ಅವುಗಳನ್ನು ಸ್ವತಂತ್ರವಾಗಿ ನಡೆಸಿಕೊಂಡು ಸುಖವಾಗಿರಲೆಂಬ ಅಭಿಪ್ರಾಯವು ಆ ಜನಗಳಿಗೆ ಹುಟ್ಟಿ ರಹಸ್ಯಾರ್ಥಗಳನ್ನು ನಮಗೆ ಆ ಜನರು ಬೋಧಿಸುವುದಾದರೆ ಅವರು ನಡೆಸುವ ಎಲ್ಲಾ ವ್ಯಾಪಾರಗಳನ್ನೂ ನಾವು ನಡೆಸಲು ಸ್ವತಂತ್ರರಾಗಬಹುದು. ಅದರಿಂದ ಉಂಟಾಗತಕ್ಕ ಪ್ರಯೋಜನದ ವಿಷಯ ಹೇಗಾದರೂ ಇರಲಿ. ಅದರ ವಿಚಾರವು ಪ್ರಕೃತ ಅನಾವಶ್ಯಕವು. ಈ ಮೇಲಿನ ಸಂಗತಿಯು ಸಾಧ್ಯವೋ ? ಈ ಭಾಗವನ್ನು ಚೆನ್ನಾಗಿ ಯೋಚಿಸಬೇಕು. ಹಾಗಿಲ್ಲದೆ ಮತ್ತೊಬ್ಬರನ್ನು ನೋಡಿ ಅವರಂತೆ ಆಚರಿಸಬೇಕೆಂಬ ಆಶೆಯಿಂದ ಮಾತ್ರ ಮಾಡುವ ಪ್ರಯತ್ನಗಳಿಂದ ಅನರ್ಥಪ್ರಾಪ್ತಿಯಾಗುವುದೇ ಹೊರತು ಅರ್ಥಪ್ರಾಪ್ತಿಯಾಗುವ ದಿಲ್ಲವು. ಈಚೆಗೆ ನಮ್ಮ ದೇಶೀಯರಲ್ಲಿ ಅನೇಕರು ಬಟ್ಟೆಗಳನ್ನು ಮಾಡತಕ್ಕ ಯಂತ್ರಗಳನ್ನೂ, ಕಬ್ಬಿಣವನ್ನು ಮಾಡತಕ್ಕ ಯಂತ್ರಗಳನ್ನೂ ಇದರಂತೆ ಅನೇಕ ಕಾರ್ಯಗಳನ್ನು ನಡೆಸುವುದಕ್ಕೆ ಇನ್ನೂ ಅನೇಕ ಯಂತ್ರಗಳನ್ನೂ ದೇಶಾಂತರದಿಂದ ತಂದು ನಮ್ಮ ದೇಶದಲ್ಲಿಟ್ಟು ಕೆಲಸಗಳನ್ನು ಮಾಡುತ್ತಲಿರುವರು. ಹಾಗೆ ತರಿಸಿದ ಯಂತ್ರ ಸಾಮಗ್ರಿಗಳಿಗಾಗಿ ಯಂತ್ರಕರ್ತರಿಗೂ ಆ ಪದಾರ್ಥಗಳನ್ನು ನಮ್ಮ ದೇಶಕ್ಕೆ ತಂದು ಕೊಟ್ಟವರಿಗೂ ಹೇರಳವಾದ ಹಣವನ್ನು ಸಲ್ಲಿಸಿರುವರು. ಅದರ ವರಮಾನವನ್ನು ಅವರು ಇಟ್ಟಿರುವ ಲೆಕ್ಕಗಳಿಂದ ವಿಚಾರಮಾಡಿ ನೋಡಿದರೆ ಇದುವರೆಗೆ ಅವರು ಖರ್ಚುಮಾಡಿರುವ ಮತ್ತು ಈಗಲೂ ಪ್ರತಿಕ್ಷಣದಲ್ಲಿಯೂ ಖರ್ಚುಮಾಡುತ್ತಲಿರುವ ಹಣದ ಮೊತ್ತದಮೇಲೆ ಶೇಕಡಾ 12ರ ಲಾಗಾಯ್ತು 36 ರೂಪಾಯಿಗಳವರೆಗೆ ಬಡ್ಡಿಯು ಬರುವುದೆಂದು ಹೇಳುವರು. ಕೆಲವರು ತಾವು ಖರ್ಚು ಮಾಡಿದ ದ್ರವ್ಯವೆಲ್ಲವೂ ತಮಗೆ ಲಾಭವಾಗಿರುವದೆಂದು ಹೇಳಿಕೊಂಡು ಸಂತೋಷಿಸುತ್ತ ಲಿರುವರು. ಈ ಭಾಗವು ನಿಜವಲ್ಲವೆಂದು ಯಾರೂ ಹೇಳಲಾರರು. ಆದರೆ ನಮ್ಮ ದೇಶೀಯರಿಗೆ ಬರುತ್ತಲಿರುವ ದ್ರವ್ಯವು ಯಾರದು ? ಯಾರಿಂದ ಬರುತ್ತಲಿದೆ ? ಇದರ ಫಲವು ದೇಶೀಯರಿಗೆ ಯಾವ ವಿಧದಿಂದ ಉಂಟಾಗುತ್ತಲಿದೆ ? ಎಂಬ ವಿಷಯವನ್ನು ಮಾತ್ರ ಸ್ವಲ್ಪ ಸಾವಕಾಶವಾಗಿ ವಿಚಾರಮಾಡಲೇಬೇಕು. ಹಾಗೆ ವಿಚಾರಮಾಡಿದರೆ ಹೆಚ್ಚಾದ

ದ್ರವ್ಯವನ್ನು ಆರಂಭದಲ್ಲಿ ವ್ಯಯಮಾಡಿ ಯಂತ್ರಗಳನ್ನು ತಂದವರು ತಮ್ಮ ಹಣಕ್ಕೆ ಹೆಚ್ಚಾದ ಬಡ್ಡಿಯು ಬರಬೇಕೆಂಬ ವಿಷಯದಲ್ಲಿಯೂ ಇತರರಲ್ಲಿ ಬಡ್ಡಿಗಾಗಿ ಸಾಲವನ್ನು ತಂದು ಯಂತ್ರಗಳನ್ನು ಇಟ್ಟವರು ತಮ್ಮ ಸಾಲವು ತೀರಿ ತಮಗೆ ಲಾಭವು ಹೆಚ್ಚಾಗಿ ಬರಬೇಕೆಂಬ ವಿಷಯದಲ್ಲಿಯೂ, ಆತುರರಾಗಿರುವುದು ಸಹಜವು. ಹಾಗಿಲ್ಲದೆ ದೇಶೀಯರಿಗೆ ಸಹಾಯಮಾಡಬೇಕೆಂಬುದರಲ್ಲಿಯೇ ಗಮನವುಳ್ಳವರಾದರೆ ಹಾಗೆ ಯೋಚಿಸತಕ್ಕವರ ಹೆಸರೇ ಇಲ್ಲದಂತಾಗುವುದು. ಆದ್ದರಿಂದ ಅವರು ಆ ರೀತಿ ಯೋಚಿಸುವುದಕ್ಕೆ ಸಾಧ್ಯವೇ ಇಲ್ಲವು. ತಮ್ಮ ಲಾಭವನ್ನು ಯೋಚಿಸುವುದಾದರೆ ಒಂದಕ್ಕೆ ನಾಲ್ಕರಷ್ಟು ಇತರರಿಂದ ಹೊಂದಬೇಕಾಗಿ ಬರುವದು. ಲೋಕದ ಜನಗಳಾದರೋ ಆದಾಯ ನಷ್ಟಗಳನ್ನೂ ಮುಂದಿನ ಪರಿಣಾಮವನ್ನೂ ಯೋಚಿಸಲು ಅವಕಾಶವಿಲ್ಲದವರಾಗಿ ಸೌಲಭ್ಯ, ಕಾಲ ಶೈಘ್ರ್ಯ ಇವುಗಳಲ್ಲಿ ಮಾತ್ರ ಗಮನವುಳ್ಳವರಾಗಿ ''ಗತಾನುಗತಿಕೋ ಲೋಕಃ'' ಎಂಬಂತೆ ಒಬ್ಬರನ್ನು ನೋಡಿ ಮತ್ತೊಬ್ಬರು ಮುಂದು ಬಿದ್ದು ಅಲ್ಪವ್ಯಯದಿಂದ ಸಾಧಿಸಬಹುದಾದ ಅತ್ಯಲ್ಪ ಕಾರ್ಯದಲ್ಲಿಯಾದರೂ ತಮ್ಮ ದ್ರವ್ಯವನ್ನು ಹೆಚ್ಚಾಗಿ ವ್ಯಯಮಾಡಿ ತಾತ್ಕಾಲಿಕ ಸುಖವನ್ನು ಪಡೆಯಲು ಆಪೇಕ್ಷೆಯುಳ್ಳವರಾಗಿರುವರು. ಇದರಿಂದ ಅನೇಕ ಜನರಲ್ಲಿ ತಾರತಮ್ಯಾನುಸಾರ ಹರಡಿಕೊಂಡಿರುವ ನಮ್ಮ ದೇಶೀಯರ ಸಂಪತ್ತು ಕ್ರಮಕ್ರಮವಾಗಿ ಕೆಲವು ಜನರನ್ನು ಮಾತ್ರ ಸೇರಿ ದರಿದ್ರರು ದೇಶದಲ್ಲಿ ಅಸಂಖ್ಯಾತರಾಗಿ ಹೆಚ್ಚುವುದರಿಂದ ದೇಶೀಯರ ಕಷ್ಟವು ಬಹಳವಾಗಿ ಹೆಚ್ಚಬಹುದು. ದರಿದ್ರರಲ್ಲಿ ಅನೇಕರು ತಮ್ಮ ಜೀವನಕ್ಕೆ ದೇಹಪ್ರಯಾಸದಿಂದ ಅನೇಕ ಕಾರ್ಯಗಳನ್ನು ಮಾಡಿ ಅದರಿಂದ ಪಡೆಯಬಹುದಾದ ಸ್ವಲ್ಪ ಪ್ರಯೋಜನದಿಂದಲೇ ತೃಪ್ತರಾಗಿ ತಮ್ಮ ಜೀವನವನ್ನು ಸ್ವತಂತ್ರವಾಗಿ ನಡೆಸಿಕೊಳ್ಳುತ್ತಲಿದ್ದರು. ಅಂಥಾ ಹಲವು ಕೆಲಸಗಳನ್ನು ಯಂತ್ರಸಹಾಯದಿಂದ ಮಾಡಿ ಅಧಿಕಲಾಭವನ್ನು ಪಡೆಯಬೇಕೆಂಬ ಆಶೆಯಿಂದ ಕೆಲವರು ಪ್ರವೃತ್ತರಾಗಿರುವುದರಿಂದ ಅನೇಕ ಜನರ ಜೀವಿಕೆಗೆ ಭಂಗವುಂಟಾಗಿ ತನ್ಮೂಲಕ ಅವರು ಕಷ್ಟಪಡುವಂತೆ ಆಗಿರುವುದು. ಈ ಭಾಗವನ್ನು ಚೆನ್ನಾಗಿ ವಿಮರ್ಶೆಮಾಡಿದರೆ ಇದರಿಂದ ದೇಶೋನ್ನತಿಯೂ ದೇಶೀಯರ ಸೌಖ್ಯವೂ ಹೆಚ್ಚಿಸಲ್ಪಟ್ಟಂತೆ ತಿಳಿದು ಬರುವುದೋ ? ಮನುಷ್ಯನ ಶರೀರವು ಅನ್ನಮಯವಾದುದಷ್ಟೆ! ಈ ಶರೀರದ ರಕ್ಷಣೆಗೂ, ಪೋಷಣೆಗೂ ಆಹಾರಯೋಗ್ಯವಾದ ಪದಾರ್ಥಗಳು ತಾನೇ ಮುಖ್ಯ ಸಾಧನ ವಾಗಿರುವುವು ? ಈ ಪ್ರಯೋಜನವನ್ನು ಹೊಂದಲು ಯಾವ ಕಾಲದಲ್ಲಿಯಾಗಲಿ, ಯಾರಿಂದಲಾಗಲಿ, ತಮ್ಮಲ್ಲಿ ಸಂಪಾದಿಸಿ ಇಟ್ಟುಕೊಂಡ ದ್ರವ್ಯವನ್ನೂ ಅನರ್ಘ್ಯವಾದ ರತ್ನಗಳನ್ನೂ ಸುವರ್ಣಾದಿಲೋಹಗಳನ್ನೂ ಸಾಕ್ಷಾತ್ತಾಗಿ ಉಪಯೋಗಿಸಿಕೊಂಡು ಅನ್ನಮಯಶರೀರಪೋಷಣೆಯನ್ನು ಮಾಡಿಕೊಳ್ಳಲು ಸಾಧ್ಯವೋ? ಅದು ಸಾಧ್ಯವಲ್ಲವಾದರೆ

ಎಷ್ಟು ದ್ರವ್ಯವನ್ನು ಸಂಪಾದಿಸಿದವನೂ ತನ್ನಲ್ಲಿರುವ ರತ್ನ ಮತ್ತು ದ್ರವ್ಯಗಳನ್ನೂ ಎಷ್ಟನ್ನಾದರೂ ಕೊಟ್ಟು ಆಹಾರಯೋಗ್ಯ ಪದಾರ್ಥಗಳನ್ನು ಸಂಪಾದಿಸಲೇ ಬೇಕಷ್ಟೆ? ಈ ಸಂದರ್ಭದಲ್ಲಿ ಸಕಲ ಸಸ್ಯಾಭಿವೃದ್ಧಿಗೂ ಆಕರವಾಗಿ ಭಗವಂತನಿಂದ ಸೃಷ್ಟಿಸಲ್ಪಟ್ಟಿರುವ ಭರತಖಂಡದಲ್ಲಿ ಆಹಾರ ಸಾಧನವಾದ ಪದಾರ್ಥಗಳನ್ನೇ ಹೆಚ್ಚಾಗಿ ವೃದ್ಧಿಗೊಳಿಸುತ್ತ ಬರುವುದರಿಂದ ಹಾಗೆ ಸಂಪಾದಿಸಲ್ಪಟ್ಟ ಪದಾರ್ಥಗಳಿಗೆ ನಾವು ಕೋರಿದಷ್ಟು ಹಣವನ್ನು ನಮಗೆ ಸಲ್ಲಿಸಿ ಆ ಪದಾರ್ಥಗಳನ್ನು ಅಪೇಕ್ಷಿಸತಕ್ಕವರು ಪಡೆಯದಿರಲು ಸಾಧ್ಯವೋ? ಈ ಅರ್ಥವನ್ನು ನಮ್ಮ ದೇಶೀಯರು ಚೆನ್ನಾಗಿ ತಿಳಿದು ವರ್ತಿಸುವುದರಲ್ಲಿಯೂ, ನಮ್ಮ ದೇಶೀಯರ ಉಪಯೋಗಕ್ಕೆ ಬೇಕಾದ ಇತರ ಪದಾರ್ಥಗಳನ್ನೂ ನಮ್ಮ ದೇಶದಲ್ಲಿಯೇ ಉಂಟಾಗುವಂತೆ ಮಾಡುತ್ತ ಬರುವುದರಲ್ಲಿಯೂ ಧನಿಕರಾದವರು ಪ್ರಯತ್ನಪಟ್ಟರೆ ಅದರಿಂದ ನಮ್ಮ ದೇಶದ ಶಿಲ್ಪಾದಿಕಲೆಗಳನ್ನು ವೃದ್ಧಿಗೊಳಿಸಿ ಜನಗಳನ್ನು ಅಭಿವೃದ್ಧಿಗೆ ತಂದು ನಮ್ಮ ದೇಶದ ಸಂಪತ್ತು ಹೊರಗೆ ಹೋಗದಂತೆಯೂ, ಕಾಲಕ್ರಮದಿಂದ ವೃದ್ಧಿಹೊಂದುವಂತೆಯೂ ಮಾಡುವುದ ರಿಂದ ಈ ದೇಶದ ಜನರು ಸುಖವನ್ನು ಪಡೆಯಬಹುದಲ್ಲದೆ ಈಗ ಆ ವಿಚಾರವಾಗಿ ನಮ್ಮ ದೇಶೀಯರಿಂದ ನಡೆಸಲ್ಪಡುತ್ತಿರುವ ವ್ಯಾಪಾರಗಳಿಂದ ಈ ಫಲವನ್ನು ಎಷ್ಟುಮಾತ್ರವೂ ಯಾವಕಾಲಕ್ಕೂ ಪಡೆಯಲಾಗಲಾರದೆಂಬ ಅಂಶವನ್ನು ದೀರ್ಘದರ್ಶಿಗಳು ಒಪ್ಪಿಕೊಳ್ಳದಿರ ಲಾರರು. ಮತ್ತು ಈ ದೇಶದಲ್ಲಿ ಪೂರ್ವಕಾಲದವರು ವರ್ಣಾಶ್ರಮಾಚಾರಗಳೆಂಬ ಹೆಸರಿನಿಂದ ಕೆಲವು ನಿರ್ಬಂಧಗಳನ್ನು ಏರ್ಪಡಿಸಿರುವರು. ಪ್ರಕೃತಿಯಲ್ಲಿ ಆ ನಿರ್ಬಂಧನೆಗಳಿಗೆ ಪ್ರಚಾರವಿಲ್ಲವಾದರೂ ಅಲ್ಲಲ್ಲಿ ದೀಪದ ಹುಳುಗಳಂತೆ ವಾಙ್ಮಾತ್ರದಿಂದಲಾದರೂ ಅವು ಮಿಣಗುಟ್ಟುತ್ತಲಿರುವುವು. ಇದನ್ನೂ ಸಹಿಸದೆ ಇನ್ನು ಕೆಲವರು ಇದರಿಂದಲೇ ನಮ್ಮ ದೇಶೀಯರಲ್ಲಿ ಐಕಮತ್ಯವು ಇಲ್ಲದಂತಾಗಿ ಸರ್ವಾನರ್ಥಪ್ರಾಪ್ತಿಗೂ ಇದೊಂದೇ ಕಾರಣವಾಗಿರುವುದು. ಆದ್ದರಿಂದ ವರ್ಣಾಶ್ರಮ ಧರ್ಮಗಳೆಂಬ ಶಬ್ದಪ್ರಚಾರಕ್ಕೂ ಅವಕಾಶವಿಲ್ಲದಂತೆ ಮಾಡಿದಲ್ಲದೆ ಹಿಂದೂದೇಶವು ಅಭಿವೃದ್ಧಿಗೆ ಬರಲಾರದು ಎಂದು ಹೇಳುವರು. ಇದರ ಯಾಥಾರ್ಥ್ಯವು ಹೇಗಿರುವುದೋ, ಅದನ್ನು ಈ ಅಭಿಪ್ರಾಯ ಪಡತಕ್ಕ ಮಹನೀಯರೇ ಬಲ್ಲರು. ಲೋಕದಲ್ಲಿ ಏಕಮಾತೃ ಸಂಭೂತರಾಗಿ ಜನ್ಮಮೊದಲುಗೊಂಡು ಒಂದೇ ವಿಧವಾದ ಆಹಾರವ್ಯವಹಾರಗಳಿಂದ ಪೋಷಿಸಲ್ಪಟ್ಟವರಾಗಿರುವ ಸಹೋದರರಲ್ಲಿ ಸ್ವಭಾವವಾದ ಪ್ರೀತಿಯೂ ಏಕೀಭಾವೂ ಸ್ಥಿರವಾಗಿ ನೆಲೆಗೊಂಡಿರುವದನ್ನಾದರೂ ನೋಡಿರುವ ಪಕ್ಷದಲ್ಲಿ ಭಿನ್ನ ಭಿನ್ನಾಚಾರಗಳಿಂದಲೂ, ಜಾತಿ ಭೇದಗಳಿಂದಲೂ ಜನಗಳಿಗೆ ಏಕೀಭಾವವನ್ನು ಹೊಂದಲು ಅವಕಾಶವು ತಪ್ಪಿರುವಂತೆ ಹೇಳುವ ಅಭಿಪ್ರಾಯವನ್ನು ಸ್ವಲ್ಪಮಟ್ಟಿಗಾದರೂ ನಿಜವೆಂದು ನಂಬಬಹುದು. ಸಹೋದರರಲ್ಲಿಯೇ ಪರಸ್ಪರಾನುರಾಗವೂ

ಐಕಮತ್ಯವೂ ಇಲ್ಲದಿರುವುದು ಪ್ರತ್ಯಕ್ಷವಾಗಿರುವಾಗ, ಪ್ರಪಂಚದಲ್ಲಿ ವರ್ಣಾಶ್ರಮ ಧರ್ಮವೆಂಬ ಶಬ್ದವನ್ನು ಕೂಡ ಇಲ್ಲದಂತೆ ಮಾಡುವುದರಿಂದ ಹೇಗೆ ಐಕಮತ್ಯವು ಸಂಪಾದಿತವಾಗುವುದೋ, ಅದು ಗೋಚರಕ್ಕೆ ಬರುವಂತಿಲ್ಲವು. ಪರಸ್ಪರಾನುರಾಗವಿಲ್ಲದಿರುವಿಕೆಗೂ ಐಕಮತ್ಯವಿಲ್ಲದಿರುವಿಕೆಗೂ ಪ್ರಾಣಿಗಳ ರಾಗದ್ವೇಷಾದಿಗುಣಗಳು ಕಾರಣವೇ ಹೊರತು ಬಲಶಾಲಿಗಳಾದ ದುಷ್ಟರನ್ನು ಕಂಡು ಹೆದರಿ ಎಲ್ಲಿಯೋ ಒಂದು ಗುಹೆಯಲ್ಲಿ ಅಡಗಿ ಕೊಳ್ಳುವ ಸಾಧುವಿನಂತೆ ಶಬ್ದಮಾತ್ರದಿಂದ ಯಾವುದೋ ಒಂದು ಭಾಗದಲ್ಲಿ ಅಡಗಿ ಜೀವಿಸುತ್ತಲಿರುವ ವರ್ಣಾಶ್ರಮ ಧರ್ಮಗಳು ಏನು ಮಾಡಬಲ್ಲವು? ಇದರ ಪ್ರಚಾರವನ್ನು ನಿರ್ಮೂಲಮಾಡಲು ಕಂಕಣಬದ್ಧರಾದ ಮಹನೀಯರು ತಮ್ಮ ಅನುಷ್ಠಾನಗಳಿಂದ ಪ್ರಾಯಃ ಇದುವರೆಗೆ ಬಹಳಮಟ್ಟಿಗೆ ತಮ್ಮ ಸಂಕಲ್ಪವನ್ನು ಸಾಧಿಸಿರುವರಷ್ಟೆ! ಅದರ ಫಲವೇ ಈಗಿನ ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ಉಂಟಾಗಿರುವ ಸೌಹಾರ್ದವೆಂದು ಹೇಳಬಹುದು. ಆದ್ದರಿಂದ ಈಗ್ಗೆ ಮೂವತ್ತು ವರ್ಷಗಳ ಹಿಂದೆ ಶ್ರೀಗಳವರು ನಮ್ಮ ದೇಶೀಯರಿಗೆ ಉಪದೇಶಮಾಡಿದ ತೃಪ್ತಿ ಸಂಪಾದನೆಯೆಂಬ ಸೂತ್ರದಮೇಲೆ ನಮ್ಮ ಈಗಿನ ಅನುಭವದಿಂದ ವಿಸ್ತಾರವಾಗಿ ವ್ಯಾಖ್ಯಾನಮಾಡಿ ವಿಚಾರಮಾಡಿದರೆ ಮೇಲೆ ಹೇಳಿದ ವಿಷಯಗಳು ಅಸಮಂಜಸವಾದವುಗಳೆಂತಲೂ ಯುಕ್ತಿರಹಿತವಾದವುಗಳೆಂತಲೂ ಅಭಿಪ್ರಾಯಪಡಲು ಅವಕಾಶವಿರಲಾರದಾಗಿ ಅವಿವೇಕದಿಂದ ನಮ್ಮಲ್ಲಿ ಪ್ರತಿ ನಿಮಿಷದಲ್ಲಿಯೂ ವೃದ್ಧಿ ಹೊಂದುತ್ತಲಿರುವ ಆಶೆಯನ್ನು ಕ್ರಮಕ್ರಮವಾಗಿ ಕಡಿಮೆ ಮಾಡುತ್ತಲೂ, ತೃಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಲೂ, ನಮ್ಮ ದೇಶೀಯರ ಪೂರ್ವಾಚಾರಗಳಲ್ಲಿಯೂ ಅವರುಗಳ ಹಿತಬೋಧನೆಗಳಲ್ಲಿಯೂ ನಂಬಿಕೆಯನ್ನು ಇಟ್ಟು ನಾವು ಯತ್ನಮಾಡುತ್ತಲೂ ಬಂದಲ್ಲಿ ನಮ್ಮ ದೇಶವು ಸಂಪದ್ಭರಿತವಾಗಿ ದೇಶೀಯರು ಸುಖವನ್ನು ಅನುಭವಿಸುವರೇ ಹೊರತು, ಬೇರೆ ಯಾವ ಪ್ರಯತ್ನಗಳಿಂದಲೂ ಸುಖವು ಸಾಧ್ಯವಾಗಲಾರದೆಂದು ತೋರಿಬರುವುದು.

ಬಳಿಕ ಶ್ರೀಮನ್ಮಹಾರಾಜ ಚಾಮರಾಜ ಒಡೆಯರವರ ಆಜ್ಞೆಗನುಸಾರವಾಗಿ ಆಗ್ಗೆ ಅರಮನೆಯ ಕಂಟ್ರೋಲರಾಗಿದ್ದ ಸುಬ್ಬರಾಯರ ಪ್ರಾರ್ಥನೆಯನ್ನು ಅನುಸರಿಸಿ, ಶ್ರೀ ಚಾಮರಾಜೇಂದ್ರ ಸರಸ್ವತೀಪ್ರಾಸಾದ ಪಾಠಶಾಲೆಯೆಂಬ ವಿದ್ಯಾಮಂದಿರಕ್ಕೆ ದಯಮಾಡಿಸಿ ಶ್ರೀ ಶ್ರೀಸ್ವಾಮಿಗಳವರು ಆ ಪಾಠಶಾಲೆಯ ಅಭಿವೃದ್ಧಿಗೂ ಪ್ರಭುಗಳವರ ಅಭ್ಯುದಯಕ್ಕೂ ಅಲ್ಲಿ ಖರಸಂವತ್ಸರದ (1891) ಕಾರ್ತಿಕ ಶುಕ್ಲ ತದಿಗೆ ಬುಧವಾರ ಶುಭಲಗ್ನದಲ್ಲಿ ವೇದೋಕ್ತವಿಧಾನದಿಂದ ಗಣಪತಿ ಪ್ರತಿಷ್ಠೆಯನ್ನು ಮಾಡಿಸಿ, ''ವಿದ್ಯಾಗಣಪತಿ'' ಎಂಬ ಅಭಿದಾನವನ್ನು ಕೊಟ್ಟು, ಪ್ರತಿಷ್ಠಾನಂತರ ಮೂರ್ತಿಯಲ್ಲಿ ವಿಶೇಷ ಸಾನ್ನಿಧ್ಯವುಂಟಾಗುವುದಕ್ಕೋಸ್ಕರ ಶ್ರೀ ಶ್ರೀಗಳವರು ಸ್ವತಃ ಪೂಜೆಯನ್ನು ಆಚರಿಸಿ ಎಲ್ಲರಿಗೂ ಅನುಗ್ರಹವನ್ನು ಮಾಡಿದರು. ಮಧ್ಯಾಹ್ನ ಎರಡು ಗಂಟೆಯ ಸಮಯದಲ್ಲಿ ಶ್ರೀ ಚಾಮರಾಜ ಪ್ರಭುಗಳವರು ಪಾಠಶಾಲೆಗೆ ದಯಮಾಡಿ, ತಮ್ಮ ಅಭ್ಯುದಯಕ್ಕೋಸ್ಕರ ಶ್ರೀ ಶ್ರೀಗಳವರಿಂದ ಪ್ರತಿಷ್ಠಿತವಾದ ಗಣಪತಿಯ ದರ್ಶನವನ್ನೂ ಶ್ರೀಗಳವರ ದರ್ಶನವನ್ನೂ ಮಾಡಿ, ಶ್ರೀಗಳವರಿಂದ ತೀರ್ಥಪ್ರಸಾದವನ್ನು ಪರಿಗ್ರಹಿಸಿ ಆನಂದಭರಿತರಾಗಿ ಅರಮನೆಗೆ ದಯಮಾಡಿಸಲು, ಶ್ರೀಗಳವರು ಆ ದಿನದ ಸಾಯಂಕಾಲ ತಮ್ಮ ವಾಸಸ್ಥಾನಕ್ಕೆ ವಿಭವದಿಂದ ತೆರಳಿದರು. ಮತ್ತೊಂದು ದಿನ ಶ್ರೀಮನ್ಮಹಾಪ್ರಭುಗಳವರ ಪ್ರಾರ್ಥನೆಯಂತೆ ಸಂಸ್ಕೃತಪಾಠಶಾಲೆಗೆ ದಯಮಾಡಿಸಿ, ಅಮಾತ್ಯರೇ ಮೊದಲಾದ ಪರಿವಾರದಿಂದ ಯುಕ್ತರಾಗಿ ಬಂದಿದ್ದ ಪ್ರಭುಗಳವರಿಂದಲೂ ಆಸ್ಥಾನ ಪಂಡಿತರುಗಳಿಂದಲೂ ನಿಬಿಡೀಕೃತವಾಗಿದ್ದ ಸಭೆಯಲ್ಲಿ ಸಂಸ್ಕೃತ ವಿದ್ಯಾವಿಷಯವಾಗಿಯೂ, ಧರ್ಮವಿಷಯವಾಗಿಯೂ, ಮೂರು ಗಂಟೆಗಳಕಾಲ ವಿಸ್ತಾರವಾಗಿ ಉಪನ್ಯಾಸವನ್ನು ಮಾಡಿ ಸರ್ವರನ್ನೂ ಆನಂದಗೊಳಿಸಿದರು.

ಈ ರೀತಿಯಿಂದ ಶ್ರೀ ಶ್ರೀಸ್ವಾಮಿಗಳವರು ನಾಲ್ಕು ತಿಂಗಳಕಾಲ ರಾಜಧಾನಿಯಲ್ಲಿ ವಸತಿಮಾಡಿ, ಆ ಕಾಲದಲ್ಲಿ ತಮ್ಮ ದರ್ಶನಕ್ಕೆ ಬರುತ್ತಲಿದ್ದ ಶ್ರೀಮನ್ಮಹಾರಾಜರವರಿಗೂ, ಇತರ ಶಿಷ್ಯಮಂಡಲಿಯವರಿಗೂ ಪ್ರತ್ಯೇಕವಾಗಿಯೂ, ಸಮೂಹದಲ್ಲಿಯೂ, ಶಾಸ್ತ್ರೀಯವಾದ ಪ್ರಮಾಣದಿಂದ ಮತ್ತು ಲೌಕಿಕವಾದ ಯುಕ್ತಿಗಳಿಂದ ದೃಷ್ಟಾಂತಪೂರ್ವಕವಾಗಿ ಮಾಡಿದ ಉಪದೇಶದಿಂದಲೂ, ವಿಸ್ತಾರವಾದ ಉಪನ್ಯಾಸಗಳಿಂದಲೂ, ಕಾಲಾನುಗುಣವಾಗಿ ಉಂಟಾಗಿದ್ದ ಅನೇಕ ಸಂಶಯಗಳನ್ನು ಹೋಗಲಾಡಿಸಿ, ವೇದಶಾಸ್ತ್ರಗಳ ವಿಷಯದಲ್ಲಿ ನಂಬಿಕೆಯೂ ದೈವಭಕ್ತಿಯೂ ಹೆಚ್ಚಾಗುವಂತೆ ಮಾಡಿ, ಆಬಾಲವೃದ್ಧರಿಂದಲೂ ಗೌರವಿಸಲ್ಪಟ್ಟು ತಮ್ಮ ಮುಂದಿನ ಯಾತ್ರೆಯನ್ನು ಕೈಕೊಂಡರು.

★ ★ ★

ಅಧ್ಯಾಯ - ೭.

ರಾಮೇಶ್ವರಯಾತ್ರೆ

ಶ್ರೀ ಶ್ರೀಗಳವರು ಖರಸಂವತ್ಸರದ (1891) ಕಾರ್ತಿಕ ಕೃಷ್ಣೈಕಾದಶೀ ಶುಕ್ರವಾರದಲ್ಲಿ ದಿವಾನ್ ಸರ್ ಕೆ. ಶೇಷಾದ್ರಯ್ಯರವರ ಗೃಹದಲ್ಲಿ ಪ್ರಾತಃಕಾಲದ ಸ್ನಾನಾಹ್ನಿಕಗಳನ್ನು ನೆರವೇರಿಸಿಕೊಂಡು ಇತರಾಸಾಧಾರಣವಾಗಿ ಏರ್ಪಟ್ಟ ಸಕಲ ರಾಜಮರ್ಯಾದೆಗಳೊಡನೆ ಎಂಟುಗಂಟೆಗೆ ಪ್ರಯಾಣಬೆಳೆಸಿ ಅರಮನೆಗೆ ದಯಮಾಡಿ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಪ್ರಭುಗಳವರಿಗೂ ರಾಜಕುಟುಂಬದವರಿಗೂ ರಾಜಯೋಗ್ಯವಾದ ವಸ್ತ್ರವಿಶೇಷಗಳಿಂದಲೂ ಫಲಮಂತ್ರಾಕ್ಷತಾದಿ ಪ್ರಸಾದಗಳಿಂದಲೂ ಅನುಗ್ರಹಿಸಿ ತಮ್ಮ ಅಂತರಂಗಭಕ್ತರಾಗಿಯೂ ಸಂಪೂರ್ಣವಾಗಿ ತಮ್ಮ ಅನುಗ್ರಹಕ್ಕೆ ಪಾತ್ರರಾಗಿಯೂ ಇದ್ದ ಪ್ರಭುಗಳವರಿಗೆ ತಮ್ಮ ಪ್ರಸ್ಥಾನದಿಂದ ಉಂಟಾದ ಮನೋಭಾವವನ್ನು ಪ್ರಭುಗಳವರ ಆಕಾರ ವಿಶೇಷಗಳಿಂದ ತಿಳಿದವರಾಗಿ ಅತ್ಯಂತ ಪ್ರಿಯವಾದ ಅಥವಾ ವಿಶೇಷ ಗೌರವಾಧಾಯಕವಾದ ವಸ್ತುವು ಸಮೀಪದಲ್ಲಿಯೇ ಇರುವ ಕಾಲದಲ್ಲಿ ಮನೋವೃತ್ತಿಯು ಆ ವಸ್ತುವಿನ ವಿಷಯವಾಗಿಯೇ ಇರುವುದು ಬಹಳ ವಿರಳ. ಅಂಥಾ ವಸ್ತುವು ದೂರದಲ್ಲಿದ್ದರೆ ಪ್ರಾಯಃ ಮನೋವೃತ್ತಿಯು ತದ್ವಿಷಯಕವಾಗಿಯೇ ಇರುವುದೆಂದು ಹೇಳಬಹುದಾದುದರಿಂದ ಪ್ರಭುಗಳವರು ತಮ್ಮ ವಿಯೋಗಕ್ಕೆ ಚಿಂತಿಸಬೇಕಾದ ಆವಶ್ಯಕತೆಯಿಲ್ಲವೆಂದು ಅವರನ್ನು ಸಮಾಧಾನಗೊಳಿಸಿ ಅರಮನೆಯಿಂದ ಹೊರಟು ಮೈಸೂರಿಗೆ ಸ್ವಲ್ಪ ದೂರದಲ್ಲಿರುವ ಚಿಕ್ಕಯ್ಯನ ಛತ್ರವೆಂಬ ಸ್ಥಳದ ಒಂದು ಶಿವಾಲಯದಲ್ಲಿ ಆ ದಿನ ವಸತಿಯನ್ನು ಮಾಡಿದರು. ಮಾರನೆಯ ದಿನ ಪ್ರಾತಃಕಾಲ ಸ್ನಾನಾಹ್ನಿಕಗಳನ್ನು ನೆರವೇರಿಸಿಕೊಂಡು ನಂಜನಗೂಡೆಂದು ಪ್ರಸಿದ್ಧಿಯನ್ನು ಹೊಂದಿರುವ ಗರಳಪುರೀಕ್ಷೇತ್ರವನ್ನು ಪ್ರವೇಶಿಸಿದರು. ಕಪಿಲಾ ಕೌಂಡಿನೀ ನದಿಗಳ ಮಧ್ಯದಲ್ಲಿ ನಿರ್ಮಿತವಾಗಿರುವ ಈ ಕ್ಷೇತ್ರವು ಪುರಾಣಪ್ರಸಿದ್ಧವಾದದ್ದು. ಇದು ಕರ್ನಾಟಕ ದೇಶಾಧಿಪತಿಗಳಾದ ಮಹಾರಾಜರುಗಳಿಗೆ ರಾಜಧಾನಿಯಾಗಿರುವ ಮೈಸೂರಿಗೆ ದಕ್ಷಿಣದಲ್ಲಿ ಹದಿನಾಲ್ಕು ಮೈಲಿಗಳ ದೂರದಲ್ಲಿರುವುದು. ಈ ಕ್ಷೇತ್ರದಲ್ಲಿ ಪ್ರಸನ್ನ ಪಾರ್ವತೀಸಮೇತನಾಗಿ ಶ್ರೀಕಂಠೇಶ್ವರನೆಂಬ ಪ್ರಸಿದ್ಧನಾಮದಿಂದ ಪರಮಶಿವನು ಆವಿರ್ಭಾವವನ್ನು ಹೊಂದಿರುವನು. ತಂದೆಯಾದ ಜಮದಗ್ನಿ ಮಹರ್ಷಿಗಳ ಆಜ್ಞೆಯನ್ನು ಪರಿಪಾಲಿಸಲು ತಾನು ಆಚರಿಸಿದ ಮಾತೃಹತ್ಯಾ ದೋಷದ ನಿವೃತ್ತಿಗಾಗಿ, ಜಮದಗ್ನಿ

ಮಹರ್ಷಿಗಳ ಆಜ್ಞೆಯಿಂದಲೆ ಭೂಪ್ರದಕ್ಷಿಣೆ ಹೊರಟ ಪರಶುರಾಮನು ಈ ಕ್ಷೇತ್ರಕ್ಕೆ ಬಂದು ಇಲ್ಲಿಯ ಸನ್ನಿವೇಶಗಳನ್ನು ನೋಡಲು, ಕೆಲವು ಕಾಲದವರೆಗೆ ಈ ಸ್ಥಳದಲ್ಲಿ ನಿಂತು ತಪಸ್ಸನ್ನು ಮಾಡಬೇಕೆಂಬ ಮನೋಭಾವವು ಆತನಿಗುಂಟಾಯಿತು. ಕಪಿಲಾತೀರದಲ್ಲಿ ತನ್ನ ಆಶ್ರಮಕ್ಕೆ ಒಂದು ಸ್ಥಳವನ್ನು ನಿರ್ದೇಶಮಾಡಿ ಆ ಪ್ರದೇಶವು ತರುಲತಾಗುಲ್ಮಗಳಿಂದ ನಿಬಿಡವಾಗಿದ್ದುದರಿಂದ ಸ್ವಹಸ್ತಗತವಾದ ಕುಠಾರದಿಂದ ವೃಕ್ಷಗಳನ್ನು ಛೇದಿಸಲು ಪ್ರಾರಂಭಿಸಿದನು. ಆಗ ಆಕಸ್ಮಿಕವಾಗಿ ರಕ್ತಪ್ರವಾಹವು ಹೊರಟು ಪರಶುರಾಮನ ಕುಠಾರವು ರಕ್ತಮಯವಾಯಿತಲ್ಲದೆ ಆತನ ಶರೀರವೆಲ್ಲಾ ರಕ್ತದಿಂದ ಆರ್ದ್ರವಾಯಿತು. ಈ ಸಂಭವವನ್ನು ನೋಡಿದ ಆ ಧೀರನ ಮನಸ್ಸು ಬಹಳವಾಗಿ ಚಾಂಚಲ್ಯಗೊಂಡು ಅತಿದೀನಭಾವದಿಂದ ಅದರ ಕಾರಣವನ್ನು ಯೋಚಿಸುತ್ತಲಿರುವಲ್ಲಿ ಲಿಂಗರೂಪವಾಗಿ ಪರಶಿವನು ಆತನ ದೃಷ್ಟಿಗೆ ಗೋಚರನಾದನು. ಇದನ್ನು ನೋಡಿದ ಕೂಡಲೇ ಮಹಾಪಾತಕವಾದ ಮಾತೃಹತ್ಯದ ನಿವಾರಣಕ್ಕೆ ಬಂದ ತನಗೆ ಅದಕ್ಕಿಂತಲೂ ಸಹಸ್ರಾಧಿಕವಾಗಿ ಪಾತಕಾವಹವಾದ ಈಶ್ವರಾಪರಾಧವು ಸಂಭವಿಸಿದುದನ್ನು ತಿಳಿದ ಆತನ ಮನಸ್ಸು ಆ ಕಾಲದಲ್ಲಿ ಹೇಗಾಗಿರಬಹುದೋ? ಈಶ್ವರನಿಗೇ ವೇದ್ಯವು. ತಕ್ಷಣವೇ ಕುಠಾರದಿಂದ ತನ್ನ ಶಿರಸ್ಸನ್ನು ಛೇದಿಸಿ ಆತ್ಮಹತ್ಯವನ್ನು ಮಾಡಿಕೊಳ್ಳಲುದ್ಯುಕ್ತನಾಗಲು ಕರುಣಾಮೂರ್ತಿಯಾದ ಭಗವಂತನು ನಿಜರೂಪದಿಂದ ಆವಿರ್ಭವಿಸಿ ಪರಶುರಾಮನ ಹಸ್ತಗಳನ್ನು ಹಿಡಿದು ಆತನ ಉದ್ಯಮವನ್ನು ನಿಲ್ಲಿಸಿದನು. ಆ ಸಂದರ್ಭದಲ್ಲಿ ಪರಮಭಕ್ತನಾದ ಪರಶುರಾಮನಿಗೆ ಅಭಯವನ್ನಿತ್ತು ಪರಶುಪ್ರಹಾರದಿಂದಾದ ಕಲೆಯನ್ನು ಚಂದ್ರಕಲೆಯಂತೆ ತನ್ನ ಶಿರಸ್ಸಿನಲ್ಲಿ ಯಾವಾಗಲೂ, ಧರಿಸುವಂತೆಯೂ, ತನ್ನ ಸಂಕಲ್ಪದಿಂದ ಪರಿಶುದ್ಧವಾಗಿಯೂ ಸಕಲರೋಗ ಪರಿಹಾರಕವಾಗಿಯೂ ಖ್ಯಾತಿಯನ್ನು ಹೊಂದಿರತಕ್ಕ ಈ ಸ್ಥಳದ ಮೃತ್ತಿಕೆಯ ಲೇಪನದಿಂದ ರಕ್ತಪ್ರವಾಹವು ನಿಲ್ಲುವುದಾಗಿಯೂ, ತನಗಾಗಿ ಒಂದು ಆಲಯವನ್ನು ಕಲ್ಪಿಸಿ ತನ್ನನ್ನು ಆರಾಧಿಸುವುದರಿಂದ ಸಕಲದೋಷ ನಿವೃತ್ತಿಯಾಗಿ ತನ್ನ ಅನುಗ್ರಹಕ್ಕೆ ಪಾತ್ರನಾಗುವುದಾಗಿಯೂ ಈಶ್ವರನು ಪರಶುರಾಮನಿಗೆ ಅನುಗ್ರಹಮಾಡಿದಂತೆಯೂ ಅದರಂತೆ ಆತನು ಆಚರಿಸಿ ಕೃತಾರ್ಥನಾದಂತೆಯೂ ಇಲ್ಲಿಯ ಸ್ಥಳಪುರಾಣವಿದೆ. ಇಂಥಾ ಕಲಿಪ್ರಭಾವ ಕಾಲದಲ್ಲಿ ಕೂಡ ಈ ಕ್ಷೇತ್ರದಲ್ಲಿ ಆ ಪರಮಶಿವನ ಆಜ್ಞೆಯಿಂದ ನಡೆಯುತ್ತಲಿರುವ ವಿಶೇಷಗಳನ್ನು ನೋಡಿದರೆ ಮೇಲೆ ಹೇಳಿದ ಸ್ಥಳಪುರಾಣದಲ್ಲಿ ವಿಶ್ವಾಸಮಾಡದಿರಲು ಅವಕಾಶವಿರುವುದಿಲ್ಲವು. ಹಿಂದೆ ಒಂದು ಕಾಲದಲ್ಲಿ ಯವನ ಪ್ರಭುವು ದೇವರ ಮಾಹಾತ್ಮ್ಯವನ್ನು ಪರೀಕ್ಷಿಸಲು ತನ್ನ ಅರಮನೆಯಲ್ಲಿ ಎರಡು ಕಣ್ಣುಗಳೂ ಕಾಣದಿದ್ದ ಒಂದು ಆನೆಗೆ ತಾನು ಗೊತ್ತುಮಾಡಿದ ಕಾಲದೊಳಗೆ ಎರಡು ಕಣ್ಣುಗಳೂ ಕಾಣಿಸುವುದಾದರೆ ತಾನು ದೇವರಲ್ಲಿ ಶಕ್ತಿ ಇರುವುದೆಂದು

ಒಪ್ಪಿಕೊಳ್ಳುವುದಾಗಿಯೂ ಹಾಗೆ ನಡೆಯದೆಹೋದಲ್ಲಿ ದೇವಾಲಯವನ್ನೇ ನಿರ್ಮೂಲ ಮಾಡುವುದಾಗಿಯೂ ಪಂಥವನ್ನು ಮಾಡಿ, ಆ ಆನೆಯನ್ನು ಈ ಕ್ಷೇತ್ರದಲ್ಲಿ ದೇವರಸೇವೆಯನ್ನು ಮಾಡುವುದಕ್ಕೆ ಕಳುಹಿಸಿದ್ದಂತೆಯೂ, ಇಲ್ಲಿ ಆ ಆನೆಗೆ ಪ್ರತಿದಿವಸ ಪ್ರಾತಃಕಾಲದಲ್ಲಿ ಕಪಿಲಾನದಿಯಲ್ಲಿ ಸ್ನಾನಮಾಡಿಸಿ ದೇವಾಲಯದ ಹೊರಪ್ರಾಕಾರದಲ್ಲಿ ಹನ್ನೆರಡು ಪ್ರದಕ್ಷಿಣೆಗಳನ್ನು ಮಾಡಿಸಿ ದೇವರತೀರ್ಥದಿಂದ ಮೃತ್ತಿಕೆಯನ್ನು ಕಲೆಸಿ ಅದರ ಕಣ್ಣುಗಳಿಗೆ ಲೇಪಿಸುತ್ತ ಬಂದಂತೆಯೂ ಪ್ರಭುವು ಗೊತ್ತುಮಾಡಿದ್ದ ಕಾಲಕ್ಕೆ ಕಣ್ಣುಗಳ ಮೇಲೆ ಲೇಪಿಸಿದ್ದ ಮೃತ್ತಿಕೆಯನ್ನು ತೆಗೆದು ನೋಡುವಲ್ಲಿ ಆನೆಗೆ ಎರಡು ಕಣ್ಣುಗಳೂ ನಿರ್ಮಲವಾಗಿ ಕಂಡುಬಂದಂತೆಯೂ ಈ ಆಶ್ಚರ್ಯವನ್ನು ಪರೀಕ್ಷೆಯಿಂದ ತಿಳಿದುಕೊಂಡ ಯವನಪ್ರಭುವು ತುಂಬಾ ಸಂತೋಷಿಸಿ "ಹಕೀಮ್ ನಂಜುಂಡ" ನೆಂದು ದೇವರನ್ನು ಕರೆಯಲಾರಂಭಿಸಿದಂತೆಯೂ ಜನಗಳ ಪ್ರವಾದವು ಈಗಲೂ ಪ್ರಬಲವಾಗಿದೆ. ಈ ಐತಿಹ್ಯವು ಈಗ್ಗೆ ನೂರಿಪ್ಪತ್ತೈದು ವರ್ಷಗಳ ಹಿಂದೆ ನಡೆದಂತೆ ತಿಳಿದುಬರುತ್ತದೆ. ಇಷ್ಟು ಸಮೀಪಕಾಲದಲ್ಲಿ ನಡೆದುದಾಗಿ ಜನಗಳು ಹೇಳುತ್ತಲಿರುವ ಈ ವದಂತಿಯನ್ನು ನಂಬದೆ ಇರಲು ಕಾರಣವಿಲ್ಲ. ಈ ದೇವರ ಸೇವೆಗಾಗಿ ಎಲ್ಲಾ ಜಾತಿಯ ಜನರೂ ವಿಶೇಷವಾಗಿ ಬರುತ್ತಾರೆ. ಅನೇಕರು ತಮ್ಮ ಕುಲಸ್ವಾಮಿಯೆಂದು ತಿಳಿದು ವಂಶಪಾರಂಪರ್ಯ ಕ್ರಮದಿಂದ ಆರಾಧನೆಯನ್ನು ಮಾಡುತ್ತಾರೆ. ಕುಷ್ಠವ್ಯಾಧಿಯಿಂದಲೂ, ಅಪಸ್ಮಾರದಿಂದಲೂ, ಅಕ್ಷಿರೋಗದಿಂದಲೂ, ಕುಕ್ಷಿರೋಗದಿಂದಲೂ ಪೀಡಿತರಾದ ಜನರು ಇತರ ಚಿಕಿತ್ಸೆಗಳಿಂದ ರೋಗ ಪರಿಹಾರವನ್ನು ಹೊಂದುವುದು ಅಸಾಧ್ಯವೆಂದು ನಿಶ್ಚಿತವಾದನಂತರ, ಈ ಕ್ಷೇತ್ರದಲ್ಲಿ ಬಂದು ವಾಸಮಾಡಿ ನಿಯಮದಿಂದ ದೇವರಸೇವೆಯನ್ನು ಮಾಡುವರು. ಅವರವರ ನಿಯಮಕ್ಕೂ, ಭಕ್ತಿಗೂ ಅನುಗುಣವಾಗಿ ಅನೇಕರು ಫಲವನ್ನು ಹೊಂದಿರುವುದು ಪ್ರತ್ಯಕ್ಷವಾಗಿರುವುದು. ಜನಗಳು ತಮಗೆ ಸಂಭವಿಸಿರುವ ಕಷ್ಟದ ನಿವಾರಣೆಗೆ ಶರೀರಪ್ರಯಾಸದಿಂದ ಕಠಿಣವಾಗಿ ದೇವರಸೇವೆಯನ್ನು ಮಾಡುವಂತೆ ಪ್ರಾರ್ಥಿಸಿಕೊಂಡು ಈ ದೇವರ ಅನುಗ್ರಹದಿಂದ ತಮ್ಮ ಕಷ್ಟಗಳ ಪರಿಹಾರವಾದನಂತರ ಬಂದು ಈ ಕ್ಷೇತ್ರದಲ್ಲಿ ತಾವು ಹರಸಿಕೊಂಡಿದ್ದಂತೆ ಸೇವೆಯನ್ನು ಮಾಡುತ್ತಾರೆ. ಈ ಸೇವೆಗಳಲ್ಲಿ ಅತಿಕಷ್ಟವಾದ ಸೇವೆಯು ನೆಲದ ಮೇಲೆ ಒಂದೇ ಮಗ್ಗುಲಲ್ಲಿ ಬಿದ್ದು ದೇವಸ್ಥಾನದ ಸುತ್ತಲೂ ಒಂದೊಂದು ಅಂಗುಲದಷ್ಟೇ ಜರುಗಿಜರುಗಿ ಚಲಿಸುವುದು. ಈ ಕಠಿಣ ಸೇವೆಯನ್ನು ಅನೇಕರು ನಡೆಸುತ್ತಾರೆ. ಪ್ರತಿ ತಿಂಗಳಲ್ಲಿಯೂ ಪೂರ್ಣಿಮಾತಿಥಿಯಲ್ಲಿ ಈ ಕ್ಷೇತ್ರದಲ್ಲಿ ರಥೋತ್ಸವವು ನಡೆವುದು. ಆಗ ಅನೇಕರು ಈ ಕ್ಷೇತ್ರಕ್ಕೆ ಬಂದು ದೇವರ ಸೇವೆಯನ್ನು ಸಲ್ಲಿಸಿ ರಥದ ಮೇಲಿರುವ ದೇವರ ದರ್ಶನವನ್ನು ಮಾಡುವುದಾಗಿ ಪ್ರಾರ್ಥಿಸಿಕೊಂಡು ಅನೇಕ ಪೂರ್ಣಿಮೆಗಳಲ್ಲಿ ಬಂದು ಸೇವೆಯನ್ನು ನಡೆಸುತ್ತಾರೆ. ಈಗಿನ

ಮೈಸೂರು ಮಹಾರಾಜರು ನಾಲ್ವಡಿ ಕೃಷ್ಣರಾಜಪ್ರಭುಗಳವರು ಹನ್ನೆರಡು ಪೂರ್ಣಿಮಾ ತಿಥಿಯಲ್ಲಿ ಶ್ರೀಕಂಠೇಶ್ವರನ ದರ್ಶನವನ್ನೂ, ಆ ದೇವರಸೇವೆಯನ್ನೂ ನಡೆಸುವುದಾಗಿ ಪ್ರಾರ್ಥಿಸಿಕೊಂಡಿದ್ದಂತೆ ತಿಳಿದುಬಂದಿದೆ. ಅವರು ತಮ್ಮ ಸಂಕಲ್ಪಕ್ಕನುಸಾರವಾಗಿ ಪ್ರತಿ ಪೂರ್ಣಿಮಾತಿಥಿಯಲ್ಲಿಯೂ ರಾಜಧಾನಿಯಿಂದ ದಯಮಾಡಿಸಿ ಕಪಿಲಾನದಿಯಲ್ಲಿ ಸ್ನಾನಮಾಡಿ ಅತ್ಯಂತ ನಿಯಮದಿಂದ ಒಂದು ವರ್ಷಕಾಲವು ದೇವರಸೇವೆಯನ್ನು ನಡೆಸಿದ್ದು ಈ ದೇವರ ವಿಷಯದಲ್ಲಿ ಜನರ ಭಕ್ತಿಯನ್ನು ಮೊದಲಿಗಿಂತಲೂ ಹೆಚ್ಚಿಸಿದಂತೆ ಧಾರಾಳವಾಗಿ ಹೇಳಬಹುದು. ಈ ರೀತಿಯಲ್ಲಿ ಜನಗಳಿಗೆ ದೇವರ ದರ್ಶನಸೇವೆಗಳಿಂದ ಆಗತಕ್ಕ ಪ್ರಯೋಜನಗಳು ಅನುಭವಕ್ಕೆ ಬಂದು ಅನೇಕರು ಶ್ರೀಕಂಠೇಶ್ವರನ ಮಾಹಾತ್ಮ್ಯವನ್ನು ಕುರಿತು ವಿಶೇಷವಾಗಿ ಹೊಗಳುತ್ತಲಿರುವ ಸಂದರ್ಭದಲ್ಲಿ, ದೇವರಲ್ಲಿ ಶಕ್ತಿಯಿಲ್ಲವೆಂದಾಗಲಿ ಶಕ್ತಿ ಇರುವಂತೆ ಭಾವಿಸಿ ದೇವರಸೇವೆಯನ್ನು ಮಾಡುವುದೂ, ದೇವರನ್ನು ಹೊಗಳುವುದೂ ವಿಚಾರವಿಲ್ಲದ ಮೂಢರ ಕರ್ತವ್ಯವೆಂದಾಗಲಿ ಅಭಿಪ್ರಾಯಪಡುವುದು ಅಷ್ಟು ಯುಕ್ತ ವಾದುದೆಂದು ಯಾರೂ ಹೇಳಲಾರರು. ಆದರೆ ನಮ್ಮ ನಮ್ಮ ಭಾವನೆಗನುಸಾರವಾಗಿಯೇ ಎಲ್ಲಾ ವಿಧವಾದ ಫಲಗಳೂ ಉಂಟಾಗುವುವೆಂಬ ವಿಷಯದಲ್ಲಿ ಸಂದೇಹವಿಲ್ಲವು. ಹಾಗಿದ್ದರೂ ಆ ರೀತಿಯಾದ ದೃಢಭಾವನೆಯು ಯಾವ ಸ್ಥಳದಲ್ಲಿ ಬಹು ಜನರಿಂದ ಮಾಡಲ್ಪಡುವುದೋ ಅದೇ ಮಹಾಕ್ಷೇತ್ರವೆಂದು ಹೇಳತಕ್ಕದ್ದು. ಯಾವ ಮೂರ್ತಿಯಲ್ಲಿ ಅಂಥಾ ನಿಶ್ಚಲವಾದ ಭಾವನೆಯನ್ನು ಜನಗಳು ಮಾಡುವರೋ ಅಂಥಾ ಮೂರ್ತಿಯನ್ನೇ ವಿಶೇಷವಾದ ಶಕ್ತಿಯುಳ್ಳ ದೇವರೆಂದು ಹಿರಿಯರು ಹೇಳುವರು. ಅಂತಹ ನಂಬಿಕೆಯು ಬಹು ಜನರಿಗೆ ಈ ಕ್ಷೇತ್ರದಲ್ಲಿಯೂ ಇಲ್ಲಿರುವ ದೇವರಲ್ಲಿಯೂ ವಿಶೇಷವಾಗಿರುವುದರಿಂದ ಇದು ಉತ್ತಮವಾದ ಶಿವಕ್ಷೇತ್ರವೆಂದು ಹೇಳುವುದರಲ್ಲಿ ಅಡ್ಡಿಯಿಲ್ಲವು. ಶ್ರೀಮನ್ಮಹಾರಾಜ ರವರ ಸರ್ಕಾರದವರು ವಿಶೇಷವಾಗಿ ತಸ್ತೀಕನ್ನು ಏರ್ಪಡಿಸಿ ತಮ್ಮ ವಿಚಾರಣೆಯಲ್ಲಿಟ್ಟು ಕೊಂಡು ಈ ದೇವಾಲಯದಲ್ಲಿ ಷಟ್ಕಾಲಾರ್ಚನೆಗಳನ್ನೂ ನಿತ್ಯನೈಮಿತ್ತಿಕೋತ್ಸವಗಳನ್ನೂ ಬಹಳ ವಿತರಣೆಯಿಂದ ನಡೆಸಿಕೊಂಡು ಬರುತ್ತಾರೆ. ಶ್ರೀಮನ್ಮಹಾರಾಜರವರು ಶ್ರೀಕಂಠೇಶ್ವರನಲ್ಲಿ ವಿಶೇಷ ಭಕ್ತಿಯುಳ್ಳವರೆಂಬುದಾಗಿಯೂ ದೇವರ ಪೂಜಾದಿಗಳಲ್ಲಿ ಯಾವ ವಿಧವಾದ ಲೋಪಗಳೂ ಉಂಟಾಗದಂತೆ ನಡೆವುದನ್ನು ವಿಶೇಷವಾಗಿ ತಮ್ಮ ಗಮನದಲ್ಲಿಟ್ಟಿರುವರೆಂಬುದಾಗಿಯೂ ಕಂಡು ಬಂದಿದೆ.

ಶ್ರೀಕಂಠೇಶ್ವರನ ವಿಷಯದಲ್ಲಿ ಶ್ರೀ ಸ್ವಾಮಿಗಳವರಿಗೆ ವಿಶೇಷವಾದ ಗೌರವವೂ ಭಕ್ತಿಯೂ ಗರ್ಭಗತರಾಗಿದ್ದ ಕಾಲದಿಂದಲೂ ಅನುಸರಿಸಿಬಂದಿರುವುದೆಂಬ ಅಂಶವು ಈ ಗ್ರಂಥದಿಂದ 1-2ನೆಯ ಅಧ್ಯಾಯಗಳನ್ನು ಓದುವುದರಿಂದಲೇ ತಿಳಿಯಬರುವುದಷ್ಟೆ?

ಪರಮಭಕ್ತರಾದ ಶ್ರೀಸ್ವಾಮಿಗಳವರು ಈ ಕ್ಷೇತ್ರದಲ್ಲಿ ಇಪ್ಪತ್ತೆರಡು ದಿನಗಳು ವಾಸಮಾಡಿ ಅನೇಕ ಪ್ರಕಾರದಿಂದ ಶ್ರೀ ಶ್ರೀಕಂಠೇಶ್ವರನನ್ನು ಆರಾಧಿಸಿ ಶ್ರೀಮನ್ಮಹಾಪ್ರಭುಗಳವರ ಮತ್ತು ಅವರ ಕುಟುಂಬದವರ ಶ್ರೇಯಸ್ಸಿಗಾಗಿಯೂ ತಮ್ಮ ಶಿಷ್ಯ ಜನಗಳ ಶ್ರೇಯಸ್ಸಿಗಾಗಿಯೂ ಪ್ರಾರ್ಥನೆಮಾಡಿ ಇಲ್ಲಿಂದ ಮುಂದಕ್ಕೆ ಪ್ರಯಾಣವನ್ನು ಬೆಳೆಸಿದರು. ನಂಜನಗೂಡಿನಿಂದ ಹೊರಟು ಚಾಮರಾಜನಗರ, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ಎಡತೊರೆ, ಹುಣಸೂರು, ಅರಕಲಗೂಡು ಮಾರ್ಗವಾಗಿ ಕಾವೇರಿನದಿಯ ಉತ್ಪತ್ತಿಸ್ಥಾನವಾದ ತಲಕಾವೇರಿಯೆಂಬ ದಿವ್ಯಸ್ಥಳದ ಯಾತ್ರೆಗಾಗಿ ಕೊಡಗುದೇಶವನ್ನು ಪ್ರವೇಶಿಸಿದರು. ಆ ದೇಶದಲ್ಲಿ ವಿಶೇಷವಾಗಿ ಬ್ರಾಹ್ಮಣರು ವಾಸವಾಗಿರುವುದಿಲ್ಲ. ಆ ದೇಶೀಯರಾದ ಕೊಡುವ ಜನರೇ ಭಾಗ್ಯವಂತರಾಗಿಯೂ ಪ್ರಸಿದ್ಧರಾಗಿಯೂ ಇರುತ್ತಾರೆ. ಆ ದೇಶದಲ್ಲಿರುವ ಮುಖ್ಯವಾದ ದೇವಾಲಯಗಳು ಛತ್ರಗಳು ಮೊದಲಾದ ಧರ್ಮಸ್ಥಾನಗಳು ಅಲ್ಲಿನ ಸ್ಥಳೀಯರಾದ ಕೊಡಗುಜನರ ವಿಚಾರಣೆಗೆ ಒಳಪಟ್ಟವುಗಳಾಗಿ ಅಲ್ಲಿನ ಧರ್ಮಗಳೆಲ್ಲವೂ ಬಹಳ ವಿತರಣೆಯಿಂದ ನಡೆಸಲ್ಪಡುತ್ತ ಬಂದಿವೆ. ಶ್ರೀ ಶ್ರೀಗಳವರು ಆ ಪ್ರಾಂತ್ಯಕ್ಕೆ ದಯಮಾಡಿಸಿದಾಗ ಆ ದೇಶದಲ್ಲಿ ಪ್ರಸಿದ್ಧರಾದ ಮಹಾಜನರು ಶ್ರೀಗಳವರನ್ನು ಬಹಳ ಗೌರವದಿಂದಲೂ ಭಕ್ತಿಯಿಂದಲೂ ಬರಮಾಡಿಕೊಂಡರು. ಮಡಿಕೇರಿಯಲ್ಲಿಯೂ ಭಾಗಮಂಡಲದಲ್ಲಿಯೂ ಶ್ರೀಗಳವರ ವಸತಿಗೆ ದೇವಸ್ಥಾನಗಳಲ್ಲಿಯೇ ಬೇಕಾದ ಅನುಕೂಲಗಳನ್ನು ಮಾಡಿಕೊಟ್ಟು ದೇವಸ್ಥಾನದಿಂದ ಶ್ರೀಗಳವರಿಗೂ ಅವರ ಪರಿವಾರಕ್ಕೂ ಆತಿಥ್ಯವನ್ನು ನಡೆಸಿದ್ದಲ್ಲದೆ ದೊಡ್ಡಮನುಷ್ಯರನೇಕರು ತಮ್ಮ ತಮ್ಮ ಕುಟುಂಬದ ಜನರೊಡನೆ ಶ್ರೀ ಶ್ರೀಗಳವರ ಸನ್ನಿಧಾನಕ್ಕೆ ಬಂದು ಅವರವರ ಅಂತಸ್ತಿಗೆ ತಕ್ಕಂತೆ ಪ್ರತ್ಯೇಕವಾಗಿ ಭಿಕ್ಷಾ ಪಾದಪೂಜಾದಿಸೇವೆಗಳನ್ನು ಅತ್ಯಾದರದಿಂದ ನಡೆಸಿ ಶ್ರೀಗಳವರಿಂದ ತೀರ್ಥಪ್ರಸಾದಗಳನ್ನು ಪಡೆದು ಅವರ ಅನುಗ್ರಹಕ್ಕೆ ವಿಶೇಷವಾಗಿ ಪಾತ್ರರಾದರು. ಕಾವೇರಿಯ ಉತ್ಪತ್ತಿಸ್ಥಾನಕ್ಕೆ ಸಮೀಪವಾದ ಭಾಗಮಂಡಲವೆಂಬ ಸ್ಥಳದಲ್ಲಿ ಶ್ರೀಗಳವರು ಮೂರುದಿನ ವಸತಿಯನ್ನು ಮಾಡಿ ನದಿಯ ಉತ್ಪತ್ತಿಸ್ಥಾನದಲ್ಲಿ ಸ್ನಾನಮಾಡಿ ಸುವರ್ಣದ ನಾಣ್ಯಗಳಿಂದ ನದಿಯನ್ನು ಪೂಜಿಸಿ ಬ್ರಾಹ್ಮಣ ಭೋಜನಾದಿಗಳನ್ನು ವಿಶೇಷವಾಗಿ ನಡೆಸಿದರು. ಅಲ್ಲಿಂದ ಸಂಚಾರ ಕ್ರಮವಾಗಿ ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಪಶ್ಚಿಮವಾಹಿನಿಗೆ ದಯಮಾಡಿಸಿದರು. ಅಲ್ಲಿ ತಮ್ಮ ಗುರುಗಳವರ ಆರಾಧನೆಯು ಜರುಗಿಸಲ್ಪಟ್ಟಿತು. ಈ ಸಮಯದಲ್ಲಿ ಅತರ್ಕಿತಾಗಮನದಿಂದ ಶ್ರೀಗಳವರಿಗೆ ತಮ್ಮ ಭಕ್ತಿವಿಶ್ವಾಸಗಳನ್ನು ತೋರಿಸಿ ಅವರ ಅನುಗ್ರಹವನ್ನು ಪಡೆಯಬೇಕೆಂಬ ಉದ್ದೇಶದಿಂದ ಶ್ರೀ ಚಾಮರಾಜಪ್ರಭುಗಳವರು ಅಪರಾಹ್ನದಲ್ಲಿ ಪಶ್ಚಿಮವಾಹಿನಿಗೆ ದಯಮಾಡಿ ಶ್ರೀಗಳವರ ಸಂದರ್ಶನವನ್ನು ಮಾಡಿಕೊಂಡು

ಅವರ ಅಪ್ಪಣೆಯನ್ನು ಪಡೆದು ರಾಜಧಾನಿಗೆ ದಯಮಾಡಿಸಿದರು. ಶ್ರೀಗಳವರು ಪಶ್ಚಿಮವಾಹಿನಿಯಿಂದ ಮಂಡ್ಯ, ಮದ್ದೂರು, ಶಿವನಸಮುದ್ರ, ಕೊಳ್ಳೇಗಾಲ, ಚಾಮರಾಜ ನಗರಗಳ ಮಾರ್ಗವಾಗಿ ಪ್ರಯಾಣಮಾಡಿ ಕಣಿವೆಯಿಳಿದು ಮದರಾಸಿನ ಆಧಿಪತ್ಯಕ್ಕೆ ಸೇರಿದ ಕೊಯಂಬತ್ತೂರು ಜಿಲ್ಲಾ ಸತ್ಯಮಂಗಲಕ್ಕೆ ಬಿಜಯ ಮಾಡಿಸಿದರು. ಸತ್ಯಮಂಗಲದಲ್ಲಿ ಸಂಸ್ಥಾನಕ್ಕೆ ಸೇರಿದ ವಿಶಾಲವಾದ ಒಂದು ಮಠವು ಭವಾನೀ ನದೀತೀರದಲ್ಲಿದೆ. ಆ ಮಠದಲ್ಲಿಯೇ ವಸತಿಯನ್ನು ಮಾಡಿ ನಂದನಸಂವತ್ಸರದ ಚಾತುರ್ಮಾಸ್ಯ ಸಂಕಲ್ಪವನ್ನು ನಡೆಸಿದರು.

ಸುಬ್ರಹ್ಮಣ್ಯೇಶ್ವರ ಪ್ರತಿಷ್ಠೆ

ಬಳಿಕ ಗೋಪಿಶೆಟ್ಟಿಪಾಳೆಯವೆಂಬ ಬ್ರಾಹ್ಮಣಾಗ್ರಹಾರಕ್ಕೆ ದಯಮಾಡಿಸಿ ಅಲ್ಲಿ ಶರನ್ನವರಾತ್ರಿಮಹೋತ್ಸವವನ್ನು ನಡೆಸಿದರು. ಆ ಗ್ರಾಮದಲ್ಲಿ ಶಿವಕೊಳಂದೆ ಮೊದಲಿಯಾರ್ ಎಂಬಾತನು ಜಮೀನುವ್ಯವಸಾಯದಿಂದ ತಕ್ಕಮಟ್ಟಿಗೆ ಪುಷ್ಟನಾಗಿರುತ್ತಿದ್ದನು. ಈತನು ತನ್ನ ತಂದೆಯ ಸಂಕಲ್ಪವನ್ನನುಸರಿಸಿ ಗೋಪಿಶೆಟ್ಟಿಪಾಳೆಯದಲ್ಲಿ ಸುಬ್ರಹ್ಮಣ್ಯೇಶ್ವರಮೂರ್ತಿಯನ್ನು ಪ್ರತಿಷ್ಠೆಮಾಡಿಸಿ ನಿತ್ಯ ಪೂಜಾದಿಗಳು ನಡೆವಂತೆ ವ್ಯವಸ್ಥೆಯನ್ನು ಮಾಡಬೇಕೆಂದು ಯೋಚಿಸಿಕೊಂಡಿದ್ದನು. ಶ್ರೀ ಶ್ರೀಸ್ವಾಮಿಗಳವರು ಗೋಪಿಶೆಟ್ಟಿಪಾಳೆಯಕ್ಕೆ ದಯಮಾಡಿದ ನಂತರ ಈ ಮಹನೀಯರ ಆಜ್ಞೆಗನುಸಾರವಾಗಿ ವೈದಿಕವಿಧಾನದಿಂದ ದೇವರಪ್ರತಿಷ್ಠೆಯನ್ನು ಮಾಡಿಸಿ ವೈದಿಕಮೂಲಕವಾಗಿಯೇ ನಿತ್ಯಪೂಜಾದಿಗಳು ನಡೆವಂತೆ ಮಾಡಿದರೆ ತಾನು ಏರ್ಪಡಿಸಿದ ದೇವಸ್ಥಾನವು ಸರ್ವಜನಾದರಣೀಯವಾಗಿ ಆಚಂದ್ರಾರ್ಕಸ್ಥಾಯಿ ಯಾಗುವುದೆಂಬ ಅಭಿಪ್ರಾಯವು ಆತನಿಗುಂಟಾಗಿ ಆ ಗ್ರಾಮದ ಪ್ರಮುಖರಾದ ಬ್ರಾಹ್ಮಣರ ಮೂಲಕ ತನ್ನ ಪ್ರಾರ್ಥನೆಯನ್ನು ಶ್ರೀ ಶ್ರೀಸ್ವಾಮಿಗಳವರಲ್ಲಿ ತಿಳಿಸಿಕೊಂಡನು. ಅದುವರೆಗೆ ದಕ್ಷಿಣದೇಶದಲ್ಲಿ ವೈದಿಕವಿಧಾನದಿಂದ ದೇವರ ಪ್ರತಿಷ್ಠೆಯನ್ನು ಮಾಡುವ ಕ್ರಮವು ವಿಶೇಷವಾಗಿ ಪ್ರಚಾರದಲ್ಲಿರಲಿಲ್ಲ. ಆಗ ಬ್ರಾಹ್ಮಣರ ಮೂಲಕವಾಗಿ ತಮ್ಮ ಶ್ರೋತ್ರ ಗೋಚರವಾದ ಆ ಭಕ್ತನ ಪ್ರಾರ್ಥನೆಯನ್ನು ಅಂಗೀಕರಿಸಿ ಆಸ್ಥಾನದ ಪಂಡಿತರುಗಳನ್ನು ಕಳುಹಿಸಿ ಅವರುಗಳ ಸಹಾಯದಿಂದ ಅಲ್ಲಿನ ವೈದಿಕಬ್ರಾಹ್ಮಣರ ಮೂಲಕ ವೇದೋಕ್ತ ವಿಧಾನದಿಂದ ಸುಬ್ರಹ್ಮಣ್ಯಸ್ವಾಮಿಮೂರ್ತಿ ಪ್ರತಿಷ್ಠೆಯನ್ನು ನಡೆಸಲು ಶ್ರೀ ಶ್ರೀಗಳವರು ಅಪ್ಪಣೆಮಾಡಿದರು.

ಅವರ ಆಜ್ಞೆಯಂತೆ ವಿಧ್ಯುಕ್ತವಾಗಿ ದೇವತಾಪ್ರತಿಷ್ಠೆ ನಡೆದನಂತರ ಶ್ರೀ ಶ್ರೀಗಳವರು

ಸಾಕ್ಷಾತ್ತಾಗಿ ದೇವಾಲಯಕ್ಕೆ ದಯಮಾಡಿಸಿ ಮೂರ್ತಿಯಲ್ಲಿ ವಿಶೇಷವಾಗಿ ದೇವತಾ ಸಾನ್ನಿಧ್ಯವುಂಟಾಗುವುದಕ್ಕೋಸ್ಕರ ದೇವರನ್ನು ಪೂಜಿಸಿ, ದೇವತಾಸಾನ್ನಿಧ್ಯಾಧಾಯಕವಾದ ಅನೇಕ ಮಹಾಮಂತ್ರಗಳಿಂದ ಮೂರ್ತಿಯನ್ನು ಅಭಿಮಂತ್ರಿಸಿ, ವೈದಿಕ ವಿಧಾನದಿಂದ ಪ್ರತಿಷ್ಠಿಸಲ್ಪಟ್ಟು ತಾವು ಆರಾಧಿಸಿರುವ ದೇವರನ್ನು ಯಾವ ವಿಧವಾಗಿಯೂ ಸಂದೇಹಿಸದೆ ಎಲ್ಲಾ ವೈದಿಕರೂ ಪೂಜಿಸಬಹುದೆಂದು ಆಜ್ಞೆಯನ್ನಿತ್ತು, ಅಲ್ಲಿಂದ ಮುಂದೆ ಈರೋಡು, ಭವಾನಿ ಮೊದಲಾದ ಗ್ರಾಮಗಳಲ್ಲಿ ಶಿಷ್ಯಜನರ ಪ್ರಾರ್ಥನೆಯಂತೆ ಮೂರು, ನಾಲ್ಕು, ಎಂಟು, ಹತ್ತು, ಹದಿನೈದು ದಿನಗಳ ಪರ್ಯಂತ ವಸತಿಯನ್ನು ಮಾಡಿ, ಶ್ರೀಶಾರದಾಚಂದ್ರ ಚೂಡಾದಿ ದೇವತಾ ಸಂದರ್ಶನ ತೀರ್ಥಪ್ರಸಾದಗಳಿಂದ ಬಾಹ್ಯಶುದ್ಧಿಯನ್ನೂ, ತಮ್ಮ ಸದುಪದೇಶದ ಶ್ರವಣದಿಂದ ಆಂತರಶುದ್ಧಿಯನ್ನೂ ಪಡೆದು ಜನಗಳು ಕೃತಾರ್ಥರಾಗುವಂತೆ ಅನುಗ್ರಹಮಾಡುತ್ತ, ಒಂದು ವರ್ಷಕ್ಕೆ ಮೇಲ್ಪಟ್ಟ ಕಾಲದವರೆಗೂ ಅತ್ಯಂತ ನಿರ್ಮಲವಾದ ಕಾವೇರೀ ನದೀತೀರದ ಬ್ರಾಹ್ಮಣಾಗ್ರಹಾರಗಳಲ್ಲಿಯೇ ಸಂಚರಿಸಿದರು.

ದಂಡಾಯುಧಪಾಣಿ ದೇವಾಲಯಕ್ಕೆ ಶಿಲಾಪ್ರತಿಷ್ಠೆ.

ತಿರುಚನಾಪಳ್ಳಿಯಿಂದ ಪಶ್ಚಿಮಕ್ಕೆ ಹದಿನೈದು ಮೈಲಿಗಳ ದೂರದ ಅಖಂಡ ಕಾವೇರೀ ತೀರದಲ್ಲಿ ಅಯ್ಯಂಪಾಳೆಯವೆಂಬ ಒಂದು ಗ್ರಾಮವಿರುವುದು. ಅದು ಬ್ರಾಹ್ಮಣಗ್ರಾಮವಲ್ಲವು. ಅಲ್ಲಿ ಷಣ್ಮುಖಂಪಿಳ್ಳೆಯೆಂಬವರ ಮಗನು ತಾಂಡವ ರಾಯಪಿಳ್ಳೆಯೆಂಬ ಒಬ್ಬ ಗೃಹಸ್ಥನಿದ್ದನು. ಈತನು ವೆಳ್ಳಾಳಜಾತಿಗೆ ಸೇರಿದ ಸಚ್ಛೂದ್ರನು. ಈತನ ಪೂರ್ವಜರು ಕಾವೇರೀತೀರದಲ್ಲಿ ವಿಶೇಷವಾಗಿ ಸಾರವತ್ತಾದ ಭೂಮಿಗಳನ್ನು ಸಂಪಾದಿಸಿ ಭೂವ್ಯವಸಾಯದಿಂದ ಭಾಗ್ಯವಂತರಾಗಿದ್ದರು. ಆ ಆಸ್ತಿಗಳಲ್ಲಿ ಮೂರನೆಯ ಭಾಗವನ್ನು ಧರ್ಮಕಾರ್ಯಗಳಿಗಾಗಿ ವಿನಿಯೋಗಿಸಬೇಕೆಂತಲೂ, ಉಳಿದ ಎರಡು ಭಾಗಗಳನ್ನು ತಮ್ಮ ಸಂತತಿಯವರು ಅನುಭವಿಸಬೇಕೆಂತಲೂ ಈ ತಾಂಡವರಾಯಪಿಳ್ಳೆಯವರ ಹಿಂದಿನವರೇ ಶಿಲಾಶಾಸನದ ಮೂಲಕ ವ್ಯವಸ್ಥೆಮಾಡಿದ್ದಂತೆ ತಿಳಿದುಬರುತ್ತೆ. ಹಾಗೆ ಧರ್ಮಾರ್ಥವಾಗಿ ಹಿಂದಿನವರಿಂದ ನಿರ್ದೇಶಿಸಲ್ಪಟ್ಟ ಸ್ವತ್ತುಗಳ ವಿಚಾರಣೆಯನ್ನು ಈ ವಂಶದವರೇ ಮಾಡುತ್ತ ಅವುಗಳ ವರಮಾನದಿಂದ ಆಗಂತುಕರಾಗಿ ಬಂದ ಬ್ರಾಹ್ಮಣರಿಗೆ ಅನ್ನದಾನವೆಂಬ ಒಂದು ಧರ್ಮವನ್ನು ಮಾತ್ರ ನಡೆಸಿಕೊಂಡು ಬರುತ್ತಲಿದ್ದರು. ಈ ವಂಶದಲ್ಲಿ ಹುಟ್ಟಿದ ತಾಂಡವರಾಯಪಿಳ್ಳೆಗೆ ಪುಣ್ಯಪರಿಪಾಕದಿಂದ ತಮ್ಮ ಪೂರ್ವಜರ ಧರ್ಮಕಾರ್ಯವನ್ನು ವೃದ್ಧಿಗೊಳಿಸಿ ಧರ್ಮದ ಸ್ವತ್ತುಗಳ ವರಮಾನವನ್ನು ಪೂರ್ಣವಾಗಿ ಧರ್ಮಕ್ಕೆ ವಿನಿಯೋಗಿಸುತ್ತ ಬರಬೇಕೆಂಬ ಸಂಕಲ್ಪವುಂಟಾಯಿತು. ಈ ವಂಶದವರು ದಂಡಾಯುಧಪಾಣಿಯಾದ ಸುಬ್ರಹ್ಮಣ್ಯ ದೇವರಿಗೆ

ವಿಶಾಲವಾದ ಒಂದು ಆಲಯವನ್ನು ನಿರ್ಮಿಸಿ ಆ ದೇವರ ಪ್ರತಿಷ್ಠೆಯನ್ನು ಮಾಡಿಸಿ ನಿತ್ಯನೈಮಿತ್ತಿಕ ಪೂಜಾದ್ಯುತ್ಸವಗಳು ಸ್ಥಿರವಾಗಿ ನಡೆದು ಬರುವಂತೆ ಮಾಡಬೇಕೆಂಬ ಅಭಿಪ್ರಾಯವುಂಟಾಗಿ ಈ ಅಭಿಪ್ರಾಯವು ಈತನ ಮನಸ್ಸಿನಲ್ಲಿಯೇ ವೃದ್ಧಿಹೊಂದುತ್ತಲಿತ್ತು. ಇಂಥಾ ಸಂದರ್ಭದಲ್ಲಿ ಶ್ರೀ ಶ್ರೀಗಳವರು ಆ ಪ್ರಾಂತ್ಯಕ್ಕೆ ಬಿಜಯಮಾಡಿಸಿ ಶಿಷ್ಯಕೋಟಿಗಳನ್ನು ಅನುಗ್ರಹಿಸುತ್ತ ಕಾವೇರೀತೀರದಲ್ಲಿಯೇ ಸಂಚರಿಸುತ್ತಲಿರುವ ಸಂಗತಿಯನ್ನು ತಿಳಿದುಕೊಂಡ ತಾಂಡವರಾಯಪಿಳ್ಳೆಗೆ ತನ್ನ ಸಂಕಲ್ಪವನ್ನು ನೆರವೇರಿಸಿಕೊಳ್ಳಲು ಅನುಕೂಲವಾದ ಸಮಯವೊದಗಿಬಂತೆಂದು ನಿಶ್ಚಯವಾಯಿತು. ಈ ಗೃಹಸ್ಥನು ತುಂಬಾಬುದ್ಧಿಶಾಲಿ ಯಾಗಿಯೂ ಬಹಳ ದೂರದೃಷ್ಟಿಯುಳ್ಳವನಾಗಿಯೂ ಇದ್ದನು. ನಾಲ್ಕನೆಯ ವರ್ಣದವನಾದ ತನ್ನಿಂದ ನೂತನವಾಗಿ ಕಲ್ಪಿಸಲ್ಪಡುವ ದೇವಾಲಯವು ಸರ್ವ ಜನಾದರಣೀಯವಾದಲ್ಲದೆ ಉತ್ತಮಸ್ಥಿತಿಗೆ ಬರಲಾರದೆಂತಲೂ, ಲೋಕಮಾನ್ಯರಾಗಿಯೂ ಪರಮಶುದ್ಧಚಾರಿತ್ರವುಳ್ಳವ ರಾಗಿಯೂ ಇರುವ ಶ್ರೀ ಶ್ರೀಸ್ವಾಮಿಗಳವರೇ ಈ ಕಾರ್ಯವನ್ನು ಕೈಕೊಂಡು ಶಿಷ್ಯನಾದ ತನ್ನ ಸಹಾಯದಿಂದ ನೆರವೇರಿಸುವಂತೆ ಏರ್ಪಡುವ ಪಕ್ಷದಲ್ಲಿ ಈ ಮಹಾಕಾರ್ಯವು ತೃಪ್ತಿಕರವಾಗಿ ಪೂರೈಸಿ ಆಚಂದ್ರಾರ್ಕಸ್ಥಾಯಿಯಾಗಿ ಸರ್ವಜನಾದೃತವಾಗುವುದೆಂತಲೂ ಯೋಚಿಸಿ ತನ್ನ ಈ ಅಭಿಪ್ರಾಯವನ್ನು ಮುಂದಾಗಿ ವ್ಯಕ್ತಗೊಳಿಸದೆ, ಶ್ರೀ ಶ್ರೀಗಳವರು ಅಯ್ಯಂಪಾಳೆಯಕ್ಕೆ ಮಾರ್ಗವಶದಿಂದ ದಯಮಾಡಿ ಅನುಗ್ರಹಿಸಿ ಮುಂದಕ್ಕೆ ಪ್ರಯಾಣವನ್ನು ಬೆಳೆಸಬೇಕೆಂದು ಪ್ರಾರ್ಥಿಸಿಕೊಂಡನು. ಶ್ರೀ ಶ್ರೀಗಳವರು ಅಯ್ಯಂಪಾಳೆಯಕ್ಕೆ ಬಿಜಯ ಮಾಡಿದ ಬಳಿಕ ಆ ಮಹನೀಯರ ದರ್ಶನಮಾತ್ರದಿಂದ ತಾಂಡವರಾಯಪಿಳ್ಳೆಯವರಿಗೆ ತಮ್ಮ ಕುಲದೈವವಾದ ದಂಡಾಯುಧಪಾಣಿಯೇ ತನಗೆ ದರ್ಶನವನ್ನು ಕೊಟ್ಟು ಅನುಗ್ರಹಿಸುವುದಕ್ಕೆ ಶ್ರೀಗಳವರ ರೂಪದಿಂದ ಬಂದಂತೆ ಕಂಡುಬಂದಿತು. ಈ ಭಾವನೆಯು ಈ ಗೃಹಸ್ಥನ ಮನಸ್ಸಿನಲ್ಲಿ ದೃಢತರವಾಗಿ ನಿಂತದ್ದರಿಂದ ಸ್ವಭಾವವಾಗಿ ಶ್ರೀಗಳವರು ದಯಮಾಡುವುದಕ್ಕೆ ಮುಂದಾಗಿಯೇ ತಾನು ಯೋಚಿಸಿದ್ದ ಕಾರ್ಯವನ್ನು ಶ್ರೀ ಶ್ರೀಗಳವರ ಮೂಲಕವಾಗಿ ನೆರವೇರಿಸಿ ಕೃತಾರ್ಥನಾಗಬೇಕೆಂಬ ವಿಷಯದಲ್ಲಿ ತ್ವರೆಯು ಬಹಳವಾಗಿ ಹೆಚ್ಚಿತು. ಮಾರನೆಯ ದಿನ ತಾಂಡವರಾಯಪಿಳ್ಳೆಯವರು ತಮ್ಮ ಅಭಿಪ್ರಾಯವನ್ನು ಈ ಲೇಖಕನ ಮೂಲಕವಾಗಿಯೇ ಶ್ರೀ ಶ್ರೀಗಳವರ ಸನ್ನಿಧಿಯಲ್ಲಿ ಶ್ರುತಪಡಿಸಿ, ಶ್ರೀಗಳವರು ತಮ್ಮ ಅಮೃತಮಯವಾದ ಹಸ್ತದಿಂದ ಆಸ್ತಿಭಾರ ಸೂಚಕವಾದ ಶಿಲೆಯನ್ನು ಸ್ಥಾಪಿಸಿ ಮುಂದೆ ಬಿಜಯಮಾಡಿಸಿದಲ್ಲಿ ಶ್ರೀಗಳವರು ತಮ್ಮ ಸಂಕಲ್ಪದಂತೆ ಸೇತುಯಾತ್ರೆಯನ್ನು ಪೂರೈಸಿಕೊಂಡು ಹಿಂತಿರುಗಿ ಬರುವಷ್ಟರಲ್ಲಿ ತಾನು ದೇವಾಲಯ ನಿರ್ಮಾಣವನ್ನು ಮಾಡಿಸಿರುವುದಾಗಿಯೂ ಮತ್ತೆ ಇದೇ ಮಾರ್ಗವಾಗಿ ಶ್ರೀಗಳವರು ಬಂದು ದೇವತಾಪ್ರತಿಷ್ಠೆ

ಮಾಡಿಸಿ ಸ್ವಸ್ಥಾನಕ್ಕೆ ತೆರಳಬಹುದಾಗಿಯೂ ವಿಜ್ಞಾಪನೆ ಮಾಡಿಸಿದರು. ಈ ಪ್ರಾರ್ಥನೆಯು ವಿದಿತವಾದ ಕೂಡಲೆ ಶ್ರೀಗಳವರು ತಟ್ಟನೆ ಅನುಮತಿಯನ್ನು ಕೊಡುವುದರಲ್ಲಿ ಹಿಂಜರಿದರು. ಅನಂತರ ಲೋಕಹಿತಾರ್ಥವಾಗಿ ಶ್ರೀ ಶಂಕರಾಚಾರ್ಯರವರು ಅನೇಕ ಸ್ಥಳಗಳಲ್ಲಿ ದೇವತಾಮೂರ್ತಿಗಳನ್ನು ಸ್ಥಾಪಿಸಿ ಲೋಕಾನುಗ್ರಹವನ್ನು ಮಾಡಿದಂತೆ ಶಿಷ್ಯ ಸಹಾಯದಿಂದ ಶ್ರೀಗಳವರೇ ಸರ್ವಜನೋಪಯೋಗಿಯಾಗಿ ಅಖಂಡಕಾವೇರೀತೀರದಲ್ಲಿ ದೇವಾಲಯವನ್ನು ನಿರ್ಮಾಣಮಾಡಿಸಿ ದೇವತಾ ಪ್ರತಿಷ್ಠೆಯನ್ನು ಮಾಡಿ ಅನುಗ್ರಹಿಸಬೇಕೆಂದು ಪುನಃ ಪುನಃ ತಿಳಿಸಿಕೊಂಡ ಮೇಲೆ ಆ ಗೃಹಸ್ಥನ ಸಂಕಲ್ಪವು ಆತ್ಮಮಾತ್ರೋಪಯೋಗಿಯಲ್ಲವೆಂಬ ಅಂಶವನ್ನು ಚೆನ್ನಾಗಿ ತಿಳಿದು ಆತನ ಕೋರಿಕೆಯಂತೆ ನಡೆಸುವುದಾಗಿ ಅನುಮತಿಯನ್ನು ಕೊಟ್ಟರು. ದೇವಾಲಯ ನಿರ್ಮಾಣಕ್ಕೆಂದು ನಿರ್ದೇಶಿಸಿದ್ದ ಸ್ಥಳದಲ್ಲಿ ಶಾಲಿವಾಹನಶಕ 1816ನೆಯ ವಿಜಯ ಸಂವತ್ಸರದ ಚೈತ್ರ ಶುದ್ಧ ಸಪ್ತಮೀ ಶುಕ್ರವಾರ ಸಿಂಹಲಗ್ನದಲ್ಲಿ ಶ್ರೀ ಶ್ರೀಗಳವರು ಶ್ರೀಶಾರದಾ ಚಂದ್ರಮೌಳೀಶ್ವರಾದಿದೇವತಾರಾಧನ ನಿತ್ಯ ಕರ್ಮಾನುಷ್ಠಾನಗಳನ್ನು ನೆರವೇರಿಸಿಕೊಂಡು ದಯಮಾಡಿಸಿ ಸಂಸ್ಥಾನದ ಖರ್ಚಿನಿಂದ ಆರಂಭದಲ್ಲಿ ಗಣಪತಿಪೂಜೆ ಮೊದಲಾದ ಕರ್ಮಕಲಾಪಗಳನ್ನು ಬ್ರಾಹ್ಮಣರ ಮೂಲಕವಾಗಿ ನೆರವೇರಿಸಿ ದೇವಾಲಯ ನಿರ್ಮಾಣಕ್ಕೆ ಆಸ್ತಿಭಾರ ಶಿಲೆಯನ್ನು ಸ್ಥಾಪಿಸಿದರು. ಬಳಿಕ ತಾಂಡವರಾಯಪಿಳ್ಳೆಯವರಿಗೆ ಪ್ರಸಾದವನ್ನನುಗ್ರಹಿಸಿ ತಾವು ಸೇತುಯಾತ್ರೆಯನ್ನು ನೆರವೇರಿಸಿಕೊಂಡು ಬರುವುದರೊಳಗಾಗಿ ದೇವಾಲಯವನ್ನು ನಿರ್ಮಿಸಿ ಸಿದ್ಧಪಡಿಸಿರುವಂತೆಯೂ ಆ ಆಲಯದಲ್ಲಿ ವಿಷ್ಣುಮೂರ್ತಿಯನ್ನೂ ಪಾರ್ವತೀಪರಮೇಶ್ವರ ಮೂರ್ತಿಗಳನ್ನೂ ಪ್ರತಿಷ್ಠಿಸಲು ತಕ್ಕ ಅನುಕೂಲವನ್ನು ಕಲ್ಪಿಸಿರುವಂತೆಯೂ ಆಜ್ಞೆಯನ್ನಿತ್ತು ಮುಂದೆ ತಮ್ಮ ಯಾತ್ರೆಯನ್ನು ಕೈಕೊಂಡರು. ಈ ಸಮಯಕ್ಕೆ ಚಾತುರ್ಮಾಸ್ಯ ಸಂಕಲ್ಪಕಾಲವೊದಗಿತು. ಕಾವೇರೀತೀರವನ್ನು ಬಿಟ್ಟು ಆಮ್ರಾತೀತೀರದ ಗ್ರಾಮಗಳಲ್ಲಿರುವ ಶಿಷ್ಯಜನರನ್ನು ಅನುಗ್ರಹಿಸಲು ಆ ಪ್ರಾಂತ್ಯಕ್ಕೆ ದಯಮಾಡಿಸಿದರು. ಕೊಯಂಬತ್ತೂರು ಜಿಲ್ಲಾ ಉಡಮಲ್ ಪೇಟೆ ತಾಲ್ಲೂಕಿಗೆ ಸೇರಿದ ವರದರಾಜಪುರ (ಕೊಳಮ) ವೆಂಬ ಅಗ್ರಹಾರದಲ್ಲಿ ವಿಜಯ ಸಂವತ್ಸರದ ಚಾತುರ್ಮಾಸ್ಯ ದೀಕ್ಷೆಯನ್ನು ಪೂರೈಸಿದ ಬಳಿಕ ಅಲ್ಲಿಗೆ ಸಮೀಪವಾಗಿರುವ ಕಡತ್ತೂರು ಎಂಬ ಅಗ್ರಹಾರದಲ್ಲಿ ಶರನ್ನವರಾತ್ರಿ ಪ್ರಯುಕ್ತವಾದ ಶಾರದಾ ಪೂಜಾದಿ ಧರ್ಮಗಳನ್ನು ನೆರವೇರಿಸಿ ಮಧುರೈ ಜಿಲ್ಲೆಗೆ ಸೇರಿದ ಪಳನಿಯೆಂಬ ಸುಬ್ರಹ್ಮಣ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಈ ಕ್ಷೇತ್ರವು ದಕ್ಷಿಣದೇಶದಲ್ಲಿ ಬಹಳ ಪ್ರಸಿದ್ಧವಾದದ್ದು. ಈ ಕ್ಷೇತ್ರದ ದರ್ಶನಕ್ಕೂ ಇಲ್ಲಿರುವ ದಂಡಾಯುಧ ಸುಬ್ರಹ್ಮಣ್ಯಮೂರ್ತಿಯ ದರ್ಶನಕ್ಕೂ ಬಹುಜನರು ಬರುವರು. ಒಂದುದಿನ ವಾದರೂ ಹಾಲಿನ ಕಾವಡಿಯನ್ನು ಭಕ್ತರು ತರದೆ ಇರುವುದಿಲ್ಲವೆಂಬ ಪ್ರಸಿದ್ಧಿಯು ಹೆಚ್ಚಾಗಿರುವುದು.

ಈ ಕ್ಷೇತ್ರದಲ್ಲಿ ಕೆಲವು ದಿನಗಳು ವಸತಿಮಾಡಿ ಶ್ರೀ ದಂಡಾಯುಧಪಾಣಿಗೆ ಶ್ರೀಗಳವರು ವಿಶೇಷವಾಗಿ ಪೂಜೆಯನ್ನು ಮಾಡಿ ದಿಂಡಿಗಲ್ಲು ಮಾರ್ಗವಾಗಿ ಮಧುರಾಪಟ್ಟಣಕ್ಕೆ ಚಿತ್ತೈಸಿದರು. ಈ ಪಟ್ಟಣಕ್ಕೆ ಶ್ರೀಗಳವರನ್ನು ಶಿಷ್ಯಜನರು ಬಹಳ ಭಕ್ತಿಯಿಂದಲೂ ವಿಶೇಷವಾದ ವೈಭವದಿಂದಲೂ ಬರಮಾಡಿಕೊಂಡರು. ಹಿಂದಿನ ಪದ್ಧತಿಯನ್ನನುಸರಿಸಿ ಶ್ರೀ ಮೀನಾಕ್ಷೀ ಸುಂದರೇಶ್ವರಾಲಯದ ಒಂದು ಭಾಗವಾದ ಕಲ್ಯಾಣಮಂಟಪದಲ್ಲಿ ಶ್ರೀಗಳವರು ವಸತಿ ಮಾಡಿದರು. ಆಗ ಸೇತುಪತಿಗಳ ವಂಶಕ್ಕೆ ಸೇರಿದ ರಾಮನಾಥಪುರದ ಅರಸನಾದ ರಾಜಭಾಸ್ಕರ ಸೇತುಪತಿಯವರು ಮಧುರೆಗೆ ಬಂದು ಶ್ರೀಗಳವರ ದರ್ಶನವನ್ನು ಮಾಡಿ, ಒಂದು ರಾತ್ರಿ ಮಧುರಾಪಟ್ಟಣದ ಸಕಲ ಜನರಿಗೂ ಶ್ರೀಗಳವರ ದರ್ಶನದ ಆನಂದವು ಲಭಿಸಬೇಕೆಂಬ ಉದ್ದೇಶದಿಂದ ಶ್ರೀ ಶ್ರೀಗಳವರನ್ನು ದಿವ್ಯವಾದ ಪುಷ್ಪಗಳಿಂದ ಅಲಂಕೃತವಾಗಿದ್ದ ಸುವರ್ಣ ಶಿಬಿಕೆಯಲ್ಲಿ ಆರೋಹಣ ಮಾಡಿಸಿ ರಾಜಮಾರ್ಗಗಳನ್ನು ಚಪ್ಪರಗಳಿಂದಲೂ ತೋರಣಗಳಿಂದಲೂ ಅಲಂಕರಿಸಿ ಅತಿವಿಭವದಿಂದ ಉತ್ಸವವನ್ನು ನಡೆಸಿದರು. ಆಗ ಅಲ್ಲಿ ಸೇರಿದ್ದ ಜನವು ಅಸಂಖ್ಯಾತವಾಗಿತ್ತು. ಆಬಾಲವೃದ್ಧರೂ ಶ್ರೀ ಶ್ರೀಗಳವರ ಸಂದರ್ಶನಮಾಡಿ ಆನಂದಮಗ್ನರಾಗಿ ಈ ಆನಂದಕ್ಕೆ ಸಹಕಾರಿಯಾಗಿದ್ದ ಸೇತುಪತಿಯನ್ನು ಬಹು ಮುಖದಿಂದ ಶ್ಲಾಘಿಸಿದರು. ಶ್ರೀಗಳವರು ಸೇತುಯಾತ್ರಾನಿಮಿತ್ತವಾಗಿ ಬಂದಿರುವುದನ್ನು ತಿಳಿದುಕೊಂಡು ಭಾಸ್ಕರಸೇತುಪತಿರಾಜರು ಶ್ರೀಗಳವರ ಸನ್ನಿಧಾನದಲ್ಲಿ ಶ್ರೀ ಶ್ರೀಸ್ವಾಮಿಗಳವರು ತಮ್ಮ ದೇಶಕ್ಕೆ ದಯಮಾಡಿಸಿ ಸಂಕಲ್ಪಿತವಾದ ಸೇತುಯಾತ್ರೆಯನ್ನು ನೆರವೇರಿಸಿ ತಮ್ಮ ವಾಸಸ್ಥಾನವಾದ ರಾಮನಾಥಪುರದಲ್ಲಿ ಚಾತುರ್ಮಾಸ್ಯ ಸಂಕಲ್ಪ ಶರನ್ನವರಾತ್ರಿ ಪೂಜಾದಿ ಧರ್ಮಗಳನ್ನು ಆಚರಿಸಿ ತಮಗೂ ತಮ್ಮ ಪ್ರಜೆಗಳಿಗೂ ಪೂರ್ಣಾನುಗ್ರಹಮಾಡಿ ಮುಂದಕ್ಕೆ ಬಿಜಯಮಾಡಿಸಬೇಕೆಂದು ವಿಜ್ಞಾಪಿಸಿಕೊಂಡರು. ಅದರಂತೆ ಶ್ರೀಗಳವರ ಸವಾರಿಯು ಮಧುರೆಯಿಂದ ಹೊರಟು ಮಾರ್ಗದಲ್ಲಿ ರಾಮನಾಡು ರಾಜರಿಗೆ ಸೇರಿದ ಗ್ರಾಮಗಳಲ್ಲಿ ಅಲ್ಲಲ್ಲಿ ವಸತಿಮಾಡಿ ಶಾ|| 1817 ಜಯ ಸಂವತ್ಸರ (1894) ವೈಶಾಖ ಶುದ್ಧ ಚತುರ್ದಶೀ ಶುಕ್ರವಾರದಲ್ಲಿ ರಾಮೇಶ್ವರ ಕ್ಷೇತ್ರವನ್ನು ಪ್ರವೇಶಿಸಿದರು. ಇಲ್ಲಿಯೂ ಪೂರ್ವನಿಬಂಧನೆಯಂತೆ ರಾಮನಾಥಸ್ವಾಮಿಯವರ ದೇವಾಲಯದ ಮೂರನೆಯ ಪ್ರಾಕಾರದಲ್ಲಿ ವಸತಿ ಮಾಡಿದರು. ರಾಮನಾಥಪುರದ ಎಲ್ಲೆಗೆ ತಲುಪಿದ್ದು ಮೊದಲುಗೊಂಡು ಶ್ರೀಗಳವರಿಗೂ ಅವರ ಪರಿವಾರಕ್ಕೂ ಬೇಕಾದ ಎಲ್ಲಾ ವಿಧವಾದ ಅನುಕೂಲಗಳೂ ರಾಮನಾಥಪುರದ ರಾಜರಿಂದಲೇ ಕಲ್ಪಿಸಲ್ಪಟ್ಟವು. ಮತ್ತು ಶ್ರೀಗಳವರು ಆ ಸಂಸ್ಥಾನವನ್ನು ಬಿಟ್ಟು ಹೊರಗೆ ದಯಮಾಡಿಸುವ ಪರ್ಯಂತ ಯಾವ ದಿನದಲ್ಲಿ ಭಿಕ್ಷೆಯು ಇತರ ಶಿಷ್ಯರಿಂದ ನಡೆಸಲ್ಪಡುವುದಿಲ್ಲವೋ ಆ ದಿನದಲ್ಲಿ

ಸಂಸ್ಥಾನದ ಖರ್ಚುಗಳಿಗಾಗಿ ಎರಡು ನೂರೈವತ್ತು ರೂಪಾಯಿಗಳಂತೆ ತಮ್ಮ ಖಜಾನೆಯಿಂದ ಕೊಡತಕ್ಕದ್ದೆಂದು ಸಂಕಲ್ಪಿಸಿ ಆ ರಾಜರು ಅದರಂತೆ ನಡೆಸಿದರು. ರಾಮೇಶ್ವರದಿಂದ ಸೇತುಸ್ನಾನಕ್ಕೋಸ್ಕರ ಧನುಷ್ಕೋಟಿಗೆ ದಯಮಾಡಿಸಿ ಅಲ್ಲಿ ಮೂರುದಿನಗಳು ಯಥಾವಿಧಿಯಾಗಿ ಸೇತುಸ್ನಾನವನ್ನು ಮಾಡಿ ಸಂಸ್ಥಾನದ ಪದ್ಧತಿಯಂತೆ ಆ ಕ್ಷೇತ್ರದಲ್ಲಿ ದಾನಧರ್ಮಗಳನ್ನು ನಡೆಸಿ ಸಂಸ್ಥಾನವನ್ನು ಆಶ್ರಯಿಸಿಕೊಂಡಿದ್ದ ವಿದ್ವಾಂಸರಿಗೂ ಇತರ ಪರಿಜನರಿಗೂ ತಾರತಮ್ಯಾನುಗುಣವಾಗಿ ಸುಮಾರು 30-40 ಜನರಿಗೆ 300 ರೂಪಾಯಿಗಳಿಂದ 1,000 ರೂಪಾಯಿಗಳವರೆಗೆ ಅವರು ಸ್ಥಿರವಾದ ಜೀವನವನ್ನು ಕಲ್ಪಿಸಿಕೊಳ್ಳುವಂತೆ ಅಪ್ಪಣೆ ಮಾಡಿಕೊಡಿಸಿ ಮತ್ತೆ ರಾಮೇಶ್ವರಕ್ಕೆ ದಯಮಾಡಿಸಿದರು. ರಾಮೇಶ್ವರದಲ್ಲಿ ಶ್ರೀ ರಾಮನಾಥಸ್ವಾಮಿಯವರಿಗೆ ಶ್ರೀಗಳವರು ವಿಶೇಷವಾಗಿ ಪೂಜೆಯನ್ನಾಚರಿಸಿ ಆ ಕ್ಷೇತ್ರದಲ್ಲಿ ಕೆಲವುಕಾಲ ವಸತಿಮಾಡಿ ಅಲ್ಲಿ ಶಿಷ್ಯ ಮಂಡಲಿಯವರನ್ನು ಅನುಗ್ರಹಿಸಿ ಸೇತುಪತಿಗಳ ಪ್ರಾರ್ಥನೆಯಂತೆ ರಾಮನಾಥಪುರಕ್ಕೆ ಚಿತ್ತೈಸಿದರು. ಅಲ್ಲಿ ಜಯ ಸಂವತ್ಸರದ ಚಾತುರ್ಮಾಸ್ಯ ಸಂಕಲ್ಪವನ್ನೂ ನವರಾತ್ರಿ ಪ್ರಯುಕ್ತವಾದ ಶಾರದಾ ಪೂಜಾದ್ಯುತ್ಸವಗಳನ್ನೂ ನೆರವೇರಿಸಿದರು.

ವಾಮಾಚಾರನಿರೋಧ ಮತ್ತು ರಾಜರಾಜೇಶ್ವರೀ ಪ್ರತಿಷ್ಠೆ.

ಸೇತುಪತಿಗಳ ಅರಮನೆಯಲ್ಲಿ ವಂಶಪಾರಂಪರ್ಯವಾಗಿ ಅವರುಗಳಿಂದ ರಾಜರಾಜೇಶ್ವರಿ ಅಮ್ಮನವರ ಆರಾಧನೆಯು ನಡೆಸಲ್ಪಡುತ್ತಿತ್ತು. ನವರಾತ್ರಿ ಕಾಲದಲ್ಲಿ ಅಮ್ಮನವರಿಗೆ ವಿಶೇಷವಾಗಿ ಪೂಜೆ ಉತ್ಸವಾದಿಗಳು ನಡೆಯುತ್ತಿದ್ದುವು. ಶ್ರೀಗಳವರು ದಯಮಾಡಿಸಿದ್ದ ಕಾಲದಲ್ಲಿಯೂ ಭಾಸ್ಕರಸೇತುಪತಿಗಳಿಂದ ಈ ಉತ್ಸವವು ವಿಜೃಂಭಣೆಯಿಂದ ನಡೆಸಲ್ಪಟ್ಟಿತ್ತು. ಆದರೆ ರಾಜರಾಜೇಶ್ವರಿ ಅಮ್ಮನವರ ಪೂಜೆಯೂ ಅಲ್ಲಿ ನಡೆಯತಕ್ಕ ಉತ್ಸವವೂ ಬ್ರಾಹ್ಮಣರಮೂಲಕವಾಗಿ ನಡೆಸಲ್ಪಡುತ್ತಿತ್ತೇ ಹೊರತು ಇತರರಿಂದ ನಡೆಸಲ್ಪಡುತ್ತಿರಲಿಲ್ಲವು. ಹೀಗಿದ್ದರೂ ನವರಾತ್ರಿಯಲ್ಲಿ ಒಂದು ದಿನ ಸಹಸ್ರಪೂಜೆಯೆಂಬ ಹೆಸರಿನಿಂದ ಒಂದು ಸಾವಿರ ಪ್ರಾಣಿಗಳನ್ನು ಅಮ್ಮನವರ ದೇವಸ್ಥಾನದಲ್ಲಿ ಬಲಿಯಾಗಿ ಕೊಡುವ ಒಂದು ಪದ್ಧತಿಯು ಚಿರಕಾಲದಿಂದ ನಡೆದು ಬರುತ್ತಲಿತ್ತು. ಈ ಅಂಶವು ವಿದಿತವಾದ ಕೂಡಲೆ ಈ ಕ್ರೂರ ಕೃತ್ಯವನ್ನು ನಿಲ್ಲಿಸಬೇಕೆಂದು ಶ್ರೀಗಳವರ ಚಿತ್ತದಲ್ಲಿ ಅಂಕುರಿತವಾಯಿತು. ಯಾವ ಸಂದರ್ಭದಲ್ಲಿಯೂ ತಮ್ಮ ಅಭಿಪ್ರಾಯವನ್ನು ತಟ್ಟನೆ ವ್ಯಕ್ತಗೊಳಿಸುವ ಸ್ವಭಾವವು ಶ್ರೀಗಳವರಲ್ಲಿರಲಿಲ್ಲ. ಹೀಗಿರುವಲ್ಲಿ ಒಂದು ದಿನ ಶ್ರೀಗಳವರ ದರ್ಶನಕ್ಕೆ ಬಂದ ಭಾಸ್ಕರಸೇತುಪತಿಗಳು ತಾವಾಗಿಯೇ ಶ್ರೀಗಳವರಲ್ಲಿ ಈ ಸಹಸ್ರ ಪೂಜೆಯ ಪ್ರಸ್ತಾಪವನ್ನು ತೆಗೆದು ಈ ಪದ್ಧತಿಯನ್ನು ನಿಲ್ಲಿಸಬೇಕೆಂಬ ಅಭಿಪ್ರಾಯವು ತನಗಿದ್ದರೂ

ಚಿರಕಾಲದಿಂದ ಬಂದಿರುವ ಈ ಪದ್ಧತಿಯನ್ನು ತಪ್ಪಿಸಲು ತನಗೆ ಧೈರ್ಯವಿಲ್ಲವೆಂದೂ, ಶ್ರೀಗಳವರು ಅನುಮತಿಯನ್ನು ಕೊಟ್ಟಲ್ಲಿ ತಾನು ಧೈರ್ಯದಿಂದ ಈ ಕ್ರೂರಕರ್ಮವನ್ನು ನಿಲ್ಲಿಸಿಬಿಡುವೆನೆಂದೂ ತಿಳಿಸಿಕೊಂಡರು. ಭಾಸ್ಕರಸೇತುಪತಿಗಳು ತಾವಾಗಿಯೇ ಪ್ರಸಕ್ತಿಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಿದೊಡನೆಯೇ, ಶ್ರೀಗಳವರು ಭಗವದನುಗ್ರಹದಿಂದ ತಮಗೆ ಮೊದಲೇ ಈ ಸಂಕಲ್ಪಹುಟ್ಟಿದ್ದಂತೆಯೂ ಅದರಂತೆ ಆಚರಿಸುವುದಕ್ಕೋಸ್ಕರವೇ ರಾಜರ ಮನಸ್ಸಿನಲ್ಲಿಯೂ ಈ ರೀತಿ ಸಂಕಲ್ಪಹುಟ್ಟಿ ಅವರಾಗಿಯೇ ತಮ್ಮಲ್ಲಿ ತಿಳಿಸಿಕೊಳ್ಳುವ ಸಂದರ್ಭವು ಒದಗಿಬಂದಂತೆಯೂ ತಿಳಿದು ಬಹಳವಾಗಿ ಸಂತೋಷಿಸಿದರು. ಆದರೂ ಚಿರಕಾಲದಿಂದ ಒಂದು ಕಾರ್ಯವು ನಡೆದು ಬಂದದ್ದಾಗಿ ತಮಗೆ ತಿಳಿದುಬಂದಲ್ಲಿ ಆ ಕಾರ್ಯವು ವಿಚಾರದಿಂದ ಮಾಡಲ್ಪಟ್ಟದ್ದಾಗಿರಲಿ ಅಥವಾ ಅವಿಚಾರದಿಂದ ನಡೆಸಲ್ಪಟ್ಟದ್ದಾಗಿರಲಿ ಅಂತಹ ಕಾರ್ಯವನ್ನು ತಟ್ಟನೆ ನಿಲ್ಲಿಸುವುದಕ್ಕೆ ಶ್ರೀಗಳವರು ಪ್ರಯತ್ನ ಪಡುತ್ತಲಿರಲಿಲ್ಲವಾದುದರಿಂದ ರಾಜರ ಅಭಿಪ್ರಾಯಕ್ಕೆ ಮಾರನೆಯದಿನ ಉತ್ತರವನ್ನು ಕೊಡುವುದಾಗಿ ಹೇಳಿ ಕಳುಹಿಸಿದರು. ಆ ದಿನದ ರಾತ್ರಿ ಮಠದಲ್ಲಿ ಅಮ್ಮನವರ ಪೂಜೆಯನ್ನು ನಡೆಸಿ ರಾಮನಾಥಪುರದ ರಾಜರ ಅರಮನೆಯಲ್ಲಿ ವಾಮಮಾರ್ಗವನ್ನು ಅನುಸರಿಸಿ ನಡೆಯುತ್ತಲಿರುವ ಪೂಜೆಯನ್ನು ನಿಲ್ಲಿಸಿ ದಕ್ಷಿಣಮಾರ್ಗದಿಂದ ನಡೆವಂತೆ ಮಾಡುವುದು ಈಶ್ವರಸಮ್ಮತವಾಗಿದ್ದಲ್ಲಿ ಆ ಅರ್ಥಕ್ಕೆ ಈ ರಾತ್ರಿ ತಮ್ಮ ಸ್ವಪ್ನದಲ್ಲಿ ಸೂಚನೆಯನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಈ ಮಹನೀಯರು ಯಾವಾಗಲೂ ಸ್ವಾರ್ಥಪರತೆಯನ್ನು ಬಿಟ್ಟು ಲೋಕಹಿತವನ್ನೇ ಕೋರತಕ್ಕವರಾಗಿದ್ದುದರಿಂದ ಇವರ ಭಕ್ತಿಗೆ ಅನುಗುಣವಾಗಿ ಆ ರಾತ್ರಿ ಸ್ವಪ್ನದಲ್ಲಿ ಈಶ್ವರ ಸಮ್ಮತಿಯ ಸೂಚನೆಯು ಈ ಕೆಳಗೆ ವಿವರಿಸಿರುವ ರೀತಿಯಿಂದ ಉಂಟಾಯಿತು. ಬ್ರಾಹ್ಮಣೇತರಳಾದ ಒಬ್ಬ ಸ್ತ್ರೀಯು ಮಲಿನವಸ್ತ್ರವನ್ನು ಧರಿಸಿ ತನ್ನ ಒಂದು ಹಸ್ತದಲ್ಲಿ ಪಾನಪಾತ್ರವನ್ನೂ ಮತ್ತೊಂದು ಹಸ್ತದಲ್ಲಿ ಸಮ್ಮಾರ್ಜನಿಯನ್ನೂ ಹಿಡಿದುಕೊಂಡು ಶ್ರೀಗಳವರ ಎದುರಿಗೆ ಬಂದು ತಾನು ಹೊರಟು ಹೋಗುವೆನೆಂದು ಹೇಳಿದಂತೆಯೂ, ಸ್ವಲ್ಪಹೊತ್ತಿನಮೇಲೆ ಸರ್ವಾಲಂಕಾರ ಭೂಷಿತೆಯಾದ ಮತ್ತೊಬ್ಬ ಸುವಾಸಿನಿಯು ತಾನು ಬಂದಿರುವೆನೆಂದು ಹೇಳಿದಂತೆಯೂ ಶ್ರೀಗಳವರ ಮನಸ್ಸಿಗೆ ಗೋಚರವಾಯಿತು. ಈ ಸ್ವಪ್ನದಿಂದ ಶ್ರೀಗಳವರಿಗೆ ಬಹಳ ಆನಂದವುಂಟಾಗಿ ಆಗಲೇ ರಾಮನಾಥಪುರದ ರಾಜರ ಅರಮನೆಯಲ್ಲಿ ನಡೆಯುತ್ತಲಿದ್ದ ಸಹಸ್ರ ಪ್ರಾಣಿಹನನರೂಪವಾದ ಕ್ರೂರಕರ್ಮವನ್ನು ನಿಲ್ಲಿಸಿ ಸಾತ್ವಿಕಪೂಜಾದಿಗಳು ನಡೆವಂತೆ ವ್ಯವಸ್ಥೆಯು ಮಾಡತಕ್ಕದ್ದೆಂದು ತೀರ್ಮಾನಿಸಿಕೊಂಡರು. ಮರುದಿನ ಅತಿತ್ವರೆಯಿಂದ ಶ್ರೀಗಳವರ ಅಪ್ಪಣೆಯನ್ನು ತಿಳಿವುದಕ್ಕೆ ಬಂದ ಆ ರಾಜರಲ್ಲಿ ಶ್ರೀಗಳವರು ಸ್ವಪ್ನವೃತ್ತಾಂತವನ್ನೂ ಅದಕ್ಕೆ ಮುಂದಾಗಿ ತಮಗುಂಟಾಗಿದ್ದ ಸಂಕಲ್ಪವನ್ನೂ

ಅದಕ್ಕೆ ಅನುಗುಣವಾಗಿ ರಾಜರುಬಂದು ತಾವಾಗಿಯೇ ಪ್ರಸಕ್ತಿಮಾಡಿದ್ದು ಮೊದಲಾದ ಸಂಗತಿಯನ್ನೂ ವಿಸ್ತಾರವಾಗಿ ಎಲ್ಲವನ್ನೂ ತಿಳಿಸಿ ವಾಮ ಮಾರ್ಗವನ್ನು ಅನುಸರಿಸಿ ದೇವೀಪೂಜೆಯನ್ನು ಮಾಡುವುದರಿಂದ ಉಂಟಾಗತಕ್ಕ ಫಲವನ್ನೂ ದಕ್ಷಿಣಮಾರ್ಗಾಶ್ರಯಣ ದಿಂದ ಮಾಡತಕ್ಕ ಪೂಜೆಯ ಫಲವನ್ನೂ ರಾಜರಿಗೆ ಉಪದೇಶಿಸಿ ಅಲ್ಪಫಲದಾಯಕವಾದ ವಾಮ ಮಾರ್ಗಪೂಜೆಯು ಚಿರಕಾಲದಿಂದ ನಡೆದುಬಂದಿದ್ದರೂ ಅದನ್ನು ಬಿಟ್ಟು ಮಹಾಫಲದಾಯಕವಾದ ಸಾತ್ವಿಕ ಪೂಜೆಯನ್ನು ನಿಶ್ಶಂಕವಾಗಿ ನಡೆಸಬಹುದೆಂದು ಅಪ್ಪಣೆ ಕೊಡಿಸಿದರು. ಅದರಂತೆ ಶ್ರೀಸಂಸ್ಥಾನದ ವಿದ್ವಾಂಸರುಗಳನ್ನು ಕಳುಹಿಸಿ, ರಾಜರಾಜೇಶ್ವರೀ ಮೂರ್ತಿಯ ಕಲಾಕರ್ಷಣವನ್ನು ಮಾಡಿಸಿ, ವೇದೋಕ್ತವಿಧಾನದಿಂದ ಶ್ರೀಚಕ್ರಯಂತ್ರವನ್ನು ಸ್ಥಾಪಿಸಿ, ರಾಜರಾಜೇಶ್ವರಿ ಅಮ್ಮನವರಿಗೆ ಚರಪ್ರತಿಷ್ಠೆಯನ್ನು ಮಾಡಿಸಿ, ಶ್ರೀಗಳವರು ವಿಶೇಷವಾಗಿ ಪೂಜೆಮಾಡಿ, ಆ ದೇವಾಲಯವನ್ನು ಅರಮನೆಯ ಆವರಣದಿಂದ ಪ್ರತ್ಯೇಕಿಸಿ ಆವರಣಾಂತರವನ್ನು ಮಾಡಿಸಿ, ಅಮ್ಮನವರ ನಿತ್ಯ ಪೂಜಾದಿಗಳು ಸ್ಥಿರವಾಗಿ ನಡೆವುದಕ್ಕೆ ಆ ರಾಜರಿಂದ ಹನ್ನೆರಡುಸಾವಿರ ರೂಪಾಯಿಗಳ ವರಮಾನವುಳ್ಳ ಒಂದು ಗ್ರಾಮವನ್ನು ಆ ದೇವಾಲಯಕ್ಕೆ ದಾನವಾಗಿ ಕೊಡಿಸಿ, ಶ್ರೀಸಂಸ್ಥಾನದ ಕಡೆಯಿಂದಲೇ ಅಲ್ಲಿನ ಪೂಜೆಗೆ ಎರಡು ಜನ ಬ್ರಾಹ್ಮಣರನ್ನು ನಿಯಮಿಸಿ, ರಾಜರಿಗೂ ಪ್ರಜೆಗಳಿಗೂ ಅನುಗ್ರಹಮಾಡಿ ವೈದಿಕ ಮಾರ್ಗವನ್ನು ಸ್ಥಾಪಿಸಿದರು.

ಸೇತು ರಾಷ್ಟ್ರದ ಉದ್ಧಾರ

ರಾಮನಾಥಪುರದ ಭಾಸ್ಕರಸೇತುಪತಿ ರಾಜರು ಬಹಳ ಮೇಧಾವಿಗಳಾಗಿದ್ದರು. ಇವರ ಔದಾರ್ಯವು ಅದೃಷ್ಟ ಪೂರ್ವವಾಗಿಯೂ ಅಶ್ರುತಚರವಾಗಿಯೂ ಇತ್ತು. ಇವರು ತಮ್ಮ ದ್ರವ್ಯವನ್ನೆಲ್ಲಾ ಧರ್ಮಮಾರ್ಗದಲ್ಲಿಯೇ ರೂಪಾಯಿಗೆ ಹದಿನೈದಾಣೆಗಳ ಭಾಗದಷ್ಟು ವ್ಯಯಮಾಡಿದರೆಂದು ಧಾರಾಳವಾಗಿ ಹೇಳಬಹುದು. ಈ ರಾಜರಿಗೆ ಸಹಜವಾಗಿದ್ದ ಔದಾರ್ಯಕ್ಕೆ ಇವರಿಗಿದ್ದ ವರಮಾನವು ಸಾಲದಾಗಿತ್ತು. ಈ ಕಾರಣದಿಂದ ಹೇರಳವಾಗಿ ಸಾಲವನ್ನು ಮಾಡಿ ಪರಂಪರಾಗತವಾಗಿ ಬಂದಿದ್ದ ರಾಷ್ಟ್ರವು ತಮ್ಮ ಪುತ್ರರಿಗೆ ನಿಲ್ಲುವಂತೆ ಮಾಡುತ್ತಾರೆಂಬ ಸಂಭವವು ಆಗಿನ ಕಾಲದಲ್ಲಿ ತೋರುತ್ತಿರಲಿಲ್ಲ. ಈ ಸಂದರ್ಭದಲ್ಲಿ ಅನೇಕ ಮುಖದಿಂದ ಶ್ರೀಗಳವರು ತಿಳಿದು ಸೇತುರಾಷ್ಟ್ರವು ಪುರಾತನವಾದುದರಿಂದ ಅದನ್ನು ಸ್ಥಿರವಾಗಿ ಉಳಿಸುವುದು ತಮ್ಮ ಕರ್ತವ್ಯವೆಂದು ನಿಶ್ಚಯಿಸಿಕೊಂಡರು. ಒಂದು ದಿನ ಭಾಸ್ಕರಸೇತುಪತಿಗಳು ತಮ್ಮ ದರ್ಶನಕ್ಕೆ ಬಂದಕಾಲದಲ್ಲಿ ರಾಜರು ತಮಗೆ ಮಾಡಿದ ಸತ್ಕಾರದಿಂದಲೂ ತಮ್ಮ ವಿಷಯದಲ್ಲಿ ಮಾಡುತ್ತಲಿರುವ ಭಕ್ತಿಯಿಂದಲೂ ಸಂತುಷ್ಟ

ರಾಗಿರುವೆವು. ಭಾರತದಲ್ಲಿ ಹೇಳಿರುವ ಕರ್ಣನ ಔದಾರ್ಯಕ್ಕಿಂತ ಯಾವ ಭಾಗದಲ್ಲಿಯೂ ನಿಮ್ಮಲ್ಲಿರುವ ಔದಾರ್ಯಶಾಲಿಗಳಾದ ನಿಮ್ಮಲ್ಲಿ ಯಾವ ವಸ್ತುವನ್ನಾದರೂ ಅಪೇಕ್ಷಿಸುವುದಕ್ಕೆ ಸಂಕೋಚ ಪಡಬೇಕಾದ ಆವಶ್ಯಕತೆಯಿಲ್ಲವಾಗಿ ತೋರಿಬರುವುದರಿಂದ ನಮಗೆ ಗುರುದಕ್ಷಿಣೆಯಾಗಿ ನಿಮ್ಮ ರಾಷ್ಟ್ರವನ್ನು ಕೊಡಬೇಕೆಂದು ಶ್ರೀ ಗುರುಗಳವರು ಕೇಳಿದರು. ಈ ರೀತಿಯಲ್ಲಿ ಶ್ರೀಗಳವರಿಂದ ಬಂದ ಆಜ್ಞೆಯನ್ನು ಕೇಳಿದ ಆ ರಾಜನ ಸಂತೋಷಕ್ಕೂ ಆಶ್ಚರ್ಯಕ್ಕೂ ಪಾರವಿಲ್ಲವಾಯಿತು. ಆ ಮಹಾಧೀರರು ಕೂಡಲೆ ಎದ್ದು ಶ್ರೀಗಳವರ ಆಜ್ಞೆಯಂತೆ ತನ್ನ ಅಧೀನವಾಗಿರುವ ದೇಶವನ್ನು ಶ್ರೀಗಳವರಿಗೆ ಗುರುದಕ್ಷಿಣೆಯಾಗಿ ಸಮರ್ಪಿಸಿರುವೆನೆಂದು ಹೇಳಿ ನಮಸ್ಕಾರಮಾಡಿದರು. ಮಾರನೆಯದಿನ ಅರಮನೆಯಲ್ಲಿ ಪ್ರಜೆಗಳನ್ನೂ ಅಧಿಕಾರಿಗಳನ್ನೂ ಸೇರಿಸುವಂತೆ ರಾಜರಿಗೆ ತಿಳಿಸಿ, ಶ್ರೀಗಳವರು ತಮ್ಮ ಪರಿವಾರದೊಡನೆ ಅರಮನೆಗೆ ದಯಮಾಡಿಸಿ, ಅಲ್ಲಿ ನೆರೆದಿದ್ದ ಸಭೆಯಲ್ಲಿ ರಾಜಕುಮಾರರನ್ನು ಬರಮಾಡಿಕೊಂಡು, ತಮ್ಮ ಶಿಷ್ಯರಾದ ಭಾಸ್ಕರಸೇತುಪತಿಗಳು ತಮಗೆ ಗುರುದಕ್ಷಿಣೆಯಾಗಿ ಅರ್ಪಿಸಿದ ರಾಮನಾಥಪುರದ ರಾಷ್ಟ್ರವನ್ನು ಅವರ ಮಕ್ಕಳಾದ ರಾಜರಾಜೇಶ್ವರ ಮುದ್ದುರಾಮಲಿಂಗ ಸೇತುಪತಿಗಳಿಗೆ ಅನುಗ್ರಹ ಪೂರ್ವಕವಾಗಿ ತಾವು ಕೊಟ್ಟಿರುವಂತೆ ತಿಳಿಸಿದರು. ಈ ಸಂವಿಧಾನವನ್ನು ತಿಳಿದು ಆಬಾಲವೃದ್ಧರೂ ಆ ದಿನ ಅನುಭವಿಸಿದ ಸಂತೋಷವನ್ನೂ, ಲೋಕ ಹಿತೇಚ್ಛುಗಳಾದ ಶ್ರೀ ಶ್ರೀಗಳವರೂ ಅಪೂರ್ವವಾದ ಮನೋನಿಶ್ಚಯವುಳ್ಳ ರಾಜರೂ ಇವರುಗಳ ವಿಷಯವಾಗಿ ಮಾಡಿದ ಸ್ತೋತ್ರವನ್ನೂ ಇಲ್ಲಿ ವಿವರಿಸಲಶಕ್ಯವು. ಈ ರೀತಿಯಿಂದ ಸೇತುರಾಷ್ಟ್ರವನ್ನುದ್ಧರಿಸಿ, ಭಾಸ್ಕರಸೇತುಪತಿರಾಜರು ಮಾಡಿದ ಅತಿ ನಿರ್ಬಂಧಕ್ಕೆ ಅಧೀನರಾಗಿ, ಆ ರಾಜರು ಸ್ವಕುಟುಂಬಕ್ಷೇಮಕ್ಕೋಸ್ಕರ ಶ್ರೀ ಶಾರದಾ ಚಂದ್ರಮೌಳೀಶ್ವರದೇವತಾ ಪೂಜಾರಾಧನೆಗಾಗಿ ಶಾಸನದೊಡನೆ ಕೊಟ್ಟ ಐದು ಗ್ರಾಮಗಳನ್ನು ಅಂಗೀಕರಿಸಿ, ಭಾಸ್ಕರಸೇತುಪತಿಗಳಿಗೆ ರತ್ನಮಯವಾದ ಶಿರೋಭೂಷಣವನ್ನು ಸಂಸ್ಥಾನದಿಂದ ದಯಪಾಲಿಸಿ, ಆ ರಾಜರಿಗೂ ರಾಜ ಕುಟುಂಬದವರಿಗೂ ಪರಮಾನುಗ್ರಹವನ್ನು ಮಾಡಿ ಅಲ್ಲಿಂದ ಪ್ರಯಾಣವನ್ನು ಬೆಳೆಸಿದರು.

ನಾಟಿಕೋಟಿಯರು ಮಾಡಿದ ಶಾರದಾಂಬಾ ಸೇವೆ.

ಮಧುರೆ ಮತ್ತು ರಾಮನಾಡು ಜಿಲ್ಲೆಗಳಲ್ಲಿ ನಾಟಿಕೋಟಿ ಶೆಟ್ಟಿಗಳೆಂಬ ಹೆಸರಿನಿಂದ ಒಂದು ಪಂಗಡದವರಿರುತ್ತಾರೆ. ಈ ಜನರು ವಿಶೇಷವಾಗಿ ವ್ಯಾಪಾರಗಳನ್ನು ನಡೆಸುವುದರ ಮೂಲಕ ತುಂಬಾ ಧನಿಕರಾಗಿರುತ್ತಾರೆ. ದಕ್ಷಿಣದೇಶದಲ್ಲಿರುವ ಪುರಾಣಪ್ರಸಿದ್ಧವಾದ

ಶಿವಾಲಯಗಳ ಜೀರ್ಣೋದ್ಧಾರವನ್ನು ಮಾಡುವುದು, ವೇದಪಾಠಶಾಲೆಗಳನ್ನಿಟ್ಟು ಬ್ರಾಹ್ಮಣವಿದ್ಯಾರ್ಥಿಗಳಿಗೆ ಅಶನ ವಸನಗಳನ್ನು ಕೊಟ್ಟು ವೇದಾಧ್ಯಯನವನ್ನು ಮಾಡಿಸುವುದು, ದೊಡ್ಡ ದೊಡ್ಡ ಕ್ಷೇತ್ರಗಳಲ್ಲಿ ಛತ್ರಗಳನ್ನು ಇಟ್ಟು ಅನ್ನದಾನಮಾಡುವುದು, ತಟಾಕಗಳನ್ನು ನಿರ್ಮಿಸುವುದು ಇವು ಮೊದಲಾದ ಪ್ರಾಚೀನಧರ್ಮಗಳನ್ನು ಪ್ರತ್ಯೇಕವಾಗಿಯೂ ಸಮೂಹದಿಂದಲೂ ಮಾಡುವುದು, ಈ ಜನರಲ್ಲಿ ಸಹಜವಾಗಿ ಏರ್ಪಟ್ಟು ಬಹಳ ವಿಶೇಷವಾಗಿ ಆಚರಣೆಯಲ್ಲಿದೆ. ಮತ್ತು ಈ ಪಂಗಡಕ್ಕೆ ಸೇರಿದ ಜನರಲ್ಲಿಯೇ ವಿರಕ್ತರಾದ ಒಬ್ಬರನ್ನು ಚುನಾಯಿಸಿ ಕೋವಿಲೂರೆಂಬ ಸ್ಥಳದಲ್ಲಿ ಹಿಂದಿನವರು ಸ್ಥಾಪಿಸಿರುವ ಮಠದ ಆಧಿಪತ್ಯಕ್ಕೆ ನಿಯಮಿಸಿ ಈ ಸಂನ್ಯಾಸಿಯು ಅಲ್ಲಿಗೆ ಬರುವ ಜನರಿಗೆ ಭಾಷಾಂತರದಲ್ಲಿ ಪರಿವರ್ತಿತವಾಗಿರತಕ್ಕ ಅದ್ವೈತ ಗ್ರಂಥಗಳನ್ನು ಪಾಠಹೇಳುವಂತೆ ಒಂದು ವ್ಯವಸ್ಥೆಯು ಚಿರಕಾಲದಿಂದ ಏರ್ಪಟ್ಟು ನಡೆದುಬರುತ್ತಲಿದೆ. ಶ್ರೀ ಶ್ರೀಗಳವರು ರಾಮನಾಥಪುರದಲ್ಲಿ ವಸತಿಮಾಡಿದ್ದ ಕಾಲದಲ್ಲಿಯೇ ಕೋವಿಲೂರು ಮಠದ ಸಂನ್ಯಾಸಿಗಳನ್ನು ಶ್ರೀಗಳವರ ಸನ್ನಿಧಿಗೆ ಕಳುಹಿಸಿ ಅವರ ಮೂಲಕವಾಗಿ ಶ್ರೀಗಳವರು ತಮ್ಮ ಪ್ರಾಂತ್ಯಕ್ಕೆ ಚಿತ್ತೈಸಿ ಸತ್ಕಾರವನ್ನು ಕೈಕೊಂಡು ಅನುಗ್ರಹ ಮಾಡಬೇಕೆಂದು ನಾಟುಕೋಟಿ ಶೆಟ್ಟಿಗಳು ಪ್ರಾರ್ಥಿಸಲಾಗಿ ಆ ಪ್ರಾಂತ್ಯಕ್ಕೆ ದಯಮಾಡಿಸಿದರು. ಆಗ ಶ್ರೀಗಳವರನ್ನು ಬಹಳ ಆದರದಿಂದ ತಮ್ಮ ಗ್ರಾಮಗಳಿಗೆ ಬರಮಾಡಿಕೊಂಡ ಆಯಾ ಜನರು ವಿಭವಕ್ಕೆ ತಕ್ಕಂತೆ ಶ್ರೀಗಳವರ ಸೇವೆಯನ್ನು ನಡೆಸಿ ಅವರ ಅನುಗ್ರಹಕ್ಕೆ ಪಾತ್ರರಾದರು. ಈ ಸಂದರ್ಭದಲ್ಲಿ ಶೃಂಗಗಿರಿ ಶ್ರೀ ಶಾರದಾಂಬೆಯ ಆಲಯವನ್ನು ಶಿಲಾಮಯವಾಗಿ ಮಾಡುವ ವಿಚಾರಬಂದು ನಾಟುಕೋಟಿಶೆಟ್ಟಿಗಳು ಸಮೂಹದಿಂದ ಈ ಕಾರ್ಯವನ್ನು ನೆರವೇರಿಸತಕ್ಕದ್ದೆಂದು ತೀರ್ಮಾನ ಮಾಡಿಕೊಂಡು ಆ ಉದ್ದೇಶದಿಂದ ಸಮೂಹದಲ್ಲಿ ಮೂವತ್ತು ಸಾವಿರ ರೂಪಾಯಿಗಳನ್ನು ಸೇರಿಸಿ ಕೋವಿಲೂರು ಮಠದ ಸ್ವಾಮಿಗಳ ವಶದಲ್ಲಿ ಆ ದ್ರವ್ಯವನ್ನು ಇಟ್ಟು ಅವರ ಮೂಲಕವಾಗಿ ಅಮ್ಮನವರ ದೇವಸ್ಥಾನದ ಕೆಲಸವನ್ನು ನಡೆಸಲು ಶ್ರೀ ಶ್ರೀಗಳವರನ್ನು ಅನುಮತಿಗಾಗಿ ಪ್ರಾರ್ಥಿಸಿಕೊಂಡರು. ಶ್ರೀಗಳವರು ಈ ಜನರ ಸತ್ಸಂಕಲ್ಪವನ್ನು ತಿಳಿದು ಆನಂದಿಸಿ, ನಿಮ್ಮ ಪಂಗಡದವರ ಮೂಲಕವಾಗಿಯೇ ಶ್ರೀಶಾರದಾಂಬಾಲಯದ ಜೀರ್ಣೋದ್ಧಾರವು ನಡೆಯತಕ್ಕದ್ದೆಂದು ಈಶ್ವರ ಸಂಕಲ್ಪವು ಇರುವ ಪಕ್ಷದಲ್ಲಿ ಅದರಂತೆ ಆಗಬಹುದೆಂದು ಅನುಮತಿಯನ್ನು ಕೊಟ್ಟರು.

ಚಾಮರಾಜಪ್ರಭು ನಿರ್ಯಾಣಶ್ರವಣ.

ಶೃಂಗಗಿರಿ ಶ್ರೀಮಠದ ಗುರುಪರಂಪರೆಯವರಿಗೂ ಮೈಸೂರು ರಾಜಸಂತತಿಯ ವರಿಗೂ ಪರಸ್ಪರ ಪ್ರೀತಿಗೌರವಗಳು ವಿಶೇಷವಾಗಿರುವಂತೆ ಅನೇಕ ಸಂದರ್ಭಗಳಿಂದ ತಿಳಿಯಬರುತ್ತೆ. ಆದರೆ.

ಸಮೋಹಂ ಸರ್ವಭೂತೇಷು ನ ಮೇ ದ್ವೇಷ್ಯೋಸ್ತಿ ನ ಪ್ರಿಯಃ

ಎಂಬ ಭಗವದ್ವಾಕ್ಯದಂತೆ ಸರ್ವಸಮರಾದ ಶೃಂಗಗಿರಿ ಸ್ವಾಮಿಗಳಿಗೆ ಮೈಸೂರು ರಾಜಸಂತತಿಯವರ ವಿಷಯದಲ್ಲಿ ಮಾತ್ರ ಇತರರಿಗಿಂತ ಅಧಿಕವಾದ ಪ್ರೀತಿಯಿರುವುದನ್ನು ಕುರಿತು ಜನಗಳು ಶಂಕಿಸಬಹುದಲ್ಲವೆ ? ಇದರ ಕಾರಣವನ್ನು ವಿಚಾರ ಮಾಡಿದರೆ, ಶೃಂಗಗಿರಿ ವ್ಯಾಖ್ಯಾನ ಭದ್ರಪೀಠದಲ್ಲಿ ಈಗ್ಗೆ ಸುಮಾರು ಆರು ನೂರು ವರ್ಷಗಳ ಹಿಂದೆ ಪಟ್ಟಭದ್ರರಾಗಿದ್ದ ವಿದ್ಯಾರಣ್ಯ ಸ್ವಾಮಿಗಳವರಿಂದ ವಿಜಯನಗರ ಸಂಸ್ಥಾನವು ಸ್ಥಾಪಿಸಲ್ಪಟ್ಟು ಅಲ್ಲಿಯ ರಾಜರುಗಳು ವಿದ್ಯಾರಣ್ಯ ಸ್ವಾಮಿಗಳವರ ಪರಮಾನುಗ್ರಹಕ್ಕೆ ಪಾತ್ರರಾಗಿ ಒಂದು ಕಾಲದಲ್ಲಿ ಚಕ್ರವರ್ತಿಗಳೆನಿಸಿಕೊಂಡಿದ್ದರೆಂಬ ಅಂಶವು ಹಿಂದಿನ ಚರಿತ್ರೆಗಳಿಂದ ಜನಗಳ ಅವಗಾಹನೆಗೆ ಬರಬಹುದು. ಹಾಗೆ ವಿದ್ಯಾರಣ್ಯ ಸ್ವಾಮಿಗಳವರ ಅನುಗ್ರಹದಿಂದ ಸಂಪಾದಿಸಲ್ಪಟ್ಟ ಕರ್ಣಾಟಕ ರಾಷ್ಟ್ರವನ್ನು ಧರ್ಮದಿಂದ ಪರಿಪಾಲಿಸುತ್ತಿದ್ದ ಆ ರಾಜರುಗಳು ಧರ್ಮಮಾರ್ಗ ಪರಿಪಾಲನೆಗಾಗಿ ಏರ್ಪಟ್ಟ ಶೃಂಗಗಿರಿ ಮಠದ ಗುರುಗಳ ವಿಷಯದಲ್ಲಿ ಬಹಳ ಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಿಕೊಂಡು ಶ್ರೀಸ್ವಾಮಿಗಳವರು ಮಾಡುವ ಧರ್ಮಮಾರ್ಗ ಪ್ರಚಾರದಲ್ಲಿ ಸಹಾಯಕರಾಗಿದ್ದಂತೆ ತಿಳಿದುಬಂದಿದೆ. ಕಾಲಕ್ರಮದಿಂದ ವಿಜಯನಗರ ಸಂಸ್ಥಾನವು ಶೈಥಿಲ್ಯವನ್ನು ಹೊಂದಿದ ನಂತರ, ಅಲ್ಲಿಯ ಕರ್ಣಾಟಕ ಸಿಂಹಾಸನವು ಮೈಸೂರು ರಾಜಸಂತತಿಯವರ ವಶವರ್ತಿಯಾಗಿ, ಮೈಸೂರು ರಾಜಸಂತತಿಯವರು ಕರ್ಣಾಟಕ ಸಿಂಹಾಸನಾರೂಢರಾಗಿ ಕರ್ಣಾಟಕ ರಾಷ್ಟ್ರವನ್ನು ಪರಿಪಾಲಿಸತಕ್ಕ ಸಂದರ್ಭವೊದಗಿ ಬಂತು. ಹೀಗೆ ಮಹನೀಯರಾದ ವಿದ್ಯಾರಣ್ಯ ಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ ಕರ್ಣಾಟಕ ಸಿಂಹಾಸನಕ್ಕೆ ಅಧಿಪತಿಗಳಾದ ಮೈಸೂರು ರಾಜಸಂತತಿಯವರೂ ವಿಜಯನಗರದ ರಾಜರುಗಳಂತೆ ಶೃಂಗಗಿರಿ ಮಠದ ಗುರುಗಳ ವಿಷಯದಲ್ಲಿ ವಿಶೇಷವಾದ ಭಕ್ತಿ ಗೌರವಗಳನ್ನು ಇಟ್ಟು ಶ್ರೀ ಶ್ರೀಗಳವರಿಗೆ ಧರ್ಮಮಾರ್ಗ ಪ್ರಚಾರ ಮಾಡುವ ವಿಷಯದಲ್ಲಿ ಸಾಧಕರಾಗಿರುವರು. ಈ ಕಾರಣದಿಂದ ಉಂಟಾಗಿರುವ ಪ್ರೀತಿಯು ಸರ್ವಸಮರಾದ ಗುರುಗಳಲ್ಲಿ ಪಕ್ಷಪಾತರೂಪದೋಷವನ್ನು ಆರೋಪಿಸಲು ಸಮರ್ಥವಾಗಲಾರದು. ಭಗವದ್ಗೀತೆಯಲ್ಲಿ ಭಗವಂತನು ತಾನು ಸರ್ವಸಮನೆಂದೂ ತನಗೆ

ಪ್ರಿಯನೂ ದ್ವೇಷ್ಯನೂ ಇಲ್ಲವೆಂದೂ ಒಂದೆಡೆ ಹೇಳಿರುವುದಕ್ಕೂ

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥

ಎಂದು ಮತ್ತೊಂದೆಡೆ ಹೇಳಿದ್ದಕ್ಕೂ ಇರತಕ್ಕ ವಿರೋಧವನ್ನು ಪರಿಹರಿಸುವುದಕ್ಕೋಸ್ಕರ ಅನನ್ಯಭಾವದಿಂದ ತನ್ನನ್ನು ಚಿಂತಿಸತಕ್ಕವರ ಯೋಗಕ್ಷೇಮವನ್ನು ತಾನು ವಹಿಸದಿದ್ದಲ್ಲಿ ತನಗೆ ನೈರ್ಘೃಣ್ಯವು ಏರ್ಪಡುವುದಾದ್ದರಿಂದ ಭಗವಂತನು ಹಾಗೆ ಹೇಳಿರುವುದು ಯುಕ್ತವಾದದ್ದೆಂದು ಅರ್ಥಮಾಡಿರುವಂತೆ, ತಮ್ಮ ವಿಷಯದಲ್ಲಿ ಯಾವಾಗಲೂ ಪ್ರೀತಿ ಗೌರವಗಳನ್ನಿಟ್ಟು ತಮಗೆ ಕರ್ತವ್ಯವಾಗಿ ಗುರ್ವಾಜ್ಞಾನುಸಾರದಿಂದ ಏರ್ಪಟ್ಟಿರತಕ್ಕ ಕಾರ್ಯಗಳಲ್ಲಿ ಸಹಾಯಕರಾಗಿರುವ ಮೈಸೂರು ರಾಜಸಂತತಿಯವರ ಅಭ್ಯುದಯವನ್ನು ಕೋರುವುದೂ, ಅವರುಗಳಿಗೆ ಅನುಗ್ರಹ ಮಾಡುವುದೂ ಶೃಂಗೇರಿಯ ಗುರುಗಳಿಗೆ ಒಂದು ಕರ್ತವ್ಯ ಕರ್ಮವಾಗಿರುವುದರಿಂದ ಈ ವಿಷಯದಲ್ಲಿ ಶಂಕೆಗೆ ಅವಕಾಶವಿರುವುದಿಲ್ಲವು. ಈ ಗ್ರಂಥಕ್ಕೆ ವಿಷಯರಾದ ಶ್ರೀ ಸ್ವಾಮಿಗಳವರ ಕಾಲದಲ್ಲಿ ಒದಗಿದ ಒಂದು ಸಂದರ್ಭವನ್ನು ಈ ಲೇಖಕನು ನೋಡಿ ಅನುಭವಿಸಿ ಆಗ ಈ ವಿಚಾರವನ್ನು ಮಾಡಿ ತನಗೂ ಇತರರಿಗೂ ಉಂಟಾದ ಶಂಕೆಯನ್ನು ಪರಿಹರಿಸಿಕೊಂಡಿರುವುದರಿಂದ ಅದನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿ ಬಂತು. ಶ್ರೀ ಶ್ರೀಗಳವರು ಕೋವಿಲೂರಿನಲ್ಲಿ ವಸತಿ ಮಾಡಿದ್ದಾಗ ಶ್ರೀಗಳವರ ಅಂತರಂಗ ಭಕ್ತರೂ ಅವರ ಪರಮಾನುಗ್ರಹ ಪಾತ್ರರೂ ಆಗಿದ್ದ ಮೈಸೂರು ಚಾಮರಾಜ ಪ್ರಭುಗಳವರು ಆಕಸ್ಮಿಕವಾಗಿ ಕಲ್ಕತ್ತಾ ಪಟ್ಟಣದಲ್ಲಿ ದೈವಗತಿಯನ್ನೈದಿದರೆಂಬ ವಿಷಯವು, ರಾಜಾ ಭಾಸ್ಕರಸೇತುಪತಿಗಳಿಂದ ಬಂದ ತಂತಿಯ ವರ್ತಮಾನದಿಂದ ತಿಳಿದು ಬಂತು. ಈ ಸಂಗತಿಯನ್ನು ಪ್ರಾತಃಕಾಲ ಸ್ನಾನ ಮಾಡಿ ಆಹ್ನಿಕಾನುಷ್ಠಾನದಲ್ಲಿದ್ದ ಶ್ರೀ ಶ್ರೀ ಸ್ವಾಮಿಗಳವರಿಗೆ ಈ ಲೇಖಕನು ಶ್ರುತಪಡಿಸಿದನು. ಕರ್ಣಕಠೋರವಾದ ಈ ವಾರ್ತೆಯ ಶ್ರವಣದಿಂದ ಶ್ರೀಗಳವರ ಮುಖಕಮಲವು ತತ್‍ಕ್ಷಣದಲ್ಲಿಯೇ ಬಾಡಿತು. ನೇತ್ರಗಳಿಂದ ಅತ್ಯುಷ್ಣವಾದ ಉದಕ ಬಿಂದುಗಳು ಚದರಿಚದರಿ ಕೆಳಗೆ ಬೀಳಲು ಆರಂಭವಾಯಿತು. ಶಿರಸ್ಸು ನೆಲಕ್ಕೆ ಬಗ್ಗಿತು. ಈ ವಿಧವಾಗಿ ಶ್ರೀಗಳವರಲ್ಲಿ ತೋರಿದ ವಿಕಾರಭಾವವನ್ನು ನೋಡಿದವರಿಗೆ ಅತ್ಯಾಶ್ಚರ್ಯವೂ, ನಿರ್ಲೇಪರಾದ ಇಂಥಾ ಮಹನೀಯರ ಮನಸ್ಸನ್ನು ಕೂಡ ತಮ್ಮ ವಿಯೋಗದಿಂದ ವಿಕಾರ ಹೊಂದಿಸುವಷ್ಟು ಇವರ ಪ್ರೀತಿಗೆ ಪಾತ್ರರಾಗಿದ್ದ ಚಾಮರಾಜಪ್ರಭುಗಳವರ ವಿಷಯದಲ್ಲಿ ವಿಶೇಷ ಗೌರವವೂ ಉಂಟಾಯಿತು. ಪ್ರಾತಃಕಾಲ ಎಂಟುಘಂಟೆ ಮೊದಲುಗೊಂಡು ಸಾಯಂಕಾಲ ಎಂಟು

ಘಂಟೆಯವರೆಗೆ ಶ್ರೀಗಳವರು ಆಸನವನ್ನು ಬಿಟ್ಟು ಚಲಿಸಲಿಲ್ಲ. ಆ ದಿನ ನಡೆಯಬೇಕಾದ ಪೂಜಾದಿಗಳನ್ನು ಗಮನಿಸಲಿಲ್ಲ. ಮಠಕ್ಕೆ ತೀರ್ಥಪ್ರಸಾದಗಳಿಗಾಗಿ ಬಂದ ಇತರ ಶಿಷ್ಯರನ್ನೂ ವಿಚಾರಿಸಲಿಲ್ಲ. ಮಹಾಭಕ್ತ ಶಿಖಾಮಣಿಗಳಾದ ಚಾಮರಾಜ ಪ್ರಭುಗಳ ವಿಯೋಗ ವಿಚಾರದಲ್ಲಿಯೇ ಅವರ ಚಿತ್ತವು ಲೀನವಾಗಿತ್ತು. ಆ ಬಳಿಕ ರಾತ್ರಿ ಎಂಟು ಗಂಟೆಯ ಮೇಲೆ ಸ್ನಾನವಾಗಿ ಆ ದಿನದ ಅನುಷ್ಠಾನವೆಲ್ಲಾ ನಡೆದು ಚಂದ್ರಮೌಳೀಶ್ವರ ದೇವರ ಪೂಜೆಯು ರಾತ್ರಿ ಹನ್ನೆರಡು ಘಂಟೆಗೆ ಪೂರೈಸಲ್ಪಟ್ಟಿತು. ಎಷ್ಟು ಜ್ಞಾನಿಗಳಾದರೂ ನಿರ್ಲಿಪ್ತರಾದರೂ ಮಮಕಾರವು ತಪ್ಪುವುದೇ ಇಲ್ಲ. ಜ್ಞಾನಿಗಳಿಗೆ ಈ ಮಮತೆಯು ಸ್ವಾರ್ಥವಾಗಿ ಬರತಕ್ಕದಲ್ಲವಾದರಿಂದ ಅವರಿಗೆ ಬಂಧಕವಾಗುವುದಿಲ್ಲವು. ಅಜ್ಞಾನಿಗಳಿಗೆ ಇದೇ ಮುಖ್ಯವಾದ ಬಂಧಕವಾಗಿ ಸಂಸಾರವನ್ನು ಹೆಚ್ಚಿಸುವುದು.

ತಿನ್ನವೆಲ್ಲಿ ನಗರ ಪ್ರವೇಶ

ಶ್ರೀ ಶ್ರೀಸ್ವಾಮಿಗಳವರು ಶೃಂಗೇರಿಯನ್ನು ಬಿಟ್ಟು ಸೇತುಯಾತ್ರಾರ್ಥವಾಗಿ ಹೊರಟು ಅದುವರೆಗೆ ನಾಲ್ಕು ವರ್ಷಗಳಾಗುತ್ತ ಬಂದುವು. ಸಂಕಲ್ಪಿತವಾದ ಸೇತುಯಾತ್ರೆಯೂ ಪೂರ್ಣವಾಯಿತು. ಈ ಸಂದರ್ಭದಲ್ಲಿ ಸ್ವಸ್ಥಳಕ್ಕೆ ಹಿಂತಿರುಗಿ ಬರಬೇಕೆಂಬ ವಿಷಯದಲ್ಲಿ ಗಮನವು ಹುಟ್ಟಿತು. ಅಷ್ಟರಲ್ಲಿ ತಾಮ್ರಪರ್ಣೀತೀರ ವಾಸಿಗಳಾದ ಶಿಷ್ಯ ಜನರಿಗೆ ಶ್ರೀಗಳವರು ತಮ್ಮ ಪ್ರಾಂತ್ಯಕ್ಕೆ ದಯಮಾಡಿಸದೆಯೇ ಹಿಂತಿರುಗುವರೆಂಬ ಸಂಗತಿ ತಿಳಿದುಬಂದು, ಆ ಪ್ರಾಂತ್ಯದಲ್ಲಿ ಮುಖ್ಯರಾಗಿದ್ದ ಕೆಲವರು ಮಧುರಾಜಿಲ್ಲೆಯಲ್ಲಿ ಶ್ರೀಗಳವರು ಸಂಚರಿಸುತ್ತಲಿರುವ ಸ್ಥಳಕ್ಕೇ ಬಂದು, ತಿನ್ನವೆಲ್ಲಿ ಜಿಲ್ಲೆಯ ಶಿಷ್ಯಮಂಡಲಿಗೂ ಶ್ರೀಗಳವರು ದರ್ಶನಕೊಟ್ಟು ಅನಂತರ ಶೃಂಗೇರಿಗೆ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡರು. ಭಕ್ತಪರಾಧೀನರಾದ ಶ್ರೀ ಸ್ವಾಮಿಗಳವರು ಶಿಷ್ಯರ ಪ್ರಾರ್ಥನೆಯನ್ನು ನಿರಾಕರಿಸುವಂತೆ ಇರಲಿಲ್ಲವಾಗಿ ತಿನ್ನವೆಲ್ಲಿಯ ಪ್ರಾಂತ್ಯಕ್ಕೆ ಬರುವುದಾಗಿಯೂ, ದೀರ್ಘಕಾಲ ಆ ಪ್ರಾಂತ್ಯದಲ್ಲಿ ಸಂಚರಿಸಲು ಅವಕಾಶವಿಲ್ಲವಾಗಿಯೂ, ಆ ಜಿಲ್ಲೆಯ ಶಿಷ್ಯರುಗಳೆಲ್ಲರೂ ತಿನ್ನವೆಲ್ಲಿಗೇ ಬಂದು, ಶ್ರೀಶಾರದಾ ಚಂದ್ರಮೌಳೀಶ್ವರಾದಿ ದೇವತಾಸಂದರ್ಶನವನ್ನು ಮಾಡಿ ತೀರ್ಥಪ್ರಸಾದಗಳನ್ನು ಪಡೆದುಕೊಳ್ಳುವಂತೆ ವ್ಯವಸ್ಥೆಯನ್ನು ಮಾಡಿದರೆ ಅನುಕೂಲವಾಗಿರುವುದಾಗಿಯೂ ಅವರಿಗೆ ಅಪ್ಪಣೆಯನ್ನು ಮಾಡಿ, ಮತ್ತೆ ಮಧುರಾ ಮಾರ್ಗದಿಂದ ತಿನ್ನವೆಲ್ಲಿ ಜಿಲ್ಲೆಗೆ ಪ್ರವೇಶಮಾಡಿದರು. ತಿನ್ನವೆಲ್ಲಿಯನ್ನು ಸೇರುವ ಪರ್ಯಂತ ಮಾರ್ಗದಲ್ಲಿ ಇರುವ ಗ್ರಾಮಗಳಲ್ಲಿ ಅಲ್ಲಲ್ಲಿ ನಿಂತು ಶಿಷ್ಯಜನಗಳನ್ನು ಅನುಗ್ರಹಿಸುತ್ತ ತಿನ್ನವೆಲ್ಲಿಗೆ ಎರಡು ಮೈಲಿಗಳ ದೂರದಲ್ಲಿರುವ ತಾಮ್ರಪರ್ಣೀನದಿತೀರದ ಸಂಧ್ಯಾಮಂಟಪಕ್ಕೆ ದಯಮಾಡಿಸಿದರು. ಅಲ್ಲಿ ಪ್ರಾತರಾಹ್ನಿಕಗಳು

ಕಳೆದನಂತರ ಶ್ರೀಗಳವರ ದರ್ಶನಕ್ಕೆ ಬಂದು ಕಾದುಕೊಂಡಿದ್ದ ಅನೇಕ ಸಹಸ್ರ ಬ್ರಾಹ್ಮಣರಿಗೆ ದರ್ಶನಕೊಟ್ಟು, ಅವರ ಪ್ರಾರ್ಥನೆಯಂತೆ ಆ ನದೀತೀರದಲ್ಲಿಯೇ ಸುವರ್ಣ ಶಿಬಿಕಾರೋಹಣ ಮಾಡಿದರು. ತಿನ್ನವೆಲ್ಲಿ ಜಿಲ್ಲೆಯಲ್ಲಿ ಬ್ರಾಹ್ಮಣರ ಸಮೂಹವು ಅಧಿಕವಾಗಿದೆ. ಅಮೋಘವಾದ ತಾಮ್ರಪರ್ಣೀನದಿಯ ಆನುಕೂಲ್ಯವು ಹೆಚ್ಚಾಗಿರುವುದರಿಂದ ಜನಗಳು ತಕ್ಕಮಟ್ಟಿಗೆ ಪುಷ್ಟರಾಗಿ ಇರುತ್ತಾರೆ. ಶ್ರೀಗಳವರ ಸವಾರಿಯು ಆ ಪ್ರಾಂತ್ಯದಲ್ಲಿ ಸಾವಕಾಶವಾಗಿ ಸಂಚರಿಸುವುದಿಲ್ಲವೆಂಬ ಸಂಗತಿಯು ಮುಂದಾಗಿಯೇ ತಿಳಿದಿದ್ದುದರಿಂದಲೂ, ಆ ಜಿಲ್ಲೆಗೆ ಸೇರಿದ ಅನೇಕ ಗ್ರಾಮಗಳ ಜನಗಳು ಏಕಕಾಲದಲ್ಲಿ ತಿನ್ನವೆಲ್ಲಿಯಲ್ಲಿಯೇ ಶ್ರೀಗಳವರ ದರ್ಶನಕ್ಕೆ ಸೇರಿದ್ದುದರಿಂದಲೂ, ಆ ದಿನದಲ್ಲಿ ಬ್ರಾಹ್ಮಣಸಮೂಹವು ಬಹು ಹೆಚ್ಚಾಗಿಯೇ ಇದ್ದು ನೋಡುವುದಕ್ಕೆ ತುಂಬಾ ಆಶ್ಚರ್ಯಕರವಾಗಿಯೂ ಆನಂದಕರವಾಗಿಯೂ ಇತ್ತು. ಶ್ರೀ ಶ್ರೀಸ್ವಾಮಿಗಳವರು ಶಿಬಿಕಾರೋಹಣವನ್ನು ಮಾಡಿದಕೂಡಲೆ ಅನೇಕ ಬ್ರಾಹ್ಮಣರು ನಡುಗಳನ್ನು ಕಟ್ಟಿಕೊಂಡು ಶ್ರೀಗಳವರ ಪಾಲಕಿಯನ್ನು ತಮ್ಮ ಹೆಗಲಿನಿಂದ ಧರಿಸಿದರು. ಅದುವರೆಗೆ ಈ ರೀತಿಯಾಗಿ ನಡೆದುದನ್ನು ಯಾವ ಜಿಲ್ಲೆಯಲ್ಲಿಯೂ ನೋಡಿರಲಿಲ್ಲ. ವಾದ್ಯಘೋಷಗಳಿಂದಲೂ ವೇದಘೋಷಗಳಿಂದಲೂ ಮಂಗಳಾರತಿಗಳಿಂದಲೂ ಆಬಾಲವೃದ್ಧರೂ ಅತ್ಯಂತೋತ್ಸಾಹ ಸಂತೋಷಗಳಿಂದ ಎಲ್ಲಾ ಬ್ರಾಹ್ಮಣಾಗ್ರಹಾರಗಳಲ್ಲಿಯೂ ರಾಜಬೀದಿಗಳಲ್ಲಿಯೂ ಉತ್ಸವವನ್ನು ನಡೆಸಿ ಶಾಲಿವಾಟೀಶ್ವರ ದೇವಸ್ಥಾನದಲ್ಲಿ ವಸತಿಮಾಡಿಸಿದರು.

ತಿನ್ನವೆಲ್ಲಿಪಟ್ಟಣದಲ್ಲಿ ಕೆಲವುಕಾಲ ವಸತಿಯನ್ನು ಮಾಡಿ ಅಲ್ಲಿಯವರಿಗೂ ಅಲ್ಲಿಗೆ ಇತರ ಗ್ರಾಮಗಳಿಂದ ಬಂದ ಶಿಷ್ಯರಿಗೂ ದೇವತಾ ಸಂದರ್ಶನ ತೀರ್ಥ ಪ್ರಸಾದಗಳಿಂದಲೂ ಸದುಪದೇಶಗಳಿಂದಲೂ ಅನುಗ್ರಹಮಾಡಿ ತಾಮ್ರಪರ್ಣೀ ನದೀಮೂಲವಾದ ಬಾಣತೀರ್ಥವೆಂಬ ಸ್ಥಳವನ್ನು ಕುರಿತು ಪ್ರಯಾಣಮಾಡಿದರು. ಆ ಸ್ಥಳವು ಅತಿರಮಣೀಯವಾಗಿಯೂ ವಿಶಾಲವಾಗಿಯೂ ಇರುವುದು. ಅಲ್ಲಿ ಮೂರುದಿನಗಳು ವಸತಿಮಾಡಿದರು. ತಾಮ್ರಪರ್ಣೀಮೂಲವಾದ ಪರ್ವತವು ಶಿಂಗಂಬಟ್ಟಿ ಜಮೀನ್‌ದಾರರ ಜಮೀನಿಗೆ ಸಂಬಂಧಪಟ್ಟುದಾದ್ದರಿಂದ ಶ್ರೀಗಳವರ ವಸತಿಗೆ ಬೇಕಾದ ಅನುಕೂಲಗಳು ಆ ಜಮೀನುದಾರರಿಂದ ಕಲ್ಪಿಸಲ್ಪಟ್ಟುವು. ಶ್ರೀಗಳವರು ದಯಮಾಡಿಸಿದ್ದ ಕಾಲದಲ್ಲಿ ಆ ಜಮೀನುದಾರರಿಗೆ ಸಂತಾನವಿರಲಿಲ್ಲ. ಅವರು ಮಾಡಿದ ಭಕ್ತಿಗೂ ಸತ್ಕಾರಕ್ಕೂ ಸಂತುಷ್ಟರಾದ ಶ್ರೀಗಳವರು ಅವರಿಗೆ ''ತೀರ್ಥಪತಿ'' ಎಂಬ ಬಿರುದನ್ನು ಕೊಟ್ಟು ಪುತ್ರಸಂತಾನವು ಶೀಘ್ರದಲ್ಲಿ ಉಂಟಾಗುವುದೆಂದು ಅನುಗ್ರಹಿಸಿದರು.

''ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋನುಧಾವತಿ'' ಎಂಬಂತೆ ಮಹನೀಯರಿಂದ ಮಾಡಲ್ಪಟ್ಟ ಅನುಗ್ರಹದ ಫಲವು ಜಮೀನ್‌ದಾರರಿಗೆ ಲಭಿಸಿ ಅವರು ಅದನ್ನು ಅನುಭವಿಸುತ್ತಿರುತ್ತಾರೆ. ಈ ರೀತಿಯಾಗಿ ಸುಮಾರು ನಾಲ್ವತ್ತುದಿನಗಳು ಮಾತ್ರ ತಿನ್ನವೆಲ್ಲಿ ಜಿಲ್ಲೆಯಲ್ಲಿ ಸಂಚರಿಸಿ ಕರ್ತವ್ಯಾಂಶದಲ್ಲಿ ಅವಶಿಷ್ಟವಾಗಿದ್ದ ಅಯ್ಯಂಪಾಳೆಯದ ದಂಡಾಯುಧಪಾಣಿ ಪ್ರತಿಷ್ಠೆಯನ್ನು ಪೂರ್ತಿ ಮಾಡಿಸಲು ಅಲ್ಲಿಗೆ ಚಿತ್ತೈಸಿದರು.

ದಂಡಾಯುಧಪಾಣಿ ಪ್ರತಿಷ್ಠೆ

ಶ್ರೀಗಳವರು ಅಸ್ತಿಭಾರವನ್ನು ಹಾಕಿದ ದೇವಾಲಯವನ್ನು ಅತ್ಯಲ್ಪಕಾಲದಲ್ಲಿಯೇ ಶಿಲಾಮಯವಾಗಿ ನಿರ್ಮಿಸಿ ದೇವತಾಪ್ರತಿಷ್ಠೆಗೆ ಸಿದ್ಧಪಡಿಸಿಕೊಂಡಿದ್ದ ತಾಂಡವರಾಯ ಪಿಳ್ಳೆಯವರ ಸಾಹಸಕ್ಕೂ ಉತ್ಸಾಹಕ್ಕೂ ಶ್ರೀಗಳವರು ಅತ್ಯಾಶ್ಚರ್ಯಭರಿತರಾದರು. ಪ್ರತಿಷ್ಠೋಪಯೋಗಿಯಾದ ಸಕಲ ಸಂಭಾರಗಳೂ ಸಿದ್ಧವಾಗಿದ್ದುವು. ದೇವತಾಪ್ರತಿಷ್ಠೆಗೆ ಸಂಕಲ್ಪವಾಗಿ ವೇದೋಕ್ತವಿಧಾನದಿಂದ ಕರ್ಮಕಲಾಪಗಳೆಲ್ಲವೂ ಪೂರ್ವಭಾವಿಯಾಗಿ ನಡೆದು ಶಾ॥ ಶಕ 1818ನೇ ಮನ್ಮಥ ಸಂವತ್ಸರ (1895ನೇ ಇಸವಿ) ಚೈತ್ರಕೃಷ್ಣದಶಮೀ ಶುಕ್ರವಾರ ವೃಷಭಲಗ್ನದಲ್ಲಿ ದಂಡಾಯುಧ ಸುಬ್ರಹ್ಮಣ್ಯಸ್ವಾಮಿ ಪ್ರಸನ್ನ ಪಾರ್ವತೀಸಮೇತ ಪ್ರಸನ್ನ ಪರಮೇಶ್ವರಸ್ವಾಮಿ ಶ್ರೀನಿವಾಸಮೂರ್ತಿ ಇವರುಗಳ ಪ್ರತಿಷ್ಠೆಯು ಶ್ರೀಗಳವರ ಆಜ್ಞಾನಿಯುಕ್ತರಾದ ಪಂಡಿತರಿಂದಲೂ ವೇದಾಧ್ಯಯನ ಸಂಪನ್ನರಾದ ವೈದಿಕರಿಂದಲೂ ನಡೆಸಲ್ಪಟ್ಟಿತು. ಶ್ರೀ ಶ್ರೀಗಳವರು ಪ್ರತಿಷ್ಠಾ ನಂತರದಲ್ಲಿ ದೇವಾಲಯಕ್ಕೆ ದಯಮಾಡಿಸಿ ಮೂರ್ತಿಯಲ್ಲಿ ಕಲಾವಾಹನೆಯನ್ನು ಮಾಡಿ ಕಲಾಸಾನ್ನಿಧ್ಯೋಪಯುಕ್ತವಾದ ಅನೇಕ ಮಹಾಮಂತ್ರಗಳಿಂದ ಮೂರ್ತಿಯನ್ನು ಅಭಿಮಂತ್ರಿಸಿ ಸಾವಕಾಶವಾಗಿ ಮಹಾಪೂಜೆಯನ್ನು ಮಾಡಿ ಆ ದಿನ ಅಲ್ಲಿ ಸೇರಿದ್ದ ಸಕಲ ಶಿಷ್ಯರಿಗೂ ತೀರ್ಥಪ್ರಸಾದಗಳನ್ನು ಕೊಟ್ಟು ಅನುಗ್ರಹಿಸಿದರು. ಪರಮಭಕ್ತರಾದ ತಾಂಡವರಾಯಪಿಳ್ಳೆಯವರ ಪ್ರಾರ್ಥನೆಗನುಸಾರವಾಗಿ ಅಖಂಡಕಾವೇರೀತೀರದಲ್ಲಿ ಲೋಕಹಿತಾರ್ಥವಾಗಿ ಶ್ರೀ ಶ್ರೀಗಳವರೇ ಪ್ರಾರಂಭಮಾಡಿ ದೇವಾಲಯ ನಿರ್ಮಾಣವನ್ನೂ ದೇವತಾ ಪ್ರತಿಷ್ಠೆಯನ್ನೂ ವಿಧಿವತ್ತಾಗಿಮಾಡಿಸಿ ವಿಶೇಷವಾಗಿ ದೇವತಾಸಾನ್ನಿಧ್ಯವು ಆ ಮೂರ್ತಿಗಳಲ್ಲಿ ಇರುವುದಕ್ಕೋಸ್ಕರ ಸ್ವತಃ ಅರ್ಚನೆಮಾಡಿ, ನಿತ್ಯಪೂಜಾರಾಧನಾದಿ ಕ್ರಮಗಳನ್ನೂ ಕ್ಲಪ್ತಪಡಿಸಿದ್ದರಿಂದ, ಈ ದೇವಾಲಯವು ಅದು ಮೊದಲುಗೊಂಡು ಇದುವರೆಗೆ ಅನೇಕ ಮಂಟಪಗಳಿಂದಲೂ ಪ್ರಾಕಾರಗಳಿಂದಲೂ ಗೋಪುರಗಳಿಂದಲೂ ವೃದ್ಧಿಪಡಿಸಲ್ಪಟ್ಟಿರುವುದಲ್ಲದೆ, ವಿಶೇಷವಾದ ರತ್ನಾಭರಣಗಳೂ ಸ್ವರ್ಣಾಭರಣಗಳೂ ದೇವತೋಪಯೋಗಿಯಾಗಿ ಶೇಖರಿಸಲ್ಪಟ್ಟು ತಾಂಡವರಾಯ

ಪಿಳ್ಳೆಯವರಿಂದಲೂ ಅವರ ಅನಂತರ ಅವರ ಮಕ್ಕಳಿಂದಲೂ ನಿತ್ಯನೈಮಿತ್ತಿಕಾದ್ಯುತ್ಸವಗಳು ವಿಶೇಷವಾಗಿ ನಡೆಸಲ್ಪಡುತ್ತ ಬರುವುದರಿಂದ ಅತ್ಯಂತೋಚ್ಛ್ರಾಯ ಸ್ಥಿತಿಯಲ್ಲಿರುವುದು.

ಬೆಂಗಳೂರುನಗರ ಪ್ರವೇಶ

ಹಿಂದೆ ಪ್ರಸ್ತಾಪಿಸಿದಂತೆ ಶೃಂಗೇರಿಯನ್ನು ಸೇರಬೇಕೆಂಬ ಆಲೋಚನೆಯು ಹೆಚ್ಚುತ್ತ ಬಂದುದರಿಂದ ಶ್ರೀಗಳವರು ಸೇಲಂಜಿಲ್ಲೆಗೆ ಬಂದು ಕಣಿಗೆ ಹತ್ತಿ ಹೊಸೂರು ಆನೆಕಲ್ಲುಗಳ ಮಾರ್ಗವಾಗಿ ಸವಾರಿ ಚಿತ್ತೈಸುತ್ತಿದ್ದರು. ಆ ಸಂದರ್ಭದಲ್ಲಿ ಬೆಂಗಳೂರಿಗೆ ಬರತಕ್ಕ ಉದ್ದೇಶವಿರಲಿಲ್ಲ. ಶ್ರೀಗಳವರು ಆನೆಕಲ್ಲಿನಲ್ಲಿ ವಸತಿ ಮಾಡಿರುವಾಗ್ಗೆ ಬೆಂಗಳೂರಿನ ಅನೇಕ ಶಿಷ್ಯಮಂಡಲಿಯವರು ಶ್ರೀಗಳವರ ದರ್ಶನವು ಬೆಂಗಳೂರಿನಲ್ಲಿ ತಮಗೆ ಲಭ್ಯವಾಗ ಬೇಕೆಂತಲೂ, ಸಂಸ್ಥಾನದ ಸವಾರಿಯು ಬೆಂಗಳೂರಿಗೆ ದಯಮಾಡಿ ಅನೇಕ ವರ್ಷಗಳಾಗಿರುವುದೆಂತಲೂ, ಮೈಸೂರು ಸಂಸ್ಥಾನಕ್ಕೆ ನೇತ್ರಪ್ರಾಯವಾದ ಬೆಂಗಳೂರು ಪಟ್ಟಣಕ್ಕೆ ಶ್ರೀಗಳವರು ದಯಮಾಡಿ ಆ ಪಟ್ಟಣವನ್ನೂ ಅಲ್ಲಿನ ಜನರನ್ನೂ ಅನುಗ್ರಹಿಸಿ ಮುಂದೆ ಪ್ರಯಾಣವನ್ನು ಬೆಳೆಸಬೇಕೆಂತಲೂ ವಿಜ್ಞಾಪನಪತ್ರದಿಂದ ತಿಳಿಸಿಕೊಂಡರು. ಸಮೀಪ ಕಾಲದಲ್ಲಿ ಉಂಟಾಗಿದ್ದ ಶ್ರೀ ಚಾಮರಾಜ ಪ್ರಭುಗಳವರ ವಿಯೋಗದುಃಖವು ಶ್ರೀಗಳವರು ಬೆಂಗಳೂರಿಗೆ ಬರುವುದನ್ನು ನಿರೋಧಿಸುತ್ತಲಿದ್ದರೂ ಆ ಪ್ರಭುಗಳವರ ಮುಖ್ಯಾಮಾತ್ಯರೇ ಮೊದಲಾದವರನ್ನು ನೋಡಿ ಅವರ ಮೂಲಕವಾಗಿ ಅಪ್ರಬುದ್ಧರಾಗಿದ್ದ ಪ್ರಭುಗಳ ಯೋಗಕ್ಷೇಮಗಳನ್ನು ವಿಚಾರಿಸಿ, ರಾಜಪರಿವಾರಕ್ಕೆ ತತ್ಕಾಲೋಚಿತವಾದ ಸದುಪದೇಶ ಗಳಿಂದ ಸಮಾಧಾನವನ್ನು ಹೇಳಿ, ಮುಂದೆ ಹೊರಡುವುದು ಕರ್ತವ್ಯವೆಂದು ಶ್ರೀಗಳವರು ಭಾವಿಸಿದ್ದುದರಿಂದ ಬೆಂಗಳೂರು ಮಾರ್ಗವಾಗಿ ಪ್ರಯಾಣಮಾಡತಕ್ಕದ್ದೆಂದು ನಿಶ್ಚಯಿಸಿದರು. ಆಗ್ಗೆ ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ಸರ್. ಕೆ. ಶೇಷಾದ್ರಯ್ಯರವರು ಶ್ರೀ ಸ್ವಾಮಿಗಳವರು ಬೆಂಗಳೂರಿಗೆ ದಯಮಾಡುವ ವರ್ತಮಾನವನ್ನು ತಿಳಿದು, ಹಿಂದೆ ಬ್ರಿಟೀಷ್ ಸರ್ಕಾರದವರ ಮೂಲಕ ಮೈಸೂರು ರಾಜ್ಯಭಾರವು ನಡೆಸಲ್ಪಡುತ್ತಿದ್ದ ಕಾಲದಲ್ಲಿ ಹಿಂದಿನ ನರಸಿಂಹಭಾರತೀ ಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿಸಿದ್ದ ಸಂದರ್ಭದಲ್ಲಿ ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಪ್ರಭುಗಳವರ ಕೋರಿಕೆಯಂತೆ ಕಮೀಷನರ್ ರವರಿಂದ ನಡೆಸಲ್ಪಟ್ಟಿದ್ದ ಮರ್ಯಾದೆಯ ಸಂಬಂಧವಾದ ದಾಖಲೆಗಳನ್ನು ತೆಗೆಸಿ ನೋಡಿ ಈ ಶ್ರೀಗಳವರು ಬೆಂಗಳೂರಿಗೆ ದಯಮಾಡುವುದಕ್ಕೆ ಬೇಕಾದ ಅನುಕೂಲಗಳನ್ನು ಏರ್ಪಡಿಸಿ ಸಕಲ ರಾಜಮರ್ಯಾದೆಗಳೊಡನೆ ಶ್ರೀ ಶ್ರೀಗಳವರನ್ನು ಬರಮಾಡಿಕೊಂಡರು. ಒಂದುವಾರ ಬೆಂಗಳೂರಿನಲ್ಲಿ ವಸತಿಮಾಡಿ ಅಮಾತ್ಯರೇ ಮೊದಲಾದ ರಾಜಪರಿವಾರದವರಲ್ಲಿ

ಮುಖ್ಯರಾದವರಿಗೆಲ್ಲಾ ದರ್ಶನಕೊಟ್ಟು, ರಾಜಕುಟುಂಬದವರ ಯೋಗಕ್ಷೇಮಗಳನ್ನೆಲ್ಲಾ ವಿಚಾರಿಸಿ, ಚಾಮರಾಜ ಪ್ರಭುಗಳವರ ವಿಷಯದಲ್ಲಿ ತಮಗಿದ್ದ ಪ್ರೀತಿಗೆ ಅನುಗುಣವಾಗಿ ರಾಜ ಕುಟುಂಬದವರಿಗೆ ತಮ್ಮ ಪರವಾಗಿ ತಿಳಿಸಬೇಕಾದ ಸಂಗತಿಗಳನ್ನು ತಿಳಿಸುವಂತೆ ಶೇಷಾದ್ರಯ್ಯರವರಲ್ಲಿ ಸೂಚಿಸಿ, ಅಧಿಕಾರಿಗಳಿಗೂ ತತ್ಕಾಲೋಚಿತವಾದ ಪ್ರಿಯೋಕ್ತಿಗಳಿಂದ ಸಮಾಧಾನ ಹೇಳಿದರು. ಮತ್ತು ಬೆಂಗಳೂರು ನಗರದ ಶಿಷ್ಯಮಂಡಲಿಯವರಿಗೆಲ್ಲಾ ದರ್ಶನಕೊಟ್ಟು ತೀರ್ಥಪ್ರಸಾದಗಳಿಂದ ಅನುಗ್ರಹಿಸಿದಮೇಲೆ ಅಲ್ಲಿಂದ ತುಮಕೂರು ಮಾರ್ಗವಾಗಿ ಶೃಂಗೇರಿಯನ್ನು ಸೇರಲು ನಿಶ್ಚಯಮಾಡಿದರು.

ಮೈಸೂರಿನಲ್ಲಿ ರಾಜಕುಟುಂಬದವರಿಗೆ ಹಿತೋಪದೇಶ.

ಇಷ್ಟರಲ್ಲಿ ರೀಜಂಟರಾಗಿದ್ದ ರಾಜ್ಯಭಾರವನ್ನು ವಹಿಸಿ ರಾಷ್ಟ್ರವನ್ನೂ ಅಪ್ರಬುದ್ಧರಾಗಿದ್ದ ರಾಜಕುಮಾರರನ್ನೂ ಪಾಲಿಸುತ್ತಲಿದ್ದ ಪರಮ ವಿವೇಕ ಶಾಲಿಗಳಾದ ಚಾಮರಾಜ ಪ್ರಭುಗಳವರ ಪಟ್ಟಮಹಿಷಿ ವಾಣೀವಿಲಾಸ ಸನ್ನಿಧಾನದ ಕೆಂಪನಂಜಮ್ಮಣ್ಣಿಯವರು ಶ್ರೀಗಳವರು ಬೆಂಗಳೂರಿನಿಂದ ತಮ್ಮ ರಾಜಧಾನಿಗೆ ದಯಮಾಡಿ ಅತ್ಯಂತ ದುಃಖಸಾಗರದಲ್ಲಿ ಮಗ್ನರಾಗಿರುವ ತಮಗೂ ತಮ್ಮ ಪುತ್ರೀಪುತ್ರರುಗಳಿಗೂ ದರ್ಶನಕೊಟ್ಟು ಅಪರಿಮಿತವಾದ ತಮ್ಮ ದುಃಖದ ಶಾಂತಿಗಾಗಿ ಆವಶ್ಯಕವಾದ ವಿವೇಕೋಪದೇಶದಿಂದ ಅನುಗ್ರಹಮಾಡಿ ಮುಂದೆ ಪ್ರಯಾಣವನ್ನು ಬೆಳೆಸಬೇಕೆಂದು ತಮ್ಮ ಅಮಾತ್ಯರ ಮೂಲಕವಾಗಿ ಶ್ರೀಗಳವರನ್ನು ಪ್ರಾರ್ಥಿಸಿದರು ಮಹಾರಾಜ್ಞಿಯವರು ಅತ್ಯಂತ ಶೋಕಾವಿಷ್ಟರಾಗಿದ್ದರೂ ಸಹಜವಾಗಿ ತಮ್ಮನ್ನು ಆಶ್ರಯಿಸಿದ್ದ ವಿವೇಕವನ್ನು ಮುಂದಿಟ್ಟು ಆಗ ಶ್ರೀಗಳವರ ದರ್ಶನದಲ್ಲಿ ತಮಗುಂಟಾದ ಆದರವನ್ನು ವ್ಯಕ್ತಗೊಳಿಸಿದ ವಿಷಯದಲ್ಲಿ ಶ್ರೀಗಳವರು ಸಂತೋಷಿಸಬೇಕಾಗಿದ್ದರೂ ರಾಜಕುಟುಂಬದವರಲ್ಲಿ ಶ್ರೀಗಳವರಿಗಿದ್ದ ಪ್ರೀತಿಯಿಂದಲೂ ಸಂಬಂಧದಿಂದಲೂ ಅಪ್ರಾರ್ಥಿತರಾಗಿಯೇ ಮೈಸೂರಿಗೆ ಬಂದು ದುಃಖಿತರಾಗಿದ್ದ ಮಹಾರಾಜ್ಞಿಯವರಿಗೂ ರಾಜಕುಮಾರರಿಗೂ ತತ್ಕಾಲೋಚಿತವಾದ ವಿವೇಕೋಪದೇಶದಿಂದ ಸಮಾಧಾನ ಪಡಿಸಿ ಧೈರ್ಯವನ್ನು ಅವಲಂಬಿಸುವಂತೆ ಅನುಗ್ರಹಿಸುವುದು ತಮ್ಮ ಕರ್ತವ್ಯಗಳಲ್ಲಿ ಒಂದಾಗಿರುವು ದೆಂಬ ಅಂಶವನ್ನು ತಿಳಿದವರಾಗಿದ್ದರೂ ಚಾಮರಾಜ ಪ್ರಭುಗಳವರಲ್ಲಿ ಶ್ರೀಗಳವರಿಗೆ ಸ್ವಭಾವವಾಗಿದ್ದ ಪ್ರೀತಿಯಿಂದ ಅವರ ವಿಯೋಗದುಃಖವು ಅತ್ಯಂತ ದುಸ್ಸಹವಾಗಿ ಮಹಾರಾಜ್ಞಿಯವರಿಂದ ಪ್ರಾರ್ಥಿಸಲ್ಪಟ್ಟರೂ ಮೈಸೂರಿಗೆ ಪ್ರಯಾಣಮಾಡುವ ವಿಷಯದಲ್ಲಿ ಹಿಂಜರಿಯುವಂತೆ ಮಾಡಿತು. ಈ ಸಂದರ್ಭದಲ್ಲಿ ಮಹಾಮೇಧಾವಿಗಳಾಗಿದ ಶೇಷಾದ್ರಯ್ಯ ರವರೇ ಶ್ರೀ ಶ್ರೀಗಳವರನ್ನು ಸಮಾಧಾನಗೊಳಿಸಿ ಅವರು ಮೈಸೂರಿಗೆ ಪ್ರಯಾಣ

ಮಾಡುವುದನ್ನು ಅಂಗೀಕರಿಸುವಂತೆ ಮಾಡಬೇಕಾಯಿತು. ಅನಂತರ ಬೆಂಗಳೂರಿನಿಂದ ಹೊರಟು ಶಾ॥ 1818 ನೆಯ ಮನ್ಮಥ ಸಂವತ್ಸರ ಜ್ಯೇಷ್ಠ ಬಹುಳ ಪಂಚಮೀ ಬುಧವಾರದಲ್ಲಿ ಮೈಸೂರು ರಾಜಧಾನಿಯನ್ನು ಪ್ರವೇಶಿಸಿದರು. ಪಟ್ಟಣಪ್ರವೇಶ ಕಾಲದಲ್ಲಿಯೂ ಅರಮನೆಯ ಸಮೀಪಕ್ಕೆ ಬರುವ ಕಾಲದಲ್ಲಿಯೂ ಸರ್ವದಾ ಮಂದಹಾಸದಿಂದ ಶೋಭಿಸುತ್ತಲಿದ್ದ ಶ್ರೀಗಳವರ ಮುಖಕಮಲವು ಅತ್ಯಂತ ವಿಕಾರವನ್ನು ಹೊಂದಿ ನೋಡುವವರ ಮನಸ್ಸುಗಳು ಕಲಕಿ ಹೋಗುವಂತೆ ಮಾಡಿತು. ಆಗ ಅರಮನೆಯ ಮಹಾದ್ವಾರದಲ್ಲಿ ವಿಶ್ವಾಮಿತ್ರ ಮಹರ್ಷಿಗಳ ಯಾಗರಕ್ಷಣೆಗಾಗಿ ತಂದೆತಾಯಿಗಳನ್ನು ಬಿಟ್ಟು ಏಕಾಕಿಗಳಾಗಿದ್ದ ಅತ್ಯಂತ ಬಾಲ್ಯವಯಸ್ಸಿನ ರಾಮಲಕ್ಷ್ಮಣರಂತೆ ಶ್ರೀಗಳವರ ಆಗಮನವನ್ನು ನಿರೀಕ್ಷಿಸುತ್ತಲಿದ್ದ ರಾಜಕುಮಾರರನ್ನು ನೋಡಿದೊಡನೆಯೇ ಶ್ರೀಗಳವರ ಮನೋಭಾವವು ಯಾವ ರೀತಿಯಲ್ಲಿ ಪರಿಣತವಾಯಿತೆಂಬ ಅಂಶವು ಯಾರಿಂದಲೂ ಯಾವ ರೀತಿಯಿಂದಲೂ ವಿವರಿಸಲಶಕ್ಯವು. ಮಮಕಾರವೆಂಬ ಬಂಧವು ಎಂಥವರನ್ನೂ ಕಟ್ಟದೆ ಬಿಡುವುದಿಲ್ಲವೆಂದು ಹಿಂದೆಯೇ ಹೇಳಿದೆಯಷ್ಟೆ? ಅರಮನೆಗೆ ದಯಮಾಡಿಸಿ ಮಹಾರಾಣಿಯವರಿಗೂ ರಾಜಪುತ್ರರುಗಳಿಗೂ ದರ್ಶನವನ್ನು ಕೊಟ್ಟು ಅನೇಕ ವಿಧವಾದ ಧರ್ಮೋಪದೇಶಗಳಿಂದ ಅವರುಗಳನ್ನು ಸಮಾಧಾನಗೊಳಿಸಿ ತಮಗಾಗಿ ಸಿದ್ಧಪಡಿಸಿದ್ದ ಸಂಸ್ಕೃತಪಾಠಶಾಲೆಯಲ್ಲಿ ವಸತಿಯನ್ನು ಮಾಡಿದರು. ಬಳಿಕ ಮಹಾರಾಜ್ಞಿಯವರಿಗೆ ಮಂತ್ರೋಪದೇಶವನ್ನು ಮಾಡಿ ಶಿವಪೂಜಾದಿ ಧರ್ಮಗಳನ್ನು ಆಚರಿಸುವಂತೆ ಅನುಗ್ರಹಿಸಿ ಅಲ್ಲಿಂದ ಪ್ರಯಾಣಮಾಡಿ ಪಶ್ಚಿಮವಾಹಿನೀ ಕೃಷ್ಣರಾಜಪೇಟೆಗಳ ಮಾರ್ಗವಾಗಿ ತಮ್ಮ ಪರಿವಾರದೊಡನೆ ಮನ್ಮಥ ಸಂವತ್ಸರಾಷಾಢ ಶುದ್ಧ ಸಪ್ತಮೀ ಸ್ಥಿರವಾರದಲ್ಲಿ ಶೃಂಗೇರಿಯನ್ನು ಸೇರಿದರು.

★ ★ ★

ಅಧ್ಯಾಯ - ೮.

ಶೃಂಗಗಿರಿಕ್ಷೇತ್ರವಾಸ ಮತ್ತು ವೇದಾಂತ ಪ್ರವಚನ

ಶ್ರೀಗಳವರು ಶೃಂಗೇರಿಗೆ ದಯಮಾಡಿಸಿ ಶ್ರೀಶಾರದಾಂಬೆಯ ಸಂದರ್ಶನವನ್ನು ಮಾಡುವಾಗ ತಮ್ಮ ಕರುಣೆಯೆಂಬ ಅಮೃತಪ್ರವಾಹದಲ್ಲಿ ಪ್ರತಿಬಿಂಬಿತರಾಗಿದ್ದ ಮೈಸೂರು ಸಂಸ್ಥಾನದ ರಾಜಕುಮಾರರುಗಳ ಅಭ್ಯುದಯವನ್ನು ಬಹುವಿಧವಾಗಿ ಪ್ರಾರ್ಥಿಸಿ, ಅದನ್ನು ಛಂದೋಬದ್ಧವಾದ ವಾಣಿಯಿಂದ ರಚಿಸಿ, ಪ್ರತಿ ರಾತ್ರಿಯಲ್ಲಿಯೂ ಅಮ್ಮನವರ ಸನ್ನಿಧಿಯಲ್ಲಿ ದೀಪಾರಾಧನೆಯಾದನಂತರ ಆ ಸ್ತೋತ್ರವನ್ನು ಬ್ರಾಹ್ಮಣರಿಂದ ಹೇಳಿಸಿ, ಆ ಕಾಲದಲ್ಲಿ ಅಲ್ಲಿ ಸೇರುವ ಎಲ್ಲಾ ಜನರೂ ರಾಜಕುಮಾರರ ಶ್ರೇಯಸ್ಸನ್ನು ಕೋರುವಂತೆ ವ್ಯವಸ್ಥೆಮಾಡಿದರು. ಅತ್ಯಂತ ಬಾಲ್ಯದಲ್ಲಿ ಪಿತೃವಿಯೋಗದಿಂದ ಖಿನ್ನರಾಗಿದ್ದ ಆ ರಾಜಪುತ್ರರ ದುಃಖವನ್ನು ವಿಚಾರಿಸಲು ಶ್ರೀಗಳವರು ಮೈಸೂರು ರಾಜಧಾನಿಗೆ ದಯಮಾಡಿಸಿದಾಗ, ಇವರನ್ನು ಬರಮಾಡಿಕೊಳ್ಳುವುದಕ್ಕೆ ತಮ್ಮ ರಾಜಭವನದ ಮಹಾದ್ವಾರದಲ್ಲಿ ನಿರೀಕ್ಷಿಸುತ್ತಿದ್ದ ರಾಜಕುಮಾರರನ್ನು ನೋಡಿದ್ದು ಮೊದಲಾಗಿ ಅವರ ವಿಷಯದಲ್ಲಿ ಶ್ರೀಗಳವರಿಗೆ ಸ್ಥಿರವಾಗಿ ಉಂಟಾದ ಮನೋಭಾವವು ಹೇಗಿದ್ದಿತು? ಆ ಭಾವವನ್ನು ಯಾವ ರೀತಿಯಲ್ಲಿ ವ್ಯಕ್ತಗೊಳಿಸಿರುವರು? ಎಂಬುದನ್ನು ತಮ್ಮ ಲಿಖಿತ ಪದ್ಯಗಳಿಂದ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು.

ಶ್ರೀ ಶಾರದಾಸ್ತುತಿ.

(ಭಕ್ತಿ ಸುಧಾತರಂಗಿಣಿಯಲ್ಲಿ ಪುಟ 440)

ಶ್ರೀರಾಮಲಕ್ಷ್ಮಣಾವಿವ ಸೌಹಾರ್ದಂ ಪ್ರಾಪ್ಯ ಸುಸ್ಥಿರಂ ಸುಚಿರಮ್ ।
ಶ್ರೀಚಾಮರಾಜಪುತ್ರೌ ಜೀಯಾಸ್ತಾಂ ಶಾರದಾಂಬ ತವ ಕೃಪಯಾ ॥1॥

ಭಾರತಿ ಸಂಪದ್ಭರಿತೌ ಬುಧ್ಯಾ ಚೈವಾತಿತೀಕ್ಷ್ಣಯಾ ಪೂರ್ಣೌ ।
ಆಯುಷ್ಮನ್ತೌ ಸುಖಿನೌ ಭೂಯಾಸ್ತಾಂ ಚಾಮರಾಜಸುಕುಮಾರೌ ॥ ॥2॥

ರಾಜ್ಯಾಭಿವೃದ್ಧಿಮತುಲಾಂ ಪ್ರಾಪಯ್ಯಾಶ್ವೇಭಪತ್ತಿವೃದ್ಧಿಂ ಚ ।
ಪಾಲಯ ಕಮಲಜಜಾಯೇ ಚಾಮಕ್ಷಿತಿಪಾಲಸ್ಯಸುಕುಮಾರೌ ॥ ॥3॥

ಗಜತುರಗವಾಹನಸ್ಥಾವಪಿ ರಥಮಧ್ಯೇಷು ಸುಸ್ಥಿತೌ ವಾಣಿ ।
ಸಂರಕ್ಷ ಸಂತತಂ ಬಹುಕರುಣೇ ಶ್ರೀಚಾಮರಾಜಸುಕುಮಾರೌ ॥ ॥5॥

ದೇವದ್ವಿಜಗುರುಭಕ್ತಿಂ ಸುದೃಢಾಂ ದತ್ವಾ ಚ ವಿನಯಸಂಪತ್ತಿಮ್ ।
ಪಾಲಯ ಪದ್ಮಜಮಾನಿನಿ ಸತತಂ ಶ್ರೀ ಚಾಮರಾಜಸುಕುಮಾರೌ ॥ ॥5॥

ಗಿರಿಸಾನುಷು ಗಹನೇಷ್ವಪಿ ಮಾರ್ಗೇಷ್ವನಿಶಂ ಸಮಸ್ತದೇಶೇಷು ।
ಸರ್ವಾಪದ್ಭ್ಯಃ ಪಾಲಯ ವಿಧಿಭಾಮಿನಿ ಚಾಮರಾಜಸುಕುಮಾರೌ ॥ ॥6॥

ವಾಕ್ಪಾಟವಮತಿದೃಢತಾಂ ನೀರೋಗತ್ವಂ ಚ ವಪುಷಿ ಸುಯಶಶ್ಚ ।
ದತ್ವಾಬ್ಜಯೋನಿಜಾಯೇ ಕಾರುಣ್ಯಾತ್ಪಾಹಿ ಚಾಮನೃಪಪುತ್ರೌ ॥ ॥7॥

ವಶ್ಯಾನ್ವಿಧಾಯನೃಪತೀ ದತ್ವಾ ಚೈಕಾತಪತ್ರಸಾಮ್ರಾಜ್ಯಮ್ ।
ಶ್ರೀ ಚಕ್ರಕೃತನಿವಾಸೇ ವಾಣ್ಯವ ಚಾಮಾವನೀಪಸುಕುಮಾರೌ ॥ ॥8॥

ಶ್ರೀನಾಥಮುಖನಿಷೇವ್ಯೇ ಶ್ರೀವಿದ್ಯಾದಾನದಕ್ಷಪದವಿನುತೇ ।
ಶ್ರೀಶಾರದಾಂಬ ಪಾಹಿ ಶ್ರೀಮನ್ತೌ ಚಾಮರಾಜಸುಕುಮಾರೌ ॥ ॥9॥

ವಾಣಿ ತಾವಕವಿಲಾಸಸಮುತ್ಥೌ ಪಾಣಿನಿರ್ಜಿತಪಯೋರುಹಗರ್ವೌ ।
ಸಾಮವೇದನುತದಿವ್ಯಚರಿತ್ರೇ ಚಾಮಭೂಪತನಯೌ ಪರಿಪಾಹಿ ॥ ॥10॥

ಯದ್ಯಸ್ತಿಮಯಿ ಕೃಪಾ ತವ ವಿನುತಾ ಸುತ್ಯಾನಯಾ ಗಿರಾಂ ದೇವಿ ।
ಶಿಷ್ಯಾವಿಮೌ ಮದೀಯೌ ಪಾಹಿ ಶ್ರೀಚಾಮರಾಜಸುಕುಮಾರೌ ॥ ॥11॥

ಶ್ರೀಗಳವರು ನಾಲ್ಕು ವರ್ಷಗಳು ದೇಶಸಂಚಾರ ಮಾಡಿ ಕಾಲಮಹಿಮೆಯಿಂದ ಜನಗಳಲ್ಲಿ ಪ್ರತಿಕ್ಷಣವೂ ವೃದ್ಧಿಹೊಂದುತ್ತಲಿರುವ ಅಧರ್ಮಪ್ರವೃತ್ತಿಯನ್ನೂ, ಮಾಂದ್ಯವನ್ನು ಪಡೆಯುತ್ತಲಿರುವ ವೇದಶಾಸ್ತ್ರಪ್ರಚಾರವನ್ನೂ ವಿರಳದಶೆಯಲ್ಲಿರುವ ವೇದಶಾಸ್ತ್ರಪ್ರಾಮಾಣ್ಯ ಗ್ರಹವನ್ನೂ, ಮೂರ್ತಿಮತ್ತಾಗಿರುವಂತೆ ವಿಜೃಂಭಿಸುತ್ತಿರುವ ಅಹಂಕಾರಮಮಕಾರಗಳನ್ನೂ, ಉಚ್ಛೃಂಖಲರೀತಿಯಿಂದ ಶ್ರವಣಗೋಚರವಾಗುತ್ತಲಿದ್ದ ಅಪ್ರಯೋಜಕವಾದ ಶಂಕೆಗಳನ್ನೂ, ತದನುಗುಣವಾದ ಆಚರಣೆಗಳನ್ನೂ ಅನೇಕಾವೃತ್ತಿ ಬಹುವಿಧದಿಂದ ನೋಡಿ, ಅಂಥಾ ದುಷ್ಪ್ರವರ್ತನಗಳಿಂದ ಉಂಟಾಗುತ್ತಿರುವ ದೇಶೋಪಪ್ಲವವನ್ನೂ ಪ್ರಕೃತಿ ಕ್ಷೋಭೆಯನ್ನೂ ಕಂಡು, ಅವುಗಳ ನಿರೋಧಕ್ಕೋಸ್ಕರ ತಾವು ಮಾಡಿದ ಸದುಪದೇಶ ರೂಪವಾದ ಪ್ರಯತ್ನವು ಪ್ರವಾಹದಂತೆ ಮೇಲೆ ಮೇಲೆ ನುಗ್ಗಿಬರುತ್ತಲಿರುವ ಆ ಧರ್ಮಶತ್ರುವನ್ನು ಪ್ರತಿಬಂಧಿಸು

ವುದರಲ್ಲಿ ಸಮರ್ಥವಾಗಲಾರದೆಂಬ ಅಂಶವನ್ನು ಚೆನ್ನಾಗಿ ತಿಳಿದುಕೊಂಡು ಅತ್ಯಂತ ಖಿನ್ನಮನಸ್ಕರಾಗಿ ತೋರುತ್ತಲಿದ್ದರು. ಈ ಸಂದರ್ಭದಿಂದ ಶೃಂಗೇರಿಯನ್ನು ಸೇರಿದನಂತರ ಸುಮಾರು ಹದಿನೈದು ದಿನಗಳ ಪರ್ಯಂತ ಶ್ರೀಗಳವರ ಬುದ್ಧಿಯೇ ವಿಕಲ್ಪವಾದಂತೆ ತೋರುತ್ತಲಿತ್ತು. ಈ ಸಮಯದಲ್ಲಿ ಇವರು ಯಾರಲ್ಲಿಯೂ ವಿಶೇಷವಾಗಿ ಮಾತನಾಡು ತ್ತಿರಲಿಲ್ಲ. ನಮ್ಮ ಎದುರಿಗೆ ಬಂದು ನಮಸ್ಕಾರಮಾಡಿ ನಿಂತಿದ್ದರೂ ಬಂದವರನ್ನು ಕುರಿತು ಯಾವ ಪ್ರಶ್ನೆಯನ್ನೂ ಮಾಡುತ್ತಲಿರಲಿಲ್ಲ. ಸ್ನಾನಾದಿ ನಿತ್ಯಕರ್ಮಾನುಷ್ಠಾನಗಳನ್ನು ಸಂಗ್ರಹವಾಗಿ ನೆರವೇರಿಸಿ ಯಾವಾಗಲೂ ತಲೆಯನ್ನು ತಗ್ಗಿಸಿಕೊಂಡು ಚಿಂತಾಕ್ರಾಂತರಾಗಿ ಏಕಾಂತದಲ್ಲಿ ಕುಳಿತಿದ್ದರೇ ಹೊರತು ಮತ್ಯಾವ ವ್ಯವಹಾರಗಳನ್ನೂ ಗಮನಿಸುತ್ತಿರಲಿಲ್ಲ. ಶರೀರಯಾತ್ರಾ ನಿಮಿತ್ತವಾದ ಯಥೋಚಿತಾಹಾರಸೇವನೆಯಲ್ಲಿ ಶ್ರೀಗಳವರು ಪ್ರವರ್ತಿಸುವಂತೆ ಇತರರು ಬಲಾತ್ಕಾರಮಾಡಬೇಕಾಗಿ ಬಂದಿತು. ಶ್ರೀಗಳವರ ಈ ಜಡಾವಸ್ಥೆಗೆ ಕಾರಣವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಅವಕಾಶವಿಲ್ಲದೆ ಸಮೀಪವರ್ತಿಗಳು ವಿಶೇಷವಾಗಿ ಗಾಬರಿಪಡುವ ಸಂಭವವುಂಟಾಯಿತು. ಹದಿನೈದು ದಿನಗಳಾದ ಬಳಿಕ ಶ್ರೀಗಳವರ ಆ ಜಾಡ್ಯವು ಯಾವ ವಿಧವಾದ ದುಷ್ಪ್ರತೀಕವನ್ನೂ ಪಡೆಯದೆ ತಾನಾಗಿಯೇ ಅದೃಶ್ಯ ಭಾವವನ್ನು ಹೊಂದಿತು. ಇದಕ್ಕೆ ಸೂಚಕವಾಗಿ ಶ್ರೀಗಳವರು ಈ ಲೇಖಕನನ್ನು ಕರೆದು "ಕೂಡಲೇ ಶಾರದಾ ಸನ್ನಿಧಾನದಲ್ಲಿ ಒಂದು ವೇದಶಾಸ್ತ್ರಪಾಠಶಾಲೆಯನ್ನು ಸ್ಥಾಪಿಸಬೇಕು. ಸ್ಥಳ ಪರಸ್ಥಳಗಳಿಂದ ಬರತಕ್ಕ ವಿದ್ಯಾರ್ಥಿಗಳ ಅಶನವಸನಗಳಿಗೆ ಅನುಕೂಲವಾದರೀತಿಯಿಂದ ವ್ಯವಸ್ಥೆ ಮಾಡಬೇಕು" ಎಂದು ಆಜ್ಞಾಪಿಸಿದರು. ತದಾಜ್ಞಾನುಸಾರವಾಗಿ ಅಧ್ಯಾಪಕರನ್ನೂ ಅಧ್ಯಯನ ಮಾಡಲು ಅರ್ಹರಾದ ಕೆಲವರು ಸ್ಥಳೀಯ ವಿದ್ಯಾರ್ಥಿಗಳನ್ನೂ ಸಂಗ್ರಹಿಸಿ ಶಾ॥ 1818ನೆ ಮನ್ಮಥ ಸಂವತ್ಸರ (1895ನೇ ಇಸವಿ) ಶ್ರಾವಣ ಶುಕ್ಲಷಷ್ಠೀ ಸ್ಥಿರವಾರದಲ್ಲಿ ಶ್ರೀಶಾರದಾಂಬೆ ಯವರ ವಿಶೇಷ ಪೂಜಾದಿಗಳನ್ನು ನಡೆಸಿ ಅಮ್ಮನವರ ಪ್ರಸಾದವನ್ನು ಪಡೆದು "ಸದ್ವಿದ್ಯಾಸಂಜೀವಿನೀ" ಎಂಬ ಹೆಸರಿನಿಂದ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿ ವೇದಶಾಸ್ತ್ರಾಧ್ಯಯನವನ್ನು ಮಾಡಿಸುವುದಕ್ಕೆ ಪ್ರಾರಂಭಿಸಲಾಯಿತು.

ಶ್ರೀಗಳವರು ಶಾಸ್ತ್ರಾಧ್ಯಯನಮಾಡಿ ವ್ಯುತ್ಪನ್ನರಾಗಿದ್ದ ಕೆಲವು ಜನರಿಗೆ ಸ್ವತಃ ವೇದಾಂತಶಾಸ್ತ್ರಪ್ರವಚನಕ್ಕೆ ಪ್ರಾರಂಭಿಸಿ ಅತ್ಯುತ್ಸಾಹದಿಂದ ಬ್ರಹ್ಮಸೂತ್ರಭಾಷ್ಯ, ಉಪನಿಷದ್ಭಾಷ್ಯ, ಗೀತಾಭಾಷ್ಯಗಳೆಂಬ ಪ್ರಸ್ಥಾನತ್ರಯವನ್ನು ಮೂರು ವರ್ಷಗಳ ಕಾಲದಲ್ಲಿ ಒಂದಾವೃತ್ತಿ ಪೂರ್ತಿಯಾಗಿ ಪಾಠ ಹೇಳಿದರು. ಹೀಗೆ ವೇದಾಂತಶಾಸ್ತ್ರಗ್ರಂಥಾವಲೋಕನ, ಪ್ರವಚನಗಳಲ್ಲದೆ ಬೇರೊಂದು ಕಾರ್ಯದಲ್ಲಿ ಕಾಲವನ್ನು ಕಳೆಯಲಿಲ್ಲ. ಒಂದು ಸಮಯದಲ್ಲಿ ಶ್ರೀಗಳವರನ್ನು ಕುರಿತು ಶೃಂಗೇರಿಗೆ ದಯಮಾಡಿದ ಕೂಡಲೆ ಕೆಲವು ದಿನಗಳು ಉಂಟಾಗಿದ್ದ

ಜಾಡ್ಯಾವಸ್ಥೆಗೂ ಈಚೆಗೆ ಪ್ರತಿ ನಿಮಿಷದಲ್ಲಿಯೂ ವೃದ್ಧಿ ಹೊಂದುತ್ತಲಿರುವ ವಿದ್ಯಾಪ್ರಚಾರ ವಿಷಯವಾದ ಉತ್ಸಾಹಕ್ಕೂ ಕಾರಣವೇನೆಂದು ಈ ಲೇಖಕನು ಪ್ರಸ್ತಾಪಿಸಿದನು. ಆಗ ತಮ್ಮ ಜಾಡ್ಯಾವಸ್ಥೆಗೆ ಪ್ರಪಂಚದ ಈಗಿನ ರೀತಿಯನ್ನು ನೋಡಿದುದರಿಂದ ಉಂಟಾದ ಉದ್ವೇಗವೇ ಕಾರಣವೆಂತಲೂ, ಕಾಲಮಹಿಮೆಯಿಂದ ಉಂಟಾಗುತ್ತಲಿರುವ ಅಧರ್ಮ ಪ್ರವೃತ್ತಿಯನ್ನು ತಟ್ಟನೆ ತಡೆವುದು ಅಸಾಧ್ಯವೆಂತಲೂ, ಅದಕ್ಕೋಸ್ಕರ ಚಿಂತಿಸುವುದೂ ಬೇರೆ ವಿಧದಿಂದ ಪ್ರಯತ್ನಪಡುವುದೂ ನಿಷ್ಫಲವಾದುದೆಂತಲೂ, ಅನುಕೂಲ ಕಾಲವನ್ನು ನಿರೀಕ್ಷಿಸುತ್ತ ವೇದಶಾಸ್ತ್ರಗಳು ಲುಪ್ತವಾಗದಂತೆ ಕಾಪಾಡಿಕೊಂಡು ಈಶ್ವರ ಪ್ರಸಾದವನ್ನು ಸಂಪಾದಿಸುವುದಕ್ಕೆ ತತ್ಪೂಜಾಪ್ರಾರ್ಥನಾಧ್ಯಾನಾದಿಗಳಿಂದ ತಮ್ಮ ಕಾಲವನ್ನು ಕಳೆವುದು ಯುಕ್ತವೆಂತಲೂ ಭಾವಿಸಿ, ತಮ್ಮ ಉದ್ವೇಗವನ್ನು ಸ್ವಲ್ಪ ಸ್ವಲ್ಪವಾಗಿ ಕಡಿಮೆ ಮಾಡಿಕೊಂಡು ವೇದಶಾಸ್ತ್ರಪ್ರಚಾರದಲ್ಲಿ ಉತ್ಸಾಹಗೊಂಡದ್ದಾಗಿ ಅಪ್ಪಣೆ ಕೊಡಿಸಿದರು. ಈ ಸಮಯದಲ್ಲಿ ಶ್ರೀಗಳವರು ಶ್ರೀಶಾರದಾಂಬೆಯ ಸನ್ನಿಧಿಯಲ್ಲಿ ಪ್ರಾರ್ಥನಾರೂಪವಾಗಿ ಹೇಳಿರುವ ಎರಡು ಶ್ಲೋಕಗಳನ್ನು ಈ ಕೆಳಗೆ ಬರೆದಿದೆ. ಅವುಗಳಿಂದ ಪ್ರಪಂಚದ ವಿಷಯದಲ್ಲಿ ಶ್ರೀಗಳವರ ಮನೋವೃತ್ತಿಯು ಯಾವ ರೀತಿಯಲ್ಲಿದ್ದಿತೆಂಬ ಅಂಶವು ಸ್ಪಷ್ಟಪಡುವುದು.

ನಾಸ್ತಿಕ್ಯಬುದ್ಧಿ ಹತ ಮಾನಸವಾರಿಚಾರ್ತಾ
ತ್ಯಕ್ತಾತ್ತಕರ್ಮನಿಚಯಾನ್ಬಹುಶೋ ದ್ವಿಜಾದ್ಯಾನ್ ।
ಕೃತ್ತೋತ್ತಮಾಂಗಜತತೀನ್ವಿನಿರೀಕ್ಷ್ಯ ದುಃಖ
ವಾರ್ಧೌನಿಮಗ್ನಮಿಮಮಂಬ ಸುಖೇ ನಿಯಂಕ್ಷ್ವ ॥

ಈಶೋಽಸ್ತಿ ಜನ್ಮ ಚ ವಿಚಿತ್ರತರಂ ಹಿ ಜಂತೋಃ
ಲೋಕಾನ್ತರಂ ಚ ನಿಜಕರ್ಮಕೃತಾಂ ಸುಖಾಪಮ್ ।
ಪಾಪಾನಿ ಪಾಪಫಲದಾಶ್ಚ ತಥೈವ ಲೋಕಾ
ಇತ್ಯಂಬ ಲೋಕತತಯೇ ವಿತರಾಶುಬುದ್ಧಿಮ್ ॥

ನರಸಿಂಹವನದಲ್ಲಿ ವಾಸ

ಮೂರುವರ್ಷಗಳ ಕಾಲ ಸರ್ವದಾ ಭಾಷ್ಯಾದಿಗ್ರಂಥಪ್ರವಚನದಲ್ಲಿ ಆಸಕ್ತರಾಗಿದ್ದ ಶ್ರೀಗಳವರಿಗೆ ಏಕಾಂತವಾಸದಲ್ಲಿ ಅಭಿರುಚಿ ಹೆಚ್ಚುತ್ತಾ ಬಂದಿತು. ಈ ಅಭಿಪ್ರಾಯವು ಇವರ ಬಾಲ್ಯ ವಯಸ್ಸಿನಲ್ಲಿಯೇ ಉಂಟಾಗಿದ್ದು ಕಾರಣಾಂತರಗಳಿಂದ ಹಿಂಜರಿದಿದ್ದಂತೆ ಹಿಂದೆ ಹೇಳಿರುವುದಷ್ಟೆ! ಕೆಲವು ವರ್ಷಗಳಿಗೆ ಮೊದಲು ಶ್ರೀಮಠಕ್ಕೆ ದಕ್ಷಿಣ ದಿಕ್ಕಿನಲ್ಲಿ

ತುಂಗಾನದಿಯಿಂದ ಆಚೆ ಅರಣ್ಯವಾಗಿದ್ದು ವ್ಯಾಘ್ರಾದಿ ದುಷ್ಟಮೃಗಗಳ ವಾಸಕ್ಕೆ ಅನುಕೂಲವಾಗಿಯೂ, ಗ್ರಾಮದ ಪಶ್ವಾದಿಗಳಿಗೆ ಹಿಂಸಾಕರವಾಗಿಯೂ ಇದ್ದ ಪ್ರದೇಶವನ್ನು ಪರಿಷ್ಕರಿಸಿ ತಪೋವನವನ್ನಾಗಿ ಮಾಡಲು ಪ್ರಾರಂಭಿಸಲ್ಪಟ್ಟಿತ್ತು. ಇದಕ್ಕೆ ನರಸಿಂಹವನವೆಂದು ಶ್ರೀಗಳವರು ತಮ್ಮ ಗುರುಗಳ ಜ್ಞಾಪಕವಾದ ನಾಮಧೇಯವನ್ನು ಕೊಟ್ಟರು. ಅದುವರೆಗೆ ಆ ಪ್ರದೇಶವು ಪೂರ್ಣವಾಗಿ ಪರಿಷ್ಕರಿಸಲ್ಪಟ್ಟಿರಲಿಲ್ಲ. ಮತ್ತು ಅಲ್ಲಿ ವಾಸಯೋಗ್ಯವಾದ ಕಟ್ಟಡಗಳನ್ನೂ ಕಟ್ಟಿರಲಿಲ್ಲ. ಹಾಗಿದ್ದರೂ ಆ ವನದಲ್ಲಿ ಪರ್ಣಶಾಲೆಯನ್ನು ಕಲ್ಪಿಸಿಕೊಂಡು ವಾಸಮಾಡಬೇಕೆಂಬ ಅಭಿಪ್ರಾಯವು ಶ್ರೀಗಳವರಿಗೆ ಉಂಟಾಯಿತು. ಹೇವಿಳಂಬಿ ಸಂವತ್ಸರದ ಆಶ್ವಯುಜ ಬಹುಳ ಪಂಚಮಿಯ ಪ್ರಾತಃಕಾಲದಲ್ಲಿ ಶ್ರೀಶಾರದಾಂಬೆಯ ಉತ್ಸವಮೂರ್ತಿಯೊಡನೆ ಶ್ರೀಗಳವರು ನರಸಿಂಹವನಕ್ಕೆ ದಯಮಾಡಿಸಿದರು. ಆ ದಿನ ಮಧ್ಯಾಹ್ನ ಅಮ್ಮನವರು ಮತ್ತು ಚಂದ್ರಮೌಳೀಶ್ವರ ದೇವರುಗಳ ಪೂಜೆಯು, ತತ್ಕಾಲೋಪಯುಕ್ತವಾಗುವಂತೆ ನಿರ್ಮಿತವಾಗಿದ್ದ ಚಪ್ಪರಗಳಲ್ಲಿ ಬೆಳೆದು ಮಿತವಾಗಿ ಬ್ರಾಹ್ಮಣಭೋಜನವು ನಡೆಯಿತು. ಸಾಯಂಕಾಲ ಐದು ಗಂಟೆಗೆ ಶ್ರೀಶಾರದಾಂಬೆಯವರನ್ನು ಉತ್ತರ ತೀರದಲ್ಲಿರುವ ದೇವಸ್ಥಾನಕ್ಕೆ ತೆರಳಿಸಬಹುದೆಂದು ಅಪ್ಪಣೆಮಾಡಿ, ಚಂದ್ರಮೌಳೀಶ್ವರ ದೇವರೊಡನೆ ಶ್ರೀಗಳವರು ಆ ರಾತ್ರಿ ಮಿತಪರಿಜನಯುಕ್ತರಾಗಿ ಅಲ್ಲಿಯೇ ವಸತಿಮಾಡಿದರು. ಅದುವರೆಗೂ ಶ್ರೀಗಳವರ ಅಭಿಪ್ರಾಯವು ವ್ಯಕ್ತಪಟ್ಟಿರಲಿಲ್ಲ. ಮಾರನೆಯದಿನ ಪ್ರಾತಃಕಾಲ, ತಮಗೆ ಕೆಲವು ಕಾಲ ವಿವಿಕ್ತವಾಗಿ ವಾಸಮಾಡಬೇಕೆಂಬ ಅಭಿಪ್ರಾಯವಿರುವುದರಿಂದ, ಅದಕ್ಕೆ ಅತ್ಯಾವಶ್ಯಕವಾದ ಪರ್ಣಶಾಲೆಗಳನ್ನು ಕಲ್ಪಿಸುವಂತೆ ಈ ಲೇಖಕನಿಗೆ ಅಪ್ಪಣೆಮಾಡಿದರು. ಈ ಚರ್ಯೆಯು ಈ ಶ್ರೀಗಳವರ ಮನಃ ಪರಿಪಾಕಕ್ಕೂ ಅವರ ಆಶ್ರಮ ಧರ್ಮಕ್ಕೂ ಅನುಗುಣವಾಗಿದ್ದರೂ, ಶೃಂಗಗಿರಿ ಮಠಾಧಿಪತಿಗಳಾಗಿದ್ದ ಹಿಂದಿನ ಗುರುಗಳ ಅಭ್ಯಾಸವನ್ನೂ, ವರ್ತನವನ್ನೂ ನೋಡಿದ್ದವರಿಗೆ ಶಂಕಾವಹವಾಗಿಯೂ, ಆಶ್ಚರ್ಯಕರವಾಗಿಯೂ ಇತ್ತು. ಅಂದಿನಿಂದ ಸಂಸ್ಥಾನ ಸಂಬಂಧವಾದ ರಾಜ ಚಿಹ್ನೆಗಳೆಲ್ಲವೂ ಒಂದೊಂದಾಗಿ ಶ್ರೀಗಳವರಿಂದ ದೂರಮಾಡಲ್ಪಡುತ್ತ ಬಂದವು. ಗುರುಪರಂಪರೆಯಿಂದ ಪೂಜಿತರಾಗಿ ಬಂದಿರುವ ಚಂದ್ರಮೌಳೀಶ್ವರ ದೇವರಿಗೆ ಪೂಜೋಪಕರಣವಾಗಿ ಮಹಾರಾಜರುಗಳಿಂದಲೂ ಶಿಷ್ಯಕೋಟಿಗಳಿಂದಲೂ ಕೊಡಲ್ಪಟ್ಟಿದ್ದ ರಾಜತಸೌವರ್ಣಾದಿಪಾತ್ರ ಸಮೂಹವನ್ನೂ, ಪ್ರಯತ್ನ ಸಾಧ್ಯವಾದ ಕ್ಷೀರಾದಿ ಪೂಜಾಸಾಮಗ್ರಿಗಳನ್ನೂ ಬಿಟ್ಟು, ಕೇವಲಸಾತ್ವಿಕಭಾವದಿಂದ ಕಾಲತ್ರಯದಲ್ಲಿಯೂ ತುಂಗಾ ತೀರ್ಥದಿಂದ ಯಥೇಚ್ಛವಾಗಿ ಅಭಿಷೇಕವನ್ನು ಮಾಡಿ, ವನಜಾತವಾದ ಪತ್ರಪುಷ್ಪಾದಿಗಳಿಂದ ಪೂಜಿಸಿ, ಅನೇಕವಾದ ಶಿವಸ್ತುತಿಗಳಿಂದಲೂ, ಶಿವನಾಮ ಸಂಕೀರ್ತನೆಗಳಿಂದಲೂ ಭಜನೆಯನ್ನು ಮಾಡಲು ಪ್ರಾರಂಭಿಸಿದರು. ತಮ್ಮ

ಆಹಾರದಲ್ಲಿ ಕಟ್ವಾಮ್ಲಲವಣಾದಿ ಪದಾರ್ಥಗಳನ್ನು ವರ್ಜಿಸಿದರು. ಮಧ್ಯಾಹ್ನ ನಾಲ್ಕು ಗಂಟೆಗಳ ಮೇಲೆ ತಮ್ಮ ಪರಿಜನರಲ್ಲಿ ಯಾರಾದರೊಬ್ಬರನ್ನು ಮುಂದಿರಿಸಿಕೊಂಡು ನರಸಿಂಹವನಕ್ಕೆ ಸಮೀಪವಾದ ಅರಣ್ಯದಲ್ಲಿ ಸಂಚರಿಸುತ್ತಲೂ, ಪ್ರಶಸ್ತವಾಗಿ ತೋರಿದ ಕಡೆ ವೃಕ್ಷಮೂಲದಲ್ಲಿ ಕುಳಿತು ನಿರ್ಗುಣಧ್ಯಾನದಿಂದ ಆತ್ಮಾನಂದವನ್ನು ಅನುಭವಿಸುತ್ತಲೂ ಇದ್ದು, ಸಾಯಂಕಾಲ ಆರು ಗಂಟೆಗೆ ತಮ್ಮ ಪರ್ಣಶಾಲೆಗೆ ತಿರುಗಿ ಬರುತ್ತಿದ್ದರು. ಈ ರೀತಿಯಾಗಿ ಜನಸಮೂಹದಿಂದ ದೂರವಾಗಲು ಪ್ರಯತ್ನಮಾಡುತ್ತಲಿದ್ದರೂ, ಪ್ರಾತಃಕಾಲ ಪೂಜಾನಂತರ ಹನ್ನೊಂದು ಗಂಟೆಗಳವರೆಗೆ ಶಿಷ್ಯರಿಗೆ ಭಾಷ್ಯಪಾಠವನ್ನು ಹೇಳುವುದರಲ್ಲಿ ಔದಾಸೀನ್ಯವನ್ನು ವಹಿಸಿರಲಿಲ್ಲ.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರವರು ಶೃಂಗೇರಿಗೆ ದಯಮಾಡಿಸಿದ್ದು.

ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಪ್ರಭುಗಳವರು ಪ್ರಬುದ್ಧವಾಗಿ ರಾಜ್ಯಭಾರವನ್ನು ವಹಿಸುವುದಕ್ಕೆ ಪೂರ್ವವೇ, ದೇಶಸಂಚಾರ ಕ್ರಮದಿಂದ ಶೃಂಗೇರಿಗೆ ದಯಮಾಡಿ ಶ್ರೀಗಳವರ ಸಂದರ್ಶನವನ್ನು ತೆಗೆದುಕೊಂಡು ಅವರ ಅನುಗ್ರಹವನ್ನು ಪಡೆದು ಬರುವಂತೆ ರಾಜಮಾತೃಗಳಿಂದ ನಿಯುಕ್ತರಾಗಿರುವರೆಂದೂ, ಈ ಅಂಶವನ್ನು ಶ್ರೀಗಳವರಲ್ಲಿ ಶ್ರುತಪಡಿಸಿ ಪ್ರಭುಗಳವರ ಆಗಮನಕ್ಕೆ ಆವಶ್ಯಕವಾದ ಏರ್ಪಾಡುಗಳನ್ನು ಉಭಯಸಂಸ್ಥಾನಗಳ ಗೌರವಕ್ಕೂ ಅನುಗುಣವಾಗಿ ನಡೆಸಬೇಕೆಂದೂ ದಿವಾನ್ ಸರ್ ಕೆ. ಶೇಷಾದ್ರಯ್ಯರವರಿಂದ ಈ ಲೇಖಕನಿಗೆ ಪತ್ರಮೂಲಕವಾಗಿ ತಿಳಿಸಲ್ಪಟ್ಟಿತು. ಕೂಡಲೇ ಆ ಪತ್ರದ ಅಭಿಪ್ರಾಯವನ್ನು ಶ್ರೀಗಳವರಲ್ಲಿ ಶ್ರುತಪಡಿಸಿ, ಆ ಸಂದರ್ಭದಲ್ಲಿ ಶ್ರೀಗಳವರು ಮಠಕ್ಕೆ ದಯಮಾಡಿಸಿ ಅಲ್ಲಿಯೇ ವಸತಿಮಾಡಿ ಪ್ರಭುಗಳವರನ್ನು ಬರಮಾಡಿಕೊಳ್ಳುವುದು ಆವಶ್ಯಕವೆಂದು ಈ ಲೇಖಕನು ವಿಜ್ಞಾಪಿಸಿಕೊಂಡನು. ಆಗ ತಮ್ಮ ಪ್ರಾಣಭೂತರಾದ ಕೃಷ್ಣರಾಜ ಪ್ರಭುಗಳವರ ಆಗಮನವಾರ್ತೆಯ ಶ್ರವಣದಿಂದ ಸಂತುಷ್ಟರಾದ ಶ್ರೀಗಳವರು "ನಿಮಗೆ ವೈರಾಗ್ಯ ಸುಖವು ತಿಳಿಯದು. ಏಕಾಂತವಾಸದಿಂದ ಉಂಟಾಗತಕ್ಕ ಪ್ರಯೋಜನವನ್ನು ನೀವು ಅರಿತವರೇ ಅಲ್ಲ. ವಾಸನಾಬಲದಿಂದ ನಿಮಗೆ ರಾಜಸಮಾರ್ಗದಲ್ಲಿಯೇ ಅಭಿರುಚಿ ಹೆಚ್ಚಾಗಿರುವುದರಿಂದ ನಮ್ಮನ್ನೂ ಆ ಮಾರ್ಗದಲ್ಲಿ ವ್ಯಾಪೃತರಾಗುವಂತೆ ಮಾಡಲು ಯತ್ನಿಸುತ್ತಿರುವಿರಿ. ಒಂದು ವೇಳೆ ಗೃಹಸ್ಥರಾದ ನಿಮಗೆ ರಾಜಸಗುಣಾಶ್ರಯಣವು ಅಲಂಕಾರವಾಗಿರಬಹುದು. ಈಗಿನ ವೃತ್ತಿಯು ಈಶ್ವರಾನುಗ್ರಹ ದಿಂದ ಸ್ಥಿರವಾಗಿ ನಿಂತಲ್ಲಿ ಇದು ನಮ್ಮ ಆಶ್ರಮಕ್ಕೆ ಭೂಷಣವು. ಆದ್ದರಿಂದ ನಮ್ಮನ್ನು

ನೋಡುವುದಕ್ಕೆ ಬರುವ ಮಹಾರಾಜ ಗೌರವಕ್ಕನುರೂಪವಾಗಿ ಮಾಡಬೇಕಾದ ಏರ್ಪಾಡುಗಳೆಲ್ಲವನ್ನೂ ನಿಮಗೆ ತಿಳಿದಮಟ್ಟಿಗೆ ಸಿದ್ಧಪಡಿಸಿಕೊಂಡು ಸಂಸ್ಥಾನದ ಸಂಪ್ರದಾಯವನ್ನು ಅನುಸರಿಸಿ ಪ್ರಭುಗಳನ್ನು ಬರಮಾಡಿಕೊಳ್ಳಿರಿ, ಈ ಪರ್ಣಶಾಲೆಯಲ್ಲಿಯೇ ನಾವು ಇದ್ದುಕೊಂಡು ಪ್ರಭುಗಳನ್ನು ಅನುಗ್ರಹಿಸುವೆವು'' ಎಂದು ಅಪ್ಪಣೆ ಮಾಡಿದರು. ಪ್ರಭುಗಳವರು ತಮಗೆ ವಿದ್ಯಾಭ್ಯಾಸಮಾಡಿಸಲು ನಿಯಮಿತರಾಗಿದ್ದ ಮಿಸ್ಟರ್ ಫ್ರೇಜರ್ ಸಾಹೇಬರೊಡನೆ ಶಾ।। 1821ನೆಯ ವಿಳಂಬಿ ಸಂವತ್ಸರದ ಕಾರ್ತೀಕ ಬಹುಳ ನವಮೀ ಬುಧವಾರದಲ್ಲಿ (7-12-1898) ಶೃಂಗೇರಿಗೆ ದಯಮಾಡಿ ಸಂಸ್ಥಾನದ ಪದ್ಧತಿಯನ್ನನುಸರಿಸಿ ಮಠದ ಅಧಿಕಾರಿಗಳು ಮಾಡಿದ ಮರ್ಯಾದೆಗಳನ್ನು ಅಂಗೀಕರಿಸಿ ನಗರವನ್ನು ಪ್ರವೇಶಿಸಿದ ನಂತರ ತಮ್ಮ ಸಂಗಡ ಬಂದಿದ್ದ ಎಂಟು ಹತ್ತು ಜನ ಯೂರೋಪಿಯನ್ ಸರದಾರರೊಡನೆ ತುಂಗಾನದಿಯನ್ನು ದಾಟಿ ಶ್ರೀಗಳವರ ದರ್ಶನವನ್ನು ತೆಗೆದುಕೊಂಡು, ಸ್ವಲ್ಪಕಾಲ ಕುಶಲಪ್ರಶ್ನಾದಿ ಸಂಭಾಷಣೆಗಳು ನಡೆದ ಬಳಿಕ ಶ್ರೀಗಳವರ ಅಪ್ಪಣೆಯನ್ನು ಪಡೆದು, ನದಿಯ ಉತ್ತರ ತೀರದಲ್ಲಿ ಏರ್ಪಡಿಸಿದ್ದ ಮಠದ ಒಂದು ಭಾಗದಲ್ಲಿ ವಸತಿಮಾಡಿದರು. ಮಾರನೆಯ ದಿನ ಮಹಾ ಮಾತೃಶ್ರೀಯರವರ ಆಜ್ಞೆಗನುಸಾರವಾಗಿ ದಿವಾನ್‌ರವರು ಮಾಡಿದ್ದ ವ್ಯವಸ್ಥೆಯಂತೆ ಪ್ರಭುಗಳವರ ಶ್ರೇಯಸ್ಸಿಗಾಗಿ ಶೃಂಗಗಿರಿ ಕ್ಷೇತ್ರದಲ್ಲಿರುವ ಎಲ್ಲಾ ದೇವಸ್ಥಾನಗಳಲ್ಲಿಯೂ ಪೂಜಾನಿವೇದನಾದಿ ದೇವತಾ ಸೇವೆಗಳು ವಿಸ್ತಾರವಾಗಿ ನಡೆಯಲ್ಪಟ್ಟವು. ಬ್ರಾಹ್ಮಣ ಸುವಾಸಿನಿಯರ ಸಂತರ್ಪಣೆಯು ಪ್ರಬಲವಾಗಿ ನಡೆದು ಭೂರಿದಕ್ಷಿಣೆಯು ಕೊಡಲ್ಪಟ್ಟಿತು. ಪ್ರಾತಃಕಾಲದಲ್ಲಿ ಪ್ರಭುಗಳವರು ಶ್ರೀಗಳವರ ಪಾದಪೂಜೆಯನ್ನು ಮಾಡಿ, ಅವರಿಂದ ಅನುಗ್ರಹಿಸಲ್ಪಟ್ಟ ಸರ್ವರಕ್ಷಾಕರವಾದ ಯಂತ್ರವನ್ನು ಧರಿಸಿ, ತೀರ್ಥ ಪ್ರಸಾದಗಳನ್ನು ಪಡೆದು, ತಮ್ಮ ಬಿಡಾರಕ್ಕೆ ದಯಮಾಡಿಸಿದರು. ಪ್ರಭುಗಳವರೊಡನೆ ಬಂದಿದ್ದ ಮಿ।। ಫ್ರೇಜರ್ ಸಾಹೇಬರವರಿಗೆ ಸಹೃದಾವೃತ್ತಿ ಮೊದಲ ದಿನ ಶ್ರೀಗಳವರನ್ನು ನೋಡಿದ ಮಾತ್ರದಿಂದ ಇವರ ವಿಷಯದಲ್ಲಿ ಉಂಟಾದ ಗೌರವಬುದ್ಧಿಯು ಶ್ರೀಗಳವರನ್ನು ಏಕಾಂತವಾಗಿ ನೋಡಿ ಇವರೊಡನೆ ಸಾವಕಾಶವಾಗಿ ಸಂಭಾಷಣೆ ಮಾಡಬೇಕೆಂಬ ಕುತೂಹಲವನ್ನುಂಟುಮಾಡಿತು. ತಮ್ಮ ಈ ಅಭಿಪ್ರಾಯವನ್ನು ಶ್ರೀಮಠದ ಅಧಿಕಾರಿಗಳ ಮೂಲಕ ಶ್ರೀಗಳವರ ಶ್ರುತಿ ಗೋಚರವಾಗುವಂತೆ ಮಾಡಿದರು. ಶ್ರೀಗಳವರ ಅನುಮತಿಯಿಂದ ಆ ದಿನ ಮಧ್ಯಾಹ್ನ ನಾಲ್ಕು ಗಂಟೆಗೆ ಶ್ರೀಗಳವರ ದರ್ಶನಕ್ಕೆ ಬರಬಹುದೆಂದು ಸಾಹೇಬರಿಗೆ ತಿಳಿಸಲ್ಪಟ್ಟಿತು. ಕ್ಲುಪ್ತಕಾಲಕ್ಕೆ ಸರಿಯಾಗಿ ಬಂದ ಆ ಸರದಾರರು ಸಾಧಾರಣವಾದ ಕಾವಿಯ ಬಟ್ಟೆಗಳನ್ನು ಧರಿಸಿ ವಿಭೂತಿ ರುದ್ರಾಕ್ಷಿಗಳಿಂದ ಅಲಂಕೃತರಾಗಿ ಕೇವಲ ಸಾತ್ವಿಕಭಾವದಿಂದ ಇದ್ದ ಶ್ರೀಗಳವರನ್ನು ನೋಡಿದ ಆ ಸರದಾರರಿಗೆ ಶ್ರೀಗಳವರ

ವಿಷಯದಲ್ಲಿ ಮೊದಲುಂಟಾಗಿದ್ದ ಗೌರವ ಬುದ್ಧಿಯು ಆ ಸಮಯದಲ್ಲಿ ಇಮ್ಮಡಿಯಾಗಿ ಹೆಚ್ಚಿತು. ಮಧ್ಯಾಹ್ನ ನಾಲ್ಕು ಗಂಟೆಗಳಿಂದ ರಾತ್ರಿ ಎಂಟೂಕಾಲು ಗಂಟೆಯವರೆಗೆ ಸಾಹೇಬರು ಶ್ರೀಗಳವರನ್ನು ಬಿಟ್ಟು ಹೊರಡಲಿಲ್ಲ. ಶ್ರೀಗಳವರಿಗೆ ಇಂಗ್ಲೀಷ್ ಭಾಷಾಪರಿಚಯವಿರಲಿಲ್ಲವಷ್ಟೆ? ಅದರಂತೆ ಸಾಹೇಬರಿಗೂ ದೇಶೀಯ ಭಾಷಾಭ್ಯಾಸವಿರಲಿಲ್ಲ. ಆದರೂ, ಶ್ರೀಗಳವರ ಭಾಷಣವನ್ನು ಪರಿವರ್ತನೆಮಾಡಿ ಹೇಳುವುದರಿಂದ ತಿಳಿದುಕೊಂಡು ಸಾಹೇಬರು ಪರಮಾಶ್ಚರ್ಯಭರಿತರಾಗಿ ಅವರ ಸಮೀಪದಲ್ಲಿ ನಾಲ್ಕು ಗಂಟೆಗಳಿಗಿಂತಲೂ ಹೆಚ್ಚಾದ ಕಾಲವನ್ನು ಅತ್ಯಾನಂದವಾಗಿ ಕಳೆದರು. ಸಾಧಾರಣವಾಗಿ ಒಂದು ನಿಮಿಷ ಕಾಲವನ್ನಾದರೂ ವ್ಯರ್ಥವಾಗಿ ಕಳೆಯದೆ ಸರ್ವದಾ ಲೋಕವ್ಯಾಪಾರದಲ್ಲಿ ನಿರತರಾಗಿರತಕ್ಕ ಸ್ವಭಾವವುಳ್ಳ ಯುರೋಪಿಯನ್ ಜನರು ಲೋಕವ್ಯಾಪಾರವನ್ನು ದೂರಮಾಡಿ ಅರಣ್ಯದಲ್ಲಿದ್ದ ಸ್ವಾಮಿಗಳವರ ಸಮೀಪದಲ್ಲಿ ಸಾವಧಾನವಾಗಿ ಅಷ್ಟು ಕಾಲ ಕಳೆವಂತೆ ಅವರ ಮನಸ್ಸನ್ನು ಆಕರ್ಷಿಸಿದ ಶ್ರೀಗಳವರ ಪ್ರಭಾವವೆಂಥಾದ್ದೋ? ಗುಣಾಢ್ಯದಲ್ಲಿರತಕ್ಕ ಗುಣಗಳನ್ನು ತಟ್ಟನೆ ಗ್ರಹಿಸಿ ಅಭಿನಂದಿಸುವುದರಲ್ಲಿ ಆ ಸರದಾರರಿಗೆ ಇದ್ದ ಸಾಮರ್ಥ್ಯವೆಂಥಾದ್ದೋ? ಎಂಬೀ ಅಂಶವನ್ನು ತಿಳಿಯಲು ಸಮೀಪವರ್ತಿಗಳಿಗೆ ಸಾಧ್ಯವಾಗಿರಲಿಲ್ಲ. ಆ ಸಾಹೇಬರಿಗೆ ಶ್ರೀಗಳವರ ವಿಷಯದಲ್ಲಿ ಯಾವ ವಿಧವಾದ ಅಭಿಪ್ರಾಯವುಂಟಾಗಿತ್ತೆಂಬ ಅಂಶವನ್ನು ತಿಳಿಸುವುದಕ್ಕೆ ಆ ದೊಡ್ಡಮನುಷ್ಯರು ಬರೆದಿರುವ ಲೇಖನಗಳಲ್ಲಿ ಒಂದು ಲೇಖನದ ಭಾಗವನ್ನು ತರ್ಜುಮೆಮಾಡಿ ಈ ಕೆಳಗೆ ಬರೆದಿದೆ.

ಪರಿಶುದ್ಧಾತ್ಮರೇ, ಮೈಸೂರು, 9 ಆಗಸ್ಟ್ 1902,

ಸ್ವಾಮಿಯವರು ದಯೆಯಿಂದ ಏಜಂಟರ ಮೂಲಕವಾಗಿ ನನಗೆ ಕಳುಹಿದ ಶ್ರೀಮುಖವನ್ನೂ ಪ್ರಸಾದವನ್ನೂ ಸ್ವಾಮಿಗಳವರ ಪರಮಾನುಗ್ರಹವಾಗಿ ಭಾವಿಸುತ್ತೇನೆ. ಈ ಪ್ರಸಾದವು ಯಾವಾಗಲೂ ನನಗೆ ಶೃಂಗೇರಿಯ ಮತ್ತು ಸ್ವಾಮಿಗಳವರ ಜ್ಞಾಪಕವಾಗಿರುವಂತೆ ಇದನ್ನು ನಾನು ಸಂರಕ್ಷಿಸಿಕೊಂಡಿರುವೆನು. ದಕ್ಷಿಣ ಇಂಡಿಯಾದಲ್ಲೆಲ್ಲಾ ಪಾಂಡಿತ್ಯದಿಂದ ಪ್ರಖ್ಯಾತಿಯನ್ನು ಪಡೆದಿರುವಂತೆ ದಯಾರಸ ಸೌಜನ್ಯಗಳಿಂದಲೂ ವಿಶೇಷ ವಿಖ್ಯಾತಿಯನ್ನು ಪಡೆದಿರುವ ಸ್ವಾಮಿಗಳವರ ಸಂದರ್ಶನವು ನನಗೆ ಎರಡುಸಾರಿ ಲಭಿಸಿದ್ದು ನನ್ನ ಪುಣ್ಯೋದಯವೆಂದು ಎಣಿಸುತ್ತೇನೆ.

ಮಹಾರಾಜರಿಗೆ ಉಂಟಾಗಿರುವ ವಿದ್ಯಾವಿನಯ ರೀತಿಯನ್ನು ಸದ್ಗುಣ ಪ್ರಜ್ಞಾದಿಗಳಿಂದ ಪೂರ್ಣರಾದ ಶ್ರೀಗಳವರು ಒಪ್ಪಿರುವುದು ನನಗೆ ಬಹಳ ತೃಪ್ತಿಯನ್ನುಂಟುಮಾಡಿದೆ. ಮಹಾರಾಜರಿಗೆ ತಮ್ಮ ದೇಶದಲ್ಲಿ ಮಮತೆಯೂ ತಮ್ಮ ದೇಶದ ಸ್ವರೂಪ

ವಿಶೇಷಜ್ಞಾನವೂ ಉಂಟಾಗುವುದಕ್ಕೆ ತಕ್ಕ ವ್ಯವಸಾಯವು ನಡೆದಿರುವುದರಿಂದ ಇವರು ಭಗವದನುಗ್ರಹದಿಂದ ತಮ್ಮ ರಾಜಕಾರ್ಯನಿರ್ವಾಹಕ್ಕೆ ತಕ್ಕಂತೆ ಶಕ್ತರಾಗುವರು. ಇದಲ್ಲದೆ ಈ ಚಿಕ್ಕವಯಸ್ಸಿನಲ್ಲಿಯೇ ಸದ್ಗುಣವೂ ವ್ಯವಸ್ಥೆಯೂ ಉಳ್ಳವರಾಗಿರುವುದರಿಂದ ಮುಂದಕ್ಕೆ ಮಹಾಪುರುಷ ಗುಣಗಳಿಂದಲೂ ಮಹಾರಾಜಾನುರೂಪ ವ್ಯವಹಾರಗಳಿಂದಲೂ ಕೀರ್ತಿಯನ್ನು ಸಂಪಾದಿಸುವರು ಎಂದು ನಂಬುತ್ತೇನೆ. ಯಾವ ಮತದವನಿಗೇ ಆಗಲಿ, ಸದ್ಗುಣವೂ ಸೌಜನ್ಯವೂ ಭಗವಂತನಿಂದ ಬರುವುವು. ಯಾವ ಸರ್ವಶಕ್ತ ಚೈತನ್ಯವನ್ನು ಶ್ರೀಗಳವರೂ ನಾನೂ ಆರಾಧಿಸುತ್ತೇವೆಯೋ, ಆ ಪರಮಾತ್ಮನ ಅನುಗ್ರಹಕ್ಕೆ ಮಹಾರಾಜರು ಪಾತ್ರರಾಗಿರಲಿ ಎಂದು ಕೋರುತ್ತೇನೆ.

ಈ ಮಹಾರಾಜರಿಗೆ ಉತ್ಕೃಷ್ಟಫಲಪ್ರಾಪ್ತಿಯಾಗುವಂತೆ ಸ್ವಾಮಿಗಳವರ ಅನುಗ್ರಹವು ಯಾವಾಗಲೂ ಪ್ರಸರಿಸುತ್ತಿರುವುದೆಂದು ನಾನು ಬಲ್ಲೆನು. ಅದಕ್ಕೆ ತಕ್ಕಂತೆ ಮಹಾರಾಜರಿಗೆ ಸ್ವಾಮಿಯವರ ವಿಷಯದಲ್ಲಿರುವ ಮಹಾಭಕ್ತಿಯನ್ನು ನೋಡಿ ನಾನು ಸಂತೋಷಿಸುತ್ತೇನೆ. ಘನತೆಹೊಂದಿದ ವೈಸ್‌ರಾಯಿಯವರೇ ವಿಶೇಷ ಮರ್ಯಾದೆಯೊಡನೆ ಮಹಾರಾಜರಿಗೆ ನಿನ್ನೆಯದಿನ ರಾಜ್ಯಭಾರವನ್ನು ವಹಿಸಿದರೆಂದು ಕೇಳಿ ಶ್ರೀಗಳವರ ಚಿತ್ತಕ್ಕೆ ಬಹಳ ಆನಂದವಾಗಬಹುದು. ಮಹಾರಾಜರವರ ರಾಜ್ಯಭಾರವಹನವು ಹೇಗೆ ಮಂಗಳಕರವಾಗಿ ಪ್ರಾರಂಭಿಸಿರುವುದೋ ಹಾಗೆಯೇ ಮುಂದಕ್ಕೂ ಮಂಗಳಕರವಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

★ ★ ★

ಈ ದಿನದ ರಾತ್ರಿ ಯುರೋಪಿಯನ್ ಸರದಾರರುಗಳ ಔತಣಕ್ಕೆ ಏರ್ಪಾಡು ಮಾಡಲ್ಪಟ್ಟಿತ್ತು. ಈ ಕಾರ್ಯವನ್ನು ಲೋಪವಿಲ್ಲದ ರೀತಿಯಿಂದ ನಡೆಸಲು, ಆಗ ಕಡೂರು ಡಿಸ್ಟ್ರಿಕ್ಟಿನಲ್ಲಿ ಡೆಪ್ಯೂಟಿ ಕಮೀಷನರಾಗಿದ್ದ ಮಿಸ್ಟರ್ ಕಾರ್ ಸಾಹೇಬರ ಕುಟುಂಬವು ತಮ್ಮ ದರ್ಶನಕ್ಕೆ ಬಂದಿದ್ದ ಕಾಲದಲ್ಲಿ ಶ್ರೀಗಳವರಿಂದಲೇ ಕೋರಲ್ಪಟ್ಟಿದ್ದರು. ಅದರಂತೆ ಅವರ ವಿಚಾರಣೆಯಿಂದ ನಡೆಸಲ್ಪಟ್ಟ ಔತಣದಲ್ಲಿ ಅಲ್ಲಿಗೆ ಬಂದಿದ್ದ ಸರದಾರರುಗಳೆಲ್ಲರೂ ಭೋಜನ ಮಾಡಿ ತುಂಗಾನದಿಯಲ್ಲಿ ನಡೆಯಲು ನಿಷ್ಕರ್ಷೆಯಾಗಿದ್ದ ಶ್ರೀ ಶಾರದಾಂಬೆಯವರ ತೆಪ್ಪದುತ್ಸವವನ್ನು ನೋಡಲು ಬಂದರು. ಪ್ರಭುಗಳವರೂ ಶ್ರೀ ಸ್ವಾಮಿಗಳವರೂ ದಯಮಾಡಿ ನದೀತೀರದಲ್ಲಿ ಪೀಠಗಳನ್ನಲಂಕರಿಸಿದ್ದರು. ಉತ್ಸವವು ರಾತ್ರಿ ಸುಮಾರು ಎರಡು ಗಂಟೆಗಳವರೆಗೆ ನಡೆಯಿತು. ಬಂದಿದ್ದ ಸರದಾರರುಗಳೆಲ್ಲರೂ ಬಹಳ ಸಂತೋಷಪಟ್ಟರು. ಶ್ರೀಗಳವರು ಮಾಡಿಸಿದ ಆತಿಥ್ಯಕ್ಕೂ, ನೇತ್ರಾನಂದಕರವಾಗಿ ನಡೆಸಿದ ಉತ್ಸವಕ್ಕೂ ತಮ್ಮ

ಪರವಾಗಿಯೂ ಇತರರ ಪರವಾಗಿಯೂ ಮಿಸ್ಟರ್ ಫ್ರೇಜರ್ ಸಾಹೇಬರವರು ಶ್ರೀಗಳವರಿಗೆ ವಂದನೆಗಳನ್ನು ಸಮರ್ಪಿಸಿದರು. ಬಳಿಕ ಎಲ್ಲರೂ ಅಪ್ಪಣೆ ಪಡೆದು ಬಿಡಾರಗಳಿಗೆ ಹೊರಟರು. ಶ್ರೀಮನ್ಮಹಾಪ್ರಭುಗಳವರಿಗೂ ಅನುಗ್ರಹ ಮಾಡಿ ಅವರನ್ನು ಬಿಡಾರಕ್ಕೆ ಕಳುಹಿಸಿಕೊಟ್ಟು, ಶ್ರೀಗಳವರು ತಮ್ಮ ಆಶ್ರಮಕ್ಕೆ ಚಿತ್ತೈಸಿದರು. ಮರುದಿನ ಪ್ರಾತಃಕಾಲ ಪ್ರಭುಗಳವರು ಮತ್ತೆ ಶ್ರೀಗಳವರ ಆಶ್ರಮಕ್ಕೆ ದಯಮಾಡಿ, ಶ್ರೀಗಳವರ ಸನ್ನಿಧಿಯಲ್ಲಿ ಸಂಸ್ಥಾನದ ಪಂಡಿತರುಗಳಿಗೆ ಬಹುಮಾನವನ್ನು ಕೊಡಿಸಿ, ಶ್ರೀಗಳವರಿಂದ ಫಲಮಂತ್ರಾಕ್ಷತೆಗಳನ್ನು ಪಡೆದು, ಶೃಂಗೇರಿಯಲ್ಲಿಯೇ ಆರೋಗಣೆಯನ್ನು ತೀರಿಸಿಕೊಂಡು ಮುಂದಕ್ಕೆ ಪ್ರಯಾಣ ಬೆಳೆಸಿದರು. ಅತ್ಯಂತ ಸಾತ್ವಿಕ ವೃತ್ತಿಯನ್ನು ಅವಲಂಬಿಸಿದ್ದ ಶ್ರೀಗಳವರಿಗೆ ಮೇಲಿನ ಸಂದರ್ಭದಿಂದ ಎಷ್ಟು ಮಾತ್ರವೂ ಚಿತ್ತಚಾಂಚಲ್ಯವುಂಟಾಗಲಿಲ್ಲವು. ಅದೇ ಜೀವನ್ಮುಕ್ತರ ಲಕ್ಷಣವೆಂದು ಶಾಸ್ತ್ರದಲ್ಲಿ ಹೇಳಿರುವುದು. ಆ ಲಕ್ಷಣವು ಈ ಮಹನೀಯರಲ್ಲಿ ಸಂಪೂರ್ಣವಾಗಿದ್ದಂತೆ ಇವರಲ್ಲಿ ಛಾಯಾನುವರ್ತನ ಮಾಡಿ ಅನೇಕ ವರ್ಷಗಳು ಅನೇಕ ಸಂದರ್ಭಗಳನ್ನು ನೋಡಿ ನೋಡಿ ಅನುಭವಿಸಿರತಕ್ಕ ಈ ಲೇಖಕನು ನಿರರ್ಗಳವಾಗಿ ಹೇಳಬಲ್ಲನು.

ಶ್ರೀಗಳವರ ಸ್ವಭಾವ ಗುಣಗಳು.

ಈ ಯೋಗಿವರ್ಯರ ಭೂತದಯೆಯು ಅದೃಷ್ಟ ಪೂರ್ವವಾಗಿಯೂ, ಅಶ್ರುತ ಪೂರ್ವವಾಗಿಯೂ ಇದ್ದಿತು. ಇವರಿಗೆ ಪ್ರಾಣಿ ಸಾಮಾನ್ಯದಲ್ಲಿಯೂ ದಯೆಯು ಒಂದೇ ವಿಧವಾಗಿತ್ತು. ಯಾವ ಪ್ರಾಣಿಯಾದರೂ ದುಃಖಪಡುವುದನ್ನು ನೋಡಲಾರರು. ಸಂಚಾರದ ಕಾಲದಲ್ಲಿ ಪಾದಗಳನ್ನು ಭೂಮಿಯಲ್ಲಿಡುವುದರಿಂದ ಯಾವ ಕ್ರಿಮಿಕೀಟಾದಿಗಳಿಗೆ ಹಿಂಸೆಯಾಗುವುದೋ ಎಂಬ ಭೀತಿಯಿಂದ ಅತಿ ಜಾಗರೂಕರಾಗಿ ಪಾದನ್ಯಾಸವನ್ನು ಮಾಡುತ್ತಲಿದ್ದರು. ಆರ್ತರಾದ ಜನರು ಶ್ರೀಗಳವರಲ್ಲಿ ಬಂದು ಅವರವರ ದುಃಖವನ್ನು ತಿಳಿಸಿಕೊಳ್ಳುವಾಗ ಶ್ರೀಗಳವರ ಮುಖದಲ್ಲಿ ಉಂಟಾಗುತ್ತಲಿದ್ದ ವಿಕಾರಭಾವವನ್ನು ನೋಡಿದರೆ ತಮ್ಮಲ್ಲಿಗೆ ಬಂದವರ ಕಷ್ಟಗಳನ್ನು ತಾವು ವಹಿಸಿಕೊಂಡು ಅನುಭವಿಸುವರೋ ಎಂಬಂತೆ ತೋರುತ್ತಿತ್ತು. ತಮ್ಮ ಪರಿಜನರಲ್ಲಿ ಪ್ರತಿಯೊಬ್ಬರನ್ನೂ ಕರೆದು ಅವರುಗಳೆಲ್ಲರೂ ಭೋಜನ ಮಾಡಿದರೋ ಇಲ್ಲವೋ ಎಂಬ ವಿಚಾರವನ್ನು ಒಂದು ದಿನವಾದರೂ ಮಾಡದೆ ಇರುತ್ತಿರಲಿಲ್ಲ. ಯಾವುದಾದರೂ ಒಂದು ಅಸಂದರ್ಭದಿಂದ ಯಾರಿಗಾದರೂ ಭೋಜನಕ್ಕೆ ಅನನುಕೂಲವುಂಟಾದುದೆಂದು ತಿಳಿದು ಬಂದಲ್ಲಿ, ಎಂತಹ ಸಮಯವಾಗಿದ್ದರೂ ಅವರ ಆಹಾರಕ್ಕೆ ಅನುಕೂಲ ಪಡಿಸುತ್ತಿದ್ದರು. ತಮ್ಮ ದರ್ಶನಕ್ಕೆಂದು ಶೃಂಗೇರಿಗೆ ಬರುವ

ಸಂನ್ಯಾಸಿಗಳು, ವಿರಕ್ತರು, ಗೋಸಾಯಿಗಳು, ರೋಗಿಗಳು, ವಯಸ್ಸಾದ ಜನರು ಮುಂತಾದವರು ತಮ್ಮ ದೃಷ್ಟಿಗೆ ಒಂದು ಸಾರಿ ಗೋಚರರಾದೊಡನೆ ಅವರ ವಾಸಸ್ಥಳಕ್ಕೂ ಅವರ ಆಹಾರಕ್ಕೂ ನಡೆದಿರುವ ವ್ಯವಸ್ಥೆಯನ್ನು ತಮ್ಮ ಸಮೀಪ ವರ್ತಿಗಳಿಂದ ವಿಚಾರಿಸಿ ತಿಳಿದುಕೊಂಡು ನ್ಯೂನಾತಿರೇಕಗಳಿದ್ದಲ್ಲಿ ಸಂಸ್ಥಾನದ ಕೆಲಸಕ್ಕೆ ಎಷ್ಟು ಸಿಬ್ಬಂದಿಗಳನ್ನಿಟ್ಟಿದ್ದರೂ, ಅಧಿಕಾರಿಗಳೆಷ್ಟು ಜನರಿದ್ದರೂ ಯಾರಲ್ಲಿಯೂ ಆ ವಿಷಯವಾಗಿ ಅಸಮಾಧಾನವನ್ನು ತೋರಿಸದೆ, ಆವಶ್ಯಕವಾದ ಅನುಕೂಲಗಳನ್ನು ಸ್ವತಃ ಉಂಟುಮಾಡತಕ್ಕ ಸ್ವಭಾವವು ಶ್ರೀಗಳವರನ್ನು ನಿಶ್ಚಲಭಾವದಿಂದ ಆಶ್ರಯಿಸಿತ್ತು. ಶ್ರೀಗಳವರಲ್ಲಿ ನೋಡಿದ ಒಂದು ಆಶ್ಚರ್ಯಚರಿತವನ್ನು ಈ ಸಂದರ್ಭದಲ್ಲಿ ವ್ಯಕ್ತಗೊಳಿಸುವುದು ಆವಶ್ಯಕವು. ತಂಜಾವೂರು ಜಿಲ್ಲಾ ಶಾತನೂರು ಸ್ಥಳದ ಸುಬ್ರಹ್ಮಣ್ಯಶಾಸ್ತ್ರಿ ಎಂಬವರು ಬಹಳ ವರ್ಷಗಳ ಕಾಲ ಶ್ರೀಮಠದಲ್ಲಿ ಸರ್ವಾಧಿಕಾರಿಯಾಗಿದ್ದರು. ಇವರು ವಯಸ್ಸಾದ ನಂತರ ಕೆಲಸದಿಂದ ನಿವೃತ್ತರಾದರೂ ಶ್ರೀಗಳವರ ಸನ್ನಿಧಿಯಲ್ಲಿಯೇ ಇರುತ್ತಿದ್ದರು. ಇವರ ಅನುಕೂಲ್ಯಕ್ಕೆ ಶ್ರೀಮಠದಿಂದಲೇ ಸಿಬ್ಬಂದಿಗಳನ್ನು ನೇಮಿಸಿ, ಆಹಾರಕ್ಕೆ ಬೇಕಾದ ಅನುಕೂಲವನ್ನೂ ಮಾಡಿತ್ತು. ಈ ಶಾಸ್ತ್ರಿಗಳು ಒಳ್ಳೇ ಪಂಡಿತರಾಗಿದ್ದರೂ ಇವರಲ್ಲಿ ಶಾಂತಸ್ವಭಾವವಿರಲಿಲ್ಲ. ಸುಲಭಕೋಪರಾಗಿದ್ದರು. ಈ ಕಾರಣದಿಂದ ಈ ಶಾಸ್ತ್ರಿಗಳ ಸೇವೆಗಾಗಿ ನೇಮಿಸಲ್ಪಡುವ ಜನರು ಎಷ್ಟು ಸಮಾಧಾನವುಳ್ಳವರಾದರೂ ದೀರ್ಘಕಾಲ ಇವರಲ್ಲಿ ನಿಲ್ಲುತ್ತಿರಲಿಲ್ಲ. ಹೀಗಿದ್ದರೂ ಒಬ್ಬ ಬ್ರಾಹ್ಮಣನು ಇವರ ಸ್ವಭಾವವನ್ನು ಚೆನ್ನಾಗಿ ತಿಳಿದವನಾಗಿ, ಇವರ ಕೋಪವನ್ನು ಸಹಿಸಿಕೊಂಡು ಕೆಲವು ವರ್ಷಗಳಿಂದ ಸೇವೆಯನ್ನು ಮಾಡುತ್ತಲಿದ್ದನು. ಒಂದು ಸಮಯದಲ್ಲಿ ಶಾಸ್ತ್ರಿಗಳು ಅನಾರೋಗ್ಯದಿಂದ ಮಲಗಿದ್ದರು. ಆಗಲೂ ಆ ಪರಿಚಾರಕನು ಜಿಹಾಸೆಯಿಲ್ಲದೆ ಶುಶ್ರೂಷೆ ಮಾಡುತ್ತಲೇ ಇದ್ದನು. ಹಾಗಿದ್ದರೂ ಶಾಸ್ತ್ರಿಗಳು ತಮಗುಂಟಾಗಿದ್ದ ಅಶಕ್ತಿಯಿಂದಲೂ ಸ್ವಭಾವದಿಂದಲೂ ಒಂದು ದಿನ ಆ ಪರಿಚಾರಕನ ಮೇಲೆ ಕೋಪಗೊಂಡು, ಆ ಮನುಷ್ಯನು ಶ್ರಮಪಟ್ಟು ಅಭ್ಯಾಸ ಮಾಡಿದ್ದ ಸಹನಗುಣವನ್ನು ಕೂಡ ಹೋಗಲಾಡಿಸಿದರು. ಈ ಕಾರಣದಿಂದ ಆ ಪರಿಚಾರಕನು ಬಹಳ ಬೇಸರಗೊಂಡು ಆ ದಿನ ಇವರಿಗೆ ಸೇವೆಯನ್ನು ಮಾಡದೆಯೂ, ಆಹಾರವನ್ನು ಕೊಡದೆಯೂ ಉದಾಸೀನನಾದನು. ಈ ಸಂಗತಿಯು ಇತರರಿಗೆ ಯಾರಿಗೂ ತಿಳಿಯಲಿಲ್ಲ. ರೋಗದಿಂದಲೂ ಹಸಿವಿನಿಂದಲೂ ಆರ್ತರಾದ ಶಾಸ್ತ್ರಿಗಳು ಸಾಯಂಕಾಲ 5 ಗಂಟೆಗಳವರೆಗೆ ನಿರೀಕ್ಷಿಸಿ, ಆಗಲೂ ತಮ್ಮ ಸ್ವಭಾವದಿಂದ ತಮಗೆ ಅನನುಕೂಲವುಂಟಾಗಿರುವುದೆಂಬುದನ್ನು ಯೋಚಿಸಿ ಸಮಾಧಾನವನ್ನು ತಂದುಕೊಳ್ಳದೆ, ತಮ್ಮ ಕ್ರೋಧವನ್ನೇ ಮುಂದಿರಿಸಿಕೊಂಡು, ಸ್ವತಂತ್ರರಾಗಿ ಎದ್ದು ಸಂಚರಿಸಲು ಶಕ್ತಿಯಿಲ್ಲದವರಾಗಿದ್ದರೂ, ಪ್ರಯಾಸದಿಂದ ಶ್ರೀಗಳವರು ಇದ್ದಲ್ಲಿಗೆ ಬಂದು ನಮಸ್ಕಾರ

ಮಾಡಿ, ಅತಿ ದೀನಸ್ವರದಿಂದ ತನಗೆ ಆಹಾರವಿಲ್ಲದೆ ಸಾಯುವ ಕಾಲವು ಬಂದಿತೆಂದು ತಿಳಿಸಿಕೊಂಡರು. ಇಷ್ಟು ಮಾತ್ರದಿಂದ ಶ್ರೀಗಳವರ ಮನಸ್ಸು ಅಲ್ಲಕಲ್ಲೋಲವಾಗಿ ಕಲಕಿತು. ಶ್ರೀಗಳವರ ಹೃದಯದಲ್ಲಿ ಉಂಟಾದ ಆರ್ದ್ರಭಾವದಿಂದ ಕಣ್ಣುಗಳಲ್ಲಿ ನೀರುತುಂಬಿತು. ಶರೀರವೆಲ್ಲಾ ಗಡಗಡನೆ ನಡುಗತೊಡಗಿತು. ಅತಿ ದೀನರಾಗಿ ತಮ್ಮ ಎದುರಿನಲ್ಲಿ ನಿಂತಿದ್ದ ಶಾಸ್ತ್ರಿಗಳನ್ನು ಅತಿ ಕರುಣೆಯಿಂದ ಸಮಾಧಾನ ಪಡಿಸುತ್ತಲಿದ್ದ ಹಾಗೆಯೇ ಶ್ರೀಗಳವರು ಕುಳಿತಿದ್ದ ಸ್ಥಳದಿಂದ ಎದ್ದು ಅತಿವೇಗಗತಿಯಿಂದ ಪಾಕಶಾಲಾ ಮಾರ್ಗವನ್ನು ಹಿಡಿದು ಹೊರಟರು. ಆಗ ಆ ಲೇಖಕನು ಶ್ರೀಗಳವರ ಉದ್ದೇಶ್ಯವನ್ನು ಅರಿಯದೆ ಹಿಂದೆಯೇ ಓಡಿದನು. ಪಾಕಶಾಲಾ ಸಮೀಪಕ್ಕೆ ಹೋಗುವಷ್ಟರಲ್ಲಿ, ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ ಅವರ ಪರಿಚಾರಕನ ಲೋಪದಿಂದ ಆ ದಿನ ಆಹಾರವಿಲ್ಲದೆ ಅವರು ದುಃಖ ಪಡುವಂತಾದುದರಿಂದ ಆ ಪರಿಚಾರಕನನ್ನು ಮಠದಿಂದ ಹೊರಗೆ ಹೊರಡಿಸುವುದಕ್ಕೆ ಶ್ರೀಗಳವರು ಹೊರಟಂತೆ ಈ ಲೇಖಕನಿಗೆ ಗೋಚರವಾಯಿತು. ಆಗ ಆ ಪರಿಚಾರಕನು ಶ್ರೀಗಳವರ ದೃಷ್ಟಿಗೆ ಬೀಳೋಣವು ಯುಕ್ತವಲ್ಲವೆಂದು ಭಾವಿಸಿ, ಈ ಲೇಖಕನು ಪಾಕಶಾಲಾ ಸಮೀಪದಲ್ಲಿದ್ದ ಆ ಮನುಷ್ಯನು ಮರೆಯಾಗುವಂತೆ ನೇತ್ರಸಂಜ್ಞೆ ಮಾಡಿದನು. ಅತಿವೇಗದಿಂದ ಪಾಕಶಾಲೆಯ ಸಮೀಪದವರೆಗೆ ಬಂದ ಶ್ರೀಗಳವರ ದೃಷ್ಟಿಗೆ ಶಾಸ್ತ್ರಿಗಳ ಪರಿಚಾರಕನು ಗೋಚರನಾಗದಿರಲು, ಶ್ರೀಗಳವರು ಶಾಂತರಾಗಿ ಹಿಂತಿರುಗಿ ಒಂದು ಸ್ಥಳದಲ್ಲಿ ಕುಳಿತುಕೊಂಡರು. ಆಗ ಅದುವರೆಗೆ ಸುಮಾರು 8-10 ನಿಮಿಷಗಳ ಕಾಲದಲ್ಲಿ ನಡೆದ ನಡೆವಳಿಕೆಯೊಂದೂ ಅವರಿಗೆ ತಿಳಿದಿದ್ದಂತೆಯೇ ತೋರಲಿಲ್ಲ. ಈ ಲೇಖಕನು ಕೇವಲ ಭಯಭಕ್ತಿಗಳಿಂದ ನಡೆದ ಸಂಗತಿಗಳನ್ನು ತಿಳಿಸಿ, ಅತ್ಯಲ್ಪ ಮನುಷ್ಯನ ವಿಷಯದಲ್ಲಿ ಶ್ರೀಗಳವರಿಗೆ ಇಷ್ಟು ಆಗ್ರಹವುಂಟಾಗಬಹುದೇ ? ಎಂದು ಪ್ರಶ್ನೆ ಮಾಡಲು, ಶ್ರೀಗಳವರು ಬಹಳ ಸಂಕೋಚದಿಂದ ''ರೋಗಾರ್ತರಾಗಿಯೂ, ವರ್ಯಃಕ್ರಮದಿಂದ ಅಶಕ್ತರಾಗಿಯೂ ಇರುವ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಸಾಯಂಕಾಲ 5 ಗಂಟೆಗಳಾದರೂ ಆಹಾರಕ್ಕೆ ಮಾರ್ಗವಿಲ್ಲದಂತಾದ ಸಂದರ್ಭವನ್ನು ಅವರ ದೀನಭಾವದಿಂದ ತಿಳಿದ ಕೂಡಲೇ ತಮ್ಮ ಹೃದಯಕ್ಕೆ ಉಂಟಾದ ಉದ್ವೇಗದಿಂದ ಯಾವುದೊಂದೂ ತೋರದಂತಾಯಿತು'' ಎಂದು ಅಪ್ಪಣೆ ಕೊಡಿಸಿದರು. ಪರಮ ಶಾಂತರಾಗಿಯೂ, ಮಹಾಪ್ರಾಜ್ಞರಾಗಿಯೂ, ಸಂಸ್ಥಾನಾಧಿಪತಿಗಳಾಗಿಯೂ ಇದ್ದ ಸ್ವಾಮಿಗಳವರಿಗೆ ಸಾಮಾನ್ಯನಾದ ಒಬ್ಬ ಪರಿಚಾರಕನನ್ನು ಮಠದಿಂದ ಹೊರಗೆ ಕಳುಹಿಸಲು ತಾವಿದ್ದ ಸ್ಥಳದಿಂದ ಪರಿಚಾರಕನಿದ್ದಲ್ಲಿಗೆ ಹೋಗುವಷ್ಟು ಯತ್ನವನ್ನು ಮಾಡಬೇಕಾಗಿಲ್ಲವೆಂಬ ವಿಷಯವು ತಿಳಿದಿರಲಿಲ್ಲವೇ ? ಅಥವಾ ಆ ಮನುಷ್ಯನನ್ನು ಆ ಕ್ಷಣದಲ್ಲಿ ಹೊರಗೆ ಕಳುಹಿಸಿದ್ದರಿಂದ ಶಾಸ್ತ್ರಿಗಳ ಕ್ಷುದ್ಬಾಧೆಯನ್ನು ಅಡಗಿಸಿದಂತಾಗುವುದಿಲ್ಲವೆಂಬುದನ್ನು ತಿಳಿಯಲು

ಸಾಮರ್ಥ್ಯವಿರಲಿಲ್ಲವೇ ? ಅನಂತರದಲ್ಲಿಯಾದರೂ ಅಪರಾಧಿಯಾಗಿದ್ದ ಆ ಪರಿಚಾರಕನನ್ನು ಮಠದಿಂದ ಹೊರಗೆ ಕಳುಹಿಸಿದರೋ ? ಅದೇ ದಿನ ಆ ಮನುಷ್ಯನೇ ಶಾಸ್ತ್ರಿಗಳಿಗೆ ಆಹಾರವನ್ನು ಕೊಟ್ಟು ಶುಶ್ರೂಷೆ ಮಾಡಲಿಲ್ಲವೋ ? ಮುಖ್ಯವಾಗಿ ಈ ಮಹನೀಯರಲ್ಲಿದ್ದ ಕಾರುಣ್ಯವು ಈ ರೀತಿಯಿಂದ ಪ್ರಕಾಶವಾಯಿತೇ ಹೊರತು ಬೇರೆಯಲ್ಲವು.

ಮತ್ತೊಂದು ಸಂದರ್ಭದಲ್ಲಿ ಈ ಸ್ವಾಮಿಗಳ ಅಪೂರ್ವವಾದ ಆರ್ದ್ರಹೃದಯತ್ವವು ಪ್ರಕಟವಾದುದು ಹೇಗೆಂದರೆ - 1907ನೆಯ ಇಸವಿಯಲ್ಲಿ ಶ್ರೀಗಳವರು ಯಾತ್ರಾಕ್ರಮದಿಂದ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿದ್ದರು. ಅಲ್ಲಿಯ ಶಿಷ್ಯ ಜನರು ಬಹಳ ವಿಭವದಿಂದ ಶ್ರೀಗಳವರನ್ನು ಬಂಗಾರದ ಪಾಲಕಿಯಲ್ಲಿ ಆರೋಹಣ ಮಾಡಿಸಿ ಶ್ರೀರಂಗಪಟ್ಟಣದ ಕೋಟೆಯ ನಾಲ್ಕು ಬೀದಿಗಳಲ್ಲಿಯೂ ಮೆರವಣಿಗೆಯನ್ನು ಮಾಡಿಸಿದರು. ಆಗ ಪಾಲಕಿಯಲ್ಲಿ ದಯಮಾಡಿಸಿದ್ದ ಸ್ವಾಮಿಗಳವರ ಮುಖವು ವಿವರ್ಣವಾಗಿ, ಕಣ್ಣುಗಳಿಂದ ಬಾಷ್ಪಕಣಗಳು ಬೀಳತೊಡಗಿದುವು. ಇದರ ಕಾರಣವನ್ನು ಕುರಿತು ಆ ಸಂದರ್ಭದಲ್ಲಿ ಯಾರೊಬ್ಬರೂ ಕೇಳಿ ತಿಳಿದುಕೊಳ್ಳುವಂತಿರಲಿಲ್ಲ. ಶ್ರೀಗಳವರ ಚಿಂತೆಗೆ ಸರಿಯಾದ ಕಾರಣವು ತಿಳಿಯದೆ ಪ್ರತಿಯೊಬ್ಬರೂ ಭ್ರಾಂತರಾಗಿ ಶ್ರೀಗಳವರನ್ನು ನೋಡುವಂತಾಗಿತ್ತು. ಉತ್ಸವಪೂರ್ತಿಯಾಗಿ ವಾಸಸ್ಥಾನವನ್ನು ಸೇರಿದ ಬಳಿಕ ಪ್ರಸ್ತಾಪಿಸಲು, ಶ್ರೀಗಳವರು ''ಹಿಂದೆ ಈ ಶ್ರೀರಂಗಪಟ್ಟಣದಲ್ಲಿ ಮಹಾಪರಾಕ್ರಮಶಾಲಿಯಾಗಿ ಸಕಲರಾಜಭೋಗಗಳನ್ನು ಅನುಭವಿಸುತ್ತಲಿದ್ದ ಟಿಪ್ಪೂಸುಲ್ತಾನರ ಸ್ಮರಣೆ ಬಂದಿತು. ಅಂಥಾ ಪರಾಕ್ರಮಶಾಲಿಯು ಶತ್ರುಗಳ ಹಸ್ತಗತನಾಗಿ ತನ್ನ ಸಂಪತ್ತನ್ನೂ ಪ್ರಾಣಗಳನ್ನೂ ಕಳೆದುಕೊಂಡನಲ್ಲಾ ಎಂಬುದಾಗಿ ಮನಸ್ಸು ವಿಕಾರವನ್ನು ಹೊಂದಿದ್ದೇ ಬಾಷ್ಪಸೇಕಕ್ಕೆ ಕಾರಣ'' ಎಂದು ಅಪ್ಪಣೆ ಕೊಡಿಸಿದರು. ಟಿಪ್ಪುಸುಲ್ತಾನರ ಚರಿತ್ರೆಯನ್ನು ಶ್ರೀಗಳವರು ತಿಳಿದಿರಲಿಲ್ಲವೇ ? ಆತನಿಗೆ ಹಿಂದೂಮತದ ವಿಷಯದಲ್ಲಿದ್ದ ಮಮತೆಯ ರೀತಿಯನ್ನು ಕೇಳಿರಲಿಲ್ಲವೇ ? ಮೈಸೂರು ರಾಜ್ಯವು ಆತನ ಅಧೀನವಾದ ವಿಧಾನವನ್ನು ವಿಚಾರಿಸಿರಲಿಲ್ಲವೇ ? ಇದರಿಂದ ಇವರಲ್ಲಿದ್ದ ಭೂತಕಾರುಣ್ಯವೆಂಬ ಸರ್ವೋತ್ತಮವಾದ ಗುಣವು ಮನುಷ್ಯರ ಗುಣದೋಷ ವಿಚಾರದಿಂದ ಪ್ರವರ್ತಿಸುತ್ತಿರಲಿಲ್ಲವೆಂದು ಮಾತ್ರ ಹೇಳಬೇಕಾಗಿ ಬರುವುದು. ಇದು ಹಾಗಿರಲಿ. ರಾಮಕಥೆಯು ಯಾವುದೋ ಒಂದು ಯುಗದಲ್ಲಿ ನಡೆದಂತೆ ತಿಳಿದು ಬರುವುದು. ಆ ಕಥೆಯನ್ನು ತಿಳಿಸುವ ರಾಮಾಯಣವನ್ನು ಓದತಕ್ಕ ಕಾಲದಲ್ಲಿ, ಪರಮ ಧಾರ್ಮಿಕನಾದ ರಾಮಚಂದ್ರನಿಗೆ ಕಷ್ಟಪ್ರಾಪ್ತಿಯಾದಂತೆ ಹೇಳುವ ಪ್ರಕರಣವನ್ನು ಓದುವಾಗ್ಗೆ ವ್ಯಸನವೂ, ಆತನಿಗೆ ಜಯವೂ ಸಂತೋಷವೂ ಉಂಟಾದುದನ್ನು ತಿಳಿಸುವ ಪ್ರಕರಣವನ್ನು ಓದುವಾಗ್ಗೆ ಸಂತೋಷವೂ ಸಾಮಾನ್ಯವಾಗಿ ಆಸ್ತಿಕ ಜನರಿಗೆ ತೋರುವುದು ಸ್ವಭಾವವಷ್ಟೆ ? ಪರಮ ದುಷ್ಟನಾದ ರಾವಣಾಸುರನು

ತನಗೆ ಆಪ್ತರಾದವರು ಹೇಳಿದ ಹಿತೋಕ್ತಿಗಳನ್ನು ಕೇಳದೆ, ಅನೇಕ ಸಂದರ್ಭಗಳಲ್ಲಿ ರಾಮನ ಪರಾಕ್ರಮವನ್ನೂ ಆತನಿಗಿದ್ದ ದೈವ ಬಲವನ್ನೂ ತಿಳಿದು ತಿಳಿದೂ ಮೂರ್ಖನಾಗಿ ರಾಮನನ್ನು ಎದುರಿಸಿ ಯುದ್ಧಕ್ಕೆ ಹೊರಡುವ ಪ್ರಕರಣಗಳನ್ನು ಓದುವಾಗಲೂ, ತನಗೆ ಅಪಜಯ ವುಂಟಾದಾಗ ಆತನು ಬಹುವಿಧವಾಗಿ ಪ್ರಲಾಪ ಮಾಡಿದ ಪ್ರಕರಣವನ್ನು ಓದುವಾಗಲೂ ಶ್ರೀಗಳವರು ಕಣ್ಣೀರನ್ನು ಸುರಿಸುತ್ತ ವ್ಯಸನ ಮಾಡುತ್ತಲಿದ್ದರು. ಈ ವ್ಯಸನವು ರಾವಣಾಸುರನಲ್ಲಿದ್ದ ಗುಣಕ್ಕೋಸ್ಕರವೋ? ಶ್ರೀ ಸ್ವಾಮಿಗಳವರಲ್ಲಿದ್ದ ಕಾರುಣ್ಯದ ಫಲವೋ? ವಿಚಾರ ಪರರಾದವರೇ ತಿಳಿದುಕೊಳ್ಳಬಹುದು.

ಶ್ರೀಗಳವರಲ್ಲಿದ್ದ ಸಮತ್ವ ಬುದ್ಧಿಯು ವಿಸ್ಮಯನೀಯವಾಗಿತ್ತು. ಜನಗಳ ಮತಪ್ರಭೇದದಿಂದಲಾಗಲಿ, ಜಾತಿವ್ಯತ್ಯಾಸದಿಂದಲಾಗಲಿ, ವಯಃ ಪ್ರಯುಕ್ತವಾದ ನ್ಯೂನಾಧಿಕಭಾವದಿಂದಲಾಗಲಿ, ಐಶ್ವರ್ಯ ದಾರಿದ್ರ್ಯಗಳಿಂದ ಇರಬಹುದಾದ ತಾರತಮ್ಯ ದಿಂದಾಗಲಿ, ಶ್ರೀಗಳವರಿಗೆ ಯಾವ ಸಂದರ್ಭದಲ್ಲಿಯೂ ಭೇದ ಬುದ್ಧಿಯುಂಟಾಗುತ್ತಿರಲಿಲ್ಲ. ಈ ಗುಣವು "ಸಮೋಹಂ ಸರ್ವಭೂತೇಷು ನ ಮೇ ದ್ವೇಷ್ಯೋऽಸ್ತಿ ನ ಪ್ರಿಯಃ" ಎಂಬುದಾಗಿ ಹೇಳಿರುವ ಭಗವಂತನಿಗೂ, ಅದ್ವೈತ ಸಿದ್ಧಾಂತರೀತಿಯಿಂದ ಭಗವಂತನ ಸಾಯುಜ್ಯವನ್ನು ಪಡೆಯತಕ್ಕ ಜ್ಞಾನಿಗಳಿಗೂ ಇರುತ್ತದೆಯೇ ಹೊರತು ಅನ್ಯರಿಗೆ ಇರುವುದಿಲ್ಲವು. ಶ್ರೀಗಳವರಲ್ಲಿ ಈ ಮಹಾಗುಣವು ಸಂಪೂರ್ಣವಾಗಿದ್ದಿತೆಂಬ ವಿಷಯದಲ್ಲಿ ಇವರ ಸ್ವರೂಪವನ್ನು ವಿಶೇಷವಾಗಿ ಅರಿಯದವರು ಯಾರಾದರೂ ಶಂಕಿಸಬಹುದಲ್ಲದೆ, ಜೀವನ್ಮುಕ್ತದಶೆಯಲ್ಲಿದ್ದ ಈ ಗುರುಗಳನ್ನು ಅಸಕೃದಾವೃತ್ತಿ ನೋಡಿದವರನೇಕರಿಗೆ ಸಂಶಯವಿರಲಾರದು. ಹಿಂದೂದೇಶದಲ್ಲಿ ವೈದಿಕಮತಗಳೆಂದು ಪ್ರಸಿದ್ಧವಾಗಿರುವ ದ್ವೈತ, ವಿಶಿಷ್ಟಾದ್ವೈತ, ಅದ್ವೈತಗಳೆಂಬ ಮೂರು ಮತಗಳಲ್ಲಿ ಯಾವುದಾದರೊಂದನ್ನು ಅವಲಂಬಿಸಿದವರು ತಮ್ಮ ತಮ್ಮ ಮತದಲ್ಲಿಯೂ ಮತಾಚಾರ್ಯರುಗಳಲ್ಲಿಯೂ ಹೆಚ್ಚಾದ ನಂಬಿಕೆ ಮತ್ತು ಗೌರವವುಳ್ಳವರಾಗಿದ್ದರೂ, ಶ್ರೀಗಳವರನ್ನು ಸಾಮಾನ್ಯರೆಂದು ಯಾರೊಬ್ಬರೂ ಭಾವಿಸಿರಲಿಲ್ಲವು. ದ್ವೈತಿ, ವಿಶಿಷ್ಟಾದ್ವೈತಿಗಳಲ್ಲನೇಕರು ಶ್ರೀ ಸ್ವಾಮಿಗಳ ಸನ್ನಿಧಾನದಲ್ಲಿಯೇ ಇದ್ದುಕೊಂಡು ಶಾಸ್ತ್ರಾಭ್ಯಾಸಂಗವನ್ನು ಮಾಡಿದರು. ಮತ್ತು ಅನೇಕರು ಶ್ರೀಗಳವರಿಂದ ಹಿತೋಪದೇಶಗಳನ್ನು ಪಡೆದು ಸನ್ಮಾರ್ಗ ಪ್ರವೃತ್ತರಾಗಿರುವರು. ಕೆಲವರು ಇವರಿಂದ ಮಂತ್ರೋಪದೇಶವನ್ನೂ ಹೊಂದಿರುವರು. ಇವರು ತಮ್ಮಲ್ಲಿಗೆ ಬಂದವರನ್ನು ಸರ್ವ ಪ್ರಕಾರದಿಂದಲೂ ಅವರವರು ಪರಂಪರೆಯಾಗಿ ಅವಲಂಬಿಸಿಕರತಕ್ಕ ಮತವನ್ನೇ ಸರ್ವೋತ್ತಮವೆಂದು ನಂಬಿ ಅದರಲ್ಲಿಯೇ ಶ್ರೇಯಸ್ಸನ್ನು ಪಡೆವಂತೆ, ಶಾಸ್ತ್ರವಾದದಿಂದಲೂ, ಯುಕ್ತಿವಾದದಿಂದಲೂ, ತೃಪ್ತಿಪಡಿಸುತ್ತಲಿದ್ದರು. ಈಚೆಗೆ 1907ನೆಯ ಮತ್ತು 1911ನೆಯ

ಇಸವಿಗಳಲ್ಲಿ ಶ್ರೀಗಳವರು ಸಂಚಾರಕ್ರಮದಿಂದ ಮೈಸೂರು ರಾಜಧಾನಿಗೂ, ಬೆಂಗಳೂರು ಡಿಸ್ಟ್ರಿಕ್ಟಿನ ಚನ್ನಪಟ್ಟಣಕ್ಕೂ, ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಅನೇಕಸ್ಥಳಗಳಿಗೂ ದಯ ಮಾಡಿಸಿದ್ದರಷ್ಟೆ? ಆ ಕಾಲದಲ್ಲೆ ಮಹಮ್ಮದ್ ಮತಸ್ಥರು ಶ್ರೀಗಳವರ ವಿಷಯದಲ್ಲಿ ತೋರ್ಪಡಿಸಿದ ಗೌರವ ವಿಶ್ವಾಸಗಳ ರೀತಿಯನ್ನು ತಿಳಿಯಬೇಕಾದರೆ, ಆ ಪಂಗಡದವರು ಶ್ರೀಗಳವರಲ್ಲಿ ಒಪ್ಪಿಸಿರುವ ಸ್ವಾಗತಾಭಿಶಂಸನಪತ್ರಗಳು ಆದರ್ಶಪ್ರಾಯವಾಗಿರುವುವು. ಶ್ರೀಗಳವರಲ್ಲಿ ಸಮತಾ ಬುದ್ಧಿಯೊಂದಿಲ್ಲದಿರುವ ಪಕ್ಷದಲ್ಲಿ, ಯಾವ ವಿಧವಾಗಿಯೂ ಸಂಬಂಧವಿಲ್ಲದ ಮಹಮ್ಮದೀಯರಿಗೆ ಹೇಗೆ ಪ್ರೀತಿ ಗೌರವಗಳುಂಟಾಗುತ್ತಲಿದ್ದುವು? ಶ್ರೀಗಳವರು ಮೈಸೂರು ರಾಜಧಾನಿಯಲ್ಲಿ ವಸತಿಮಾಡಿದ್ದಾಗ ಒಂದು ದಿನ ಸಾಯಂಕಾಲ 5 ಗಂಟೆಗೆ ಸಮಯದಲ್ಲಿ ಮೈಸೂರು ಪಟ್ಟಣದ ಮಹಮ್ಮದೀಯರಲ್ಲಿ ಗೌರವಸ್ಥರಾಗಿಯೂ, ಕುಲೀನರಾಗಿಯೂ, ವಿದ್ಯಾವಂತರಾಗಿಯೂ ಇರುವ ಕೆಲವುಜನ ದೊಡ್ಡ ಮನುಷ್ಯರು ಬಂದರು. ಆ ಸಮಯದಲ್ಲಿ ಶ್ರೀಗಳವರು ಸಂಸ್ಕೃತಪಾಠಶಾಲೆಯ ಉಪ್ಪರಿಗೆಯ ಮೇಲಣ ಒಂದು ಸಣ್ಣ ಕೊಠಡಿಯಲ್ಲಿ ದಯಮಾಡಿಸಿದ್ದರು. ಆ ಜನರು ತಮ್ಮ ದರ್ಶನಕ್ಕೆಂದು ಬಂದಿರುವುದಾಗಿ ತಿಳಿದು, ಶ್ರೀಗಳವರು ತಾವು ಇದ್ದಲ್ಲಿಗೇ ಅವರು ಬರುವಂತೆ ಅವಕಾಶವನ್ನು ಕೊಟ್ಟರು. ಆ ಸ್ಥಳವು ಬಹಳ ಸಂಕುಚಿತವಾಗಿಯೂ ಬಂದ ಜನರ ಸಂಖ್ಯೆಯು ಹೆಚ್ಚಾಗಿಯೂ ಇತ್ತು. ಶ್ರೀಗಳವರ ಮನಸ್ಸು ಮಾತ್ರ ಬಹಳ ವಿಸ್ತಾರವಾಗಿದ್ದುದರಿಂದ ಬಂದವರನ್ನೆಲ್ಲಾ ಬಹಳ ಆದರದಿಂದ ಒಳಕ್ಕೆ ಕರೆದು ತಮ್ಮ ಸಮೀಪದಲ್ಲಿ ನಾಲ್ಕು ಕಡೆಗಳಲ್ಲಿಯೂ ತಮ್ಮನ್ನು ಆವರಿಸಿಕುಳ್ಳಿರುವಂತೆ ಅನುಮತಿಯನ್ನು ಕೊಟ್ಟರು. ಆಗ ಬಂದವರನ್ನು ಕುಶಲಪ್ರಶ್ನೆಗಳಿಂದ ಆದರಿಸಿ ಮತಗಳಲ್ಲಿರುವ ತತ್ವವನ್ನೂ, ಮತಭೇದಗಳಿಗೆ ಉಂಟಾಗಿರತಕ್ಕ ಕಾರಣಗಳನ್ನೂ ವಿಸ್ತರಿಸಿ ಅವರುಗಳಿಗೆ ಹೇಳತೊಡಗಿದರು. ಯುಕ್ತಿ ಯುಕ್ತವಾಗಿಯೂ ಸುಲಭ ರೀತಿ ಯಿಂದಲೂ ಉಪನ್ಯಾಸ ಮಾಡುತ್ತಲಿದ್ದ ಸೂಕ್ಷ್ಮ ವಿಷಯಗಳನ್ನು ಗ್ರಹಿಸಿ ಆನಂದಪಡುತ್ತಿದ್ದ ಆ ಜನರನ್ನು ನೋಡಿ ಶ್ರೀಗಳವರಿಗೆ ಆನಂದವೂ ಉತ್ಸಾಹವೂ ಹೆಚ್ಚಿತು. ಆ ಉತ್ಸಾಹದಲ್ಲಿ ಇವರ ಶರೀರದ ಮೇಲಿದ್ದ ವಸ್ತ್ರವೂ ಜರುಗಿ ಕೆಳಗೆ ಬಿದ್ದಿತು. ಹಾಗೆ ಮಹಮ್ಮದೀಯರ ಮಧ್ಯದಲ್ಲಿ ಕುಳಿತುಕೊಂಡು, ಸದುಪದೇಶವನ್ನು ಮಾಡುತ್ತಲಿದ್ದ ಸ್ವಾಮಿಗಳವರನ್ನು ನೋಡಿದವರಿಗೂ ಅವರ ಉಪದೇಶವನ್ನು ಕೇಳಿದವರಿಗೂ, ಶ್ರೀಗಳವರ ವಿಷಯದಲ್ಲಿ ಯಾವ ಭಾವನೆಯುಂಟಾಗಿದ್ದಿತೆಂಬ ಅಂಶವು ಅನುಭವೈಕ. ವೇದ್ಯವಾಗಿತ್ತು. ಸಮತ್ವ ಬುದ್ಧಿಯಿಲ್ಲದವರಲ್ಲಿ ಈ ಚರ್ಯೆಯು ಎಲ್ಲಿಂದ ಬರಬಹುದು? ತಮ್ಮ ಸಮೀಪಕ್ಕೆ ಬರುವ ಪಂಡಿತರನ್ನೂ, ಯೋಗಿಗಳನ್ನೂ, ಜ್ಞಾನಿಗಳನ್ನೂ, ಪ್ರೀತಿಸುವುದೂ ಅವರುಗಳೊಡನೆ ಸಾವಕಾಶವಾಗಿ ಸಂಭಾಷಿಸುವುದೂ ಇವರಿಗೆ ಸಹಜವಾಗಿಯೇ ಇದ್ದುದಷ್ಟೆ? ಪ್ರಪಂಚ

ಜ್ಞಾನವೇ ಇಲ್ಲದ ಬಾಲಕರು ತಮ್ಮಲ್ಲಿಗೆ ಬರಲು, ಸ್ವಲ್ಪವೂ ಔದಾಸೀನ್ಯ ತಿರಸ್ಕಾರಭಾವಗಳಿಲ್ಲದೆ, ಆ ಬಾಲಕರ ವಯಸ್ಸಿಗೂ ಜ್ಞಾನಕ್ಕೂ ಅನುಸಾರವಾಗಿ ಅವರೊಡನೆ ಎಷ್ಟು ಹೊತ್ತಿನವರೆಗಾದರೂ ಸಂಭಾಷಣೆ ಮಾಡುತ್ತ, ಅವರಿಗೆ ಸವಿಯಾದ ಫಲಗಳನ್ನೂ ಇತರ ಪದಾರ್ಥಗಳನ್ನೂ ತರಿಸಿಕೊಟ್ಟು ಅವರುಗಳನ್ನು ಸಂತೋಷಪಡಿಸಿ, ತಾವೂ ಸಂತೋಷಿಸುತ್ತಲಿದ್ದರು. ಈ ವರ್ತನವು ಇತರಾಸಾಧಾರಣವು. ಶ್ರೀಗಳವರು ಶ್ರೀಶಂಕರಭಗವತ್ಪಾದಾಚಾರ್ಯ ಪರಂಪರಾಗತವಾಗಿಯೂ, ಮಹಾಪಂಡಿತರಾಗಿಯೂ, ಶುದ್ಧಚಾರಿತ್ರ್ಯವುಳ್ಳವರಾಗಿಯೂ, ಜಗದ್ವಿಖ್ಯಾತರಾಗಿಯೂ, ಸಂಸ್ಥಾನಾಧಿಪತಿಗಳಾಗಿಯೂ ಇದ್ದುದರಿಂದ, ಇವರ ದರ್ಶನಕ್ಕೂ, ಇವರ ಅನುಗ್ರಹ ಮತ್ತು ಉಪದೇಶಗಳನ್ನು ಪಡೆಯುವುದಕ್ಕೂ, ಭರತಖಂಡದ ಮಹಾರಾಜರುಗಳಲ್ಲನೇಕರು ಬರುತ್ತಲಿದ್ದರು. ಅವರಂತೆ ಆರ್ತರಾಗಿಯೂ, ಜಿಜ್ಞಾಸುಗಳಾಗಿಯೂ, ಅರ್ಥಾರ್ಥಿಗಳಾಗಿಯೂ ಬಹು ಜನರು ಬರುತ್ತಿದ್ದರು. ಅಪರಿಮಿತವಾದ ತಮ್ಮ ದ್ರವ್ಯವನ್ನು ಶ್ರೀಗಳವರಲ್ಲಿ ಅರ್ಪಿಸಿ, ಅವರ ಪ್ರಸಾದವನ್ನು ಸಂಪಾದಿಸುವುದಕ್ಕೆ ಅಸಂಖ್ಯಾತರಾಗಿ ಧನಿಕ ಜನರೂ ಬರುತ್ತಲಿದ್ದರು. ಮಹಾರಾಜರ ವಿಷಯದಲ್ಲಿ ಒಂದು ವಿಧವಾಗಿಯೂ, ಧನಾಢ್ಯರ ವಿಷಯದಲ್ಲಿ ಮತ್ತೊಂದು ರೀತಿಯಾಗಿಯೂ, ದರಿದ್ರರ ವಿಷಯದಲ್ಲಿ ಬೇರೊಂದು ಪ್ರಕಾರವಾಗಿಯೂ, ಶ್ರೀಗಳವರಿಗೆ ಆದರವೂ ಪ್ರೀತಿಯೂ ಇದ್ದಂತಾಗಲಿ, ಯಾವ ಸಂದರ್ಭದಲ್ಲಿಯಾದರೂ ಇವರು ಭೇದಭಾವವನ್ನು ಪ್ರಕಟಗೊಳಿಸಿದಂತಾಗಲಿ, ಬಹು ದೀರ್ಘಕಾಲ ಅನುಸ್ಯೂತವಾಗಿ ಇವರ ಸನ್ನಿಧಿಯಲ್ಲಿ ವಾಸಮಾಡಿದ ಈ ಲೇಖಕನ ಅನುಭವಕ್ಕೆ ಬಂದಿಲ್ಲವು. ಈ ಸ್ವಾಮಿಗಳ ಸಮತ್ವಬುದ್ಧಿಯನ್ನು ತಿಳಿದುಕೊಳ್ಳುವುದಕ್ಕೆ ಬೇರೊಂದು ಕಾರಣ ಸಾಮಗ್ರಿಯೇ ಆವಶ್ಯಕವಾಗಿಲ್ಲವು. ಈ ಪೂಜ್ಯರ ದರ್ಶನವನ್ನು ಅನೇಕ ಲಕ್ಷ ಜನರು ಮಾಡಿರುವರಷ್ಟೆ? ಒಂದುಸಾರಿ ಇವರ ದರ್ಶನವನ್ನು ಮಾಡಿದ ಆಬಾಲ ವೃದ್ಧರೂ ಶ್ರೀಗಳವರಿಗೆ ತಮ್ಮಲ್ಲಿದ್ದ ಪ್ರೀತಿಯೂ ಅನುಗ್ರಹವೂ ಮತ್ತಾರಲ್ಲಿಯೂ ಇರಲಿಲ್ಲವೆಂದು ಶ್ರೀಗಳವರ ಜೀವಿತಕಾಲದಲ್ಲಿ ಹೇಳುತ್ತಿದ್ದರಲ್ಲದೆ ಅನಂತರ ಈಗ ಇವರ ಸ್ಮರಣೆ ಬರತಕ್ಕ ಸಮಯಗಳಲ್ಲಿಯೂ ಪ್ರತಿಯೊಬ್ಬರೂ ಹೇಳುತ್ತಲಿರುವುದು ಸರ್ವಜನವಿದಿತವಾಗಿಯೇ ಇದೆ. ಶ್ರೀಗಳವರ ಭಾವವು ಜನಗಳು ತಿಳಿದುಕೊಂಡಿದ್ದ ರೀತಿಯಲ್ಲಿ ಇಲ್ಲದಿದ್ದರೆ, ಇವರ ದರ್ಶನಮಾಡಿದ ಪ್ರತಿಯೊಬ್ಬನ ಮನಸ್ಸಿನಲ್ಲಿಯೂ ಮೇಲೆ ಹೇಳಿದ ಭಾವವು ಹುಟ್ಟಲು ಕಾರಣವಿಲ್ಲ. ಶ್ರೀಗಳವರ ಭಾವವು ಜನಗಳು ತಿಳಿದುಕೊಂಡಿದ್ದ ಪ್ರಕಾರ ಇರಬೇಕಾಗಿದ್ದರೆ ಸಮತಾಬುದ್ಧಿಯು ಇವರಲ್ಲಿಲ್ಲದ ಪಕ್ಷದಲ್ಲಿ ಅದು ಸಾಧ್ಯವಾಗಿರಲಿಲ್ಲ. ಆದ್ದರಿಂದ ಈ ಒಂದು ಕಾರಣದಿಂದಲೇ ಇವರು ಮಹಾಜ್ಞಾನಿಗಳೆಂತಲೂ ಸರ್ವಸಮರೆಂತಲೂ ಏರ್ಪಡುವುದು.

ಶ್ರೀಗಳವರಿಗಿದ್ದ ದೈವಭಕ್ತಿಯು ಪರಮೋತ್ಕರ್ಷವನ್ನು ಪಡೆದುದಾಗಿತ್ತು. ಭಕ್ತಿಯು ಮೋಕ್ಷಪ್ರಾಪ್ತಿಗೆ ಒಂದು ಮುಖ್ಯಕಾರಣವೆಂದು ಆಚಾರ್ಯಭಗವತ್ಪಾದರವರು - ''ಮೋಕ್ಷಕಾರಣಸಾಮಗ್ರ್ಯಾಂ ಭಕ್ತಿರೇವ ಗರೀಯಸೀ'' ಎಂದು ವಿವೇಕ ಚೂಡಾಮಣಿಯಲ್ಲಿ ಅಪ್ಪಣೆಕೊಡಿಸಿರುವರು. ಭಕ್ತಿಯು ಸಾಮಾನ್ಯಭಕ್ತಿ, ಪರಾಭಕ್ತಿ ಎಂದು ಎರಡು ವಿಧವಾಗಿ ಹೇಳಲ್ಪಟ್ಟಿದೆ. ಸಾಮಾನ್ಯಭಕ್ತಿಯು ಪರಾಭಕ್ತಿಯನ್ನುಂಟುಮಾಡುವುದರಲ್ಲಿ ಸಾಧನವಾಗಿದ್ದುಕೊಂಡು ಪರಂಪರೆಯಾಗಿ ಮೋಕ್ಷ ಕಾರಣವಾಗುವುದು. ಪರಾಭಕ್ತಿಯು ಬಹುಮಟ್ಟಿಗೆ ಜ್ಞಾನದಲ್ಲಿಯೇ ಪರ್ಯವಸಾಯಿಯಾಗಿ ಮೋಕ್ಷಕ್ಕೆ ಸಾಕ್ಷಾತ್ಕಾರಣವೆನಿಸಿಕೊಳ್ಳುವುದು. ಸಾಮಾನ್ಯಭಕ್ತಿ ಎಂದರೆ ಭಗವಂತನು ಉಪಾಸ್ಯನೆಂದೂ ತಾನು ಉಪಾಸಕನೆಂದೂ ತಿಳಿದು ಭೇದ ಬುದ್ಧಿಯಿಂದ ಭಜಿಸುವುದು. ಭಗವನ್ಮೂರ್ತಿಗಳ ದರ್ಶನ, ಪೂಜೆ, ನಮಸ್ಕಾರ, ಉತ್ಸವಗಳು, ಸ್ತೋತ್ರಮಾಡುವುದು, ಕಥಾಶ್ರವಣ ಇವು ಮೊದಲಾದ ಸತ್ಕರ್ಮಾಚರಣೆಗಳು ಸಾಮಾನ್ಯಭಕ್ತಿಯ ಕ್ರಮವು. ಪರಾಭಕ್ತಿ ಎಂದರೆ ಜೀವಬ್ರಹ್ಮರ ಅಭೇದ ಬುದ್ಧಿಯಿಂದ ಉಪಾಸನೆಮಾಡುವುದು. ಮೊದಲು ಭೇದಬುದ್ಧಿಯಿಂದ ಬ್ರಹ್ಮೋಪಾಸನೆಯನ್ನು ಮಾಡಿದಲ್ಲದೆ ಅಭೇದೋಪಾಸನೆಯು ಸಾಧ್ಯವಲ್ಲ. ಭಕ್ತಿ ಎಂದರೆ ಪ್ರೀತಿವಿಶೇಷವು. ಪರಿಜನರ ವಿಷಯದಲ್ಲಿಯೂ ವಯಸ್ಸಿನಿಂದ ಚಿಕ್ಕವರಾದವರ ವಿಷಯದಲ್ಲಿಯೂ ಇರತಕ್ಕ ಪ್ರೀತಿಯನ್ನು ವಾತ್ಸಲ್ಯವೆಂದು ಹೇಳುವರು. ಸಮಾನ ವಯಸ್ಕರ ವಿಷಯದಲ್ಲಿರತಕ್ಕ ಪ್ರೀತಿಯು ಸ್ನೇಹವೆಂದು ವ್ಯವಹರಿಸಲ್ಪಡುವುದು. ಗುರು ದೇವತಾ ವಿಷಯಕವಾದ ಪ್ರೀತಿಯನ್ನು ಭಕ್ತಿಯೆಂದು ಕರೆವರು. ಹೀಗೆ ಒಂದೇ ಪ್ರೀತಿಗೆ ವಿಷಯ ಭೇದದಿಂದ ನಾಮ ಭೇದವಾಗಿರುವುದು ಹೊರತು ಬೇರೆಯಲ್ಲ. ನಿರ್ವ್ಯಾಜವಾಗಿ, ನಿರುಪಮವಾದ ಪ್ರೀತಿಯು ತನ್ನಲ್ಲಿ ಮಾತ್ರ ಉಂಟಾಗುವುದಲ್ಲದೆ ಅನ್ಯತ್ರ ಉಂಟಾಗುವುದಿಲ್ಲ. ಅನ್ಯರಲ್ಲಿ ಮಾಡತಕ್ಕ ಪ್ರೀತಿಯು ಆತ್ಮಾರ್ಥವಾದುದಲ್ಲದೆ ಸ್ವಭಾವವಾದುದಲ್ಲವು. ಪುತ್ರದಾರಾದಿಗಲ್ಲಿ ಮಾಡತಕ್ಕ ಪ್ರೀತಿಯು ತನ್ನ ಸುಖಕ್ಕಾಗಿಯೇ ಉಂಟಾಗತಕ್ಕದ್ದು. ಒಂದು ವೇಳೆ ಅವರುಗಳಿಂದ ಬಾಹ್ಯವಾದ ಪ್ರಯೋಜನವು ತನಗೆ ಆಗದಿದ್ದರೂ, ತನ್ನ ಮಮತೆಗೆ ವಿಷಯರಾದ ಆ ಪುತ್ರ ಕಳತ್ರಾದಿಗಳು ಸುಖವಾಗಿರಬೇಕೆಂಬ ಕಾಮನೆಯು ತನ್ನದಾದುದರಿಂದ, ತನ್ನ ಕಾಮನೆಯ ಪೂರ್ತಿಯಾಗಿ ಮಾಡತಕ್ಕ ಪ್ರೀತಿಯು ತನಗೋಸ್ಕರವೇ ಮಾಡಿದ್ದಾಗುವುದು. ಇದರಂತೆಯೇ ಸ್ನೇಹಿತರಲ್ಲಿ ಪ್ರೀತಿಯು ಸ್ವಪ್ರಯೋಜನೋದ್ದೇಶದಿಂದಲೇ ಮಾಡತಕ್ಕದೆಂಬುದನ್ನು ಹೇಳಬೇಕಾಗಿಲ್ಲವಷ್ಟೆ? ಗುರುದೇವತಾ ವಿಷಯಕವಾದ ಪ್ರೀತಿಯು ತನ್ನ ಶ್ರೇಯಸ್ಸಿಗಾಗಿಯೇ ಮಾಡತಕ್ಕದ್ದೆಂಬ ವಿಷಯವೂ ಸ್ಪಷ್ಟವಾಗಿಯೇ ಇದೆ. ಆದ್ದರಿಂದ ಅವ್ಯಾಜವಾಗಿಯೂ, ಸ್ವಭಾವವಾಗಿಯೂ ತನ್ನಲ್ಲಿ ತನಗೆ ಉಂಟಾಗುವ ಪ್ರೀತಿಯು ನಿರತಿಶಯವಾದ ಪ್ರೀತಿಯೆಂದು ಹೇಳಿಸಿ

ಕೊಳ್ಳುವುದು. ಭೇದ ಬುದ್ಧಿಯಿಂದ ಮಾಡತಕ್ಕ ಭಕ್ತಿಯಲ್ಲಿ ಉಪಾಸ್ಯೋಪಾಸಕರೆಂಬಿಬ್ಬರು ಏರ್ಪಡುವುದರಿಂದ ಉಪಾಸಕನಾದ ತನ್ನಲ್ಲಿರತಕ್ಕ ಪ್ರೀತಿಯು ಉಪಾಸ್ಯವಾದ ದೇವತೆಯಲ್ಲಿ ಏರ್ಪಡಲಾರದಾಗಿ ಈ ರೀತಿಯಿಂದ ಮಾಡತಕ್ಕ ಭಕ್ತಿಯು ಸಾಮಾನ್ಯ ಭಕ್ತಿಯೆಂದು ಹೇಳಲ್ಪಟ್ಟಿದೆ. ಈ ಸಾಮಾನ್ಯ ಭಕ್ತಿಗೆ ಫಲರೂಪವಾದ ಪರಾಭಕ್ತಿಯಲ್ಲಾದರೋ, ಉಪಾಸ್ಯೋಪಾಸಕ ಭಾವವಿಲ್ಲವು. ತನ್ನ ದೃಷ್ಟಿಗೆ ಗೋಚರವಾಗುವ ಪ್ರತಿಯೊಂದು ಪದಾರ್ಥದಲ್ಲಿಯೂ ಬ್ರಹ್ಮಭಾವನೆಯನ್ನು ಮಾಡಿ ಉಪಾಸಿಸುವುದು ಪರಾಭಕ್ತಿಯ ರೀತಿಯಾಗಿದೆ. ಇದರಿಂದ ದೃಷ್ಟಿಗೋಚರವಾದ ಪ್ರಪಂಚದಲ್ಲಿ ತಾನೂ ಅಂತರ್ಗತನೇ ಆಗುವುದರಿಂದ ತನ್ನಲ್ಲಿಯೂ ಬ್ರಹ್ಮ ಭಾವನೆಯನ್ನೇ ಮಾಡಬೇಕಾಗುವುದು. ಹಾಗೆ ಮಾಡಿದರೆ ತನಗೂ ಬ್ರಹ್ಮನಿಗೂ ಭೇದವು ಏರ್ಪಡುವುದಿಲ್ಲವಾಗಿ ಬ್ರಹ್ಮ ಭಾವನೆಯಿಂದ ಮಾಡುವ ಪ್ರೀತಿಯು ನಿರತಿಶಯವಾಗಿರುವುದು ಆದ್ದರಿಂದಲೇ ಈ ರೀತಿಯಿಂದ ಮಾಡತಕ್ಕ ಭಕ್ತಿಗೆ ಪರಾಭಕ್ತಿಯೆಂದು ಹೆಸರು. ಈ ಭಕ್ತಿಯೇ ಸರ್ವೋತ್ತಮವಾದುದೆಂತಲೂ, ಮೋಕ್ಷಪ್ರಾಪ್ತಿಯಲ್ಲಿ ಜ್ಞಾನದಂತೆ ಸಾಕ್ಷಾತ್ಕಾರಣವಾಗಿರುವುದೆಂತಲೂ ಶಾಸ್ತ್ರಸಿದ್ಧಾಂತವು. ಶುದ್ಧಾದ್ವೈತಿಗಳು ಇಂಥಾ ಪರಭಕ್ತಿಯಲ್ಲಿಯೂ ಅತಿಸೂಕ್ಷ್ಮವಾಗಿ ಭೇದಜ್ಞಾನವೇರ್ಪಡುವುದರಿಂದ, ಶುದ್ಧಜ್ಞಾನರೂಪವಾದ ಮೋಕ್ಷಕ್ಕೆ ಪರಭಕ್ತಿಯು ನ್ಯೂನವಾದುದೆಂತಲೂ, ಅದಕ್ಕೆ ಬಹಳ ಸಮೀಪಕಾರಣವಾಗುವುದೆಂತಲೂ ಅಂಗೀಗರಿಸಿರುವರು. ಸಾಮಾನ್ಯ ಭಕ್ತಿಯು ಸಾತ್ವಿಕ, ರಾಜಸ, ತಾಮಸಗಳೆಂಬ ಮೂರುವಿಧವು. ವೇದ ಶಾಸ್ತ್ರಗಳನ್ನು ನಂಬಿ ಅವುಗಳಲ್ಲಿ ಹೇಳಿರುವಂತೆ ಯಾವ ವಿಧವಾದ ಫಲಾಭಿಸಂಧಿಯೂ ಇಲ್ಲದೆ ತನಗೆ ಕರ್ತವ್ಯ ಕರ್ಮವೆಂದು ತಿಳಿದು, ಭಗವಂತನ ಪ್ರಸಾದಮಾತ್ರಕ್ಕೋಸ್ಕರ ಅನುಷ್ಠಿಸುವ ಭಕ್ತಿಯು ಸಾತ್ವಿಕವೆನಿಸುವುದು. ಉಪಾಸಕನು ಇಹಪರ ಲೋಕಗಳಲ್ಲಿ ತನಗೆ ಅಪೇಕ್ಷಿತವಾದ ಅಭ್ಯುದಯವನ್ನು ಪಡೆದುಕೊಳ್ಳುವ ಉದ್ದೇಶದಿಂದ ಮಾಡುವ ಭಕ್ತಿಯು ರಾಜಸವು. ಪರಹಿಂಸಾ ಪೂರ್ವಕ ಸ್ವಪ್ರಯೋಜನವನ್ನು ಪಡೆವುದಕ್ಕೆ ಮಾಡುವ ಕೃತ್ಯೆ (ಮಾಟ) ಮೊದಲಾದ ಕರ್ಮಗಳು ತಾಮಸ ಭಕ್ತಿಕ್ರಮವೆನಿಸುವುವು. ಪರಮಹಿಂಸಾರೂಪಕರ್ಮವು ಅತ್ಯಂತ ಜುಗುಪ್ಸಿತವಾಗಿಯೂ ನಿಂದಾಸ್ಪದವಾಗಿಯೂ ಇದ್ದರೂ ಅದನ್ನೂ ಒಂದು ದೇವತೆಯ ವಿಷಯವಾಗಿ ಮಾಡುವುದರಿಂದ ಭಕ್ತಿಮಾರ್ಗಕ್ಕೆ ಸೇರಿಸಿರುವರು. ಈ ತಾಮಸ ಭಕ್ತಿಯನ್ನು ಆಚರಿಸುವುದರಿಂದ ಪಾಪಸಂಪಾದನೆಯಾಗುವುದೇ ಹೊರತು ಬೇರೆಯಲ್ಲ. ರಾಜಭಕ್ತಿಯನ್ನು ದೃಢಭಾವನೆಯಿಂದ ಯಥೋಕ್ತವಾಗಿ ಆಚರಿಸಿದರೆ ಉಪಾಸಕನ ಕಾಮಿತ ಸಿದ್ಧಿಯು ಆಗುವುದರಲ್ಲಿ ಸಂಶಯವಿಲ್ಲ. ಆ ಸಿದ್ಧಿಯಾದ ಮೇಲೆ ಅಲ್ಲಿಗೆ ಮಾಡಿದ ಕರ್ಮವು ಅಥವಾ ಅದರಿಂದ ಉಂಟಾದ ಅದೃಷ್ಟವು ನಷ್ಟವಾಗುವುದರಿಂದ, ಈ ಭಕ್ತಿಯೂ ಮತ್ತಾವುದರಲ್ಲಿಯೂ ಸಾಧನವಾಗಿ

ನಿಲ್ಲುವುದಿಲ್ಲವು. ಸಾತ್ವಿಕಭಕ್ತಿಯಾದರೋ, ವೇದೋಕ್ತವಾದುದನ್ನು ನಂಬಿ ಭಗವದರ್ಪಿತವಾಗಿಯೇ ಮಾಡತಕ್ಕುದಾದ್ದರಿಂದ ನಿಷ್ಕಾಮನೆಯಿಂದ ಮಾಡಲ್ಪಟ್ಟದ್ದಾಗುವುದು. ಹಾಗೆ ಮಾಡಿದ ಸಾತ್ವಿಕಭಕ್ತಿಯು ಚಿತ್ತಶುದ್ಧಿಯ ಮೂಲಕ ಜೀವನಿಗೆ ಚಿತ್ತಸ್ಥೈರ್ಯವನ್ನುಂಟುಮಾಡಿ, ಪರಭಕ್ತಿಯನ್ನು ಆಚರಿಸಲು ಶಕ್ತಿಯನ್ನು ಕೊಡುವುದು. ಪರಭಕ್ತಿಯನ್ನು ಮಾಡುವವನು ಸಂಸಾರ ಬಂಧನದಿಂದ ನಿವೃತ್ತನಾಗುವನು, ಎಂದು ಭಕ್ತಿ ಸ್ವರೂಪವನ್ನು ವಿಸ್ತಾರವಾಗಿ ಶಿಷ್ಯರಿಗೆ ಶ್ರೀಗಳವರು ಉಪದೇಶಿಸುತ್ತಲಿದ್ದುದನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವತರೋ ಜನಃ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥

ಎಂಬ ಭಗವದುಪದೇಶಕ್ಕನುಗುಣವಾಗಿ, ಶ್ರೀಗಳವರು ಸಾತ್ವಿಕ ಭಕ್ತಿಯನ್ನು ಲೋಕಾನುಗ್ರಹಕ್ಕೋಸ್ಕರ ತಾವು ಅನುಷ್ಠಿಸಿ ತೋರಿಸುತ್ತಿದ್ದರು. ಇವರಿಗೆ ಶಿವವಿಷ್ಣ್ವಾದಿ ಮೂರ್ತಿಗಳ ವಿಷಯದಲ್ಲಿ ಯಾವ ಸಂದರ್ಭದಲ್ಲಿಯೂ ಭೇದವಾಗಲಿ ತಾರತಮ್ಯವಾಗಲಿ ಇರಲಿಲ್ಲ. ಯಾವ ಕಾಲದಲ್ಲಿ ಯಾವ ಮೂರ್ತಿಯನ್ನು ಆರಾಧಿಸುತ್ತಿದ್ದರೋ ಆ ಕಾಲದಲ್ಲಿ ಮಾತ್ರ ಆ ಮೂರ್ತಿಯ ಪಾರಮ್ಯವನ್ನೇ ಇವರು ಒಪ್ಪಿಕೊಂಡಿರುವಂತೆ ತೋರುತ್ತಲಿತ್ತು. ಈ ಸ್ವಾಮಿಗಳವರು ಆರಾಧಿಸುತ್ತಲಿದ್ದ ಮೃಚ್ಛಿಲಾಲೋಹಮಯ ಮೂರ್ತಿಗಳಿಗೆ ಅಭಿಷೇಕವನ್ನು ಮಾಡುವ ಕಾಲದಲ್ಲಿಯೂ, ಚಂದನ ಪುಷ್ಪಾದ್ಯುಪಚಾರಗಳನ್ನಾಚರಿಸುವ ಸಮಯದಲ್ಲಿಯೂ ಸ್ವಲ್ಪವೂ ತ್ವರೆಯಿಲ್ಲದೆ ಬಹಳ ಜಾಗರೂಕರಾಗಿರುತ್ತಿದ್ದರು. ಇದರಿಂದ ಮೂರ್ತಿಗಳನ್ನು ಪೂಜಿಸುವಾಗ ಆ ಮೂರ್ತಿಗಳ ಯಾವ ಅಂಗಗಳಿಗೆ ಏನು ಶ್ರಮವುಂಟಾಗುವುದೋ ಎಂಬ ಭೀತಿಯು ಇವರಿಗೆ ಇದ್ದಂತೆ ಸ್ಪಷ್ಟವಾಗಿ ತೋರುತ್ತಲಿತ್ತು. ದೇವರ ಪೂಜೆಗಾಗಿ ಪರಿಜನರು ಸಿದ್ಧಮಾಡಿದ ಪೂಜಾ ಸಾಮಗ್ರಿಗಳು ಚೆನ್ನಾಗಿ ಪರಿಶೋಧಿಸಲ್ಪಟ್ಟಿರುವುದನ್ನು ಸ್ವತಃ ನೋಡಿ ತಿಳಿದುಕೊಳ್ಳುವುದರಿಂದ ತೃಪ್ತರಾಗದೆ ಪ್ರತಿಯೊಂದು ದಿನವೂ ಪ್ರತಿಯೊಂದು ಸಾರಿಯೂ ತಾವು ಪೂಜೆಗಾಗಿ ಬಂದ ಕೂಡಲೆ, ಹಾಲನ್ನು ಶೋಧಿಸಿರುವಿರೋ? ಪುಷ್ಪಗಳನ್ನು ನೋಡಿರುವಿರೋ ? ಫಲಗಳು ಚೆನ್ನಾಗಿರುವುವೋ? ಎಂದು ಪರಿಜನರನ್ನು ಕುರಿತು ಪ್ರಶ್ನೆಮಾಡಿ ಅವರಿಂದ ಚೆನ್ನಾಗಿ ಶೋಧಿಸಿ ಪೂಜಾ ಸಾಮಗ್ರಿಗಳನ್ನು ಸಿದ್ಧಪಡಿಸಿರುವುದಾಗಿ ಉತ್ತರ ಬಂದಲ್ಲದೆ ಆ ಪದಾರ್ಥಗಳನ್ನು ಉಪಯೋಗಿಸುತ್ತಿರಲಿಲ್ಲ. ನಿವೇದನಕ್ಕೆ ಇಡುವ ಕ್ಷೀರವು ಕಾಯಿಸಲ್ಪಟ್ಟಿದೆಯೋ? ಅದರ ಉಷ್ಣಾಂಶವು ಕಡಿಮೆಯಾಗಿರುವುದೋ? ಎಂದು ವಿಚಾರಮಾಡಿ ಕ್ಷೀರ ಪಾತ್ರೆಯನ್ನು ಕೆಲವು ಸಂದರ್ಭಗಳಲ್ಲಿ ತಮ್ಮ ಹಸ್ತದಿಂದ ಸ್ಪರ್ಶಮಾಡಿ ನೋಡಿ ತೃಪ್ತಿಯಾದ ಬಳಿಕ

ನಿವೇದನ ಮಾಡುತ್ತಲಿದ್ದರು. ಇವರು ಪೂಜೆಯನ್ನು ನೆರವೇರಿಸಿ ಸ್ತೋತ್ರಗಳನ್ನು ಹೇಳಿ, ಕರತಾಳ ಪುರಸ್ಸರವಾಗಿ ಭಗವನ್ನಾಮ ಸಂಕೀರ್ತನೆಯನ್ನು ಮಾಡುವ ಕಾಲದಲ್ಲಿ, ಉಪಾಸ್ಯದೇವತೆಯು ಇವರ ಮುಂದೆ ಬಂದು ನಿಂತು ಇವರೊಡನೆ ಸಂಭಾಷಿಸುವುದೋ! ಎಂಬಂತೆ ನೋಡಿದವರಿಗೆ ತೋರುತ್ತಲಿತ್ತು. ಅಂತಹ ಸಂದರ್ಭಗಳಲ್ಲಿ ಇವರ ಚಿತ್ತವು ದರ್ಶನಕ್ಕೆ ಬರುವವರ ಕಡೆಗೆ ತಿರುಗಿ ಚಂಚಲಭಾವವನ್ನು ಹೊಂದುತ್ತಲೇ ಇರಲಿಲ್ಲ. ಸಾಮಾನ್ಯವಾಗಿ ಶ್ರೀಗಳವರು ಹೊರಗೆ ಬರುವ ಕಾಲಗಳಲ್ಲಿಯೂ, ವಿಶೇಷವಾದ ಜನಸಂಘದ ಮಧ್ಯದಲ್ಲಿ ಉತ್ಸವಾದಿಗಳಿಗೆ ಬರುವ ಸಂದರ್ಭಗಳಲ್ಲಿಯೂ, ತಮ್ಮ ದೃಷ್ಟಿಗೆ ಗೋಚರವಾಗತಕ್ಕ ದೇವತಾಮೂರ್ತಿಗಳು ಎಲ್ಲಿದ್ದರೂ, ಒಂದು ಪ್ರದೇಶದಲ್ಲಿ ಒಂದು ಮೂರ್ತಿಯಿರುವಂತೆ ಒಂದು ಸಾರಿ ಹಿಂದೆ ತಮ್ಮ ಕಣ್ಣಿಗೆ ಗೋಚರವಾಗಿದ್ದರೂ ಮತ್ತು ಯಾವುದಾದರೂ ಮೂರ್ತಿಗಳು ಅಲಂಕಾರಾರ್ಥವಾಗಿ ಇಡಲ್ಪಟ್ಟವುಗಳಾಗಿದ್ದರೂ, ಅಂಥಾ ಮೂರ್ತಿಗಳು ದೃಷ್ಟಿಗೋಚರವಾದ ಕೂಡಲೆ ಅಥವಾ ಆ ಮೂರ್ತಿಗಳು ಇರುವ ಪ್ರದೇಶಕ್ಕೆ ಬಂದೊಡನೆಯೇ, ಎಂಥಾ ಸಂದರ್ಭವಾದರೂ, ಆ ದಿಕ್ಕಿಗೆ ತಿರುಗಿ, ತಮ್ಮ ಹಸ್ತಗಳನ್ನು ಜೋಡಿಸಿ, ತಲೆಯನ್ನು ನಮ್ರಭಾವದಿಂದ ತಗ್ಗಿಸದೆ ಮುಂದಕ್ಕೆ ಹೊರಡುತ್ತಿರಲಿಲ್ಲ.

ಈ ಸ್ವಾಮಿಗಳವರು ಮಾಡುತ್ತಲಿದ್ದ ಗುರುಭಕ್ತಿಯು ಅನ್ಯಾದೃಶವಾಗಿತ್ತು. ಪ್ರತಿದಿನವೂ ಶ್ರೀಗಳವರು ಸ್ನಾನಮಾಡಿ ಬಂದಕೂಡಲೆ ತಮ್ಮ ಗುರುಗಳು ಧರಿಸುತ್ತಲಿದ್ದ ದಾರುಮಯವಾದ ಪಾದುಕೆಗಳನ್ನು ತಮ್ಮ ಎರಡು ಹಸ್ತಗಳಿಂದಲೂ ತೆಗೆದುಕೊಂಡು ತಮ್ಮ ವಸ್ತ್ರದಿಂದ ಚೆನ್ನಾಗಿ ಒರೆಸಿ ಅವುಗಳನ್ನು ತಮ್ಮ ಶಿರಸ್ಸಿನಲ್ಲಿ ಧರಿಸಿ

ಶರಣಂ ನ ಭವತಿ ಜನನೀ ನ ಪಿತಾ ನ ಸುತಾ ನ ಸೋದರಾ ನಾನ್ಯೇ।
ಪರಮಂ ಶರಣಮಿದಂ ಮೇ ಚರಣಂ ಮಮ ಶಿರಸಿ ದೇಶಿಕನ್ಯಸ್ತಮ್ ॥

ಎಂಬ ಶ್ಲೋಕವನ್ನು ಹಲವುಸಾರಿ ಉಚ್ಚರಿಸುತ್ತ ಆ ಪಾದುಕೆಗಳನ್ನು ನೇತ್ರಗಳಿಂದ ಸ್ಪರ್ಶಿಸುವುದು, ಹೃದಯದಲ್ಲಿ ಧರಿಸುವುದು, ಈ ರೀತಿಯಿಂದ ತಮ್ಮ ಮನಸ್ಸಿಗೆ ತೃಪ್ತಿಯಾಗುವ ಪರ್ಯಂತ ಗುರುಪಾದುಕಾಸೇವೆಯನ್ನು ಮಾಡಿ, ಬಳಿಕ ಆ ಪಾದುಕೆಗಳನ್ನು ಗಂಧಪುಷ್ಪಾದಿಗಳಿಂದ ಅಲಂಕರಿಸಿ, ಪೀಠದಲ್ಲಿಟ್ಟು, ಅನಂತರವೇ ತಮ್ಮ ನಿತ್ಯಾನುಷ್ಠಾನಗಳಿಗೆ ಆರಂಭಿಸುತ್ತಲಿದ್ದರು. ಚಂದ್ರಮೌಳೀಶ್ವರದೇವರ ಪೂಜಾಕಾಲದಲ್ಲಿ ತಮ್ಮ ಗುರುಪಾದುಕೆಗಳಿಗೂ ಪ್ರತಿಯೊಂದು ರಾತ್ರಿಯೂ ಕ್ಷೀರ ಶರ್ಕರಾದ್ಯುಪಹಾರಗಳ ನಿವೇದನವನ್ನು ಮಾಡುತ್ತಲಿದ್ದರು. ಅವರ ನಾಮ ಮಂತ್ರದ ಜಪವನ್ನು, ಇತರ ಮಹಾಮಂತ್ರ ಜಪಗಳನ್ನು ಮಾಡುವುದಕ್ಕೆ ಮೊದಲು, ಒಂದು ದಿನವಾದರೂ ಒಂದು ಕಾಲದಲ್ಲಿಯಾದರೂ ಮಾಡದೆ ಇರುತ್ತಿರಲಿಲ್ಲವು. ಪೀಡಾನಿವಾರಣೆಗಾಗಿ ತಮ್ಮಲ್ಲಿಗೆ ಬರುವ ಜನರಿಗೆ ಕೊಡಬೇಕಾದ

ವಿಭೂತಿಯನ್ನು ಮುಂದಾಗಿ ಗುರುಪಾದುಕೆಯಲ್ಲಿ ಅರ್ಪಿಸಿ, ಪಾದುಕಾ ಪ್ರಸಾದ ರೂಪವಾದ ಆ ವಿಭೂತಿಯನ್ನು ಮಹಾಮಂತ್ರಗಳಿಂದ ಅಭಿಮಂತ್ರಿಸಿ, ಗುರುಸ್ಮರಣ, ಗುರುನಾಮ ಸಂಕೀರ್ತನವನ್ನು ಮಾಡಿಯೇ, ಆರ್ತರಾದ ಆ ಜನರಿಗೆ ಅನುಗ್ರಹಿಸುತ್ತಲಿದ್ದರು. ತಮ್ಮ ಯಾತ್ರಾಕಾಲಗಳಲ್ಲಿಯೂ, ಮುಖ್ಯವಾದ ಇತರ ಸಮಯಗಳಲ್ಲಿಯೂ ಶ್ರೀಗಳವರ ವಿಷಯದಲ್ಲಿ ಶಿಷ್ಯಜನರು ವಿಶೇಷರೀತಿಯಿಂದ ತೋರಿಸುವ ಭಕ್ತಿಕ್ರಮಗಳನ್ನೂ ಉತ್ಸಾಹಗಳನ್ನೂ ಗೌರವಗಳನ್ನೂ ಗಮನಕ್ಕೆ ತಂದಲ್ಲಿ, ಆಗ ತಮ್ಮ ಗುರುಗಳನ್ನು ಜ್ಞಾಪಿಸಿಕೊಂಡು ಧಾರೆಧಾರೆಯಾಗಿ ಆನಂದಬಾಷ್ಪವನ್ನು ಸುರಿಸಿ.

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥

ಎಂಬ ಭಗವದಾಜ್ಞೆಯಂತೆ, ತಮ್ಮ ವಿಷಯದಲ್ಲಿ ಜನಗಳು ತೋರಿಸಿದ ಗೌರವವನ್ನೂ, ಮಾಡಿದ ಸೇವೆಗಳನ್ನೂ ತಮ್ಮ ಗುರುಗಳಿಗೆ ಮನಸ್ಸಿನಿಂದ ಅರ್ಪಿಸುತ್ತಿದ್ದರಲ್ಲದೆ, ತಾವುಮಾಡಿದ ಪ್ರತಿಯೊಂದು ಸತ್ಕರ್ಮವನ್ನೂ ತಮ್ಮ ಗುರುಗಳಿಗೆ ಸಮರ್ಪಿಸುತ್ತಲಿದ್ದರು. ಪ್ರಾಯೇಣ ಶಿಷ್ಯರೊಡನೆ ಸಂಭಾಷಣಮಾಡುತ್ತಲಿರುವ ಕಾಲಗಳಲ್ಲಿ ಹೇಗಾದರೂ ತಮ್ಮ ಗುರುಗಳ ಪ್ರಸ್ತಾಪವನ್ನು ತಂದುಕೊಳ್ಳದೆ ಇರುತ್ತಲಿರಲಿಲ್ಲ. ಹಾಗೆ ಗುರುಗಳ ವಿಷಯವನ್ನು ಪ್ರಸ್ತಾಪಿಸಿ ಅವರ ಕೀರ್ತಿಯನ್ನೂ, ಮಹಿಮೆಯನ್ನೂ, ಜ್ಞಾನವನ್ನೂ, ಅವರು ಮಾಡುತ್ತಲಿದ್ದ ದೈವಭಕ್ತಿಯನ್ನೂ, ಅವರು ತಮ್ಮ ವಿಷಯದಲ್ಲಿಮಾಡಿದ ಅನುಗ್ರಹವನ್ನೂ ವಿಸ್ತರಿಸಿ ತಿಳಿಸುತ್ತ, ತಾವು ಆನಂದಬಾಷ್ಪವನ್ನು ಸುರಿಸುತ್ತ, ತಮ್ಮಲ್ಲಿಗೆ ಬಂದವರಿಗೂ ತಮ್ಮಂತೆ ಭಕ್ತಿಭಾವವನ್ನುಂಟುಮಾಡುತ್ತಲಿದ್ದರು. ಯಾವ ಸಂದರ್ಭದಲ್ಲಿಯೂ ಆ ಗುರುಗಳ ಅನುಗ್ರಹವಲ್ಲದೆ ಬೇರೊಂದು ಶಕ್ತಿಯು ತಮ್ಮಲ್ಲಿದ್ದಂತೆ ವಾಕ್ಕಿನಿಂದಲೂ ಹೇಳುತ್ತಲಿರಲಿಲ್ಲ. ಮನಸ್ಸಿನಿಂದಲೂ ತಿಳಿದಿರಲಿಲ್ಲ. ಇವರ ಗುರುಭಕ್ತಿಯನ್ನು ಕುರಿತು ಇನ್ನು ವಿಶೇಷವಾಗಿ ಹೇಳುವುದೇನು ? ಈ ಪೂಜ್ಯರು ಹೇಳಿರುವ ಗುರುಸ್ತೋತ್ರವನ್ನು ನೋಡುವುದರಿಂದ ಇವರು ಮಾಡುತ್ತಲಿದ್ದ ಗುರುಭಕ್ತಿಕ್ರಮವು ಸ್ಪಷ್ಟಪಟ್ಟು ಲೋಕಕ್ಕೆ ಪರಮ ಪ್ರಮಾಣವಾಗಿಯೇರ್ಪಡುವುದು.

(ಭಕ್ತಿಸುಧಾತರಂಗಿಣಿ. ಪುಟ 210-214).

ಗುರುವರಕರುಣಾಂ ಹಿತ್ವಾ ಕೋ ವಾ ಸ್ವೇಷ್ಟಂ ಲಭೇತ ಲೋಕೇऽಸ್ಮಿನ್ ।
ತಸ್ಮಾದ್ಗುರುವರಚರಣಂ ಭಜ ಚೇತಃ ಸರ್ವಸೌಖ್ಯಮೂಲಂ ತ್ವಂ ॥ ॥1॥

ಗುರುವರ ಕರುಣಾಸಾಗರ ತರುಣಾರುಣವಸ್ತ್ರಸಂವೃತಾಂಗ ವಿಭೋ ।
ಕುರು ಕರುಣಾಂ ಮಯಿ ದೀನೇ ಸುರವರತರುಗರ್ವಹರಣನಿಪುಣಕರ ॥॥2॥

ಹಿತ್ವಾ ತವ ಚರಣಂ ಮಮ ಶರಣಂ ಜಾನಾಮಿ ನಾನ್ಯದಸ್ತೀತಿ ।
ಗುರುವರ ನೃಸಿಂಹ ತಸ್ಮಾತ್ ಪಾಲಯ ಬುದ್ಧಿಂ ಸುನಿಶ್ಚಲಾಂ ದತ್ವಾ ॥ ॥3॥

ಬಹುಶಃ ಕೃತಪಾಪಮಪಿ ಕ್ರಿಯಮಾಣಾಘಂ ಗುರೋ ಪಾಹಿ ।
ದೋಷಾಕರಮಪಿ ಶಂಭುಃ ಧತ್ತೇ ಶೀರ್ಷೇಣ ಕಿಂ ಬ್ರೂಹಿ ॥ ॥4॥

ನಾವೋಚಃ ಕಿಂ ಪೂರ್ವಂ ತ್ವಮಪಿ ಭವೇಃ ಶ್ರೀಸದಾಶಿವೇನ್ದ್ರಾಭಃ ।
ಇತಿ ಕಸ್ಮಾನ್ಮಮ ಮಮತಾ ದೇಹೇ ಜಾಗರ್ತಿ ಗುರುವರ ಬ್ರೂಹಿ ॥ ॥5॥

ಸ್ವಪ್ನೇ ಮಮೋತ್ತಮಾಂಗೇ ಸ್ವಯಮಾಹೂಯಾತಿಕರುಣಯಾ ಚರಣೌ ।
ದಧತಸ್ತವ ನಿಕಟೇ ಮಮ ಗುರುವರ ನರಸಿಂಹ ಯಾಚನಾ ಕಾಸ್ತಿ ॥ ॥6॥

ಸ್ವಪ್ನೇಪಿ ರಾಮನಿಕಟೇ ಮಚ್ಛ್ರೇಯಃ ಪ್ರಾರ್ಥನಾಕರ್ತುಃ ।
ಗುರುವರ ತವ ನಿಕಟೇ ಮಮ ಕರ್ತವ್ಯಾ ಪ್ರಾರ್ಥನಾ ಕಾಽಸ್ತಿ ॥ ॥7॥

ನರಸಿಂಹಾಪರರೂಪೇ ಮತ್ಪಾಲನಬದ್ಧಕಂಕಣೇ ಭವತಿ ।
ಜಾಗ್ರತಿ ಸತಿ ಮಮ ನಿಕಟೇ ಗುರುವರ ಭೀತಿರ್ಭವೇತ್ಕಸ್ಮಾತ್ ॥ ॥8॥

ಕುತ್ರ ಗತೋಽತ್ರೈವಾಹಂ ತಿಷ್ಠಾಮೀತ್ಯಭಯವಿತರಣವ್ಯಗ್ರೇ ।
ಭವತಿ ಭವತಾಪಹಾರಿಣಿ ಗುರುವರ ಭೀತಿಃ ಕುತಸ್ತ್ಯಾ ಮೇ ॥ ॥9॥

ತ್ವಚ್ಚರಣಭಕ್ತಿಪೂರಿತಮಾನಸಮೇನಂ ಗುರೋ ವಿಧಾಯಾಶು ।
ಸಕಲಭಯ ಶೂನ್ಯಹೃದಯಂ ಕುರು ಕರುಣಾವಾರಿಧೇ ನೃಸಿಂಹಗುರೋ ॥ ॥10॥

ಪ್ರಣತಾದ್ವೈತವಿಬೋಧನಮಚಿರಾತ್ಕರ್ತುಂ ಗಿರೇವ ನಾಮ್ನಾ ಚ ।
ಸ್ವೀಕೃತನರಸಿಂಹಾಭಿಧಮನಿಶಂ ಕಲಯಾಮಿ ಗುರುವರಂ ಕಂಚಿತ್ ॥ ॥11॥

ಪ್ರತ್ಯಕ್ಷಂ ಬಹುಕರುಣಂ ಪ್ರವಿಹಾಯ ತ್ವಾಂ ಗುರೋಽನ್ಯಭಜನಂ ಮೇ ।
ಕರಸಂಸ್ಥಾನ್ನವಿಸರ್ಜನಪೂರ್ವಕಭಿಕ್ಷಾಟನಂ ನ ಕಿಮು ? ॥ ॥12॥

ನೈಸರ್ಗಿಕಕರುಣಾಜನಿಭೂಮೌ ಮನ್ಮೂರ್ತಿಮದ್ಭಾಗ್ಯೇ ।
ತ್ವಯ್ಯಪರಾಧಾ ಮತ್ಕಾಃ ಗುರುವರ ಕುರ್ವನ್ತಿ ಕಲ್ಮಷಂ ಕಿಂ ಭೋ ? ॥॥13॥

ಚಿತ್ತಂ ಮಾಮಕಮನಿಶಂ ಸಚ್ಚಿತ್ಸುಖರೂಪಗಂ ದೃಢಂ ಪ್ರಭವೇತ್ ।
ಯದ್ವತ್ತಥಾಶು ಕೃತ್ವಾ ಪಾಲಯ ಸತತಂ ನೃಸಿಂಹಗುರೋ ॥ ॥14॥

ವಿಕೃತಿರ್ನೈವಮಮಸ್ಯಾತ್ ಕಾಯೇಽಸ್ಮಿನ್ ಭಿದ್ಯಮಾನೇಪಿ ।
ಚಿತ್ತೇ ಯಥಾ ತಥಾ ತ್ವಂ ಕುರು ಕರುಣಾವಾರಿಧೇ ನೃಸಿಂಹಗುರೋ ॥ ॥15॥

ಸಚ್ಚಿತ್ಸುಖರೂಪೋಽಹಂ ನೈವೇದಂ ದೃಶ್ಯಮಿತ್ಯಚಲಾಮ್ ।
ಬುದ್ಧಿಂ ಪ್ರಯಚ್ಛ ಮಹ್ಯಂ ಕರುಣಾಮೃತವಾರಿಧೇ ನೃಸಿಂಹಗುರೋ ॥ ॥16॥

ಅಪುನಸ್ಮರಣಂ ಲೋಕಂ ದೇಹಂ ಶಾಸ್ತ್ರಂ ಚ ವಿಸ್ಮೃತ್ಯ ।
ಆನಂದಂ ನಿರವಧಿಕಂ ಪ್ರಾಪ್ನೋಮಿ ಕದಾ ನೃಸಿಂಹಗುರೋ? ॥ ॥17॥

ಸ್ಥೂಲೇ ಸೂಕ್ಷ್ಮೇ ಹೇತೌ ದೇಹೇಽಹಂತಾಂ ಸಮುತ್ಸೃಜ್ಯ ।
ಚಿದ್ರೂಪೇಽಹಂತಾ ಮೇ ಸಮುದೇತಿ ಕದಾ ನೃಸಿಂಹಗುರೋ? ॥ ॥18॥

ಶ್ರೀ ಶ್ರೀಗಳವರು ಗುರುಭಕ್ತಿಯ ಆಚರಣೆಯನ್ನು ಮತ್ತೊಂದು ಪ್ರಕಾರದಿಂದ ಲೋಕಕ್ಕೆ ಉಪದೇಶಿಸಿದರು. ಈ ಭರತಖಂಡದಲ್ಲಿ ವೇದಬಾಹ್ಯಗಳಾದ ಅನೇಕ ಮತಗಳು ಏರ್ಪಟ್ಟು ದೇಶವು ನಾನಾಪ್ರಾಕಾರವಾಗಿ ಅವ್ಯವಸ್ಥೆಯನ್ನು ಹೊಂದಿದ್ದ ಕಾಲದಲ್ಲಿ ಈ ಭಾರತಭೂಮಿಯಲ್ಲಿ ಅವತರಿಸಿ ವೇದಪ್ರಾಮಾಣ್ಯವನ್ನು ಸ್ಥಾಪಿಸಿ, ಶುದ್ಧಾದ್ವೈತವಿದ್ಯಾ ಪ್ರಚಾರದಿಂದ ಭಾರತಭೂಮಿಯನ್ನುದ್ಧರಿಸಿದಂಥಾವರಾಗಿಯೂ, ಈಶ್ವರಾಂಶ ಸಂಭೂತರಾಗಿಯೂ, ಜಗದ್ವಿಖ್ಯಾತಮಹಿಮನಿಧಿಗಳಾಗಿಯೂ, ಇದ್ದ ಶ್ರೀ ಶಂಕರಭಗವತ್ಪಾದಾಚಾರ್ಯರವರ ಅನುಯಾಯಿಗಳಲ್ಲಿ ಯಾರೊಬ್ಬರೂ, ಕೃತಜ್ಞತಾಪ್ರದರ್ಶನಾರ್ಥವಾಗಲಿ, ಶ್ರೇಯಸ್ಸಂಪಾದನೆಗಾಗಲಿ, ಪಂಡಿತಪಾಮರ ಸಾಧಾರಣವಾದ ತಮ್ಮ ಆಚರಣೆಯಿಂದ ಆ ಗುರುವರ್ಯರ ವಿಷಯವಾದ ಭಕ್ತಿಯನ್ನು ತೋರ್ಪಡಿಸಲಿಲ್ಲವೆಂಬ ಕೊರತೆಯು ಈ ಶ್ರೀಗಳವರ ಮನಸ್ಸಿಗೆ ಬಲವಾಗಿ ತಟ್ಟಿತು. ಈ ಕೊರತೆಯನ್ನು ಹೋಗಲಾಡಿಸಿ ಲೋಕಕ್ಕೆ ಹಿತವನ್ನುಂಟುಮಾಡಬೇಕೆಂಬ ಉದ್ದೇಶದಿಂದ, ಎರಡನೆಯ ಸಾರಿ ದಕ್ಷಿಣಯಾತ್ರೆಯನ್ನು ಪೂರ್ತಿಮಾಡಿ ಸ್ಥಳಕ್ಕೆ ಹಿಂತಿರುಗಿ ಬಂದ ಬಳಿಕ ಶ್ರೀಗಳವರು ವೈಶಾಖಶುಕ್ಲ ಪಂಚಮಿಯು ಭಗವತ್ಪಾದರವರ ಅವತಾರದಿನವಾದ್ದರಿಂದ, ಆ ದಿನದಲ್ಲಿ ರಾಮಕೃಷ್ಣಾದ್ಯವತಾರ ದಿನಗಳಂತೆ ಶ್ರೀ ಭಗವತ್ಪಾದವರ ಜಯಂತ್ಯುತ್ಸವವನ್ನು ನಿಯಮದಿಂದಲೂ, ವಿಭವದಿಂದಲೂ ಆಚರಿಸತಕ್ಕದ್ದೆಂದು ತೀರ್ಮಾನಿಸಿದರು. ಈ ಉತ್ಸವವು ಶುಕ್ಲಪ್ರತಿಪದಾದಿ ಪಂಚಮ್ಯಂತವಾಗಿ ನಡೆಯತಕ್ಕದ್ದು; ಚಿರಕಾಲದಿಂದಲೂ ಗುರುಪರಂಪರಾಗತವಾಗಿ ಶ್ರೀಮಠದಲ್ಲಿ

ಆರಾಧಿಸಲ್ಪಡುತ್ತಿರುವ ಆಚಾರ್ಯಮೂರ್ತಿಗೆ ಪ್ರಾತಃಕಾಲದಲ್ಲಿ ವಿಶೇಷವಾಗಿ ಅಭಿಷೇಕ ಪೂಜಾನಿವೇದನಗಳನ್ನು ನಡೆಸತಕ್ಕದ್ದು; ಆ ಕಾಲದಲ್ಲಿ ಶ್ರೀಮದಾಚಾರ್ಯ ನಿರ್ಮಿತವಾದ ಪ್ರಸ್ಥಾನತ್ರಯ ಗ್ರಂಥಗಳ ಪಾರಾಯಣವನ್ನೂ ವೇದಪಾರಾಯಣವನ್ನೂ ಮಾಡಿಸತಕ್ಕದ್ದು; ಸಾಯಂಕಾಲ ಆ ಮಹನೀಯರಿಂದ ಉಪದಿಷ್ಟವಾಗಿರುವ ತತ್ತ್ವಮಾರ್ಗವನ್ನು ಸುಲಭರೀತಿಯಿಂದ ಶ್ರೀಗಳವರೇ ಶಿಷ್ಯಜನರಿಗೆ ಉಪದೇಶಿಸುವುದು; ಬಳಿಕ ಶೃಂಗೇರಿಯ ನಾಲ್ಕು ಬೀದಿಗಳಲ್ಲಿಯೂ ಶ್ರೀಮದಾಚಾರ್ಯ ಚರಿತ್ರಪರಣ ತನ್ನಾಮಸಂಕೀರ್ತನಗಳೊಡನೆ ಉತ್ಸವವನ್ನು ನಡೆಸುವುದು; ಪಂಚಮೀದಿನ ಪ್ರಾತಃಕಾಲದಲ್ಲಿಯೇ ಪೂಜಾನಂತರ ಉತ್ಸವವನ್ನು ನೆರವೇರಿಸಿ, ಪಾನಕ ಪೂಜೆಯನ್ನು ನಡೆಸಿ, ಬ್ರಾಹ್ಮಣ ತೃಪ್ತಿಯನ್ನು ಮಾಡುವುದು; ಈ ಕ್ರಮದಿಂದ ಜನ್ಮೋತ್ಸವ ಸಮಾರಂಭವನ್ನು ನಡೆಸಬೇಕೆಂದು ವ್ಯವಸ್ಥೆಯನ್ನು ಮಾಡಿ, ಈ ಐದು ದಿನಗಳ ಉತ್ಸವಕಾಲದಲ್ಲಿಯೂ ಶ್ರೀಗಳವರು ದಯಮಾಡಿ ಉತ್ಸವವನ್ನು ನಡೆಸುತ್ತ, ಗುರುಭಕ್ತಿಯನ್ನು ಜನಗಳಿಗೆ ಬೋಧಿಸಿದರು. ಈ ಸಿದ್ಧ ಸಂಕಲ್ಪರು ಯಾವ ಉದ್ದೇಶದಿಂದ ಈ ಉತ್ಸವವನ್ನು ನಡೆಸಲು ಪ್ರಾರಂಭಮಾಡಿದರೋ ಆ ಉದ್ದೇಶವು ಬಹಳ ಶೀಘ್ರದಲ್ಲಿಯೇ ಯಾವ ಪ್ರಯತ್ನವೂ ಇಲ್ಲದೆ ಪೂರ್ಣವಾಗಿ ಫಲಿಸಿದಂತೆ ಈಗ ಸೇತು ಶೀತಾಚಲಮಧ್ಯದಲ್ಲಿರುವ ದೇಶಗಳಲ್ಲಿ ಅನೇಕರಿಂದ ಆರಂಭಿಸಲ್ಪಟ್ಟು, ಶ್ರೀಮದಾಚಾರ್ಯ ಜಯಂತ್ಯುತ್ಸವವು ವಿಸ್ತಾರವಾಗಿ ನಡೆಸಲ್ಪಡುತ್ತಿರುವುದಾಗಿ ತಿಳಿದುಬರುತ್ತೆ. ಶ್ರೀಗಳವರು ಗುರುಭಕ್ತಿ ಪ್ರದರ್ಶನಮಾಡುವುದಕ್ಕೆ ಗುರು ಜಯಂತ್ಯುತ್ಸವವನ್ನು ನಡೆಸಲು ಏರ್ಪಾಡು ಮಾಡಿದಂತೆ, ಶೃಂಗೇರಿಯಲ್ಲಿ ಪಾರ್ವತೀಪರಮೇಶ್ವರ ಮೂರ್ತಿಗಳ ಕಲ್ಯಾಣೋತ್ಸವ, ಆರ್ದ್ರೋತ್ಸವ ಮೊದಲಾದ ಅನೇಕ ಉತ್ಸವಗಳನ್ನೂ ನಡೆಸುವಂತೆ ವ್ಯವಸ್ಥೆಮಾಡಿ ದೈವಭಕ್ತಿಕ್ರಮವನ್ನೂ ಜನಗಳಿಗೆ ತೋರಿಸಿದರು. ಈ ರೀತಿಯಿಂದ ಭಗವಂತನ ಪೂಜೆ ಭಜನೆ ದರ್ಶನ ಉತ್ಸವ ಇವುಗಳೇ ಮೊದಲಾದ ಸಾಮಾನ್ಯ ಭಕ್ತಿಯ ಆಚರಣೆಗೆ ಮಂದಜನರು ಅಧಿಕಾರಿಗಳಾಗಿದ್ದರೂ, ತಾವು ಯಥೋಕ್ತವಾಗಿ ಅದನ್ನು ಆಚರಿಸಿ, ಇತರರು ತಮ್ಮನ್ನು ಅನುಸರಿಸಿ ಕೃತಾರ್ಥರಾಗುವಂತೆ ಮಾಡಿದರು.

ಆಸ್ತಿಕ್ಯವು ಶ್ರೀಗಳವರಲ್ಲಿ ಮೂರ್ತಿಮತ್ತಾಗಿತ್ತು. ವೇದಶಾಸ್ತ್ರಗಳಲ್ಲಿ ಇವರಿಗಿದ್ದ ನಂಬಿಕೆಯು ಅಭೇದ್ಯವಾದದ್ದು. ಶ್ರುತ್ಯನುಸಾರಿಯಾದ ಸ್ಮೃತಿಗಳಲ್ಲಿಯೂ, ತದನುಯಾಯಿಗಳಾದ ಪುರಾಣಗಳಲ್ಲಿಯೂ ಇವರಿಗಿದ್ದ ವಿಶ್ವಾಸಕ್ಕೆ ಪಾರವಿರಲಿಲ್ಲ. ಶ್ರುತ್ಯುಕ್ತ ಕರ್ಮಾನುಷ್ಠಾನ ಪರರಲ್ಲಿ ಇವರಿಗೆ ಗೌರವಬುದ್ಧಿಯು ತುಂಬಿತುಳುಕುತ್ತಲಿತ್ತು. ವೇದಾರ್ಥವಿಚಾರಮಾಡಿರುವ ಮೀಮಾಂಸಾ ಶಾಸ್ತ್ರದಿಂದ ವೇದವು ವಿಧಿ, ಮಂತ್ರ, ಅರ್ಥವಾದ ಎಂದು ಮೂರು ಪ್ರಕಾರದಿಂದ ವಿಭಾಗಿಸಲ್ಪಟ್ಟು ಅರ್ಥವಾದಗಳಿಗೆ ಸ್ವಾರ್ಥದಲ್ಲಿ ತಾತ್ಪರ್ಯವಿಲ್ಲವೆಂತಲೂ,

ವಿಧಿವಾಕ್ಯದೊಡನೆ ಅವುಗಳಿಗೆ ಏಕವಾಕ್ಯತೆಯಿಂದ ಪ್ರಾಮಾಣ್ಯವುಂಟೆಂತಲೂ ನಿರ್ಣಯಿಸಲ್ಪಟ್ಟಿದ್ದರೂ, ಆ ಶಾಸ್ತ್ರದ ಪ್ರಕ್ರಿಯೆಯನ್ನು ಶ್ರೀಗಳವರು ತಿಳಿದವರಾಗಿದ್ದರೂ, ವೇದದ ಎಲ್ಲಾ ಭಾಗಗಳೂ ಸಮನಾಗಿ ಪರಮ ಪ್ರಮಾಣವೆಂದು ಭಾವಿಸಿದ್ದರಲ್ಲದೆ, ಯಾವ ಭಾಗವನ್ನಾದರೂ ಸಾಮಾನ್ಯವೆಂದಾಗಲಿ, ಅಪ್ರಮಾಣವೆಂದಾಗಲಿ ತಿಳಿದಿರಲಿಲ್ಲ. ಇಂತಹ ಪರಮ ಪ್ರಮಾಣವಾದ ವೇದವು ಪುರುಷಕೃತ; ಅನೇಕ ಪುರುಷಕೃತ; ಭಿನ್ನಭಿನ್ನ ಕಾಲಕೃತ ಎಂಬೀ ವಿಧವಾದ ಆಧುನಿಕರ ಕಲ್ಪನೆಗೆ ವಿಷಯವಾದ ಸಂಗತಿಯು ಶ್ರವಣಗೋಚರವಾದಲ್ಲಿ, ಕರ್ಣಕಠೋರವಾಗಿದ್ದ ಆ ಶಬ್ದಗಳಿಂದ ಬಹಳ ಕ್ಲೇಶಪಟ್ಟುಕೊಂಡರೂ, ಹಾಗೆ ಹೇಳುವವರನ್ನು ತಿರಸ್ಕರಿಸುತ್ತಿರಲಿಲ್ಲ. ಅಂತಹ ಜನರನ್ನು ಶಾಸ್ತ್ರೀಯವಾದ ಯುಕ್ತಿಗಳಿಂದಲೂ, ಲೋಕದೃಷ್ಟಾಂತಗಳಿಂದಲೂ ಸಮಾಧಾನಪಡಿಸಿ, ಅವರಿಗೆ ವೇದಶಾಸ್ತ್ರಗಳಲ್ಲಿ ನಂಬಿಕೆಯುಂಟಾಗುವಂತೆ ಮಾಡುತ್ತಲಿದ್ದರು. ಈ ವಿಷಯದಲ್ಲಿ ಶ್ರೀಗಳವರು ಹೇಳುತ್ತಲಿದ್ದ ಕೆಲವು ಯುಕ್ತಿಗಳನ್ನು ಮಾತ್ರ ಇಲ್ಲಿ ತೋರಿಸಿದೆ. ಅವು ಯಾವುವೆಂದರೆ :-
ವೇದವು ಪೌರುಷೇಯವಾದ್ದೂ, ಭಿನ್ನಭಿನ್ನ ಕಾಲದಲ್ಲಿ ಉಂಟಾದದ್ದೂ ಅಲ್ಲವು, ಇದುವರೆಗೆ ಪ್ರಾಚೀನರಾದ ಮಹರ್ಷಿಗಳಿಂದಲೂ, ಅಭಿಯುಕ್ತರಾದ ಪಂಡಿತವರ್ಯರಿಂದಲೂ, ಊಹಾಪೋಹ ವಿಚಕ್ಷಣರಲ್ಲಿ ಅಗ್ರಗಣ್ಯರೆಂದು ತಿಳಿದುಕೊಂಡಿರುವ ಆಧುನಿಕರಿಂದಲೂ ವೇದದ ಕರ್ತೃವಾಗಲಿ, ವೇದದ ಕಾಲವಾಗಲಿ ಸಮರ್ಪಕವಾದ ಪ್ರಮಾಣಗಳಿಂದಲೂ ಸಮಂಜಸವಾದ ಯುಕ್ತಿಗಳಿಂದಲೂ ನಿರ್ಣಯಿಸಲ್ಪಡದಿರುವ ಒಂದು ಕಾರಣದಿಂದಲೇ ವೇದವು ಅಪೌರುಷೇಯ, ಅನಾದಿ ಎಂದು ಧಾರಾಳವಾಗಿ ಸ್ಥಾಪಿಸಬಹುದು. ಭರತಖಂಡದ ಆರ್ಯರೆಲ್ಲರೂ ಅನೇಕ ವರ್ಷಗಳು ನಿಯಮದಿಂದ ಗುರುಕುಲವಾಸವನ್ನು ಆಚರಿಸಿ ಗುರುಮುಖದಿಂದಲೇ ಶ್ರವಣಮಾಡಿ ಆವೃತ್ತಿಮಾಡುವುದರ ಮೂಲಕವಾಗಿ ವೇದವನ್ನು ಗ್ರಹಿಸಿದಂತೆ ತಿಳಿದು ಬರುವುದಲ್ಲದೆ, ಪುಸ್ತಕಾದಿ ಸಹಾಯದಿಂದ ವೇದವನ್ನು ಗ್ರಹಿಸಿದಂತಾಗಲಿ, ಹಾಗೆ ಮಾಡುವುದಕ್ಕೆ ಅನುಕೂಲವಿದ್ದಂತಾಗಲಿ ತಿಳಿದು ಬರುವುದಿಲ್ಲ. ವೇದಪ್ರಚಾರವಿರತಕ್ಕ ಎಲ್ಲಾ ದೇಶಕ್ಕೂ ಒಬ್ಬರೇ ಗುರುಗಳಾಗಿದ್ದು ವೇದಾಧ್ಯಯನವನ್ನು ಹಿಂದೇ ರೀತಿಯಿಂದ ಮಾಡಿಸಿರಬಹುದೆಂದು ಹೇಳೋಣವು ಯುಕ್ತವೂ, ಸಂಭಾವಿತವೂ ಅಲ್ಲವಷ್ಟೆ? ವೇದಪ್ರಚಾರವಿರತಕ್ಕ ಯಾವ ದೇಶದಲ್ಲಿಯೂ ಅಧ್ಯಯನಮಾಡಿದ ಯಾವ ಮನುಷ್ಯನೂ ವೇದದಲ್ಲಿ ಒಂದು ವರ್ಣವನ್ನಾದರೂ, ಉದಾತ್ತಾನುದಾತ್ತಾದಿ ಸ್ವರಗಳಲ್ಲಿ ಒಂದು ಸ್ವರವನ್ನಾದರೂ ವ್ಯತ್ಯಸ್ತ ಮಾಡಿಯಾಗಲಿ, ಆನುಪೂರ್ವಿಯಲ್ಲಿ ವ್ಯತ್ಯಾಸ ಮಾಡಿಯಾಗಲಿ ಹೇಳುವಂತೆ ತಿಳಿದು ಬರುವುದಿಲ್ಲ. ಭಾರತಾದೀತಿಹಾಸ ಪುರಾಣಗಳು ಪೌರುಷೇಯಗಳೆಂದು ಕರ್ತೃನಿರ್ದೇಶನದಿಂದ ಸ್ಪಷ್ಟಪಟ್ಟಿದೆ. ಇವುಗಳಲ್ಲಿ ದೇಶ

ಭೇದದಿಂದಲೂ, ಪುಸ್ತಕ ಭೇದದಿಂದಲೂ, ವರ್ಣವ್ಯತ್ಯಾಸಗಳು ಪಾಠಭೇದಗಳು ಆನುಪೂರ್ವಿಯಲ್ಲಿ ಬದಲಾವಣೆಗಳು ಅನೇಕವಾಗಿ ಏರ್ಪಟ್ಟಿರುವಂತೆ ಕಂಡುಬಂದಿದೆ. ಆದರಂತೆ ವೇದವು ಪುರುಷ ಕೃತವಾಗಿಯೂ, ಸಾದಿಯಾಗಿಯೂ, ಇರುವ ಪಕ್ಷದಲ್ಲಿ ವೇದವೂ ಬದಲಾಯಿಸಲ್ಪಡದಿರಲು ಕಾರಣವಿರಲಿಲ್ಲ. ಆದ್ದರಿಂದ ಸೃಷ್ಟ್ಯಾದಿಯಲ್ಲಿ ಸರ್ವಜ್ಞನಾದ ಭಗವಂತನು ಅನಾದಿಯಾದ ವೇದವನ್ನು ಯಥಾನುಪೂರ್ವಿಯಾಗಿ ಸ್ಮರಿಸುವನೆಂತಲೂ, ಆತನ ಮುಖದಿಂದಲೇ ಅಧ್ಯಯನ ಮಾಡಿದ ಚತುರ್ಮುಖ ಬ್ರಹ್ಮನಿಂದ ವೇದವು ಹೊರಪಟ್ಟಿತೆಂತಲೂ, ಅದು ಮೊದಲುಗೊಂಡು ಇಂದಿನವರೆಗೆ ಶಿಷ್ಯ ಪ್ರತಿಷ್ಯ ಕ್ರಮದಿಂದ ಭಾರತ ಭೂಮಿಯಲ್ಲಿ ಒಂದೇ ವಿಧವಾಗಿ ಪ್ರಚಾರಗೊಂಡಿರುವುದೆಂತಲೂ ಹೇಳುವ ಶಾಸ್ತ್ರವನ್ನು ನಂಬಿದಲ್ಲದೆ ಬೇರೆ ಕಾರಣದಿಂದ ವೇದದಲ್ಲಿ ವ್ಯತ್ಯಾಸಗಳಿಲ್ಲದಿರುವುದನ್ನು ಸಮರ್ಥಿಸುವುದಕ್ಕಾಗಲಾರದು. ಲೋಕದಲ್ಲಿ ಅಜ್ಞಾತವಾದ ವಿಷಯಗಳನ್ನು ಜನರಿಗೆ ತಿಳಿಸತಕ್ಕದ್ದು ವೇದವೊಂದು ಹೊರತು ಬೇರೆಯಿಲ್ಲವು. ಇಂತಹ ವೇದವನ್ನು ಸಾಂಗವಾಗಿ ಅಭ್ಯಸಿಸಿ ಅರ್ಥವಿಚಾರದಿಂದ ಚೆನ್ನಾಗಿ ತಿಳಿದುಕೊಂಡಲ್ಲಿ ಪ್ರಪಂಚ ಜ್ಞಾನಕ್ಕೆ ವೇದವು ಮುಖ್ಯ ಸಾಧನವೆಂದು ಸ್ಪಷ್ಟಪಡುವುದು. ಪ್ರಪಂಚವೆಂದರೆ ಮನುಷ್ಯನ ದೃಷ್ಟಿಗೋಚರವಾಗಿರತಕ್ಕದ್ದು ಮಾತ್ರವಲ್ಲ. ದೃಷ್ಟಿಗೋಚರವಾಗದ ಪ್ರಪಂಚವೂ ಉಂಟು. ಅದನ್ನು ತಿಳಿದುಕೊಳ್ಳಬೇಕಾದರೂ ನಂಬಬೇಕಾದರೂ ವೇದವನ್ನೇ ಓದಬೇಕು. ವೇದಾರ್ಥವನ್ನು ತಿಳಿದ ಮಹನೀಯರು ಹೇಳಿರುವ ಅನುಭೂತಾರ್ಥಗಳನ್ನು ತಿಳಿದುಕೊಳ್ಳಬೇಕು. ಪಶುಪಕ್ಷ್ಯಾದಿ ತಿರ್ಯಗ್ಜಂತು ಸಾಧಾರಣವಾದ ಆಹಾರ ನಿದ್ರಾದಿ ಮಾತ್ರೋಪಯೋಗಿಯಾದ ಅರ್ಥಗಳನ್ನು ತಿಳಿದುಕೊಳ್ಳುವುದರಲ್ಲಿ ವೇದವು ಅತ್ಯಾವಶ್ಯಕವಾದುದೆಂದು ಹೇಳಬೇಕಾಗಿಲ್ಲವು. ಅಂತಹ ಅತ್ಯಲ್ಪಪ್ರಯೋಜನವಾದ ದೃಷ್ಟಾರ್ಥಗಳನ್ನು ಹೇಳುವುದಕ್ಕೆ ವೇದವು ಪ್ರವರ್ತಿಸಲಿಲ್ಲ. ಸಕಲ ಪ್ರಂಪಚೋದ್ಧಾರಕವಾದ ವೇದವು ಅನಾದಿಯಲ್ಲದೆ ಸಾದಿಯಾಗಿರುವ ಪಕ್ಷದಲ್ಲಿ ಸೃಷ್ಟಿ ಸ್ಥಿತ್ಯಾದಿಗಳಿಗೇ ಅವಕಾಶವಿರಲಿಲ್ಲ. ಇದರಿಂದ ವೇದವು ಅನಾದಿಯಾದದ್ದು. ಅಜ್ಞಾತಾರ್ಥ ಜ್ಞಾಪಕವಾದದ್ದು. ಆದ್ದರಿಂದಲೇ ಪರಮ ಪ್ರಮಾಣವಾದದ್ದು ಎಂಬುದಾಗಿ ನಂಬಬೇಕು, ಎಂದು ಶ್ರೀಗಳವರು ವೇದಪ್ರಾಮಾಣ್ಯವಾದಿಗಳನ್ನು ಸಮಾಧಾನಗೊಳಿಸುತ್ತಲಿದ್ದರು.

ವೇದಪ್ರಾಮಾಣ್ಯವನ್ನು ಒಪ್ಪುವವರಲ್ಲಿ ಏಕದೇಶಿಗಳು ಸ್ವತಃ ಪ್ರಕಾಶವಾದ ಮತ್ತು ನಿಷ್ಪಕ್ಷಪಾತಾರ್ಥವನ್ನು ಹೇಳತಕ್ಕ ವೇದದ ಪೂರ್ವಕಾಂಡವೆಲ್ಲವೂ ಕರ್ಮೋಪಯೋಗಿಯಾಗಿಯೂ ಜೀವಹಿಂಸಾಕರವಾದ ಕರ್ಮವನ್ನು ಹೇಳತಕ್ಕದ್ದಾಗಿಯೂ ಇರುವುದರಿಂದ ಇಂಥಾ ವೇದಭಾಗವನ್ನು ಪ್ರಮಾಣವೆಂದು ನಂಬುವುದೂ ಅದರ ವಿಷಯದಲ್ಲಿ ಗೌರವ

ಬುದ್ಧಿಯನ್ನು ಮಾಡುವುದೂ ಹೇಗೆಂದು ಜಿಜ್ಞಾಸೆ ಮಾಡುತ್ತಲಿದ್ದರು. ಈ ಜಿಜ್ಞಾಸೆಗೆ ಮೂಲಪ್ರಮಾಣವು ಚಾರ್ವಾಕ ದರ್ಶನವೇ ಆಗಿದ್ದರೂ, ಹಾಗೆ ಪ್ರಶ್ನೆಮಾಡುವವರನ್ನು ಯುಕ್ತಿವಾದದಿಂದಲೇ ಶ್ರೀಗಳವರು ಸಮಾಧಾನಗೊಳಿಸುತ್ತಿದ್ದರಲ್ಲದೆ ಉದಾಸೀನರಾಗಿರಲಿಲ್ಲ. ಅದು ಹೇಗೆಂದರೆ- ಪ್ರಪಂಚದಲ್ಲಿ ಸಿಂಹ ವ್ಯಾಘ್ರಾದಿ ಬಲಿಷ್ಠ ದುಷ್ಟ ಮೃಗಗಳೆಲ್ಲವೂ ಅನೇಕ ದುರ್ಬಲ ಪ್ರಾಣಿಗಳನ್ನು ಆಹಾರಾರ್ಥವಾಗಿ ಹಿಂಸಿಸಿ ಜೀವನಮಾಡುವುವು. ಅವುಗಳು ಹಿಂಸೆಯನ್ನು ಮಾಡಬಾರದೆಂಬ ಶಾಸ್ತ್ರಕ್ಕೆ ವಿಷಯವಲ್ಲವು. ಅವುಗಳಂತೆ ಕೇವಲ ಸ್ವಾರ್ಥಪರರಾದವರು ಉದರ ಪೂರಣಾರ್ಥವಾಗಿ ಪಶುಪಕ್ಷ್ಯಾದಿ ಜೀವಹಿಂಸೆಯನ್ನೂ ಮಾಡಬಾರದೆಂಬ ವೇದಾಂತಾಂತರ್ಗತವಾದ ನಿಷೇಧ ಶಾಸ್ತ್ರಕ್ಕೆ ವೇದವನ್ನು ಪ್ರಮಾಣವಾಗಿ ನಂಬತಕ್ಕ ಜನರು ಮಾತ್ರ ವಿಷಯರಾಗುವರು. ಯಾವ ವೇದವನ್ನು ಪ್ರಮಾಣವಾಗಿ ನಂಬಿ ಪ್ರಾಣಿಹಿಂಸೆಯು ನಿಂದಿತವಾದುದೆಂದು ಹೇಳುವರೋ, ಅದೇ ವೇದದಲ್ಲಿ ಪ್ರಾಣಿಹಿಂಸೆಯನ್ನು ಮಾಡಬಾರದೆಂಬ ಸಾಮಾನ್ಯ ಶಾಸ್ತ್ರವನ್ನು ಸಂಕೋಚಪಡಿಸುವ ಅಗ್ನೀಷೋಮೀಯವೆಂಬ ಯಾಗದಲ್ಲಿ ಪಶ್ವಾಲಂಭವನ್ನು ಮಾಡಬೇಕು ಎಂಬ ವಿಶೇಷ ಶಾಸ್ತ್ರವನ್ನು ಪ್ರಮಾಣವಾಗಿ ನಂಬದಿರುವುದಕ್ಕೆ ಮೂಲವೇನು? ಪ್ರಾಣಿಹಿಂಸೆಯನ್ನು ಮಾಡುವುದರಿಂದ ಉಂಟಾಗತಕ್ಕ ದೃಷ್ಟವಾದ ಬಾಧಕವೇನಿದೆ? ಅದೃಷ್ಟವಾದ ಪಾಪವು ಸಂಭವಿಸುವುದೆಂದು ಹಿಂಜರಿಯಬೇಕಲ್ಲವೆ? ಆ ವಿಷಯವು ಯಾವ ಪ್ರಮಾಣದಿಂದ ಗೋಚರವಾಯಿತು? ವೇದದಿಂದಲೂ, ತದರ್ಥಬೋಧಕವಾದ ಶಾಸ್ತ್ರದಿಂದಲೂ ಹಿಂಸೆಯು ಪಾತಕವಹವಾದದ್ದು ಎಂದು ತಿಳಿದುಕೊಂಡು ಒಪ್ಪಬೇಕು. ವೇದಶಾಸ್ತ್ರಗಳು ಕಾಲವಿಶೇಷದಲ್ಲಿ ಆತ್ಮಾರ್ಥವಾಗಿ ಮಾತ್ರವಲ್ಲದೆ ಮಾಡತಕ್ಕ ಹಿಂಸೆಯು ಪುಣ್ಯಸಂಪಾದಕವೆಂದು ಹೇಳಿದ್ದಲ್ಲಿ, ಆ ವೇದಶಾಸ್ತ್ರಗಳನ್ನು ತಿರಸ್ಕರಿಸುವುದರಲ್ಲಿ ವಿಧಿಬದ್ಧರಾದವರಿಗೆ ಸ್ವಾತಂತ್ರ್ಯವೆಲ್ಲಿರುವುದು? ಲೋಕವ್ಯವಹಾರ ರೀತಿಯಿಂದ ಒಬ್ಬ ಮನುಷ್ಯನು ಮತ್ತೊಬ್ಬನನ್ನು ಹೊಡೆವುದೂ, ಕೊಲ್ಲುವುದೂ ಶಿಕ್ಷಾರ್ಹವಾದ ಕೃತ್ಯಗಳೆಂದು ರಾಜಶಾಸನಗಳಿಂದ ವಿಧಿಸಲ್ಪಟ್ಟಿಲ್ಲವೋ? ಆ ರಾಜಶಾಸನವನ್ನು ಉಲ್ಲಂಘಿಸಿ ಹನನಾದಿ ಕರ್ಮಗಳನ್ನು ನಡೆಸುವವರು ದಂಡಿಸಲ್ಪಡುತ್ತಲಿರುವುದನ್ನು ಆಬಾಲ ವೃದ್ಧರೂ ತಿಳಿದಿರುವರಷ್ಟೆ? ಮತ್ತು ರಾಜಾಜ್ಞಾನಿಯುಕ್ತನಾದ ಒಬ್ಬ ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ಅವನು ಆಚರಿಸಿದ ದೋಷಕ್ಕೋಸ್ಕರ ರಾಜಾಜ್ಞೆಯನ್ನು ಅನುಸರಿಸಿ ಕೊಲ್ಲುವನಷ್ಟೆ? ಒಬ್ಬನನ್ನು ಮತ್ತೊಬ್ಬನು ಹಿಂಸಿಸುವುದೂ, ಕೊಲ್ಲುವುದೂ ದಂಡಾರ್ಹವೆಂದು ಸಾಮಾನ್ಯ ವಿಧಿಯನ್ನು ಮಾತ್ರ ಈ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳುವುದಾದರೆ, ರಾಜನಿಂದ ಆಜ್ಞಪ್ತನಾಗಿ ಮತ್ತೊಬ್ಬನನ್ನು ಕೊಂದ ರಾಜ ಭೃತ್ಯನೂ ಹನನದೋಷ ಮಾಡಿದಂತವನಾದುದರಿಂದ ಅವನಿಗೂ ಅದೇ ಶಿಕ್ಷೆಯನ್ನು ವಿಧಿಸಬೇಕಾಗಿ ಬರುವುದಿಲ್ಲವೇ?

ಈ ವಿಷಯದಲ್ಲಿ ರಾಜಾಜ್ಞೆಯಿಂದ ಮಾಡಲ್ಪಟ್ಟ ಹಿಂಸೆಯು ಹಿಂಸೆಯಲ್ಲವೆಂತಲೂ, ಹಾಗೆ ಮಾಡುವುದು ಆ ಭೃತ್ಯನಿಗೆ ಧರ್ಮವೆಂತಲೂ, ಹೇಳಬೇಕಾಗಿ ಬರುವುದು. ಹಿಂಸೆಯೂ, ಹಿಂಸೆಪಟ್ಟವನ ಅನುಭವವೂ, ರಾಜಾಜ್ಞೆಯಿಂದ ಮಾಡಲ್ಪಡುವ ಕೃತ್ಯದಲ್ಲಿಯಾಗಲಿ, ಸ್ವೇಚ್ಛೆಯಿಂದ ಮಾಡುವ ಕೃತ್ಯದಲ್ಲಿಯಾಗಲಿ ಒಂದೇ ವಿಧವಾಗಿರುವುದಲ್ಲದೆ, ಅವುಗಳಲ್ಲಿ ತಾರತಮ್ಯವೇನೂ ಇಲ್ಲವು. ಆದ್ದರಿಂದ ಹಿಂಸೆಯು ಕೆಲವು ಸಮಯದಲ್ಲಿ ಅಹಿಂಸೆಯಾಗಿ ಪರಿಣಮಿಸುವುದೆಂದು ಒಪ್ಪಿಕೊಳ್ಳಬೇಕಾಗುವುದಷ್ಟೆ? ಅದರಂತೆ ''ಶ್ರುತಿಸ್ಮೃತೀ ಮಮೈವಾಜ್ಞೇ'' ಎಂದು ಹೇಳಲ್ಪಟ್ಟಿಡುವ ಭಗವದಾಜ್ಞಾರೂಪವಾದ ವೇದವನ್ನು ಅನುಸರಿಸಿ ಮಾಡತಕ್ಕ ಹಿಂಸೆಯೂ ಅಹಿಂಸೆಯಾಗಿಯೇ ಪರಿಣಮಿಸುವುದರಿಂದ ಪ್ರತ್ಯವಾಯಕರ ವಾಗುವುದಿಲ್ಲವು. ಕ್ಷತ್ರಿಯನಿಗೆ ಯುದ್ಧವು ಧರ್ಮವೆಂದು ಶಾಸ್ತ್ರದಿಂದ ವಿಧಿಸಲ್ಪಟ್ಟಿರುವುದು. ಆತನಿಗೆ ಧರ್ಮವಾದ ಯುದ್ಧಕರ್ಮವನ್ನು ಆಚರಿಸುವುದರಲ್ಲಿ ಅನೇಕ ಪ್ರಾಣಿಗಳು ಹತರಾಗುವರು. ಯುದ್ಧದಲ್ಲಿ ಜಯಶೀಲನಾದ ರಾಜನು ವಿಸ್ತಾರವಾದ ರಾಷ್ಟ್ರವನ್ನು ತನ್ನ ಅಧೀನಮಾಡಿಕೊಂಡು ಯಥೇಚ್ಛವಾಗಿ ಸುಖಪಡುವನು. ಈ ಸಂದರ್ಭದಲ್ಲಿ ಕೇವಲ ತನ್ನ ಸಂಪತ್ತಿಗಾಗಿಯೂ ತನ್ನ ಸುಖಕ್ಕಾಗಿಯೂ, ಯುದ್ಧಕರ್ಮವನ್ನು ಆರಂಭಿಸಿ ಅನೇಕ ಲಕ್ಷ ಪ್ರಾಣಿಗಳನ್ನು ಕೊಂದು ಕ್ರೂರವಾದ ಮಹಾಹಿಂಸೆಯನ್ನು ಮಾಡುವ ರಾಜನು ವೇದಶಾಸ್ತ್ರಗಳಿಂದಾಗಲಿ, ಕಾನೂನುಗಳಿಂದಾಗಲಿ ದೋಷಿಯೆಂದು ನಿರ್ಣಯಿಸಲ್ಪಟ್ಟು ದಂಡಿಸಲ್ಪಡುವನೋ? ಅದೇ ರಾಜನು ಯುದ್ಧಕಾಲವಲ್ಲದ ಇತರ ಸಮಯಗಳಲ್ಲಿ ಸ್ವಪ್ರಯೋಜನಕ್ಕೆ ಮಾತ್ರ ಒಬ್ಬ ಮನುಷ್ಯನನ್ನು ಹಿಂಸಿಸಿದರೂ, ಕೊಂದರೂ, ಆ ರಾಜನು ನಿಂದ್ಯನಾಗುವುದಿಲ್ಲವೇ? ಆತನು ದಂಡಾರ್ಹನೆಂದು ನ್ಯಾಯಪರರಿಂದ ನಿರ್ಣಯಿಸಲ್ಪಡುವುದಿಲ್ಲವೇ? ಯುದ್ಧಕಾಲದಲ್ಲಿ ಅನೇಕ ಲಕ್ಷ ಜನಗಳನ್ನು ಕೊಂದು ಸ್ವಪ್ರಯೋಜನವನ್ನೇ ರಾಜನು ಹೊಂದಿದರೂ ಆತನು ನಿರ್ದೋಷಿಯೆಂದು ಹೇಳೋಣವೂ, ತದಿತರ ಕಾಲದಲ್ಲಿ ಅದೇ ರಾಜನು ಒಬ್ಬ ಮನುಷ್ಯನನ್ನು ಕೊಂದರೆ ಆತನು ದೋಷಿಯೆಂದು ಅಭಿಪ್ರಾಯ ಪಡೋಣವೂ ಶಾಸ್ತ್ರಪ್ರಮಾಣದಿಂದಲ್ಲದೆ ಈ ವಿಷಯದಲ್ಲಿ ಯುಕ್ತಿಯೇನಿರುವುದು? ಇದರಂತೆ ಶಾಸ್ತ್ರೀಯ ಕರ್ಮಾಚರಣೆಯನ್ನು ಮಾಡತಕ್ಕ ಕಾಲದಲ್ಲಿ ಶಾಸ್ತ್ರಾಧಾರದಿಂದ ಮಾಡತಕ್ಕ ಹಿಂಸೆಯು ದೋಷಕರವಲ್ಲವೆಂದು ತಿಳಿದುಕೊಳ್ಳುವುದಕ್ಕೆ ಬೇರೆ ಯುಕ್ತಿಗಳೂ ಪ್ರಮಾಣಗಳೂ ಬೇಕಾಗಿರುವುವೋ? ಒಂದುವೇಳೆ ಮೇಲೆ ಹೇಳಿದ ಲೋಕದೃಷ್ಟಾಂತದಿಂದ, ತಪ್ಪನ್ನು ಮಾಡಿದವನು ರಾಜದಂಡನೆಗೆ ಪಾತ್ರನಾಗುವನು; ಅವನು ಮಾಡಿದ ತಪ್ಪಿಗೆ ವಿಧಿಸಲ್ಪಟ್ಟ ಹಿಂಸೆಯನ್ನು ಆ ರಾಜನು ಭೃತ್ಯನ ಮೂಲಕ ನಡೆಸುವನು; ಆದ್ದರಿಂದ ಆ ಭೃತ್ಯನಾಗಲಿ ರಾಜನಾಗಲಿ ದೋಷಿಗಳಾಗುವುದಿಲ್ಲವೆಂದು ಹೇಳುವುದು ಸಹಜವಾಗಿರ

ಬಹುದು. ಆದರೆ ಜ್ಞಾನಶೂನ್ಯವಾದ ಪಶುವು ಯಾರಿಗೆ ಏನು ತೊಂದರೆಯನ್ನು ಮಾಡುವುದು? ಅದರಿಂದ ಹಿಂಸಿಸಲ್ಪಟ್ಟವರು ಯಾರು? ಯಾವ ತಪ್ಪಿಗೋಸ್ಕರ ಆ ಪಶುವನ್ನು ಹಿಂಸಿಸಬೇಕು? ಆದ್ದರಿಂದ ಅಪರಾಧಿಯಲ್ಲದ ಪಶುವಿನ ಹನನವು ಹಿಂಸೆಯಾಗುವುದರಿಂದ, ಸ್ವರ್ಗಾದಿ ಸುಖಾನುಭವಕ್ಕೆ ಹಿಂಸಾಪೂರ್ವಕ ಯಾಗ ಮಾಡುವ ಯಜಮಾನನು ದೋಷಿಯಾಗುವವನಲ್ಲವೇ? ಎಂದು ಹೇಳಬಹುದು. ಈ ಶಂಕೆಯೂ ಯುಕ್ತವಾದುದಲ್ಲವು. ಯಾಗಫಲೋದ್ದೇಶವು ಯಜಮಾನನಿಗೆ ಇದ್ದು ಯಾಗವು ಸ್ವಪ್ರಯೋಜನಕ್ಕೋಸ್ಕರವೇ ಮಾಡಲ್ಪಡುವುದಾದರೂ, ಸ್ವಪ್ರಯೋಜನೋದ್ದೇಶದಿಂದ ಯುದ್ಧಮಾಡುವ ರಾಜನಿಗೆ ಯುದ್ಧವು ಸ್ವಕರ್ಮವಾಗಿ ವಿಧಿಸಲ್ಪಟ್ಟಿರುವ ಕಾರಣ ಆತನು ಸ್ವಕರ್ಮವನ್ನು ಆಚರಿಸುವುದರಿಂದ ಹೇಗೆ ದೋಷಿಯಾಗುವುದಿಲ್ಲವೋ ಅದರಂತೆ ಸ್ವಕರ್ಮವಾಗಿ ವಿಧಿಸಲ್ಪಟ್ಟ ಯಾಗವನ್ನು ಮಾಡಿದವನೂ ವಿಧ್ಯುಕ್ತವಾದ ಹಿಂಸೆಮಾಡಿದರೂ ಅವನು ದೋಷಿಯಾಗುವುದಿಲ್ಲವು. ಹಿಂಸಿಸಲ್ಪಡುವ ಪಶುವು ಯಾಗಾರ್ಥವಾಗಿಯೇ ಭಗವಂತನಿಂದ ಉಂಟಾದಂತೆ ''ಯಜ್ಞಾರ್ಥಂ ಪಶವಸ್ಸೃಷ್ಟಾಃ'' ಎಂಬ ಶಾಸ್ತ್ರದಿಂದ ತಿಳಿದುಬರುವುದು. ಯಾವ ಉದ್ದೇಶದಿಂದ ಯಾವ ಪದಾರ್ಥವು ಈಶ್ವರನಿಂದ ಸೃಷ್ಟಿಸಲ್ಪಟ್ಟಿರುವುದೋ ಆ ಪದಾರ್ಥವನ್ನು ಆ ಉದ್ದೇಶಕ್ಕೆ ವಿನಿಯೋಗಿಸುವುದರಿಂದ ದೋಷವೇನೂ ಇರುವುದಿಲ್ಲ. ಗೋವುಗಳು ಮನುಷ್ಯನ ಪ್ರಯೋಜನಕ್ಕೋಸ್ಕರವೇ ಈಶ್ವರನಿಂದ ಸೃಷ್ಟವಾದಂತೆ ತಿಳಿದು ಮಳೆಯಲ್ಲಿಯೂ, ಬಿಸಿಲಿನಲ್ಲಿಯೂ ಎತ್ತುಗಳನ್ನು ಹಿಂಸಿಸಿ ಕೃಷಿಯಿಂದ ಜೀವಿಸುವರಲ್ಲವೆ? ಹಾಗೆ ತಿಳಿದುಕೊಳ್ಳದೆ ಕೃಷಿಗೋಸ್ಕರವೆ ಎತ್ತುಗಳು ಭಗವಂತನಿಂದ ಸೃಷ್ಟವಾಗಲಿಲ್ಲವೆನ್ನುವ ಪಕ್ಷದಲ್ಲಿ, ಅದು ಹಿಂಸೆಯಾಗಲಿಲ್ಲವೋ? ಇದರಂತೆ ಅನೇಕ ದೃಷ್ಟಾಂತಗಳಿಂದ ವಿಚಾರಮಾಡಿ ಮೇಲಿನ ಶಂಕೆಯನ್ನು ದೂರಪಡಿಸಬಹುದಾಗಿ, ಕರ್ಮಭಾಗವನ್ನು ಹೇಳತಕ್ಕ ವೇದವನ್ನು ಅಪ್ರಮಾಣವೆಂದು ಶಂಕಿಸುವುದಕ್ಕಾಗಲಿ, ಅದರ ವಿಷಯದಲ್ಲಿ ಉದಾಸೀನಭಾವವನ್ನು ಪಡೆವುದಕ್ಕಾಗಲಿ ಕಾರಣವಿಲ್ಲವು ಎಂದು ವೇದವನ್ನೊಪ್ಪುವವರಲ್ಲಿ ಏಕದೇಶಿಗಳನ್ನು ಸಮಾಧಾನಗೊಳಿಸುತ್ತಿದ್ದರು.

ಇನ್ನು ಕೆಲವರು-'' ಹದಿನೆಂಟು ಪುರಾಣಗಳನ್ನೂ ವ್ಯಾಸರೊಬ್ಬರೇ ಹೇಳಿರುವರೆಂದು ಪ್ರಸಿದ್ಧಿಯಿರುವುದು. ಅವುಗಳಲ್ಲಿ ಒಂದು ಪುರಾಣವು ಮತ್ತೊಂದನ್ನು ಅನುಸರಿಸಿಲ್ಲವು. ಎಲ್ಲಾ ಪುರಾಣಗಳೂ ಭಿನ್ನಭಿನ್ನಾರ್ಥಪ್ರತಿಪಾದಕಗಳಾಗಿಯೂ ಸ್ವತಂತ್ರಗಳಾಗಿಯೂ ಇರುವುವು. ಪ್ರತಿಯೊಂದು ಪುರಾಣದಲ್ಲಿಯೂ, ಆಯಾ ಪುರಾಣವೇ ಮತ್ತು ಅದರದರಲ್ಲಿ ಪ್ರತಿಪಾದ್ಯವಾದ ವಿಷಯವೇ ಸರ್ವೋತ್ತಮವೆಂತಲೂ ಸರ್ವಪ್ರಮಾಣವೆಂತಲೂ ಹೇಳಿರುವರು. ಒಂದುವೇಳೆ ಏಕ ಕರ್ತೃಕವಾಗಿದ್ದರೂ ಪರಸ್ಪರ ವಿರುದ್ಧಾರ್ಥವುಳ್ಳ ಈ

ಪುರಾಣಗಳಲ್ಲಿ ಎಲ್ಲವನ್ನೂ ಪ್ರಮಾಣವೆಂತಲೂ, ಇವುಗಳಲ್ಲಿ ಹೇಳುವ ವಿಷಯಗಳೆಲ್ಲವೂ
ನಿಶ್ಚಯವಾದುವೆಂತಲೂ ನಂಬುವುದು ಹೇಗೆ? ಆದ್ದರಿಂದ ಪುರಾಣಗಳು ಪ್ರಮಾಣವಾದವು
ಗಳಲ್ಲ'' ಎಂದು ಆಕ್ಷೇಪಿಸುತ್ತಲಿದ್ದರು. ''ಕರ್ತೃಭೇದವಿಲ್ಲದಿರುವುದರಿಂದಲೇ ಎಲ್ಲಾ
ಪುರಾಣಗಳನ್ನೂ ಪ್ರಮಾಣವೆಂದು ತಿಳಿಯಬಹುದು. ಅನೇಕರು ಪುರಾಣಕರ್ತರಾಗಿದ್ದರೆ
ಪರಸ್ಪರ ವಿರುದ್ಧಾರ್ಥಪ್ರತಿಪಾದನಾದಿ ವ್ಯತ್ಯಾಸಗಳು ಸಹಜವಾಗಿಯೇ ಉಂಟಾಗುತ್ತಲಿದ್ದುವು.
ಹಾಗಿಲ್ಲದೆ ಏಕಕರ್ತೃಕವಾಗಿದ್ದು ವಿರುದ್ಧಾರ್ಥ ಪ್ರತಿಪಾದನವಿರುವಂತೆ ತೋರುವುದರಿಂದ
ಈ ವಿಷಯವು ವಿಚಾರಾರ್ಹವಾಯಿತು. ಸರ್ವವ್ಯಾಪಕನಾಗಿಯೂ ಅದ್ವಿತೀಯನಾಗಿಯೂ,
ಇರುವ ಪರಮಾತ್ಮನ ಸ್ವರೂಪವನ್ನು ಅನೇಕ ವಿಧವಾಗಿ ಹೇಳುವುದಕ್ಕೆ ಅವಕಾಶ
ವಾದುದರಿಂದಲ್ಲವೇ ಅದು ವಿಚಾರಾರ್ಹವಾಗಿ ವಿಚಾರದಿಂದ ಸಿದ್ಧಾಂತಮಾಡಬೇಕಾದ
ಆವಶ್ಯಕತೆಯುಂಟಾಯಿತು? ಅದರಂತೆ ಪುರಾಣಗಳ ವಿಷಯದಲ್ಲಿಯೂ ವಿಚಾರಮಾಡಿದರೆ,
ಸಂದೇಹ ನಿವೃತ್ತಿಯಾಗಿ ತತ್ತ್ವವು ಗೋಚರವಾಗುವುದು. ಪ್ರಾಣಿಗಳ ವಾಸನೆಯು ಭಿನ್ನಭಿನ್ನ
ವಾಗಿರುವುದು. ಅವರವರ ಜನ್ಮಾಂತರೀಯ ವಾಸನೆಗಳಿಗನುರೂಪವಾಗಿ ದೈವ ಭಕ್ತಿಯನ್ನು
ಮಾಡಿ ಕೃತಾರ್ಥರಾಗುವುದಕ್ಕೋಸ್ಕರ ಸರ್ವಜ್ಞರಾದ ವ್ಯಾಸಮಹರ್ಷಿಗಳು ಅನೇಕ
ಪುರಾಣಗಳನ್ನು ಹೇಳಿರುವರು. ಹಾಗಿಲ್ಲದೆ ಯಾವುದಾದರೊಂದು ಪುರಾಣವನ್ನು ಹೇಳಿ
ಅದರಲ್ಲಿ ಪ್ರತಿಪಾದ್ಯವಾದ ಭಗವನ್ಮೂರ್ತಿಯೇ ಸರ್ವೋತ್ತಮವಾದುದೆಂತಲೂ,
ತತ್ಪ್ರತಿಪಾದಿತಾರ್ಥಗಳು ಮಾತ್ರ ಪ್ರಮಾಣವಾದವುಗಳೆಂತಲೂ ಹೇಳುವುದು ವ್ಯಾಸ
ಮಹರ್ಷಿಗಳಿಗೆ ಕಷ್ಟವಾಗಿರಲಿಲ್ಲ; ಇದರಿಂದ ಅವರಿಗೆ ಪ್ರಯಾಸವೂ ಕಡಿಮೆಯಾಗುತ್ತಲಿತ್ತು.
ಲೋಕಾನುಗ್ರಹಾರ್ಥವಾಗಿ ಶರೀರವನ್ನು ಪಡೆದ ಆ ಮಹರ್ಷಿಗಳು ಒಂದೇ ಪುರಾಣವನ್ನು
ಹೇಳಿದ್ದ ಪಕ್ಷದಲ್ಲಿ, ಆ ಪುರಾಣದಲ್ಲಿ ಪ್ರತಿಪಾದ್ಯವಲ್ಲದ ಬೇರೊಂದು ಮೂರ್ತಿಯಲ್ಲಿ
ಜನ್ಮಾಂತರ ವಾಸನಾಬಲದಿಂದ ವಿಶ್ವಾಸವಿರತಕ್ಕವರಿಗೆ ಆ ಪುರಾಣ ಪ್ರತಿಪಾದ್ಯ ಮೂರ್ತಿಯಲ್ಲಿ
ಭಕ್ತಿಯುಂಟಾಗದೆ ಅಂಥವರಿಗೆ ಈಶ್ವರೋಪಾಸನೆಯೇ ಇಲ್ಲದೆ, ಅವರು ಕೃತಾರ್ಥ
ರಾಗುವುದಕ್ಕೆ ಅವಕಾಶವಿಲ್ಲದಂತಾಗುತ್ತಲಿತ್ತು. ಈ ಅಭಿಪ್ರಾಯದಿಂದಲೇ ಆ ಮಹನೀಯರು
ಅನೇಕ ಪುರಾಣಗಳನ್ನು ಹೇಳಿರುವರು. ಈ ಅರ್ಥವನ್ನು ಲೋಕಸಿದ್ಧವಾದ ದೃಷ್ಟಾಂತ
ದಿಂದಲೂ ಸಮರ್ಥಿಸಬಹುದು. ಒಬ್ಬ ಗೃಹಸ್ಥನು ತನ್ನ ಮನೆಗೆ ಭೋಜನಕ್ಕೆ ಅನೇಕರನ್ನು
ಕರೆಯುವನು. ಆ ಸಂದರ್ಭದಲ್ಲಿ ಬಹುವಿಧ ಶಾಕಪಾಕಗಳನ್ನು ಮಾಡುವುದು
ವಾಡಿಕೆಯಾಗಿರುವುದಷ್ಟೆ? ಇದರ ಕಾರಣವನ್ನು ವಿಚಾರಿಸಿದರೆ, ಭೋಜನಕ್ಕೆ ಬರುವವರು
ಅಭ್ಯಾಸಕ್ಕನುಗುಣವಾಗಿ ಅವರವರಿಗೆ ಇಷ್ಟವಾದ ಪದಾರ್ಥದ ಭೋಜನದಿಂದ
ತೃಪ್ತರಾಗಬೇಕೆಂಬ ಉದ್ದೇಶದಿಂದಲ್ಲದೆ ಬೇರೆ ಕಾರಣದಿಂದ ಅನೇಕ ಪದಾರ್ಥಗಳನ್ನು

ಮಾಡುವ ವಾಡಿಕೆ ಇರುವುದೆಂದು ಹೇಳಲು ಅವಕಾಶವಿಲ್ಲವು. ಹಾಗಲ್ಲದೆ, ಭೋಜನ
ಮಾಡಿಸತಕ್ಕ ಗೃಹಸ್ವಾಮಿಗೆ ಇಷ್ಟವಾದ ಪದಾರ್ಥವನ್ನು ಮಾಡಿದರೂ ಅಥವಾ
ಯಾವುದಾದರೂ ಉತ್ತಮವಾದ ಒಂದು ಪದಾರ್ಥವನ್ನು ಮಾತ್ರ ಸಿದ್ಧಪಡಿಸಿದರೂ ಹಾಗೆ
ಮಾಡಿಸಿದ ಪದಾರ್ಥದಲ್ಲಿ ಇಚ್ಛೆಯಿಲ್ಲದವರು ಆ ದಿನ ಉದರ ಪೂರ್ತಿಯಾಗುವಂತೆ
ಯಥೇಚ್ಛವಾಗಿ ಭೋಜನ ಮಾಡುವುದಕ್ಕೆ ಅವಕಾಶವಿಲ್ಲದಂತಾಗುವುದು. ಈ
ದೃಷ್ಟಾಂತದಿಂದ ಪುರಾಣ ಬಹುತ್ವಕ್ಕೂ, ಅವುಗಳ ಪರಸ್ಪರ ಭೇದಕ್ಕೂ ಇರುವ ಕಾರಣವನ್ನು
ಸುಲಭವಾಗಿ ತಿಳಿಯಬಹುದು. ಮೇಲಣ ಅಭಿಪ್ರಾಯದಿಂದ ಹೇಳಲ್ಪಟ್ಟಿರುವ ಪುರಾಣಗಳಲ್ಲಿ
ಆಯಾ ಪುರಾಣದಲ್ಲಿ ಪ್ರತಿಪಾದ್ಯವಾದ ಅರ್ಥಗಳೇ ಪರಮಪ್ರಮಾಣವಾದವುಗಳೆಂತಲೂ,
ಆಯಾ ದೇವತೆಯೇ ಜಗತ್ಕಾರಣ ಜಗನ್ನಿಯಾಮಕನೆಂತಲೂ, ತದಿತರಗಳೆಲ್ಲವೂ ಆ
ದೇವತೆಗೆ ಅಧೀನಗಳೆಂತಲೂ ಹೇಳದೆ ಎಲ್ಲವೂ ಸಮಾನವೆಂದಾಗಲಿ ತಾರತಮ್ಯದಿಂದ
ಉತ್ತಮ ಮಧ್ಯಮವೆಂದಾಗಲಿ ಹೇಳಿದ್ದರೆ, ಎಷ್ಟು ವಾಸನಾಬಲವಿದ್ದರೂ ನಿಶ್ಶಂಕವಾಗಿ
ಪ್ರವೃತ್ತಿಯುಂಟಾಗಲು ಪ್ರತಿಬಂಧಕವಾಗಿ ಚಿತ್ತಚಾಂಚಲ್ಯವನ್ನುಂಟುಮಾಡುತ್ತಿದ್ದವು. ಈ
ಕಾರಣದಿಂದ ಆಯಾ ಪುರಾಣವನ್ನು ಹೇಳುವಾಗ, ಆ ಪುರಾಣವೇ ಇತರ ಪುರಾಣ
ಗಳಿಗಿಂತಲೂ ಸರ್ವೋತ್ತಮವೆಂತಲೂ, ತತ್ಪ್ರತಿಪಾದ್ಯ ಭಗವನ್ಮೂರ್ತಿಯೇ ಸರ್ವೋಪಾಸ್ಯ
ವೆಂತಲೂ ಹೇಳಲ್ಪಟ್ಟಿರುವುದಲ್ಲದೆ ಬೇರೆಯಿಲ್ಲ. ಇದರಿಂದ ಸೂಕ್ಷ್ಮವಾಗಿಯೂ
ದೀರ್ಘವಾಗಿಯೂ ವಿಚಾರ ಮಾಡಿದರೆ, ಪುರಾಣಗಳೂ ಅವುಗಳಲ್ಲಿ ಹೇಳಿರತಕ್ಕ
ಅರ್ಥಗಳೂ ದೇವತಾಮೂರ್ತಿ ಭೇದಗಳೂ ಇವೆಲ್ಲವೂ ಒಂದೇ ಎಂದು ವ್ಯಾಸ
ಮಹರ್ಷಿಗಳ ಅಭಿಪ್ರಾಯವಾಗಿ ತಿಳಿದುಬರುವುದೇ ಹೊರತು ಅವು ಭಿನ್ನಗಳೆಂತಲೂ,
ಅಪ್ರಮಾಣಗಳೆಂತಲೂ, ವಿರುದ್ಧಾರ್ಥಗಳನ್ನು ಹೇಳಿರುವರೆಂತಲೂ ಆಕ್ಷೇಪಿಸುವುದಕ್ಕೆ
ಸುತರಾಂ ಅವಕಾಶವಿಲ್ಲವು'' ಎಂದು ಶ್ರೀಗಳವರು ಎಲ್ಲಾ ಪುರಾಣಗಳಿಗೂ ಅರ್ಥ
ಸಮನ್ವಯಮಾಡಿ ಉಪಪಾದಿಸುತ್ತಿದ್ದರು.

ವಿಚಾರದಿಂದ ತತ್ತ್ವವನ್ನರಿಯದೆ ತಾವು ಶೈವರೆಂತಲೂ, ವೈಷ್ಣವರೆಂತಲೂ,
ಶಾಕ್ತರೆಂತಲೂ ಹೇಳಿಕೊಂಡು ಪರಸ್ಪರ ದ್ವೇಷಬುದ್ಧಿಯಿಂದ ಭಕ್ತಿ ಮಾಡತಕ್ಕ ಕೆಲವು
ಜನರು ಯಾವ ಮೂರ್ತಿಯನ್ನು ಭಜಿಸಿದರೂ, ಅವರು ಮತ್ತೊಂದು ಮೂರ್ತಿಯನ್ನು
ಮನಸ್ಸಿನಿಂದಲೂ ವಾಕ್ಕಿನಿಂದಲೂ ದ್ವೇಷಿಸುವುದರಿಂದ ಅಂತಹ ಜನರು ಮಾಡುವ ಭಕ್ತಿಗೂ
ಉಪಾಸನೆಗೂ ಫಲವಿಲ್ಲದಂತಾಗಿ, ಅವರಿಗೆ ಅನಿಷ್ಟ ಪ್ರಾಪ್ತಿಯೂ ಉಂಟಾಗುವುದೆಂಬ
ಕರುಣೆಯಿಂದ, ಹಾಗೆ ಮಾಡುವ ಜನರನ್ನು ಕುರಿತು ಶ್ರೀಗಳವರು ಯುಕ್ತಿವಾದದಿಂದ ಆ
ಜನರು ತಾವಾಗಿಯೇ ತಮ್ಮ ವರ್ತನವು ಅನ್ಯಾಯವಾದದ್ದೆಂದು ತಿಳಿದುಕೊಳ್ಳುವಂತೆ

ಮಾಡುತ್ತಲಿದ್ದರು. ಅದು ಹೇಗೆಂದರೆ : ಶಿವಪಾರಮ್ಯವನ್ನು ಹೇಳತಕ್ಕವರು ಶಿವನು ಸರ್ವವ್ಯಾಪಕನೆಂತಲೂ, ಸರ್ವಚೈತನ್ಯನೆಂತಲೂ ಒಪ್ಪಿಕೊಳ್ಳಬೇಕಾಗುವುದು. ಹಾಗೆ ಒಪ್ಪಿಕೊಳ್ಳುವುದಾದರೆ ವಿಷ್ಣುವೂ ಶಿವನಲ್ಲಿ ಅಂತರ್ಗತನಾಗುವನಷ್ಟೆ? ಶಿವನಲ್ಲಿ ಅಂತರ್ಗತನಾಗುವುದಿಲ್ಲವೆಂದು ಹೇಳಿದರೆ ಶಿವನಿಗೆ ಸರ್ವವ್ಯಾಪಕತ್ವವು ಬರುವುದಿಲ್ಲ. ಆದ್ದರಿಂದ ವಿಷ್ಣುವಿಗೂ ತದಿತರರಿಗೂ ಶಿವನಲ್ಲಿ ಅಂತರ್ಭಾವವನ್ನು ಹೇಳಿತೀರಬೇಕು. ಈ ಸಂದರ್ಭದಲ್ಲಿ ಶಿವನಲ್ಲಿ ಒಂದು ಭಾಗವಾದ ವಿಷ್ಣುವನ್ನು ದೂಷಿಸಿದರೂ, ಆತನಲ್ಲಿ ಹೇಯಬುದ್ಧಿಯನ್ನು ಮಾಡಿದರೂ, ಹಾಗೆ ಮಾಡುವ ದೂಷಣೆಯನ್ನೂ ಹೇಯಬುದ್ಧಿಯನ್ನೂ ಶಿವನಲ್ಲಿಯೇ ಮಾಡಿದಂತಾಗುವುದೋ ? ಅಥವಾ ಬೇರೊಬ್ಬರಲ್ಲಿ ಮಾಡಿದಂತಾಗಿ ಶಿವನನ್ನು ಭೂಷಿಸಿದಂತಾಗುವುದೋ ? ಇದರಂತೆ ವಿಷ್ಣು ಪಾರಮ್ಯವನ್ನು ಹೇಳತಕ್ಕವರೂ ಶಿವನನ್ನು ದೂಷಿಸುವುದರಿಂದಲೂ, ಆತನಲ್ಲಿ ಹೇಯಬುದ್ಧಿಯನ್ನು ಮಾಡುವುದರಿಂದಲೂ ವಿಷ್ಣುದೂಷಣೆಯನ್ನು ಮಾಡಿದಂತಾಗುವುದೇ ಹೊರತು ಬೇರೆಯಲ್ಲವು. ಆದ್ದರಿಂದ ಭಗವಂತನೊಬ್ಬನಿರುವನೆಂದು ಒಪ್ಪಿಕೊಳ್ಳತಕ್ಕ ಆಸ್ತಿಕ ಜನರು ಭೇದಬುದ್ಧಿಯಿಂದ ಭಗವದುಪಾಸನೆಯನ್ನು ಮಾಡಿದರೂ, ಅವರು ಪರಸ್ಪರ ದ್ವೇಷಬುದ್ಧಿಯಿಂದ ಭಕ್ತಿಯನ್ನಾಗಲಿ ಉಪಾಸನೆಯನ್ನಾಗಲಿ ಮಾಡುವುದಕ್ಕೆ ಯಾವ ಸಂದರ್ಭದಲ್ಲಿಯಾದರೂ ಅವಕಾಶವೆಲ್ಲಿರುವುದು ? ಎಂದು ಪ್ರಶ್ನೆಯನ್ನು ಮಾಡಿ, ಹಾಗೆ ದ್ವೇಷ ಬುದ್ಧಿಯಿಂದ ಭಗವಂತನನ್ನು ಆರಾಧಿಸತಕ್ಕವರು ನಿರುತ್ತರರೂ ಲಜ್ಜಿತರೂ ಆಗುವಂತೆ ಮಾಡುತ್ತಿದ್ದರು.

ಮತ್ತೆ ಕೆಲವರು - ಮಾತಾಪಿತೃಗಳ ಶ್ರಾದ್ಧವನ್ನು ಅತ್ಯಾವಶ್ಯಕವಾಗಿ ಮಾಡಲೇಬೇಕೆಂತಲೂ, ಮಾಡದವರು ಪ್ರಬಲದೋಷ ಭಾಗಿಗಳಾಗುವರೆಂತಲೂ ಧರ್ಮಶಾಸ್ತ್ರದಲ್ಲಿ ಹೇಳಿದೆ. ವರ್ತಮಾನ ಶರೀರಪಾತಾನಂತರ ಅವರವರ ಪುಣ್ಯಪಾಪ ಕರ್ಮಗಳಿಗನುಸಾರವಾಗಿ ಮತ್ತೊಂದು ಶರೀರವು ಬರುವುದೆಂದು ಪುರಾಣಗಳಲ್ಲಿ ಹೇಳಿದೆ. ಇದರಿಂದ ಒಬ್ಬ ಜೀವನಿಗೆ ಅನೇಕಾವೃತ್ತಿ ಜನನ ಮರಣಗಳುಂಟಾಗಿ ಒಬ್ಬನೇ ಅನೇಕರಿಗೆ ತಂದೆಯಾಗಿಯೂ, ಮಗನಾಗಿಯೂ, ತಿರ್ಯಗ್ಜಂತುವಾಗಿಯೂ, ವೃಕ್ಷವಾಗಿಯೂ, ಶಿಲೆಯಾಗಿಯೂ ಜನ್ಮವನ್ನು ಪಡೆಯಬಹುದು. ಇಂಥಾ ಜೀವನಿಗೆ ಎಷ್ಟು ಜನರು ಶ್ರಾದ್ಧ ಮಾಡಬೇಕು ? ಯಾವ ಜೀವನನ್ನು ಉದ್ದೇಶಿಸಿ ಶ್ರಾದ್ಧ ಮಾಡುವರೋ ಆ ಜೀವನು ಬೇರೊಂದು ಕಡೆ ಜನ್ಮವನ್ನು ಪಡೆದಿದ್ದರೆ ಅವನನ್ನು ಉದ್ದೇಶಿಸಿ ಮಾಡುವ ಬ್ರಾಹ್ಮಣಭೋಜನ ಪಿಂಡದಾನಾದಿಗಳಿಂದ ಆ ಜೀವನಿಗೆ ತೃಪ್ತಿಯುಂಟಾಗುವುದು ಹೇಗೆ? ಈ ರೀತಿಯಿಂದ ಅನೇಕ ಸಂಶಯ ವಿಪರ್ಯಯಗಳಿಗೆ ಅವಕಾಶವಿರುವುದರಿಂದ ಧರ್ಮಶಾಸ್ತ್ರವನ್ನು ನಂಬಿ ಶ್ರಾದ್ಧ ಮಾಡುವುದರ ಪ್ರಯೋಜನವೇನು ? ಪಿತೃಗಳ ಉದ್ದೇಶದಿಂದ ಮಾಡತಕ್ಕ ಕರ್ಮಗಳಲ್ಲಿ ಯಜ್ಞೋಪವೀತ

ವನ್ನು ಅಪಸವ್ಯವಾಗಿ ಧರಿಸಬೇಕೆಂತಲೂ, ಕಾಲನ್ನು ಮಡಿಸಿಕೊಂಡು ಕುಳ್ಳಿರಬೇಕೆಂತಲೂ, ಕೆಲವು ಕರ್ಮಗಳನ್ನು ನಿಂತು ಮಾಡಬೇಕೆಂತಲೂ, ಇನ್ನು ಕೆಲವನ್ನು ಕುಳಿತು ಮಾಡಬೇಕೆಂತಲೂ, ಇವೇ ಮೊದಲಾದ ತಂತ್ರ ನಿರ್ಬಂಧಗಳನ್ನು ಏರ್ಪಡಿಸಿರುವುದರ ಪ್ರಯೋಜನವೇನು ? ಎಂದು ಆಕ್ಷೇಪಿಸುತ್ತಿದ್ದರು. ಶ್ರೀಗಳವರು ಅಂಥವರನ್ನು ಪ್ರಾಯಃ ಲೋಕದೃಷ್ಟಾಂತಪುರಸ್ಸರವಾದ ಯುಕ್ತಿವಾದಗಳಿಂದಲೇ ಸಮಾಧಾನಗೊಳಿಸಿ, ಅವರಿಗೆ ಶಾಸ್ತ್ರದಲ್ಲಿ ನಂಬಿಕೆಯುಂಟಾಗುವಂತೆ ಮಾಡುತ್ತಿದ್ದರು. ಅದು ಹೇಗೆಂದರೆ : ಪುರಾಣಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ ಹೇಳಿರುವಂತೆ ಜೀವನಿಗೆ ಸ್ವರೂಪಜ್ಞಾನವು ದೃಢವಾಗಿ ಬರುವವರೆಗೂ ಆ ಜೀವನು ಮುಕ್ತನಾಗುವುದಿಲ್ಲ. ಆತ್ಮಜ್ಞಾನದಿಂದ ಮೋಕ್ಷಪ್ರಾಪ್ತಿಯಾಗುವ ಪರ್ಯಂತವೂ ಕರ್ಮಬದ್ಧನಾಗಿ ಕರ್ಮವನ್ನು ಬಿಡದೆ ಮಾಡುವನು. ಮಾಡಿದ ಕರ್ಮವು ಫಲವನ್ನು ಕೊಡದೇ ಹೋಗುವುದಿಲ್ಲವು. ಕರ್ಮಫಲಾನುಭವ ಮಾಡಬೇಕಾದರೆ ಯಾವುದಾದರೊಂದು ಶರೀರವು ಬರಲೇಬೇಕಾಗುವುದು. ಈ ಕಾರಣದಿಂದ ಒಂದು ಶರೀರವನ್ನು ಬಿಟ್ಟವನು ಬೇರೊಂದು ಶರೀರವನ್ನು ಪಡೆವುದು ಶಾಸ್ತ್ರಸಮ್ಮತವಾಗಿಯೂ ಯುಕ್ತಿ ಯುಕ್ತವಾಗಿಯೂ ಇರುವುದು. ಈ ಕ್ರಮದಿಂದ ಒಬ್ಬನೇ ಜೀವನು ಹಲವು ಸಾರಿ ಹುಟ್ಟಿದಂತೆಯೂ, ಮೃತನಾದಂತೆಯೂ ವ್ಯವಹರಿಸಲ್ಪಡುವನು. ಅವನು ಯಾವ ಶರೀರದಲ್ಲಿರುವನೋ, ಆ ವಿವರವನ್ನು ತಿಳಿವುದು ಅಲ್ಪಜ್ಞರಾದ ಮನುಷ್ಯರಿಗೆ ಅಶಕ್ಯವಾದರೂ, ಭಗವದಾಜ್ಞಾರೂಪವಾದ ಶಾಸ್ತ್ರವನ್ನು ಅನುಸರಿಸಿ, ಲೋಪವಿಲ್ಲದಂತೆ ಗೋತ್ರ ನಾಮೋಚ್ಚಾರಣ ಪೂರ್ವಕವಾಗಿ ಕರ್ಮವನ್ನು ಶ್ರದ್ಧೆಯಿಂದ ಆಚರಿಸಿದರೆ, ಯಾರ ಉದ್ದೇಶದಿಂದ ಪುತ್ರಾದಿಗಳು ಶ್ರಾದ್ಧವನ್ನು ಮಾಡುವರೋ ಆ ಜೀವನು ಯಾವ ಶರೀರದಲ್ಲಿದ್ದರೂ, ನಿಯಾಮಕನಾದ ಭಗವಂತನು ಪುತ್ರಾದಿಗಳು ಕೊಡುವ ಅನ್ನಾದಿಗಳನ್ನು ಆ ಶರೀರಕ್ಕನುಗುಣವಾದ ಆಹಾರದ ರೂಪವಾಗಿ ಪರಿಣಾಮಪಡಿಸಿ ಆ ಜೀವನಿಗೆ ತೃಪ್ತಿಯನ್ನುಂಟುಮಾಡುವುದರಲ್ಲಿ ಸಮರ್ಥನಾಗಿರುವನು. ಈ ಅರ್ಥವನ್ನು ಅನುಭವಸಿದ್ಧವಾಗಿರುವ ಲೋಕದೃಷ್ಟಾಂತದಿಂದ ಸ್ಪಷ್ಟವಾಗಿ ತಿಳಿಯಬಹುದು. ರಾಷ್ಟ್ರವನ್ನಾಳುವ ರಾಜರು ಮಾಡಿರುವ ನಿಯಮಗಳನ್ನು ಅನುಸರಿಸಿ, ದೇಶಾಂತರದಲ್ಲಿರುವ ಒಬ್ಬ ಮನುಷ್ಯನಿಗೆ ಸೇರಬೇಕೆಂಬ ಉದ್ದೇಶದಿಂದ ಯಾವುದೋ ಒಂದು ಸ್ಥಳದಲ್ಲಿ ರಾಜನಿಂದ ನಿಯಮಿತನಾದ ಯಾವ ಮನುಷ್ಯನಲ್ಲಿ ಹಣವನ್ನು ಸಲ್ಲಿಸುವರೋ ಆ ಮನುಷ್ಯನು ತಾನಿರುವ ಸ್ಥಳವನ್ನು ಬಿಟ್ಟು ಹೋಗುವುದಿಲ್ಲ. ಯಾವ ಹಣವನ್ನು ಆತನಲ್ಲಿ ಕೊಟ್ಟಿರುವರೋ ಆ ಹಣವನ್ನೇ ಉದ್ದಿಷ್ಟ ಮನುಷ್ಯನು ಇರುವ ಸ್ಥಳಕ್ಕೆ ಕಳುಹಿಸುವುದಿಲ್ಲ ಎಂಬ ವಿಷಯವು ವಿದಿತವಾಗಿಯೇ ಇರುವುದು. ಹಣವು ಯಾರಿಗೆ ಪಾವತಿಯಾಗತಕ್ಕದ್ದೋ ಅವರ ಹೆಸರನ್ನೂ ವಿಳಾಸವನ್ನೂ

ತಿಳಿದ ಮಟ್ಟಿಗೆ ಸ್ಪಷ್ಟವಾಗಿ ರಾಜನಿಯಮಿತವಾದ ಪತ್ರದಲ್ಲಿ ಬರೆದು ಹಣ ಕಳುಹಿಸುವವನು ತಾನಿರುವ ಸ್ಥಳದಲ್ಲಿಯೇ ರಾಜಕೀಯ ಮನುಷ್ಯನ ವಶಕ್ಕೆ ಕೊಟ್ಟಲ್ಲಿ, ಹಣವನ್ನು ಪಡೆಯತಕ್ಕವನು ಪತ್ರನಿರ್ದಿಷ್ಟವಾದ ಸ್ಥಳದಲ್ಲಿರಲಿ ಅಥವಾ ಬೇರೆ ಸ್ಥಳದಲ್ಲಿರಲಿ ; ಆತನನ್ನು ಕಂಡುಹಿಡಿದು ಆತನಿಗೇ ತಲಪಿಸಿ, ಪಾವತಿಯಾದಂತೆ ಆತನ ಒಪ್ಪಿಗೆಯನ್ನು ತಂದುಕೊಡುವ ಭಾರವನ್ನು ರಾಜನು ವಹಿಸಿ, ಉದ್ದಿಷ್ಟ ಮನುಷ್ಯ ಭೇದವಿಲ್ಲದಂತೆಯೂ, ಉದ್ದೇಶ ಮಾಡಿಕೊಟ್ಟ ಹಣವು ನ್ಯೂನಾಧಿಕವಾಗದೆ ಉದ್ದಿಷ್ಟ ಮನುಷ್ಯನನ್ನೇ ಹೊಂದುವಂತೆಯೂ ಮಾಡಿರುವ ವ್ಯವಸ್ಥೆಯನ್ನು ಚೆನ್ನಾಗಿ ತಿಳಿದು ಎಲ್ಲರೂ ಅನುಭವಿಸುತ್ತಿಲ್ಲವೇ ? ಸರ್ವಶಕ್ತನಾದ ಮತ್ತು ಸರ್ವನಿಯಾಮಕನಾದ ಭಗವಂತನ ನಿಯಮದಂತೆ ನಡೆಸತಕ್ಕ ಕರ್ಮವು ವ್ಯರ್ಥವಾಗುವುದೆಂಬುದಕ್ಕೆ ಕಾರಣವೇನಿರುವುದು ? ಮನುಷ್ಯನಾದ ರಾಜನಿಗೆ ಇರತಕ್ಕ ಸಾಮರ್ಥ್ಯವು ಸರ್ವಜ್ಞನೂ ಸರ್ವಶಕ್ತನೂ ಆದ ಭಗವಂತನಿಗಿಲ್ಲವೆಂದು ತಿಳಿವುದು ಹೇಗೆ ? ಒಬ್ಬನನ್ನು ಕುರಿತು ಅನೇಕರು ಶ್ರಾದ್ಧ ಮಾಡುವುದರಿಂದ ದೋಷವೇನು ? ಒಬ್ಬನನ್ನು ಕುರಿತು ಅನೇಕರು ಕಳುಹಿಸಿದ ಹಣವನ್ನು ಸಮಕಾಲದಲ್ಲಿಯಾಗಲಿ, ಭಿನ್ನ ಕಾಲದಲ್ಲಿಯಾಗಲಿ ರಾಜನ ಮೂಲಕವಾಗಿ ಒಬ್ಬನೇ ಪಡೆದು ತೃಪ್ತಿಯನ್ನು ಹೊಂದುವುದಿಲ್ಲವೋ ? ಆದ್ದರಿಂದ ಪ್ರತಿಯೊಬ್ಬನೂ ಮಾತಾಪಿತೃಗಳಿಂದ ತಾನು ಹೊಂದಿರುವ ಬಹುವಿಧವಾದ ಉಪಕಾರಗಳನ್ನು ಸ್ಮರಿಸಿಕೊಂಡು, ತನ್ನ ಶ್ರೇಯಸ್ಸಿಗಾಗಿ ಕೃತಜ್ಞತಾಪ್ರದರ್ಶನರೂಪವಾದ ಶ್ರಾದ್ಧವನ್ನು ಮಾಡಿದಲ್ಲದೆ ಕೃತಾರ್ಥನಾಗಲಾರನಾಗಿ ಶ್ರಾದ್ಧ ಕರ್ಮವು ಕರ್ತವ್ಯವಾಗಿರುವುದು. ಕರ್ತವ್ಯವನ್ನು ಆಚರಿಸದೇ ಇದ್ದಲ್ಲಿ ಪ್ರತ್ಯವಾಯ ಪ್ರಾಪ್ತಿಗಾಗಿ ಶ್ರೇಯಸ್ಸಿಗೆ ಪ್ರತಿಬಂಧವಾಗುವುದು. ಆದುದರಿಂದ ಈ ವಿಷಯದಲ್ಲಿ ಎಷ್ಟು ಮಾತ್ರವೂ ಸಂದೇಹ ಪಡಬಾರದು. ಮತ್ತು ಮನುಷ್ಯನು ಯಾವ ಕರ್ಮವನ್ನಾದರೂ ಮನೋವಾಕ್ಕಾಯಗಳೆಂಬ ಮೂರು ಕರಣಗಳಿಂದಲೂ ಮಾಡಬೇಕು. ಹಾಗೆ ಮಾಡಿದ ಕರ್ಮವೇ ಫಲದಾಯಕವಾಗುವುದು. ಆದ್ದರಿಂದಲೇ ಶ್ರೇಯೋಭಿಲಾಷಿಗಳು ಮಾಡತಕ್ಕ ಪಿತೃಕರ್ಮಗಳಲ್ಲಿ ಕರಣತ್ರಯ ಸಾಧ್ಯವಾದ ಕೆಲವು ತಂತ್ರ ನಿರ್ಬಂಧಗಳು ಏರ್ಪಟ್ಟಿವೆ. ಪೂಜ್ಯಭಾವನೆಯಿಂದ ಮಾನಸಿಕವಾಗಿಯೂ, ಮಂತ್ರೋಚ್ಚಾರಣದಿಂದ ವಾಚಿಕವಾಗಿಯೂ, ನಮನಾದಿಗಳಿಂದ ಕಾಯಿಕವಾಗಿಯೂ ಪಿತೃಕರ್ಮವನ್ನು ನಡೆಸಲು ನಿಯಮವುಂಟಾಗಿರುವುದು. ಲೋಕದಲ್ಲಿ ಸಾಧಾರಣನಾದ ಒಬ್ಬ ಮನುಷ್ಯನು ಒಬ್ಬ ಪ್ರಭುವಿನ ಪ್ರಸಾದವನ್ನು ಸಂಪಾದಿಸಿ ಆತನಿಂದ ಪ್ರಯೋಜನವನ್ನು ಹೊಂದುವ ಅಪೇಕ್ಷೆಯಿಂದ ಆತನ ದರ್ಶನಕ್ಕೆ ಹೋಗುವವನು. ಆ ಸಂದರ್ಭದಲ್ಲಿ ಮನಸ್ಸಿನಿಂದಲೂ, ವಾಕ್ಕಿನಿಂದಲೂ, ಕಾಯದಿಂದಲೂ ತನ್ನ ವಿನಯ ಭಾವವನ್ನು ಸರ್ವ ಪ್ರಕಾರದಿಂದಲೂ ಪ್ರಭುವಿನಲ್ಲಿ ತೋರಿಸಿಕೊಂಡು ಆತನ ಪ್ರಸಾದವನ್ನು ಪಡೆಯಲು ಯತ್ನಿಸುವನೋ ?

ಅಥವಾ ಶಾಠ್ಯಭಾವವನ್ನು ತೋರಿಸಿಕೊಂಡಲ್ಲಿ ತನ್ನ ಉದ್ದೇಶ್ಯವನ್ನು ಪಡೆವನೋ ? ಶಾಠ್ಯಭಾವವನ್ನು ತೋರಿಸಿಕೊಂಡಲ್ಲಿ ಅನರ್ಥಪ್ರಾಪ್ತಿಯಾಗುವುದೇ ಹೊರತು ಉದ್ದೇಶ್ಯ ಸಿದ್ಧಿಯಾಗುವುದಿಲ್ಲವಷ್ಟೆ ? ಒಂದು ವೇಳೆ ತಂತ್ರ ನಿರ್ಬಂಧವಿದ್ದರೂ ಇರಲಿ; ಅದರಲ್ಲಿಯೂ ಕ್ರಮ ನಿರ್ಬಂಧವೇಕೆಂಬ ಸಂದೇಹವು ಬರಬಹುದು. ಆ ನಿರ್ಬಂಧವೂ ಅತ್ಯಾವಶ್ಯಕವು. ಅದನ್ನು ಕುರಿತು ಶಂಕಿಸುವುದಕ್ಕೂ ನಾವು ಸ್ವತಂತ್ರವಲ್ಲ. ರಾಜಸೇನೆಯಲ್ಲಿ ನಿಯುಕ್ತರಾದವರು ಸೇನಾಪತಿಯ ಆಜ್ಞೆಯ ಮೇರೆಗೆ ಹಿಂದುಮುಂದು ಯೋಚಿಸದೆ ಯುದ್ಧಕಾಲದಲ್ಲಿ ನಡೆದುಕೊಳ್ಳುವುದಕ್ಕೋಸ್ಕರ ಅವರು ಸೇನೆಯಲ್ಲಿ ಸೇರಿದ್ದು ಮೊದಲಾಗಿ ನಿಲ್ಲುವುದರಲ್ಲಿಯೂ, ಕುಳ್ಳಿರುವುದರಲ್ಲಿಯೂ, ನಡೆವುದರಲ್ಲಿಯೂ, ಆಯುಧಗಳನ್ನು ಉಪಯೋಗಿಸುವುದರಲ್ಲಿಯೂ ಕೆಲವು ಸಂಕೇತ ಶಬ್ದಗಳನ್ನು ಉಪಯೋಗಿಸಿ, ಆ ಶಬ್ದವು ಸೈನಿಕರ ಕಿವಿಗೆ ಬಿದ್ದಕೂಡಲೇ ಅವರು ಕ್ರಮ ಲೋಪವೂ ಅರ್ಥಲೋಪವೂ ಇಲ್ಲದ ಹಾಗೆ ಸಂಕೇತ ಸಿದ್ಧವಾದ ವ್ಯಾಪಾರಗಳನ್ನು ನಡೆಸುವಂತೆ ಅಭ್ಯಾಸ ಮಾಡಿಸುವುದನ್ನು ನೋಡುವುದಿಲ್ಲವೇ ? ಆ ಸಂದರ್ಭದಲ್ಲಿ ಉಪಯೋಗಿಸತಕ್ಕ ಶಬ್ದಗಳಿಗೂ, ಅದನ್ನು ಅನುಸರಿಸಿ ನಡೆಸುವ ವ್ಯಾಪಾರಗಳಿಗೂ ಅರ್ಥವೇನು ? ಒಂದಕ್ಕೆ ಬದಲಾಗಿ ಮತ್ತೊಂದು ವ್ಯಾಪಾರವನ್ನು ಮಾಡಕೂಡದೆಂಬುದಕ್ಕೂ, ನಾಲ್ಕುಸಾರಿಗೆ ಬದಲಾಗಿ ಒಂದೇ ಸಾರಿ ಆ ವ್ಯಾಪಾರವನ್ನು ನಡೆಸಬಾರದೆಂಬುದಕ್ಕೂ ನಿಯಾಮಕವೇನಿರುವುದು ? ಇದರ ಪ್ರಯೋಜನವೇನು ? ಈ ವಿಷಯದಲ್ಲಿ ಯುಕ್ತಿ ಏನು ? ಎಂದು ಆಕ್ಷೇಪಿಸುವುದಕ್ಕಾಗಲಿ, ಅರ್ಥವಿಲ್ಲದ ವ್ಯಾಪಾರಗಳೆಂದು ಅವನ್ನು ನಡೆಸದೆ ಬಿಡುವುದಕ್ಕಾಗಲಿ ಅವಕಾಶವೆಲ್ಲಿರುವುದು ? ಅದರಂತೆ ನಮ್ಮ ಹಿತವನ್ನು ತಿಳಿದು ನಮ್ಮ ಶ್ರೇಯಸ್ಸಿಗಾಗಿ ಶಾಸ್ತ್ರಗಳಿಂದ ನಿಯಮಿಸಲ್ಪಟ್ಟಿರುವ ಕರ್ಮಗಳ ವಿಷಯದಲ್ಲಿಯೂ, ಕರ್ಮಾಂಗವಾದ ತಂತ್ರಗಳ ವಿಷಯದಲ್ಲಿಯೂ, ಪ್ರಯೋಜನವನ್ನೂ ಯುಕ್ತಿಗಳನ್ನೂ ಕೇಳಲು ನಾವುಗಳು ಸೈನಿಕರಂತೆ ಅಸ್ವತಂತ್ರರಾದ್ದರಿಂದ ಭಗವದಾಜ್ಞೆಗೆ ಬದ್ಧರಾಗಿ ಆತನ ಆಜ್ಞೆಯಂತೆ ನಡೆದುಕೊಂಡರೆ ಆತನ ಪ್ರಸಾದವನ್ನು ಸಂಪಾದಿಸಿ ಸುಖಿಗಳೇ ಆಗುತ್ತೇವೆ. ಈ ವಿಷಯದಲ್ಲಿ ನಂಬಿಕೆಯೊಂದೇ ಸಾಧನವು — ಎಂದು ಶ್ರೀಗಳವರು ಸಮಾಧಾನ ಪಡಿಸಿ ಆ ಆಕ್ಷೇಪಕರನ್ನು ಆಸ್ತಿಕರನ್ನಾಗಿ ಮಾಡುತ್ತಲಿದ್ದರು.

ಶ್ರೀಗಳವರ ವೈರಾಗ್ಯವು ಅಸದೃಶವಾಗಿದ್ದಿತು. ಇವರು ಯಾವ ಸಂದರ್ಭದಲ್ಲಿಯೂ, ಯಾವ ಪದಾರ್ಥವನ್ನಾದರೂ ತಮಗೆ ಇಷ್ಟವಾದದ್ದೆಂದು ಭಾವಿಸಿ ಅಪೇಕ್ಷಿಸುತ್ತಿರಲಿಲ್ಲ. ಮಠಾಧಿಪತಿಗಳಾಗಿ ಒಂದು ಸಂಸ್ಥಾನದಲ್ಲಿ ನಿಯಮಿತರಾಗಿದ್ದರೂ, ಆ ಸಂಸ್ಥಾನದ ಹಾನಿ ವೃದ್ಧಿಗಳನ್ನು ಕುರಿತು ಒಂದು ನಿಮಿಷದ ಕಾಲವೂ ಚಿಂತಿಸಿದವರೂ ಸಂತೋಷಿಸಿದವರೂ ಅಲ್ಲ. ಎಂಥಾ ಸಂದರ್ಭಗಳಲ್ಲಿಯೂ, ಭೂತಕಾರುಣ್ಯದಿಂದಲ್ಲದೆ ಬೇರೆ ವಿಧದಿಂದ ಇವರ

ಮನಸ್ಸು ವಿಕಾರ ಭಾವವನ್ನು ಹೊಂದಿ ಇವರಿಗೆ ಉದ್ವೇಗವುಂಟಾಗುತ್ತಿರಲಿಲ್ಲ. ಸಂಸ್ಥಾನದ ಅನೇಕ ರಾಜಸ ವ್ಯಾಪಾರಗಳಲ್ಲಿ ಪ್ರವೃತ್ತರಾದಂತೆ ಇತರರು ತಿಳಿದುಕೊಳ್ಳುವುದಕ್ಕೆ ಬೇಕಾದ ಅವಕಾಶವಿರುತ್ತಲಿದ್ದರೂ, ಆ ವ್ಯಾಪಾರಗಳಿಗೂ ಅದಕ್ಕೆ ಅನುಗುಣವಾದ ವೇಷಗಳಿಗೂ ತಮಗೂ ಸಂಬಂಧವಿಲ್ಲವೆಂಬ ಭಾವನೆಯು ದೃಢವಾಗಿ ಇವರನ್ನು ಆಶ್ರಯಿಸಿತ್ತು. ಈ ಅರ್ಥವನ್ನು ಅನೇಕ ಸಂದರ್ಭಗಳಲ್ಲಿ ಇವರ ಸಮೀಪವರ್ತಿಗಳಿಂದ ಚೆನ್ನಾಗಿ ತಿಳಿದುಕೊಳ್ಳುವುದಕ್ಕೂ ಅವಕಾಶವು ದೊರೆಯುತ್ತಲಿತ್ತು. ಶ್ರೀಗಳವರು ಮಧುರೆ ಜಿಲ್ಲಾ ಪೆರಿಯಕೊಳವೆಂಬ ಗ್ರಾಮಕ್ಕೆ ದಯಮಾಡಿಸಿದರು. ಇವರು ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಪ್ರಯಾಣ ಮಾಡತಕ್ಕ ಕಾಲಗಳಲ್ಲಿ ತಮ್ಮ ಸ್ವಭಾವವಾದ ಕಾಷಾಯ ವಿಭೂತಿ ರುದ್ರಾಕ್ಷಗಳನ್ನು ಮಾತ್ರ ಧರಿಸಿ ನಾಲ್ಕು ಭಾಗಗಳಲ್ಲಿಯೂ ಆವೃತವಾದ ಯಾನದಲ್ಲಿ ಪ್ರಯಾಣ ಮಾಡುವುದು ವಾಡಿಕೆಯಾಗಿತ್ತು. ಗ್ರಾಮ ಸಮೀಪದಲ್ಲಿ ತಮ್ಮ ಆಗಮನವನ್ನು ಜನಗಳು ನಿರೀಕ್ಷಿಸುತ್ತಿರುವ ಸ್ಥಳಕ್ಕೆ ಬಂದಕೂಡಲೇ, ಪ್ರಯಾಣ ಮಾಡಿ ಬಂದ ವಾಹನವನ್ನು ನಿಲ್ಲಿಸಿ. ಅದರಲ್ಲಿಯೇ ಕಿರೀಟ ಧಾರಣಾದಿಗಳಿಂದ ಅಲಂಕೃತರಾಗಿ, ಆ ಸ್ಥಳಕ್ಕೆ ಮುಂದಾಗಿಯೇ ಕಳುಹಿಸಲ್ಪಟ್ಟು ಸಿದ್ಧವಾಗಿರುವ ಸ್ವರ್ಣಶಿಬಿಕೆಯನ್ನು ಆರೋಹಿಸಿದ ಬಳಿಕ ಶಿಷ್ಯ ಜನರಿಗೆ ದರ್ಶನಕೊಟ್ಟು. ಮುಂದೆ ಗ್ರಾಮಪ್ರವೇಶವನ್ನು ಮಾಡುತ್ತಲಿದ್ದರು. ಆ ದಿನ ಶ್ರೀಗಳವರು ಕಿರೀಟಧಾರಣ ಮಾಡಿದ್ದು ಮೊದಲುಗೊಂಡು ಆಂದೋಳಿಕಾರೋಹಣವನ್ನು ಮಾಡಿದ ಸಮಯದಲ್ಲಿಯೂ, ಶಿಷ್ಯಜನರಿಗೆ ದರ್ಶನವನ್ನು ಕೊಡತಕ್ಕ ಕಾಲದಲ್ಲಿಯೂ, ಗ್ರಾಮ ಪ್ರದಕ್ಷಿಣಾವಸರದಲ್ಲಿಯೂ, ವಾಸಸ್ಥಾನವನ್ನು ಸೇರಿ ಗ್ರಾಮಸ್ಥರಿಂದ ನಡೆಸಲ್ಪಟ್ಟ ಧೂಳಿಪಾದ ಪೂಜಾದಿ ಸಂದರ್ಭದಲ್ಲಿಯೂ, ಒಂದು ನಿಮಿಷವಾದರೂ ವಿಚ್ಛಿತ್ತಿ ಇಲ್ಲದಂತೆ ಹಸನ್ಮುಖರಾಗಿಯೇ ಇದ್ದರು. ಶ್ರೀಗಳವರು ಯಾವಾಗಲೂ ಮಂದಹಾಸದಿಂದ ಶೋಭಿತರಾಗಿದ್ದರೂ. ಆ ದಿನದ ಅವರ ಹಾಸವು ಸ್ವಭಾವ ವಿರುದ್ಧವಾಗಿತ್ತು. ಶ್ರೀಗಳವರ ಈ ವರ್ತನವು ಅಲ್ಲಿ ಸೇರಿದ್ದ ಪ್ರತಿಯೊಬ್ಬರಿಗೂ ಆಶ್ಚರ್ಯಕರವಾಗಿಯೂ, ಜಿಜ್ಞಾಸ್ಯ ವಾಗಿಯೂ ಇತ್ತು. ಶ್ರೀಗಳವರು ಒಳಗೆ ದಯಮಾಡಿಸಿ ಕಿರೀಟಾದ್ಯಲಂಕಾರಗಳನ್ನು ಸಡಿಲಿಸಿದ ಮೇಲೆ, ಅವರ ಸಮೀಪವರ್ತಿಗಳಾಗಿಯೂ, ಅವರ ಅನುಗ್ರಹಕ್ಕೆ ಪಾತ್ರರಾಗಿಯೂ ಇದ್ದ ಮೈಸೂರ ಅರಮನೆಯ ಧರ್ಮಾಧಿಕಾರಿ ಕುಣಿಗಲ್ ರಾಮಶಾಸ್ತ್ರಿಗಳು ಆ ದಿನದ ಅಪೂರ್ವಹಾಸಕ್ಕೆ ಕಾರಣವೇನೆಂದು ಪ್ರಶ್ನೆ ಮಾಡಲು ಶ್ರೀಗಳವರು - ಮ್ಯಾನಾಬಿಟ್ಟು ಪಲ್ಲಕ್ಕಿಯನ್ನು ಹತ್ತುವ ಸಮಯದಲ್ಲಿ ಪಾಂಚಭೌತಿಕವಾದ ಸ್ಥೂಲಶರೀರವನ್ನು ದೂರವಾಗಿ ಬಿಟ್ಟು ಹೊರಗೆ ಬಂದಂತೆಯೂ, ಬಳಿಕ ಸರ್ವವ್ಯಾಪಕವಾಗಿರುವಂತೆಯೂ ಮನೋಭಾವ ವುಂಟಾಗಿ ಕೇವಲಾನಂದಾನುಭವ ಮಾಡುತ್ತಲಿದ್ದ ತಮಗೆ ಬಾಹ್ಯ ವ್ಯಾಪಾರಗಳು ಯಾವುವೂ

ಗಮನಕ್ಕೆ ಬರಲಿಲ್ಲವು - ಎಂದು ಅಪ್ಪಣೆ ಕೊಡಿಸಿದ ಸಂಗತಿಯನ್ನು ಶಾಸ್ತ್ರಿಗಳ ಮೂಲಕವಾಗಿ ಇತರರು ತಿಳಿದು ಆಶ್ಚರ್ಯಪಟ್ಟರು. ಈ ಸಂದರ್ಭದಿಂದ ಶ್ರೀ ಸ್ವಾಮಿಗಳವರಲ್ಲಿದ್ದ ವೈರಾಗ್ಯ ಸಂಪತ್ತು ಎಂಥಾದ್ದೆಂಬುದನ್ನು ತಿಳಿಯಬಹುದು.

ಮತ್ತು ಪ್ರಸಿದ್ಧರಾದ ಪ್ರಯಾಗ ಪ್ರಾಂತದ ಪಂಡಿತ ಮದನಮೋಹನ ಮಾಲವೀಯರೆಂಬವರು ಕಾಶೀಕ್ಷೇತ್ರದಲ್ಲಿ ಹಿಂದೂ ವಿಶ್ವವಿದ್ಯಾಲಯಕ್ಕೆ ಸೇರಿದ ಒಂದು ಸರ್ವಕಲಾಶಾಲೆಯನ್ನು ಸ್ಥಾಪಿಸಬೇಕೆಂದೂ, ಶಾಲಾನಿರ್ಮಾಣಕ್ಕೆ ಆರಂಭಕಶಿಲಾ (ಅಸ್ತಿ ಭಾರ) ಸ್ಥಾಪನೆಯನ್ನು ಶ್ರೀಗಳವರ ಹಸ್ತದಿಂದ ಮಾಡಿಸಬೇಕೆಂದೂ ಸಂಕಲ್ಪಿಸಿ, ಆ ಕಾರ್ಯವನ್ನು ನಡೆಸುವುದಕ್ಕೆ ಒಂದು ಶುಭದಿನವನ್ನೂ ನಿಷ್ಕರ್ಷಿಸಿ, ಆ ಕಾಲಕ್ಕೆ ಸರಿಯಾಗಿ ಶ್ರೀಗಳವರು ಕಾಶೀಕ್ಷೇತ್ರಕ್ಕೆ ದಯಮಾಡಿಸಿ, ತಮ್ಮ ಸಂಕಲ್ಪವನ್ನು ನೆರವೇರಿಸಿ ಅನುಗ್ರಹಿಸ ಬೇಕೆಂದು ತಮ್ಮ ಪರವಾಗಿಯೂ ದೇಶೀಯಾನೇಕ ಶಿಷ್ಯಕೋಟಿಗಳ ಪರವಾಗಿಯೂ ಶ್ರೀಗಳವರನ್ನು ಪ್ರಾರ್ಥಿಸುವುದಕ್ಕೆ ದತ್ತಾತ್ರೇಯಕೃಷ್ಣದಾಮಲೆಯೆಂಬ ಗೃಹಸ್ಥರನ್ನು ಕಳುಹಿಸಿದರು. ಆ ಗೃಹಸ್ಥರು ಮೊದಲು ಬೆಂಗಳೂರಿಗೆ ಬಂದು, ಆಗ ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ಸರ್.ಪಿ.ಎನ್. ಕೃಷ್ಣಮೂರ್ತಿಗಳವರನ್ನು ನೋಡಿ ಅವರಲ್ಲಿ ತಮ್ಮ ಆಗಮನ ವೃತ್ತಾಂತವನ್ನು ತಿಳಿಸಿ, ಅವರಿಂದ ತಮ್ಮ ಕಾರ್ಯಾನುಕೂಲ್ಯಕ್ಕೆ ತಕ್ಕ ವಿಜ್ಞಾಪನ ಪತ್ರವನ್ನು ಪಡೆದು ಶೃಂಗೇರಿಗೆ ಬಂದು ಶ್ರೀಮಠದ ಅಧಿಕಾರಿಗಳಿಂದ ಶ್ರೀಗಳವರ ದರ್ಶನವನ್ನು ಮಾಡಿ, ಪಂಡಿತ ಮಾಲವೀಯರು ಬಹುಜನರ ಪರವಾಗಿ ಮಾಡಿರುವ ಪ್ರಾರ್ಥನೆಯನ್ನು ಶ್ರೀಗಳವರಲ್ಲಿ ವಿಜ್ಞಾಪಿಸಿ, ಉತ್ತರ ಪ್ರಾಂತದಲ್ಲಿರುವ ಶಿಷ್ಯಮಂಡಲಿಗೆ ಶ್ರೀಮದಾಚಾರ್ಯ ಸಂದರ್ಶನವಿಲ್ಲದೆ ಬಹಳ ವರ್ಷಗಳಾಗಿರುವುವು. ಶ್ರೀ ಗುರುದರ್ಶನಾಕಾಂಕ್ಷಿಗಳಾಗಿ ಅನೇಕ ಲಕ್ಷ ಜನರು ಅತ್ಯಾದರದಿಂದ ಕಾದಿರುವರು. ಈ ಸಂದರ್ಭದಿಂದಲಾದರೂ ಶ್ರೀಗಳವರು ಆ ದೇಶವನ್ನಲಂಕರಿಸಿ, ಜನರನ್ನು ಕೃತಾರ್ಥರನ್ನಾಗಿ ಮಾಡಬೇಕು ಎಂದು ಬಹುವಿಧದಿಂದ ಪ್ರಾರ್ಥಿಸಿದರು. ಪಂಡಿತ ಮಾಲವೀಯರ ಸದುದ್ದೇಶವನ್ನೂ ಔತ್ತರೇಯ ಶಿಷ್ಯಜನರಿಗೆ ತಮ್ಮ ದರ್ಶನದಲ್ಲಿರತಕ್ಕ ಆದರವನ್ನೂ, ಪ್ರತಿನಿಧಿಗಳಾಗಿ ಬಂದ ದಾಮಲೆಯವರ ಮೂಲಕ ತಿಳಿದು ಅವರುಗಳ ಉದ್ಯಮವನ್ನು ವಿಶೇಷವಾಗಿ ಅನುಮೋದಿಸಿ ಶ್ರೀಗಳವರು "ಮಾಲವೀಯರು ಸಂಕಲ್ಪಿಸಿರುವ ಕಲಾಶಾಲಾನಿರ್ಮಾಣಕ್ಕೆ ಆರಂಭಕಶಿಲಾ ಸ್ಥಾಪನೆಯನ್ನು ಮಾಡಲು ನಿಶ್ಚಯಿಸಿರುವ ಕಾಲವು ಅತ್ಯಭ್ಯಗ್ರವಾಗಿರುವುದು. ಗಂತವ್ಯ ದೇಶವು ಅತಿ ದೂರದಲ್ಲಿರುವುದು. ಸಚ್ಛಿಷ್ಯರಾದ ನಿಮ್ಮಗಳ ಪ್ರಾರ್ಥನೆಯನ್ನು ನೆರವೇರಿಸುವುದು ನಮಗೆ ಕರ್ತವ್ಯವಾಗಿದ್ದರೂ, ನಮ್ಮ ನಿಯಮಕ್ಕನುಸಾರವಾಗಿ ಪ್ರಯಾಣ ಮಾಡಿ ಕ್ಲಪ್ತಕಾಲಕ್ಕೆ ಗಂತವ್ಯದೇಶವನ್ನು ಸೇರುವುದು ಅಶಕ್ಯವಾದ್ದರಿಂದ, ಶಿಷ್ಯರನ್ನು ವಿಫಲಮನೋರಥರನ್ನಾಗಿ

ಮಾಡಬೇಕಾದ ಸಂಭವವು ಒದಗಿಬಂದುದಕ್ಕೆ ಚಿಂತಿಸುವೆವು'' ಎಂದು ಸೂಚಿಸಿದರು. ಶ್ರೀಗಳವರ ಅಭಿಪ್ರಾಯವನ್ನು ತಿಳಿದುಕೊಂಡ ಆ ಗೃಹಸ್ಥರು ''ಶ್ರೀಗಳವರು ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ನಿರ್ದಿಷ್ಟ ಕಾಲಕ್ಕೆ ಕಾಶೀಕ್ಷೇತ್ರವನ್ನು ಸೇರುವ ವಿಷಯದಲ್ಲಿ ಯಾವ ಅನನುಕೂಲವನ್ನು ಯೋಚಿಸಿರುವುದಾಗಿದೆಯೋ, ಅದನ್ನು ಮುಂದಾಗಿಯೇ ವಿಚಾರಕ್ಕೆ ತಂದು, ಶ್ರೀಗಳವರ ಆಗಮನವನ್ನು ಚಾತಕನ್ಯಾಯದಿಂದ ನಿರೀಕ್ಷಿಸುತ್ತಲಿರುವ ಶಿಷ್ಯಜನರು ಯೋಚಿಸಿ ಅನನುಕೂಲ ಪರಿಹಾರವನ್ನೂ ತೀರ್ಮಾನಿಸಿರುವರು. ಪ್ರತ್ಯೇಕವಾಗಿ ಶ್ರೀಗಳವರ ಪ್ರಯಾಣಕ್ಕೋಸ್ಕರವೇ ಒಂದು ಧೂಮಶಕಟವನ್ನು ಸ್ವಾಧೀನವಾಗಿರುವಂತೆ ಮಾಡಿಕೊಂಡು ಅದರ ಸಹಾಯದಿಂದ ಲಾಗಲಿ, ಅದಕ್ಕಿಂತಲೂ ವೇಗಗತಿಯುಳ್ಳ ಮೋಟಾರೆಂಬ ಸಾಧನಗಳನ್ನು ಅನೇಕ ರಾಜರುಗಳಿಂದ ಸಂಪಾದಿಸಿ ಅವುಗಳ ಮೂಲಕವಾಗಲಿ, ಶ್ರೀಗಳವರ ನಿಯಮಕ್ಕೆ ಸ್ವಲ್ಪವೂ ಲೋಪಬಾರದಂತೆ ಯಾತ್ರೆಯನ್ನು ಜರುಗಿಸಿ, ಶ್ರೀಗಳವರನ್ನು ಕ್ಲುಪ್ತಕಾಲಕ್ಕೆ ಸರಿಯಾಗಿ ಕಾಶೀಕ್ಷೇತ್ರಕ್ಕೆ ತಲಪಿಸುವಂತೆ ವ್ಯವಸ್ಥೆ ಮಾಡುವುದರಲ್ಲಿ ನಾವುಗಳು ಸಿದ್ಧರಾಗಿರುತ್ತೇವೆ. ನಮ್ಮಗಳ ಸಂಕಲ್ಪವನ್ನು ನೆರವೇರಿಸುವ ವಿಷಯದಲ್ಲಿ ದಯಮಾಡಿ ಅನುಮತಿಯನ್ನು ಮಾತ್ರ ಅಪ್ಪಣೆ ಕೊಡಿಸಬೇಕು'' ಎಂದು ತಿಳಿಸಿಕೊಂಡರು.

ಹೀಗೆ ದಾಮಲೆಯವರು ಮತ್ತೆ ತಮ್ಮಲ್ಲಿ ತಿಳಿಸಿಕೊಂಡ ಪ್ರಾರ್ಥನೆಯಿಂದ ಶ್ರೀಗಳವರು ಆ ಜನಗಳಿಗೆ ತಮ್ಮಲ್ಲಿರುವ ಭಕ್ತಿವಿಶ್ವಾಸಗಳನ್ನೂ, ತಮ್ಮ ಆಗಮನದ ವಿಷಯದಲ್ಲಿ ಅವರುಗಳಿಗಿರುವ ಆದರ, ಉತ್ಸಾಹಗಳನ್ನೂ ತಿಳಿದು ಬಹಳವಾಗಿ ಸಂತೋಷಿಸಿದರು. ಆದರೆ ಅವರ ಪ್ರಾರ್ಥನೆಯನ್ನು ನೆರವೇರಿಸುವುದರಲ್ಲಿ ತಮಗಿರತಕ್ಕ ನಿರ್ಬಂಧವನ್ನು ತಿಳಿಸಬೇಕಾಗಿ ಬಂದುದಕ್ಕೋಸ್ಕರ ಬಹಳ ಸಂಕೋಚಪಟ್ಟರು. ಈ ಸಂದರ್ಭದಲ್ಲಿ ಶ್ರೀಗಳವರು ಅಪ್ಪಣೆ ಕೊಡಿಸಿದ್ದೇನೆಂದರೆ — ''ನಮ್ಮ ಆಶ್ರಮ ಧರ್ಮದ ಪರಿಪಾಲನೆಗಾಗಿ ವಾಹನದಲ್ಲಿ ಸಂಚರಿಸುವುದು ಶಾಸ್ತ್ರನಿಷಿದ್ಧವಲ್ಲದೆ ಶಾಸ್ತ್ರವಿಹಿತವಲ್ಲವು. ಈ ಭೂಮಿಯಲ್ಲಿ ಸಂನ್ಯಾಸಾಶ್ರಮ ವನ್ನು ಸ್ಥಾಪಿಸಿ, ಆತ್ಮಸ್ವರೂಪವನ್ನು ಉಪದೇಶಿಸುವುದಕ್ಕೋಸ್ಕರವೇ ಅವತರಿಸಿದ ಭಗವತ್ಪಾದರವರು ಯೋಗಸಿದ್ಧಿಯಿಂದ ಕೆಲವು ಸಮಯಗಳಲ್ಲಿ ಮಾತ್ರ ಆಕಾಶಗಮನವನ್ನು ಮಾಡಿದಂತೆ ತಿಳಿದುಬರುವುದೇ ಹೊರತು, ಮಿಕ್ಕ ಕಾಲಗಳಲ್ಲಿ ಪಾದಚಾರಿಗಳಾಗಿಯೇ ಭಾರತಭೂಮಿಯ ಎಲ್ಲಾ ಪ್ರದೇಶಗಳಲ್ಲಿಯೂ ಸಂಚರಿಸಿದಂತೆ ತಿಳಿದು ಬರುವುದು. ಅವರ ಶಿಷ್ಯ ಪರಂಪರೆಯವರು ಕೂಡ ಬಹು ದೀರ್ಘಕಾಲ ಪರ್ಯಂತವೂ ವಾಹನಾದಿ ಸಹಾಯದಿಂದ ಸಂಚರಿಸಿದಂತೆ ತಿಳಿದು ಬರುವುದಿಲ್ಲ. ಈಗ್ಗೆ ಸುಮಾರು ಆರುನೂರು ವರ್ಷಗಳಲ್ಲಿ ಶೃಂಗಗಿರಿ ಮಠದ 'ಗುರು ಪರಂಪರೆಯಲ್ಲಿ ಪ್ರಸಿದ್ಧರಾಗಿದ್ದ ವಿದ್ಯಾರಣ್ಯ

ಸ್ವಾಮಿಗಳವರ ಕಾಲದಿಂದೀಚೆಗೆ ಶೃಂಗಗಿರಿ ಮಠದ ಗುರುಗಳಿಂದ ರಾಜಚಿಹ್ನೆಗಳಾದ ಶಿಬಿಕಾದಿ ವಾಹನಗಳು, ಛತ್ರ ಚಾಮರಗಳು ಇವು ಮೊದಲಾದ ಬಾಹ್ಯವೇಷ ಕಲಾಪಗಳೆಲ್ಲವೂ ಅಂಗೀಕರಿಸಲ್ಪಟ್ಟು ಉಪಯೋಗಿಸಲ್ಪಡುತ್ತ ಬಂದಿರುವಂತೆ ಸಂಸ್ಥಾನದಲ್ಲಿರತಕ್ಕ ಪ್ರಾಚೀನಪತ್ರ ವ್ಯವಹಾರಗಳನ್ನು ನೋಡುವುದರಿಂದ ಸ್ಪಷ್ಟವಾಗಿ ತಿಳಿದು ಬರುವುದು. ಧರ್ಮಾಧರ್ಮಗಳನ್ನು ತಿಳಿದವರಾಗಿಯೂ, ವಿರಕ್ತರಾಗಿಯೂ ಇದ್ದ ಹಿಂದಿನ ಗುರುಗಳು ಬಲವತ್ತರವಾದ ಕಾರಣವನ್ನೂ ಆವಶ್ಯಕತೆಯನ್ನೂ ಯೋಚಿಸದೆ ಸ್ವಪ್ರಯೋಜನಕ್ಕೋಸ್ಕರ ತಮ್ಮ ಆಶ್ರಮಧರ್ಮಕ್ಕೆ ವಿರುದ್ಧವಾದುದನ್ನೂ ಆಚರಿಸಲು ಒಪ್ಪಿಕೊಂಡಿರಬಹುದೆಂದು ಹೇಳೋಣವು ಯುಕ್ತವಲ್ಲವು. ಸರ್ವಜ್ಞರಾದ ಶ್ರೀ ಶಂಕರಾಚಾರ್ಯರವರು ಅದ್ವೈತಾಮೃತವನ್ನು ಸ್ಥಾಪಿಸುವುದಕ್ಕೆ ಬಂದ ಸಮಯದಲ್ಲಿ ದೂರ್ವಾಸಮಹರ್ಷಿಗಳ ಶಾಪದಿಂದ ಮನುಷ್ಯಳಾಗಿ ಭೂಮಿಯಲ್ಲಿ ಅವತರಿಸಿದ್ದ ಸರಸ್ವತಿಯೊಡನೆ ವಾದ ಮಾಡಬೇಕಾದ ಸಂಭವವು ಒದಗಿ ಬಂದಂತೆಯೂ, ಸರ್ವಜ್ಞತಾನಿರ್ವಹಣಾರ್ಥವಾಗಿ ಪರಕಾಯ ಪ್ರವೇಶವನ್ನು ಮಾಡಿಯಾದರೂ ಸ್ವಮತಸ್ಥಾಪನೆಯನ್ನು ಮಾಡಿಕೊಳ್ಳಬೇಕಾದ ಆವಶ್ಯಕತೆಯುಂಟಾದಂತೆಯೂ ಶಂಕರವಿಜಯ ಗ್ರಂಥದಿಂದ ತಿಳಿದುಬರುವುದಷ್ಟೆ ? ಆ ಸಮಯದಲ್ಲಿ ತಮ್ಮ ಶಿಷ್ಯರಾದ ಪದ್ಮಪಾದಾಚಾರ್ಯರು ಮಾಡಿದ ಪ್ರಶ್ನೆಗೂ, ಸರ್ವಜ್ಞ ಪೀಠಾರೋಹಣವನ್ನು ಮಾಡುವ ಕಾಲದಲ್ಲಿ ಸರಸ್ವತಿಯು ಮಾಡಿದ ಆಕ್ಷೇಪಣೆಗೂ ಆಚಾರ್ಯರವರು ಅಪ್ಪಣೆ ಕೊಡಿಸಿದ್ದಾಗಿ ಹೇಳಿರುವ ಸಮಾಧಾನವನ್ನು ನೋಡಲು ಮಹತ್ತರವಾದ ಒಂದು ಕಾರ್ಯದ ಸಾಧನೆಗಾಗಿ ಮಹನೀಯರಿಂದ ಅಂಗೀಕರಿಸಲ್ಪಡುವ ಆಚರಣೆಗಳು ಧರ್ಮವಿರುದ್ಧವಾದವುಗಳೆಂದು ಇತರರಿಗೆ ತೋರಿದರೂ, ಅವರು ಬೇರೊಂದು ಮಹಾಕಾರ್ಯೋದ್ದೇಶದಿಂದ ಉಪಯೋಗಿಸತಕ್ಕ ಪದಾರ್ಥಗಳಲ್ಲಿಯೂ ಮಾಡತಕ್ಕ ಆಚರಣೆಗಳಲ್ಲಿಯೂ ಫಲಾಭಿಸಂಧಿ ಇರುವುದಿಲ್ಲವಾಗಿ ಆ ಜ್ಞಾನಿಗಳಿಗೆ ಅದರ ಸಂಬಂಧವಿಲ್ಲವೆಂಬ ಶಾಸ್ತ್ರ ಸಿದ್ಧಾಂತವನ್ನು ತಿಳಿದುಕೊಳ್ಳಬಹುದು. ಲೋಕದಲ್ಲಿ ಒಬ್ಬ ಮನುಷ್ಯನು ಮನಃಪೂರ್ವಕ ತಾನಾಗಿಯೇ ಪ್ರವೃತ್ತನಾಗಿ ಹೆಚ್ಚಾದ ಆಸಕ್ತಿಯಿಂದ ನಡೆಸುವ ಕಾರ್ಯಕ್ಕೂ, ಮಮತೆಯೂ ಅಭಿನಿವೇಶವೂ ಇಲ್ಲದವನು ಇತರರ ನಿರ್ಬಂಧಕ್ಕೋಸ್ಕರವೋ ಅಥವಾ ಇತರರ ಪ್ರಯೋಜನಕ್ಕೋಸ್ಕರವೋ ನಡೆಸುವ ಕಾರ್ಯಕ್ಕೂ ಇರತಕ್ಕ ತಾರತಮ್ಯವು ಚೆನ್ನಾಗಿ ತಿಳಿದು ಬರುವುದಷ್ಟೆ? ಹಾಗೆ ಸ್ವಪ್ರಯೋಜನಾಭಿಸಂಧಿ ಇಲ್ಲದೆ ಪರೋದ್ದೇಶ್ಯವಾಗಿ ನಡೆಸಲ್ಪಡುವ ಕಾರ್ಯಗಳಲ್ಲಿ ಕರ್ತೃವಿಗೆ ಸಂಬಂಧವು ಎಷ್ಟರ ಮಟ್ಟಿಗಿರುವುದೆಂಬ ಅಂಶವು ವಿದಿತವಾಗಿಯೇ ಇರುವುದು. ಇದರಂತೆ ಲೋಕದಲ್ಲಿ ಧರ್ಮಮಾರ್ಗ ಪ್ರಚಾರವನ್ನು ಮಾಡುವುದಕ್ಕೆ ಭಗವತ್ಪಾದಾಚಾರ್ಯರವರಿಂದ ಸ್ಥಾಪಿಸಲ್ಪಟ್ಟ ಈ ಶೃಂಗಗಿರಿ ಮಠದಲ್ಲಿದ್ದ

ಗುರುಗಳು ಗುರ್ವಾಜ್ಞಾಧೀನರಾಗಿ ತಮ್ಮ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಕಾಲ ಸ್ವಭಾವವನ್ನೂ ತತ್ಕಾಲದ ಜನರ ಶೀಲ ಸ್ವಭಾವವನ್ನೂ ಚೆನ್ನಾಗಿ ಆಲೋಚಿಸಿ ಪಂಡಿತಪಾಮರ ಸಾಧಾರಣವಾಗಿ ಜನಗಳಿಗೆ ತಮ್ಮ ವಿಷಯದಲ್ಲಿ ದರ್ಶನ ಮಾತ್ರದಿಂದ ಗೌರವ ಬುದ್ಧಿಯುಂಟಾಗಿ ತಮ್ಮ ಸಮೀಪಕ್ಕೆ ಬರುವಂತೆ ಮಾಡಿಕೊಳ್ಳುವುದಕ್ಕೂ, ಬಂದನಂತರ ತಮ್ಮ ಉಪದೇಶದಿಂದ ಆ ಜನರನ್ನು ಧರ್ಮಮಾರ್ಗದಲ್ಲಿ ಪ್ರವೃತ್ತರಾಗುವಂತೆ ಮಾಡುವುದಕ್ಕೂ ಬಾಹ್ಯಾಡಂಬರವೂ ಒಂದು ಸಾಧನವೆಂದು ನಿಷ್ಕರ್ಷೆಮಾಡಿ ಛತ್ರಚಾಮರಾದಿ ರಾಜಚಿಹ್ನೆಗಳನ್ನು ಪರಿಗ್ರಹಿಸಿರುವರೆಂದು ಅಭಿಪ್ರಾಯಪಡತಕ್ಕದ್ದಾಗಿದೆ. ಈ ಅಭಿಪ್ರಾಯದಿಂದ ಪ್ರಾರಂಭದಲ್ಲಿ ರಾಜಚಿಹ್ನೆಗಳನ್ನು ಅಂಗೀಕರಿಸಿದವರಿಂದ ಈಚೆಗೆ ಬಂದವರಿಗೆ ತದಾಶ್ರಯಣವು ಗುರ್ವಾಜ್ಞಾಪರಿಪಾಲನಾರೂಪವಾದ ಧರ್ಮವಾಗಿ ಏರ್ಪಟ್ಟಂತೆ ಹೇಳಬೇಕಾಗುವುದು. ಈ ವಿಷಯದಲ್ಲಿ

ಅಷ್ಟೌ ತಾನ್ಯವ್ರತಘ್ನಾನಿ ಅಪೋಮೂಲಂ ಘೃತಂ ಪಯಃ ॥
ಹವಿರ್ಬ್ರಾಹ್ಮಣಕಾಮಾಯ ಗುರೋರ್ವಚನಮೌಷಧಮ್ ॥

ಎಂಬ ಸರ್ವಸ್ಮೃತಿಮೂರ್ಧನ್ಯವಾದ ಮನುಸ್ಮೃತಿಯ ವಚನವು ಪ್ರಮಾಣವು. ನಾವು ಆ ಗುರುಪರಂಪರೆಯಲ್ಲಿ ಸೇರಿದವರಾಗಿ ಗುರುಗಳ ಆಜ್ಞೆಗನುಸಾರವಾಗಿ ಅವರ ಆಚರಣೆಗಳನ್ನು ಅನುವರ್ತಿಸುವುದು ನಮಗೆ ಮುಖ್ಯ ಧರ್ಮವೇ ಆಗಿರುವುದರಿಂದ ಆ ವಿಷಯದಲ್ಲಿ ವಿಚಾರವನ್ನೇ ಮಾಡದೆ ಅನುಷ್ಠಾನ ಮಾಡಲು ನಾವು ಬದ್ಧರಾಗಿರುತ್ತೇವಾಗಿ ಪ್ರತ್ಯವಾಯ ಶಂಕೆಗೆ ಅವಕಾಶವಿಲ್ಲವು. ಗುರು ಪರಂಪರಾಕ್ರಮದಿಂದ ಇದುವರೆಗೆ ಅನುಷ್ಠಾನದಲ್ಲಿ ಬಂದಿರುವ ಮಾರ್ಗಕ್ಕಿಂತಲೂ ಭಿನ್ನವಾದ ನೂತನ ಮಾರ್ಗವನ್ನು ಅವಲಂಬಿಸಿ ನಿಮ್ಮ ಕೋರಿಕೆಯನ್ನು ನೆರವೇರಿಸಬೇಕಾದ ಸಂದರ್ಭವು ಈಗ ಒದಗಿರುವುದು. ಶಾಸ್ತ್ರದಿಂದಲೂ ಯುಕ್ತಿಯಿಂದಲೂ ವಿಚಾರ ಮಾಡಿದರೆ ನಿಮ್ಮ ಅಭಿಪ್ರಾಯದಂತೆ ಧೂಮಶಕಟಾದಿ ಸಾಧನಗಳನ್ನು ಅಂಗೀಕರಿಸಿ ನಾವು ಪ್ರಯಾಣ ಮಾಡಲು ಯಾವ ವಿಧದಿಂದಲೂ ಅಧರ್ಮವನ್ನು ಆಚರಿಸಿದಂತಾಗುವುದಿಲ್ಲವಾದರೂ.

ಅಸ್ವರ್ಗ್ಯಂಲೋಕವಿದ್ವಿಷ್ಟಂ ಧರ್ಮಮಪ್ಯಾಚರೇನ್ನತು

ಎಂಬ ಧರ್ಮಶಾಸ್ತ್ರ ಪ್ರಮಾಣದಿಂದ ನೂತನವಾದ ನಮ್ಮ ಆಚರಣೆಯು ಲೋಕ ನಿಂದಿತವಾಗುವುದು. ಅದು ಹೇಗೆಂದರೆ - ಹಿಂದಿನ ಗುರುಗಳು ಅಂಗೀಕರಿಸಿಕೊಂಡು ಬಂದಿರತಕ್ಕ ಮಾರ್ಗವನ್ನೇ ನಾವು ಅನುಸರಿಸಿ ನಡೆಯುತ್ತಲಿರುವುದನ್ನು ನೋಡಿರುವ ಲೋಕವು ಹೊಸದಾಗಿ ಈಗ ಬೇರೊಂದು ಮಾರ್ಗವನ್ನು ನಾವು ಅವಲಂಬಿಸಲು ಇದು

ಹಿಂದಿನವರ ಅನುಷ್ಠಾನದಲ್ಲಿ ಇರಲಿಲ್ಲವೆಂಬ ಕಾರಣದಿಂದ ನಿಂದಿಸುವುದು ಸಹಜವೆ ಅಷ್ಟೇ ? ಹಾಗೆ ನಿಂದಾಸ್ಪದವಾದ ನವೀನಪದ್ಧತಿಯನ್ನು ಆಶ್ರಯಿಸುವುದರಲ್ಲಿ ಮೊದಲನೆಯವರಾಗಿರಲು ನಮಗೆ ಅಭಿಪ್ರಾಯವಿಲ್ಲವು. ಶ್ರೀರಾಮಚಂದ್ರನು ಕ್ರಮಪ್ರಾಪ್ತವಾಗಿ ಬಂದ ರಾಜ್ಯವನ್ನು ಬಿಟ್ಟು ಪಿತೃವಾಕ್ಯಪರಿಪಾಲನೆಗಾಗಿ ಅರಣ್ಯವಾಸಕ್ಕೆ ಹೊರಟು ಪಿತೃವಾಕ್ಯಪರಿಪಾಲನ ರೂಪವಾದ ಧರ್ಮವನ್ನು ಆಚರಿಸುವುದರಲ್ಲಿ ಸಿದ್ಧನಾದಾಗ, ಯಾವ ತಂದೆಯಿಂದ ಆಜ್ಞಪ್ತನಾಗಿ ಸ್ವಧರ್ಮವನ್ನು ಬಿಟ್ಟು ಋಷಿಧರ್ಮಾಶ್ರಯಣವನ್ನು ಮಾಡಿದನೋ ಆತನೇ ಮತ್ತೆ ಎಷ್ಟು ವಿಧವಾಗಿ ನಿರೋಧಿಸಿದರೂ, ಭರತನು ಎಷ್ಟು ವಿಧವಾದ ಸಮಾಧಾನೋಕ್ತಿಗಳಿಂದ ನ್ಯಾಯಪ್ರದರ್ಶನ ಪೂರ್ವಕವಾಗಿ ಪ್ರಾರ್ಥಿಸಿದರೂ ಗುರ್ವಾಜ್ಞಾಪರಿಪಾಲನೆಯೊಂದೇ ತನಗೆ ಧರ್ಮವು; ಅದಕ್ಕೆ ವಿರುದ್ಧವಾಗಿ ನಡೆವುದರಿಂದ ಇಹಪರಲೋಕಗಳೆರಡರಲ್ಲಿಯೂ ತಾನು ನಿಂದಿತನಾಗುವೆನು; ಎಂಬ ನಂಬಿಕೆಯಿಂದಲ್ಲದೆ ಭಕ್ತನಾಗಿಯೂ, ಪ್ರಿಯನಾಗಿಯೂ, ಸಹೋದರನಾಗಿಯೂ, ಧಾರ್ಮಿಕನಾಗಿಯೂ ಇದ್ದ ಭರತನನ್ನು ವಿಫಲಮನೋರಥನನ್ನಾಗಿ ಮಾಡಬೇಕಾದ ನಿರ್ಬಂಧವು ಶ್ರೀರಾಮನಿಗೆ ಒದಗಿ ಬಂದಿತು. ಸಾಕ್ಷಾದ್ವಿಷ್ಣುಶಕ್ತಿಯಾದ ಮಹಾಲಕ್ಷ್ಮಿಯ ಅಪರಾವತಾರವನ್ನು ಮಾಡಿದವಳಾಗಿಯೂ ಅಯೋನಿಜೆಯಾಗಿಯೂ ಪತಿವ್ರತಾ ಶಿರೋಮಣಿಯಾಗಿಯೂ ಇದ್ದ ಸೀತಾದೇವಿಯ ಸ್ವರೂಪವನ್ನು ಸ್ವಭಾವವಾದ ತನ್ನ ಶಕ್ತಿಯಿಂದಲೂ, ಬಾಲ್ಯ ಮೊದಲುಗೊಂಡು ಚಿರಕಾಲದ ಪರಿಚಯದಿಂದಲೂ ತಿಳಿದುಕೊಂಡಿದ್ದ ರಘುರಾಮನು ಲೋಕನಿಂದೆಗೆ ಭೀತಿಗೊಂಡಲ್ಲವೆ ಆಕೆಗೆ ಅಗ್ನಿಪ್ರವೇಶದಿಂದ ಪಾರಿಶುದ್ಧ್ಯವನ್ನು ಪ್ರದರ್ಶಿಸುವಂತೆ ಆಜ್ಞಾಪಿಸಿದ್ದಾಗಿ ರಾಮಕಥೆಯಿಂದ ತಿಳಿದು ಬರುವುದು. ಅಂತಹ ಮಹನೀಯನಾದ ರಾಮಚಂದ್ರನೇ ಲೋಕನಿಂದೆಗೆ ಹಿಂಜರಿದಿರುವಲ್ಲಿ, ಅಸ್ಮದಾದಿಗಳು ಅದಕ್ಕೆ ಅವಕಾಶವನ್ನು ಕೊಡುವುದು ಧರ್ಮವೋ? ನಿಮ್ಮ ದೇಶಕ್ಕೆ ಸಮೀಪವರ್ತಿಗಳಾಗಿಯೂ ಲೋಕಪ್ರಸಿದ್ಧರಾಗಿಯೂ ವಯೋವೃದ್ಧರಾಗಿಯೂ ಜ್ಞಾನವೃದ್ಧರಾಗಿಯೂ ಅನೇಕರು ಇರಬಹುದಾಗಿ, ಅವರಿಂದ ಉದ್ದಿಷ್ಟಕಾರ್ಯವನ್ನು ನೆರವೇರಿಸಿಕೊಳ್ಳಬಹುದಾದ ಸುಲಭ ಮಾರ್ಗವನ್ನು ಬಿಟ್ಟು, ಇತರರಿಗಿಂತ ಯಾವುದೋ ಒಂದು ವಿಶೇಷವು ನಮ್ಮಲ್ಲಿರುವುದೆಂದು ನಿಶ್ಚಯದಿಂದಲೋ ಅಥವಾ ಭ್ರಾಂತಿಯಿಂದಲೋ ನೀವು ನಂಬಿಯಲ್ಲವೆ ಇಷ್ಟು ದೂರದಲ್ಲಿರುವ ನಮ್ಮಲ್ಲಿಗೆ ಬಂದಿರುವಿರಿ ? ಹೀಗಿರುವಲ್ಲಿ ಗುರುಪರಂಪರಾಗತವಾಗಿ ಅಂಗೀಕರಿಸಿಕೊಂಡು ಬಂದಿರುವ ಮಾರ್ಗವನ್ನೇ ಅನುಸರಿಸುವುದರಿಂದ ಪ್ರಕೃತ ಕಾರ್ಯಸಾಧನೆಯೂ, ಪ್ರತಿಷ್ಠಾ ಸಂಪಾದನೆಯೂ ಆಗುವುದಿಲ್ಲವೆಂದು ತಿಳಿದೂ, ನಾವು ನೂತನ ಮಾರ್ಗವನ್ನು ಅವಲಂಬಿಸಿ ಪ್ರಕೃತ ಕಾರ್ಯವನ್ನು ನೆರವೇರಿಸಿದಲ್ಲಿ, ನಮ್ಮ

ವಿಷಯವಾಗಿ ನಿಮ್ಮಗಳಿಗೆ ಇದುವರೆಗೆ ಉಂಟಾಗಿರಲಬಹುದಾದ ಭಾವನೆಯು ಹೆಚ್ಚುವುದೋ! ಅಥವಾ ಹಾಗೆಯೇ ಇರುವುದೋ! ಅದು ನಿಮಗೇ ವಿದಿತವಾಗಬಹುದು. ಆದುದರಿಂದ ಧರ್ಮಲೋಪವನ್ನು ಮಾಡಿಕೊಂಡಾದರೂ ನಿಮ್ಮ ಪ್ರಾರ್ಥನೆಯನ್ನು ನೆರವೇರಿಸಬೇಕೆಂದು ನಮ್ಮನ್ನು ಪ್ರಾರ್ಥಿಸುವುದಕ್ಕಿಂತಲೂ, ನಮ್ಮ ಅಭಿಪ್ರಾಯವನ್ನೇ ನೀವುಗಳು ಅನುಮೋದಿಸಿ, ಲೋಕಪೂಜ್ಯರಾಗಿದ್ದ ನಮ್ಮ ಗುರುಗಳ ಪಾದುಕೆಯನ್ನು ತೆಗೆದುಕೊಂಡುಹೋಗಿ ಅದನ್ನು ಅಗ್ರಾಸನದಲ್ಲಿಟ್ಟು ನಿಮ್ಮ ಕಾರ್ಯವನ್ನು ಪ್ರಾರಂಭಿಸಿದರೆ ಆ ಪಾದುಕೆಯ ಪ್ರಭಾವದಿಂದ ನಿಮ್ಮ ಸಂಕಲ್ಪಿತಾರ್ಥವು ಸಿದ್ಧಿಸುವುದು.

ಈ ರೀತಿಯಿಂದ ಶ್ರೀಗಳವರು ತಮ್ಮ ಅಭಿಪ್ರಾಯವನ್ನು ತಿಳಿಸಿದ ಕೂಡಲೇ ಇವರ ಮನೋದಾರ್ಢ್ಯವನ್ನೂ ಇವರ ಉದಾಸೀನಭಾವವನ್ನೂ ಹಿಂದಿನವರ ಆಚಾರಗಳ ವಿಷಯದಲ್ಲಿ ಇವರಿಗಿದ್ದ ನಂಬಿಕೆಯನ್ನೂ ತಿಳಿದುಕೊಂಡ ಆ ಗೃಹಸ್ಥರು ಅತ್ಯಾಶ್ಚರ್ಯದಿಂದಲೂ ಕೇವಲ ಭಯಭಕ್ತಿಗಳಿಂದಲೂ ಸಾಷ್ಟಾಂಗವಾಗಿ ನಮಸ್ಕರಿಸಿ, ಶ್ರೀಗಳವರ ಅಪ್ಪಣೆಯನ್ನೂ ಶಿರಸಾವಹಿಸಿ, ದಾಕ್ಷಿಣ್ಯಕ್ಕೆ ಒಳಗಾಗಿಯಾಗಲಿ, ಗೌರವ ಮತ್ತು ಪ್ರತಿಷ್ಠೆಗಳ ಸಂಪಾದನೆಯಲ್ಲಿ ಅಭಿಪ್ರಾಯವುಳ್ಳವರಾಗಿಯಾಗಲಿ ಶ್ರೀಗಳವರು ತಮ್ಮಗಳ ಪ್ರಾರ್ಥನೆಯನ್ನು ಅಂಗೀಕರಿಸಿ, ನೂತನ ಮಾರ್ಗಾವಲಂಬನದಿಂದ ಕಾಶೀಕ್ಷೇತ್ರಕ್ಕೆ ದಯಮಾಡಿಸಿ, ಜನಗಳ ಕೋರಿಕೆಯನ್ನು ನೆರವೇರಿಸಿದ್ದರೆ ಅಲ್ಲಿಯ ಜನರಿಗೆ ಯಾವ ಸಂತೋಷವುಂಟಾಗಬಹುದಾಗಿತ್ತೋ ಅದಕ್ಕಿಂತಲೂ ಸಹಸ್ರಾಂಶ ಅಧಿಕವಾಗಿ ಶ್ರೀಗಳವರು ಅಪ್ಪಣೆ ಕೊಡಿಸಿದ ಸಂಗತಿಗಳನ್ನು ತಿಳಿದು ಆ ಜನರು ಸಂತೋಷ ಪಡುವರೇ ಹೊರತು ಯಾರೊಬ್ಬರೂ ವ್ಯಸನ ಪಡಲಾರರೆಂಬ ನಂಬಿಕೆಯು ತನಗೆ ಇರುವುದೆಂದು ತಿಳಿಸಿ, ಗುರುಗಳವರು ಅನುಗ್ರಹಿಸಿದ ಪಾದುಕೆಗಳನ್ನು ಪಡೆದುಕೊಂಡು ಸಂತುಷ್ಟಚಿತ್ತರಾಗಿ ಹೊರಟುಹೋದರು. ಮಠಾಧಿಪತ್ಯವುಳ್ಳ ಈ ಸ್ವಾಮಿಗಳು ಅನಿತರ ಸಾಧಾರಣವಾದ ಗೌರವವನ್ನೂ ಕೀರ್ತಿಯನ್ನೂ ಸಂಪಾದಿಸಬಹುದಾದ ಸಂದರ್ಭಗಳು ಒದಗಿ ಬಂದರೂ, ಇವರಿಗಿದ್ದ ವಿವೇಕ ವೈರಾಗ್ಯಗಳಿಂದ ಅಂತಹ ವಿಷಯಗಳನ್ನು ಕೂಡ ಅತ್ಯಲ್ಪವಾದವುಗಳನ್ನಾಗಿ ಭಾವಿಸುತ್ತಲಿದ್ದರೆಂಬ ಅಂಶವನ್ನು ಸ್ವಲ್ಪ ಮಟ್ಟಿಗೆ ತಿಳಿಯಲು ಅವಕಾಶವಿರಬಹುದೆಂದು ನಂಬಿ ಈ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿದೆ.

ಶ್ರೀಗಳವರಿಗಿದ್ದ ಜ್ಞಾನವು ಅನುಭವ ಪೂರ್ವಕವಾದದ್ದು. ಇವರು ಅನೇಕ ಸಮಯಗಳಲ್ಲಿ ಅನೇಕ ಘಂಟೆಗಳ ಕಾಲ ತಮ್ಮ ಶರೀರವನ್ನು ಮರೆತು ಆತ್ಮಧ್ಯಾನದಲ್ಲಿ ನಿರತರಾಗಿರುತ್ತಲಿದ್ದರು. ಯಾವಾಗಲೂ ಅಂತಹ ಆತ್ಮಾನುಸಂಧಾನವನ್ನು ಮಾಡುತ್ತಲಿದ್ದರೆಂಬ

ಭಾಗವನ್ನು ತಿಳಿದುಕೊಳ್ಳಲು ಮಂದಹಾಸದಿಂದ ಯುಕ್ತವಾದ ಇವರ ಮುಖವೊಂದೇ ಸಾಕಾದ ಪ್ರಮಾಣವಾಗಿತ್ತು. ಅತ್ಯಂತ ಸೂಕ್ಷ್ಮವಾದ ಆತ್ಮತತ್ತ್ವವನ್ನು ಲೋಕ ದೃಷ್ಟಾಂತಗಳಿಂದಲೂ ಯುಕ್ತಿಗಳಿಂದಲೂ ತಮ್ಮಲ್ಲಿಗೆ ಬರತಕ್ಕ ಶಿಷ್ಯರಿಗೆ ಬಹಳ ಸುಲಭ ರೀತಿಯಿಂದ ಉಪದೇಶಿಸುತ್ತಲಿದ್ದರು. ಶಿಷ್ಯರು ಸಾಧನ ಚತುಷ್ಟಯಸಂಪಾದನಪೂರ್ವಕವಾಗಿ ಆತ್ಮವಿಚಾರದಲ್ಲಿ ಅಧಿಕಾರವನ್ನು ಹೊಂದದವರಾಗಿದ್ದರೂ ಶ್ರೀಗಳವರ ಉಪದೇಶದ ರೀತಿಯಿಂದ ಬಹಳ ಸುಲಭವಾಗಿ ಸೂಕ್ಷ್ಮಾರ್ಥಗಳನ್ನೂ ತಿಳಿದು ಆನಂದ ಪಡುತ್ತಲಿದ್ದರು. ಉಪದಿಷ್ಟವಾದ ವಿಷಯವು ಮನಸ್ಸಿಗೆ ಬಾರದಿದ್ದಲ್ಲಿ ಹಾಗೆ ಆನಂದ ಪಡುವುದಕ್ಕೆ ಅವಕಾಶವಿಲ್ಲವು. ಆ ರೀತಿಯಾಗಿ ಅಸಂಸ್ಕೃತ ಬುದ್ಧಿಗಳಿಗೆ ಕೂಡ ತತ್ತ್ವವನ್ನು ತಿಳಿವಂತೆ ಹೇಳಬೇಕಾದರೆ ಸ್ವಾನುಭವವಿದ್ದವರಿಗೆ ಅದು ಸಾಧ್ಯವಲ್ಲದೆ ಕೇವಲ ಶಾಸ್ತ್ರಜ್ಞಾನವಿರುವವರಿಗೆ ಸಾಧ್ಯವಲ್ಲವು. ಶಾ|| 1824ನೇ ಪ್ಲವ ಸಂವತ್ಸರ ಕಾರ್ತಿಕ ಮಾಸ (7-12-1901)ರಲ್ಲಿ ನಾಲ್ವಡಿ ಶ್ರೀಕೃಷ್ಣರಾಜ ಪ್ರಭುಗಳವರು ತಮ್ಮ ರಾಜ್ಯಭಾರವಹನಕ್ಕೆ ಪೂರ್ವಭಾವಿಯಾಗಿ ಎರಡನೆಯ ಸಾರಿ ಶೃಂಗೇರಿಗೆ ದಯಮಾಡಿಸಿ ನಾಲ್ಕು ಘಂಟೆಗಳ ಕಾಲ ಅಲ್ಲಿದ್ದು ಶ್ರೀಗಳವರ ಪರಮಾನುಗ್ರಹವನ್ನು ಪಡೆದು ಪ್ರಯಾಣ ಬೆಳೆಸುವ ಸಂದರ್ಭದಲ್ಲಿ ಅವರೊಡನೆ ಬಂದಿದ್ದ ಮಿಸ್ಟರ್ ಫ್ರೇಜರ್ ಸಾಹೇಬರು ಶ್ರೀಗಳವರು ಸದಾ ಆನಂದಯುಕ್ತರಾಗಿರುವುದನ್ನು ನೋಡಿ ''ಸಂಸಾರಿಗಳಾದ ನಾವುಗಳು ನಮ್ಮ ಮನೆಗಳಿಗೆ ಬರುವ ಬಂಧುಗಳಿಗೂ ಸ್ನೇಹಿತರಿಗೂ ಕಾಫಿ, ಟೀ ಮೊದಲಾದ ವಿಶ್ರಾಂತಿ ಸಾಧಕವಾದ ಪದಾರ್ಥಗಳನ್ನು ಮಿತವಾಗಿ ಕೊಟ್ಟು ಸಂತೋಷ ಗೊಳಿಸುವೆವು; ತಮ್ಮಲ್ಲಿ ಬರತಕ್ಕವರಿಗೆ ತಾವು ಹೃದಯದಲ್ಲಿ ತುಂಬಿಕೊಂಡಿರುವ ಆನಂದವನ್ನು ಅಮಿತವಾಗಿಕೊಟ್ಟು ಸಂತೋಷಗೊಳಿಸುವಿರಿ'' ಎಂದು ಹೇಳಿದರು. ಈ ಅಭಿಪ್ರಾಯವು ಕೇವಲ ಪ್ರಾಪಂಚಿಕ ಸುಖೈಕ ದೃಷ್ಟಿಗಳಾದ ಪಾಶ್ಚಾತ್ಯ ಪಂಡಿತರಿಂದ ಬರಬೇಕಾದರೆ ಶ್ರೀಗಳವರ ಮನೋಭಾವವು ಇವರ ಮುಖವನ್ನು ನೋಡಿದ ಮಾತ್ರದಿಂದ ಯಾರಿಗಾದರೂ ಕಂಡುಹಿಡಿವಷ್ಟು ಸುಲಭವಾಗಿದ್ದಿತೆಂದು ಹೇಳುವುದರಲ್ಲಿ ಸಂದೇಹವಿರಲಿಲ್ಲ.

ಶ್ರೀಗಳವರು ಶೃಂಗೇರಿಯಲ್ಲಿ ವಾಸಿಸುತ್ತಿದ್ದ ಕಾಲದಲ್ಲಿ ಕೆಲವು ವರ್ಷಗಳು ಬಾಹ್ಯಪೂಜಾದಿ ಕರ್ಮಕಲಾಪಗಳನ್ನು ಬಿಟ್ಟು ಕೇವಲ ಜ್ಞಾನಾಭ್ಯಾಸದಲ್ಲಿಯೇ ನಿರತರಾಗಿದ್ದರು. ಆಗ ತುಂಗಾನದೀ ತೀರದಲ್ಲಿ ವಿವಿಕ್ತವಾಗಿಯೂ, ರಮಣೀಯವಾಗಿಯೂ ಇರತಕ್ಕ ಪ್ರದೇಶದಲ್ಲಿ ಮರಳುಗುಡ್ಡೆಯಮೇಲೆಯೂ ಬಂಡೆಯ ಮೇಲೆಯೂ ಕುಳಿತುಕೊಂಡು ಆತ್ಮನನ್ನು ಧ್ಯಾನಿಸುತ್ತಿದ್ದರು. ಪ್ರಾಯಃ ಪ್ರತಿವರ್ಷವೂ ಒಂದು ತಿಂಗಳ ಕಾಲ ಶೃಂಗೇರಿಗೆ ಸಮೀಪದಲ್ಲಿರುವ ನರಸಿಂಹಪರ್ವತದಲ್ಲಿ ವಸತಿ ಮಾಡುತ್ತಿದ್ದರು. ಆಗ ಇವರು ಪರಿಜನರ ಪ್ರದೇಶಕ್ಕೆ ದೂರವಾದ ಒಂದು ಪರ್ಣಶಾಲೆಯಲ್ಲಿ

ಏಕಾಂತವಾಗಿದ್ದುಕೊಂಡು ಆತ್ಮಧ್ಯಾನಮಾಡುತ್ತಲಿದ್ದರು. ಸಾಯಂಕಾಲ 5 ಘಂಟೆಯ ಮೇಲೆ ತಮ್ಮ ಪರ್ಣಶಾಲೆಯಿಂದ ಹೊರಗೆ ಬಂದು, ಪರ್ವತದ ಮೇಲೆ ಎರಡು ಮೂರು ಮೈಲಿಗಳ ದೂರ ಸಂಚರಿಸುವ ಸಮಯದಲ್ಲಿ ಸಂನ್ಯಾಸಿಗಳು, ಗೃಹಸ್ಥರು ಮೊದಲಾದವರು ದೂರವಾಗಿ ಶ್ರೀಗಳವರನ್ನು ನಮಸ್ಕರಿಸಿ ಇವರನ್ನು ಅನುಸರಿಸಿ ಹೋಗುತ್ತಲಿದ್ದರು. ಶ್ರೀಗಳವರು ಯಾರಲ್ಲಿಯೂ ಸಂಭಾಷಣೆ ಮಾಡುತ್ತಿರಲಿಲ್ಲ. ಇವರ ಮಂದಹಾಸವು ಚಂದ್ರಕಿರಣಗಳಂತೆ ಎಲ್ಲರ ಮೇಲೂ ಪ್ರಸರಿಸಿ ಸಕಲರಿಗೂ ಆನಂದವನ್ನುಂಟುಮಾಡಿ ಎಲ್ಲರ ಮನಸ್ಸೂ ಶುದ್ಧಭಾವವನ್ನು ಹೊಂದುವಂತೆ ಮಾಡುತ್ತಲಿತ್ತು. ಸುಮಾರು ನೂರೈವತ್ತು ವರ್ಷಗಳಿಗೆ ಹಿಂದೆ ದಕ್ಷಿಣ ದೇಶದಲ್ಲಿ ಜೀವನ್ಮುಕ್ತರೆಂದು ಪ್ರಸಿದ್ಧರಾಗಿದ್ದ ಸದಾಶಿವ ಬ್ರಹ್ಮೇಂದ್ರರೆಂಬ ಮಹನೀಯರಲ್ಲಿ ಶ್ರೀಗಳವರಿಗೆ ವಿಶೇಷವಾದ ಗೌರವ ಬುದ್ಧಿಯುಂಟಾಗಿತ್ತು. ಬ್ರಹ್ಮಜ್ಞಾನಿಗಳಾದ ಅವರು ಆತ್ಮಾನುಭವವನ್ನು ಆತ್ಮವಿದ್ಯಾವಿಲಾಸವೆಂಬ ತಮ್ಮ ಗ್ರಂಥದಲ್ಲಿ ಪ್ರಕಟಗೊಳಿಸಿರುವರು. ಅದನ್ನು ಯಾವಾಗಲೂ ಪಠಿಸುವುದರಲ್ಲಿಯೂ ಕೇಳುವುದರಲ್ಲಿಯೂ ಶ್ರೀಗಳವರಿಗೆ ಬಹಳ ಆಸಕ್ತಿಯಿದ್ದಿತು. ತಮ್ಮ ಅಂತರಂಗ ಶಿಷ್ಯರ ಮಧ್ಯದಲ್ಲಿ ಶ್ರೀಗಳವರು ಆನಂದವಾಗಿ ಕುಳಿತಿರುವ ಸಮಯಗಳಲ್ಲಿ ಯಾರಾದರೂ ಒಬ್ಬರಿಂದ ಆತ್ಮವಿದ್ಯಾವಿಲಾಸವನ್ನು ಓದಿಸಿ ಕೇಳುತ್ತಿದ್ದರು. ಹಾಗೆ ಕೇಳುವುದಕ್ಕೆ ಪ್ರಾರಂಭವಾದ ಐದಾರು ನಿಮಿಷಗಳವರೆಗೆ ಮಾತ್ರ ಶ್ರೀಗಳವರಿಗೆ ಬಾಹ್ಯವೃತ್ತಿಯಿರುತ್ತಿತ್ತು. ಅನಂತರ ಗ್ರಂಥಪೂರ್ತಿಯಾದ ಮೇಲೆ ಸುಮಾರು ಅರ್ಧಘಂಟೆಯವರೆಗೆ ಬಾಹ್ಯವ್ಯಾಪಾರವೇ ಇರುತ್ತಿರಲಿಲ್ಲವು. ಋಜುಕಾಯದಿಂದ ಪದ್ಮಾಸನಸ್ಥರಾಗಿದ್ದ ಶ್ರೀಗಳವರ ಶಿರಸ್ಸು ನೆಲದವರೆಗೆ ಬಗ್ಗಿ ಹೋಗುತ್ತಲಿತ್ತು. ಈ ಸಂಭವವನ್ನು ಇವರಲ್ಲಿಗೆ ವಿಶೇಷವಾಗಿ ಬರುತ್ತಿದ್ದ ಶಿಷ್ಯರಲ್ಲಿ ಅನೇಕರು ಪ್ರತ್ಯಕ್ಷವಾಗಿ ನೋಡಿದ್ದರು. ಇವರು ಧ್ಯಾನ ಮಾಡತಕ್ಕ ಕಾಲದಲ್ಲಿ ಶರೀರವನ್ನು ಮರೆತು ಅದರ ಮೇಲಿದ್ದ ಮಮತೆಯು ಇವರಿಗೆ ತಪ್ಪಿ ಹೋಗುತ್ತಲಿತ್ತೆಂಬುದಕ್ಕೆ ಅನೇಕ ನಿರ್ದಶನಗಳುಂಟು. ಪ್ರತಿವರ್ಷವೂ ನರಸಿಂಹಪರ್ವತದಲ್ಲಿ ಕೆಲವು ಕಾಲ ವಸತಿ ಮಾಡುತ್ತಿದ್ದಂತೆ ಹಿಂದೆ ಹೇಳಿರುವೆವಷ್ಟೆ ? ಆ ಕಾಲದಲ್ಲಿ ಒಂದು ದಿನ ಪ್ರಾತಃ ಕಾಲ 7 ಘಂಟೆಯಿಂದ 12 ಘಂಟೆಗಳವರೆಗೆ ಅಲ್ಲಿರುವ ನರಸಿಂಹದೇವರ ಸಮೀಪದ ವೃಕ್ಷಮೂಲದಲ್ಲಿ ಆಸನಸ್ಥರಾಗಿ ಧ್ಯಾನ ಮಾಡುತ್ತಲಿದ್ದಾಗ ಒಂದು ಕಾಡುನೊಣವು ಶ್ರೀಗಳವರ ತೊಡೆಯ ಮೇಲೆ ಕುಳಿತು ಚೂಪಾಗಿ ಮುಳ್ಳಿನಂತಿರುವ ಕೊಂಡಿಗಳಿಂದ ಕುಕ್ಕಿ ಯಥೇಷ್ಟವಾಗಿ ರಕ್ತವನ್ನು ಹೀರಿತು. ರಕ್ತವು ತೊಡೆಯ ಮೇಲಿಂದ ಇಳಿದು ಭೂಮಿಯ ಮೇಲೂ ಬೀಳುತ್ತಿತ್ತು. ಶ್ರೀಗಳವರು ಸಮಾಧಿಯಿಂದ ಬಹಿರ್ಮುಖರಾಗುವವರೆಗೂ ಅವರಿಗೆ ಯಾವ ಹಿಂಸೆಯೂ ತೋರಲಿಲ್ಲ. ಅನಂತರ ಉಂಟಾದ ಶೀತಸ್ಪರ್ಶದಿಂದ ನೋಡುವಲ್ಲಿ ತೊಡೆಯು ರಕ್ತಮಯವಾಗಿದ್ದುದೂ

ರಕ್ತಬಿಂದುಗಳು ಕೆಳಗೆ ಬಿದ್ದಿರುವುದೂ ಗೋಚರವಾಯಿತು. ಈ ಸಂಭವವನ್ನು ಈ ಲೇಖಕನು ಸಾಕ್ಷಾತ್ತಾಗಿ ನೋಡಿರುವನು.

ಇಂತಹ ಜ್ಞಾನಿಗಳಿಗೆ ಅಣಿಮಾದಿ ಸಿದ್ಧಿಗಳು ಇದ್ದುವೆಂದು ಹೇಳುವುದರಲ್ಲಿಯಾಗಲಿ ಸಿದ್ಧಿಗಳ ವಿಷಯದಲ್ಲಿ ಇವರಿಗೆ ಗಮನವಿದ್ದಂತೆ ಹೇಳುವುದರಲ್ಲಿಯಾಗಲಿ ವಿಶೇಷವೇನೂ ಇರುವಂತೆ ತೋರಲಿಲ್ಲ. ಪುತ್ರಾರ್ಥಿಗಳಾಗಿಯೂ ಅನಿವಾರ್ಯವಾದ ರೋಗದಿಂದ ಪೀಡಿತರಾಗಿಯೂ ಭೂತಪ್ರೇತಾವಿಷ್ಟರಾಗಿಯೂ ಅನೇಕರು ಇವರಲ್ಲಿಗೆ ಬರುತ್ತಲಿದ್ದರು. ದೀನರಾಗಿ ತಮ್ಮಲ್ಲಿ ಬರುವವರನ್ನು ಅತ್ಯಾದರದಿಂದ ಶ್ರೀಗಳವರು ಸ್ವತಃ ವಿಚಾರಿಸಿ ಅವರವರ ಕಷ್ಟಗಳನ್ನು ತಿಳಿದುಕೊಳ್ಳುತ್ತಿದ್ದರು. ಬಂದಜನರು ತಮ್ಮ ಕಷ್ಟಗಳನ್ನು ಶ್ರೀಗಳವರಲ್ಲಿ ತಿಳಿಸಿಕೊಳ್ಳುತ್ತ ಶ್ರೀಗಳವರ ಮುಖಭಾವವನ್ನು ನೋಡಿದ ಮಾತ್ರದಿಂದ ತಮ್ಮ ಆ ಕಷ್ಟಗಳ ಪರಿಹಾರವಾದಂತೆ ನಿಶ್ಚಯಿಸುತ್ತಿದ್ದರು. ಆ ಜನರ ಇಷ್ಟಪ್ರಾಪ್ತಿಗೂ ಅನಿಷ್ಟನಿವೃತ್ತಿಗೂ ಶ್ರೀಗಳವರು ವಿಶೇಷವಾಗಿ ವಿಭೂತಿಯನ್ನು ಅಭಿಮಂತ್ರಿಸಿ ಕೊಡುವುದು, ಕೆಲವರಿಗೆ ಶುದ್ಧ ಜಲವನ್ನು ಅಭಿಮಂತ್ರಿಸಿ ಕೊಡುವುದು ಇನ್ನು ಕೆಲವರಿಗೆ ಯಂತ್ರ ಧಾರಣವನ್ನು ಮಾಡಿಸುವುದು, ಮತ್ತೆ ಕೆಲವರಿಗೆ ಮಂತ್ರೋಪದೇಶವನ್ನು ಮಾಡುವುದು ಇವು ಹೊರತು ಬೇರೆ ಯಾವುದನ್ನೂ ಮಾಡುತ್ತಿರಲಿಲ್ಲವೆಂಬುದು ಸರ್ವಜನ ವಿದಿತವಾಗಿರುವುದು. ಇದರ ಫಲವು ಅತ್ಯಾಶ್ಚರ್ಯಕರವಾಗಿ ಜನಗಳಿಂದ ಅನುಭವಿಸಲ್ಪಟ್ಟಿದೆ. ಈ ವಿಷಯದಲ್ಲಿ ಒಂದೆರಡು ನಿದರ್ಶನಗಳನ್ನು ಮಾತ್ರ ಇಲ್ಲಿ ಸಂಗ್ರಹವಾಗಿ ತೋರಿಸಿದೆ. ಅನಂತಶಯನ (ತಿರುವಾಂಕೂರು) ಸಂಸ್ಥಾನಕ್ಕೆ ಸೇರಿದ ಪದ್ಮನಾಭಪುರಂ ಎಂಬ ಡಿವಿಜನ್ನಲ್ಲಿ ಆಶ್ರಮಂ ಎಂಬ ಒಂದು ಬ್ರಾಹ್ಮಣಾಗ್ರಹಾರಕ್ಕೆ ದಯಮಾಡಿಸಿದ್ದಾಗ ಅಲ್ಲಿ ಸೇರಿದ್ದ ಬ್ರಾಹ್ಮಣ ಸಭೆಯಲ್ಲಿ ಸುಬ್ರಹ್ಮಣ್ಯ ಶಾಸ್ತ್ರಿಯೆಂಬ ಬ್ರಾಹ್ಮಣನು ಒಬ್ಬನು. ಆತನು ಸಾಧಾರಣ ಪಂಡಿತನಾಗಿಯೂ ಚೆನ್ನಾಗಿ ಸಂಸ್ಕೃತ ಕವಿತಾ ಸಾಮರ್ಥ್ಯವುಳ್ಳವನಾಗಿಯೂ ಇದ್ದು, ಶ್ರೀಗಳವರ ವಿಷಯವಾಗಿ ಕೆಲವು ಪದ್ಯಗಳನ್ನು ರಚಿಸಿ ಶ್ರೀಗಳವರ ಸನ್ನಿಧಿಯಲ್ಲಿ ಶ್ರುತಪಡಿಸಿಕೊಂಡನು. ಆತನ ಕವಿತಾಚಾತುರ್ಯವನ್ನೂ ಅದರಲ್ಲಿ ಆ ಬ್ರಾಹ್ಮಣನು ತೋರ್ಪಡಿಸಿ ಕೊಂಡಿದ್ದ ದೈನ್ಯವನ್ನೂ ತಿಳಿದ ಶ್ರೀಗಳವರ ಮನಸ್ಸು ಕರಗಿ ನದಿಯಂತೆ ಆ ಸುಬ್ರಹ್ಮಣ್ಯಶಾಸ್ತ್ರಿಯ ಕಡೆಗೆ ಪ್ರವಹಿಸಿತು. ಬಳಿಕ ಆತನ ವಿಷಯವನ್ನು ವಿಚಾರಿಸಿದ್ದರಲ್ಲಿ ಜನ್ಮಮೂಕನಾದ 10-12 ವರ್ಷದ ವಯಸ್ಸಿನ ತನ್ನ ಪುತ್ರನಿಗೋಸ್ಕರ ತಾನು ದುಃಖಿತನಾಗಿರುವಂತೆಯೂ ಆ ದುಃಖದ ಪರಿಹಾರವು ಶ್ರೀಗಳವರ ಅನುಗ್ರಹದಿಂದಲೇ ಆಗಬೇಕಲ್ಲದೆ ಮಾರ್ಗಾಂತರವಿಲ್ಲವೆಂತಲೂ ತಿಳಿಸಿಕೊಂಡನು. ಪುತ್ರನೊಡನೆ ಶುಚೀಂದ್ರವೆಂಬ ಮುಂದಿನ ಗ್ರಾಮಕ್ಕೆ ಬರುವಂತೆ ಶ್ರೀಗಳವರು ಆಜ್ಞೆಮಾಡಿ ಆತನನ್ನು ಸಮಾಧಾನಗೊಳಿಸಿ ತೆರಳಿದರು. ಅದರಂತೆ ಶುಚೀಂದ್ರ

ಗ್ರಾಮಕ್ಕೆ ಮೂಕಬಾಲಕನೊಡನೆ ಬಂದ ಆ ಬ್ರಾಹ್ಮಣನಿಗೆ ಒಂದು ಮಂತ್ರವನ್ನು ಉಪದೇಶಿಸಿ, ಆ ಮಂತ್ರದಿಂದ ಅಭಿಮಂತ್ರಿಸಿದ ಉದಕವನ್ನು ಮೂರು ತಿಂಗಳ ಕಾಲ ಆವಿಚ್ಛಿನ್ನವಾಗಿ ಪ್ರತಿದಿನವೂ ಆ ಬಾಲಕನಿಗೆ ಪ್ರಾಶನ ಮಾಡಿಸುವುದೆಂದು ಅನುಗ್ರಹಿಸಿದರು. ಶ್ರೀಗಳವರ ಆಜ್ಞೆಗನುಸಾರವಾಗಿ ನಿಯಮದಿಂದ ಆ ಬ್ರಾಹ್ಮಣನು ನಡೆಸುತ್ತ ಬಂದ ಅಕ್ರಿಯೆಯಿಂದ ಮೂರು ತಿಂಗಳ ಕಾಲವು ಪೂರ್ಣವಾಗುವುದರೊಳಗೆ ಆ ಬಾಲಕನ ಮೂಕತ್ವವು ತಗ್ಗುತ್ತ ಬಂದಿತು. ಬಧಿರತ್ವವು ಕ್ರಮವಾಗಿ ಕಡಿಮೆಯಾಗಲು ಪ್ರಾರಂಭವಾಯಿತು. ಒಂದೊಂದು ಮಾತನ್ನು ಆಡಬಲ್ಲನೆಂಬ ನಂಬಿಕೆಯುಂಟಾಗುತ್ತ ಬಂದಿತು. ಈ ಅನುಕೂಲ ಸೂಚನೆಗಳಿಂದ ಇನ್ನೂ ದೀರ್ಘಕಾಲದವರೆಗೆ ಆ ಬ್ರಾಹ್ಮಣನು ಶ್ರೀಗಳವರಿಂದ ಉಪದಿಷ್ಟವಾದ ಕ್ರಿಯೆಯನ್ನೇ ಆಚರಿಸುತ್ತ ಬಂದಂತೆಯೂ ಈಚೆಗೆ ಬಹಳ ಮಟ್ಟಿಗೆ ಮೂಕತ್ವವು ನಿವೃತ್ತವಾಗಿ ಆ ಬಾಲಕನಿಗೆ ಉಪನಯನಾದಿ ಸಂಸ್ಕಾರಗಳು ನಡೆದು ಸುಖವಾಗಿರುವಂತೆಯೂ ತಿಳಿದು ಬರುವುದು. ಇದೇ ಅರ್ಥವನ್ನು ಅಲ್ಲಿಯ ಪಂಡಿತರು ಶ್ರೀಗಳವರನ್ನು ಸ್ತೋತ್ರ ಮಾಡಿದ ಕಾಲದಲ್ಲಿ ಒಂದು ಶ್ಲೋಕದಲ್ಲಿ ನಿರೂಪಿಸಿರುತ್ತಾರೆ.

ಆಶ್ರಮವಾಸಿ ದ್ವಿಜಸೂನುಜನ್ಮ ಮೂಕತ್ವ ವಿದ್ರಾವಣಪಂಡಿತಾಭ್ಯಾಮ್ ।
ಆನಂದಸಂದಾಯಕ ವೈಭವಾಭ್ಯಾಂ ನಮೋ ನಮಃ ಶ್ರೀ ಗುರುಪಾದುಕಾಭ್ಯಾಮ್ ॥

ಶ್ರೀಗಳವರು ಶೃಂಗೇರಿಯಲ್ಲಿ ವಸತಿ ಮಾಡಿದ್ದಾಗ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅಮಲ್ದಾರರಾಗಿದ್ದ ತುಮಕೂರು ಸ್ಥಳದ ಹೇಮಾ ಹನುಮಂತಯ್ಯ ಎಂಬವರು ದರ್ಶನಕ್ಕೋಸ್ಕರ ಬಂದರು. ಆಗ್ಗೆ ಅವರಿಗೆ ವಯಸ್ಸು 50 ವರ್ಷಕ್ಕೆ ಮೀರಿತ್ತು. ಅದುವರೆಗೆ ಸಂತಾನವಿರಲಿಲ್ಲ. ಸಂತತಿಯ ಉದ್ದೇಶದಿಂದ ದ್ವಿತೀಯ ಕಳತ್ರವನ್ನು ಪರಿಗ್ರಹಿಸಿದ್ದರು. ಆ ಕಳತ್ರದಲ್ಲಿಯೂ ಸಂತಾನವುಂಟಾಗಿರಲಿಲ್ಲ. ಇವರು ಮೈಸೂರು ದೇಶದಲ್ಲಿ ದೊಡ್ಡ ಸಂತತಿಗೆ ಸೇರಿದವರಾಗಿದ್ದುದರಿಂದ ತಮ್ಮ ವಂಶವು ನಿಂತು ಮುಂದೆ ವೃದ್ಧಿ ಹೊಂದಲು ಅವಕಾಶವಿಲ್ಲದಂತಾಯಿತೆಂಬ ಕೊರತೆಯು ಇವರ ಮನಸ್ಸಿನಲ್ಲಿ ನೆಟ್ಟಿತ್ತು. ತಮ್ಮ ನಂತರದಲ್ಲಿ ತಮ್ಮ ಸ್ಥಿರಚರ ದ್ರವ್ಯಗಳು ಧರ್ಮಕಾರ್ಯಗಳಿಗಾದರೂ ಉಪಯುಕ್ತವಾಗಿ ಅದರಿಂದ ಲಾದರೂ ತಮ್ಮ ವಂಶದವರಿಗೂ ತಮಗೂ ಸದ್ಗತಿಯುಂಟಾಗುವಂತೆ ಮಾಡಿಕೊಳ್ಳಬೇಕೆಂಬ ಸಂಕಲ್ಪವು ಹುಟ್ಟಿ ತಮ್ಮ ಎಲ್ಲಾ ಸ್ವತ್ತೂ ತಮ್ಮ ನಂತರ ಶೃಂಗಗಿರಿ ಶ್ರೀ ಶಾರದಾಂಬೆಯವರ ಸೇವೆಗಾಗಿ ವಿನಿಯೋಗಿಸಲ್ಪಡತಕ್ಕದೆಂದು ಒಂದು ಪತ್ರವನ್ನು ಬರೆದು ಶ್ರೀಗಳವರ ಸನ್ನಿಧಿಯಲ್ಲಿ ತಂದು ಒಪ್ಪಿಸಿದರು. ಆ ಪತ್ರದ ವಿಷಯವೇನೆಂದು ವಿಚಾರ ಮಾಡಿದ್ದರಲ್ಲಿ ಆ ಗೃಹಸ್ಥರು ತಮ್ಮ ಸಂಕಲ್ಪವನ್ನು ವಿವರವಾಗಿ ತಿಳಿಸಿಕೊಂಡರು. ಸಂತಾನಾಭಾವದಿಂದ

ಚಿಂತಾಕ್ರಾಂತರಾಗಿದ್ದ ಅವರ ಅಭಿಪ್ರಾಯವನ್ನು ತಿಳಿದುಕೊಂಡ ಶ್ರೀಗಳವರು ಅವ್ಯಾಜ ಕರುಣೆಯಿಂದ — "ನಿಮ್ಮ ಸ್ವತ್ತು ಸಂಸ್ಥಾನಕ್ಕೆ ಸ್ಥಿರವಾದ ವರಮಾನವನ್ನು ಕೊಡತಕ್ಕದ್ದಲ್ಲ. ಆದ್ದರಿಂದ ಶ್ರೀ ಶಾರದಾಂಬೆಯವರಿಗೆ ಅದರ ವಿಷಯದಲ್ಲಿ ಆದರವಿಲ್ಲವು. ನಿಮ್ಮ ಸಂತತಿ ಪರಂಪರೆಯು ಸ್ಥಿರವಾದ ವರಮಾನವನ್ನು ಕೊಡತಕ್ಕದ್ದು. ಅದರಲ್ಲಿ ಮಾತ್ರ ಹೆಚ್ಚಾದ ಅಪೇಕ್ಷೆಯು ಅಮ್ಮನವರಿಗೆ ಇರುವುದರಿಂದ ಅಂತಹ ವರಮಾನವನ್ನು ಸಂಪಾದಿಸಿ ಕೊಳ್ಳುವುದರಲ್ಲಿ ಅಮ್ಮನವರೇ ಜಾಗರೂಕರಾಗಿರುವರೆಂದು ಹನುಮಂತಯ್ಯನವರಿಗೆ ಅಪ್ಪಣೆ ಕೊಡಿಸಿ ಆ ಪತ್ರವನ್ನು ಅವರಿಗೆ ಹಿಂತಿರುಗಿ ಕೊಡುವಂತೆ ಆಜ್ಞಾಪಿಸಿದರು. ಹನುಮಂತಯ್ಯನವರು ಶ್ರೀಗಳವರ ಅಭಿಪ್ರಾಯವನ್ನೂ ಅವರ ಮಾಹಾತ್ಮ್ಯವನ್ನೂ ತಿಳಿದವರಾಗಿದ್ದರೂ ವಯಃಕ್ರಮದಿಂದ ಮುಂದೆ ತಮಗೆ ಸಂತಾನವುಂಟಾಗಬಹುದೆಂಬ ವಿಷಯದಲ್ಲಿ ನಂಬಿಕೆಯಿಲ್ಲದಿದ್ದುದರಿಂದ ಆ ಪತ್ರವನ್ನು ಹಿಂತಿರುಗಿ ತೆಗೆದುಕೊಳ್ಳಲು ಅಭಿಪ್ರಾಯವಿಲ್ಲದೆ ತಮಗೆ ಸಂತಾನವುಂಟಾದಲ್ಲಿ ತಮ್ಮ ಸ್ವತ್ತು ತಮ್ಮ ಸಂತತಿಗೆ ಸೇರತಕ್ಕದ್ದೆಂತಲೂ, ಹಾಗಿಲ್ಲದ ಪಕ್ಷದಲ್ಲಿ ತಮ್ಮ ಮೊದಲಿನ ಸಂಕಲ್ಪದಂತೆ ವಿನಿಯುಕ್ತವಾಗ ತಕ್ಕದ್ದೆಂತಲೂ ಒಂದು ವಕ್ಕಣೆಯನ್ನು ಮಾತ್ರ ಮೊದಲು ತಾವು ಬರೆದಿದ್ದ ಪತ್ರದಲ್ಲಿಯೇ ಸೇರಿಸಿ ಬರೆದು ಶ್ರೀಮಠದಲ್ಲಿರಬೇಕೆಂದು ಅಧಿಕಾರಿಗಳಲ್ಲಿ ತಿಳಿಸಿಕೊಂಡು ಸಂಸ್ಥಾನದಲ್ಲಿಯೇ ಅದನ್ನು ಇಡಿಸಿದರು. ಬಳಿಕ ಸ್ವಲ್ಪ ಕಾಲದಲ್ಲಿಯೇ ಶ್ರೀಗಳವರ ಅನುಗ್ರಹದಿಂದ ಆ ಹನುಮಂತಯ್ಯನವರು ಮೂರು ಜನ ಗಂಡು ಮಕ್ಕಳನ್ನೂ ಮೂರು ಜನ ಹೆಣ್ಣು ಮಕ್ಕಳನ್ನೂ ಪಡೆದು ಸುಮಾರು 80 ವರ್ಷಗಳವರೆಗೆ ಜೀವಿಸಿದ್ದು ಈಗ್ಗೆ ಸಮೀಪದಲ್ಲಿ ಕಾಲಗತಿಯನ್ನೈದಿದರೆಂದು ತಿಳಿದು ಬರುತ್ತೆ. ಇದರಂತೆ ಶ್ರೀಗಳವರಲ್ಲಿ ಪುತ್ರಾರ್ಥಿಗಳಾಗಿ ಬಂದವರ ಸಂಖ್ಯೆಯನ್ನು ನಿಷ್ಕರ್ಷಿಸಲು ಸಾಧ್ಯವಿಲ್ಲವು. ಈಗಲೂ ಈ ಮಹನೀಯರ ಅನುಗ್ರಹದಿಂದ ಸಂತತಿಯನ್ನು ಪಡೆದವರಲ್ಲಿ ಅನೇಕರು ಗುರುಪ್ರಸಾದ ಲಬ್ಧರಾದ ತಮ್ಮ ಮಕ್ಕಳಿಗೆ ವಿವಾಹವನ್ನು ಮಾಡುವುದಾಗಿಯೂ, ಉಪನಯನವನ್ನು ನಡೆಸುವುದಾಗಿಯೂ, ಕಾಣಿಕೆಯಾಗಿ ತಮ್ಮಿಂದ ಕಳುಹಿಸಲ್ಪಟ್ಟಿರುವುದನ್ನು ಸ್ವೀಕರಿಸಿ ಪ್ರಸಾದವನ್ನು ಕಳುಹಿಸುವುದರ ಮೂಲಕ ಅನುಗ್ರಹಿಸಬೇಕೆಂಬುದಾಗಿಯೂ ಪದೇ ಪದೇ ಈಗಿನ ಗುರುಗಳವರನ್ನು ಪ್ರಾರ್ಥಿಸುತ್ತಲಿರುವರು. ರೋಗಾರ್ತರಾಗಿಯೂ ಗ್ರಹಗ್ರಸ್ತರಾಗಿಯೂ ಬಂದವರಲ್ಲಿ ಅನೇಕರು ಶ್ರೀಗಳವರಿಂದ ಅನುಗ್ರಹಿಸಲ್ಪಟ್ಟು ಆರೋಗ್ಯವನ್ನು ಪಡೆದಿರುವರು. ಅಂತಹ ಜನರನ್ನು ಈಗಲೂ ದಕ್ಷಿಣ ದೇಶದಲ್ಲಿ ವಿಶೇಷವಾಗಿ ನೋಡಬಹುದು. ತಮ್ಮಲ್ಲಿಗೆ ದೀನರಾಗಿಯೂ, ಆರ್ತರಾಗಿಯೂ ಬರುತ್ತಿದ್ದ ಜನಗಳ ವಿಷಯದಲ್ಲಿ ಶ್ರೀಗಳವರು ಮಾಡುತ್ತಲಿದ್ದ ಬಾಧಾಪರಿಹಾರಕ್ರಮವನ್ನು ಒಂದು ಸಮಯದಲ್ಲಿ ಅಮ್ಮನವರ

ಪ್ರಾರ್ಥನಾರೂಪವಾಗಿ ವ್ಯಕ್ತಗೊಳಿಸಿರುವರು. ಆ ಸಂಗತಿಯನ್ನು ತಿಳಿಸುವ ಎರಡು ಪದ್ಯಗಳನ್ನು ಇಲ್ಲಿ ತೋರಿಸಿದೆ.

ಮಾತಃ ಬಾಧಿರ್ಯಮೂಕೀಭವನ ಮುಖಮಹಾರೋಗಸಂಪೀಡಿತಾಂಗಾಃ
ಭೂತಾವಿಷ್ಟಾಶ್ಚ ತತ್ತತ್ಪ್ರಶಮನಮಚಿರಾತ್ಕಾಂಕ್ಷಮಾಣಾಶ್ಚ ದೂರಾತ್ ।
ಆಗತ್ಯಾಽಶ್ವೇವ ತತ್ತತ್ಪ್ರಶಮನ ಪಟುತಾಂ ಮನ್ಯಮಾನಾ ಜನೇಽಸ್ಮಿನ್
ಯಾಚಂತೇ ಕಿಂ ಪ್ರಕುರ್ಯಾಂ ವದ ತುಹಿನಗಿರೀಶಾನಪುತ್ರೀಂದುಮೌಳೇ ॥
ಯಾಚಂತೇ ನಮ್ರಲೋಕಾ ವಿವಿಧ ಗುರುರುಜಾಕ್ರಾಂತ ದೇಹಾಃ ಪಿಶಾಚೈಃ
ಆವಿಷ್ಟಾಂಗಾಶ್ಚ ತತ್ತಜ್ಜನಿತ ಬಹುತರಕ್ಲೇಶ ಪಾಶಾಯ ಶೀಘ್ರಮ್ ।
ಕಿಂ ಕುರ್ಯಾಂ ಮಂತ್ರಯಂತ್ರಪ್ರಮುಖ ವಿಧಿಪರಿಜ್ಞಾನ ಶೂನ್ಯಶ್ಚಿಕಿತ್ಸಾಂ
ಕರ್ತುಂ ನ ತ್ವತ್ಪದಾಬ್ಜ ಸ್ಮರಣಲವಮೃತೇ ವಾಣಿ ಜಾನೇಽತ್ರ ಕಿಂಚಿತ್ ॥

ಈ ರೀತಿಯಾಗಿ ಶ್ರೀಗಳವರು ತಮ್ಮ ತಪಶ್ಶಕ್ತಿಯಿಂದ ಜನಗಳಿಗೆ ಮಾಡುತ್ತಲಿದ್ದ ಅನುಗ್ರಹವು ಲೋಕದಲ್ಲಿ ವಿಖ್ಯಾತವಾಯಿತು. ಆದ್ದರಿಂದ ಮಹಾಜ್ಞಾನಿಗಳಾದ ಇವರಲ್ಲಿ ಸಿದ್ಧಿಗಳೂ ಇದ್ದುವೆಂದು ಹೇಳುವುದರಲ್ಲಿ ಸಂದೇಹವೇನು ?

ಶ್ರೀಗಳವರು ಸ್ವತಂತ್ರರಾಗಿ ಖರಸಂವತ್ಸರದಲ್ಲಿ (1891) ದಕ್ಷಿಣದೇಶ ಯಾತ್ರೆಗೆ ಹೊರಟು ಮನ್ಮಥ ಸಂವತ್ಸರದಲ್ಲಿ (1895) ಶೃಂಗೇರಿಗೆ ಹಿಂತಿರುಗಿ ಬಂದು ಹನ್ನೆರಡು ವರ್ಷಗಳ ಕಾಲ ಅಂದರೆ ಮನ್ಮಥ ಸಂವತ್ಸರದಿಂದ ಪರಾಭವ ಸಂವತ್ಸರದವರೆಗೆ ಶೃಂಗಗಿರಿ ಕ್ಷೇತ್ರದಲ್ಲಿ ವಸತಿ ಮಾಡಿದ್ದರು. ಆ ಕಾಲದಲ್ಲಿ ವಿರಕ್ತರಾದ ಸಂನ್ಯಾಸಿಗಳಿಗೂ, ಜಿಜ್ಞಾಸುಗಳಾದ ಗೃಹಸ್ಥರಿಗೂ ಮೂರು ಸಾರಿ ಪ್ರಸ್ಥಾನತ್ರಯ ಭಾಷ್ಯಪಾಠವನ್ನು ಹೇಳಿದರು. ಲೋಕೋಪಕಾರಾರ್ಥವಾಗಿ ಕರ್ಮ, ಭಕ್ತಿ, ಉಪಾಸನೆಗಳನ್ನು ಯಥಾವಿಧಿಯಾಗಿ ತಾವು ಅನುಷ್ಠಿಸಿ ಜನಗಳಿಗೆ ಉಪದೇಶಿಸಿದರು. ಸುಮಾರು ನಾಲ್ಕೈದು ವರ್ಷಗಳ ಕಾಲವನ್ನು ವಿಚಾರದಿಂದಲೂ ಆತ್ಮಧ್ಯಾನದಿಂದಲೂ ಆನಂದದಿಂದ ಕಳೆದು ಜ್ಞಾನಮಾರ್ಗವನ್ನು ಪ್ರಚಾರ ಪಡಿಸಿದರು. ಇಂತಹ ಕಲಿಪ್ರಭಾವವಿರತಕ್ಕ ಕಾಲದಲ್ಲಿ ಕೂಡ ಅಸ್ಮದಾದಿ ದೃಷ್ಟಿ ಗೋಚರರಾಗಿ ತಮ್ಮ ಅಪೂರ್ವವಾದ ಚರ್ಯೆಯಿಂದಲೂ ಪ್ರಪಂಚಕ್ಕೆ ಸನ್ಮಾರ್ಗೋಪದೇಶವನ್ನು ಮಾಡಿದಂಥ ಈ ಮಹಾನುಭಾವರಲ್ಲಿದ್ದ ಗುಣಗಳೆಲ್ಲವನ್ನೂ ತಿಳಿದು ಹೇಳುವುದು ಪಾಮರ ಜನರಿಗೆ ಸಾಧ್ಯವೇ ? ಹಾಗಿದ್ದರೂ ಸ್ಥೂಲವಾಗಿ ಈ ಮಹನೀಯರಲ್ಲಿ ಕಂಡುಬಂದಿದ್ದ ಕೆಲವು ಗುಣಗಳನ್ನು ಮಾತ್ರ ಸಂಗ್ರಹಿಸಿ ಈ ಗ್ರಂಥದಲ್ಲಿ ಹೇಳಿದೆ.

ಈ ರೀತಿಯಲ್ಲಿ ಶ್ರೀ ಸ್ವಾಮಿಗಳವರ ಪ್ರತಿಯೊಂದು ಗುಣವೂ ಅಸಾಧಾರಣ

ವಾದುದಾಗಿಯೂ ಅಪೂರ್ವವಾದುದಾಗಿಯೂ ಆಶ್ಚರ್ಯಕರವಾಗಿಯೂ ಇದ್ದಿತು. ಇವೆಲ್ಲವೂ ಇವರ ವರ್ತಮಾನಜನ್ಮಾಭ್ಯಾಸದಿಂದಲೇ ಉಂಟಾದವುಗಳೆಂದು ಹೇಳುವುದಕ್ಕೆ ಸುತರಾಂ ಅವಕಾಶವಿಲ್ಲವು. ವಾಮದೇವಾದಿ ಮಹರ್ಷಿಗಳ ಹಾಗೆ ಜನ್ಮಾಂತರೀಯಾಭ್ಯಾಸ ದಿಂದ ಇವರಿಗೆ ಈ ಜನ್ಮದಲ್ಲಿ ಪ್ರಕಾಶ ಹೊಂದಿದ್ದಂತೆ ಹೇಳಬಹುದೇ ಹೊರತು ಬೇರೆಯಿಲ್ಲವು. ಇವರ ಅತ್ಯಂತ ಸಮೀಪದಲ್ಲಿಯೇ ವಿಶೇಷ ಕಾಲವಿದ್ದು ಎಲ್ಲಾ ಸಂದರ್ಭ ಗಳಲ್ಲಿಯೂ ಇವರ ಒಂದೊಂದು ಪ್ರವೃತ್ತಿಯನ್ನೂ ಅನುಷ್ಠಾನವನ್ನೂ ನೋಡಿ ನೋಡಿ ಅನುಭವಿಸಿದವರು ಇವರಲ್ಲಿ ಜೀವನ್ಮುಕ್ತ ಲಕ್ಷಣವು ಸಂಪೂರ್ಣವಾಗಿದ್ದಂತೆ ತಿಳಿದು ಕೊಳ್ಳುತ್ತಲಿದ್ದರಲ್ಲದೆ ಸಾಮಾನ್ಯಭಾವವನ್ನು ಹೊಂದುವುದಕ್ಕೂ, ಅತಿಪರಿಚಯದಿಂದ ಅವಜ್ಞೆಯನ್ನು ತೋರಿಸುವುದಕ್ಕೂ, ಸ್ವಾತಂತ್ರ್ಯವನ್ನು ವಹಿಸುವುದಕ್ಕೂ ಅವಕಾಶವಿರಲಿಲ್ಲ. ಆದರೆ ಶ್ರೀಗಳವರು ಯಾವ ಸಂದರ್ಭದಲ್ಲಿಯೂ ತಾವು ಜ್ಞಾನಿಗಳೆಂತಲೂ, ಅಭ್ಯಾಸಪೂರ್ತಿಯಿಂದ ಜ್ಞಾನಫಲವನ್ನು ಸಂಪೂರ್ಣವಾಗಿ ಅನುಭವಿಸುತ್ತಲಿರುವಂತೆ ತಿಳಿದು ತೃಪ್ತರಾಗಿದ್ದರೆಂತಲೂ ಇವರ ಸಂಭಾಷಣದಿಂದಲಾಗಲಿ, ಇವರು ತೋರ್ಪಡಿಸಿಕೊಳ್ಳುತ್ತಲಿದ್ದ ರೀತಿಗಳಿಂದಲಾಗಲಿ ಇವರ ಸ್ವರೂಪವು ಸಾಮಾನ್ಯವಾಗಿ ತಿಳಿದುಕೊಳ್ಳುವಂತೆ ಇರಲಿಲ್ಲವೆಂದು ಚಿರಕಾಲ ಸನ್ನಿಧಿ ವರ್ತನದ ಅನುಭವದಿಂದ ಈ ಲೇಖಕನು ನಿಸ್ಸಂಕೋಚವಾಗಿ ಹೇಳಬಲ್ಲನು.

★ ★ ★

ಅಧ್ಯಾಯ - ೯.

ಶೃಂಗಗಿರಿ ಕ್ಷೇತ್ರ ಮತ್ತು ಶ್ರೀಮಠ

ಶೃಂಗೇರಿಯು ಪುರಾಣ ಪ್ರಸಿದ್ಧವಾದ ಕ್ಷೇತ್ರವು. ಇದು ಪಶ್ಚಿಮ ಸಮುದ್ರದಿಂದ ಪೂರ್ವಕ್ಕೆ ಸುಮಾರು 50 ಮೈಲಿಗಳ ದೂರದಲ್ಲಿ ಪಶ್ಚಿಮ ಘಟ್ಟದ ಗಡಿಗೆ ಸಮೀಪದಲ್ಲಿರುವುದು. ಪರಮ ಪಾವನವಾಗಿಯೂ ಪಾನದ ವಿಷಯದಲ್ಲಿ ಜಗದ್ವಿಖ್ಯಾತವಾಗಿಯೂ ಇರುವ ತುಂಗಾನದಿಯು ಶೃಂಗೇರಿಯಿಂದ 25 ಮೈಲಿಗಳ ದೂರದಲ್ಲಿರುವ ವರಾಹಪರ್ವತದಲ್ಲಿ ಹುಟ್ಟಿ ಸಂತತವಾಗಿ ಈ ಕ್ಷೇತ್ರದಲ್ಲಿ ಪ್ರವಹಿಸಿ ಮುಂದೆ ಸುಮಾರು 60 ಮೈಲಿಗಳ ದೂರದಲ್ಲಿ ಭದ್ರಾನದಿಯೊಡನೆ ಸೇರಿ ತುಂಗಭದ್ರೆಯೆನಿಸಿ ಸಮುದ್ರಗಾಮಿನಿಯಾದ ಕೃಷ್ಣಾನದಿಯೊಂದಿಗೆ ಕಲೆಯುವುದು. ಶೃಂಗಗಿರಿ ಕ್ಷೇತ್ರವು ಪುರಾತನವಾದರೂ ಈಚೆಗೆ ಶ್ರೀ ಶಂಕರಭಗವತ್ಪಾದಾಚಾರ್ಯರವರು ಕಾಶೀವಿಶ್ವೇಶ್ವರನ ಆಜ್ಞೆಗನುಸಾರವಾಗಿ ದೂರ್ವಾಸ ಮಹರ್ಷಿಗಳ ಶಾಪದಿಂದ ಭೂಮಿಯಲ್ಲಿ ಮನುಷ್ಯಳಾಗಿ ಅವತರಿಸಿದ್ದ ಸರಸ್ವತಿಯನ್ನು ವಾದದಿಂದ ಜಯಿಸಿದ ನಂತರ ಶಾಪವಿಮುಕ್ತಿಯಾಗಿ ಸರಸ್ವತಿಯು ಸತ್ಯಲೋಕವನ್ನು ಕುರಿತು ಹೊರಡಲುದ್ಯೋಗಿಸಲು ಆಕೆಯನ್ನು ಪ್ರಾರ್ಥಿಸಿ ವರವನ್ನು ಪಡೆದು ತಮ್ಮಿಂದ ಪ್ರಾಚುರ್ಯಗೊಳಿಸಲ್ಪಟ್ಟ ಅದ್ವೈತ ಮಾರ್ಗದ ಪ್ರಚಾರಕ್ಕೋಸ್ಕರ ಶೃಂಗೇರಿಯಲ್ಲಿ ಶಾರದಾ ಪೀಠವನ್ನು ಸ್ಥಾಪಿಸಿದ ಬಳಿಕ ಮೊದಲಿಗಿಂತಲೂ ಹೆಚ್ಚಾದ ಪ್ರಸಿದ್ಧಿಯನ್ನು ಪಡೆದಿರುವಂತೆ ತಿಳಿಯಬರುವುದು. ಶ್ರೀಮದಾಚಾರ್ಯರವರು ಸಂಚಾರಕ್ರಮದಿಂದ ಈ ಕ್ಷೇತ್ರಕ್ಕೆ ಬಂದಾಗ ತುಂಗಾನದಿಗೆ ಉತ್ತರ ತೀರದಲ್ಲಿ ಪ್ರಸವವೇದನೆಯಿಂದ ಪೀಡಿತವಾದ ಒಂದು ಹೆಣ್ಣು ಕಪ್ಪೆಗೆ ಬಿಸಿಲಿನ ತಾಪವು ತಟ್ಟದಂತೆ ವಿಶಾಲವಾದ ತನ್ನ ಹೆಡೆಯಿಂದ ನೆರಳನ್ನು ಮಾಡಿ ಕಾದಿದ್ದ ಒಂದು ಸರ್ಪವನ್ನು ಕಂಡು ಸ್ವಭಾವವೈರಿಗಳಾದ ಆ ತಿರ್ಯಗ್ಜಂತುಗಳ ಸೌಹಾರ್ದಕ್ಕೆ ಆಶ್ಚರ್ಯಗೊಂಡು ಈ ಪ್ರದೇಶವು ನಿಸರ್ಗ ಶತ್ರುಗಳಿಗೂ ಪರಮ ಮೈತ್ರಿಯನ್ನುಂಟುಮಾಡತಕ್ಕದ್ದೆಂದು ನಿಶ್ಚಯಿಸಿ, ಶ್ರೀ ಶಾರದೆಯನ್ನು ಪ್ರತಿಷ್ಠಿಸಿ ದಕ್ಷಿಣಾಮ್ನಾಯ ಮಠವನ್ನು ಸ್ಥಾಪಿಸಲು ಈ ಕ್ಷೇತ್ರವು ಯೋಗ್ಯವೆಂದು ತೀರ್ಮಾನಿಸಿದಂತೆ ಒಂದು ಇತಿಹಾಸವನ್ನು ಹೇಳುವರು. ಯಾವ ಸ್ಥಳದಲ್ಲಿ ಭೇಕಿಯು ಸರ್ಪದಿಂದ ಸಂರಕ್ಷಿತವಾದಂತೆ ವದಂತಿಯಿರುವುದೋ ಆ ಸ್ಥಳದಲ್ಲಿ ಶಿಲೆಯಿಂದ ನಿರ್ಮಿತವಾದ ಒಂದು ಸಣ್ಣ ದೇವಾಲಯದಲ್ಲಿ ''ಕಪ್ಪೆ ಶಂಕರ''ನೆಂಬ ಹೆಸರಿನಿಂದ ದೇವರಿಗೆ

ಈಗಲೂ ಪೂಜೆ ನಡೆಯುತ್ತಿರುವುದು. ಆಚಾರ್ಯರವರು ಈ ಕ್ಷೇತ್ರಕ್ಕೆ ಬಂದ ಕಾಲದಲ್ಲೇ ತುಂಗಾನದಿಯು ಪೂರ್ವದಿಕ್ಕಿನಿಂದ ಸ್ವಲ್ಪ ದೂರ ಪಶ್ಚಿಮಕ್ಕೆ ಪ್ರವಹಿಸಿ ಅಲ್ಲಿಂದ ಉತ್ತರ ದಿಕ್ಕಿಗೆ ಹರಿಯುತ್ತಿದ್ದಂತೆಯೂ, ಆ ಪ್ರವಾಹವನ್ನು ಪೂರ್ವದಿಕ್ಕಿಗೆ ತಿರುಗಿಸಿ ಕೆಲವು ದೂರ ಹೋದನಂತರ ಮತ್ತೆ ಉತ್ತರಕ್ಕೆ ಪ್ರವಹಿಸುವ ಹಾಗೆ ಮಾಡಿದಂತೆಯೂ, ನದಿಯು ಮೊದಲು ಹರಿಯುತ್ತಿದ್ದ ಸ್ಥಳದಲ್ಲಿ ಒಂದು ವಿಶಾಲವಾದ ಬಂಡೆಯ ಮೇಲೆ ಶ್ರೀ ಚಕ್ರಯಂತ್ರೋದ್ಧಾರ ಮಾಡಿ ಒಂದು ದೇವಾಲಯವನ್ನೂ ಮಠವನ್ನೂ ನಿರ್ಮಿಸಿ ಶ್ರೀ ಚಕ್ರ ಯಂತ್ರದಲ್ಲಿ ಚಂದನ ಕಾಷ್ಠಮಯವಾದ ಶಾರದಾಬಿಂಬವನ್ನು ಪ್ರತಿಷ್ಠಿಸಿ ಪೂಜೆ ನಡೆಯಲು ವ್ಯವಸ್ಥೆಯನ್ನು ಮಾಡಿದಂತೆಯೂ ತಿಳಿದುಬಂದಿದೆ. ಈ ಶೃಂಗಗಿರಿಯು ವಿಭಾಂಡಕ ಮಹರ್ಷಿಗಳಿಗೆ ಆಶ್ರಮವಾಗಿದ್ದಂತೆಯೂ, ಅವರಿಂದ ಪೂಜಿಸಲ್ಪಟ್ಟ ''ಮಲಹಾನಿಕರೇಶ್ವರ''ನೆಂಬ ಹೆಸರಿನಿಂದ ವಿಖ್ಯಾತವಾಗಿರುವ ಈಶ್ವರ ಲಿಂಗವು ಚಿರಕಾಲದಿಂದಲೂ ಈ ಕ್ಷೇತ್ರದಲ್ಲಿ ನೆಲೆಗೊಂಡಿರುವಂತೆಯೂ ಪುರಾಣ ಪ್ರಸಿದ್ಧಿಯಿದೆ. ಈ ಮೂರ್ತಿಯು ಸಾಧಾರಣವಾದ ಒಂದು ಮಣ್ಣಿನ ಪರ್ವತದಲ್ಲಿ ಆವಿರ್ಭವಿಸಿರುವುದು. ಈ ಲಿಂಗವು ಜನದೃಷ್ಟಿಗೆ ಗೋಚರವಾದ ವಿಷಯದಲ್ಲಿ ''ಹಿಂದೆ ಒಂದು ಕಾಲದಲ್ಲಿ ಈ ಪರ್ವತದ ಮೇಲೆ ಹುಲ್ಲನ್ನು ಮೇಯುವುದಕ್ಕೆ ಹೋಗುತ್ತಲಿದ್ದ ಗೋವುಗಳಲ್ಲಿ ಒಂದು ಗೋವು ಚೆನ್ನಾಗಿ ಹುಲ್ಲನ್ನು ಮೇದು ಮನೆಗೆ ಬಂದ ನಂತರ ಮನೆಯವರು ಹಾಲನ್ನು ಕರೆಯಲು ಯತ್ನಿಸಿದರೆ ಒಂದು ತೊಟ್ಟು ಹಾಲನ್ನೂ ಕರೆಯುತ್ತಿರಲಿಲ್ಲ. ಇದರ ಕಾರಣವನ್ನು ತಿಳಿಯದೆ ಯೋಚಿಸುತ್ತಿದ್ದ ಆ ಗೋವಿನೊಡೆಯನು ಒಂದು ದಿನ ತನ್ನ ದನವು ಮೇವಿಗೆ ಹೊರಟ ಕೂಡಲೇ ಅದನ್ನು ಅನುಸರಿಸಿ ಹೊರಟು ದೂರದಿಂದ ಆ ಗೋವಿನ ಚರ್ಯೆಯನ್ನು ನೋಡುತ್ತಿದ್ದನು. ಗೋವು ಸಾಯಂಕಾಲದವರೆಗೂ ಹುಲ್ಲನ್ನು ಮೇದು ಹಿಂತಿರುಗಿ ಮನೆಗೆ ಬರುವಾಗ ಒಂದು ವೃಕ್ಷದ ಮೂಲದಲ್ಲಿ ಮುಂಗಾಲುಗಳನ್ನು ಮೇಲಕ್ಕೆ ಮಾಡಿ ನಿಂತು ತನ್ನ ಕೆಚ್ಚಲಿನಿಂದ ಧಾರೆಧಾರೆಯಾಗಿ ಹಾಲನ್ನು ಸುರಿಸಿ ಬಳಿಕ ಮನೆಯ ಕಡೆಗೆ ಹೊರಟಿತು. ಗೋಸ್ವಾಮಿಯು ಆ ವೃಕ್ಷಮೂಲಕ್ಕೆ ಹೋಗಿ ನೋಡುವಲ್ಲಿ ಅಲ್ಲಿ ಆವಿರ್ಭೂತವಾಗಿದ್ದ ಪರಮೇಶ್ವರ ಲಿಂಗವು ಕ್ಷೀರಧಾರೆಯಿಂದ ನೆನೆದಿತ್ತು. ಅದನ್ನು ಕಂಡು ಭಯಭಕ್ತಿಗಳೊಡನೆ ಮನೆಗೆ ಬಂದಕೂಡಲೇ ಆಗ ಆಳುತ್ತಿದ್ದ ರಾಜನಲ್ಲಿಗೆ ಹೋಗಿ ಈ ವಿಚಾರವನ್ನು ತಿಳಿಸಲು, ಆಶ್ಚರ್ಯಭರಿತನಾದ ಆ ರಾಜನು ನೋಡಿ ದೇವರಿದ್ದ ಸ್ಥಳದಲ್ಲಿ ಶಿಲಾಮಯವಾದ ಒಂದು ಆಲಯವನ್ನು ನಿರ್ಮಿಸಿ ಆರಾಧನೆ ನಡೆವಂತೆ ವ್ಯವಸ್ಥೆ ಮಾಡಿದನು'' ಎಂಬುದಾಗಿ ಒಂದು ಜನವದಂತಿ ಇರುವುದು. ಇದುವರೆಗಿನ ಅನುಭವದಿಂದ ಮಲೆನಾಡಿನ ಪ್ರಾಂತವಾದ ಶೃಂಗೇರಿಯಲ್ಲಿ ಅತಿವೃಷ್ಟಿಯಾದರೂ ಅವೃಷ್ಟಿಯಾದರೂ ಮಲಹಾನಿಕರೇಶ್ವರನಿಗೆ

ಪ್ರಾರ್ಥನೆಯನ್ನು ಮಾಡಿದರೆ ಅತಿವೃಷ್ಟಿ ನಿಲ್ಲುವುದೂ ಸುವೃಷ್ಟಿಯಾಗುವುದೂ ನಿಯತವು ಎಂದು ಕಂಡುಬಂದಿದೆ. ಅತಿವೃಷ್ಟ್ಯವೃಷ್ಟಿಗಳೆರಡೂ ಪ್ರಾಣಿಕರ್ಮಾನುಸಾರ ಉಂಟಾಗತಕ್ಕ ಈತಿಬಾಧೆಗಳಾಗಿದ್ದರೂ, ಎಲ್ಲಾ ಜನರಿಗೂ ಒಂದೇ ವಿಧವಾಗಿ ಈ ದೇವರ ಪ್ರಾರ್ಥನೆಯಿಂದ ಈತಿಬಾಧೆ ನಿವೃತ್ತವಾಗುವುದೆಂಬ ನಂಬಿಕೆಯು ರೂಢಮೂಲವಾಗಿ ಇದುವರೆಗೂ ಅನಾದರವಿಲ್ಲದೆ ಜನರು ವರ್ತಿಸುವುದರಿಂದ ಭಗವಂತನು ಭಾವನಾನುರೂಪವಾಗಿ ಅನುಗ್ರಹಿಸುತ್ತಿರುವನೆಂದು ತಿಳಿಯಬಹುದು. ಈ ಈಶ್ವರಾಲಯದಲ್ಲಿ ದೇವರ ಮುಂಭಾಗದ ಒಂದು ಎತ್ತರವಾದ ಶಿಲಾಸ್ತಂಭದಲ್ಲಿ ಒಂದು ಗಣಪತಿಯಿದೆ. ಈ ಗಣಪತಿಯು ಕೆಲವು ಕಾಲದಿಂದೀಚೆಗೆ ಆ ಸ್ತಂಭದಲ್ಲಿ ಅಭಿವ್ಯಕ್ತವಾಗಿರುವುದೆಂದು ಹೇಳುತ್ತಾರೆ. ಈ ವಿಷಯದಲ್ಲಿ ಹಿಂದಿನ ಚರಿತ್ರೆಯೊಂದು ಪ್ರಸಿದ್ಧವಾಗಿರುವುದು. ಈಗ್ಗೆ ಸುಮಾರು ಎರಡು ನೂರು ವರ್ಷಗಳ ಹಿಂದೆ ಶೃಂಗಗಿರಿಮಠದ ಗುರುಪರಂಪರೆಯಲ್ಲಿ 27ನೆಯವರಾಗಿ ವ್ಯಾಖ್ಯಾನ ಪೀಠದಲ್ಲಿ ಪಟ್ಟಭದ್ರರಾಗಿದ್ದ ಸಚ್ಚಿದಾನಂದ ಭಾರತೀಸ್ವಾಮಿಗಳು ದೇವಸ್ಥಾನಕ್ಕೆ ಹೋದ ಕಾಲದಲ್ಲಿ ಅಲ್ಲಿ ಗಣಪತಿ ಇಲ್ಲದಿದ್ದುದನ್ನು ಕಂಡು ಮುಂಭಾಗದ ಒಂದು ಸ್ತಂಭದಲ್ಲಿ ಅರಿಷಿಣದಿಂದ ಗಣಪತಿಯ ಆಕಾರವನ್ನು ತಮ್ಮ ಹಸ್ತದಿಂದ ಲೇಖಿಸಿ ಅದನ್ನು ಯಥೋಕ್ತ ವಿಧಾನದಿಂದ ಪೂಜಿಸಿ ಈಶ್ವರ ದರ್ಶನಕ್ಕೆ ಹೊರಟಂತೆಯೂ, ಅಂದಿನಿಂದ ಈಚೆಗೆ ಗಣಪತಿಯು ಎಲ್ಲಾ ಅಂಗಗಳೊಡನೆ ಕೂಡಿ ಆ ಶಿಲಾಸ್ತಂಭದಲ್ಲಿ ಮುಂದುವರಿದು ಬಂದಂತೆಯೂ ತಿಳಿದು ಬರುವುದು. ಈ ಗಣಪತಿಯ ಆಕಾರವನ್ನು ಬರೆದ ಸ್ವಾಮಿಗಳವರ ವಿಷಯವಾಗಿ ''ಸ್ತಂಭೇಹೇರಂಬದರ್ಶಕಃ'' ಎಂಬ ವಿಶೇಷಣವನ್ನು ಕೊಟ್ಟು ಮಾಡಿರುವ ಗುರುಪರಂಪರಾ ಸ್ತೋತ್ರವು ಇದುವರೆಗೂ ಶೃಂಗಗಿರಿ ಮಠದ ಗುರುಗಳಿಂದಲೂ ಇತರರಿಂದಲೂ ಪರಂಪರೆಯಾಗಿ ಆದರಿಸಲ್ಪಡುತ್ತ ಬಂದಿದೆ. ಗಣಪತಿಯು ಆವಿರ್ಭವಿಸಿರುವ ಸ್ತಂಭದ ಹಿಂಭಾಗದಲ್ಲಿ ಗಣಪತಿಯಿಂದ ಒಂದು ಅಂಗುಲದಷ್ಟನ್ನು ಬಿಟ್ಟು ಮೇಲ್ಭಾಗವನ್ನೂ, ಕೆಳಭಾಗವನ್ನೂ ತಟ್ಟಿದರೆ ಆ ಭಾಗವು ಕಠಿಣವಾಗಿಯೇ ಇದ್ದು ಕಲ್ಲಿನ ಶಬ್ದವು ಚೆನ್ನಾಗಿ ಕೇಳುವುದು. ಗಣಪತಿಯಿರತಕ್ಕಷ್ಟು ಪ್ರದೇಶದ ಹಿಂದೆ ಮಾತ್ರ ಸ್ವಭಾವವಾದ ಕಲ್ಲಿನ ಕಾಠಿನ್ಯವು ಇಲ್ಲದಂತಾಗಿ ಅಲ್ಲಿ ತಟ್ಟಿದ ಶಬ್ದವು ಟೊಳ್ಳಾದ ಮರವನ್ನು ತಟ್ಟಿದ ಶಬ್ದದಂತೆ ಕೇಳುವುದು. ಆ ಭಾಗವನ್ನು ಬೆರಳಿನಿಂದ ತಟ್ಟಿದರೂ ಒಡೆದು ಹೋಗುವುದೋ ಎಂಬಂತೆ ತೋರುವುದು. ಈ ವಿದ್ಯಮಾನದಿಂದಲೂ ಗಣಪತಿಯ ವಿಷಯವಾಗಿ ಹೇಳುವ ಹಿಂದಿನ ಕಥೆಯನ್ನು ನಂಬಲು ಅವಕಾಶವಿರುವುದು. ಶೃಂಗಗಿರಿ ಕ್ಷೇತ್ರವನ್ನು ಪ್ರಕಾಶಗೊಳಿಸಿದ ಶ್ರೀಮದಾಚಾರ್ಯರವರು ಈ ಸ್ಥಳದ ರಕ್ಷಣೆಗಾಗಿ ಪೂರ್ವದಿಕ್ಕಿನಲ್ಲಿ ಕಾಲಭೈರವನನ್ನೂ, ದಕ್ಷಿಣದಲ್ಲಿ ದುರ್ಗಾದೇವಿಯನ್ನೂ, ಪಶ್ಚಿಮದಲ್ಲಿ ಹನುಮಂತನನ್ನೂ, ಉತ್ತರದಲ್ಲಿ

ಕಾಳಿಯನ್ನೂ ಸ್ಥಾಪಿಸಿದಂತೆ ಹೇಳುತ್ತಾರೆ. ಈ ದೇವತೆಗಳಿಗೆ ಈಗಲೂ ನಿತ್ಯ ಪೂಜಾದಿಗಳು ನಡೆಸಲ್ಪಡುತ್ತಿರುವುವು.

ಸುಮಾರು 600 ವರ್ಷಗಳ ಹಿಂದೆ ಶೃಂಗಗಿರಿ ಮಠದಲ್ಲಿ ಪಟ್ಟಭದ್ರರಾಗಿ ವಿದ್ಯಾತೀರ್ಥರೆಂದು ಪ್ರಸಿದ್ಧರಾಗಿದ್ದ ಯತಿವರ್ಯರು ಯೋಗದಲ್ಲಿ ಪರಮೋತ್ಕರ್ಷವನ್ನು ಪಡೆದವರಾಗಿದ್ದರು. ಅವರಿಗೆ ಲಂಬಿಕಾಯೋಗ ಸಿದ್ಧಿಯಿದ್ದಿತು. ಲೋಕ ಪ್ರಸಿದ್ಧರಾದ ಭಾರತೀಕೃಷ್ಣ ತೀರ್ಥರೂ ವಿದ್ಯಾರಣ್ಯರೂ ಅವರ ಸಾಕ್ಷಾಚ್ಛಿಷ್ಯರು. ಆ ಮಹನೀಯರು ಲಂಬಿಕಾಯೋಗವನ್ನು ತಾಳಿ ನಿಷ್ಠೆಯಲ್ಲಿ ಕುಳ್ಳಿರುವುದಕ್ಕೆ ಮೊದಲು ತುಂಗಾನದಿಯ ದಕ್ಷಿಣ ತೀರದಲ್ಲಿ ಸಿಂಹಗಿರಿ ಎಂಬ ಪ್ರದೇಶದಲ್ಲಿ ಒಂದು ಶಿಲಾಪ್ರತಿಕೃತಿಯನ್ನು ಮಾಡಿಸಿ ಅದನ್ನು ಜನಗಳಿಗೆ ತೋರಿಸಿರುವರು. ಆ ಬಿಂಬದ ಮುಂಭಾಗದಲ್ಲಿ ಭಾರತೀಕೃಷ್ಣತೀರ್ಥ ವಿದ್ಯಾರಣ್ಯರೊಡಗೂಡಿ ವಿದ್ಯಾತೀರ್ಥರು ಸಿದ್ಧಾಸನದಲ್ಲಿ ಉತ್ತರಾಭಿಮುಖರಾಗಿರುವಂತೆಯೂ, ಪೂರ್ವಭಾಗದಲ್ಲಿ ಚತುರ್ಮುಖ ಬ್ರಹ್ಮಮೂರ್ತಿಯೂ, ದಕ್ಷಿಣ ದಿಕ್ಕಿನಲ್ಲಿ ವಿಷ್ಣುಮೂರ್ತಿಯೂ, ಪಶ್ಚಿಮಭಾಗದಲ್ಲಿ ಪಂಚಮುಖನಾದ ಈಶ್ವರನ ಮೂರ್ತಿಯೂ, ಮೇಲ್ಭಾಗದಲ್ಲಿ ಲಕ್ಷ್ಮೀನರಸಿಂಹಮೂರ್ತಿಯೂ, ಅದರ ಮೇಲೆ ಲಿಂಗಾಕಾರವೂ ಇರುವುವು. ಹನ್ನೆರಡು ವರ್ಷಗಳ ನಂತರ ತಮ್ಮ ಶರೀರವು ಲಂಬಿಕಾಯೋಗಸಿದ್ಧಿಯಿಂದ ತಾವು ತೋರಿಸಿರುವ ಪ್ರತಿಕೃತಿಯಂತೆ ಪರಿಣಮಿಸುವುದೆಂತಲೂ, ಅದುವರೆಗೆ ಯಾರೊಬ್ಬರೂ ತ್ವರೆಪಟ್ಟು ಯಾವ ರೀತಿಯಿಂದಲೂ ವಿಘ್ನವನ್ನು ಮಾಡಲಾಗದೆಂತಲೂ ಸಮೀಪವರ್ತಿಗಳಿಗೆ ತಿಳಿಸಿ, ತುಂಗಾನದಿಯ ಉತ್ತರ ತೀರದಲ್ಲಿ ಒಂದು ಭೂಗೃಹವನ್ನು ಕಲ್ಪಿಸಿ ಅದರಲ್ಲಿ ಲಂಬಿಕಾಯೋಗತತ್ಪರರಾಗಿ ಕುಳಿತುಕೊಂಡಂತೆಯೂ, ಮೂರು ವರ್ಷಗಳು ಕಳೆದ ನಂತರ ಅದುವರೆಗೆ ಗುರುಗಳ ಶರೀರವು ಯಾವ ವಿಧವಾಗಿ ಪರಿಣಮಿಸಿರಬಹುದೋ ಎಂದು ಅದನ್ನು ನೋಡುವುದರಲ್ಲಿ ತವಕಪಟ್ಟ ಕೆಲವು ಜನರು ಗುರುಗಳ ಆಜ್ಞೆಗೆ ವಿರುದ್ಧವಾಗಿ ಭೂಗೃಹವನ್ನು ಪ್ರವೇಶಿಸಿ ನೋಡಿದಂತೆಯೂ, ಆ ಕಾಲದಲ್ಲಿ ಗುರುಗಳ ಹಿಂದಿನ ಶರೀರವು ನಷ್ಟವಾಗಿ ಗುರುಗಳಿಂದ ತೋರಿಸಲ್ಪಟ್ಟಿದ್ದ ಪ್ರತಿಕೃತಿಯ ಮೇಲುಭಾಗದಲ್ಲಿದ್ದ ಲಿಂಗಾಕಾರವು ಮಾತ್ರ ಆ ಜನಗಳಿಗೆ ಗೋಚರವಾದಂತೆಯೂ, ಆ ಜನರು ಮತ್ತೆ ಆ ಭೂಗೃಹವನ್ನು ಬಂಧಿಸಿ ಹೊರಟು ಬಂದಂತೆಯೂ, ಅದೇ ದಿನ ರಾತ್ರಿ ಆಗ ಮಠದಲ್ಲಿದ್ದ ಗುರುಗಳ ಸ್ವಪ್ನದಲ್ಲಿ ವಿದ್ಯಾತೀರ್ಥ ಶ್ರೀಪಾದರವರು ''ತಮ್ಮ ಸಂಕಲ್ಪಕ್ಕೆ ವಿರುದ್ಧವಾಗಿ ನೀವುಗಳು ನಡೆದಿರುವಿರಿ. ಇದರಿಂದ ನಮ್ಮ ಸಂಕಲ್ಪವು ಈಗ ನೆರವೇರುವುದಕ್ಕೆ ಈಶ್ವರೇಚ್ಛೆ ಇಲ್ಲವೆಂಬ ಅಂಶವು ಸ್ಪಷ್ಟ ಪಟ್ಟಿತು. ಈಶ್ವರೇಚ್ಛೆಯನ್ನು ಅನ್ಯಥಾ ಮಾಡುವುದರಲ್ಲಿ ಯಾರಿಗೂ ಸಾಮರ್ಥ್ಯವಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ನಿರೀಕ್ಷಣೆಯು ಆವಶ್ಯಕವಾಗಿಲ್ಲ.

ಭೂಗೃಹವನ್ನು ಮುಚ್ಚಿಸಿ ಅದರ ಮೇಲೆ ಈಶ್ವರಲಿಂಗ ಪ್ರತಿಷ್ಠೆ ಮಾಡುವುದು'' ಎಂದು ಆಜ್ಞಾಪಿಸಿದಂತೆಯೂ, ಈ ಸಂಗತಿಯನ್ನು ತಿಳಿದು ಭಾರತೀಕೃಷ್ಣತೀರ್ಥರು ಆತುರದಿಂದ ಜನರು ನಡೆಸಿದ ಕೃತ್ಯವನ್ನು ಕುರಿತು ಬಹಳವಾಗಿ ವ್ಯಸನಗೊಂಡು ಗುರುಗಳ ಆಜ್ಞೆಯಂತೆ ಈಶ್ವರಲಿಂಗಪ್ರತಿಷ್ಠೆಯನ್ನು ಮಾಡಬೇಕೆಂದು ನಿಶ್ಚಯಿಸಿ, ಆ ಕಾಲದಲ್ಲಿ ಚಕ್ರವರ್ತಿಗಳಾಗಿಯೂ ತಮ್ಮ ಭಕ್ತರಾಗಿಯೂ ಇದ್ದ ವಿಜಯನಗರದ (ಆನೆಗೊಂದಿ) ಹರಿಹರ ಮಹಾರಾಜರಿಗೆ ತಿಳಿಸಿ ಅವರ ಮೂಲಕ ಅತ್ಯದ್ಭುತ ರೀತಿಯಿಂದ ದೇವಾಲಯವನ್ನು ನಿರ್ಮಿಸಿ, ಈಶ್ವರಲಿಂಗಪ್ರತಿಷ್ಠೆಯನ್ನು ಮಾಡಿಸಿದಂತೆಯೂ ಹೇಳುವ ವದಂತಿಯು ಶೃಂಗಪುರ ನಿವಾಸಿಗಳಾದ ಅಬಾಲವೃದ್ಧ ಜನರಲ್ಲಿ ಈಗಲೂ ಪ್ರಚಾರದಲ್ಲಿರುವುದು. ಈ ವಿದ್ಯಾಶಂಕರಾಲಯವು ಶಾಲಿವಾಹನಶಕ 1258-59ನೆಯ ಧಾತುವರ್ಷದಲ್ಲಿ ವಿಜಯನಗರದ ಅರಸುಗಳಿಂದ ಕಟ್ಟಿಸಲ್ಪಟ್ಟಂತೆಯೂ, ವಿದ್ಯಾತೀರ್ಥ ಶ್ರೀಪಾದರವರು ಶಾ|| 1255ನೆಯ ಶ್ರೀಮುಖ ಸಂವತ್ಸರದ ಕಾರ್ತಿಕ ಶುಕ್ಲ ಸಪ್ತಮಿಯಲ್ಲಿ ಲಂಬಿಕಾಯೋಗನಿರತರಾದಂತೆಯೂ ಶ್ರೀಮಠದಲ್ಲಿರುವ ಕೆಲವು ಹಳೆಯ ಕಡತಗಳಿಂದ ತಿಳಿಯಬರುವುದು. ಈ ದೇವಾಲಯದ ಆಕಾರವು ಶ್ರೀ ಚಕ್ರದ ಮೇರು ಪ್ರಸ್ತಾರದಂತೆ ಕಂಡುಬರುವುದು. ಇದಕ್ಕೆ ಉಪಯೋಗಿಸಿರುವ ಕಲ್ಲುಗಳು ತುಂಬಾ ಕಠಿಣವಾಗಿವೆ. ಇಂತಹ ಕಲ್ಲುಗಳಲ್ಲಿ ಮಾಡಿರುವ ಕೆಲಸವು ಅತಿ ವಿಚಿತ್ರವಾಗಿಯೂ ಸುಂದರವಾಗಿಯೂ ಇರುವುದು. ದೇವಸ್ಥಾನದ ಹೊರಭಾಗದಲ್ಲಿ ಸಪ್ತಲೋಕಗಳೆಂದು ಹೆಸರಿಟ್ಟು ಕೆಳಭಾಗದಿಂದ ಮೇಲಿನವರೆಗೆ ಅನೇಕ ಜೀವಜಂತುಗಳೂ ಮನುಷ್ಯರೂ ದೇವತಾಬಿಂಬಗಳೂ ಪುರಾಣಗಳಿಗೆ ಅನುಸಾರವಾಗಿ ತೋರಿಸಲ್ಪಟ್ಟಿವೆ. ಒಳಭಾಗದಲ್ಲಿ ಮುಖಮಂಟಪವು ಹನ್ನೆರಡು ಸ್ತಂಭಗಳಿಂದ ಯುಕ್ತವಾಗಿಯೂ ಉನ್ನತವಾಗಿಯೂ ನಿರ್ಮಿಸಲ್ಪಟ್ಟಿದೆ. ಈ ಮಂಟಪವನ್ನು ಪ್ರವೇಶಿಸಲು ದಕ್ಷಿಣೋತ್ತರ ಪೂರ್ವದಿಕ್ಕುಗಳಲ್ಲಿ ಮೂರು ದ್ವಾರಗಳಿರುವುವು. ಮಂಟಪದ ಸುತ್ತಲೂ ಇರುವ ಹನ್ನೆರಡು ಸ್ತಂಭಗಳು ಮೇಷಾದಿ ದ್ವಾದಶರಾಶಿಗಳಿಂದ ಗುರ್ತಿಸಲ್ಪಟ್ಟಿವೆ. ಇದರ ರಹಸ್ಯವನ್ನು ವಿಚಾರಿಸಿದರೆ ಸೂರ್ಯನು ಮೇಷರಾಶಿಯಲ್ಲಿರುವ ತಿಂಗಳಲ್ಲಿ ಸೂರ್ಯಕಿರಣಗಳು ನಿಯತವಾಗಿ ಆ ರಾಶಿಯಿಂದ ಚಿಹ್ನಿತವಾದ ಸ್ತಂಭವನ್ನು ಸ್ಪರ್ಶಿಸುವುವು. ಇದರಂತೆ ಸೂರ್ಯನು ಆಯಾ ರಾಶಿಯನ್ನು ಹೊಂದಿದಾಗ ಸೂರ್ಯಕಿರಣಗಳು ಆಯಾ ರಾಶಿಗಳಿಂದ ಅಂಕಿತವಾಗಿರುವ ಸ್ತಂಭಗಳ ಮೇಲೆ ಪ್ರಸರಿಸುವಂತೆ ಶಿಲ್ಪಿಯ ಚಾತುರ್ಯದಿಂದಲೂ ಗಣಿತ ವಿಜ್ಞಾನದಿಂದಲೂ ಕಲ್ಪಿಸಲ್ಪಟ್ಟಿರುವುದಾಗಿ ಕಂಡುಬರುವುದು, ಶ್ರೀವಿದ್ಯಾಶಂಕರ ಸ್ವಾಮಿಗಳವರ ವಿಷಯವಾಗಿ ಜನವದಂತಿ ಇರುವುದೆಂದು ಹಿಂದೆ ಪ್ರಸ್ತಾಪಿಸಿರುವುದನ್ನು ನೋಡುವಲ್ಲಿ ಅದು ಅಸಂಭಾವಿತವಾದ ವಿಷಯವೆಂತಲೂ ಅರ್ಥವಿಲ್ಲದ ಭಾಷಣವೆಂತಲೂ

ಅಸ್ಮದಾದಿಗಳಿಗೆ ತೋರುವುದರಲ್ಲಿ ಸಂಶಯವಿಲ್ಲ. ಇದಕ್ಕೆ ಕಾರಣವು ಯೋಗಶಾಸ್ತ್ರಪರಿಜ್ಞಾನವಿಲ್ಲದಿರುವಿಕೆಯೂ ಯೋಗಸಿದ್ಧರನ್ನು ನೋಡದಿರುವಿಕೆಯೂ ಅಲ್ಲದೆ ಬೇರೊಂದಲ್ಲವು. ಅದೃಷ್ಟ ಮತ್ತು ಅಶ್ರುತವಾದ ಅರ್ಥವು ಪ್ರತ್ಯಕ್ಷ ಗೋಚರವಾಗದೆ ಅಸ್ಮದಾದಿಗಳಿಗೆ ಬುದ್ಧ್ಯಾರೂಢವಾಗುವುದಿಲ್ಲವಾಗಿ ಅಂತಹ ವಿಷಯಗಳಲ್ಲಿ ನಮ್ಮ ಅಭಿಪ್ರಾಯವು ಯುಕ್ತಿಯುಕ್ತವಾದುದೆಂದು ಹೇಳಲು ಅವಕಾಶವಿಲ್ಲವು. ಮೇಲಿನ ಅದ್ಭುತ ವಿಷಯವನ್ನು ಸಮರ್ಥಿಸಲು ಬಲವತ್ತರವಾದ ಕೆಲವು ಕಾರಣಗಳುಂಟು. ಶ್ರೀ ವಿದ್ಯಾಶಂಕರಾಲಯದ ಗರ್ಭಗೃಹ ನಿರ್ಮಾಣವನ್ನು ಯೋಚಿಸಿದರೆ, ಈ ಗರ್ಭಗೃಹವು ಸಿಂಹಗಿರಿಯೆಂಬ ಸ್ಥಳದಲ್ಲಿ ಆ ಶ್ರೀಗಳವರು ಲಂಬಿಕಾಯೋಗಸ್ಥರಾಗುವುದಕ್ಕೆ ಮೊದಲು ಪ್ರದರ್ಶಿಸಿದ ಬಿಂಬದ ಆಕೃತಿಯನ್ನು ಸಂಪೂರ್ಣವಾಗಿ ಅನುಸರಿಸಿರುವುದು. ಇದರಿಂದ ಈ ದೇವಾಲಯಕ್ಕೂ ಸಿಂಹಗಿರಿಯಲ್ಲಿರುವ ಬಿಂಬಕ್ಕೂ ಯಾವುದೋ ಒಂದು ಸಂಬಂಧವಿರಬೇಕಲ್ಲವೇ? ವಿದ್ಯಾಶಂಕರಾಲಯವನ್ನು ನಿರ್ಮಿಸುವುದಕ್ಕೆ ಪೂರ್ವವೇ ಸಿಂಹಗಿರಿಯಲ್ಲಿ ಜನವದಂತಿಗೆ ವಿಷಯವಾದ ಒಂದು ಬಿಂಬವು ಇದ್ದಂತೆ ನಿಶ್ಚಯಿಸಬೇಕಾಗುವುದು. ಹಾಗೆ ನಿಶ್ಚಯಿಸಲು ಅಸಂದಿಗ್ಧವಾದ ಪ್ರಮಾಣವು ಹಸ್ತಗತವಾಗಿರುವುದು. ಅದಾವುದೆಂದರೆ : ಶ್ರೀ ವಿದ್ಯಾಶಂಕರಾಲಯ ಪ್ರತಿಷ್ಠಾ ಕಾಲದಲ್ಲಿ ಶ್ರೀ ಭಾರತೀಕೃಷ್ಣ ತೀರ್ಥ ಸ್ವಾಮಿಗಳವರು ತಮ್ಮ ಶಿಷ್ಯರಾದ ವಿಜಯ ನಗರ ಸಂಸ್ಥಾನಾಧಿಪತಿಗಳಿಂದ ಸ್ವಾಯತ್ತೀಕೃತವಾಗಿದ್ದ ಗ್ರಾಮಗಳಲ್ಲಿ 150 ವೃತ್ತಿಗಳನ್ನು ಕಲ್ಪಿಸಿ ದೇವತಾ ಪೂಜೆಗೂ ವೇದಾಧ್ಯಯನ ಸಂಪನ್ನರಾದ ಬ್ರಾಹ್ಮಣರಿಗೂ ವಿನಿಯೋಗಿಸಿರುವರು. ಆ 150 ವೃತ್ತಿಗಳಲ್ಲಿ ಒಂದು ವೃತ್ತಿಯು ಸಿಂಹಗಿರಿ ಚತುರ್ಮೂರ್ತಿ ವಿದ್ಯೇಶ್ವರನಿಗೆ ಕೊಡಲ್ಪಟ್ಟಿರುವುದಾಗಿ ತಾಮ್ರಶಾಸನದಿಂದಲೂ ಲೇಖಗಳಿಂದಲೂ ವ್ಯಕ್ತಪಡುವುದಲ್ಲದೆ ಅವುಗಳಲ್ಲಿ ಹೇಳಿರುವ ಚತುಸ್ಸೀಮಾ ಮಧ್ಯದಲ್ಲಿಯೇ ತರೀಭೂಮಿಯು ಯಾವ ವಿಧದಿಂದಲೂ ರೂಪಾಂತರವನ್ನು ಹೊಂದಿಸದೆ ಆ ದೇವರ ಪೂಜಕನ ಅಧೀನವಾಗಿಯೇ ಇರುತ್ತ ಇದುವರೆಗೆ ಆ ಜಮೀನಿನ ಉತ್ಪತ್ತಿಯಿಂದ ಸಿಂಹಗಿರಿಯಲ್ಲಿರುವ ಚತುರ್ಮೂರ್ತಿ ವಿದ್ಯೇಶ್ವರನ ಪೂಜೆಯು ನಡೆದು ಬರುತ್ತಿದೆ. ಈ ವಿದ್ಯಮಾನದಿಂದ ವಿದ್ಯಾಶಂಕರಾಲಯ ನಿರ್ಮಾಣಕ್ಕಿಂತಲೂ ಆ ದೇವರ ಪ್ರತಿಷ್ಠೆಯಾಗುವುದಕ್ಕಿಂತಲೂ ಮೊದಲು ಸಿಂಹಗಿರಿಯಲ್ಲಿರುವ ಮೂರ್ತಿಯು ಇದ್ದಿತೆಂದು ಹೇಳುವುದರಲ್ಲಿ ಇದಕ್ಕಿಂತಲೂ ಬಲಿಷ್ಠವಾದ ಪ್ರಮಾಣಾಂತರವು ಅಪೇಕ್ಷಿತವಾಗಲಾರದು. ಪುರಾಣಗಳಲ್ಲಿ ದೇವತಾ ಮೂರ್ತಿಭೇದಗಳೂ ಆ ಮೂರ್ತಿಗಳ ಸ್ವರೂಪಗಳೂ ಅನೇಕವಾಗಿ ಹೇಳಲ್ಪಟ್ಟಿವೆ. ಆದರೆ ಯಾವ ಪುರಾಣದಲ್ಲಿಯೂ ಸಿಂಹಗಿರಿ ಚತುರ್ಮೂರ್ತಿ ವಿದ್ಯೇಶ್ವರನ ಆಕೃತಿಯಂತೆ ಇರುವ ಮತ್ತೊಂದು ಮೂರ್ತಿಯ ಆಕೃತಿಯನ್ನು ಹೇಳಿರುವಂತೆ ಪ್ರಸಿದ್ಧಿಯಿಲ್ಲ. ದೇವತಾಮೂರ್ತಿ

ಗಳನ್ನು ಪ್ರತಿಷ್ಠಿಸಿ ವಿಶೇಷವಾಗಿ ಆರಾಧಿಸುವ ಸ್ವಭಾವವುಳ್ಳ ನಮ್ಮೀ ಭರತಖಂಡದೊಳಗೆ ಯಾವ ಪ್ರದೇಶದಲ್ಲಿಯೂ ಸಿಂಹಗಿರಿಯ ಮೂರ್ತಿಯನ್ನು ಹೋಲುವ ಮತ್ತೊಂದು ಮೂರ್ತಿಯು ಇದುವರೆಗೆ ದೃಷ್ಟಿಗೋಚರವಾಗಿರುವಂತೆ ತಿಳಿದುಬರುವುದಿಲ್ಲ. ಈ ಕಾರಣಗಳಿಂದ ಯೋಗಸಿದ್ಧರಿಗೆ ಸಂಕಲ್ಪಮಾತ್ರದಿಂದ ಯಾವ ಶರೀರವನ್ನಾದರೂ ಪಡೆವುದಕ್ಕೂ ಇಚ್ಛಾಮಾತ್ರದಿಂದ ಶರೀರವನ್ನು ಬಿಡುವುದಕ್ಕೂ ಸಾಮರ್ಥ್ಯವುಂಟಾಗುವುದೆಂದು ಹೇಳುವ ಯೋಗಶಾಸ್ತ್ರವನ್ನು ನಂಬಿ, ಚಿರಕಾಲದಿಂದಲೂ ಅನುಸ್ಯೂತವಾಗಿ ಬಂದಿರುವ ವದಂತಿಯಲ್ಲಿ ವಿಶ್ವಾಸವಿಡಲು ಅಭ್ಯಂತರವಿಲ್ಲವೆಂದು ವಿಚಕ್ಷಣರಾದವರಿಗೆ ವೇದ್ಯವಾಗದಿರಲಾರದು.

ಶ್ರೀ ವಿದ್ಯಾತೀರ್ಥರವರ ಶಿಷ್ಯರಾದ ವಿದ್ಯಾರಣ್ಯ ಸ್ವಾಮಿಗಳವರು ಪಾಂಡಿತ್ಯದಿಂದಲೂ ಮಾಹಾತ್ಮ್ಯದಿಂದಲೂ ವಿಚಕ್ಷಣತೆಯಿಂದಲೂ ಭರತ ಖಂಡದಲ್ಲಿ ಬಹಳ ಪ್ರಸಿದ್ಧರಾಗಿದ್ದರು. ಇವರ ವಿಷಯದಲ್ಲಿ ಆಧುನಿಕ ಪಂಡಿತರನೇಕರು ನಾನಾ ಪ್ರಕಾರವಾಗಿ ವಿಚಾರ ಮಾಡತೊಡಗಿ ಭಿನ್ನ ಭಿನ್ನಾಭಿಪ್ರಾಯಗಳೊಡನೆ ತಮ್ಮ ತಮ್ಮ ಸಿದ್ಧಾಂತಗಳನ್ನು ಪ್ರಕಟಗೊಳಿಸಿರುವರು. ಆದರೂ ಈ ಮಹನೀಯರ ವಿಷಯವಾಗಿ ನಡೆಸಿರುವ ವಿಚಾರವು ಪೂರ್ಣವಾಗಿರುವಂತೆಯೂ, ಬಲವತ್ತರವಾದ ಪ್ರಮಾಣಗಳಿಂದ ಪೋಷಿಸಲ್ಪಟ್ಟಿರುವಂತೆಯೂ ಅಭಿಪ್ರಾಯ ಪಡಲು ಅವಕಾಶವಿಲ್ಲವೆಂದು ಈ ಲೇಖಕನು ತನಗೆ ದೊರೆತಿರುವ ಕೆಲವು ಆಧಾರಗಳಿಂದ ಹೇಳಬಲ್ಲನು. ಇಂತಹ ಲೋಕಪ್ರಸಿದ್ಧರಾದ ಮಹಾಪುರುಷರ ಚರಿತ್ರವನ್ನು ಸಾಧ್ಯವಾದಷ್ಟು ಪ್ರಯತ್ನದಿಂದ ಉಪಾದೇಯವಾದ ಆಧಾರಗಳನ್ನು ಸಂಪಾದಿಸಿ ಪ್ರಕಟಗೊಳಿಸುವುದು ಅತ್ಯಾವಶ್ಯಕವು. ಈ ಕರ್ತವ್ಯವನ್ನು ಕಾಲಾಂತರದಲ್ಲಿ ನಡೆಸುವ ಸಂಕಲ್ಪದಿಂದ ಇಲ್ಲಿ ವಿರಮಿಸಿದ್ದಾಗಿದೆ. ವಿದ್ಯಾರಣ್ಯ ಸ್ವಾಮಿಗಳವರು ವಿಜಯನಗರದಲ್ಲಿ ಕರ್ಣಾಟಕ ಸಿಂಹಾಸನವನ್ನು ಸ್ಥಾಪಿಸಿ ಒಂದನೆಯ ಹರಿಹರ ಮಹಾರಾಜರನ್ನು ಆ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರನ್ನಾಗಿ ಮಾಡಿದರೆಂತಲೂ, ಆ ಸಂಸ್ಥಾನದ ಅಭ್ಯುದಯಕ್ಕೆ ವಿದ್ಯಾರಣ್ಯ ಸ್ವಾಮಿಗಳವರೇ ಕಾರಣವೆಂತಲೂ ತಿಳಿದು ಬರುವುದು. ಈ ಅರ್ಥವನ್ನು ವಿಜಯನಗರದ ಅರಸುಗಳು ಕೊಟ್ಟಿರುವ ಶಿಲಾಶಾಸನ ತಾಮ್ರಶಾಸನಗಳ ಆರಂಭದಲ್ಲಿ ಬರೆದ ಸಂಸ್ಕೃತ ಪದ್ಯಗಳಿಂದಲೂ ಶೃಂಗಗಿರಿ ಮಠದ ಗುರುಗಳ ಬಿರುದಾವಳಿಯಲ್ಲಿ "ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ"ರೆಂದು ಚಿರಕಾಲದಿಂದಲೂ ಉಪಯೋಗಿಸಲ್ಪಡುತ್ತಿರುವ ಒಂದು ವಿಶೇಷಣವು ಸರ್ವಜನಾದರಣೀಯವಾಗಿರುವುದರಿಂದಲೂ ನಿಶ್ಚಯಿಸಬಹುದಾಗಿದೆ. ಶ್ರೀ ವಿದ್ಯಾರಣ್ಯಸ್ವಾಮಿಗಳವರು ವಿಜಯ ನಗರದಲ್ಲಿ ಕರ್ಣಾಟಕ ಸಿಂಹಾಸನವನ್ನು ಸ್ಥಾಪಿಸುವುದಕ್ಕೆ ಮೊದಲು ಶೃಂಗಗಿರಿಯು ನಗರವಾಗಿದ್ದಂತೆ ತಿಳಿಯಲು

ಅವಕಾಶವಿಲ್ಲ. ಶ್ರೀ ವಿದ್ಯಾರಣ್ಯ ಸ್ವಾಮಿಗಳವರ ಪರಮಾನುಗ್ರಹಕ್ಕೆ ಭಾಜನರಾದ ವಿಜಯನಗರದ ಅರಸುಗಳು ಶಾಲಿವಾಹನ ಶಕ 1267ನೆಯ ಪಾರ್ಥಿವ ಸಂವತ್ಸರದಿಂದ ಶಾ|| 1318-19ನೆಯ ಅಕ್ಷಯ ಸಂವತ್ಸರದವರೆಗೆ ತಮ್ಮ ರಾಷ್ಟ್ರದಲ್ಲಿ 3.000 ವರಹಗಳ ಬೇರೀಜುಳ್ಳ ಗ್ರಾಮಗಳನ್ನು ತಮ್ಮ ಗುರುಗಳಾದ ಭಾರತೀಕೃಷ್ಣ ತೀರ್ಥರು ಮತ್ತು ವಿದ್ಯಾರಣ್ಯ ಸ್ವಾಮಿಗಳವರಿಗೆ ಕಾಣಿಕೆಯಾಗಿ ಸಮರ್ಪಿಸಿದಂತೆ ತಿಳಿದು ಬರುವುದು. ಸ್ವಾಯತ್ತೀಕೃತವಾದ ಆ ಗ್ರಾಮಗಳನ್ನು ಹಿಂದೆ ಪ್ರಸ್ತಾಪಿಸಿದಂತೆ 150 ವೃತ್ತಿಗಳಾಗಿ ವಿಂಗಡಿಸಿ ವಿದ್ಯಾವಂತರೂ ಕುಲೀನರೂ ಕರ್ಮಠರೂ ಆಗಿರುವ ಅನೇಕ ಬ್ರಾಹ್ಮಣ ಕುಟುಂಬಗಳನ್ನು ಬಹುದೂರ ದೇಶದಿಂದ ಬರಮಾಡಿ ಅವರಿಗೆ ಗೃಹಗಳನ್ನು ಮಾಡಿಸಿಕೊಟ್ಟು ಒಂದು ಕುಟುಂಬದ ಜೀವನ ನಿರ್ವಾಹಕ್ಕೆ 5 ವರಹಗಳ ಬೇರೀಜಿನ ಭೂಮಿಯಂತೆ ಇನಾಂತಿಯನ್ನು ಕೊಟ್ಟು ಬ್ರಾಹ್ಮಣರ ವಸತಿಯಿಂದ ಶೃಂಗಪುರಿಯನ್ನು ಕಲ್ಪಿಸಿದಂತೆ ಕಂಡುಬರುವುದು. ಶೃಂಗಪುರಾಗ್ರಹಾರ ಬ್ರಾಹ್ಮಣರು ದೂರದೇಶದಿಂದ ಬಂದು ಅಲ್ಲಿ ವಾಸ ಮಾಡಿದರೆಂಬ ಅಂಶವು ಆಯಾ ಜನರಿಗೆ ಕೊಟ್ಟಿರುವ ಇನಾಂತಿ ಪಟ್ಟೆಗಳಲ್ಲಿ ನಿರ್ದೇಶಿಸಿರುವ ನಾಮ ಗೋತ್ರ ಸೂತ್ರಗಳಿಂದಲೇ ಸ್ಪಷ್ಟ ಪಡುವುದು. ಈಗ ಶೃಂಗೇರಿಯೆಂದು ಪ್ರಸಿದ್ಧವಾದ ನಗರವಿರುವ ಪ್ರದೇಶವನ್ನು ಶೃಂಗಗಿರಿಯೆಂದು ಕರೆಯುತ್ತಿದ್ದಂತೆ ಹೇಳಬಹುದು. ಈ ಪರ್ವತವು ಪ್ರಸಿದ್ಧರಾದ ಋಷ್ಯಶೃಂಗ ಮಹರ್ಷಿಗಳ ಆಶ್ರಮವಾಗಿದ್ದುದರಿಂದ ಅವರ ಹೆಸರಿನಿಂದಲೇ ಈ ಪರ್ವತಕ್ಕೆ ಋಷ್ಯಶೃಂಗಗಿರಿ ಎಂದು ಪ್ರಸಿದ್ಧಿಯುಂಟಾಯಿತು. ಈಚೆಗೆ ಶ್ರೀ ವಿದ್ಯಾರಣ್ಯ ಸ್ವಾಮಿಗಳವರು ಈ ಋಷ್ಯಶೃಂಗಗಿರಿಯಲ್ಲಿಯೇ ಊರನ್ನು ನಿರ್ಮಿಸಿದುದರಿಂದ ಇದಕ್ಕೂ ಶೃಂಗನಗರ, ಶೃಂಗಪುರಿ, ಶೃಂಗಗಿರಿ, ಶೃಂಗೇರಿ ಎಂಬ ಹೆಸರುಗಳುಂಟಾದುವು.

ಶೃಂಗಗಿರಿ ಮಠದಲ್ಲಿ ಲೌಕಿಕ ವ್ಯವಹಾರದ ವ್ಯವಸ್ಥೆಗಳೆಲ್ಲವೂ ವಿದ್ಯಾರಣ್ಯ ಸ್ವಾಮಿಗಳವರ ಕಾಲದಲ್ಲಿ ಏರ್ಪಡಿಸಲ್ಪಟ್ಟುವೆಂದೂ, ಅವರಿಗಿಂತ ಪೂರ್ವದಲ್ಲಿದ್ದ ಗುರುಗಳಿಗೆ ಲೌಕಿಕ ಸಂಬಂಧವಿರಲಿಲ್ಲವೆಂದೂ ಧಾರಾಳವಾಗಿ ಹೇಳಬಹುದು. ಶೃಂಗನಗರ ನಿರ್ಮಾಣದಂತೆ ಮಠದ ಕಟ್ಟಡವೂ ಅವರ ಕಾಲದಲ್ಲಿ ವಿಸ್ತರಿಸಲ್ಪಟ್ಟಿತು. ಆಚಾರ್ಯ ನಿರ್ಮಿತ ಚಂದನದಾರುಮಯಶಾರದಾಮೂರ್ತಿಯ ಸ್ಥಾನದಲ್ಲಿ ಅತಿ ಸುಂದರವಾಗಿಯೂ ಹೆಚ್ಚಾದ ಸುವರ್ಣಭಾಗದಿಂದ ಮಿಳಿತವಾಗಿಯೂ ಇರುವ ಪಂಚಲೋಹಮಯ ಶಾರದಾಬಿಂಬವು ಅವರಿಂದಲೇ ಪ್ರತಿಷ್ಠಿಸಲ್ಪಟ್ಟಂತೆ ಪ್ರಸಿದ್ಧಿಯಿರುವುದು. ಈ ಮಠದ ಸ್ವಾಮಿಗಳು ಸ್ವಹಸ್ತಾಕ್ಷರಗಳಿಗೆ ಬದಲಾಗಿ ಉಪಯೋಗಿಸತಕ್ಕ ಮೋಹರು ಶ್ರೀವಿದ್ಯಾಶಂಕರ ಎಂಬ ಅಕ್ಷರಗಳಿಂದ ಅಂಕಿತವಾಗಿರುವುದು. ಸಂಸ್ಥಾನಕ್ಕೆ ಸಂಬಂಧಿಸಿದ ಪ್ರತಿಯೊಂದು ಪಾತ್ರೆಯೂ ಶ್ರೀ ವಿದ್ಯಾಶಂಕರ ಎಂಬ ಮಾತಿನಿಂದಲೇ ಅಂಕಿತಮಾಡಲ್ಪಟ್ಟಿರುವುದು. ಹಿಂದಿನ

ಗುರುಗಳು ಕೊಟ್ಟಿರುವ ಭೂದಾನ ಶಾಸನಗಳಲ್ಲಿ ಶ್ರೀ ವಿದ್ಯಾಶಂಕರ ಎಂದು ಒಪ್ಪಿತವು ಹಾಕಲ್ಪಟ್ಟಿದೆ. ವಿದ್ಯಾರಣ್ಯಸ್ವಾಮಿಗಳವರು ಸಂಸ್ಥಾನದ ಪ್ರತಿಯೊಂದು ಆಡಳಿತವನ್ನೂ, ಎಲ್ಲಾ ವ್ಯವಸ್ಥೆಗಳನ್ನೂ ತಮ್ಮ ಗುರುಗಳಾದ ವಿದ್ಯಾಶಂಕರರ ಹೆಸರಿನಿಂದಲೇ ಮಾಡಿದರೆಂದು ಅಭಿಪ್ರಾಯ ಪಡುವುದರಲ್ಲಿ ಇದಕ್ಕಿಂತಲೂ ಬೇರೊಂದು ಪ್ರಮಾಣವು ಆವಶ್ಯಕವಾಗಿರ ಲಾರದು. ಶ್ರೀ ವಿದ್ಯಾರಣ್ಯಸ್ವಾಮಿಗಳವರು ಶಾ।। ಶಕ 1253ನೆಯ ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕ ಶುದ್ಧ ಸಪ್ತಮಿಯಲ್ಲಿ ಶ್ರೀ ವಿದ್ಯಾತೀರ್ಥ ಸ್ವಾಮಿಗಳವರಿಂದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ನಿರ್ವಾಣ ಕಾಲದಲ್ಲಿ ವಿಜಯ ನಗರಕ್ಕೆ ಸಮೀಪದಲ್ಲಿರುವ ಪಂಪಾಕ್ಷೇತ್ರದಲ್ಲಿ ವಸತಿ ಮಾಡಿದ್ದು, ಶಾ।। ಶಕ 1308ನೆಯ ಅಕ್ಷಯ ಸಂವತ್ಸರದ ಜ್ಯೇಷ್ಠ ಶುಕ್ಲ ತ್ರಯೋದಶಿ ಇಂದುವಾರದಲ್ಲಿ ಶ್ರೀ ವಿರೂಪಾಕ್ಷೇಶ್ವರನ ಸನ್ನಿಧಿಯಲ್ಲಿ ವಿದೇಹ ಕೈವಲ್ಯವನ್ನು ಪಡೆದಂತೆ ತಿಳಿದು ಬಂದಿದೆ. ಇವರ ನಿರ್ವಾಣದ ಬಳಿಕ ವಿಜಯನಗರದಲ್ಲಿ ರಾಜ್ಯಭಾರ ಮಾಡುತ್ತಿದ್ದ ಬುಕ್ಕರಾಯರ ಮಕ್ಕಳು ಎರಡನೆಯ ಹರಿಹರಮಹಾರಾಜರು ತಮ್ಮ ಗುರುಭಕ್ತಿಯನ್ನೂ ಕೃತಜ್ಞತೆಯನ್ನೂ ಪ್ರದರ್ಶಿಸಲು 500 ವರಹಗಳ ಬೇರೀಜಿನ ಭೂಮಿಯನ್ನು 100 ವೃತ್ತಿಗಳಾಗಿ ಕಲ್ಪಿಸಿ 96 ವೃತ್ತಿಗಳನ್ನು ಬ್ರಾಹ್ಮಣರಿಗೂ 4 ವೃತ್ತಿಗಳನ್ನು ದೇವರುಗಳಿಗೂ ದಾನ ಮಾಡಿ ಶೃಂಗೇರಿಗೆ ದಕ್ಷಿಣಭಾಗದಲ್ಲಿ ವಿದ್ಯಾರಣ್ಯಪುರವೆಂಬ ನಾಮಧೇಯದಿಂದ ಅಗ್ರಹಾರವನ್ನು ನಿರ್ಮಿಸಿ ವೃತ್ತಿವಂತರಾದ ಬ್ರಾಹ್ಮಣರು ಅಲ್ಲಿ ವಾಸಿಸುವಂತೆ ಮಾಡಿದ್ದಾಗಿ ಆ ರಾಜರು ಕೊಟ್ಟಿರುವ ತಾಮ್ರಶಾಸನದಿಂದ ತಿಳಿದು ಬರುವುದು. ವಿಜಯನಗರದ ಅರಸುಗಳು ಶೃಂಗಗಿರಿ ಮಠಕ್ಕೆ ಇನಾಂತಿಯಾಗಿ ಗ್ರಾಮಗಳನ್ನು ಕೊಟ್ಟ ಕಾಲದಲ್ಲಿ ಎಲ್ಲಾ ಗ್ರಾಮಗಳಲ್ಲಿಯೂ ತರೀ ಸಾಗುವಳಿಯೊಂದು ಮಾತ್ರ ಮಾಡಲಪಡುತ್ತಿತ್ತು. ವೃತ್ತಿವಂತರಾದ ಬ್ರಾಹ್ಮಣರಿಗೂ ದೇವರುಗಳಿಗೂ ವೃತ್ತಿಯೊಂದಕ್ಕೆ 5 ವರಹಗಳ ಬೇರೀಜಿನ ನಿಷ್ಕರ್ಷೆಯಿಂದ ಒಂದು ವೃತ್ತಿಗೆ 50 ಖಂಡಗ ಬತ್ತವನ್ನು ಆಯಾ ಜಮೀನಿನ ಸಾಗುವಳಿದಾರನು ಕೊಡುತ್ತ ಬರಬೇಕೆಂದು ಕುಳವಿಂಗಡದಿಂದ ಎಲ್ಲಾ ಇನಾಂತಿಗಳೂ ಕೊಡಲ್ಪಟ್ಟಿದ್ದುವು. ಇದರಂತೆ ಶಾ।। ಶಕ 1267ರಿಂದ 1571ರವರೆಗೆ ಒಳ ಇನಾಂದಾರರಾದ ಬ್ರಾಹ್ಮಣರಿಗೆ ಯಾವ ತೊಂದರೆಗಳೂ ಇಲ್ಲದೆ ಅವರುಗಳ ಜೀವನವು ನಿರಾತಂಕವಾಗಿ ನಡೆದುಬಂದಿತು. ಶಾ।। 1571ನೆಯ ವರ್ಷಕ್ಕೆ ಸ್ವಲ್ಪ ಮೊದಲು ಶೃಂಗೇರಿಯೇ ಮೊದಲಾದ ಮಲೆನಾಡಿನ ಪ್ರಾಂತದಲ್ಲಿ ರೈತರು ತರೀ ಜಮೀನುಗಳಲ್ಲಿ ಅಡಕೆ ಬಾಗಾಯಿತು ಸಾಗುವಳಿಯನ್ನು ವಿಶೇಷವಾಗಿ ಮಾಡುತ್ತ ಬಂದಂತೆಯೂ, ಇನಾಂದಾರರಾದ ಬ್ರಾಹ್ಮಣರಿಗೆ ಅದರ ಫಲವನ್ನಾಗಲಿ ಹಿಂದಿನ ನಿಬಂಧನೆಯಂತೆ ಆಯಾ ವೃತ್ತಿಗೆ ಏರ್ಪಟ್ಟ ಬತ್ತವನ್ನಾಗಲಿ ಸಲ್ಲಿಸದೆ ತೊಂದರೆ ಪಡಿಸುತ್ತಿದ್ದಂತೆಯೂ, ಇದರಿಂದ ತಮ್ಮ ಜೀವನನಿರ್ವಾಹಕ್ಕೆ ಭಂಗವುಂಟಾಗಿ ವೃತ್ತಿವಂತರಾದ ಬ್ರಾಹ್ಮಣರು ಆ ಕಾಲದಲ್ಲಿ ಶೃಂಗಗಿರಿ ಮಠದಲ್ಲಿ ಪಟ್ಟಭದ್ರರಾಗಿದ್ದ ಶ್ರೀ ಸಚ್ಚಿದಾನಂದಭಾರತೀ ಸ್ವಾಮಿಗಳವರಲ್ಲಿ ತಮ್ಮ ತೊಂದರೆಗಳ ನಿವೃತ್ತಿಗಾಗಿ ಮೊರೆಯಿಟ್ಟುಕೊಂಡಂತೆಯೂ ತಿಳಿದು

ಬರುವುದು. ಇನಾಂದಾರರಾದ ಬ್ರಾಹ್ಮಣರ ಪ್ರಾರ್ಥನೆಯು ವಿಚಾರಾರ್ಹವಾದುದೆಂದು ನಿಷ್ಕರ್ಷೆಯಾದ ಮೇಲೆ ಆಗ ಕೆಳದಿ ಸಂಸ್ಥಾನದಲ್ಲಿ ರಾಜ್ಯಭಾರ ಮಾಡುತ್ತಿದ್ದ ಶಿವಪ್ಪ ನಾಯಕರಿಗೆ ಶ್ರೀಮುಖ ಪತ್ರವನ್ನು ಕಳುಹಿಸಿ ಆ ರಾಜರ ಮೂಲಕವಾಗಿ ತಮ್ಮ ಇನಾಂಗ್ರಾಮಗಳನ್ನು ಕ್ರಮವಾಗಿ ಅಳತೆ ಮಾಡಿಸಿ, ತರೀಬಾಗಾಯಿತು ಜಮೀನುಗಳಿಗೆ ಹೊಸದಾಗಿ ಬೇರೀಜನ್ನು ಠರಾಯಿಸಿದರು. ಈ ವ್ಯವಸ್ಥೆಯಿಂದ ಜಹಗೀರು ಸೀಮೆಯ ಭೂಮಿಗಳ ಬೇರೀಜು ಹನ್ನೆರಡು ಸಾವಿರ ವರಹಗಳೆಂದು ನಿಷ್ಕರ್ಷೆಯಾಯಿತು. ಆ ಸಂದರ್ಭದಲ್ಲಿ ಶ್ರೀಸ್ವಾಮಿಗಳವರು ರಾಜರ ಸಂಗಡ ಯೋಚಿಸಿ ಹಿಂದಿನ ಬ್ರಾಹ್ಮಣರ ಇನಾಂಬೇರೀಜನ್ನು 5 ವರಹದಿಂದ 15 ವರಹಗಳಿಗೆ ಹೆಚ್ಚಿಸಿ ಅದಕ್ಕೆ ಅನುಸಾರವಾಗಿ ವೃತ್ತಿಯೊಂದಕ್ಕೆ ಒಂದು ಸಾವಿರ ಮರಗಳಾದಾಯವುಳ್ಳ ಬಾಗಾಯಿತು ಜಮೀನನ್ನು ವಿಂಗಡ ಮಾಡಿ ಆ ಭೂಮಿಯು ರೈತನ ಅಧೀನವಾಗಿರುವುದನ್ನು ತಪ್ಪಿಸಿ ಅದನ್ನು ಇನಾಂದಾರರಾದ ಬ್ರಾಹ್ಮಣರ ಅಧೀನ ಮಾಡಿಸಿ ಅದರ ಬೇರೀಜು 10 ವರಹಗಳೆಂದು ನಿಷ್ಕರ್ಷೆ ಮಾಡಿದರು. ಬಾಕಿ 4 ವರಹಗಳ ಬೇರೀಜಿಗೆ ಭೂಮಿಯನ್ನು ವಿಂಗಡ ಮಾಡದೆ ಹಿಂದಿನ ನಿಬಂಧನೆಯಂತೆ ಕುಳವನ್ನು ಮಾತ್ರ ವಿಂಗಡ ಮಾಡಿಸಿ ಆಯಾ ರೈತರು ಇನಾಂದಾರರಿಗೆ 4 ವರಹಗಳ ಬೇರೀಜಿನ ಇನಾಂತಿಗಾಗಿ 40 ಖಂಡಗ ಭತ್ತವನ್ನು ಸಲ್ಲಿಸತಕ್ಕದ್ದೆಂದು ನಿಷ್ಕರ್ಷೆ ಮಾಡಿದರು. ಇದರಿಂದ ಬಾಗಾಯಿತು ಜಮೀನುಗಳ ವಿಷಯದಲ್ಲಿ ಇನಾಂದಾರರಿಗೂ ರೈತರಿಗೂ ಯಾವ ವಿಧವಾದ ಚರ್ಚೆಗಳಿಗೂ ಆಸ್ಪದವಿಲ್ಲದಂತಾಯಿತು. ತರೀ ಜಮೀನುಗಳ ಸ್ವಾಧೀನತೆಯು ರೈತನಿಗೆ ತಪ್ಪಲಿಲ್ಲವಾಗಿ ಮೊದಲಿನಂತೆ ಧಾನ್ಯವನ್ನು ಇನಾಂದಾರರಿಗೆ ಸಲ್ಲಿಸಿಕೊಂಡು ಬರಲು ಸಾಗುವಳಿದಾರರುಗಳು ಒಪ್ಪಿಕೊಂಡರು. ಈ ವ್ಯವಸ್ಥೆಯು ಕ್ರಿ.ಶ. 1651ರಲ್ಲಿ ಮಾಡಲ್ಪಟ್ಟು ಪ್ರತಿಯೊಬ್ಬ ಒಳ ಇನಾಂದಾರ್ ಬ್ರಾಹ್ಮಣನಿಗೂ ಪ್ರತ್ಯೇಕವಾಗಿ ಶ್ರೀ ಸ್ವಾಮಿಗಳವರ ಅಂಕಿತದಿಂದ ಓಲೆಯ ಪಟ್ಟೆಗಳು ಕೊಡಲ್ಪಟ್ಟುವು. ಅದು ಮೊದಲುಗೊಂಡು ಇನಾಂದಾರರಾದ ಬ್ರಾಹ್ಮಣರುಗಳು ನಿಶ್ಚಿಂತರಾಗಿ ತಮ್ಮ ಧರ್ಮದಲ್ಲಿ ನಿರತರಾಗಿದ್ದರು. ಶಾ।। ಶಕ 1308ರಿಂದ ಈಚೆಗೆ ಶೃಂಗಗಿರಿ ಮಠದಲ್ಲಿ ಪಟ್ಟಭದ್ರರಾಗಿದ್ದ ಆಯಾ ಕಾಲದ ಗುರುಗಳಿಂದ ಶಾ।। 1800ನೆಯ ವರ್ಷದವರೆಗೆ ಜಹಗೀರ್ ಗ್ರಾಮಗಳಲ್ಲಿ ಅನೇಕವಾಗಿ ಬ್ರಹ್ಮದಾಯ, ದೇವದಾಯಗಳಾದ ಇನಾಂತಿಗಳು ಕೊಡಲ್ಪಟ್ಟುವು. ಈ ರೀತಿಯಲ್ಲಿ ಧರ್ಮಕ್ಕೋಸ್ಕರ ಗುರುಗಳವರು ವಿನಿಯೋಗಿಸಿದ ಮೊತ್ತವು ಜಹಗೀರಿನ ಉತ್ಪತ್ತಿಯ ಮೂರು ಭಾಗಗಳಲ್ಲಿ ಎರಡು ಭಾಗವೆಂದು ಲೆಕ್ಕಗಳಿಂದ ನಿಶ್ಚಿತವಾಗಿದೆ. ಕ್ರಿ.ಶ. 1651ನೆಯ ಇಸವಿಯಲ್ಲಿ ಚಿಲ್ಲರೆ ಇನಾಂತಿಗಳ ಬೇರೀಜನ್ನು ಹೆಚ್ಚಿಸಿ ಇನಾಂದಾರ್ ಬ್ರಾಹ್ಮಣರಿಗೆ ಹೊಸದಾಗಿ ದಾನಶಾಸನಗಳನ್ನು ಕೊಡುವುದರಲ್ಲಿ ಇನಾಂಭೂಮಿಗಳನ್ನು ಪರಾಧೀನ ಮಾಡುವ ವಿಷಯದಲ್ಲಿ ಹೆಚ್ಚಾದ ನಿರ್ಬಂಧವನ್ನು ಏರ್ಪಡಿಸಿ, ಯಾವ ಕಾಲದಲ್ಲಿಯೂ ಯಾವ ರೀತಿಯಿಂದಲೂ ಇನಾಂತಿಗಳು ಶ್ರೋತ್ರಿಯ ಬ್ರಾಹ್ಮಣರಲ್ಲದವರ ಹಸ್ತಗತವಾಗದಂತೆ

ವ್ಯವಸ್ಥೆ ಮಾಡಲ್ಪಟ್ಟಿತು. ಹಾಗೆ ಎಷ್ಟು ನಿರ್ಬಂಧವೇರ್ಪಟ್ಟಿದ್ದರೂ ಕಾಲವೈಪರೀತ್ಯದಿಂದ ಮುಕ್ಕಾಲು ಪಾಲಿಗಿಂತಲೂ ಹೆಚ್ಚಾದ ಬ್ರಾಹ್ಮಣರ ಇನಾಂ ಜಮೀನುಗಳು ದಾತೃಗಳ ಸಂಕಲ್ಪಕ್ಕೆ ವಿರುದ್ಧವಾಗಿ ವೈದಿಕರಲ್ಲದ ಬ್ರಾಹ್ಮಣರಿಗೂ ಕೆಲವು ಸಂದರ್ಭಗಳಲ್ಲಿ ಬ್ರಾಹ್ಮಣೇತರರಿಗೂ ಅಧೀನವಾದುವಲ್ಲದೆ ದೇವದಾಯಕ್ಕೆ ಸಂಬಂಧಿಸಿದ ಇನಾಂ ಜಮೀನುಗಳು ಕೂಡ ಅನಧಿಕಾರಿಗಳ ಅಧೀನ ಮಾಡಲ್ಪಟ್ಟು ದೇವತಾ ಸೇವೆಗಳಿಗೂ ಲೋಪವುಂಟಾಗುತ್ತ ಬಂದಿತು. ಅತ್ಯಂತ ಶೋಚನೀಯವಾದ ಈ ಅವ್ಯವಸ್ಥೆಯನ್ನು ಅಸಕೃದಾವೃತ್ತಿ ಪರಾಮರ್ಶಿಸಿ ಈ ಗ್ರಂಥಕ್ಕೆ ವಿಷಯರಾದ ಶ್ರೀ ಶ್ರೀಗಳವರು ತಮ್ಮ ಹಿಂದಿನ ಗುರುಗಳು ಮಾಡಿದ ಧರ್ಮವನ್ನು ಪುನರ್ವಿಚಾರದಿಂದ ಸಾಧ್ಯವಾದ ಮಟ್ಟಿಗೂ ಕ್ರಮ ಪಡಿಸುವುದು ಆವಶ್ಯಕವೆಂದು ಯೋಚಿಸಿ, ಇದನ್ನು ನೆರವೇರಿಸಲು ತಮಗೆ ಪರಮಾಪ್ತರಾಗಿಯೂ ವಿಶೇಷವಾದ ತಮ್ಮ ಅನುಗ್ರಹಕ್ಕೆ ಭಾಜನರಾಗಿಯೂ ಕರ್ಣಾಟಕ ರಾಷ್ಟ್ರ ಪರಿಪಾಲನ ಧುರೀಣರಾಗಿಯೂ ಇದ್ದ ಚಾಮರಾಜೇಂದ್ರ ಪ್ರಭುಗಳವರಲ್ಲಿ ತಮ್ಮ ಆಶಯವನ್ನು ವ್ಯಕ್ತಗೊಳಿಸಿದರು. ಆ ಪ್ರಭುಗಳು ರಾಜ್ಯತಂತ್ರದಲ್ಲಿ ಅಸಾಧಾರಣ ಪ್ರಜ್ಞಾಶಾಲಿಗಳಾಗಿದ್ದ ತಮ್ಮ ಪ್ರಧಾನ ಮಂತ್ರಿಗಳಾದ ಶೇಷಾದ್ರಯ್ಯರಲ್ಲಿ ಆಲೋಚಿಸಿ ಅವರ ಮೂಲಕ ಶ್ರೀಗಳವರ ಅಭಿಪ್ರಾಯವನ್ನು ವಿಶದವಾಗಿ ತಿಳಿದು ಇನಾಂದಾರರಾದ ಬ್ರಾಹ್ಮಣರಿಗೂ ದೇವರಿಗೂ ಅನನುಕೂಲವಾಗದಂತೆಯೂ, ಇನಾಂತಿಗಳು ದಾತೃಸಂಕಲ್ಪಕ್ಕೆ ವಿರುದ್ಧವಾಗಿ ಪರಾಧೀನತೆಯಿಂದ ಅವ್ಯವಸ್ಥೆಗೂ ಬಾರದಂತೆಯೂ ಸ್ಥಿರವಾದ ವ್ಯವಸ್ಥೆಯನ್ನು ಆವಶ್ಯಕವಾದ ರಾಜಶಾಸನಗಳ ಮೂಲಕ ಮಾಡತಕ್ಕದ್ದೆಂದು ತೀರ್ಮಾನಿಸಿ, ಅದರಂತೆ ನಡೆಸಲು ತಮ್ಮ ಅಧಿಕಾರಿಗಳಿಗೆ ಅಪ್ಪಣೆ ಮಾಡಿದರು. ರಾಜಾಜ್ಞಾನುವರ್ತಿಗಳಾದ ಆ ಅಧಿಕಾರಿಗಳು ಕ್ರಮವಾಗಿ ಶೃಂಗೇರಿಯ ಜಹಗೀರ್ ಗ್ರಾಮಗಳ ಅಳತೆ ಮಾಡಿ ಭೂಮಿಗಳ ತಾರತಮ್ಯವನ್ನು ತತ್ಕಾಲಾನುಗುಣವಾಗಿ ಕಂಡುಹಿಡಿದು ಅವುಗಳ ಬೇರೀಜನ್ನು ನಿರ್ಣಯಿಸಿದರು. ಇನಾಂದಾರರುಗಳನ್ನೂ, ತತ್ಕಾಲದಲ್ಲಿ ಇನಾಂತಿಗಳನ್ನನುಭವಿಸುತ್ತಿದ್ದವರನ್ನೂ ಬರಮಾಡಿಕೊಂಡು ಇನಾಂತಿಗಳ ಯಾಥಾರ್ಥ್ಯವನ್ನೂ, ಅವುಗಳ ಅನುಭವದಾರರಿಗೆ ಇರತಕ್ಕ ಸಂಬಂಧ ಮೊದಲಾದ ಅಂಶಗಳನ್ನೂ ಆಯಾ ಜನರಲ್ಲಿರಬಹುದಾದ ಪ್ರಾಮಾಣಿಕ ಲೇಖಗಳಿಂದಲೂ ಸಂಸ್ಥಾನದ ಲೇಖಗಳಿಂದಲೂ ಚಿರಕಾಲಾನುಭವದಿಂದಲೂ ಕಂಡುಹಿಡಿದು ತಕ್ಕಂತೆ ತೀರ್ಮಾನವನ್ನು ಮಾಡಿದರು. ಆಗ ಪ್ರಚಾರದಲ್ಲಿದ್ದ ರಾಜಶಾಸನಗಳಿಂದ ಚಿಲ್ಲರೆ ಇನಾಂದಾರರಾದ ಬ್ರಾಹ್ಮಣರಿಗೆ ಹಿಡುವಳಿದಾರರಿಂದ ಧಾನ್ಯರೂಪವಾದ ತೀರ್ವೆಯನ್ನು ಕೊಡಿಸಲು ಅವಕಾಶವಿರಲಿಲ್ಲವು. ಧಾನ್ಯರೂಪವಾದ ತೀರ್ವೆಯನ್ನು ಸಲ್ಲಿಸಿ ಬರುವಂತೆ ವ್ಯವಸ್ಥೆಯನ್ನು ಮಾಡದಿದ್ದಲ್ಲಿ ಬ್ರಾಹ್ಮಣರ ಜೀವನಕ್ಕೆ ಭಂಗವುಂಟಾಗುವುದರಲ್ಲಿ ಸಂದೇಹವಿರಲಿಲ್ಲ. ಈ ಸಂದರ್ಭವನ್ನು ಪರ್ಯಾಲೋಚಿಸಿ ಶ್ರೀಗಳವರ ಅಭಿಪ್ರಾಯವನ್ನು ನೆರವೇರಿಸುವ ವಿಷಯದಲ್ಲಿ ಬದ್ಧಕಂಕಣರಾದ ಮೈಸೂರು ಸರ್ಕಾರದವರು ಜಹಗೀರಿನ ಗ್ರಾಮಗಳ ರೈತರಿಗೂ ಇನಾಂದಾರರಾದ ಬ್ರಾಹ್ಮಣರಿಗೂ ಯಾವ ರೀತಿಯಿಂದಲೂ ಕಷ್ಟನಷ್ಟಗಳುಂಟಾಗದ ರೀತಿಯಿಂದ ತಮ್ಮ ಕಾನೂನುಗಳಲ್ಲಿ ಕೆಲವು ಭಾಗವು ಶೃಂಗೇರಿ ಜಹಗೀರಿಗೆ ಮಾತ್ರ ಅನ್ವಯಿಸುವಂತೆ ತಿದ್ದುಪಾಡು ಮಾಡಿಸಿ, ಅದರ ಆಧಾರದಿಂದ ಬಾಗಾಯಿತು ಜಮೀನುಗಳು ಇನಾಂದಾರರ ಅಧೀನವಾಗಿಯೇ ಇದ್ದು ಅವರು ಅವುಗಳನ್ನು ಹಿಂದೆ ಸ್ವತಂತ್ರವಾಗಿ ಅನುಭವಿಸಿಕೊಂಡು ಬಂದಂತೆ ಮುಂದೆಯೂ ಅನುಭವಿಸತಕ್ಕದ್ದೆಂತಲೂ, ತರೀ ಜಮೀನುಗಳ ವಿಷಯದಲ್ಲಿ ರೈತರಿಗೆ ಹಿಡಿವಳಿಯ ಸ್ವಾತಂತ್ರ್ಯವು ಸ್ಥಿರವಾಗಿರತಕ್ಕದ್ದೆಂತಲೂ, ಹಿಡಿವಳಿಯ ಭೂಮಿಯಲ್ಲಿ ಚಿಲ್ಲರೆ ಇನಾಂದಾರನ ಇನಾಂತಿಯ ಸ್ವಾತಂತ್ರ್ಯಕ್ಕೋಸ್ಕರ ವಿಂಗಡಿಸಲ್ಪಟ್ಟ ಭೂಮಿಗೆ ಹೊಸ ನಿಬಂಧನೆಯಂತೆ ಧಾನ್ಯರೂಪವಾದ ತೀರ್ವೆಯನ್ನು ಇನಾಂದಾರನಿಗೆ ಹಿಡಿವಳಿದಾರನು ಕೊಡುತ್ತ ಬರುವ ಪರ್ಯಂತ ಅವನ ಅಧೀನತೆಯಿಂದ ತರೀ ಜಮೀನನ್ನು ತಪ್ಪಿಸಲು ಇನಾಂದಾರರಿಗೆ ಅಧಿಕಾರವಿಲ್ಲವೆಂತಲೂ, ದೇವದಾಯಗಳೆಲ್ಲವೂ ಆಯಾ ದೇವರ ಹೆಸರಿನಲ್ಲಿ ಸ್ಥಿರಪಡಿಸಲ್ಪಟ್ಟು ಶ್ರೀಗಳವರ ಮೇಲ್ವಿಚಾರಣೆಗೆ ಒಳಪಟ್ಟು ದೇವತಾಸೇವೆಗಳಿಗೆ ವಿನಿಯುಕ್ತವಾಗಬೇಕೆಂತಲೂ, ಇನ್ನು ಮುಂದೆ ಇನಾಂತಿಗಳು ಬ್ರಾಹ್ಮಣೇತರರಿಗೆ ಸುತರಾಂ ಅಧೀನವಾಗತಕ್ಕವುಗಳಲ್ಲವೆಂತಲೂ, ಈ ನಿಬಂಧನೆಗೆ ವಿರುದ್ಧವಾಗಿ ನಡೆಸಿದ ಪರಭಾರೆಗಳನ್ನು ತಿರಸ್ಕರಿಸಿ ಅಂತಹ ಇನಾಂತಿಗಳನ್ನು ಸಂಸ್ಥಾನಕ್ಕೆ ಸೇರಿಸಿಕೊಳ್ಳಬೇಕೆಂತಲೂ ತೀರ್ಮಾನ ಮಾಡಿ ಅದರಂತೆ ವಿವರವಾಗಿ ಲೆಕ್ಕಗಳನ್ನು ಏರ್ಪಡಿಸಿ ವ್ಯವಸ್ಥೆ ಮಾಡುವುದರ ಮೂಲಕ ಶ್ರೀಗಳವರ ಸಂಕಲ್ಪವನ್ನು ಮಹಾರಾಜರವರ ಸರ್ಕಾರದವರು ನೆರವೇರಿಸಿದರು. ತತ್ಕಾಲಸ್ಥಿತಿಯನ್ನು ನೋಡಲಾಗಿ ಸರ್ಕಾರದವರ ಈ ನೂತನ ವ್ಯವಸ್ಥೆಯು ಶ್ರೀಗಳವರಲ್ಲಿ ಶ್ರೀಮನ್ಮಹಾಪ್ರಭುಗಳವರಿಗೆ ಉಂಟಾಗಿದ್ದ ಭಕ್ತಿಗೌರವಗಳಿಂದಲೂ ಶ್ರೀಗಳವರ ಸದುದ್ದೇಶವನ್ನು ತಿಳಿದು ತಮ್ಮ ರಾಷ್ಟ್ರದಲ್ಲಿ ಆಸ್ತಿಕ್ಯವೂ ಧರ್ಮವೂ ಸ್ಥಿರವಾಗಿ ನಿಲ್ಲಬೇಕೆಂಬ ದೀರ್ಘಾಲೋಚನೆಯಿಂದಲೂ ಮಾಡಿದ್ದಾಗಿ ತಿಳಿಯಬೇಕಲ್ಲದೆ ಬೇರೆಯಲ್ಲವು. ಈ ರೀತಿಯಾಗಿ ಶ್ರೀಮನ್ಮಹಾರಾಜರ ಸರ್ಕಾರದವರ ಸಹಾಯದಿಂದ ಶ್ರೀಗಳವರು ತಮ್ಮ ಹಿಂದಿನ ಗುರುಗಳು ಮಾಡಿದ್ದ ಧರ್ಮವನ್ನು ಜೀರ್ಣೋದ್ಧಾರ ಮಾಡಿದ್ದರಿಂದ ಧರ್ಮಾಚರಣೆಗೆ ಮೂಲಭೂತವಾದ ಶೃಂಗಗಿರಿ ಸ್ಥಳದಲ್ಲಿಯಾದರೂ ದೀರ್ಘಕಾಲದವರೆಗೆ ಬ್ರಾಹ್ಮಣ್ಯವು ಉಳಿದು ಸನಾತನ ಧರ್ಮಾಭಿವೃದ್ಧಿಯಾಗಲು ಅವಕಾಶವಿರುವುದೆಂದು ನಂಬಬಹುದು.

ಶ್ರೀಗಳವರ ಕಾಲದಲ್ಲಿ ನಡೆದ ಈ ಏರ್ಪಾಡಿನಿಂದಲೂ, ವಿಚಕ್ಷಣತೆಯಿಂದ ಏರ್ಪಡಿಸಿದ ಸಿಬ್ಬಂದಿಗಳ ಸಹಾಯದಿಂದಲೂ, ವಿಚಾರಕ್ರಮದಿಂದಲೂ ಸಂಸ್ಥಾನದ ಆಯತಿಯು 30 ವರ್ಷಗಳ ಕಾಲದಲ್ಲಿ 60 ಸಾವಿರದಿಂದ 130 ಸಾವಿರ ರೂಪಾಯಿಗಳವರೆಗೆ ಹೆಚ್ಚಿಸಲ್ಪಟ್ಟಿತು. ಮದರಾಸಾಧಿಪತ್ಯಕ್ಕೆ ಸೇರಿದ ರಾಮನಾಡ್ ಜಮೀನ್ದಾರಿಯಲ್ಲಿ ಅಲ್ಲಿನ

ರಾಜರಿಂದ ಶ್ರೀ ಸಂಸ್ಥಾನದಲ್ಲಿ ನಡೆಯತಕ್ಕ ಧರ್ಮಗಳಿಗಾಗಿ ವರ್ಷವೊಂದಕ್ಕೆ ಎಂಟುಸಾವಿರ ರೂಪಾಯಿಗಳ ವರಮಾನವುಳ್ಳ 5 ಗ್ರಾಮಗಳು ಶ್ರೀಗಳವರು ರಾಮನಾಡಿಗೆ ದಯಮಾಡಿಸಿದ್ದ ಸಂದರ್ಭದಲ್ಲಿ ಉಪಹಾರವಾಗಿ ಕೊಡಲ್ಪಟ್ಟುವು. ಬೆಳ್ಳಿ ಬಂಗಾರ ರತ್ನಗಳಿಂದ ಮಾಡಿದ ಪದಾರ್ಥಗಳ ರೂಪದಿಂದ ಹೊಸದಾಗಿ ಒಂದು ಲಕ್ಷಕ್ಕೆ ಮೇಲ್ಪಟ್ಟ ಧನವು ಶೇಖರಿಸಲ್ಪಟ್ಟಿರುವುದು. ವರಮಾನಕ್ಕೆ ಅನುಗುಣವಾಗಿ ವ್ಯಯವೂ ಈ ಶ್ರೀಗಳವರ ಕಾಲದಲ್ಲಿ ಮೊದಲಿಗಿಂತಲೂ ದ್ವಿಗುಣವಾಗಿ ಹೆಚ್ಚಿಸಲ್ಪಟ್ಟಿತು. ಕಾಲವ್ಯತ್ಯಾಸದಿಂದಲೂ, ತೃಪ್ತಿಕರವಾಗಿ ಸಂಸ್ಥಾನದ ಕಾರ್ಯಗಳು ನಡೆದುಬರತಕ್ಕ ವರಮಾನಗಳನ್ನು ಸಕಾಲದಲ್ಲಿ ಬರಮಾಡಿಕೊಳ್ಳುವುದೇ ಮೊದಲಾದ ಆನುಕೂಲ್ಯಕ್ಕೆ ಆವಶ್ಯಕವಾದ ಸಿಬ್ಬಂದಿಗಳನ್ನು ಏರ್ಪಡಿಸುವುದರಿಂದಲೂ ತತ್ಕಾಲಾನುಸಾರವಾಗಿ ವ್ಯಯವನ್ನು ಹೆಚ್ಚಿಸಬೇಕಾಯಿತು. ಚಿರಕಾಲದಿಂದ ಸಂಸ್ಥಾನಕ್ಕೆ ಏರ್ಪಟ್ಟಿದ್ದ ಸಾಲವೆಲ್ಲವೂ ಈ ಶ್ರೀಗಳವರ ಕಾಲದಲ್ಲಿ ನಿವಾರಿತವಾದುವು. ಶ್ರೀಮಠದ ಪ್ರಾಚೀನವಾದ ಕಟ್ಟಡದಲ್ಲಿ ಎಲ್ಲಾ ಭಾಗಗಳೂ ಅನುಕೂಲವಾಗಿಯೂ ನಾಗರಿಕವಾಗಿಯೂ ನವೀಕರಿಸಲ್ಪಟ್ಟುವು. ಇದರಿಂದ ಹದಿನೈದು ಲಕ್ಷ ರೂಪಾಯಿಗಳು ವ್ಯಯವಾಗಿರುವಂತೆ ಕಂಡುಬಂದಿದೆ. ಶ್ರೀ ಶಾರದಾಂಬಾಲಯದ ಸ್ವಲ್ಪ ಭಾಗ ಮಾತ್ರ ಶಿಲಾಮಯವಾಗಿಯೂ ಅಧಿಕ ಭಾಗವೆಲ್ಲವೂ ದಾರುಮಯವಾಗಿಯೂ ಮೊದಲು ನಿರ್ಮಿತವಾಗಿತ್ತು. ಈ ಶ್ರೀಗಳವರ ಕಾಲದಲ್ಲಿ ಈ ದೇವಾಲಯವು ವಿಸ್ತಾರವಾಗಿಯೂ ಸುಂದರವಾಗಿಯೂ ನಾಗರಿಕವಾದ ಶಿಲ್ಪಕ್ರಮದಿಂದ ಪೂರ್ಣವಾಗಿ ಶಿಲಾಮಯ ಮಾಡಲ್ಪಟ್ಟಿತು. ಇದಕ್ಕೆ ನಾಲ್ಕು ಲಕ್ಷ ರೂಪಾಯಿಗಳ ವ್ಯಯವು ಮಾಡಲ್ಪಟ್ಟಿತು. ಸಂಸ್ಕೃತ ವಿದ್ಯಾಭಿವೃದ್ಧಿಗಾಗಿ ವರ್ಷವೊಂದಕ್ಕೆ 12 ಸಾವಿರ ರೂಪಾಯಿಗಳನ್ನು ವಿನಿಯೋಗಿಸುವಂತೆ ಶ್ರೀಗಳವರು ನಿಬಂಧನೆ ಮಾಡಿದ ಪ್ರಕಾರ ವಿದ್ಯಾರ್ಥಿಗಳಿಗೆ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿ ಎರಡು ಸಂಸ್ಕೃತ ಪಾಠಶಾಲೆಗಳನ್ನು ಏರ್ಪಡಿಸಿದ್ದಲ್ಲದೆ ಇತರರಿಂದ ಸ್ಥಾಪಿತವಾದ ಪಾಠಶಾಲೆಗಳಿಗೂ ಸಭೆಗಳಿಗೂ ಮಾಸಾಶನ ವರ್ಷಾಶನಗಳನ್ನು ಕೊಟ್ಟು ಪ್ರೋತ್ಸಾಹಿಸುವಂತೆಯೂ ಕೇವಲ ರಿಕ್ತರಾದ ನಾನಾ ಜಾತಿಯ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುವಂತೆಯೂ ವ್ಯವಸ್ಥೆ ಮಾಡಲ್ಪಟ್ಟಿತು. ಈ ರೀತಿಯಿಂದ ಈ ಶ್ರೀಗಳವರ ಕಾಲದಲ್ಲಿ ಶೃಂಗಗಿರಿ ಸಂಸ್ಥಾನವು ಎಲ್ಲಾ ವಿಷಯಗಳಲ್ಲಿಯೂ ಅತ್ಯುನ್ನತಸ್ಥಿತಿಗೆ ಬಂದು ಸರ್ವಜನಾದರಣೀಯವಾಗುವಂತೆ ಮಾಡಲ್ಪಟ್ಟಿರುವುದು, ಎಂಬ ಅಂಶವು ಜಗದ್ವಿಖ್ಯಾತವಾಗಿರುವುದು.

★ ★ ★

ಅಧ್ಯಾಯ - ೧೦.

ಶ್ರೀ ಸ್ವಾಮಿಗಳವರ ನಾಲ್ಕನೆಯ ಸಾರಿ ಯಾತ್ರೆ

ಶ್ರೀಗಳವರಿಗಿದ್ದ ಗುರುಭಕ್ತಿಯ ರೀತಿಯನ್ನು ಹಿಂದಿನ ಅಧ್ಯಾಯಗಳಲ್ಲಿ ಸಂಗ್ರಹವಾಗಿ ಪ್ರಸ್ತಾಪಿಸಿದೆ. ಇವರಿಗೆ ಲೋಕಗುರುಗಳಾದ ಶ್ರೀ ಶಂಕರಭಗವತ್ಪಾದಾಚಾರ್ಯರಲ್ಲಿ ಭಕ್ತಿಯು ಅಸಾಧಾರಣವಾಗಿದ್ದಿತು. ಇದು ಇವರ 23ನೆಯ ವಯಸ್ಸಿನಲ್ಲಿ ಸ್ವಲ್ಪ ಮಟ್ಟಿಗೆ ಪ್ರಕಾಶಕ್ಕೆ ಬಂದಿತು. ಅದು ಹೇಗೆಂದರೆ - ಶ್ರೀಮಠದಲ್ಲಿರುವ ಅತಿ ಪ್ರಾಚೀನವಾದ ಆಚಾರ್ಯ ಬಿಂಬಕ್ಕೆ ಸಾಮಾನ್ಯವಾಗಿ ಇತರ ದೇವತಾ ವಿಗ್ರಹಗಳ ಸಂಗಡ ಪೂಜೆ ನಡೆಯುತ್ತಿತ್ತು. ಇವರು ಆ ವಿಗ್ರಹವನ್ನು ಪ್ರತ್ಯೇಕಿಸಿ ಪ್ರತಿದಿನವೂ ಆ ಮೂರ್ತಿಗೆ ವಿಶೇಷವಾಗಿ ಪೂಜಾ ನಿವೇದನಾದಿ ಸೇವೆಯನ್ನು ತಾವು ಮಾಡುತ್ತ ಬಂದರು. ಶಾರದಾಂಬೆಯ ಆಲಯದಂತೆ ಪ್ರತ್ಯೇಕವಾಗಿ ಆಲಯವನ್ನು ನಿರ್ಮಿಸಿ, ಶ್ರೀಮದಾಚಾರ್ಯಮೂರ್ತಿ ಪ್ರತಿಷ್ಠೆಯನ್ನು ಮಾಡಿಸಿ, ನಿತ್ಯನೈಮಿತ್ತಿಕ ಪೂಜೆಯೂ ವಿಶೇಷೋತ್ಸವಗಳೂ ನಡೆವಂತೆ ಸ್ಥಿರವಾದ ವ್ಯವಸ್ಥೆಯನ್ನು ಮಾಡಬೇಕೆಂಬ ತಮ್ಮ ಆಶಯವನ್ನು ಪ್ರಕಟಗೊಳಿಸುತ್ತ ಬಂದರು. ಶ್ರೀಗಳವರು ಎರಡು ಸಾರಿ ದೇಶಸಂಚಾರಕ್ಕೆ ಹೊರಟ ಸಂದರ್ಭದಲ್ಲಿಯೂ ಆಚಾರ್ಯ ಮತಾವಲಂಬಿಗಳಾದ ಶಿಷ್ಯರುಗಳಲ್ಲಿ ಆಚಾರ್ಯ ಭಕ್ತಿಸೂಚಕವಾದ ಯಾವುದೊಂದು ವ್ಯಾಪಾರವೂ ಗೋಚರವಾಗದಿರಲು; ಇದಕ್ಕೆ ಆತಂಕಪಟ್ಟು ಗುರುಭಕ್ತಿಯ ಸ್ವರೂಪವನ್ನೂ ಅದನ್ನು ಆಚರಿಸುವ ರೀತಿಯನ್ನೂ ಅದರ ಪ್ರಯೋಜನವನ್ನೂ ಅಸಕೃದಾವೃತ್ತಿ ಪ್ರತಿಯೊಂದು ಸ್ಥಳದಲ್ಲಿಯೂ ಶಿಷ್ಯರಿಗೆ ಉಪದೇಶಿಸಿದ್ದಲ್ಲದೆ ತಮ್ಮ ಅನುಷ್ಠಾನದಿಂದಲೂ ಆಚಾರ್ಯಭಕ್ತಿಯನ್ನು ಪ್ರಪಂಚದಲ್ಲಿ ಪ್ರಚಾರ ಪಡಿಸಬೇಕೆಂಬ ಕುತೂಹಲವನ್ನು ಹೆಚ್ಚಾಗಿ ತೋರಿಸಿದರು. ಯಾತ್ರೆಯನ್ನು ಪೂರೈಸಿಕೊಂಡು ಶೃಂಗೇರಿಯನ್ನು ಸೇರಿದಕೂಡಲೇ ಹಿಂದೆ ಹೇಳಿರುವ ರೀತಿಯಿಂದ ಆಚಾರ್ಯ ಜನ್ಮೋತ್ಸವವನ್ನು ಪ್ರಬಲವಾಗಿ ನಡೆಸುತ್ತ ಬಂದರು.

ಶ್ರೀ ಶಂಕರಾಚಾರ್ಯ ಜನ್ಮಕ್ಷೇತ್ರ ವಿಮರ್ಶೆ

ಈ ರೀತಿಯಾಗಿ ಮಾಡುತ್ತ ಬಂದ ಭಕ್ತಿಯಿಂದ ಆಚಾರ್ಯಾನುಗ್ರಹವುಂಟಾಗಿ ಅವರ ಪ್ರೇರಣೆಯಿಂದಲೇ ಈ ಶ್ರೀಗಳವರಿಗೆ ಮುಂದೆ ಹೇಳುವ ಸಂಕಲ್ಪವುಂಟಾಯಿತೋ ಎಂಬಂತೆ, ಮಾಧವೀಯಶಂಕರವಿಜಯದಲ್ಲಿ ಹೇಳಿರುವ ಶ್ರೀಮದ್ಭಗವತ್ಪಾದರ ಜನ್ಮಭೂಮಿಯನ್ನು ಕಂಡುಹಿಡಿದು, ಆ ಪ್ರದೇಶವನ್ನು ಪರಿಷ್ಕರಿಸಿ, ಅಲ್ಲಿಯೇ ಒಂದು ಆಲಯವನ್ನು ನಿರ್ಮಿಸಿ,

ಆಚಾರ್ಯಮೂರ್ತಿಯನ್ನು ಪ್ರತಿಷ್ಠಿಸಿ ನಿತ್ಯಪೂಜಾದಿಗಳು ನಡೆವಂತೆಯೂ ಅಲ್ಲಿ ಜನ್ಮೋತ್ಸವವು ವಿಶೇಷವಾಗಿ ನಡೆದುಬರುವಂತೆಯೂ ವ್ಯವಸ್ಥೆ ಮಾಡಿದರೆ ಆ ಕ್ಷೇತ್ರವು ಶ್ರೀಮದಾಚಾರ್ಯ ಮತಾವಲಂಬಿಗಳಾದ ಭಕ್ತ ಜನರಿಗೆ ಪ್ರಬಲವಾದ ಯಾತ್ರಾಸ್ಥಳವಾಗಿ ಏರ್ಪಟ್ಟು, ಶಿಷ್ಯ ವರ್ಗಕ್ಕೆ ಇದರಿಂದ ಆಚಾರ್ಯ ಭಕ್ತಿಯು ಹೆಚ್ಚಿ ತನ್ಮೂಲಕ ಶಿಷ್ಯರು ಶ್ರೇಯೋಭಾಜನರಾಗಲು ಅವಕಾಶವುಂಟಾಗುವುದೆಂದೂ, ತಮ್ಮ ಈ ಸಂಕಲ್ಪವನ್ನು ಸಾಧ್ಯವಾದಷ್ಟು ಶೀಘ್ರವಾಗಿ ನೆರವೇರಿಸಬೇಕೆಂದೂ ತೋರಿತು. ಈ ಮನೋಭಾವವು ದಿನದಿನಕ್ಕೆ ಶ್ರೀಗಳವರಲ್ಲಿ ವೃದ್ಧಿ ಹೊಂದುತ್ತಲಿರಲು, ಮೈಸೂರು ಸಂಸ್ಥಾನದ ದಿವಾನರು ಸರ್ ಶೇಷಾದ್ರಯ್ಯರವರು ಇವರ ದರ್ಶನಕ್ಕೋಸ್ಕರ ಶೃಂಗೇರಿಗೆ ಬಂದರು. ಶಂಕರವಿಜಯ ಗ್ರಂಥದಲ್ಲಿ ಮಾತ್ರ ಪ್ರಸಿದ್ಧಿಯನ್ನು ಹೊಂದಿದ್ದಾಗಿಯೂ, ಜನದೃಷ್ಟಿಗೆ ಗೋಚರವಾಗದೆ ಅಪ್ರಸಿದ್ಧವಾಗಿಯೂ ಇದ್ದ ಶ್ರೀಮದಾಚಾರ್ಯರ ಜನ್ಮಭೂಮಿಯನ್ನು ಗ್ರಂಥೋಕ್ತವಾದ ಗುರುತುಗಳಿಂದ ಕಂಡುಹಿಡಿಯಲು ಕೇರಳದೇಶೀಯರಾಗಿಯೂ ಮೇಧಾವಿಗಳಾಗಿಯೂ ಇರುವ ಶೇಷಾದ್ರಯ್ಯರವರೇ ಸಮರ್ಥರೆಂದು ನಿಶ್ಚಯಿಸಿ ಅವರಲ್ಲಿ ತಮ್ಮ ಸಂಕಲ್ಪವನ್ನು ಪ್ರಕಟಗೊಳಿಸಿದರು. ಗುರುಗಳ ಅಸಾಧಾರಣವಾದ ಈ ಸಂಕಲ್ಪವನ್ನು ತಿಳಿದ ಆ ಮಂತ್ರಿವರ್ಯರು ಪರಮಾದರಭರಿತರಾಗಿ ಶ್ರೀಗಳವರ ಆಜ್ಞೆಯನ್ನು ಪರಿಪಾಲಿಸುವುದರಲ್ಲಿ ಸನ್ನದ್ಧರಾದರು. ಗುರುಪ್ರಸಾದ ಸಂಪಾದನ ತತ್ಪರರಾದ ಆ ಗೃಹಸ್ಥರು ತಮಗೆ ಹಲವು ಕಾರ್ಯಗಳಿದ್ದರೂ ಸಾಧ್ಯವಾದಷ್ಟು ಜಾಗ್ರತೆಯಿಂದ ಅವಕಾಶವನ್ನು ಪಡೆದು ಕೇರಳದೇಶವನ್ನು ಸೇರಿ, ಶಂಕರವಿಜಯದಲ್ಲಿ ಹೇಳಿರುವ ಸನ್ನಿವೇಶಗಳ ಮೇಲೆ ವಿಚಾರ ನಡೆಸಿದ್ದರಲ್ಲಿ, ಶ್ರೀ ಶಂಕರರ ಅವತಾರಭೂಮಿಯು ಅನಂತಶಯನ ಸಂಸ್ಥಾನಕ್ಕೆ ಸೇರಿದ ಕೋಟಯಂ ಡಿವಿಜನ್ ಕುನ್ನತ್ತನಾಡು ತಾಲ್ಲೂಕಿನ ಒಂದು ಭಾಗವಾಗಿರುವುದೆಂದು ನಿಷ್ಕರ್ಷೆಯಾಯಿತು. ಅನಂತಶಯನ ಸಂಸ್ಥಾನದ ಅಧಿಕಾರಿಗಳ ಸಹಾಯದಿಂದ ಆಚಾರ್ಯ ಜನ್ಮಭೂಮಿಯಾದ ಕಾಲಟಿ ಎಂಬ ಸ್ಥಳವನ್ನು ಸೇರಿ ನೋಡಲು, ಶಂಕರವಿಜಯದಲ್ಲಿ ಹೇಳಿರುವ ಪ್ರತಿಯೊಂದು ಚಿಹ್ನೆಯೂ ಮೂರ್ತಿಮತ್ತಾಗಿ ಇವರ ದೃಷ್ಟಿಗೆ ಗೋಚರವಾದುದಲ್ಲದೆ, ಆ ಸ್ಥಳದ ರಮಣೀಯತೆಯಿಂದ ಇವರಿಗುಂಟಾದ ಸಂತೋಷಕ್ಕೆ ಪಾರವಿಲ್ಲದಂತಾಗಿ ಈ ಕಾರಣದಿಂದಲೂ ಆ ಪ್ರದೇಶವೇ ಆಚಾರ್ಯ ಜನ್ಮ ಭೂಮಿಯೆಂದು ನಿಶ್ಚಿತವಾಯಿತು. ದಿವಾನರವರು ಅಲ್ಲಿಂದ ಹಿಂತಿರುಗಿ ಬಂದು ಶ್ರೀಗಳವರ ಸಂದರ್ಶನವನ್ನು ಮಾಡಿ, ಆಚಾರ್ಯ ಜನ್ಮಭೂಮಿಯ ವೃತ್ತಾಂತವನ್ನು ಸಮಗ್ರವಾಗಿ ತಿಳಿಸಿದರು. ಇಷ್ಟರಲ್ಲಿ ಕೆಲವು ವರ್ಷಗಳು ಕಳೆದುಹೋದವು. ಆಚಾರ್ಯ ಭಕ್ತಿ ಪ್ರಭಾವದಿಂದಲೇ ಶ್ರೀಗಳವರಿಗೆ ಅಂತರ್ಮುಖತ್ವವು ಹೆಚ್ಚುತ್ತ ಬಂದು ಬಹಿರ್ವ್ಯಾಪಾರಗಳಲ್ಲಿ ಮನೋವೃತ್ತಿಯು ಮಂದವಾಯಿತು. ಇದರಿಂದ ತಮ್ಮ ಹಿಂದಿನ ಸಂಕಲ್ಪದಂತೆ ಆಚಾರ್ಯ ಜನ್ಮಭೂಮಿಯ ಪರಿಷ್ಕರಣ ಕಾರ್ಯದಲ್ಲಿಯೂ ಇವರ ಯತ್ನವು ಕಡಿಮೆಯಾಯಿತು. ಈ ಸಂದರ್ಭದಲ್ಲಿ

ಇಷ್ಟು ಪ್ರಯತ್ನದಿಂದ ಕಂಡು ಹಿಡಿದ ಕಾಲಟಿ ಸ್ಥಳವು ಜನಗಳಿಗೆ ಕಾಲಕ್ರಮದಿಂದಲಾದರೂ ಪರಿಚಿತವಾಗುವಂತೆ ಮಾಡಿದಲ್ಲಿ ಕಾಲಾಂತರದಲ್ಲಿಯಾದರೂ ತಮ್ಮ ಸಂಕಲ್ಪವನ್ನು ಇತರರು ನೆರವೇರಿಸಲು ಅನುಕೂಲವಾಗಬಹುದೆಂಬ ಉದ್ದೇಶದಿಂದ, ತಮ್ಮ ಶಿಷ್ಯಕೋಟಿಗಳಲ್ಲಿ ಒಬ್ಬರಾಗಿದ್ದ ಕುಂಭಕೋಣಂ ಶ್ರೀನಿವಾಸಶಾಸ್ತ್ರಿಗಳೆಂಬವರನ್ನು ಕಾಲಟಿಗೆ ಕಳುಹಿಸಿ, ಪ್ರತಿವರ್ಷವೂ ಶ್ರೀಮದಾಚಾರ್ಯರ ಅವತಾರದಿನವಾದ ವೈಶಾಖಶುದ್ಧ ಪಂಚಮಿಯಲ್ಲಿ ಸಮೀಪವರ್ತಿಗಳಾದ ಶಿಷ್ಯರುಗಳನ್ನು ಸೇರಿಸಿಕೊಂಡು, ಆಚಾರ್ಯ ಭಗವತ್ಪಾದರವರ ಉದ್ದೇಶದಿಂದ ಪೂರ್ಣಾನದೀತೀರದಲ್ಲಿ ಶಿವಪೂಜಾನಿವೇದನಾದಿ ಸತ್ಕಾರದಿಂದಲೂ, ಬ್ರಾಹ್ಮಣ ಭೋಜನ, ಆಚಾರ್ಯ ಕಥಾ ಪ್ರವಚನ ಮೊದಲಾದ ಸತ್ಕ್ರಿಯೆಗಳಿಂದಲೂ, ಸಾಮಾನ್ಯ ರೀತಿಯಿಂದ ಜನ್ಮೋತ್ಸವ ಸಮಾರಂಭವನ್ನು ಜರುಗಿಸುತ್ತ ಬರುವಂತೆ ವ್ಯವಸ್ಥೆಯನ್ನು ಮಾಡಿದರು. ಈ ಶಾಸ್ತ್ರಿಗಳು, ಪಂಡಿತರಾಗಿಯೂ, ವಾಗ್ಮಿಗಳಾಗಿಯೂ, ಅನುಷ್ಠಾನಪರ ರಾಗಿಯೂ ಇದ್ದುದರಿಂದ ಇವರು ಗುರ್ವಾಜ್ಞೆಯಂತೆ ಕೆಲವು ಸಂವತ್ಸರಗಳವರೆಗೆ ಕಾಲಟಿಯಲ್ಲಿ ಆಚಾರ್ಯ ಜಯಂತ್ಯುತ್ಸವವನ್ನು ಸಂಗ್ರಹವಾಗಿ ನಡೆಸುತ್ತಲೂ, ಆಚಾರ್ಯ ಪ್ರಭಾವವನ್ನು ಉಪನ್ಯಾಸಗಳ ಮೂಲಕ ಜನರಿಗೆ ಉಪದೇಶಿಸುತ್ತಲೂ, ಆಚಾರ್ಯ ಭಕ್ತಿಯನ್ನು ಜನರಲ್ಲಿ ಹೆಚ್ಚಿಸುತ್ತಲೂ, ಕಾಲಟಿ ಕ್ಷೇತ್ರವನ್ನು ಕೊಂಚಮಟ್ಟಿಗೆ ಪ್ರಸಿದ್ಧಿಗೆ ತಂದರು. ಈ ರೀತಿಯಿಂದ ನಡೆಸಿಕೊಂಡು ಬಂದ ಜಂಯತ್ಯುತ್ಸವದ ಕಾಲದಲ್ಲಿ ಆ ಸ್ಥಳಕ್ಕೆ ಬಂದು ಸೇರುತ್ತಲಿದ್ದ ಶಿಷ್ಯರನೇಕರಿಗೆ ಆ ಪ್ರದೇಶವನ್ನು ಸ್ವಾಧೀನ ಮಾಡಿಕೊಂಡು ಅಲ್ಲಿ ಶ್ರೀಮದಾಚಾರ್ಯಾಲಯ ವನ್ನು ನಿರ್ಮಿಸಿ ಜಯಂತ್ಯುತ್ಸವವನ್ನು ವಿಶೇಷವಾಗಿ ನಡೆಸಬೇಕೆಂಬ ಕುತೂಹಲವು ಹೆಚ್ಚುತ್ತ ಬಂದಿತು. ಆದರೆ ಆ ಮಹಾಕಾರ್ಯದ ನಿರ್ವಾಹಕ್ಕೋಸ್ಕರವೇ ಈ ಭೂಮಿಯಲ್ಲಿ ಅವತರಿಸಿ ಆಚಾರ್ಯ ಪೀಠವನ್ನಲಂಕರಿಸಿ ಆಚಾರ್ಯ ಭಗವತ್ಪಾದರಂತೆ ಸಮಸ್ತ ಪ್ರಾಣಿಗಳ ಪ್ರೀತಿ ಗೌರವಗಳಿಗೆ ಆಕರಪ್ರಾಯರಾಗಿರುವ ಶೃಂಗೇರಿಯ ಶ್ರೀಗಳವರಿಂದಲೇ ಕಾಲಟಿ ಕ್ಷೇತ್ರ ಪರಿಷ್ಕರಣೆ ಕಾರ್ಯವು ಜರುಗಬೇಕೆಂದು ಈಶ್ವರ ನಿಯಮವಿದ್ದುದರಿಂದ ಈ ವಿಷಯದಲ್ಲಿ ಇತರ ಜನರು ಮಾಡಿದ ಪ್ರಯತ್ನಗಳು ಯಾವುವೂ ಫಲಕಾರಿಗಳಾಗಲಿಲ್ಲ. ಕಾಲಟಿ ಕ್ಷೇತ್ರ ಪರಿಷ್ಕಾರದಲ್ಲಿ ಶ್ರೀಗಳವರಿಗುಂಟಾದ ಸಂಕಲ್ಪಕ್ಕೆ ಹನ್ನೊಂದು ವರ್ಷಗಳ ಕಾಲ ಕಳೆಯಿತು. ಅಂಜನಾನಂದನನು ಅಸಾಧಾರಣವಾದ ಯತ್ನದಿಂದ ರಾಕ್ಷಸಮಾಯಾ ಪ್ರಚ್ಛಾದಿತೆಯಾಗಿದ್ದ ಸೀತಾದೇವಿಯನ್ನು ಕಂಡು ಶ್ರೀರಾಮಚಂದ್ರದೇವರಲ್ಲಿ ವರದಿಯನ್ನು ಮಾಡಿದಂತೆ ಮತಾಂತರ ಪ್ರವಿಷ್ಟರೇ ಮೊದಲಾದ ಜನಗಳಿಂದ ಆಕ್ರಮಿಸಲ್ಪಟ್ಟು ನಾಮಾವಶಿಷ್ಟವಾಗಿದ್ದ ಶ್ರೀಮದಾಚಾರ್ಯ ಜನ್ಮಭೂಮಿಯನ್ನು ಕಂಡು ಶ್ರೀಗಳವರಲ್ಲಿ ವರದಿಯನ್ನು ಮಾಡಿದ ಶೇಷಾದ್ರಯ್ಯರು ಕೀರ್ತಿಶೇಷರಾದರು. ಗುರ್ವಾಜ್ಞಾವಶರಾಗಿ ಕಾಲಟಿ ಕ್ಷೇತ್ರದಲ್ಲಿ ಕೆಲವು ಕಾಲ ಜಯಂತ್ಯುತ್ಸವ

ವನ್ನು ನೆರವೇರಿಸಿ, ಶಿಷ್ಯಕೋಟಿಗಳಿಗೆ ಆಚಾರ್ಯ ಭಕ್ತಿಗೌರವಗಳನ್ನು ವೃದ್ಧಿ ಹೊಂದಿಸುತ್ತಿದ್ದ ಶ್ರೀನಿವಾಸಶಾಸ್ತ್ರಿಗಳೂ ಕಾಲಗತಿಯನ್ನೈದಿದರು. ಈ ಸಮಯದಲ್ಲಿ

ಮತಿರುತ್ಪದ್ಯತೇ ತಾದೃಗ್ವ್ಯವಸಾಯೋಪಿ ತಾದೃಶಃ ।
ಸಹಾಯಾಸ್ತಾದೃಶಾ ಏವ ಯಾದೃಶೀ ಭವಿತವ್ಯತಾ ॥

ಎಂಬಂತೆ, ಪ್ರಾಣಿಗಳ ಸುಕೃತ ಪರಿಪಾಕಕಾಲವು ಒದಗಿಬಂದುದರಿಂದ ಅಂತರ್ಮುಖರಾಗಿ ಕೇವಲ ಉದಾಸೀನಭಾವದಿಂದ ನಿರ್ಲಿಪ್ತರಾಗಿದ್ದ ಶ್ರೀಗಳವರ ಚಿತ್ತವನ್ನು ಪ್ರಬಲವಾದ ಪ್ರಾರಬ್ಧಕರ್ಮದಿಂದ ಪ್ರೇರಿತವಾದ ಕಾಲಟಿ ಕ್ಷೇತ್ರ ಪರಿಷ್ಕರಣ ವೃತ್ತಿಯು ಮತ್ತೆ ಅವಲಂಬಿಸಿತು. ಕೆಲವುಕಾಲ ಅನಂತಶಯನ ಸಂಸ್ಥಾನದಲ್ಲಿ ಉತ್ತಮ ನ್ಯಾಯಾಧೀಶ ಪದವಿಯಲ್ಲಿದ್ದು ಅಲ್ಲಿಯ ರಾಜರ ಮತ್ತು ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದ ರಾಮಚಂದ್ರಯ್ಯರು ಮೈಸೂರು ಸಂಸ್ಥಾನದಲ್ಲಿ ಉತ್ತಮ ಪ್ರಾಡ್ವಿವಾಕ (ಜಡ್ಜಿ) ಸ್ಥಾನವನ್ನು ವಹಿಸಿದ್ದರು. ಇವರಿಗೆ ಮನ್ಮಥ ವರ್ಷದಲ್ಲಿ (1895ನೇ ಇಸವಿ) ಶ್ರೀಗಳವರ ಸಂದರ್ಶನ ಲಾಭವಾಗಲು, ಅದು ಮೊದಲುಗೊಂಡು ಶ್ರೀಗಳವರಲ್ಲಿ ದೃಢಭಕ್ತಿಯುಂಟಾಗಿ ಅವರಿಂದ ಮಂತ್ರೋಪದೇಶವನ್ನು ಪಡೆದು, ಅವರ ಮುಖ್ಯ ಶಿಷ್ಯರಲ್ಲೊಬ್ಬರೆಂದು ಗಣನೀಯ ರಾಗಿದ್ದರು. ಇವರು ಶ್ರೀಗಳವರ ಸಂದರ್ಶನಕ್ಕೂ, ಅವರ ಹಿತೋಪದೇಶವನ್ನು ಪಡೆವುದಕ್ಕೂ ತಮ್ಮ ಅವಕಾಶಕಾಲದಲ್ಲಿ ಆಗಾಗ್ಗೆ ಶೃಂಗೇರಿಗೆ ಬಂದು ಗುರ್ವಾಜ್ಞಾವಶರಾಗಿರುತ್ತಿದ್ದರು. ಇದೇ ಸಮಯದಲ್ಲಿ ಚಿರಕಾಲದಿಂದ ಶ್ರೀಗಳವರ ಪ್ರಸಾದಕ್ಕೆ ಭಾಜನರಾಗಿಯೂ, ಪ್ರಸಿದ್ಧರಾಗಿಯೂ ಇರುವ ವಿ.ಪಿ. ಮಾಧವರಾಯರು ಮೈಸೂರು ರಾಷ್ಟ್ರದ ರಾಜಕೀಯಾಲೋಚನ ಸಭೆಯಲ್ಲಿ ಸದಸ್ಯರಾಗಿದ್ದು ಅನಂತ ಶಯನದ ಮಹಾರಾಜರಿಂದ ಆಹೂತರಾಗಿ ಅಲ್ಲಿ ಅಮಾತ್ಯ ಪದವಿಯನ್ನು ವಹಿಸಿದ್ದರು. ಸೀತಾದೇವಿಯ ಅನ್ವೇಷಣಕ್ಕೂ ತತ್ಪ್ರಾಪ್ತಿಗೂ ಚಿಂತಿಸುತ್ತಲಿದ್ದ ರಾಮದೇವರಿಗೆ ಭಕ್ತಶ್ರೇಷ್ಠರಾದ ಆಂಜನೇಯ ಸುಗ್ರೀವರು ದೊರೆತುದರಿಂದ ಉತ್ಸಾಹವುಂಟಾದಂತೆ ಶ್ರೀಗಳವರಿಗೆ ಈ ಶಿಷ್ಯರಿಬ್ಬರಿಂದ ಸಂತೋಷವೂ ಉತ್ಸಾಹವೂ ಉಂಟಾಯಿತೆಂದು ಹೇಳುವುದೇನೂ ಅತಿಶಯೋಕ್ತಿಯಾಗಲಾರದು.

ಕ್ರಿ.ಶ. 1905ನೇ ಇಸವಿಯಲ್ಲಿ ದಿವಾನ್ ಬಹದ್ದೂರ್ ರಾಮಚಂದ್ರಯ್ಯರು ಶ್ರೀಗಳವರ ಆಜ್ಞೆಯಿಂದ ಸಂಸ್ಥಾನಕಾರ್ಯ ನಿರ್ವಾಹಕನಾದ ಈ ಲೇಖಕನೊಡನೆ ಅನಂತಶಯನಕ್ಕೆ ಪ್ರಯಾಣ ಮಾಡಿ, ಆ ಮಹಾರಾಜರಲ್ಲಿಯೂ ಅವರ ಪ್ರಧಾನ ಮಂತ್ರಿಗಳಾದ ವಿ.ಪಿ. ಮಾಧವರಾಯರಲ್ಲಿಯೂ ಕಾಲಟಿ ಪರಿಷ್ಕರಣಾರ್ಥವಾದ ಶ್ರೀಗಳವರ ಚಿರಕಾಲದ ಸಂಕಲ್ಪವನ್ನು ಸೂಚಿಸಿದರು. ಆ ರಾಷ್ಟ್ರದ ಅಧಿಕಾರಿಗಳ ಸಹಾಯದಿಂದ

ಕಾಲಟಿಯನ್ನು ಸೇರಿ, ಅಲ್ಲಿಯ ತತ್ಕಾಲಸ್ಥಿತಿಯನ್ನು ನೋಡುವಲ್ಲಿ, ಪೂರ್ಣಾನದೀತೀರದ ಉತ್ತರ ಭಾಗದಲ್ಲಿ ಶ್ರೀಮದಾಚಾರ್ಯರು ತಮ್ಮ ಮಾತೃವಿಗೆ ಸಂಸ್ಕಾರ ಮಾಡಿದ ಸ್ಥಳವೆಂದು ಒಂದು ಪ್ರದೇಶವು ಗುರ್ತಿಸಲ್ಪಟ್ಟು ಅಬಾಲವೃದ್ಧರು ಎಲ್ಲಾ ಜನರೂ ಆ ಸ್ಥಳವು ಅತ್ಯಂತ ಪವಿತ್ರವೆಂಬ ಭಾವನೆಯಿಂದ ಅಲ್ಲಿಯ ಮೃತ್ತಿಕೆಯನ್ನು ರಕ್ಷಾಕರವಾಗಿ ಉಪಯೋಗಿಸುತ್ತಲಿರು ವಂತೆಯೂ, ಮಾತೃಸಂಸ್ಕಾರಕ್ಕೆ ಭಗವತ್ಪಾದರವರು ಕಾಲಟಿಗೆ ಬಂದ ಸಮಯದಲ್ಲಿ ಅವರು ಸ್ನಾನ ಮಾಡಿದ ಸ್ಥಳವೆಂಬ ಪ್ರಸಿದ್ಧಿಯನ್ನು ಆಧಾರವಾಗಿಟ್ಟುಕೊಂಡು ಅಮಾವಾಸ್ಯಾ ಸಂಕ್ರಮಣ ಪುಣ್ಯಕಾಲಗಳಲ್ಲಿ ಸಮೀಪವರ್ತಿಗಳಾದ ಅನೇಕರು ಪೂರ್ಣಾನದಿಯ ಒಂದು ಗೊತ್ತಾದ ಸ್ಥಳದಲ್ಲಿ ಇಳಿದು ಸ್ನಾನ ಮಾಡುವ ವಾಡಿಕೆ ಇರುವಂತೆಯೂ ತಿಳಿದುಬಂದಿತು. ಈ ಸ್ಥಳಕ್ಕೆ ಸಮೀಪದಲ್ಲಿ ಕೃಷ್ಣ ದೇವಸ್ಥಾನವೂ, ನಂಬೂದಿರೀ ಬ್ರಾಹ್ಮಣ ಸಂನ್ಯಾಸಿಗಳ ಒಂದು ಮಠವೂ ಇದ್ದು, ಆ ಪ್ರದೇಶವೆಲ್ಲವೂ ಅಲ್ಲಿಯ ಸ್ವಾಮಿಗಳ ಅಧೀನವಾಗಿರುವಂತೆಯೂ ಆ ಜನರಿಂದ ತಿಳಿದುಕೊಂಡದ್ದಾಯಿತು. ಮೇಲಿನ ವಿದ್ಯಮಾನಗಳಿಂದಲೂ, ಆ ಸ್ಥಳದ ರಮಣೀಯತೆ ಯಿಂದಲೂ, ಆ ಭಾಗವೇ ಶ್ರೀಮದಾಚಾರ್ಯರ ಅವತಾರ ಸ್ಥಳವೆಂದು ತಿಳಿಯಲು ಯಾವ ಪ್ರತಿಬಂಧಕವೂ ತೋರಲಿಲ್ಲವು. ಕಾಲಟಿ ಸಂಕೇತವೆಂದು ಕರೆಯಲ್ಪಡುತ್ತಿದ್ದ ಚತುಸ್ಸೀಮಾಂತರ್ಗತವಾದ ಭೂಮಿಯೆಲ್ಲವೂ ಅಲ್ಲಿಯ ಮಠದ ಸ್ವಾಮಿಗಳ ಆಳ್ವಿಕೆಗೆ ಸೇರಿದ್ದರೂ ಆ ಭೂಮಿಗಳ ಸ್ವಾಧೀನತೆಯು ಮಠದವರಿಗಿರಲಿಲ್ಲ. ಆ ದೇಶದ ಪದ್ಧತಿಯಂತೆ ಜನ್ಮಿ (ಕ್ಷೇತ್ರಸ್ವಾಮಿ) ಸ್ವಾತಂತ್ರ್ಯ ಮಾತ್ರ ಸ್ವಾಮಿಗಳಿಗಿದ್ದು ಬಹಳ ಸ್ವಲ್ಪವಾದ ತೀರ್ವೆಯನ್ನು ಭೂಮಿಯ ಅನುಭವದಾರರಾದ ಇತರರಿಂದ ಪಡೆಯುತ್ತಲಿದ್ದರು. ಅನುಭವದಾರರುಗಳು ಬಹುಜನರಾಗಿಯೂ, ಬೇರೆ ಬೇರೆ ಮತಗಳಿಗೆ ಸೇರಿದವರಾಗಿಯೂ ಇದ್ದುದರಿಂದ ಕಾಲಟಿಯ ಚತುಸ್ಸೀಮಾಮಧ್ಯದ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವುದು ಸುಲಭವಾಗಿರುವಂತೆ ಕಂಡುಬರಲಿಲ್ಲ. ಕಾಲಟಿಯ ಸನ್ನಿವೇಶಗಳನ್ನು ಚೆನ್ನಾಗಿ ತಿಳಿದುಕೊಂಡು ಹಿಂತಿರುಗಿ ಅನಂತಶಯನಕ್ಕೆ ಬಂದು ಆ ವಿದ್ಯಮಾನಗಳನ್ನು ವಿಸ್ತಾರವಾಗಿ ಮಹಾರಾಜ ರವರಲ್ಲಿಯೂ ಅವರ ಮಂತ್ರಿಗಳಲ್ಲಿಯೂ ತಿಳಿಸಿ, ಯಾವ ರೀತಿಯಿಂದಲಾದರೂ ಸಹಾಯಕರಾಗಿ ಕಾಲಟಿ ಭೂಮಿಯನ್ನು ಸ್ವಾಧೀನ ಮಾಡಿ ಕೊಡಬೇಕೆಂದು ಆ ಸರಕಾರದವರನ್ನು ಪ್ರಾರ್ಥಿಸಿದರು. ಈ ಸಮಯದಲ್ಲಿ ರಾಕ್ಷಸರ ನಾಗಪಾಶ ಬಂಧದಿಂದ ಕೇವಲ ಅಸ್ವಾಧೀನರಾಗಿಯೂ, ಇತಿಕರ್ತವ್ಯತಾಶೂನ್ಯರಾಗಿಯೂ ಚಿಂತಿಸುತ್ತಿದ್ದ ರಾಮಲಕ್ಷ್ಮಣರ ಬಂಧನವನ್ನು ನಿವಾರಿಸಲು ಆಕಸ್ಮಿಕವಾಗಿ ಪಕ್ಷಿರಾಜನು ಒದಗಿದಂತೆ ಪುಣ್ಯತಮವಾದ ಕಾಲಟಿ ಭೂಮಿಗೆ ಉಂಟಾಗಿದ್ದ ದುರವಸ್ಥೆಯನ್ನು ಹೋಗಲಾಡಿಸುವುದ ಕ್ಕೋಸ್ಕರವೇ ಸಿದ್ಧವಾಗಿ ಬಂದಿತೋ ಎಂಬಂತೆ, ನಮ್ಮ ಹಿಂದೂಸ್ಥಾನದಲ್ಲಿ ಅತಿ ಪ್ರಾಚೀನವೂ,

ಚರಿತ್ರ ಪ್ರಸಿದ್ಧ ಮಹಾಪುರುಷರ ಜ್ಞಾಪಕವೂ, ಶಿಲ್ಪ ವೈಚಿತ್ರ್ಯದಿಂದ ಬಹು ಪ್ರಸಿದ್ಧವೂ ಆಗಿರತಕ್ಕ ಕಟ್ಟಡಗಳನ್ನೂ ಅಂತಹ ಸ್ಥಳಗಳನ್ನೂ ಪರಿಷ್ಕರಿಸಿ, ಕಾಪಾಡಬೇಕೆಂಬ ಒಂದು ರಾಜಶಾಸನವು ಭರತಖಂಡದ ಸಾರ್ವಭೌಮರ ಸರಕಾರದವರಿಂದ ಕಳುಹಿಸಲ್ಪಟ್ಟು, ಭರತ ಖಂಡದ ಎಲ್ಲಾ ಭಾಗಗಳಲ್ಲಿಯೂ ಪ್ರಚಾರಕ್ಕೆ ಬಂದಿತು. ಬಲವತ್ತರವಾದ ಆ ರಾಜಶಾಸನವನ್ನನುಸರಿಸಿ ಅನಂತಶಯನದ ಸರಕಾರದವರು ಅದ್ಭುತವಾದ ಪಾಂಡಿತ್ಯ ದಿಂದಲೂ ಅನುಪಮವಾದ ಪ್ರಭಾವದಿಂದಲೂ, ನಿಷ್ಕಳಂಕವಾದ ಚಾರಿತ್ರದಿಂದಲೂ ಭರತಖಂಡದಲ್ಲಿ ವೇದೋಕ್ತಧರ್ಮವನ್ನುದ್ಧರಿಸಿ ಜಗತ್ಪ್ರಸಿದ್ಧರಾದ ಶ್ರೀ ಶಂಕರಾಚಾರ್ಯರವರ ಜ್ಞಾಪಕವಾಗಿ ಅವರ ಜನ್ಮಭೂಮಿಯನ್ನು ಪರಿಷ್ಕರಿಸಿ ಕಾಪಾಡುವ ಉದ್ದೇಶವನ್ನು ಮಾಡಿರತಕ್ಕ ಶ್ರೀಗಳವರ ಅಮೋಘವಾದ ಸಂಕಲ್ಪವನ್ನು ನೆರವೇರಿಸುವುದಕ್ಕೋಸ್ಕರ ಎಲ್ಲಾ ವಿಧವಾದ ನಿರ್ಬಂಧಗಳಿಂದಲೂ ಬಿಡುಗಡೆಯನ್ನು ಮಾಡಿಸಿ ಆ ಭೂಮಿಯನ್ನು ಶ್ರೀಗಳವರಿಗೆ ಉಪಹಾರವಾಗಿ ಅರ್ಪಿಸಿದರಲ್ಲದೆ ಆ ಸ್ಥಳದ ಪರಿಷ್ಕಾರಕ್ಕೂ ಅಲ್ಲಿ ಒಂದು ಆಲಯವನ್ನು ನಿರ್ಮಿಸುವುದಕ್ಕೂ ಹತ್ತು ಸಾವಿರ ರೂಪಾಯಿಗಳನ್ನು ತಮ್ಮ ಸರಕಾರದಿಂದ ಕೊಡುವಂತೆ ವ್ಯವಸ್ಥೆ ಮಾಡಿದರು. ಹೀಗೆ ಆಚಾರ್ಯ ಜನ್ಮಭೂಮಿಯು ಅತಿ ಸುಲಭರೀತಿಯಿಂದ ಸ್ವಾಧೀನವಾದದ್ದು, ಸ್ಥಳವನ್ನು ತೆಗೆದುಕೊಳ್ಳುವುದಕ್ಕೂ ಆಲಯವನ್ನು ನಿರ್ಮಿಸುವುದಕ್ಕೂ ಉದಾರವಾಗಿ ವಂಚಿ ಮಹಾರಾಜರು ದ್ರವ್ಯ ಸಹಾಯ ಮಾಡಿದ್ದು ಇವು ಮೊದಲಾದ ವೃತ್ತಾಂತವೆಲ್ಲವನ್ನೂ ಈ ಲೇಖಕನಿಂದ ವಿವರವಾಗಿ ತಿಳಿದು ಶ್ರೀಗಳವರು ಅಮಿತವಾದ ಆಶ್ಚರ್ಯಾನಂದಗಳನ್ನು ಒಟ್ಟಿಗೆ ಅನುಭವಿಸಿ ಅನುಕೂಲ ಕಾಲವೊದಗಿ ಅದರಿಂದ ತೋರಿದ ಶುಭ ಸೂಚನೆಗಳಿಂದ ತಮ್ಮ ಸಂಕಲ್ಪಿತ ಕಾರ್ಯವು ಶ್ರೀಮದಾಚಾರ್ಯ ಭಗವತ್ಪಾದರವರಿಗೆ ಸಮ್ಮತವಾದುದೆಂದೂ, ಈ ಸಂಕಲ್ಪಿತಾರ್ಥವನ್ನು ಕಾಲಯಾಪನ ಮಾಡದೆ ನೆರವೇರಿಸುವುದು ಕರ್ತವ್ಯವೆಂದೂ ನಿಶ್ಚಯ ಮಾಡಿದರು.

ಕಾಲಟಿಯನ್ನು ಕುರಿತು ಶ್ರೀಗಳವರ ಪ್ರಯಾಣ.

ಶೃಂಗೇರಿಯಿಂದ ಪ್ರಯಾಣ ಮಾಡುವಾಗ ತಮ್ಮ ಗುರುಗಳು ಆಚರಿಸುತ್ತಿದ್ದಂತೆ ಶ್ರೀಗಳವರು ಶ್ರೀ ಶಾರದಾಸನ್ನಿಧಿಗೆ ಬಂದು ಅಮ್ಮನವರನ್ನು ಪೂಜಾ ನಿವೇದನಾದಿಗಳಿಂದ ಸತ್ಕರಿಸಿ, ತಮ್ಮ ಪ್ರಯಾಣವು ಸಂಕಲ್ಪಿತಾರ್ಥಸಿದ್ಧಿಯಿಂದ ಪ್ರಪಂಚಕ್ಕೆ ಅಭ್ಯುದಯಕಾರಿ ಯಾಗುವುದಾದರೆ ಯಾತ್ರೆಯನ್ನು ಕೈಕೊಳ್ಳುವುದಕ್ಕೂ ತದ್ವಿಪರೀತವಾಗುವಲ್ಲಿ ಯಾತ್ರೆಯನ್ನು ಮಾಡದಿರುವುದಕ್ಕೂ ಅನುಜ್ಞೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿ, ಅಮ್ಮನವರ ಉಭಯ ಹಸ್ತಗಳಲ್ಲಿ ಎರಡು ಪತ್ರಗಳನ್ನಿಟ್ಟು ನಮಸ್ಕಾರ ಮಾಡಲು, ದಕ್ಷಿಣ

ಹಸ್ತಾರ್ಪಿತವಾಗಿದ್ದ ಪತ್ರವು ಜರುಗಿ ಕೆಳಗೆ ಬಿದ್ದಿತು. ತತ್‌ಕ್ಷಣವೇ ಭಯಭಕ್ತಿಗಳಿಂದ ಆ ಪತ್ರವನ್ನು ತೆಗೆದು ನೋಡುವಲ್ಲಿ, ಶ್ರೀಗಳವರ ಯಾತ್ರೆಯು ಜಗದಭ್ಯುದಯ ಕಾರಣವೆಂದು ಶೃಂಗೇರಿಯಿಂದ ಪ್ರಸ್ಥಾನ ಮಾಡಲು ಅನುಮತಿಯನ್ನಿತ್ತಂತೆ ಕಂಡುಬಂದಿತು. ಪ್ರತಿಯೊಂದು ವಿಷಯದಲ್ಲಿಯೂ ಸಂಕಲ್ಪಿತ ಕಾರ್ಯಸಿದ್ಧಿಗೆ ಅನುಗುಣವಾದ ಶುಭಸೂಚನೆಗಳೇ ಉಂಟಾಗಿ ಶ್ರೀಗಳವರ ಚಿತ್ತಕ್ಕೆ ದಾರ್ಢ್ಯವೂ ಉತ್ಸಾಹವೂ ಹೆಚ್ಚುತ್ತಲೇ ಬಂದುದರಿಂದ ತಮ್ಮ ಯಾತ್ರೆಗೆ ಆವಶ್ಯಕವಾಗಿರುವ ಸನ್ನಾಹಗಳನ್ನು ಸಜ್ಜೀಕರಿಸಲು ಈ ಲೇಖಕನಿಗೆ ಆಜ್ಞೆಯನ್ನಿತ್ತು ಪರಾಭವ ಸಂವತ್ಸರದ ಮಾಘ ಶುಕ್ಲ ಪಂಚಮಿಯಲ್ಲಿ ಶೃಂಗೇರಿಯಿಂದ ಪ್ರಯಾಣ ಮಾಡಬೇಕೆಂದು ತೀರ್ಮಾನಿಸಿದರು. ಕೆಲವು ದಿನಗಳಲ್ಲಿಯೇ ರಾಮಚಂದ್ರಯ್ಯರು ದರ್ಶನಾರ್ಥವಾಗಿ ಶೃಂಗೇರಿಗೆ ಬರಲು ಶ್ರೀಗಳವರು ತಮ್ಮ ಆಜ್ಞೆಗನುಸಾರವಾಗಿ ಅವರು ಕಾಲಟಿ ಭೂಮಿಯನ್ನು ಸ್ವಾಧೀನಮಾಡಿಕೊಳ್ಳುವುದಕ್ಕೆ ನಡೆಸಿದ ಯತ್ನವನ್ನು ಕೇಳಿ ಸಂತೋಷಿಸಿ ಆಲಯ ನಿರ್ಮಾಣಕಾರ್ಯಭಾರವನ್ನೂ ರಾಮಚಂದ್ರಯ್ಯರೇ ವಹಿಸತಕ್ಕದ್ದೆಂದು ನಿಯೋಗ ಮಾಡಿದರು. ಗುರ್ವಾಜ್ಞಾಪರಿಪಾಲನತತ್ಪರರಾದ ಆ ಗೃಹಸ್ಥರು ಅತ್ಯಾದರದಿಂದ ಶ್ರೀಗಳವರ ಆಜ್ಞೆಯನ್ನು ತಲೆಯಲ್ಲಿ ಧರಿಸಿ, ಸರ್ಪಾದಿಗಳಿಂದಲೂ ಲತಾಗುಲ್ಮಗಳಿಂದಲೂ ನಿಬಿಡವಾಗಿ ಅರಣ್ಯದಂತೆ ನಿರ್ಜನವಾಗಿದ್ದ ಕಾಲಟಿ ಪ್ರದೇಶದಲ್ಲಿ ನಿರ್ಭಯರಾಗಿ ನಿಂತು ಸ್ಥಳ ಪರಿಷ್ಕರಣಾದಿ ಕಾರ್ಯಗಳನ್ನು ನಿರ್ವಹಿಸುವುದಕ್ಕೋಸ್ಕರ ಶ್ರೀಗಳವರಿಂದ ಅನುಗ್ರಹಿಸಲ್ಪಟ್ಟ ಮಂತ್ರಗಳನ್ನೂ ವಿಭೂತ್ಯಾದಿ ಪ್ರಸಾದಗಳನ್ನೂ ಪಡೆದುಕೊಂಡು, ಕೂಡಲೇ ಶೃಂಗೇರಿಯಿಂದ ಬೆಂಗಳೂರು ಮಾರ್ಗವಾಗಿ ಪ್ರಯಾಣ ಮಾಡುವಾಗ ಶ್ರೀಮನ್ಮಹಾರಾಜ ಕೃಷ್ಣರಾಜ ಪ್ರಭುಗಳವರ ದರ್ಶನವನ್ನು ತೆಗೆದುಕೊಂಡು ಅವರಲ್ಲಿ ಶ್ರೀಗಳವರ ಸಂಕಲ್ಪವನ್ನೂ ಅದನ್ನು ನೆರವೇರಿಸುವುದಕ್ಕೆ ಅದುವರೆಗೆ ಆಚರಿಸಿದ್ದ ನಡೆವಳಿಕೆಗಳನ್ನೂ ವಿಸ್ತಾರವಾಗಿ ವಿಜ್ಞಾಪಿಸಿ, ಶ್ರೀಗಳವರು ಶೃಂಗೇರಿಯಿಂದ ಪ್ರಸ್ಥಾನ ಮಾಡುವರೆಂದೂ ಅವರ ಆಜ್ಞೆಯಿಂದ ತಾನು ಕಾಲಟಿಗೆ ಹೊರಡುವೆನೆಂದೂ ತಿಳಿಯ ಪಡಿಸಿ ಅವರ ಅನುಮತಿಯನ್ನು ಪಡೆದು ಮುಂದೆ ಹೊರಟರು. ಆಗ ಶ್ರೀಮನ್ಮಹಾರಾಜರವರು ಶೃಂಗೇರಿಯಿಂದ ಶ್ರೀಗಳವರು ಹೊರಡುವುದರೊಳಗೆ ತಾವು ಸಕುಟುಂಬರಾಗಿ ಶೃಂಗೇರಿಗೆ ಬಂದು ಅವರ ಸಂದರ್ಶನವನ್ನು ಮಾಡಬೇಕೆಂಬ ತಮ್ಮ ಆಶಯವನ್ನು ಸೂಚಿಸಿ ಅದನ್ನು ಪೂರೈಸಿಕೊಳ್ಳಲು ಪರಾಭವ ಸಂವತ್ಸರದ ಮಾಘ ಕೃಷ್ಣ ಪಂಚಮಿಯವರೆಗೆ ಅವಕಾಶವು ಬೇಕಾಗಿದ್ದುದರಿಂದ ಆ ವಿಷಯದಲ್ಲಿ ಶ್ರೀಗಳವರ ಆನುಕೂಲ್ಯವನ್ನು ತಿಳಿಯಲು ತಮ್ಮ ಅಂತರಂಗಾಧಿಕಾರಿಗಳ ಮೂಲಕ ಈ ಲೇಖಕನಿಗೆ ಪತ್ರವನ್ನು ಬರೆಸಿದರು. ಮುಂದಾಗಿಯೇ ಶ್ರೀ ಶಾರದಾದೇವೀ ಪ್ರಸಾದಲಬ್ಧವಾದ ಪತ್ರದಿಂದ ಮಾಘ ಶುಕ್ಲ ಪಂಚಮಿಯಲ್ಲಿ ಶ್ರೀಗಳವರ ಪ್ರಸ್ಥಾನವೆಂದು

ನಿಶ್ಚಿತವಾಗಿದ್ದಿತು. ಅಲ್ಲಿಂದ ಮುಂದೆ ಹದಿನೈದು ದಿನಗಳವರೆಗೆ ಶೃಂಗೇರಿಯಲ್ಲಿಯೇ ವಸತಿಯನ್ನು ಮಾಡಬೇಕಾದ ಆವಶ್ಯಕತೆಯು ಭಕ್ತಪರಾಧೀನರಾದ ಶ್ರೀಗಳವರನ್ನು ನಿರ್ಬಂಧಿಸಿತು. ವಿರುದ್ಧಾನುಷ್ಠಾನವು ಅಸಂಭಾವಿತವಾಗಿದ್ದುದರಿಂದ ಗೌರವ ಲಾಘವ ವಿಚಾರ ಮಾಡಿದ್ದರಲ್ಲಿ ದೇವಿಯ ಆಜ್ಞೆಯಂತೆ ಮಾಘ ಶುಕ್ಲ ಪಂಚಮಿಯಲ್ಲಿಯೇ ಶೃಂಗೇರಿಯಿಂದ ಪ್ರಸ್ಥಾನವನ್ನು ಮಾಡಬೇಕೆಂತಲೂ, ಪೂರ್ವ ಸಂಪ್ರದಾಯಾನುಗುಣವಾಗಿ ಋಷ್ಯಶೃಂಗಮಹರ್ಷಿಗಳ ಆಶ್ರಮವಾದ ಕಿಗ್ಗಕ್ಕೆ ಹೋಗಿ ತತ್ಸಮೀಪವರ್ತಿಯಾದ ನರಸಿಂಹಪರ್ವತದಲ್ಲಿ ಹದಿನೈದು ದಿನಗಳು ವಸತಿ ಮಾಡತಕ್ಕದ್ದೆಂತಲೂ, ಬಳಿಕ ಮಾರ್ಗವಶದಿಂದ ಶೃಂಗೇರಿಗೆ ಬಂದು ಅಲ್ಲಿಗೆ ದರ್ಶನಾಕಾಂಕ್ಷಿಗಳಾಗಿ ಬರುವ ಮಹಾರಾಜರಿಗೆ ಅನುಗ್ರಹ ಮಾಡಿ ತಮ್ಮ ಪ್ರಯಾಣವನ್ನು ಬೆಳೆಸತಕ್ಕದ್ದೆಂತಲೂ ತೀರ್ಮಾನವಾಯಿತು. ಅನಂತರ ಶ್ರೀಗಳವರ ನಿಯೋಗದಿಂದ ಅವರ ಯಾತ್ರೆಗೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸುವುದರಲ್ಲಿಯೂ ಅವರ ಆಶ್ರಮಕ್ಕೆ ಅತಿಥಿಗಳಾಗಿ ಬರುವ ಶ್ರೀಮನ್ಮಹಾಪ್ರಭುಗಳವರ ಆತಿಥ್ಯಕ್ಕೆ ಅಸ್ಥಾನ ಗೌರವಾನುಗುಣವಾಗಿ ಬೇಕಾದವುಗಳನ್ನು ನಡೆಸುವುದರಲ್ಲಿಯೂ ಮಠೀಯಾಧಿಕಾರಿಗಳು ವ್ಯಾಪೃತರಾಗಿ ಎಲ್ಲಾ ಅನುಕೂಲಗಳನ್ನೂ ಸಿದ್ಧಪಡಿಸಿದರು. ಶಾ|| 1829ನೆಯ ಪರಾಭವ ಸಂವತ್ಸರದ (1907ನೇ ಇಸವಿ) ಮಾಘ ಶುಕ್ಲ ಪಂಚಮೀ ಶುಕ್ರವಾರದ ಅಭಿಜಿನ್ಮುಹೂರ್ತದಲ್ಲಿ ಶ್ರೀಗಳವರು ತಮ್ಮ ನಿತ್ಯಾನುಷ್ಠಾನಗಳನ್ನು ಪೂರ್ಣಮಾಡಿ ಶ್ರೀಮದಾಚಾರ್ಯ ಭಗವತ್ಪಾದರವರ ಮೂರ್ತಿಯನ್ನೂ ಚಂದ್ರಮೌಳೀಶ್ವರ ದೇವರನ್ನೂ ಮುಂದಿಸಿರಿಕೊಂಡು ತಮ್ಮ ಆಶ್ರಮವಾದ ನರಸಿಂಹವನದಿಂದ ಪ್ರಯಾಣ ಮಾಡಿ ತುಂಗಾನದಿಯನ್ನು ದಾಟಿ ಉತ್ತರ ತೀರದಲ್ಲಿರುವ ತಮ್ಮ ಗುರುಗಳವರ ಅಧಿಷ್ಠಾನಕ್ಕೆ ಬಂದು ಯಥೋಕ್ತವಾದ ನಮಸ್ಕಾರಾದಿಗಳಿಂದ ಗುರು ಸಂದರ್ಶನವನ್ನು ಮಾಡಿ ಗುರ್ವಾಜ್ಞೆಯನ್ನು ಪಡೆದು ಶ್ರೀ ಶಾರದಾಂಬೆಯವರ ಸನ್ನಿಧಿಗೆ ಬಂದು ಅಮ್ಮನವರ ದೀಪಾರಾಧನೆ ನಡೆದ ನಂತರ ಯಥಾ ಸಂಪ್ರದಾಯವಾಗಿ ದಂಡ ನಮಸ್ಕಾರಾದಿಗಳಿಂದ ಸತ್ಕರಿಸಿ, ಮಾತೃವಿಯೋಗದಿಂದ ಖಿನ್ನರಾದ ಔರಸ ಪುತ್ರರು ಪ್ರಲಪಿಸುವಂತೆ ಅನೇಕ ಸಂಸ್ಕೃತ ಪದ್ಯಗಳನ್ನು ಪಠಿಸಿ ಜಗನ್ಮಾತೃ ಶ್ರೀಶಾರದಾ ಸನ್ನಿಧಾನವನ್ನು ಬಿಡುವುದರಲ್ಲಿ ತಮಗುಂಟಾದ ಉದ್ವೇಗವನ್ನು ಅಶ್ರುಪಾತಗದ್ಗದ ಸ್ವರಗಳಿಂದ ಪ್ರಕಟಗೊಳಿಸುತ್ತ, ಹೆಜ್ಜೆ ಹೆಜ್ಜೆಗೂ ಹಿಂತಿರುಗಿ ಅಮ್ಮನವರನ್ನು ಅವಲೋಕಿಸುತ್ತ ಹೊರಟರು. ಆಗ ಶ್ರೀಗಳವರಿಗಿದ್ದ ಮನೋಭಾವವನ್ನು ನಿಮ್ನ ಲಿಖಿತ ಪದ್ಯಗಳಿಂದ ತಿಳಿಯಬಹುದು :

ಕಿನ್ನಾಹಂ ಪುತ್ರಸ್ತವ ಮಾತುಃ ಸಚರಾಚರಸ್ಯ ಜಗತೋಽಸ್ಯ ।
ಕಿಂ ಮಾಂ ದೂರೀಕುರುಷೇ ದೇವಿ ಗಿರಾಂ ಬ್ರೂಹಿ ಕಾರಣಂ ತತ್ರ ॥ ॥1॥

ಕಿಂ ಚಾಹುರಾರ್ಯಪಾದಾಃ ತ್ವದ್ಭಕ್ತಾ ಮದ್ಗುರೂತ್ತಮಾಃ ಪೂರ್ವಮ್ ।
ಔರಸತನಯಂ ಮಾಂ ತವ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥2॥

ಆನೀಯದೂರತೋ ಮಾಂ ಮಾತಸ್ತ್ವತ್ಪಾದಸವಿಧಮತಿಕೃಪಯಾ ।
ಪರಿಪಾಲ್ಯ ಚ ಸುಚಿರಂ ಮಾಂ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥3॥

ಅತಿಪರಿಚಯಾದವಜ್ಞಾ ಪ್ರಭವೇತ್ಪುತ್ರೇಷು ಕಿಂ ಸವಿತ್ರೀಣಾಮ್ ।
ನ ಹಿ ಸಾ ಕ್ವಚಿದಪಿ ದೃಷ್ಟಾ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥4॥

ಕಾದಾಚಿತ್ಕನಮಸ್ಕೃತಿ ಕರ್ತೄಣಾಮಪ್ಯಭೀಷ್ಟದೇ ತರಸಾ ।
ನಾಹಂ ಸಕೃದಪಿ ನಂತಾ ? ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥5॥

ಗುರುರೂಪೇಣಾಬಾಲ್ಯಾತ್ ಸೋಢ್ವಾ ಮಂತೂಂಶ್ಚ ಮತ್ಕೃತಾನ್ವಿವಿಧಾನ್ ।
ಪರಿರಕ್ಷ್ಯ ಕರುಣಯಾ ಮಾಂ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥6॥

ಜಗತಾಂ ಪಾಲನಮನಿಶಂ ಕುರ್ವಂತ್ಯಾಸ್ತೇ ಭವೇತ್ಕಿಯಾನ್ಭಾರಃ ।
ಅಹಮಂಬ ದೀನವರ್ಯಃ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥7॥

ಪಾಪಾನ್ನಿವಾರ್ಯಸರಣೌ ವಿಮಲಾಯಾಂ ಮೇ ಪ್ರವರ್ತನೇ ತರಸಾ ।
ಕರ್ತವ್ಯೇ ಸತಿ ಕೃಪಯಾ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥8॥

ಯದ್ಯಪ್ಯನ್ಯಾನನ್ಯಾನ್ ದೇವಾನಾರಾಧಯಾಮಿ ನ ತ್ವಂ ತೇ ।
ಸರ್ವಾತ್ಮಿಕೇತಿ ಚಪಲಃ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥9॥

ಯಾತ್ರಾಽಶಕ್ತಮಿಮಂ ಮಾಂ ಗಳಿತಶರೀರಂ ರುಜಾ ಸಮಾಕ್ರಾಂತಮ್ ।
ಪಾತ್ರಮಹೇತುದಯಾಯಾಃ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥10॥

ತವ ಸದ್ಮನಿಗುರುಸದನೇ ವಿದ್ಯಾತೀರ್ಥಾಲಯೇ ಚ ಬಹುಸುಖಿತಃ ।
ಖೇಲಾಂ ಕುರ್ವಂತಂ ಮಾಂ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥11॥

ತ್ವತ್ಕ್ಷೇತ್ರನಿಕಟರಾಜನ್ನರಸಿಂಹಾಖ್ಯಾಃ ಚಲೇಂದ್ರಶೃಂಗಾಗ್ರೇ ।
ಸ್ವೈರವಿಹಾರಕೃತಂ ಮಾಂ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥12॥

ತ್ವತ್ಪಾದಪೂತ ತುಂಗಾತೀರೇ ವಿಜನೇ ವನೇ ಚರಂತಂ ಮಾಂ ।
ಅನುಘಸ್ರಂ ಮೋದಭರಾತ್ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥13॥

ತುಂಗಾತೀರೇ ದಿನಕರನಿವೇಶನಿಕಟಸ್ಥಲೇ ವಿಪುಲೇ ।
ಧ್ಯಾಯಂತಂ ಪರತತ್ತ್ವಂ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥14॥

ತುಂಗಾತೀರೇ ರಘುವರ ಮಂದಿರ ಪುರತಃ ಸುದೀರ್ಘಪಾಷಾಣೇ ।
ಕುತುಕಾದ್ವಿಹರಂತಂ ಮಾಂ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥15॥

ಜಾತು ಚ ನರಸಿಂಹಪುರೇ ತುಂಗಾತೀರೇ ಸುಸ್ಯೈಕತೇ ಮೋದಾತ್ ।
ವಿಹೃತಿಂ ಕುರ್ವಾಣಂ ಮಾಂ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥16॥

ಯತಿವರಕೃತಾತ್ಮವಿದ್ಯಾವಿಲಾಸಮನಿಶಂ ಪಠಂತಮತಿ ಮೋದಾತ್ ।
ಕುಹಚಿತ್ತುಂಗಾತೀರೇ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥17॥

ಶಂಕರಭಗವತ್ಪಾದಪ್ರಣೀತಚೂಡಾಮಣಿಂ ವಿವೇಕಾದಿಮ್ ।
ಶೃಣ್ವಂತಂ ನೃಹರಿವನೇ ಕಸ್ಮಾದ್ದೂರೀಕರೋಷಿ ವದ ವಾಣಿ ॥ ॥18॥

ಶ್ರೀಗಳವರು ಶೃಂಗೇರಿಯಲ್ಲಿ ವಸತಿ ಮಾಡಿದ್ದ ಕಾಲದಲ್ಲಿ ಅವರ ಮನೋಭಾವವು ಯಾವ ರೀತಿಯಲ್ಲಿ ಪರಿಣಮಿಸಿತ್ತು; ಅವರ ದಿನಚರ್ಯೆಯು ಯಾವ ವಿಧವಾಗಿ ಇದ್ದಿತು; ದೇವಿಯ ವಿಷಯದಲ್ಲಿ ಅವರಿಗಿದ್ದ ಭಕ್ತಿಯು ಯಾವ ದಶೆಯನ್ನು ಪಡೆದಿದ್ದಿತು - ಎಂಬುದನ್ನು ಅಸ್ಮದಾದಿಗಳು ತಿಳಿದುಕೊಳ್ಳುವುದಕ್ಕೆ ಮೇಲಣ ಪದ್ಯಗಳಿಗಿಂತ ಬೇರೊಂದು ಸಾಧನವು ಬೇಕಾಗಿಲ್ಲವು. ಶೃಂಗಗಿರಿ ಶ್ರೀ ಶಾರದಾಲಯವನ್ನು ಶಿಲಾಮಯವಾಗಿ ಮಾಡಬೇಕೆಂಬ ಸಂಕಲ್ಪವು ಚಿರಕಾಲದಿಂದ ಶ್ರೀಗಳವರ ಹೃದಯದಲ್ಲಿ ಅಂಕುರಿಸಿ ಅದರ ನಿರ್ವಾಹಕ್ಕೆ ತಕ್ಕ ಪ್ರಯತ್ನಗಳೂ ನಡೆದಿದ್ದಂತೆ ಹಿಂದೆ ಹೇಳಿರುವುದಷ್ಟೆ? ಆ ಸಂಕಲ್ಪವು ಫಲೋನ್ಮುಖವಾಗಿರಲು : ಶಾರದಾಂಬೆಯವರ ದರ್ಶನ ಮಾಡಿ ಶ್ರೀಗಳವರು ಹೊರಗೆ ಬಂದ ಬಳಿಕ ಅಮ್ಮನವರ ಮುಂಭಾಗದಲ್ಲಿ ಸಿದ್ಧವಾಗಿದ್ದ ಆಲಯಾರಂಭಕಶಿಲೆಯನ್ನು ತಮ್ಮ ಅಮೃತ ಹಸ್ತದಿಂದ ಪೂಜಿಸಿ ದಕ್ಷಿಣ ದೇಶದಿಂದ ಬಂದಿದ್ದ ಶಿಲ್ಪಿಗಳಿಗೆ ಅನುಗ್ರಹ ಪೂರ್ವಕವಾದ ಪ್ರಸಾದವನ್ನಿತ್ತು ಅವರಿಂದ ಆಲಯ ನಿರ್ಮಾಣ ಕಾರ್ಯಕ್ಕೆ ಪ್ರಾರಂಭ ಮಾಡಿಸಿ ಪ್ರಯಾಣವನ್ನು ಕೈಕೊಂಡರು. ಸಂಸ್ಥಾನದ ಪದ್ಧತಿಯಂತೆ ಬಹಿರ್ದ್ವಾರದಲ್ಲಿ ಅಲಂಕರಿಸಲ್ಪಟ್ಟು ಸಿದ್ಧವಾಗಿದ್ದ ಸುವರ್ಣಾಂದೋಳಿಕೆಯಲ್ಲಿ ಭಗವತ್ಪಾದಾಚಾರ್ಯರ ಮೂರ್ತಿಯನ್ನು ಚಂದ್ರಮೌಳೀಶ್ವರ ಲಿಂಗದಿಂದ ಗರ್ಭೀಕೃತವಾಗಿದ್ದ ಸಂಪುಟವನ್ನೂ ಬಿಜಯ ಮಾಡಿಸಿ, ತಾವು ಪಾದಚಾರಿಗಳಾಗಿ ಸ್ವಲ್ಪ ದೂರ ಪ್ರಯಾಣ ಮಾಡುವಷ್ಟರಲ್ಲಿ, ಶೃಂಗಪುರ ನಿವಾಸಿಗಳು ಶ್ರೀಗಳವರಿಗೆ ಸಾಷ್ಟಾಂಗವಾಗಿ ನಮಸ್ಕರಿಸಿ ಶ್ರೀಗಳವರ ಸನ್ನಿಧಾನದಿಂದ ವಿರಹಿತವಾದ ಗ್ರಾಮವಾಸವು

ತಮಗೆ ದುಸ್ಸಹವಾಗುವುದೆಂದೂ ಯಾವುದೊಂದು ರೋಗಾದಿಬಾಧೆಗೂ ವಿಷಯರಾಗದೆ ನಿರ್ಭಯರಾಗಿದ್ದ ತಾವು ಮುಂದಿನ ನಿರ್ವಾಹದ ವಿಷಯದಲ್ಲಿ ಭೀತಿಗೊಂಡಿರುವೆವೆಂದೂ ತಿಳಿಸಿಕೊಂಡರು. ಪರದುಃಖಾಸಹಿಷ್ಣುಗಳಾದ ಶ್ರೀಗಳವರು ಪುರನಿವಾಸಿಗಳನ್ನು ಕರುಣಾಪೂರ್ಣಕಟಾಕ್ಷದಿಂದಲೂ, ಅಮೃತಸ್ಯಂದಿ ಹಿತೋಕ್ತಿಗಳಿಂದಲೂ ಸಮಾಧಾನಗೊಳಿಸಿ ಅವರುಗಳಿಗೆ ಅಭಯವನ್ನಿತ್ತು ಗ್ರಾಮರಕ್ಷಣಾರ್ಥವಾಗಿ ದೇವತಾ ಬಿಂಬಗಳೊಡನೆ ನಗರವನ್ನು ಸುತ್ತುವರಿದು ಬಂದು ತಮ್ಮ ವಿಶ್ಲೇಷದಿಂದ ಭೀತರಾಗಿದ್ದ ಪುರಜನರನ್ನು ಧೈರ್ಯಗೊಳಿಸಿದರು. ಪುರನಿವಾಸಿಗಳಲ್ಲನೇಕರು ಶ್ರೀಗಳವರ ಪಾದರಜಸ್ಸಿನಿಂದ ತಮ್ಮ ಗೃಹಗಳನ್ನು ಪವಿತ್ರ ಮಾಡಿ ಪ್ರಸ್ಥಾನವನ್ನು ಮುಂದುವರಿಸಬೇಕೆಂದು ಪ್ರಾರ್ಥನೆ ಮಾಡಲು, ಅವರ ಭಕ್ತಿವಿಶ್ವಾಸಗಳಿಗೆ ಅಧೀನರಾದ ಶ್ರೀಗಳವರು ಅವರ ಪ್ರಾರ್ಥನೆಯು ಆಗ ಯಾತ್ರಾಪ್ರತಿಬಂಧಕವಾಗಿದ್ದರೂ ಆ ವಿಷಯವನ್ನು ಚಿತ್ತಕ್ಕೆ ತರದೆ ಶೃಂಗಪುರಾಗ್ರಹಾರದಲ್ಲಿ ಅನೇಕ ಗೃಹಗಳನ್ನು ಪ್ರವೇಶಿಸಿ, ಆಯಾ ಜನರು ಮಾಡಿದ ಸತ್ಕಾರಗಳನ್ನು ಸ್ವೀಕರಿಸಿ, ಸಾಯಂಕಾಲ 6 ಘಂಟೆಯ ಸಮಯದಲ್ಲಿ ಶೃಂಗೇರಿಯಿಂದ ಮುಂದಕ್ಕೆ ಪ್ರಯಾಣ ಮಾಡಿ, ಆ ರಾತ್ರಿ ಕಿಗ್ಗಕ್ಕೆ ಎರಡು ಮೈಲಿಗಳ ದೂರದಲ್ಲಿರುವ ಹುಲುಗಾರು ಎಂಬ ಗ್ರಾಮದಲ್ಲಿ ಮಲೆನಾಡಿನ ಪ್ರಾಂತದಲ್ಲಿ ಪ್ರಸಿದ್ಧರಾದ ಕಿಗ್ಗದ ಬಿಷ್ಟಪ್ಪಯ್ಯನವರ ವಂಶಸ್ಥರಾದ ಚನ್ನಕೇಶವರಾಯರ ಪ್ರಾರ್ಥನೆಯನ್ನು ಅಂಗೀಕರಿಸಿ ಅವರ ಗೃಹದಲ್ಲಿ ವಸತಿ ಮಾಡಿದರು. ಮಾರನೆಯ ದಿನ ಹುಲುಗಾರು ಚನ್ನಕೇಶವರಾಯರು ಮಾಡಿದ ಪಾದಪೂಜಾ ಭಿಕ್ಷಾದಿಸತ್ಕಾರಗಳನ್ನೂ ಕಾಲಟಿ ಕ್ಷೇತ್ರ ಪರಿಷ್ಕರಣಕ್ಕೆಂದು ಭಕ್ತಿಭಾವದಿಂದ ಆ ಗೃಹಸ್ಥರು ತಮ್ಮ ಸನ್ನಿಧಿಯಲ್ಲಿ ಅರ್ಪಿಸಿದ ಎರಡು ಸಾವಿರ ರೂಪಾಯಿಗಳನ್ನೂ ಸ್ವೀಕರಿಸಿ, ಅನಿರೀಕ್ಷಿತವಾದ ಈ ದ್ರವ್ಯಲಾಭವು ಭಾವಿಕಾರ್ಯಸಿದ್ಧಿಸೂಚಕವೆಂದು ಆನಂದಿಸಿ, ಆ ಶಿಷ್ಯರನ್ನು ಅನುಗ್ರಹಿಸಿ, ಸಾಯಂಕಾಲ ಋಷ್ಯಶೃಂಗ ಮಹರ್ಷಿಗಳ ಆಶ್ರಮವಾದ ಕಿಗ್ಗವೆಂಬ ಕ್ಷೇತ್ರವನ್ನು ಸೇರಿ ಅಲ್ಲಿ ವಸತಿ ಮಾಡಿದರು. ಎರಡನೆಯ ದಿನ ಶ್ರೀ ಋಷ್ಯಶೃಂಗೇಶ್ವರಸ್ವಾಮಿಯನ್ನು ಯಥಾವಿಧಿಯಾಗಿ ಶ್ರೀಗಳವರು ಪೂಜಿಸಿ, ವಸ್ತ್ರಾಭರಣಾದ್ಯುಪಹಾರಗಳಿಂದ ಸತ್ಕರಿಸಿ, ಅಲ್ಲಿಗೆ ಬಂದಿದ್ದ ಶಿಷ್ಯರಿಗೆ ತೀರ್ಥಪ್ರಸಾದಗಳನ್ನಿತ್ತು, ಆ ದಿನ ಅಲ್ಲಿಯೇ ವಸತಿ ಮಾಡಿ, ಮರುದಿನದ ಪ್ರಾತಃಕಾಲದಲ್ಲಿ ಅಲ್ಲಿಂದ ಪ್ರಯಾಣ ಬೆಳೆಯಿಸಿ, ಐದು ಮೈಲಿಗಳ ದೂರದಲ್ಲಿರುವ ನೃಸಿಂಹಪರ್ವತವನ್ನು ಸೇರಿ, ಹಿಂದಿನ ಅಧ್ಯಾಯಗಳಲ್ಲಿ ಹೇಳಿರುವಂತೆ ಆ ಪರ್ವತಶಿಖರದಲ್ಲಿ ಆತ್ಮಾರಾಮರಾಗಿ ಆತ್ಮನಿಷ್ಠೆಯನ್ನು ಕೈಕೊಂಡು ಮಾಘ ಕೃಷ್ಣ ಪಂಚಮಿಯ ಪರ್ಯಂತ ಆ ನೃಸಿಂಹಾಚಲದಲ್ಲಿ ವಸತಿ ಮಾಡಿ, ಆ ಪಂಚಮಿಯ ಸಾಯಂಕಾಲಕ್ಕೆ ಮತ್ತೆ ಶೃಂಗೇರಿಗೆ ತೆರಳಿ ಬಂದರು.

ಶ್ರೀ ಮನ್ಮಹಾರಾಜರವರು ಮೂರನೆಯ ಸಾರಿ ಶೃಂಗೇರಿಗೆ ದಯಮಾಡಿಸಿದ್ದು.

ಮಾರನೆಯ ದಿನದ ಪ್ರಾತಃಕಾಲ 9 ಘಂಟೆಗೆ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಪ್ರಭುಗಳವರು ಮಾತೃಭ್ರಾತೃ ಕಳತ್ರ ಸಹಿತರಾಗಿ ಶ್ರೀಗಳವರ ದರ್ಶನಕ್ಕೆ ಶೃಂಗೇರಿಗೆ ಬಂದರು. ಶ್ರೀಗಳವರ ಆಜ್ಞೆಗನುಸಾರವಾಗಿ ಸಂಸ್ಥಾನದ ಪದ್ಧತಿಯನ್ನನುಸರಿಸಿ ಪ್ರಭುಗಳವರನ್ನು ಅತ್ಯಾದರದಿಂದ ಆಸ್ಥಾನಾಧಿಕಾರಿಗಳೂ ಪುರನಿವಾಸಿಗಳೂ ಪುರದ್ವಾರದಲ್ಲಿ ಎದುರುಗೊಂಡು ಶಿಬಿಕಾರೋಹಣವನ್ನು ಮಾಡಿಸಿ ಮಹೋತ್ಸವದಿಂದ ಶ್ರೀಮಠಕ್ಕೆ ಕರೆತರಲು, ಪ್ರಭುಗಳವರು ಬಹಿರ್ದ್ವಾರದಲ್ಲಿ ಶಿಬಿಕಾವರೋಹಣ ಮಾಡಿ ಪಾದಚಾರಿಗಳಾಗಿ ಶ್ರೀ ಶಾರದಾಂಬೆಯವರ ಆಲಯವನ್ನು ಪ್ರವೇಶಿಸಿ, ಅಮ್ಮನವರ ಸನ್ನಿಧಿಯಲ್ಲಿ ಆಸನಸ್ಥರಾಗಿದ್ದ ಶ್ರೀಗಳವರಿಗೆ ಸಾಷ್ಟಾಂಗ ಪ್ರಣಾಮಗಳನ್ನಾಚರಿಸಿ, ಅವರ ಆಜ್ಞೆಯಂತೆ ಅಮ್ಮನವರ ಸಂದರ್ಶನವನ್ನು ಮಾಡಿ ಗುರುಗಳಿಂದ ಅನುಗ್ರಹೀತವಾದ ಪ್ರಸಾದವನ್ನು ಸ್ವೀಕರಿಸಿ, ಕುಶಲ ಪ್ರಶ್ನೆಗಳು ನಡೆದ ನಂತರ ಶ್ರೀಗಳವರ ಅನುಶಾಸನವನ್ನು ಪಡೆದು ಮಠದ ಒಂದು ಭಾಗದಲ್ಲಿ ಸಿದ್ಧವಾಗಿದ್ದ ಬಿಡಾರಕ್ಕೆ ದಯಮಾಡಿಸಿದರು. ಸಾಯಂಕಾಲ 5 ಘಂಟೆಗೆ ಮಹಾಪ್ರಭುಗಳವರು ತುಂಗಾನದಿಯನ್ನು ದಾಟಿ ಶ್ರೀಗಳವರ ಆಶ್ರಮವಾದ ನರಸಿಂಹವನಕ್ಕೆ ದಯಮಾಡಿಸಿ ಅಂತರಂಗವಾಗಿ ದರ್ಶನ ಮಾಡಿ ಶ್ರೀಗಳವರು ಕೈಕೊಂಡಿದ್ದ ಯಾತ್ರೆಯನ್ನು ತಮ್ಮ ಪ್ರಾರ್ಥನೆಯಂತೆ ಬೆಳೆಸದೆ ನಿಲ್ಲಿಸಿ ತಮಗೆ ಶೃಂಗೇರಿಯಲ್ಲಿ ದರ್ಶನ ಕೊಟ್ಟು ಅನುಗ್ರಹ ಮಾಡಿದ ವಿಷಯದಲ್ಲಿ ಧನ್ಯವಾದಗಳನ್ನು ಅತ್ಯಂತ ವಿನಯಭಾವದಿಂದ ತಿಳಿಸಿಕೊಂಡು ಆನಂದಿಸಲು, ಶ್ರೀಗಳವರು ಮಹಾಕಾರ್ಯೋದ್ದೇಶದಿಂದ ಸಂಕಲ್ಪಿತವಾಗಿರುವ ತಮ್ಮ ಯಾತ್ರೆಗೆ ಆನುಕೂಲ್ಯವನ್ನು ಕಲ್ಪಿಸಿಕೊಟ್ಟು ನಿರ್ವಿಘ್ನವಾಗಿ ತಮ್ಮ ಸಂಕಲ್ಪವನ್ನು ನೆರವೇರಿಸುವುದಕ್ಕೆ ರಾಮಲಕ್ಷ್ಮಣರಂತೆ ತಮ್ಮ ಆಶ್ರಮಕ್ಕೆ ಸಭ್ರಾತೃಕರಾಗಿ ಪ್ರಭುಗಳು ಬಂದಿರುವರೆಂಬ ತಮ್ಮ ಭಾವವನ್ನು ಪ್ರಕಟಗೊಳಿಸಿ ಆನಂದಿಸಿದರು.

ಕರ್ಣಾಟಕ ಸಿಂಹಾಸನವನ್ನಲಂಕರಿಸಿರುವ ಈ ನಾಲ್ವಡಿ ಕೃಷ್ಣರಾಜ ಪ್ರಭುಗಳವರು ಶೃಂಗಗಿರಿ ಮಠದಲ್ಲಿ ಪಟ್ಟಭದ್ರರಾಗಿಯೂ, ಚಿರಕಾಲ ಕಂದಮೂಲಾಶನ ವ್ರತವನ್ನವಲಂಬಿಸಿ ತಪಸ್ಸಿದ್ಧಿಯನ್ನು ಪಡೆದವರಾಗಿಯೂ, ಇದ್ದ ಶ್ರೀನೃಸಿಂಹ ಭಾರತೀಸ್ವಾಮಿಗಳವರ ಪ್ರಸಾದದಿಂದ ಲಬ್ಧರಾದರೆಂದು ಹಿಂದೆ ಹೇಳಿದೆಯಷ್ಟೆ ? ಈ ಪ್ರಭುವರ್ಯರ ಚರ್ಯೆಯು ದುಷ್ಪವಾದ ಈ ಕಲಿಯ ಪ್ರಭಾವದಲ್ಲಿ ಅತ್ಯಂತಾದೃಷ್ಟಪೂರ್ವವಾಗಿಯೂ ಅಶ್ರುತಪೂರ್ವವಾಗಿಯೂ ಇರುವುದು. ವರ್ತಮಾನ ಜನ್ಮದಲ್ಲಿ ಬಾಲ್ಯದಿಂದ ಏರ್ಪಟ್ಟ ಸಹವಾಸವೂ

ಅಭ್ಯಸ್ತವಾದ ವಾಸನೆಯೂ ಬೇರೊಂದು ವಿಧವಾಗಿದ್ದರೂ, ಇವರ ಮನೋಭಾವವೂ ಆಚರಣೆಯೂ ಸ್ಥೈರ್ಯವೂ ಅತ್ಯಂತ ವಿಸ್ಮಯನೀಯವಾಗಿರುವುದು, ಇದರಿಂದ ಪ್ರಭುಗಳಲ್ಲಿ ನೆಲೆಗೊಂಡಿರುವ ಸದ್ಗುಣಗಳಿಗೆ ವರ್ತಮಾನ ಜನ್ಮವಾಸನೆಯು ಕಾರಣವಾಗಲಾರದಾಗಿ ಪ್ರಾಕ್ತವಾಸನೆಯನ್ನೇ ಕಾರಣವೆಂದು ತಿಳಿಯಬೇಕು. ಅದೃಷ್ಟ ವಿಷಯವನ್ನು ನಿರ್ಣಯಿಸುವುದರಲ್ಲಿ ಅನುಮಾನವು ಪ್ರಮಾಣವಲ್ಲದೆ ಬೇರೊಂದಕ್ಕೆ ಅಷ್ಟು ಅವಕಾಶವಿಲ್ಲ ಮತ್ತು ವ್ಯಾಪ್ತಿಗ್ರಹದಿಂದ ನಿಶ್ಚಿತವಾಗಿರತಕ್ಕ ಸದ್ಧೇತುವಿನಿಂದ ಮಾತ್ರ ಸಂದಿಗ್ಧಾರ್ಥದ ನಿರ್ಣಯವಾಗಬೇಕಲ್ಲದೆ ದುಷ್ಟ ಹೇತುವಿನಿಂದ ಆಗುವ ನಿರ್ಣಯವು ದೂಷಿತವೇ ಆಗುವುದು. ನಮ್ಮ ಪ್ರಭುಗಳ ಜನ್ಮಾಂತರೀಯ ಸಂಸ್ಕಾರವನ್ನು ನಿರ್ಣಯಿಸುವುದರಲ್ಲಿ ಇವರಿಗಿರುವ ಆಸ್ತಿಕ್ಯ, ದೈವಭಕ್ತಿ ಸರ್ವಭೂತಕಾರುಣ್ಯ, ವಿಷಯಭೋಗಪರಾಙ್ಮುಖತೆ, ಇವು ಮೊದಲಾದ ಸದ್ಗುಣಗಳೇ ಸದ್ಧೇತು ಗಳಾಗಿರುವುವು. ಇವುಗಳಿಂದ ಈ ಪ್ರಭುಗಳು ಪೂರ್ವಜನ್ಮದಲ್ಲಿ ಬಹಳ ದೂರ ಯೋಗಾಭ್ಯಾಸವನ್ನು ಮಾಡಿದವರೆಂದೂ, ಆ ಅಭ್ಯಾಸವು ಪೂರ್ಣವಾಗುವಷ್ಟರಲ್ಲಿ ಇವರಿಗೆ

ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ

ಎಂಬ ಭಗವದ್ಗೀತಾ ಪ್ರಮಾಣದಂತೆ ನಿಷ್ಕಳಂಕವಾದ ಯದುವಂಶದ ರಾಜರಲ್ಲಿ ಜನ್ಮವು ಬಂದಿರುವುದೆಂದೂ, ಪೂರ್ವಜನ್ಮಾಭ್ಯಾಸದಿಂದ ಈ ಪ್ರಭುಗಳು ಈ ಜನ್ಮದಲ್ಲಿ

ಸ್ವಸುಖನಿರಭಿಲಾಷಃ ಖಿದ್ಯಸೇ ಲೋಕಹೇತೋಃ
ಪ್ರತಿದಿನಮಥವಾ ತೇ ವೃತ್ತಿರೇವಂವಿಧೈವ ।
ಅನುಭವತಿ ಹಿ ಮೂರ್ಧ್ನಾ ಪಾದಪಸ್ತೀವ್ರಮುಷ್ಣಂ
ಶಮಯತಿ ಪರಿತಾಪಂ ಛಾಯಯಾ ಸಂಶ್ರಿತಾನಾಮ್ ॥

ಎಂಬಂತೆ ತಮ್ಮ ಛತ್ರಚ್ಛಾಯೋಪಜೀವಿಗಳಾದ ಪ್ರಜೆಗಳ ರಕ್ಷಣಕ್ಕೋಸ್ಕರವೇ ದುರ್ಧರವಾದ ರಾಜ್ಯಭಾರವನ್ನು ವಹಿಸಿ ಅವರ ಹಿತವನ್ನೇ ಯಾವಾಗಲೂ ಚಿಂತಿಸುತ್ತ ರಾಜರ್ಷಿಗಳಂತೆ ಇರುವರೆಂದು ನಿರ್ಣಯವಾಗುವುದು. ಈ ತತ್ತ್ವವನ್ನು ತಿಳಿದ ಮಹನೀಯರಾದ ಶ್ರೀಗಳವರು ಪ್ರಯತ್ನಪುರಸ್ಸರವಾಗಿ ತಮ್ಮ ದರ್ಶನಕ್ಕೋಸ್ಕರವೇ ಆಶ್ರಮಕ್ಕೆ ಬಂದು ಗುರುಪ್ರಸಾದವನ್ನು ಪಡೆವುದರಲ್ಲಿ ಆಸಕ್ತರಾಗಿದ್ದ ಪ್ರಭುಗಳವರಿಗೆ ಭೋಗಮೋಕ್ಷ ಪ್ರದವಾದ ಶ್ರೀವಿದ್ಯೆಯನ್ನೂ ಕೇವಲ ಮೋಕ್ಷದಾಯಕವಾದ ಶಿವಪಂಚಾಕ್ಷರೀಮಂತ್ರವನ್ನೂ ಉಪದೇಶಿಸಿ, ಸಗುಣೋಪಾಸನೆಗಾಗಿ ಶ್ರೀಚಕ್ರಯಂತ್ರವನ್ನೂ ಶಿವಲಿಂಗವನ್ನೂ ಅನುಗ್ರಹಿಸಿ, ಯಥಾಸೌಕರ್ಯವಾಗಿ ಅವುಗಳನ್ನು ಪೂಜಿಸತಕ್ಕ ರೀತಿಯನ್ನೂ ಸಂಗ್ರಹವಾಗಿ ನಿರೂಪಿಸಿ,

ಜನ್ಮಾಂತರೀಯ ಸಂಸ್ಕಾರಬಲದಿಂದ ಪ್ರಭುಗಳವರಲ್ಲಿ ಅಂಕುರಿತವಾಗಿ ವರ್ತಮಾನಜನ್ಮದ ಸಹವಾಸ ಮತ್ತು ಅಭ್ಯಾಸಗಳಿಂದ ಅಭಿಭೂತವಾಗಿದ್ದ ಸದ್ವಾಸನೆಯನ್ನು ಪ್ರಬಲಪಡಿಸಿದರು. ಅತಿ ಬಾಲ್ಯದಶೆಯಲ್ಲಿ ಯಾಗ ರಕ್ಷಣೆಗೋಸ್ಕರ ಆದಿಷ್ಟರಾಗಿ ತಮ್ಮ ಆಶ್ರಮಕ್ಕೆ ಬಂದ ರಾಮಲಕ್ಷ್ಮಣರಿಗೆ ಅವರ ಸ್ವರೂಪವನ್ನು ತಿಳಿದ ವಿಶ್ವಾಮಿತ್ರಮಹರ್ಷಿಗಳು ಲೋಕಾನುಗ್ರಹಾರ್ಥವಾಗಿ ಅನೇಕಮಂತ್ರಗಳನ್ನು ಉಪದೇಶಿಸಿದಂತೆ ಶ್ರೀಗಳವರು ನಮ್ಮ ಪ್ರಭುಗಳ ಸ್ವರೂಪವನ್ನು ಚೆನ್ನಾಗಿ ತಿಳಿದು ಲೋಕಾನುಗ್ರಹಾರ್ಥವಾಗಿಯೇ ಅವರಿಗೆ ಮಹಾಮಂತ್ರವನ್ನು ಉಪದೇಶಿಸಿದರೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಸುಕ್ಷೇತ್ರದಲ್ಲಿ ಸಕಾಲದಲ್ಲಿ ಬಿತ್ತಿದ ಬೀಜವು ಬಹುವಾಗಿ ಫಲಿಸುವುದೆಂಬ ವಿಷಯವು ಸರ್ವಾನುಭವಸಿದ್ಧವಾಗಿಯೇ ಇರುವುದು. ಕ್ಷೇತ್ರವೂ ಬೀಜವೂ ಬೀಜಹಾಕುವವರೂ ಎಲ್ಲವೂ ಸರ್ವೋತ್ತಮವಾದರೆ ಅದರಿಂದ ಉಂಟಾಗುವ ಫಲವು ಹೇಗಿರುವುದೆಂಬ ವಿಷಯದಲ್ಲಿ ಸಂದೇಹಕ್ಕೆ ಅವಕಾಶವೆಲ್ಲಿರುವುದು? ಮೇಲೆ ಹೇಳಿರುವಂತೆ ಸ್ವಭಾವವಾಗಿ ಮಹಾ ಪ್ರಭುಗಳ ಜನ್ಮಾಂತರೀಯವಾದ ಸದ್ವಾಸನಾಬಲದಿಂದ ಅವರಲ್ಲಿ ನೆಲೆಗೊಂಡಿದ್ದ ಮೈತ್ರ್ಯಾದಿ ಸದ್ಗುಣಗಳು ಮಹರ್ಷಿಸಮರಾದ ಶ್ರೀಗಳವರ ಅನುಗ್ರಹದಿಂದ ಪ್ರತಿಯೊಂದು ನಿಮಿಷದಲ್ಲಿಯೂ ಶಾಖೋಪಶಾಖವಾಗಿ ವೃದ್ಧಿಹೊಂದಿ ಸರ್ವತೋಮುಖವಾಗಿ ಪ್ರವರ್ತಿಸುತ್ತಲಿರುವುವು. ಈ ಪ್ರಭುಗಳವರ ಗಮನಕ್ಕೆ ಬಂದು ಜರುಗಿಸಲ್ಪಡುತ್ತಿರುವುವು. ಸನಾತನಧರ್ಮರಕ್ಷಕವಾದ ವೇದಶಾಸ್ತ್ರದ ಪ್ರಚಾರಕ್ಕೆ ಈ ಧರ್ಮಪ್ರಭುಗಳವರಿಂದ ಮೊದಲಿಗಿಂತಲೂ ಶತಾಂಶಾಧಿಕವಾಗಿ ಉತ್ತೇಜನವು ಕೊಡಲ್ಪಟ್ಟಿದೆ. ವೇದ ಶಾಸ್ತ್ರಾಧ್ಯಯನಮಾಡತಕ್ಕ ವಿದ್ಯಾರ್ಥಿಗಳಿಗೆ ಅನೇಕ ವಿಧವಾದ ಸೌಕರ್ಯಗಳನ್ನು ಕಲ್ಪಿಸುವುದರಿಂದಲೂ, ಅಭ್ಯಸ್ತಭಾಗದಲ್ಲಿ ಪರೀಕ್ಷೆಕೊಟ್ಟು ತೇರ್ಗಡೆಹೊಂದಿರತಕ್ಕವರನ್ನು ರಾಜಸಭೆಗೆ ಬರಮಾಡಿಕೊಂಡು ಸನ್ಮಾನವನ್ನು ಮಾಡುವುದರಿಂದಲೂ, ಪಂಡಿತರಿಗೆ ಹೆಚ್ಚಾದ ಗೌರವವನ್ನು ಕೊಟ್ಟು ಅವರ ಜೀವನ ನಿರ್ವಾಹಕ್ಕೆ ರಾಜಭವನದಿಂದ ಮತ್ತು ಪಾಠಶಾಲೆಯಿಂದ ಪರ್ಯಾಪ್ತವಾಗಿ ಮಾಸಾಶನವನ್ನು ಕೊಡಿಸುವುದರಿಂದಲೂ, ಅನರ್ಘವಾದ ವಸ್ತ್ರಾಭರಣಗಳನ್ನು ಕೊಟ್ಟು ಬಿರುದುಗಳನ್ನು ದಯಪಾಲಿಸುವುದರಿಂದಲೂ, ವೇದಶಾಸ್ತ್ರಪ್ರಚಾರವನ್ನು ಅಭಿವೃದ್ಧಿಪಡಿಸುತ್ತಲಿರುವರು. ಧರ್ಮಸ್ಥಾಪಕರಾದ ಆಚಾರ್ಯಪರಂಪರೆಯಲ್ಲಿ ಬಂದ ಮಠಾಧಿಪತಿಗಳ ವಿಷಯದಲ್ಲಿ ತಮ್ಮ ಪ್ರೀತಿಗೌರವಗಳನ್ನು ನಾನಾವಿಧದಿಂದ ಪ್ರಕಟಗೊಳಿಸುತ್ತಲಿರುವರು. ರಾಜ್ಯಸಂಬಂಧವಾದ ಮಹಾಲೌಕಿಕಕಾರ್ಯಭಾರವನ್ನು ವಹಿಸಿದವರಾಗಿದ್ದರೂ ಅದರ ಶ್ರಮವನ್ನು ಗಮನಿಸದೆ ಜನಕಮಹಾರಾಜರಂತೆ ನಿರ್ಲೇಪರಾಗಿದ್ದು ಉಪಾಸನೆ, ವಿಚಾರ, ಕರ್ಮಾನುಷ್ಠಾನಗಳನ್ನು ಬಹಳ ಆದರದಿಂದ ನಿಶ್ಚಲಚಿತ್ತರಾಗಿ ನಡೆಸಿಕೊಂಡು ಬರುತ್ತಲಿರುವರು. ಇಂತಹ

ರಾಜರ್ಷಿಗಳು ಈ ಕಾಲದಲ್ಲಿ ಅತಿವಿರಳವೆಂದು ನಿಶ್ಶಂಕವಾಗಿ ಹೇಳಬಹುದು. ಇಂತಹ ಪರಿಶುದ್ಧ ಚಾರಿತ್ರವುಳ್ಳ ಪ್ರಭುಗಳಿಂದಲೇ ಅನುಕೂಲಕಾಲವು ಒದಗಿ ಬಂದಲ್ಲಿ ಅಧರ್ಮಪ್ರಾಬಲ್ಯದಿಂದ ಅಭಿಭೂತವಾಗಿರುವ ವೇದೋಕ್ತಧರ್ಮವು ಪ್ರಾಮುಖ್ಯವನ್ನು ಪಡೆದು ಅದರಿಂದ ಪ್ರಪಂಚವು ರಕ್ಷಿತವಾಗುವುದೆಂದು ಆಸ್ತಿಕರೂ, ಅಧರ್ಮಭೀರುಗಳೂ ತತ್ಪ್ರತಿವಿಧಾನಾಸಮರ್ಥರೂ ಆಗಿ ವ್ಯಸನಪಡುತ್ತಲಿರುವ ಜನರು ಕಾಲನಿರೀಕ್ಷಣೆಯಿಂದ ಧಾರಾಳವಾಗಿ ಸಮಾಧಾನವನ್ನು ಹೊಂದಬಹುದು. ಬಳಿಕ ಪ್ರಭುಗಳವರು ಶ್ರೀಗಳವರಿಂದ ಅನನ್ಯ ಸಾಧಾರಣವಾದ ಅನುಗ್ರಹವನ್ನು ಪಡೆದು ಶ್ರೀಗಳವರ ಯಾತ್ರೆಗಾಗಿ ಬೇಕಾದ ಅನುಕೂಲಗಳನ್ನು ತಮ್ಮ ಅಧಿಕಾರಿಗಳ ಮುಖದಿಂದ ಕಲ್ಪಿಸಿಕೊಟ್ಟು ಶ್ರೀಗಳವರ ಆಗಮನವನ್ನು ರಾಜಧಾನಿಯಲ್ಲಿ ನಿರೀಕ್ಷಿಸುತ್ತಿರುವುದಾಗಿ ಶ್ರೀಗಳವರಲ್ಲಿ ವಿಜ್ಞಾಪಿಸಿ ರಾಜಧಾನಿಯನ್ನು ಕುರಿತು ಪ್ರಯಾಣಮಾಡಿದರು.

ಶ್ರೀಗಳವರು ಎರಡನೆಯಸಾರಿ ಬೆಂಗಳೂರಿಗೆ ಚಿತ್ತೈಸಿದ್ದು.

ಮಹಾಶಿವರಾತ್ರಿಯು ಸಮೀಪಿಸಿದ್ದುದರಿಂದ ಮಹಾಕ್ಷೇತ್ರವಾದ ಶೃಂಗೇರಿಯಲ್ಲಿಯೇ ಶ್ರೀಗಳವರು ಆಗಂತುಕರಂತೆ ವಸತಿಮಾಡಿ ಶಿವರಾತ್ರ್ಯುತ್ಸವವನ್ನು ಪೂರ್ಣಮಾಡಿಕೊಂಡು ಅದೇ ಪರಾಭವ ಸಂವತ್ಸರದ ಫಾಲ್ಗುಣ ಶುದ್ಧಪಂಚಮಿಯಲ್ಲಿ ಶೃಂಗೇರಿಯಿಂದ ಮುಂದಕ್ಕೆ ಪ್ರಯಾಣ ಬೆಳೆಸಿದರು. ಮಾರ್ಗವಶದಿಂದ ಕಡೂರು, ಹಾಸನ, ತುಮಕೂರು ಈ ಡಿಸ್ಟ್ರಿಕ್ಟುಗಳಲ್ಲಿ ಸಂಚರಿಸಿ ಅಲ್ಲಲ್ಲಿ ಶಿಷ್ಯಮಂಡಲಿಯನ್ನು ಅನುಗ್ರಹಿಸುತ್ತ ಬೆಂಗಳೂರನ್ನು ಕುರಿತು ಬರುವಾಗ ಶ್ರೀಗಳವರ ವಿಷಯದಲ್ಲಿ ಶ್ರೀ ಮನ್ಮಹಾರಾಜರವರಿಗಿದ್ದ ಭಕ್ತಿಗೌರವಗಳಿಗೆ ಅನುಸಾರವಾಗಿ ರಾಜಕೀಯಾಧಿಕಾರಿಗಳೆಲ್ಲರೂ ಅವರವರ ಅಧಿಕಾರಕ್ಕೆ ಒಳಪಟ್ಟ ಸ್ಥಳಗಳಲ್ಲಿ ಅತ್ಯಾದರದಿಂದ ಕಾದಿದ್ದು ಶ್ರೀಗಳವರಿಗೂ ಅವರ ಪರಿಜನರಿಗೂ ಎಲ್ಲಾ ವಿಧವಾದ ಸೌಕರ್ಯಗಳನ್ನೂ ಕಲ್ಪಿಸಿ ಅನುಗ್ರಹಭಾಜನರಾದರು. ಮೈಸೂರು ಸಂಸ್ಥಾನದಲ್ಲಿ ಬೆಂಗಳೂರು ಬಹಳ ಮುಖ್ಯವಾದ ನಗರವು. ಈ ಪಟ್ಟಣವು ಸಮುದ್ರದ ಮಟ್ಟಕ್ಕಿಂತ ಮೂರುಸಾವಿರ ಅಡಿಗಳ ಎತ್ತರದಲ್ಲಿರುವುದರಿಂದ ಆರೋಗ್ಯವಿಷಯದಲ್ಲಿ ಪ್ರಸಿದ್ಧಿಯನ್ನು ಹೊಂದಿರುವುದು. ಈ ನಗರವು ಮದ್ರಾಸು ಬೊಂಬಾಯಿ ಆಧಿಪತ್ಯಗಳಿಗೆ ಮಧ್ಯಪ್ರದೇಶದಲ್ಲಿದ್ದು ವಾಣಿಜ್ಯಕ್ಕೂ ಜನಗಳ ವಸತಿಗೂ ಬಹಳ ಅನುಕೂಲವಾಗಿರುವುದು. ರಾಜಕೀಯ ಮುಖ್ಯಾಧಿಕಾರ ಸ್ಥಾನಗಳೆಲ್ಲವೂ ಇಲ್ಲಿರುವುದರಿಂದ ರಾಜಮಂತ್ರಿಗಳೇ ಮೊದಲಾದ ಮುಖ್ಯಾಧಿಕಾರಿಗಳೆಲ್ಲರೂ ಈ ನಗರವು ನಿವಾಸಸ್ಥಾನವಾಗಿದೆ. ಇದಕ್ಕಿರುವ ಕಲ್ಯಾಣನಗರ ಎಂಬ ಹೆಸರು ಅನ್ವರ್ಥವು. ಈ ಕಲ್ಯಾಣಪುರಿಯಲ್ಲಿ ವಿಶಾಲವಾದ ಒಂದು ಮಠವನ್ನು ಕಲ್ಪಿಸಿ ಆ ಮಠದಲ್ಲಿ ತಕ್ಕಮಟ್ಟಿಗೆ

ಪುಸ್ತಕಕೋಶವನ್ನು ಸಂಗ್ರಹಿಸಿ, ಸಂಪ್ರತಿಪನ್ನರಾದ ಪಂಡಿತರನ್ನು ನಿಯಮಿಸಿ, ಅವರ ಮೂಲಕ ಜ್ಞಾನವನ್ನು ಪಡೆಯಬೇಕೆಂಬ ಸ್ಥಳವಾಸಿಗಳಿಗೂ, ಕಾರ್ಯಾಂತರಗಳಿಂದ ಬರತಕ್ಕ ಪರಸ್ಥಳದ ಜನರಿಗೂ ಪ್ರವೃತ್ತಿ ನಿವೃತ್ತಿ ಧರ್ಮಗಳನ್ನು ಬೋಧಿಸುವಂತೆ ವ್ಯವಸ್ಥೆಯನ್ನು ಮಾಡಿದರೆ ಇದರಿಂದ ಶಿಷ್ಯಕೋಟಿಗಳಿಗೆ ಬಹಳ ಪ್ರಯೋಜನವಾಗುವುದೆಂದೂ, ಈ ವಿಷಯದಲ್ಲಿ ಶಿಷ್ಯರಲ್ಲನೇಕರು ಸಹಾಯಕರಾಗಿರಲು ಆಶೆಪಡುವರೆಂದೂ, ದಿವಾನ್ ಸರ್ ಶೇಷಾದ್ರಯ್ಯರು ಒಂದು ಸಮಯದಲ್ಲಿ ಶ್ರೀಗಳವರಲ್ಲಿ ತಿಳಿಸಿಕೊಂಡಿದ್ದರು. ದಿವಾನ್ ಬಹದ್ದೂರ್ ಗುರುಭಕ್ತಕೇಸರಿ ಎ. ರಾಮಚಂದ್ರಯ್ಯರೂ ಶ್ರೀಗಳವರು ವರ್ಷಕ್ಕೆ ಒಂದು ಸಾರಿ ಬೆಂಗಳೂರಿಗೆ ದಯಮಾಡಿಸಿ ಒಂದೆರಡು ತಿಂಗಳಕಾಲ ವಸತಿಮಾಡಿ ಶಿಷ್ಯರುಗಳಿಗೆ ದರ್ಶನಕೊಟ್ಟು ಹಿತಬೋಧನೆಯನ್ನು ಮಾಡುತ್ತ ಬಂದಲ್ಲಿ, ಅದರಿಂದ ಶಿಷ್ಯಜನರು ಬಹಳ ಪ್ರಯೋಜನವನ್ನು ಹೊಂದುವರೆಂದೂ, ಶ್ರೀಗಳವರು ವಸತಿಮಾಡುವುದಕ್ಕೂ ಧರ್ಮಮಾರ್ಗ ಪ್ರಸರಣ ಕಾರ್ಯವನ್ನು ನಿರಂತರವಾಗಿ ಜರುಗಿಸುವುದಕ್ಕೂ ಎಲ್ಲಾ ವಿಧವಾದ ಸೌಕರ್ಯಗಳಿಂದ ಕೂಡಿದ್ದಾಗಿ ಕಟ್ಟಿಸಿರುವ ತನ್ನ ವಿಶಾಲವಾದಗೃಹವನ್ನು ಶ್ರೀಗಳವರಿಗೆ ಅರ್ಪಿಸುವುದರಲ್ಲಿ ತಾನು ಸಿದ್ಧನಾಗಿರುವೆನೆಂದೂ ಒಂದು ಸಮಯದಲ್ಲಿ ಶ್ರೀಗಳವರ ಸನ್ನಿಧಾನದಲ್ಲಿ ವಿಜ್ಞಾಪಿಸಿಕೊಂಡಿದ್ದರು. ಶ್ರೀಗಳವರು ಬೆಂಗಳೂರಿಗೆ ಬಿಜಯಮಾಡಿದ ಸಂದರ್ಭದಲ್ಲಿ ವಿಶ್ವನಾಥ ಮಾಧವ ರಾವ್ ಪಾಟಂಕರವರು ಮೈಸೂರು ಸಂಸ್ಥಾನದ ಅಮಾತ್ಯ ಪದವಿಯನ್ನು ವಹಿಸಿದ್ದರು. 1885 ನೆಯ ಇಸವಿ ಪಾರ್ಥಿವ ಸಂವತ್ಸರದಲ್ಲಿ ಇವರು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರಾಗಿದ್ದ ಕಾಲದಲ್ಲಿ ಶ್ರೀಗಳವರು ಗೋಕರ್ಣಕ್ಷೇತ್ರ ಯಾತ್ರೆಗಾಗಿ ಪ್ರಯಾಣಮಾಡಿ ಶಿವಮೊಗ್ಗೆಗೆ ಬರುವ ಸಂಭವವು ಒದಗಿತು. ಆ ಸಂದರ್ಭದಲ್ಲಿ ಶ್ರೀಗಳವರ ದರ್ಶನವಾಗಿ ಅದು ಮೊದಲುಗೊಂಡು ಶ್ರೀಗಳವರ ವಿಷಯದಲ್ಲಿ ಮಾಧವರಾಯರಿಗೆ ಭಕ್ತಿಗೌರವಗಳು ಏರ್ಪಟ್ಟು ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿ ಗುರುಪ್ರಸಾದಫಲವನ್ನೂ ಅನುಭವಿಸಿದವರಾಗಿದ್ದರು. ಇವರು ಕಾಲಟಿಕ್ಷೇತ್ರಪರಿಷ್ಕಾರಕಾರ್ಯದಲ್ಲಿ ಶ್ರೀಗಳವರಿಗೆ ಮುಖ್ಯವಾದ ಒಂದು ಬಾಹ್ಯಾಂಗವಾಗಿ ಏರ್ಪಟ್ಟಿದ್ದರೆಂಬ ವಿಷಯವನ್ನು ಹಿಂದೆ ಸೂಚಿಸಿದ್ದಾಗಿದೆಯಷ್ಟೆ? ಶ್ರೀಗಳವರು ಕಾಲಟಿ ಕ್ಷೇತ್ರಯಾತ್ರೆಗೋಸ್ಕರ ಬೆಂಗಳೂರು ಮಾರ್ಗವಾಗಿ ಪ್ರಯಾಣ ಮಾಡುವುದನ್ನು ತಿಳಿದು ಇವರು ಶ್ರೀಗಳವರ ಸೇವೆಯಿಂದ ಕೃತಾರ್ಥತೆಯನ್ನು ಪಡೆಯತಕ್ಕ ಸಮಯವು ಒದಗಿತೆಂದು ಆನಂದಪಟ್ಟು ಅತ್ಯಾದರದಿಂದ ಶ್ರೀಗಳವರ ಆಗಮನವನ್ನು ನಿರೀಕ್ಷಿಸುತ್ತಲಿದ್ದರು. ಶೃಂಗಗಿರಿ ಶ್ರೀಮಠಕ್ಕೆ ದೀರ್ಘಕಾಲದಿಂದ ಮೈಸೂರು ಸಂಸ್ಥಾನದಲ್ಲಿ ಏರ್ಪಟ್ಟಿರುವ ಉತ್ತಮ ತರಗತಿಯ ರಾಜಮರ್ಯಾದೆಗಳಿಂದ ಶ್ರೀಗಳವರನ್ನು ಬೆಂಗಳೂರು ನಗರಕ್ಕೆ ಬರಮಾಡಿಕೊಳ್ಳಲು ರಾಜಾಜ್ಞೆಯಿಂದ ವ್ಯವಸ್ಥೆಗಳೆಲ್ಲವೂ

ಮಾಡಲ್ಪಟ್ಟಿದ್ದವು. ಶ್ರೀಗಳವರು ಬಿಜಯ ಮಾಡಿದ ಕೂಡಲೆ, ಶ್ರೀಗಳವರ ವಸತಿಗಾಗಿ ರಾಜಾಜ್ಞೆಯಿಂದ ಎಲ್ಲಾ ವಿಧವಾದ ಅನುಕೂಲಗಳನ್ನೂ ಕಲ್ಪಿಸಿರುವುದಾಗಿಯೂ, ಹಾಗಿದ್ದರೂ ಪ್ರತ್ಯವಾಯವಿಲ್ಲವೆಂದು ಶ್ರೀಗಳವರು ಅಭಿಪ್ರಾಯಪಡುವುದಾದರೆ ತನ್ನ ಗೃಹವನ್ನು ಶ್ರೀಗಳವರ ಪಾದರಜಸ್ಸಿನಿಂದ ಪರಿಶುದ್ಧಮಾಡಿ ಅನುಗ್ರಹಿಸಬೇಕೆಂಬುದಾಗಿಯೂ ಮಾಧವರಾಯರು ಪ್ರಾರ್ಥಿಸಿಕೊಂಡರು. ಇವರ ಪ್ರಾರ್ಥನೆಯನ್ನಂಗೀಕರಿಸುವುದು ಸಮಸ್ತ ಶಿಷ್ಯಮಂಡಲಿಗೂ ಅಭಿಮತವೆಂದು ತೋರಿ, ಶಾ|| 1830ನೆಯ ಪ್ಲವಂಗ ಸಂವತ್ಸರದ ನಿಜಚೈತ್ರ ಶುಕ್ಲ ತ್ರಯೋದಶೀ ಶುಕ್ರವಾರದಲ್ಲಿ (10-5-1907) ಬೆಂಗಳೂರು ನಗರವನ್ನು ಪ್ರವೇಶಿಸಿ ರಾಯರ ಪ್ರಾರ್ಥನೆಯಂತೆ ಪಾಟನ್ ಭವನದಲ್ಲಿ ವಸತಿಮಾಡಿದರು.

ಬೆಂಗಳೂರಲ್ಲಿ ಮಠನಿರ್ಮಾಣ ಮತ್ತು ಅಲ್ಲಿ ಆಚಾರ್ಯ ಪ್ರತಿಷ್ಠೆ.

ಈ ಸಂದರ್ಭದಲ್ಲಿ ಕಲ್ಯಾಣಪುರಿಯಲ್ಲೊಂದು ಮಠವನ್ನು ನಿರ್ಮಿಸುವುದು ಅತ್ಯಾವಶ್ಯಕವೆಂದು ವಿಷಯವನ್ನು ಮಾಧವರಾಯರೂ ಶ್ರೀಗಳವರ ಸನ್ನಿಧಿಯಲ್ಲಿ ಪ್ರಸ್ತಾಪಿಸಿ ಆ ಮಠದಲ್ಲಿ ಶ್ರೀಮದಾಚಾರ್ಯಮೂರ್ತಿ ಪ್ರತಿಷ್ಠೆಯನ್ನು ಮಾಡಬೇಕೆಂದೂ, ಮಠ ನಿರ್ಮಾಣಕಾರ್ಯವನ್ನು ಶ್ರೀಗಳವರು ಬೆಂಗಳೂರಲ್ಲಿರುವಾಗಲೇ ಆರಂಭಿಸಬೇಕೆಂದೂ, ಮಠನಿರ್ಮಾಣಕ್ಕೆ ವಿಶಾಲವೂ ನಿರ್ಮಲವೂ ಆದ ಪ್ರದೇಶವನ್ನು ಒದಗಿಕೊಡುವೆನೆಂದೂ ಶ್ರುತಪಡಿಸಿದರು. ಈ ಸಮಯದಲ್ಲಿ ರಾಮಚಂದ್ರಯ್ಯರೂ ಶ್ರೀಗಳವರ ದರ್ಶನಕ್ಕೆ ಬಂದು ಬೆಂಗಳೂರಲ್ಲಿ ಒಂದು ಮಠವನ್ನು ಕಲ್ಪಿಸುವ ವಿಷಯವಾಗಿ ತಾನು ಶ್ರೀಗಳವರಲ್ಲಿ ಹಿಂದೆ ವಿಜ್ಞಾಪಿಸಿದ್ದನ್ನು ಮತ್ತೆ ಸ್ಮರಣೆಗೆ ತಂದು, ಪುರನಿವಾಸಿಗಳೇ ಮೊದಲಾದ ಬಹುಜನರ ಅಭಿಪ್ರಾಯದಂತೆ ಜನಸೌಕರ್ಯಾನುಗುಣವಾಗಿ ಅನುಕೂಲವಾದ ಸ್ಥಳದಲ್ಲಿ ಮಠವನ್ನು ನಿರ್ಮಿಸುವುದಾದರೆ ಅದು ತನಗೆ ಸಮ್ಮತವಾದುದೆಂದೂ, ತನ್ನ ಪೂರ್ವಸಂಕಲ್ಪದಂತೆ ಈ ಕಾರ್ಯಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ತಾನು ಅರ್ಪಿಸುವೆನೆಂದೂ, ಅದನ್ನು ಸ್ವೀಕರಿಸಿ ಶ್ರೀಗಳವರು ಬೆಂಗಳೂರಲ್ಲಿರುವ ಕಾಲದಲ್ಲಿಯೇ ಮಠನಿರ್ಮಾಣ ಕಾರ್ಯವನ್ನಾರಂಭಿಸಲು ಅನುಜ್ಞೆಯಿತ್ತು ಮುಂದೆ ಪ್ರಯಾಣವನ್ನು ಕೈಕೊಳ್ಳಬೇಕೆಂದೂ ಪ್ರಾರ್ಥಿಸಿದರು. ಒಂದೇ ವಿಧವಾದ ಪ್ರಾರ್ಥನೆಯನ್ನು ಅಸಕೃದಾವೃತ್ತಿ ಊಹಾಪೋಹವಿಚಕ್ಷಣರೂ, ಸದ್ಧರ್ಮ ಸದಾಚಾರಾಸ್ಥರೂ ಆದ ಬಹುಮಂದಿ ಶಿಷ್ಯರು ತಮ್ಮಲ್ಲಿ ತಿಳಿಸಿಕೊಳ್ಳುತ್ತ ಬಂದುದರಿಂದ, ಶ್ರೀಗಳವರು ಶಿಷ್ಯಜನರ ಪ್ರಾರ್ಥನೆಯನ್ನು ನೆರವೇರಿಸುವುದು ತಮಗೆ ಕರ್ತವ್ಯವೆಂದೂ ಅನುಕೂಲ ಸಮಯವು ಒದಗಿರುವುದೆಂದೂ ನಿಶ್ಚಯಿಸಿ, ತತ್ಕಾಲದಲ್ಲಿ ಮೈಸೂರು ಸಂಸ್ಥಾನದ

ಮುಖ್ಯಾಧಿಕಾರಿಗಳೂ ತಮ್ಮ ಅನುಗ್ರಹಭಾಜನರೂ ತಮ್ಮ ಸಂಕಲ್ಪವನ್ನು ನೆರವೇರಿಸುವುದರಲ್ಲಿ ಉತ್ಸಾಹಿಗಳೂ ಆಗಿದ್ದ ಮಾಧವರಾಯರನ್ನೇ ಮಠನಿರ್ಮಾಣ ಕಾರ್ಯದಲ್ಲಿ ನಿಯೋಜಿಸಿ, ಪುರಜನರಿಗೆ ಅನುಕೂಲವಾಗಿ ಪಟ್ಟಣದ ಎಲ್ಲಾ ಭಾಗಗಳಿಗೂ ಮಧ್ಯಸ್ಥವಾಗಿರುವ ಸ್ಥಳವನ್ನು ಸಂಪಾದಿಸಿಕೊಟ್ಟು ಅಲ್ಲಿ ಮುಂದಾಗಿ ಒಂದು ಆಲಯವನ್ನು ಶ್ರೀಮದಾಚಾರ್ಯ ಮೂರ್ತಿಪ್ರತಿಷ್ಠೆಗಾಗಿ ಸಿದ್ಧಪಡಿಸಬೇಕೆಂದೂ, ಕಾಲಕ್ರಮದಿಂದ ವಿಶಾಲವಾದ ಮಠದ ಕಟ್ಟಡವನ್ನು ಕಟ್ಟಿಸಬಹುದೆಂದೂ ಮಾಧವರಾಯರಿಗೆ ನಿರೂಪಿಸಿದರು. ಗುರ್ವಾಜ್ಞಾಪಾಲನೆಯಲ್ಲಿಯೂ, ಜನರ ಅನುಕೂಲಕ್ಕೋಸ್ಕರ ನಗರದ ಬಡಾವಣೆಯಾದ ಚಾಮರಾಜಪೇಟೆಗೂ ಬಸವನಗುಡಿಗೂ ಮಧ್ಯದಲ್ಲಿ ತರುಲತಾ ಗುಲ್ಮಗಳಿಂದ ಆವೃತವಾಗಿಯೂ ದುಷ್ಟಜಂತುಗಳಿಗೆ ವಾಸಯೋಗ್ಯವಾಗಿಯೂ ಜನರಿಗೆ ಪೀಡಾಕರವಾಗಿಯೂ ಕಂಡುಬಂದ ಪ್ರದೇಶವನ್ನು ಪರಿಷ್ಕರಿಸಿ, ಹೊಸ ಬಡಾವಣೆಗೆ ಆ ಪ್ರದೇಶವನ್ನು ಉಪಯೋಗಿಸಿದಲ್ಲಿ ಜನಗಳ ಶ್ರೇಯಸ್ಸಿಗಾಗಿ ಶ್ರೀಗಳವರಿಂದ ಸಂಕಲ್ಪಿಸಲ್ಪಟ್ಟಿರುವ ಆಚಾರ್ಯಮಂದಿರ ಮಠ ನಿರ್ಮಾಣಕಾರ್ಯಕ್ಕೂ, ಪುರನಿವಾಸಿಗಳು ಗೃಹಗಳನ್ನು ಕಟ್ಟಿಕೊಂಡು ವಾಸಮಾಡುವುದಕ್ಕೂ ಅನುಕೂಲವಾಗುವುದೆಂದು ನಿಶ್ಚಯಿಸಿ, ರಾಜಾಜ್ಞೆಯಿಂದ ಆ ಪ್ರದೇಶವನ್ನು ಪೂರ್ಣವಾಗಿ ಸರಕಾರಕ್ಕೆ ಅಧೀನ ಮಾಡಿಕೊಂಡು ಹೇರಳವಾದ ದ್ರವ್ಯವ್ಯಯದಿಂದ ಬಡಾವಣೆಯ ಕಾರ್ಯವನ್ನು ನೆರವೇರಿಸುವಂತೆಯೂ, ಆ ಪ್ರದೇಶದಲ್ಲಿ ಶ್ರೀಮಠದವರು ಅಪೇಕ್ಷಿಸುವಂತೆ ಸ್ಥಳವನ್ನು ಮಠದ ಕಟ್ಟಡಕ್ಕೆ ಕೊಟ್ಟು ಉಳಿದ ಭಾಗವನ್ನು ಪುರಜನರಿಗೆ ವಿನಿಯೋಗಿಸುವಂತೆಯೂ ವ್ಯವಸ್ಥೆಮಾಡಿದರು. ಆಚಾರ್ಯಾಲಯಕಾರ್ಯವು ಬಹುಕ್ಷಿಪ್ರವಾಗಿ ಪೂರೈಸಿ ಆಚಾರ್ಯಮೂರ್ತಿಪ್ರತಿಷ್ಠೆಯಾದನಂತರ ಶ್ರೀಗಳವರ ಪ್ರಯಾಣವು ಮುಂದೆ ಜರುಗಬೇಕಾಗಿದ್ದುದರಿಂದ ಆ ಕಾರ್ಯಕ್ಕೆ ಬೇಕಾದ ಸಾಮಗ್ರಿಗಳನ್ನು ತಮ್ಮ ಗೃಹದಿಂದ ಕಳುಹಿಸಿ ಕಾರ್ಯಕ್ಕೆ ಪ್ರಾರಂಭಿಸಿ ಎರಡು ವಾರಗಳಲ್ಲಿ ಆಲಯಕಾರ್ಯವನ್ನು ಪೂರ್ತಿಮಾಡಿಸಿ ಶ್ರೀಗಳವರ ಸನ್ನಿಧಿಯಲ್ಲಿ ಆಚಾರ್ಯಾಲಯವು ಸಿದ್ಧವಾಗಿರುವುದೆಂದು ತಿಳಿಸಿಕೊಂಡರು. ರಾಯರ ಉತ್ಸಾಹಕ್ಕೂ ಅವರ ಕಾರ್ಯದಕ್ಷತೆಗೂ ಆಶ್ಚರ್ಯಗೊಂಡು, ಕಾಲಟಿ ಕ್ಷೇತ್ರದಲ್ಲಿ ಪ್ರತಿಷ್ಠೆ ಮಾಡುವುದಕ್ಕೋಸ್ಕರ ಸಿದ್ಧಪಡಿಸಿದ್ದ ಅಮೃತಶಿಲಾಮಯವಾದ ಆಚಾರ್ಯಮೂರ್ತಿಯನ್ನು ಪ್ಲವಂಗ ಸಂವತ್ಸರದ ವೈಶಾಖ ಕೃಷ್ಣದ್ವಾದಶೀ ಶುಕ್ರವಾರದಲ್ಲಿ ವೈದಿಕ ವಿಧಾನದಿಂದ ಪ್ರತಿಷ್ಠಿಸಿ, ಆ ದಿನ ಚಂದ್ರಮೌಳೀಶ್ವರಾದಿದೇವತಾರಾಧನೆಯನ್ನೂ ಅಲ್ಲಿಯೇ ನೆರವೇರಿಸಿ, ಶಿಷ್ಯಮಂಡಲಿಗೆ ತೀರ್ಥಪ್ರಸಾದಗಳನ್ನಿತ್ತು, ಮೃಷ್ಟಾನ್ನ ದಾನದಿಂದ ಬ್ರಾಹ್ಮಣಸುವಾಸಿನಿಯರನ್ನು ತೃಪ್ತಿಗೊಳಿಸಿದರು. ಬೆಂಗಳೂರು ಪಟ್ಟಣದಲ್ಲಿ ಬಹುಮಂದಿ ಶಿಷ್ಯಜನರು ನಿಬಿಡವಾಗಿರುವುದರಿಂದ ಅವರು ಪ್ರಾರ್ಥಿಸಿದ ಮೇರೆಗೆ ಅವರ ಸತ್ಕಾರಗಳನ್ನು ಸ್ವೀಕರಿಸಿ ಅನುಗ್ರಹಿಸು

ವುದಕ್ಕೂ, ಜನರ ಅಭ್ಯುದಯಕ್ಕೋಸ್ಕರ ಶ್ರೀಮದಾಚಾರ್ಯಮೂರ್ತಿ ಪ್ರತಿಷ್ಠಾಕಾರ್ಯವನ್ನು ನೆರವೇರಿಸುವುದಕ್ಕೂ ದೀರ್ಘಕಾಲ ಆ ನಗರದಲ್ಲಿ ವಸತಿಮಾಡಬೇಕಾದ ಆವಶ್ಯಕತೆಯುಂಟಾಯಿತು. ಈ ಕಾರ್ಯವನ್ನು ಭಕ್ತಪರಾಧೀನರಾದ ಶ್ರೀಗಳವರು ಸಕಲ ಜನರಿಗೂ ತೃಪ್ತಿಯಾಗುವಂತೆ ನೆರವೇರಿಸಿ, ಆಚಾರ್ಯಮಹಿಮೆಯನ್ನೂ ಅವರಲ್ಲಿ ಭಕ್ತಿಮಾಡುವ ರೀತಿಯನ್ನು ಅದರ ಪ್ರಯೋಜನವನ್ನೂ ವಿಸ್ತಾರವಾಗಿ ಉಪದೇಶಿಸಿ, ಆಚಾರ್ಯಮೂರ್ತಿ ದರ್ಶನದಿಂದಲೂ ಆ ಮಹನೀಯರ ಸೇವೆಯಿಂದಲೂ ಕಲ್ಯಾಣಪುರನಿವಾಸಿಗಳೆಲ್ಲರೂ ಕಲ್ಯಾಣ ಪರಂಪರಾ ಭಾಜನರಾಗಬೇಕೆಂದು ಅನುಗ್ರಹಿಸಿ, ಬಿಡದಿ ಕ್ಲೋಸ್‌ಪೇಟೆ (= ರಾಮನಗರ) ಚೆನ್ನಪಟ್ಟಣಗಳ ಮಾರ್ಗವಾಗಿ ಪ್ರಯಾಣಮಾಡಿ, ಪ್ಲವಂಗಸಂವತ್ಸರ ಜ್ಯೇಷ್ಠ ಬಹುಳ ಪಂಚಮೀ ಭಾನುವಾರದಲ್ಲಿ ಮೈಸೂರು ಪ್ರವೇಶಿಸಿದರು.

ರಾಜಧಾನಿಯಲ್ಲಿ ತಮ್ಮ ಆಗಮನವನ್ನು ಪ್ರತೀಕ್ಷಿಸುತ್ತಲಿದ್ದ ಶ್ರೀಮನ್ಮಹಾರಾಜರವರಿಂದ ಇತರಾಸಾಧಾರಣವಾದ ರಾಜಮರ್ಯಾದೆಗಳೊಡನೆ ಬರಮಾಡಿಕೊಳ್ಳಲ್ಪಟ್ಟ ನೂತನ ರಾಜಭವನವನ್ನು ಪ್ರವೇಶಿಸಿ ಮಹಾಪ್ರಭುಗಳವರಿಗೆ ದರ್ಶನವನ್ನಿತ್ತು ಸಂಸ್ಕೃತಮಹಾಪಾಠಶಾಲೆಯಲ್ಲಿ ವಸತಿಮಾಡಿದರು. ಆ ಬಹುಳ ದಶಮೀ ಶುಕ್ರವಾರದಲ್ಲಿ ಪ್ರಭುಗಳಿಂದ ಪ್ರಾರ್ಥಿತರಾಗಿ ರಾಜಭವನಕ್ಕೆ ದಯಮಾಡಿಸಿ ಶ್ರೀಚಂದ್ರಮೌಳೀಶ್ವರಾದಿ ದೇವತಾರಾಧನೆಯನ್ನು ನೆರವೇರಿಸಿ, ಪ್ರಾಚೀನ ಸಂಪ್ರದಾಯಾನುಸಾರವಾಗಿ ಪ್ರಭುಗಳು ಮಾಡಿದ ಪಾದಪೂಜಾದಿ ಸತ್ಕಾರಗಳನ್ನು ಸ್ವೀಕರಿಸಿ, ಮಹಾರಾಜರವರಿಗೂ ರಾಜಕುಂಟುಬದವರಿಗೂ ತೀರ್ಥಪ್ರಸಾದಗಳನ್ನು ಅನುಗ್ರಹಿಸಿ, ಕೂಡಲೆ ಸ್ವಸ್ಥಾನಕ್ಕೆ ಬರುವ ವಾಡಿಕೆಯು ಏರ್ಪಟ್ಟಿದ್ದರೂ ಪ್ರಭುಗಳವರ ಪ್ರಾರ್ಥನೆಯಂತೆ ರಾಜಭವನದಲ್ಲಿಯೇ ವಸತಿಮಾಡಿದ್ದು ಆ ರಾತ್ರಿಯಲ್ಲಿಯೂ ದೇವತಾರಾಧನಾದಿ ಕೃತ್ಯಗಳೆಲ್ಲವನ್ನೂ ನೆರವೇರಿಸಿಕೊಂಡು ಸ್ವಸ್ಥಾನಕ್ಕೆ ತೆರಳಿದರು. ಆ ಸಂವತ್ಸರದ ಚಾತುರ್ಮಾಸ್ಯ ಸಂಕಲ್ಪಾನುಷ್ಠಾನ ಕಾಲವು ಸಮೀಪಿಸಿದುದರಿಂದಲೂ, ಸಂಚಾರ ದೇಶವು ವಿಸ್ತಾರವಾಗಿದ್ದುದರಿಂದಲೂ ರಾಜಧಾನಿಯಲ್ಲಿ ಹೆಚ್ಚುಕಾಲ ನಿಲ್ಲಲು ಅವಕಾಶ ವಿರಲಿಲ್ಲವಾಗಿ ಹದಿಮೂರು ದಿನಗಳು ನಿಂತು ಮಹಾರಾಜರವರಿಗೂ ಇತರ ಶಿಷ್ಯವರ್ಗಕ್ಕೂ ಅನುಗ್ರಹಮಾಡಿ ಶ್ರೀಕಂಠೇಶ್ವರಸ್ವಾಮಿ ದರ್ಶನಾರ್ಥವಾಗಿ ನಂಜನಗೂಡಿಗೆ ದಯಮಾಡಿಸಿದರು. ಆ ಕ್ಷೇತ್ರದಲ್ಲಿ ಮೂರು ದಿನಗಳು ವಾಸಿಸಿ ಶ್ರೀಕಂಠೇಶ್ವರಸ್ವಾಮಿಯನ್ನು ಸಾವಕಾಶವಾಗಿ ಪೂಜಿಸಿ, ಅಲ್ಲಿಂದ ಮುಂದೆ ಚಾಮರಾಜನಗರದ ಮಾರ್ಗವಾಗಿ ಕಣಿವೆಯನ್ನಿಳಿದು ಮದರಾಸಾಧಿಪತ್ಯಕ್ಕೆ ಸೇರಿದ ಕೊಯಂಬತ್ತೂರು ಜಿಲ್ಲೆಯ ಸತ್ಯಮಂಗಲ ಗ್ರಾಮವನ್ನು ಸೇರಿದರು. ಸತ್ಯಮಂಗಲಕ್ಕೆ ಹದಿನೈದು ಮೈಲಿಗಳ ದೂರದಲ್ಲಿ ವಿಶೇಷ ಬ್ರಾಹ್ಮಣ್ಯವಿರತಕ್ಕ ಗೋಪಿಶೆಟ್ಟಿಪಾಳೆಯವೆಂಬ ಅಗ್ರಹಾರದಲ್ಲಿ ಪ್ಲವಂಗ ಸಂವತ್ಸರದ

ಚಾತುರ್ಮಾಸ್ಯ ಸಂಕಲ್ಪ ವ್ಯಾಸಪೂಜಾದ್ಯಾಶ್ರಮ ಧರ್ಮಗಳನ್ನೂ ಶರನ್ನವರಾತ್ರ್ಯುತ್ಸವವನ್ನೂ ಆಚರಿಸಿ, ಭವಾನಿ ಈರೋಡು ಕರೂರುಗಳ ಮಾರ್ಗವಾಗಿ ಪ್ರಯಾಣಮಾಡಿ, ತಿರುಚಿನಾಪಲ್ಲಿಗೆ ಸಮೀಪದ ಕಾವೇರೀ ತೀರದಲ್ಲಿರುವ ಅಗ್ರಹಾರಗಳ ಬ್ರಾಹ್ಮಣಮಹಾಜನರ ಪ್ರಾರ್ಥನೆಯಂತೆ ಒಂದೆರಡು ದಿನಗಳು ಆಯಾ ಅಗ್ರಹಾರಗಳಲ್ಲಿ ವಸತಿಮಾಡಿ ಶಿಷ್ಯಜನರನ್ನು ಅನುಗ್ರಹಿಸುತ್ತ, ತಿರುಚಿನಾಪಲ್ಲಿಯ ಸಮೀಪದಲ್ಲಿರುವ ಜಂಬುಕೇಶ್ವರ ಕ್ಷೇತ್ರಕ್ಕೆ ಪ್ರವೇಶಮಾಡಿದರು.

ಶ್ರೀಗಳವರು ಗೋಪಿಶೆಟ್ಟಿಪಾಳೆಯ ಗ್ರಾಮದಲ್ಲಿ ಚಾತುರ್ಮಾಸ್ಯ ಸಂಕಲ್ಪವನ್ನು ಮಾಡಿದ ಸಂದರ್ಭದಲ್ಲಿ ಶ್ರೀಗಳವರ ದರ್ಶನಕ್ಕೆಂದು ಬಂದಿದ್ದ ಇವರ ಭಕ್ತರಲ್ಲೊಬ್ಬರಾದ ನಾಟುಕೋಟಿ ಶೆಟ್ಟಿಗಳ ವರ್ಗಕ್ಕೆ ಸೇರಿದ ಕಾನಡುಕಾತ್ತಾನ್ ಚಿದಂಬರಶೆಟ್ಟಿಯಾರ್ ಎಂಬುವರು ಶ್ರೀ ಜಂಬುಕೇಶ್ವರ, ಅಖಿಲಾಂಡೇಶ್ವರಿಯಯವರ ಶಿಥಿಲವಾಗಿದ್ದ ಪ್ರಸಿದ್ಧವಾದ ಆಲಯವನ್ನು ಅನೇಕ ಭಕ್ತರ ಸಹಾಯದಿಂದ ತಾನು ಜೀರ್ಣೋದ್ಧಾರ ಮಾಡುತ್ತಲಿರುವುದಾಗಿಯೂ, ನೂತನಾಲಯಶುದ್ಧಿಪೂರ್ವಕವಾಗಿ ದೇವತಾ ಸಾನ್ನಿಧ್ಯಕ್ಕೆ ನಡೆಸಬೇಕಾದ ಕುಂಭಾಭಿಷೇಕದ ಕಾಲದಲ್ಲಿ ಶ್ರೀಗಳವರು ದಯಮಾಡಿ ಸನ್ನಿಹಿತರಾಗಿದ್ದಲ್ಲಿ ತಾನು ಕೈಗೊಂಡಿರುವ ಕಾರ್ಯವು ನಿರ್ವಿಘ್ನವಾಗಿ ನಡೆದು ಜಗತ್ತಿಗೆ ಕ್ಷೇಮಕರವಾಗಬಹುದಾಗಿಯೂ ಪ್ರಾರ್ಥನೆ ಮಾಡಿಕೊಂಡಿದ್ದರು. ಅದರಂತೆ ಜಂಬುಕೇಶ್ವರಾಖಿಲಾಂಡೇಶ್ವರೀ ದೇವರುಗಳ ದರ್ಶನ ಮಾಡಿ ದೇವತಾಸನ್ನಿಧಿಯಲ್ಲಿ ಪ್ರಪಂಚಕ್ಕೆ ಶ್ರೇಯಸ್ಸನ್ನು ಪ್ರಾರ್ಥಿಸಿ, ಪುರಾಣ ಪ್ರಸಿದ್ಧವಾದ ಆ ಆಲಯವನ್ನು ಜೀರ್ಣೋದ್ಧಾರಮಾಡಿ ಪರಿಷ್ಕರಿಸಿದ ತಮ್ಮ ಭಕ್ತರಾದ ಚಿದಂಬರ ಶೆಟ್ಟಿಯವರ ಪ್ರವರ್ತನವನ್ನು ಅಭಿನಂದಿಸಿ ಅವರಿಗೆ ಪ್ರಸಾದವನ್ನಿತ್ತು ಅನುಗ್ರಹಿಸಿದರು. ಶೃಂಗಗಿರಿ ಶ್ರೀ ಶಾರದಾ ದೇವಾಲಯನಿರ್ಮಾಣ ಕಾರ್ಯದಲ್ಲಿ ಶ್ರೀಗಳವರ ಆಜ್ಞೆಗನುಸಾರವಾಗಿ ನಿಯುಕ್ತರಾದ ಈ ಶೆಟ್ಟಿಯವರು ಸಂಕಲ್ಪಿತ ಯಾತ್ರೆಯಾದ ಬಳಿಕ ಶ್ರೀಗಳವರು ಶೃಂಗೇರಿಗೆ ಬರುವುದರೊಳಗೆ ಶ್ರೀ ಶಾರದಾಲಯ ನಿರ್ಮಾಣಕಾರ್ಯವನ್ನು ಪೂರ್ತಿಗೊಳಿಸಿ ಶ್ರೀಗಳವರ ಪ್ರಸಾದ ಪಾತ್ರನಾಗುವಂತೆ ಅನುಗ್ರಹಿಸಬೇಕೆಂದು ತನ್ನ ಪುತ್ರರಾದ ರಾಮಸ್ವಾಮಿಶೆಟ್ಟಿಯಾರೊಂದಿಗೆ ಪ್ರಾರ್ಥಿಸಲು, ಅವರ ಉತ್ಸಾಹಕ್ಕೆ ಆನಂದಿಸಿ ಅದರಂತೆ ನಡೆವುದೆಂದು ಅನುಗ್ರಹಿಸಿ ಅಲ್ಲಿಂದ ಮುಂದೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ಶ್ರೀರಂಗಕ್ಷೇತ್ರಕ್ಕೆ ಬಿಜಯಮಾಡಿದರು. ಅಲ್ಲಿ ಒಂದು ದಿನ ಮಾತ್ರ ವಾಸಮಾಡಿ ಶ್ರೀಗಳವರಿಗೆ ಅಂತರಂಗ ಶಿಷ್ಯರಾದ ಟಿ. ಕೆ. ಬಾಲಸುಬ್ರಹ್ಮಣ್ಯರವರ ಪ್ರಾರ್ಥನೆಯಂತೆ ಚಿತ್ರ ವೀಧಿಯಲ್ಲಿರುವ ಅವರ ಗೃಹದಲ್ಲಿ ಬಿಡಾರಮಾಡಿ ಅವರ ಸತ್ಕಾರವನ್ನು ಸ್ವೀಕರಿಸಿ, ಆ ರಾತ್ರಿಯಲ್ಲಿ ದೇವತಾರಾಧನಾದಿ ನಿತ್ಯಾನುಷ್ಠಾನಗಳೆಲ್ಲವೂ ಮುಗಿದ ಬಳಿಕ ಪಾದಚಾರಿಗಳಾಗಿಯೇ ಶ್ರೀ

ರಂಗನಾಥಸ್ವಾಮಿಯವರ ಸನ್ನಿಧಿಗೆ ದಯಮಾಡಿಸಿ, ವಿಜನವಾಗಿ ದೇವತಾಸಂದರ್ಶನ ತದ್ಭಜನ ನಮನಾದಿಗಳಿಂದ ಆನಂದಪರವಶರಾಗಿ ಸ್ವಸ್ಥಾನಕ್ಕೆ ಬಂದರು. ಮರುದಿನ ಪ್ರಾತಃಕಾಲಾನುಷ್ಠಾನಗಳನ್ನು ನೆರವೇರಿಸಿಕೊಂಡು ತಿರುಚನಾಪಲ್ಲಿಗೆ ಬಿಜಯಮಾಡಿಸಿ, ಅಲ್ಲಿ ಪ್ರಸಿದ್ಧರಾದ ಗಣಪತಯ್ಯರ ಗೃಹದಲ್ಲಿ ಪಾದಪೂಜಾಭಿಕ್ಷಾದಿ ಸೇವೆಗಳನ್ನು ಸ್ವೀಕರಿಸಿ, ಆ ರಾತ್ರಿಯಲ್ಲಿ ಶ್ರೀಗಳವರಿಗಾಗಿ ಸಿದ್ಧಪಡಿಸಿದ್ದ ಕೃಷ್ಣಯ್ಯರ ಗೃಹದಲ್ಲಿ ವಸತಿ ಮಾಡಿದರು, ಬಳಿಕ ತಿರುಚನಾಪಲ್ಲಿಯಿಂದ ಪುದುಕೋಟೆಯ ಮಾರ್ಗವಾಗಿ ಪ್ರಯಾಣ ಮಾಡಿ ಕೋವಿಲೂರ್ ಎಂಬ ಗ್ರಾಮಕ್ಕೆ ಬಂದರು. ಆ ಗ್ರಾಮದಲ್ಲಿ ಒಂದು ಮಠವಿರುವುದು. ದಕ್ಷಿಣದೇಶದಲ್ಲಿ ವ್ಯಾಪಾರದಿಂದಲೂ, ಐಶ್ವರ್ಯದಿಂದಲೂ, ದೇವಾಲಯ ತಟಾಕಾದಿ ಧರ್ಮಕಾರ್ಯಗಳನ್ನು ಜೀರ್ಣೋದ್ಧಾರ ಮಾಡುವುದರಿಂದಲೂ ಪ್ರಸಿದ್ಧರಾಗಿರುವ ನಾಟುಕೋಟಿ ಶೆಟ್ಟಿಗಳ ಪಂಗಡಕ್ಕೆ ಸೇರಿದ ವಿರಕ್ತರಾದ ಪರದೇಶಿ ಎಂಬವರಿಗೆ ಆ ಮಠವು ಸ್ಥಾನವಾಗಿ ಏರ್ಪಟ್ಟಿರುವುದು. ಆ ಪರದೇಶಿಗಳು ಶ್ರೀ ಶಂಕರಭಗವತ್ಪಾದಾಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವ ಅದ್ವೈತಮಾರ್ಗವನ್ನು ಅವಲಂಬಿಸಿರುವರು. ಆ ಮಠಕ್ಕೆ ಬರುವ ಗೃಹಸ್ಥ ಧರ್ಮಾವಲಂಬಿಗಳೂ ಗಾರ್ಹಸ್ಥ್ಯವನ್ನು ಬಿಟ್ಟು ವಿರಕ್ತರೂ ಆದ ಹಲವು ಮಂದಿಗಳಿಗೆ ಅಶನವಸನಗಳನ್ನು ಕೊಟ್ಟು, ಶಾಮಿಯಾರು ದ್ರಾವಿಡ ಭಾಷೆಯಲ್ಲಿ ಪರಿವರ್ತಿಸಲ್ಪಟ್ಟಿರುವ ಅದ್ವೈತ ವೇದಾಂತಗ್ರಂಥಗಳನ್ನು ಪಾಠ ಹೇಳಿ, ಜನರನ್ನು ತಕ್ಕಮಟ್ಟಿಗೆ ಸನ್ಮಾರ್ಗಪ್ರವೃತ್ತರನ್ನಾಗಿ ಮಾಡುವ ಸಂಪ್ರದಾಯವನ್ನಿಟ್ಟುಕೊಂಡಿರುವರು. ಶ್ರೀಗಳವರು 1893-94 ನೆ ಇಸವಿಯಲ್ಲಿ ರಾಮೇಶ್ವರ ಯಾತ್ರಾನಿಮಿತ್ತವಾಗಿ ದಕ್ಷಿಣದೇಶಕ್ಕೆ ದಯಮಾಡಿದ್ದ ಕಾಲದಲ್ಲಿ ಕೋವಿಲೂರು ಮಠಾಧಿಪತಿಯಾಗಿದ್ದ ವೀರಪ್ಪದೇಶಿಕರೆಂಬ ಪರದೇಶಿಗಳು ರಾಮನಾಡಿಗೆ ಬಂದು ಶ್ರೀಗಳವರ ದರ್ಶನವನ್ನು ಪಡೆದು ಶ್ರೀಗಳವರನ್ನು ಕೋವಿಲೂರಿಗೆ ಮಠಾಧಿಪತಿಯಾಗಿದ್ದ ವೀರಪ್ಪ ದೇಶಿಕರೆಂಬ ಪರದೇಶಿಗಳು ರಾಮನಾಡಿಗೆ ಬಂದು ಶ್ರೀಗಳವರ ದರ್ಶನವನ್ನು ಪಡೆದು ಶ್ರೀಗಳವರನ್ನು ಕೋವಿಲೂರಿಗೆ ಸತ್ಕರಿಸಿದರೆಂಬ ಸಂಗತಿಯನ್ನು ಹಿಂದಿನ ಅಧ್ಯಾಯದಲ್ಲಿಯೂ ಸಂದರ್ಭಕ್ರಮದಿಂದ ಪ್ರಸ್ತಾಪಿಸಿದೆ. ಈ ವೀರಪ್ಪಶಾಮಿಯಾರವರು ಕೋವಿಲೂರಿನಲ್ಲಿರುವ ಶಿವ ದೇವಾಲಯವನ್ನು ಹೇರಳವಾದ ದ್ರವ್ಯವ್ಯಯದಿಂದ ನೂತನವಾಗಿರುವಂತೆ ಜೀರ್ಣೋದ್ಧಾರಮಾಡಿದ್ದರು. ಆಲಯಶುದ್ಧಿಪೂರ್ವಕ ಕುಂಭಾಭಿಷೇಕವನ್ನು ನಡೆಸುವುದಕ್ಕೆ ಕಾಲವನ್ನು ನಿಶ್ಚಯಿಸಿಕೊಂಡು, ಆ ಕಾಲಕ್ಕೆ ಶ್ರೀಗಳವರು ದಯಮಾಡಿಸಿ ತಮ್ಮನ್ನು ಅನುಗ್ರಹಿಸಬೇಕೆಂದು ಅವರು ಪ್ರಾರ್ಥನೆ ಮಾಡಿಕೊಂಡಿದ್ದಂತೆ ಶ್ರೀಗಳವರು ಕೋವಿಲೂರಿಗೆ ಸವಾರಿ ಚಿತ್ತೈಸಿದರು. ಕುಂಭಾಭಿಷೇಕವು ನೆರವೇರಿದ ಬಳಿಕ ಶ್ರೀಶಂಕರಭಗವತ್ಪಾದಾಚಾರ್ಯರವರ ಜನ್ಮೋತ್ಸವಸಮಾರಂಭವನ್ನು ಐದು ದಿನಗಳ ಪರ್ಯಂತ ಅತಿ ವಿಜೃಂಭಣೆಯಿಂದ

ಅಲ್ಲಿಯೇ ನೆರವೇರಿಸಿ, ಕೋವಿಲೂರು ಶಾಮಿಯಾರವರು ಮಾಡಿದ ವಿಶೇಷ ಸತ್ಕಾರಗಳನ್ನು ಅಂಗೀಕರಿಸಿ, ಅಲ್ಲಿಂದ ಮುಂದೆ ನಾಟುಕೋಟಿ ಜನರು ವಿಶೇಷವಾಗಿರುವ ಕಾರೈಕುಡಿ, ಕಾನಡು ಕಾತ್ತಾನ್, ಪಳ್ಳತ್ತೂರು, ಕೋಟೆಯೂರು, ದೇವಕೋಟೆ ಮೊದಲಾದ ಗ್ರಾಮಗಳಲ್ಲಿ ಪ್ರಸಿದ್ಧರಾದ ಶೆಟ್ಟಿಗಳ ಪ್ರಾರ್ಥನೆಯಂತೆ ಸಂಚರಿಸಿ, ಆ ಜನರಿಗೆ ದೇವತಾ ಸಂದರ್ಶನ ತೀರ್ಥಪ್ರಸಾದಗಳಿಂದ ಅನುಗ್ರಹಮಾಡಿ, ಕೀಲಕಸಂವತ್ಸರದ ಚಾತುರ್ಮಾಸ್ಯಕಾಲವು ಒದಗಿದುದರಿಂದ ಸುಬ್ರಹ್ಮಣ್ಯಕ್ಷೇತ್ರವಾದ ಕುನ್ನಕ್ಕುಡಿ ಎಂಬ ಗ್ರಾಮದಲ್ಲಿ ಸಂಕಲ್ಪ ವ್ಯಾಸಪೂಜಾದಿಧರ್ಮಗಳನ್ನು ಅನುಷ್ಠಿಸಿ ಅಲ್ಲಿ ಎರಡು ತಿಂಗಳಕಾಲ ವಾಸಮಾಡಿದರು. ಆ ವರ್ಷದ ಶರನ್ನವರಾತ್ರ್ಯುತ್ಸವವನ್ನು ತಿರುಪತ್ತೂರು ಅಗ್ರಹಾರದಲ್ಲಿ ನೆರವೇರಿಸಿ, ಮಧುರೆ ಜಿಲ್ಲೆಯನ್ನು ಪ್ರವೇಶಿಸಿ ಸಂಚಾರಕ್ರಮದಿಂದ ಹಾಲಾಸ್ಯಕ್ಷೇತ್ರವಾದ ಮಧುರಾಪುರಿಯನ್ನು ಸೇರಿದರು. ಆ ಪಟ್ಟಣದಲ್ಲಿ ಪೂರ್ವ ಸಂಪ್ರದಾಯದಂತೆ ಶ್ರೀಗಳವರ ವಸತಿಗಾಗಿ ಸಿದ್ಧಮಾಡಿದ್ದ ಮೀನಾಕ್ಷಿಸುಂದರೇಶ್ವರ ದೇವಸ್ಥಾನದ ಒಂದು ಭಾಗವಾದ ಕಲ್ಯಾಣ ಮಂಟಪದಲ್ಲಿ ತಮ್ಮ ಬಿಡಾರವನ್ನು ಮಾಡಿ ಸುಮಾರು ಇಪ್ಪತ್ತೈದು ದಿನಗಳ ಪರ್ಯಂತ ಆ ಕ್ಷೇತ್ರದಲ್ಲಿ ವಾಸಿಸಿ ತ್ರಿಭುವನ, ಮಾನಾ ಮಧುರೆ, ಪರಮಕುಡಿಗಳ ಮಾರ್ಗವಾಗಿ ರಾಮನಾಥಪುರವನ್ನು ಸೇರಿ ಅಲ್ಲಿ ಎರಡು ದಿನಗಳು ನಿಂತು ಅಲ್ಲಿಯ ಜಮೀನ್‌ದಾರರಾದ ರಾಜಾ ಮುದ್ದುಲಿಂಗ ರಾಜರಾಜೇಶ್ವರ ಸೇತುಪತಿಗಳನ್ನು ಅನುಗ್ರಹಿಸಿ, ವೆತ್ತಲೆಮಂಟಪ ಪಾಂಬನ್ ಮಾರ್ಗವಾಗಿ ಹೊರಟು ದೋಣಿಗಳ ಮೂಲಕ ಪಾಂಬನ್ ನದಿಯನ್ನು ದಾಟಿ, ಶಾ॥ ಶಕ 1831ನೆಯ ಕೀಲಕ ಸಂವತ್ಸರದ (1908 ಇಸವಿ) ಕಾರ್ತಿಕ ಶುಕ್ಲೈಕಾದಶೀ ಬುಧವಾರದಲ್ಲಿ ರಾಮೇಶ್ವರ ಕ್ಷೇತ್ರಕ್ಕೆ ದಯಮಾಡಿದರು. ಧನುಷ್ಕೋಟಿಯಲ್ಲಿ ಮೂರುದಿನಗಳು ವಾಸಿಸಿ ಯಥೋಕ್ತವಾಗಿ ರಾಮಸೇತು ಸ್ನಾನವನ್ನು ಮಾಡಿ ರಾಮೇಶ್ವರಕ್ಕೆ ಹಿಂತಿರುಗಿ ಬಂದು, ರಾಮನಾಥಸ್ವಾಮಿಯನ್ನು ರಜತಮಯವಾದ ನಾಣ್ಯಗಳಿಂದಲೂ ಅನರ್ಘ್ಯವಾದ ವಸ್ತ್ರಾಭರಣಗಳಿಂದಲೂ ಆರಾಧಿಸಿ, ಎರಡುವಾರಗಳ ಪರ್ಯಂತ ಆ ಕ್ಷೇತ್ರದಲ್ಲಿ ವಾಸಮಾಡಿ, ಅಲ್ಲಿಯ ಶಿಷ್ಯಜನರ ಸತ್ಕಾರಗಳನ್ನು ಕೈಕೊಂಡು, ಅವರಿಗೆಲ್ಲಾ ತೀರ್ಥಪ್ರಸಾದ ಫಲಮಂತ್ರಾಕ್ಷತೆಗಳನ್ನಿತ್ತು ಆಶೀರ್ವದಿಸಿದ ನಂತರ ರಾಮೇಶ್ವರ ಕ್ಷೇತ್ರದಿಂದ ತಿನ್ನವೆಲ್ಲಿಜಿಲ್ಲೆಯನ್ನು ಪ್ರವೇಶಿಸಿದರು. ಆ ಜಿಲ್ಲೆಯ ತಾಮ್ರಪರ್ಣೀ ನದೀತೀರದಲ್ಲಿ ಅನೇಕಾಗ್ರಹಾರಗಳಿರುವುವು. ಆ ನದಿಗೆ ಅಡ್ಡಗಟ್ಟೆಯನ್ನು ಕಟ್ಟಿ ಅದರ ಕಾಲುವೆಗಳ ನೀರಿನಿಂದ ವಿಶೇಷವಾದ ತರೀ ಸಾಗುವಳಿಯಾಗುವುದರಿಂದ ಅಲ್ಲಿಯ ಬ್ರಾಹ್ಮಣರು ತಕ್ಕ ಮಟ್ಟಿಗೆ ಅನುಕೂಲ ಸ್ಥಿತಿಯಲ್ಲಿರುತ್ತ ಶ್ರೀ ಮದಾಚಾರ್ಯ ಪೀಠವಾದ ಶೃಂಗಗಿರಿಮಠದ ಗುರುಗಳನ್ನು ಅನನ್ಯಭಾವದಿಂದ ಪೂಜಿಸುತ್ತಲಿರುವರು. ಶ್ರೀಗಳವರು ಶ್ರೀ ಶಂಕರಭಗವತ್ಪಾದಾಚಾರ್ಯರವರ

ಜನ್ಮಭೂಮಿಯನ್ನು ಪರಿಷ್ಕರಿಸಿ ಆ ಕ್ಷೇತ್ರದಲ್ಲಿ ಆಚಾರ್ಯಮೂರ್ತಿಯನ್ನು ಪ್ರತಿಷ್ಠಿಸಿ ಶಿಷ್ಯವರ್ಗಕ್ಕೆ ಮಹಾಭ್ಯುದಯವನ್ನುಂಟುಮಾಡುವುದಕ್ಕೋಸ್ಕರ ಯಾತ್ರೆಯನ್ನು ಕೈಕೊಂಡಿರುವರೆಂಬ ವೃತ್ತಾಂತವನ್ನು ತಿಳಿದು, ಇಂತಹ ಅಪೂರ್ವ ಸಂದರ್ಭದಲ್ಲಿ ತಮ್ಮ ಶಕ್ತಿಗೆಮೀರಿ ಶ್ರೀಗಳವರನ್ನು ಸತ್ಕರಿಸಿ, ಇವರು ಸಂಕಲ್ಪಿಸಿರುವ ಮಹಾಕಾರ್ಯದಲ್ಲಿ ತಾವೂ ಭಾಗಿಗಳಾಗುವುದು ಶಿಷ್ಯರಾದ ತಮಗೆ ಕರ್ತವ್ಯವೆಂದೆಣಿಸಿ, ಉತ್ಸಾಹದಿಂದ ಶ್ರೀಗಳವರನ್ನು ಪ್ರತಿಯೊಂದು ಅಗ್ರಹಾರಕ್ಕೂ ಬಿಜಯಮಾಡಿಸಿ, ಜನಗಳ ಬಹಿಃಪ್ರಾಣವೆನಿಸಿರುವ ಧನದ ವಿಷಯದಲ್ಲಿ ಮಮತೆಯನ್ನು ತೆರೆದವರಂತೆ ವಿಶೇಷವಾದ ದ್ರವ್ಯದಾನದಿಂದ ಆ ಜನರು ಶ್ರೀಗಳವರನ್ನು ಸತ್ಕರಿಸಿದರು. ಶಿಷ್ಯಜನರ ಭಕ್ತ್ಯುತ್ಸಾಹಗಳನ್ನೂ ಅವರ ಮನೋಭಾವವನ್ನೂ ಶ್ರೀಗಳವರು ತಿಳಿದು, ಇಲ್ಲಿಯ ಬ್ರಾಹ್ಮಣರು ಕೊಟ್ಟ ದ್ರವ್ಯವೆಲ್ಲವನ್ನೂ ಆಚಾರ್ಯದೇವಾಲಯ ನಿರ್ಮಾಣಕಾರ್ಯಕ್ಕೂ ಕುಂಭಾಭಿಷೇಕ ಮೂರ್ತಿಪ್ರತಿಷ್ಠಾದಿ ಕಾರ್ಯಕ್ಕೂ ವಿನಿಯೋಗಿಸತಕ್ಕದ್ದೆಂದು ತಮ್ಮ ಅಧಿಕಾರಿಗಳಿಗೆ ಅನುಶಾಸನ ಮಾಡಲು, ಆ ಎರಡು ಲಕ್ಷರೂಪಾಯಿಗಳನ್ನು ಶ್ರೀಗಳವರ ಆಜ್ಞೆಗನುಸಾರವಾಗಿ ಅಲ್ಲಿಯ ಶಿಷ್ಯರಲ್ಲಿ ಪ್ರಮುಖರಾದ ಕೆಲವರಲ್ಲಿ ಅಮಾನತ್ತಾಗಿಟ್ಟು ಆಗಿಂದಾಗ್ಗೆ ಮೇಲಿನ ಕಾರ್ಯಗಳಿಗಾಗಿಯೇ ತರಿಸಿ ಕೊಳ್ಳಲ್ಪಡುವುದೆಂದು ತಿಳಿಸಿದ್ದಾಯಿತು.

ಈ ಸಂದರ್ಭದಲ್ಲಿ ಸೌಮ್ಯಸಂವತ್ಸರದ ಚಾತುರ್ಮಾಸ್ಯ ಸಂಕಲ್ಪಕಾಲವು ಒದಗಿತು. ಆ ಸಂವತ್ಸರದಲ್ಲಿ ಅಧಿಕಮಾಸವಿದ್ದುದರಿಂದ ಮೂರುತಿಂಗಳು ಒಂದು ಸ್ಥಳದಲ್ಲಿ ನಿಲ್ಲಬೇಕಾಯಿತು. ಸಂಚಾರದಿಂದಲೂ ಜನಬಾಹುಳ್ಯದಿಂದಲೂ ಅತಿಯಾಗಿ ವಿಕ್ಷೇಪವನ್ನು ಹೊಂದಿದ್ದ ಶ್ರೀಗಳವರ ಚಿತ್ತಕ್ಕೆ ನಿರ್ಜನವಾಗಿಯೂ ವನರಾಜಿಗಳಿಂದ ರಮ್ಯವಾಗಿಯೂ ಇರತಕ್ಕ ಪ್ರದೇಶದಲ್ಲಿ ವಾಸವು ಅತ್ಯಾದರಣೀಯವಾಯಿತು. ವಿಚಾರಿಸಲಾಗಿ ತಿನ್ನವೆಲ್ಲಿಜಿಲ್ಲೆಯಲ್ಲಿ ಪಾಪವಿನಾಶವೆಂಬ ಅನ್ವರ್ಥನಾಮಧೇಯದ ಕ್ಷೇತ್ರವು ಅತ್ಯಂತ ವಿಜನವೂ ನಿರ್ಮಲವೂ ರಮಣೀಯವೂ ಆಗಿರುವುದೆಂದು ವ್ಯಕ್ತವಾಯಿತು. ಆ ಕ್ಷೇತ್ರವನ್ನು ಪ್ರವೇಶಿಸಿ ಅಲ್ಲಿ ತಮ್ಮ ಸಂಕಲ್ಪವನ್ನು ಮಾಡಿ ಶ್ರೀಗಳವರು ಆನಂದವಾಗಿ ಮೂರುತಿಂಗಳಕಾಲವನ್ನು ಕಳೆದರು. ಚಾತುರ್ಮಾಸ್ಯ ಸಂಕಲ್ಪ ಪೂರ್ತಿಯಾದ ಬಳಿಕ ಶಿಂಗಂಪಟ್ಟಿ ಜಮೀನ್‌ದಾರರಾದ ತೀರ್ಥಪತಿಗಳು ಪ್ರಾರ್ಥಿಸಲು ಅವರ ಆತಿಥ್ಯವನ್ನು ಅಂಗೀಕರಿಸಿ ಬಾಣತೀರ್ಥವೆಂಬ ಪರ್ವತಕ್ಕೆ ದಯಮಾಡಿಸಿದರು. ಆ ಪರ್ವತವು ಅತ್ಯಂತ ವಿಜನವಾಗಿಯೂ ವಿಶಾಲವಾಗಿಯೂ ಪರಿಶುದ್ಧವಾದ ತಾಮ್ರಪರ್ಣಿಯ ಪ್ರವಾಹದಿಂದ ಮತ್ತು ಮೇಘಾವಲಂಬಿಗಳಾದ ವೃಕ್ಷಗಳಿಂದ ಮನೋಹರವಾಗಿಯೂ ಇರುವುದು. ಆ ಸ್ಥಳದ ರಾಮಣೀಯಕವು ಆತ್ಮಸುಖಾನುಭವವಿಲ್ಲದ ಪಾಮರರಾದ ಸಂಸಾರಿಗಳ ಮನಸ್ಸನ್ನು ಕೂಡ ಆಕರ್ಷಿಸಿ ಆ ಪ್ರದೇಶದಲ್ಲಿ ವಸತಿಮಾಡಿರುವ ಪರ್ಯಂತವಾದರೂ ನಿಶ್ಚಲಚಿತ್ತರನ್ನಾಗಿಯೂ ಆನಂದಮಗ್ನ

ರನ್ನಾಗಿಯೂ ಮಾಡತಕ್ಕ ಸ್ವಭಾವವುಳ್ಳದ್ದಾಗಿರುವಲ್ಲಿ; ಆತ್ಮಾರಾಮರಾದ ಶ್ರೀಗಳವರ ಚಿತ್ತಕ್ಕೆ ಆ ಪರ್ವತದಲ್ಲಿ ವಾಸವು ಹೇಗಿರಬಹುದೆಂಬ ಸಂಗತಿಯನ್ನು ಯೋಚಿಸುವುದು ಅಸ್ಮದಾದಿಗಳಿಗೆ ಸಾಧ್ಯವಲ್ಲ. ಇಂತಹ ಪರ್ವತದಲ್ಲಿ ತೀರ್ಥಪತಿಗಳು ಶ್ರೀಗಳವರ ಮನೋಭಾವಕ್ಕೆ ತಕ್ಕಂತೆ ಲತಾ ಮಂಟಪಗಳನ್ನೂ ಪರ್ಣಶಾಲೆಗಳನ್ನೂ ಶಿಲಾಸ್ತರಣಗಳನ್ನೂ ಸ್ವಭಾವಸಿದ್ಧವಾಗಿರುವಂತೆ ಕಲ್ಪಿಸಿದ್ದರು. ಮೂರುದಿನಗಳು ಆ ಪರ್ವತದಲ್ಲಿ ವಾಸಮಾಡಿ ತಿನ್ನವಲ್ಲಿ ಪುರಜನರ ನಿರ್ಬಂಧವಾದ ಪ್ರಾರ್ಥನೆಯಂತೆ ಆ ಸಂವತ್ಸರದ ಶರನ್ನವರಾತ್ರಿಯ ಶಾರದಾಪೂಜಾದ್ಯುತ್ಸವವನ್ನು ನೆರವೇರಿಸಲು ತಿನ್ನವಲ್ಲಿ ಪಟ್ಟಣಕ್ಕೆ ದಯಮಾಡಿ, ಶಾಲಿವಾಟೇಶ್ವರ ದೇವಸ್ಥಾನದಲ್ಲಿ ಬಿಡಾರವನ್ನು ಮಾಡಿದರು. ಅಲ್ಲಿಯ ಶಿಷ್ಯಜನರು ಬಹಳ ಉತ್ಸಾಹದಿಂದಲೂ ಭಕ್ತಿಶ್ರದ್ಧೆಗಳಿಂದಲೂ ನವರಾತ್ರಿಪೂಜಾದ್ಯುತ್ಸವಗಳನ್ನು ವಿಜೃಂಭಣೆಯಿಂದ ನೆರವೇರಿಸಿ ಶ್ರೀ ಶ್ರೀಗಳವರಿಂದ ತೀರ್ಥಪ್ರಸಾದ ಫಲಮಂತ್ರಾಕ್ಷತೆಗಳನ್ನು ಪಡೆದು ಕೃತಾರ್ಥರಾದರು.

ಅನಂತಶಯನದ ಮಹಾರಾಜರ ಸೇವೆ.

ಅಪೂರ್ವವಾಗಿ ಮಹಾಕಾರ್ಯೋದ್ದೇಶದಿಂದ ಶ್ರೀಗಳವರು ತಾವಾಗಿಯೇ ಕೇರಳ ಭೂಮಿಯನ್ನಲಂಕರಿಸುವರೆಂಬ ವರ್ತಮಾನವನ್ನು ಅನಂತಶಯನದ ಮಹಾರಾಜರು ತಿಳಿದು, ಈ ಮಹನೀಯರು ತಮ್ಮ ರಾಷ್ಟ್ರವನ್ನು ಪ್ರವೇಶಿಸಿದ್ದು ಮೊದಲುಗೊಂಡು ಅಲ್ಲಿ ವಸತಿಮೂಡಿರುವ ಪರ್ಯಂತ ಇವರಿಗೆ ಯಾವ ರೀತಿಯಿಂದಲೂ ಅನನುಕೂಲವಾಗದ ಹಾಗೆ ಬೇಕಾದ ಸಾಧನಗಳನ್ನು ಕಲ್ಪಿಸುವಂತೆಯೂ ತಮ್ಮ ರಾಷ್ಟ್ರದಲ್ಲಿ ಈ ಶ್ರೀಗಳವರು ದಯಮಾಡಿದಾಗ ಇವರಿಗೆ ನಡೆಸಬೇಕಾದ ರಾಜಮರ್ಯಾದೆಗಳನ್ನು ಅತ್ಯುತ್ತಮರೀತಿಯಿಂದ ನಡೆಸುವಂತೆಯೂ ಅಧಿಕಾರಿಗಳ ಮೂಲಕ ಆವಶ್ಯಕವಾದ ವ್ಯವಸ್ಥೆಗಳನ್ನು ಮಾಡಿಸಿ ತಮ್ಮ ಜನ್ಮನಕ್ಷತ್ರಕ್ಕೆ ಅನುಕೂಲವಾದ ಶುಭದಿನವು ಶಾ|| ಶಕ 1832ನೆಯ ಸೌಮ್ಯಸಂವತ್ಸರದ (1909) ಮಾರ್ಗಶೀರ್ಷ ಪೂರ್ಣಿಮಾ ಭಾನುವಾರವಾಗಿರುವುದೆಂದೂ, ಆ ದಿನದಲ್ಲಿ ರಾಜಧಾನಿಗೆ ದಯಮಾಡಿಸಿ, ತಮಗೆ ದರ್ಶನವನ್ನು ಕೊಟ್ಟು ಆತಿಥ್ಯವನ್ನು ಸ್ವೀಕರಿಸಿ ಅನುಗ್ರಹಿಸಬೇಕೆಂದೂ ಪ್ರಾರ್ಥಿಸಿಕೊಂಡರು. ಆ ಮಹಾರಾಜರ ಪ್ರಾರ್ಥನೆಯಂತೆ ನಿಷ್ಕೃಷ್ಟವಾದ ಆ ದಿನಕ್ಕೆ ಅನಂತಶಯನವನ್ನು ಸೇರಲು ಮಧ್ಯ ಮಾರ್ಗದಲ್ಲಿದ್ದ ಶಿಷ್ಯಜನರ ನಿರ್ಬಂಧದಿಂದ ಅವಕಾಶವು ಬಹಳ ಸ್ವಲ್ಪವಾಗಿದ್ದರೂ ಜ್ಯೋತಿಶ್ಶಾಸ್ತ್ರ ರೀತಿಯಿಂದ ಶುಭವಾರ ನಕ್ಷತ್ರಗಳನ್ನು ವಿಚಾರಿಸಿ ಅಂತಹ ಶುಭದಿನದಲ್ಲಿಯೇ ಶ್ರೇಯಸ್ಸಾಧನವಾದ ಕಾರ್ಯವನ್ನು ನಡೆಸಬೇಕೆಂಬ ಆ ರಾಜರ ಆಸ್ತಿಕ್ಯವನ್ನು ತಿಳಿದು ಆನಂದಿಸಿ ಭಕ್ತಕೋಟಿಗಳ ಉತ್ಸಾಹಕ್ಕೂ

ಭಕ್ತಿಭಾವದಿಂದ ಗುರುಸೇವೆಯನ್ನು ಮಾಡಿ ಕೃತಾರ್ಥರಾಗಬೇಕೆಂಬ ಅವರ ಉದ್ದೇಶಕ್ಕೂ ಅವಿರುದ್ಧವಾಗಿ ತಮ್ಮ ಪ್ರಯಾಣವನ್ನು ಬೆಳೆಸಿಕೊಂಡು ಅನಂತಶಯನದ ಮಹಾರಾಜರ ದೇಶವನ್ನು ಪ್ರವೇಶಿಸಿದರು. ಆ ರಾಜರ ದೇಶದಲ್ಲಿ ತೋವಾಳಕ್ಕೋಟೆ ಎಂಬ ಗ್ರಾಮವು ಮೊದಲನೆಯ ಮಜಲಾಗಿದ್ದಿತು. ಮಹಾರಾಜರ ಎಲ್ಲೆಗೆ ಶ್ರೀಗಳವರು ದಯಮಾಡಿಸುವಲ್ಲಿ ಪದ್ಮನಾಭಪುರಂ ಡಿವಿಜನ್ ದಿವಾನ್ ಪೇಷ್ಕಾರರೆಂಬ ಮುಖ್ಯಾಧಿಕಾರಿಗಳು ತಮ್ಮ ಪರಿವಾರದೊಡನೆ ಕಾದಿದ್ದು ರಾಜಾಜ್ಞೆಯಂತೆ ರಾಜಮರ್ಯಾದೆಗಳಿಂದ ಶ್ರೀಗಳವರನ್ನು ಬರಮಾಡಿಕೊಂಡು ಅಲ್ಲಿಯ ರಾಜಭವನವನ್ನು ಶ್ರೀಗಳವರಿಗೆ ಬಿಡಾರಮಾಡಿಕೊಟ್ಟರು. ಮುಂದೆ ಸಮುದ್ರತೀರದಲ್ಲಿರುವ ಕನ್ಯಾಕುಮಾರೀಕ್ಷೇತ್ರಕ್ಕೆ ದಯಮಾಡಿ ಮೂರು ದಿನಗಳು ಅಲ್ಲಿ ವಾಸಿಸಿ, ಕನ್ಯಾಕುಮಾರಿಯಮ್ಮನವರ ಸಂದರ್ಶನವನ್ನು ಮಾಡಿಕೊಂಡು ಸಂಚಾರಕ್ರಮ ದಿಂದ ಪೂರ್ವನಿರ್ದಿಷ್ಟವಾಗಿದ್ದ ದಿನದ ಪ್ರಾತಃಕಾಲ ಐದು ಗಂಟೆಗೆ ರಾಜಧಾನಿಗೆ ಎರಡು ಮೈಲಿಗಳ ದೂರದ ನದೀತೀರದಲ್ಲಿ ಇಳಿದು ಸ್ನಾನಾನುಷ್ಠಾನ ಪೂಜಾದಿಗಳನ್ನು ನೆರವೇರಿಸುವಷ್ಟರಲ್ಲಿ ಮುಖ್ಯಾಮಾತ್ಯರೇ ಮೊದಲಾದ ಎಲ್ಲಾ ಅಧಿಕಾರಿಗಳು ಪುರನಿವಾಸಿ ಗಳಿಂದಲೂ, ಅಶ್ವಬೃಂದಾದ್ಯನೇಕ ರಾಜಚಿಹ್ನೆಗಳಿಂದಲೂ, ಪೂರ್ಣಕುಂಭ, ನಾನಾ ಫಲಗಳು ಮೊದಲಾಗಿ ಮಂಗಳಸೂಚಕವಾದ ಉಪಹಾರವರ್ಗಗಳಿಂದಲೂ ಕೂಡಿ ಸಿದ್ಧರಾಗಿ ಬಂದು ಶ್ರೀಗಳವರ ದರ್ಶನಾಕಾಂಕ್ಷಿಗಳಾಗಿ ಕಾದುಕೊಂಡಿದ್ದರು. ಶ್ರೀಗಳವರು ತಮ್ಮ ಅನುಷ್ಠಾನಗಳನ್ನು ಪೂರ್ಣಮಾಡಿಕೊಂಡು ರತ್ನಮಯಕಿರೀಟಾದ್ಯಾಸ್ಥಾನ ಚಿಹ್ನೆಗಳ ಅಲಂಕಾರದೊಡನೆ ಶಿಬಿಕಾರೋಹಣೋನ್ಮುಖರಾಗಿ ಹೊರಗೆ ಬಂದಕೂಡಲೆ ಅಹಮಹಮಿಕೆಯಿಂದ ನಿರೀಕ್ಷಿಸುತ್ತಿದ್ದ ಶಿಷ್ಯಸಂಘವು ಫಲೋಪಹಾರವನ್ನಿತ್ತು ವಂದನೆಯನ್ನಾಚರಿಸಲು ಜನಬಾಹುಳ್ಯ ದಿಂದಲೂ ಆತುರದಿಂದಲೂ ಸಾಧ್ಯವಿಲ್ಲದೆಹೋದ ಸಂದರ್ಭವನ್ನು ಕಂಡು ಜನಗಳಿಗೆ ತೊಂದರೆಯಾಗುವುದೆಂದೂ ತಾವು ಶಿಬಿಕಾರೋಹಣವನ್ನು ಮಾಡಿದ ಮೇಲೆ ಜನರು ಫಲಸಮರ್ಪಣೆಯನ್ನು ಮಾಡಿ ಮನಸ್ಸಿನಿಂದ ವಂದನೆಯನ್ನಾಚರಿಸಬಹುದೆಂದೂ, ರಾಜಾಮಾತ್ಯರಾದ ರಾಜಗೋಪಾಲಾಚಾರ್ಯರವರಿಗೆ ತಿಳಿಸಿ ಬಳಿಕ ಆಂದೋಲಿಕಾರೋಹಣ ವನ್ನು ಮಾಡಿದರು. ತತ್‌ಕ್ಷಣವೇ ರಾಜಾಧಿಕಾರಿಗಳು ಜನರನ್ನು ಸಮಾಧಾನಗೊಳಿಸಿ ಸಮ್ಮರ್ದವನ್ನು ಹತೋಟಿಗೆ ತಂದುಕೊಂಡು ಪ್ರತಿಯೊಬ್ಬರಿಗೂ ಶ್ರೀಗಳವರ ಸಂದರ್ಶನ ವನ್ನು ಮಾಡಿಸಿ ಆನಂದಗೊಳಿಸಿದರು. ಪ್ರಥಮನಿರ್ದಿಷ್ಟವಾದ ರಾಜವೀಧಿಯಮೂಲಕವಾಗಿ ಶ್ರೀಗಳವರು ಬಿಜಯ ಮಾಡುತ್ತಲಿರುವಲ್ಲಿ ಉಭಯ ಪಾರ್ಶ್ವಗಳಲ್ಲಿಯೂ ಸ್ತ್ರೀಜನರು ವಿಚಿತ್ರವಾದ ಆರತಿಗಳಿಂದ ಶ್ರೀಗಳವರನ್ನು ಸೇವಿಸಿ ಆನಂದಭರಿತರಾದರು. ಶ್ರೀಗಳವರ ಸವಾರಿಯು ಕೋಟೆಯ ಬಾಗಿಲಿನ ಹತ್ತಿರ ಬರುವುದಕ್ಕಿಂತ ಪೂರ್ವವೇ ಶ್ರೀಮನ್ಮಹಾರಾಜ

ರವರು ಮಿತ ಪರಿವಾರದೊಡನೆ ರಾಜಕೀಯವಾದ ತಮ್ಮ ಅಲಂಕಾರಗಳನ್ನು ಧರಿಸಿ ಶ್ರೀಗಳವರ ಆಗಮನವನ್ನು ಚಾತಕನ್ಯಾಯವಾಗಿ ನಿರೀಕ್ಷಿಸುತ್ತಲಿದ್ದರು. ಬಹಿರ್ದ್ವಾರ ಸಮೀಪಕ್ಕೆ ಶ್ರೀಗಳವರ ಪಾಲಕಿಯು ಬಂದಕೂಡಲೆ ಮಹಾರಾಜರು ಹೊರಗೆ ಬಂದು ಸಾಷ್ಟಾಂಗ ಪ್ರಣಿಪಾತವನ್ನು ಮಾಡಿ ಬದ್ಧಾಂಜಲಿಗಳಾಗಿ ಶ್ರೀಗಳವರಿಗೆ ಭಕ್ತಿಪುರಸ್ಸರವಾದ ಸ್ವಾಗತೋಕ್ತಿಗಳನ್ನು ವಿಜ್ಞಾಪಿಸಲು, ಶ್ರೀಗಳವರು ಅವರ ಭಕ್ತಿಶ್ರದ್ಧೆಗಳಿಗೆ ಸಂತೋಷಿಸಿ ಕುಶಲಪ್ರಶ್ನೆಗಳು ನಡೆದ ನಂತರ ಮಹಾರಾಜರಿಗೆ ಫಲಮಂತ್ರಾಕ್ಷತೆಗಳನ್ನು ಕೊಟ್ಟು ಅವರನ್ನು ಅನುಗ್ರಹಿಸಿ ರಾಜಭವನಕ್ಕೆ ಹೊರಡಲು ಅವರಿಗೆ ಅನುಮತಿಯನ್ನಿತ್ತು ಕೋಟೆಯೊಳಗೆ ಪ್ರವೇಶಮಾಡಿ ನಾಲ್ಕು ಬೀದಿಗಳನ್ನೂ ಸುತ್ತುವರಿದು ಬಂದು ವಸತಿಗೆ ಸಿದ್ಧವಾಗಿದ್ದ ಯುವರಾಜರ ಅರಮನೆಯಲ್ಲಿ ಧೂಳಿ ಪಾದಪೂಜಾದ್ಯುಪಚಾರಗಳು ಮಹಾರಾಜರ ಕಡೆಯಿಂದ ನಡೆದ ಬಳಿಕ ಸಂಗಡ ಬಂದ ಅಧಿಕಾರಿಗಳಿಗೂ ಪುರಜನರಿಗೂ ಅನುಮತಿಯನ್ನು ಕೊಟ್ಟು ಕಳುಹಿಸಿ, ಮಾಧ್ಯಾಹ್ನಿಕ ಸ್ನಾನ ಪೂಜಾದ್ಯನುಷ್ಠಾನಗಳನ್ನು ಆಚರಿಸಿದರು. ಆ ರಾಜಧಾನಿಯಲ್ಲಿ ಎಂಟು ದಿನಗಳು ಮಾತ್ರ ಶ್ರೀಗಳವರು ವಸತಿಮಾಡಿದ್ದರು. ಇವರ ಸತ್ಕಾರಕ್ಕೆ ಮಹಾರಾಜರು ಮಾಡಿದ್ದ ಪ್ರತಿಯೊಂದು ವ್ಯವಸ್ಥೆಯೂ ಸ್ಮರಣಾರ್ಹವಾಗಿತ್ತು. ಒಂದು ದಿನ ಮಹಾರಾಜರು ಶ್ರೀಗಳವರ ಬಿಡಾರಕ್ಕೆ ಬಂದು ಶ್ರೀಗಳವರಿಂದ ಮಂತ್ರೋಪದೇಶವನ್ನು ಪಡೆದು ಆಸ್ಥಾನದ ಪದ್ಧತಿಯನ್ನು ಅನುಸರಿಸಿ ಶ್ರೀಗಳವರ ಪಾದಕಾಣಿಕೆಯಾಗಿ ಹತ್ತು ಸಾವಿರ ರೂಪಾಯಿಗಳನ್ನರ್ಪಿಸಿ ಶ್ರೀಗಳವರಿಂದ ತೀರ್ಥಪ್ರಸಾದಗಳನ್ನು ಪಡೆದುಕೊಂಡರು. ತಾವು ವೃದ್ಧರಾಗಿದ್ದೇವೆಂದೂ ತಮ್ಮ ಸಂಸ್ಥಾನದಲ್ಲಿ ಯೌವರಾಜ್ಯಕ್ಕೆ ಅಧಿಕಾರಿಯಿಲ್ಲವೆಂದೂ ಖಿನ್ನರಾಗಿದ್ದ ಮಹಾರಾಜರಿಗೆ ಪೂರ್ಣಾನುಗ್ರಹಮಾಡಿ ಅವರ ವ್ಯಾಕುಲತೆಯು ಕ್ಷಿಪ್ರದಲ್ಲಿ ನಿವೃತ್ತವಾಗುವುದೆಂದೂ ಯೌವರಾಜ್ಯಪಟ್ಟಾಭಿಷೇಕವನ್ನು ಮಹಾರಾಜರೇ ಮಾಡುವರೆಂದೂ ತಮ್ಮ ಹಿತೋಕ್ತಿಗಳಿಂದ ಮಹಾರಾಜರನ್ನು ಧೈರ್ಯಗೊಳಿಸಿ ರಕ್ಷಾಕರವಾಗಿ ರತ್ನಮಯವಾದ ಕಂಠಾಭರಣವನ್ನು ತಮ್ಮ ಅಮೃತಮಯವಾದ ಹಸ್ತಗಳಿಂದ ಮಹಾರಾಜರಿಗೆ ಧಾರಣಮಾಡಿಸಿ ಅವರನ್ನು ಅರಮನೆಗೆ ಕಳುಹಿಸಿದರು. ಶ್ರೀಗಳವರಿಂದ ಅನುಗೃಹೀತರಾದ ಮಹಾರಾಜರವರು ಶ್ರೀಗಳವರ ವಿಷಯದಲ್ಲಿ ತಮಗೆ ಕುಲದೈವವಾದ ಅನಂತಪದ್ಮನಾಭನೆಂಬ ಭಾವನೆಯು ಪೂರ್ಣವಾಗಿರುವುದೆಂದೂ, ಇಂತಹ ಶ್ರೀಗಳವರ ಪ್ರಸಾದವು ತಮ್ಮಲ್ಲಿ ಸಂಪೂರ್ಣವಾಗಿರುವುದರಿಂದ ಯಾವ ಕೊರತೆಯೂ ತಮಗೆ ಬರಲಾರದೆಂದೂ ದೃಢವಾದ ತಮ್ಮ ನಂಬಿಕೆಯನ್ನು ಆ ದಿನದ ಮಧ್ಯಾಹ್ನ ಅಲ್ಲಿಯವರೆಗೆ ಹೋಗಿದ್ದ ಈ ಲೇಖಕನಲ್ಲಿ ವ್ಯಕ್ತಗೊಳಿಸಿದರು. ಮಾರನೆಯ ದಿನ ಮಹಾರಾಜ್ಞಿಯವರು ಶ್ರೀಗಳವರ ಸಂದರ್ಶನಮಾಡಿ ಅನುಗ್ರಹವನ್ನು ಪಡೆದುಕೊಂಡು ಬರಲು ಮಠಕ್ಕೆ ಕಳುಹಿಸಿದರು. ಅವರುಗಳು

ಉಪಹಾರಯುಕ್ತರಾಗಿ ಶ್ರೀಗಳವರ ಸನ್ನಿಧಿಗೆ ಬಂದು ಸಂದರ್ಶನವನ್ನು ಮಾಡಿ ಅಮೋಘವಾದ ಈ ಮಹನೀಯರ ಪ್ರಸಾದಕ್ಕೆ ಭಾಜನರಾದರು. ಮಹಾರಾಜರು ಶ್ರೀಗಳವರ ಸನ್ನಿಧಿಗೆ ಮೂರು ನಾಲ್ಕು ಸಾರಿ ವಿವಿಕ್ತವಾಗಿ ಬಂದು ಶ್ರೀಗಳವರಿಂದ ಹಿತೋಪದೇಶಗಳನ್ನು ಪಡೆದುಕೊಂಡದ್ದಲ್ಲದೆ ತಾವು ಸಂಗಡವೇ ಇದ್ದು ತಮ್ಮ ಸಂಸ್ಥಾನದ ಶಿಲ್ಪಿಗಳಿಂದ ಶ್ರೀಗಳವರ ಭಾವಚಿತ್ರವನ್ನು ಬರೆಯಿಸಿದರು. ಆ ಭಾವಚಿತ್ರವು ಶ್ರೀಗಳವರ ಜ್ಞಾಪಕವಾಗಿ ಈಗ ಬೆಂಗಳೂರು ಮಠದಲ್ಲಿ ಇಡಲ್ಪಟ್ಟಿದೆ. ಶ್ರೀಗಳವರು ಅನಂತಶಯನದಲ್ಲಿ ವಸತಿಮಾಡಿದ್ದ ಕಾಲದಲ್ಲಿ ಅಲ್ಲಿಯ ಶಿಷ್ಯಮಂಡಲಿಯಲ್ಲಿ ಅನೇಕರು ಶ್ರೀಗಳವರನ್ನು ತಮ್ಮ ತಮ್ಮ ಗೃಹಗಳಿಗೆ ಬಿಜಯಮಾಡಿಸಿ ಪಾದಪೂಜಾದಿಸತ್ಕಾರಗಳನ್ನು ನಡೆಸಿ ಇವರ ಅನುಗ್ರಹವನ್ನು ಪಡೆಯಬೇಕೆಂದು ಪ್ರಯತ್ನಮಾಡಿದರು. ಪರದೇವತಾಭಾವನಾರ್ಹರೂ ಅತ್ಯಂತ ಪರಿಶುದ್ಧರೂ ಪೂಜ್ಯರೂ ಆದ ಶ್ರೀಗಳವರಿಗೆ ತೊಂದರೆಯನ್ನು ಕೊಟ್ಟು ಕಶ್ಮಲವಾದ ಸಂಸಾರಿಗಳ ವಾಸಗೃಹಗಳಿಗೆ ಕರೆತರಬೇಕೆಂಬ ಜನಗಳ ಅಭಿಪ್ರಾಯವು ಅಲ್ಲಿಯ ಮಹಾರಾಜರಿಂದ ಅನುಮೋದಿಸಲ್ಪಡಲಿಲ್ಲವಾಗಿ ಪ್ರಭುಗಳ ಅಭಿಪ್ರಾಯದಂತೆ ಎಲ್ಲರೂ ಬಂದು ಮಠದಲ್ಲಿಯೇ ಶ್ರೀಗಳವರ ಸೇವೆಯನ್ನು ಮಾಡಿ ಕೃತಾರ್ಥರಾದರು. ಚಿರಕಾಲದಿಂದ ಅಪರಿಚಿತವಾಗಿಯೂ ಗೂಢವಾಗಿಯೂ ತಮ್ಮ ರಾಜ್ಯದ ಒಂದು ಭಾಗದಲ್ಲಿ ನೆಲೆಗೊಂಡಿದ್ದ ಶ್ರೀಮದಾಚಾರ್ಯಭಗವತ್ಪಾದರವರ ಜನ್ಮಸ್ಥಳವನ್ನು ಪರಿಷ್ಕರಿಸಿ ಶಿಷ್ಯಕೋಟಿಗಳನ್ನುದ್ಧರಿಸುವುದಕ್ಕೋಸ್ಕರವೇ ಅವತರಿಸಿರುವ ಶ್ರೀಗಳವರು ತಮ್ಮ ಕಾಲದಲ್ಲಿ ಆ ಮಹಾಕಾರ್ಯವನ್ನಾರಂಭಿಸಿ ಅದರಲ್ಲಿ ತಮ್ಮನ್ನು ಸಹಕರಿಸುವಂತೆ ಅನುಗ್ರಹಿಸಿದ್ದು ಮುಂದಾಗುವ ತಮ್ಮ ಅಭ್ಯುದಯಕ್ಕೆ ಸೂಚಕವೆಂದೂ, ಆ ಕಾರ್ಯದ ನಿರ್ವಾಹಕ್ಕೆ ಅಪೇಕ್ಷಿತವಾದ ಎಲ್ಲಾ ಅನುಕೂಲಗಳನ್ನೂ ಕಲ್ಪಿಸುವುದರಲ್ಲಿ ತಾವು ಸಿದ್ಧರಾಗಿರುವೆವೆಂದೂ ವಂಚಿ ಮಹಾರಾಜರು ಶ್ರೀಗಳವರ ಸನ್ನಿಧಿಯಲ್ಲಿ ವಿಜ್ಞಾಪಿಸಿ ಪದ್ಮನಾಭ ಎಂಬ ಹೆಸರಿನ ಒಂದು ಗಜಶ್ರೇಷ್ಠವನ್ನೂ ಮತ್ತೆ ಹತ್ತು ಸಾವಿರ ರೂಪಾಯಿಗಳನ್ನೂ ಶ್ರೀಗಳವರ ಸನ್ನಿಧಾನಕ್ಕೆ ಉಪಹಾರವಾಗಿ ಅರ್ಪಿಸಿ, ಶ್ರೀಗಳವರ ಆಜ್ಞೆಯನ್ನು ಪಡೆದರು. ಈ ರೀತಿಯಿಂದ ಮಹಾರಾಜರಿಗೂ ಅವರ ಪರಿವಾರಕ್ಕೂ ಪುರಜನರಿಗೂ ದೇವತಾಪ್ರಸಾದ ಫಲಮಂತ್ರಾಕ್ಷತೆಗಳನ್ನಿತ್ತು ಜನಾರ್ದನಕ್ಷೇತ್ರಮಾರ್ಗವಾಗಿ ಕಾಲಟಿಕ್ಷೇತ್ರವನ್ನು ಕುರಿತು ಶ್ರೀಗಳವರು ಪ್ರಯಾಣ ಬೆಳೆಸಿದರು.

★ ★ ★

ಅಧ್ಯಾಯ - ೧೧.

ಕಾಲಟಿಕ್ಷೇತ್ರ ಪರಿಷ್ಕರಣ ಮತ್ತು ಕುಂಭಾಭಿಷೇಕ.

ಕಾಲಟಿ ಭೂ ಪರಿಷ್ಕರಣಕ್ಕೂ ಅಲ್ಲಿ ದೇವಾಲಯ ನಿರ್ಮಾಣಕ್ಕೂ ಶ್ರೀಗಳವರಿಂದ ನಿಯುಕ್ತರಾಗಿ ಎರಡು ವರ್ಷಗಳಿಗೆ ಮುಂಚೆ ಕಾಲಟಿಯಲ್ಲಿ ನಿಯತವಾಸವನ್ನು ಮಾಡಿ ನಿರ್ದಿಷ್ಟ ಕಾರ್ಯವನ್ನು ಆರಂಭಿಸಿದ್ದ ದಿವಾನ್ ಬಹದ್ದೂರ್ ಎ. ರಾಮಚಂದ್ರಯ್ಯರವರು ಮೈಸೂರು ಸಂಸ್ಥಾನದಲ್ಲಿ ಬಹುಕಾಲಪರ್ಯಂತ ಕೋಶಾಧಿಕಾರದಲ್ಲಿದ್ದು ವಿಶ್ರಾಂತಿಸುಖವನ್ನು ಪಡೆದವರಾಗಿಯೂ ಶಿಲ್ಪವಿದ್ಯಾವಿಶಾರದರಾಗಿಯೂ ಇದ್ದ ಇ.ಆರ್. ಸುಬ್ಬರಾಯಯ್ಯರನ್ನು ತಮ್ಮ ಸಹಾಯಕರಾಗಿ ಬರಮಾಡಿಕೊಂಡು ಅವರ ಸಲಹೆಯಿಂದ ಪ್ರತಿಯೊಂದು ಕಾರ್ಯವನ್ನೂ ನಡೆಸುತ್ತ ಬಂದರು. ಮೊದಲು ಒಂದಾಲಯವನ್ನು ಮಾತ್ರ ಕಲ್ಪಿಸಿ ಆಚಾರ್ಯಮೂರ್ತಿಯನ್ನು ಪ್ರತಿಷ್ಠಿಸುವುದೆಂದು ಶ್ರೀಗಳವರು ಸಂಕಲ್ಪಿಸಿದ್ದರು. ಅನಂತರ ಮಾತೃ ವಾತ್ಸಲ್ಯವನ್ನೂ ತದ್ಭಕ್ತಿ ಗೌರವಗಳನ್ನೂ ಸನ್ಯಾಸ ಸ್ವೀಕಾರಾನಂತರವೂ ವ್ಯಕ್ತಗೊಳಿಸಿ ಪ್ರಾಣಿಗಳಿಗೆ ಮಾತೆಯು ಅಧಿಕ ದೈವವೆಂದು ಸ್ವಾನುಷ್ಠಾನದಿಂದ ಪ್ರಪಂಚಕ್ಕೆ ಉಪದೇಶಿಸಿದ್ದ ಶ್ರೀ ಮದಾಚಾರ್ಯರವರಿಂದಲೇ ಪ್ರೇರಿಸಲ್ಪಟ್ಟಂತೆ ಜಗದಾಚಾರ್ಯ ಮಾತೃವಿನ ಜ್ಞಾಪಕವಾಗಿ ಕಾಲಟಿಕ್ಷೇತ್ರದಲ್ಲಿ ಮತ್ತೊಂದಾಲಯವನ್ನು ಕಲ್ಪಿಸಿ, ಜಗನ್ಮಾತೃ ಶ್ರೀ ಶಾರದಾಬಿಂಬವನ್ನೂ ಪ್ರತಿಷ್ಠಿಸುವುದು ಆವಶ್ಯಕವೆಂದು ನಿಶ್ಚಯಿಸಿದರು. ಅದರಂತೆ ಎರಡು ದೇವಾಲಯಗಳನ್ನು ಕಲ್ಪಿಸಬೇಕೆಂದು ರಾಮಚಂದ್ರಯ್ಯರವರಿಗೆ ತಿಳಿಸಲ್ಪಟ್ಟಿತು. ಸುಬ್ಬರಾಯಯ್ಯರ ಸಲಹೆಯನ್ನನು ಸರಿಸಿ ಚಿಕ್ಕದಾಗಿಯೂ ದೃಢವಾಗಿಯೂ ಸುಂದರವಾಗಿಯೂ ಇರುವಂತೆ ಎರಡು ದೇವಸ್ಥಾನಗಳು ಶುದ್ಧವಾದ ಶಿಲೆಗಳಿಂದ ಕಟ್ಟಲ್ಪಟ್ಟವು. ಈ ದೇವಸ್ಥಾನಗಳೆರಡೂ ಪೂರ್ಣಾನದಿಗೆ ಉತ್ತರ ಭಾಗದಲ್ಲಿ ದಕ್ಷಿಣಾಭಿಮುಖವಾಗಿವೆ. ಶಾರದಾಲಯವು ಆಚಾರ್ಯಮಾತೃವಿಗೆ ಸಂಸ್ಕಾರಮಾಡಿದ ಸ್ಥಳವೆಂದು ವದಂತಿಯಿಂದ ಪ್ರಸಿದ್ಧಿ ಪಡೆದು ಗುರ್ತಿಸಲ್ಪಟ್ಟಿರುವ ಪ್ರದೇಶಕ್ಕೆ ಸಮೀಪವಾಗಿಯೂ ಆಚಾರ್ಯಾಲಯವು ಇದಕ್ಕೆ ಪಶ್ಚಿಮದಲ್ಲಿ ಸ್ವಲ್ಪ ದೂರವಾಗಿಯೂ ಇರುವುವು. ಪೂರ್ಣಾನದಿಯು ಬಹಳ ತಗ್ಗಿನಲ್ಲಿ ಹರಿಯುವುದರಿಂದ ತೀರವು ತುಂಬಾ ಉನ್ನತವಾಗಿರುವುದು. ದೇವಾಲಯಗಳ ಮುಂಭಾಗದಲ್ಲಿ ವಿಶಾಲ ವಾಗಿಯೂ ದೃಢವಾಗಿಯೂ ಸುಲಕ್ಷಣವಾಗಿಯೂ ಇರುವ ಮೂವತ್ತೆರಡು ಹಂತಗಳಿಂದ ಕೂಡಿದ ಸ್ನಾನ ಘಟ್ಟವು ಹೇರಳವಾದ ದ್ರವ್ಯವ್ಯಯದಿಂದ ಕಟ್ಟಲ್ಪಟ್ಟಿರುವುದು. ದೇವಸ್ಥಾನದ

ಪ್ರಾಕಾರದಿಂದ ಹೊರಗೆ ಆಲಯಗಳಿಗೆ ಪೂರ್ವದಿಕ್ಕಿನಲ್ಲಿ ಶ್ರೀಗಳವರ ವಸತಿಗಾಗಿ ಮಠವು ನಿರ್ಮಿತವಾಗಿದೆ. ಈ ರೀತಿಯಿಂದ ಪರಮೋತ್ಸಾಹಿಗಳೂ ಕಾರ್ಯದಕ್ಷರೂ ಆದ ರಾಮಚಂದ್ರಯ್ಯರವರು ದೇವಾಲಯನಿರ್ಮಾಣಕಾರ್ಯವನ್ನು ಶ್ರೀಗಳವರು ಯಾತ್ರಾಕ್ರಮ ದಿಂದ ಕಾಲಟಿಗೆ ದಯಮಾಡಿಸುವುದಕ್ಕೆ ಮುಂದಾಗಿಯೇ ಪೂರೈಸಿರಲು; ಕುಂಭಾಭಿಷೇಕ ಮಹೋತ್ಸವದ ಸಂಭಾರಗಳನ್ನು ಸಿದ್ಧಪಡಿಸುವುದಕ್ಕೂ ತದಂಗವಾದ ಕಾರ್ಯಗಳನ್ನು ನಡೆಸುವುದಕ್ಕೂ ಸ್ವಲ್ಪಕಾಲ ಮುಂದಾಗಿಯೇ ಈ ಲೇಖಕನು ಶ್ರೀಗಳವರಿಂದ ಕಾಲಟಿಗೆ ಕಳುಹಲ್ಪಟ್ಟನು. ಕಾಲಟಿಯು ಬಲು ಸಣ್ಣಗ್ರಾಮವು. ಈ ಗ್ರಾಮದಲ್ಲಿ ಜನವಸತಿಯೇ ಇಲ್ಲವಾಗಿದ್ದಿತು. ಅನಂತಶಯನಸಂಸ್ಥಾನದ ಒಂದು ಮೂಲೆಯಲ್ಲಿರುವುದರಿಂದ ಇದಕ್ಕೆ ಸಮೀಪದಲ್ಲಿಯೂ ದೊಡ್ಡ ಗ್ರಾಮಗಳಿಲ್ಲ. ಈ ಸ್ಥಳವೂ ಇಲ್ಲಿಯ ನಜರೂ ಇವರ ಭಾಷೆಯೂ ಇತರ ದೇಶೀಯರಿಗೆ ಅಪರಿಚಿತವಾಗಿಯೇ ಇರುವುದು ಸಹಜವಷ್ಟೆ? ಇಂತಹ ಸಂದರ್ಭದಲ್ಲಿ ಅತ್ಯಂತಾದರಪೂರ್ವಕವಾಗಿ ಭರತ ಖಂಡದ ಎಲ್ಲಾ ಪ್ರದೇಶಗಳಲ್ಲಿರುವ ಜನರ ಶ್ರೇಯಸ್ಸಿಗೋಸ್ಕರ ಮಹಾತಪಸ್ವಿಗಳಾದ ಶ್ರೀಗಳವರಿಂದ ನಡೆಸಲ್ಪಡುವ ಕುಂಭಾಭಿಷೇಕದ ದರ್ಶನಕ್ಕೆ ಬರಬಹುದಾದ ಜನರ ವಸತಿಗೂ ಆತಿಥ್ಯಕ್ಕೂ ತಕ್ಕರೀತಿಯಿಂದ ಏರ್ಪಡಿಸುವುದು ಎಷ್ಟು ಸುಲಭವೆಂಬ ಭಾಗವನ್ನು ಪ್ರತಿಯೊಬ್ಬರೂ ಆಲೋಚಿಸಬಹುದು. ಶ್ರೀಗಳವರ ಪ್ರಭಾವದಿಂದ ಕುಂಭಾಭಿಷೇಕ ಮಹೋತ್ಸವದ ಕಾರ್ಯಗಳನ್ನು ಅಣಿಮಾಡುವುದಕ್ಕೆ ತಿನ್ನವೆಲ್ಲಿ ಜಿಲ್ಲೆಯ ಕಲ್ಲಡಕುರಚಿ ಎಂಬ ಬಹುದೂರದ ಗ್ರಾಮದಿಂದ ಮುನ್ನೂರು ಮಂದಿಕೂಲಿಯ ಜನರು ಬಂದು ನಿಂತರು. ಆ ಜನರನ್ನಾದರಿಸಿ ಅವರಿಂದ ಸರಿಯಾಗಿ ಕೆಲಸ ಮಾಡಿಸಲು ಅದೇ ಗ್ರಾಮದಿಂದ ವ್ಯಪದಿಷ್ಟರಾದ ಕೆಲವು ಶಿಷ್ಯರು ಬಂದೊದಗಿದರು. ಸಾಕಾಗುವಷ್ಟು ದ್ರವ್ಯವು ತಿನ್ನವೆಲ್ಲಿಯಲ್ಲಿ ಮುಂದಾಗಿಯೇ ಶೇಖರಿಸಲ್ಪಟ್ಟು ಸಿದ್ಧವಾಗಿದ್ದಿತು. ಈ ಸಲಕರಣಗಳೆಲ್ಲವೂ ಒದಗಿದುದರಿಂದ ಶ್ರೀಮಠಕ್ಕೆ ಅಧೀನವಾದ ಭೂಮಿಯನ್ನು ವಿಂಗಡಿಸಿ ಮೊದಲು ಎಲ್ಲಾ ಭಾಗಗಳಲ್ಲಿಯೂ ಸಂಚಾರಯೋಗ್ಯವಾದ ಮಾರ್ಗಗಳು ಮಾಡಲ್ಪಟ್ಟವು. ಮಾರ್ಗಕ್ಕೆ ಉಭಯ ಪಾರ್ಶ್ವಗಳಲ್ಲಿ ಸಾಲುಸಾಲಾಗಿಯೂ ಅತಿಥಿಗಳಿಗೆ ಅನುಕೂಲವಾಗಿಯೂ ಪರಸ್ಪರ ಸಂಬಂಧವಿಲ್ಲದಂತೆ ಬಿದಿರು ಮತ್ತು ಬಿದಿರಚಾಪೆಗಳಿಂದ ಆರುನೂರು ಗೃಹಗಳು ನಿರ್ಮಿಸಲ್ಪಟ್ಟವು. ಶ್ರೇಣೀ ಸಂಖ್ಯೆಯಿಂದಲೂ ಗೃಹಸಂಖ್ಯೆಯಿಂದಲೂ ಗುರ್ತಿಸಲ್ಪಟ್ಟ ಆಯಾ ಗೃಹಗಳಲ್ಲಿ ವಾಸಕ್ಕೆ ತಕ್ಕ ಸೌಲಭ್ಯವನ್ನು ಕಲ್ಪಿಸಿತ್ತು. ಉತ್ಸವ ದರ್ಶನಕ್ಕೆ ಬರುವ ಮಠಾಧಿಪತಿಗಳಿಗೂ ಸ್ಥಳ ಸೌಕರ್ಯವನ್ನು ಕಲ್ಪಿಸಿತ್ತು. ಉತ್ಸವ ದರ್ಶನಕ್ಕೆ ಬರುವ ಮಠಾಧಿಪತಿಗಳಿಗೂ ಸ್ಥಳ ಸೌಕರ್ಯವನ್ನು ಹೆಚ್ಚಾಗಿ ಅಪೇಕ್ಷಿಸಬಹುದಾದ ಶ್ರೀಮಂತರಿಗೂ ಪ್ರತ್ಯೇಕವಾಗಿ ಅವರವರ ಅನುಕೂಲಕ್ಕೆ ತಕ್ಕಂತೆ ಕೆಲವುಕಾಲ ನಿಲ್ಲುವಷ್ಟು ಸ್ಥಿರವಾದ ಗೃಹಗಳನ್ನು

ಕಲ್ಪಿಸಿದ್ದಾಯಿತು. ಕೊಚ್ಚಿ ಸಂಸ್ಥಾನದ ತಿರಚೂರಿನಲ್ಲಿ ವ್ಯಾಪಾರ ಮಾಡುತ್ತಲಿರುವ ಶ್ರೀಮಠದ ಶಿಷ್ಯರಾದ ವೆಂಗುವಯ್ಯರೆಂಬುವರ ಮೂಲಕ ಭೋಜನ ಪದಾರ್ಥಗಳೆಲ್ಲವೂ ಅಪರಿಮಿತವಾಗಿ ಶೇಖರಿಸಲ್ಪಟ್ಟುವು. ಉತ್ಸವಕ್ಕೆ ಬರತಕ್ಕ ಜನರನ್ನು ರೈಲ್ವೆ ಸ್ಟೇಷನ್ನಿಂದ ಕರೆತಂದು, ಶೈತ್ಯೋಪಚಾರದಿಂದ ಆದರಿಸಿ, ಬಂಡಿಗಳನ್ನು ಹತ್ತಿಸಿ ಕಾಲಟಿಗೆ ಕಳುಹಿಸುವುದಕ್ಕೂ, ಕಾಲಟಿಗೆ ಬಂದಕೂಡಲೇ ಅವರಿಗೆ ಸ್ಥಳವನ್ನು ಕೊಡಿಸಿ ಆಯಾ ಪಂಗಡದವರಿಗೆ ಬೇಕಾದ ಭೋಜನ ಪದಾರ್ಥಗಳನ್ನೂ ಪಾತ್ರೆಗಳನ್ನೂ ಆಯಾ ಗೃಹಗಳಲ್ಲಿ ಸಿದ್ಧಪಡಿಸಿಕೊಡುವುದಕ್ಕೂ, ಬ್ರಾಹ್ಮಣಸುವಾಸಿನಿಯರ ಸಂತರ್ಪಣೆ ಮಾಡಿಸುವುದಕ್ಕೂ ಸಮರ್ಥರೂ ಅನುಭವಶಾಲಿಗಳೂ ಶಾಂತಸ್ವಭಾವವುಳ್ಳವರೂ ಆದ ಅನೇಕ ಜನರು ನಿಯಮಿಸಲ್ಪಟ್ಟರು. ಸೌಮ್ಯಸಂವತ್ಸರ ಮಾಘಶುಕ್ಲ ದ್ವಾದಶಿಯಲ್ಲಿ ಕುಂಭಾಭಿಷೇಕವು ನಡೆಸಲ್ಪಡುವುದೆಂದು ಶ್ರೀಗಳವರ ಆಜ್ಞೆಯಿಂದ ನಿಷ್ಕರ್ಷೆ ಮಾಡಿ ಭರತಖಂಡದಲ್ಲಿರುವ ಶ್ರೀಮದಾಚಾರ್ಯ ಶಿಷ್ಯರಾದ ಮಠಾಧಿಪತಿಗಳಿಗೂ ಆಸ್ತಿಕರಾದ ಮಹಾರಾಜರುಗಳಿಗೂ ಇತರ ಶಿಷ್ಯವರ್ಗಕ್ಕೂ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿದ್ದಾಯಿತು. ಅನಂತಶಯನ ಸಂಸ್ಥಾನದ ಸ್ಯಾನಿಟರಿ ಕಮೀಷನರವರೂ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರೂ ಪೊಲೀಸಧಿಕಾರಿಗಳೂ ಕೋಟಯಂ ಡಿವಿಜನ್ ದಿವಾನ್ ಪೇಷ್ಕಾರರೂ ಅಂಚೆ ಇಲಾಖೆಯವರೂ ತಮ್ಮ ತಮ್ಮ ಸಿಬ್ಬಂದಿಗಳೊಡನೆ ಕಾಲಟಿಗೆ ಬಂದು ಜನಗಳ ಆರೋಗ್ಯಕ್ಕೂ ಕ್ಷೇಮಕ್ಕೂ ಲೋಪಬಾರದಂತೆ ನೋಡಿಕೊಳ್ಳುವುದಕ್ಕೆ ತಕ್ಕ ವ್ಯವಸ್ಥೆಗಳಿಂದ ಸಿದ್ಧರಾದರು. ಶ್ರೀಗಳವರ ಶಿಷ್ಯವರ್ಗಕ್ಕೆ ಸೇರಿದ ವಿದ್ಯಾರ್ಥಿಗಳೂ ವಕೀಲರೂ ವಕೀಲ್ ಗುಮಾಸ್ತೆಗಳೂ ಸುಮಾರು ಒಂದು ನೂರು ಜನರು ಈ ಮಹೋತ್ಸವ ಕಾಲದಲ್ಲಿ ಕಾದಿದ್ದು ಸಕಲ ಕಾರ್ಯಗಳನ್ನೂ ನಿರ್ವಹಿಸುವುದಕ್ಕೆ ತಮ್ಮ ತಮ್ಮಲ್ಲಿಯೇ ತಾರತಮ್ಯವನ್ನೂ ಪ್ರೇಷ್ಯಪ್ರೇಷಕ ಭಾವವನ್ನೂ ಕಲ್ಪಿಸಿಕೊಂಡು ತಿನ್ನವೆಲ್ಲಿಯಿಂದ ಕಾಲಟಿಗೆ ಬಂದು ಶ್ರೀಗಳವರ ಆಜ್ಞೆಯನ್ನು ನಿರೀಕ್ಷಿಸುತ್ತಿದ್ದರು.

ಈ ರೀತಿಯಿಂದ ಕುಂಭಾಭಿಷೇಕ ಮಹೋತ್ಸವದ ಸಕಲ ಸಂಭಾರಗಳೂ ಸಿದ್ಧವಾಗಿರಲು, ಶ್ರೀಗಳವರು ಸಂಚಾರಕ್ರಮದಿಂದ ಕಾಲಟಿಗೆ ಐದು ಮೈಲಿಗಳ ದೂರದಲ್ಲಿ ಪೂರ್ಣಾನದಿಗೆ ದಕ್ಷಿಣಭಾಗದಲ್ಲಿರುವ ಪೆರಂಬಾವೂರು ಎಂಬ ಗ್ರಾಮಕ್ಕೆ ದಯ ಮಾಡಿಸಿದರು. ಅಲ್ಲಿಗೆ ಬಂದರಾತ್ರಿಯಲ್ಲಿ ನಿತ್ಯಪೂಜಾನುಷ್ಠಾನಗಳಾದ ಬಳಿಕ ಶ್ರೀಗಳವರು ವಿಶ್ರಾಂತಿಯನ್ನು ಹೊಂದಿರಲು, ಶುಕ್ಲ ವಸ್ತ್ರವನ್ನುಟ್ಟು ಕಕ್ಷದಲ್ಲಿ ವಸ್ತ್ರವನ್ನು ಧರಿಸಿದ್ದ ಒಬ್ಬ ವಿತಂತು ಸ್ತ್ರೀಯು ಶ್ರೀಗಳವರ ಸ್ವಪ್ನಗತಳಾದಳು. ಆ ವೃದ್ಧ ಬ್ರಾಹ್ಮಣಿಯನ್ನು ಕಂಡು ತಮ್ಮ ಪರಿಜನರ ಮೂಲಕ ಆಕೆಯ ಕುಲಗೋತ್ರಸ್ಥಲಗಳನ್ನು ವಿಚಾರಿಸಲು, ಆಕೆ ಹಸನ್ಮುಖಿಯಾಗಿ ತಾನು ವೃಕ್ಷಮೂಲದಲ್ಲಿಯೇ ಇರುವಂತೆಯೂ ಶ್ರೀಗಳವರನ್ನು ಕರೆವುದಕ್ಕೆ ಬಂದಂತೆಯೂ

ಉತ್ತರವನ್ನಿತ್ತು ಅದೃಶ್ಯಳಾದಳು. ಶ್ರೀಗಳವರು ತತ್‌ಕ್ಷಣವೇ ಪ್ರಬೋಧವನ್ನು ಹೊಂದಿ ಈ ಸ್ವಪ್ನದ ಅರ್ಥವನ್ನು ಎಷ್ಟು ವಿಧದಿಂದ ಆಲೋಚಿಸಿದರೂ ಕಂಡುಹಿಡಿಯಲು ಅವಕಾಶವಿಲ್ಲದೆ ಇದು ಶುಭಸೂಚಕವೋ? ಅಥವಾ ಅನಿಷ್ಟ ಸೂಚಕವೋ ಎಂದು ಯೋಚಿಸುತ್ತಿದ್ದರು. ಮಾರನೆಯ ದಿವಸ ಮಧ್ಯಾಹ್ನ ನಾಲ್ಕು ಘಂಟೆಯ ಸಮಯದಲ್ಲಿ ಎಲ್ಲಾ ಸಂಭಾರಗಳೂ ಸಿದ್ಧವಾಗಿರುವುದೆಂದು ಸನ್ನಿಧಾನದಲ್ಲಿ ಶ್ರುತ ಪಡಿಸುವುದಕ್ಕೆ ರಾಮಚಂದ್ರಯ್ಯರೂ ಈ ಲೇಖಕನೂ ಕಾಲಟಿಯಿಂದ ಪೆರಂಬಾವೂರಿಗೆ ಹೋಗಿ ಶ್ರೀಗಳವರ ಸಂದರ್ಶನವನ್ನು ಮಾಡಲಾಗಿ ಕೂಡಲೇ ಈ ಶ್ರೀಗಳವರು ಬೇರೆ ಯಾವ ವಿಚಾರವನ್ನೂ ಮಾಡದೆ ಕಾಲಟಿಯ ಸನ್ನಿವೇಶವನ್ನೂ ಶಾರದಾಲಯ ಮತ್ತು ಆಚಾರ್ಯಾಲಯಗಳನ್ನು ಕಲ್ಪಿಸಿರುವ ಸ್ಥಳವನ್ನೂ ವಿವರಿಸಿ ಹೇಳಬೇಕೆಂದರು. ಆಗ ಪ್ರತಿಯೊಂದು ಭಾಗವನ್ನೂ ವಿಸ್ತರಿಸಿ ಹೇಳುತ್ತಾ ಶಾರದಾಲಯದ ಸಮೀಪದಲ್ಲೊಂದು ಅಶೋಕವೃಕ್ಷವಿರುವುದೆಂದೂ ಅದರ ಮೂಲದಲ್ಲಿ ಆಚಾರ್ಯ ಮಾತೃಸಂಸ್ಕಾರಭೂಮಿ ಎಂದು ಗುರುತಿಟ್ಟುಕೊಂಡು ಬಂದು ಜನರು ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ದೀಪವನ್ನು ಹಚ್ಚುವರೆಂದೂ ಈ ಲೇಖಕನು ತಿಳಿಯ ಪಡಿಸುತ್ತಿರುವಾಗಲೇ ಶ್ರೀಗಳವರ ಶರೀರವು ಗಡಗಡನೆ ನಡುಗಿತು. ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯತೊಡಗಿತು. ಗದ್ಗದ ಸ್ವರದಿಂದ ಆಚಾರ್ಯಮಾತೃಸ್ಮರಣೆಯನ್ನು ಮಾಡಲಾರಂಭಿಸಿದರು. ಇಂತಹ ಮನೋಭಾವವುಂಟಾದುದಕ್ಕೆ ಕಾರಣವನ್ನು ತಿಳಿಯದೆ ಪುರೋವರ್ತಿಗಳೆಲ್ಲರೂ ಸ್ತಬ್ಧರಾಗಲು, ಸ್ವಲ್ಪ ಕಾಲ ಶ್ರೀಗಳವರು ಆನಂದ ಪರವಶರಾಗಿ ಬಳಿಕ ತಾವು ನೋಡಿದ ಸ್ವಪ್ನ ವೃತ್ತಾಂತವನ್ನೂ ಅದು ಮೊದಲುಗೊಂಡು ಮನಸ್ಸಿಗೆ ಉಂಟಾಗಿದ್ದ ಚಿಂತೆಯನ್ನೂ ವಿವರಿಸಿ ತಾವು ಸಂಕಲ್ಪಿಸಿರುವ ಕಾರ್ಯವು ಆಚಾರ್ಯ ಪ್ರೇರಣೆಯಿಂದಲೇ ಆಗಿರುವುದೆಂದೂ ಈ ವಿಷಯದಲ್ಲಿ ಆಚಾರ್ಯ ಮಾತೃವಿನಿಂದ ಸಂಪೂರ್ಣವಾಗಿ ಅನುಮೋದನವು ದೊರೆಯಿತೆಂದೂ ಆ ಪತಿವ್ರತಾ ಶಿರೋಮಣಿಯಿಂದ ತಾವು ಕಾಲಟಿ ಪ್ರವೇಶವನ್ನು ಮಾಡಲು ಆಹೂತರಾದೆವೆಂದೂ ಸ್ವಪ್ನಾರ್ಥವನ್ನು ಎಲ್ಲರಿಗೂ ತಿಳಿವಂತೆ ನಿರೂಪಿಸಿ ಅನಂತರ ಉತ್ಸವ ನಿರ್ವಾಹಕ್ಕೋಸ್ಕರ ಮಾಡಿದ್ದ ವ್ಯವಸ್ಥೆಗಳನ್ನು ತಿಳಿದು ಸಂತೋಷಿಸಿ ಮಾರನೆಯ ದಿನ ಪ್ರಾತಃಕಾಲ ಕಾಲಟಿಗೆ ಬರುವುದಾಗಿ ಆಜ್ಞೆಯನ್ನಿತ್ತು ರಾಮಚಂದ್ರಯ್ಯರನ್ನೂ ಈ ಲೇಖಕನನ್ನೂ ಕಾಲಟಿಗೆ ಕಳುಹಿದರು.

ಮಾಘಶುಕ್ಲದ ಬಿದಿಗೆಯ ಪ್ರಾತಃಕಾಲದಲ್ಲಿ ಎಂಟುಘಂಟೆಗೆ ಶ್ರೀಗಳವರು ಕಾಲಟಿಗೆ ದಯಮಾಡಿಸಿದರು. ಪೂರ್ಣಾನದಿಯನ್ನು ದಾಟಿ ತೀರಕ್ಕೆ ಬಂದಕೂಡಲೇ ಆಚಾರ್ಯ ಮಾತೃದಹನ ಸಂಸ್ಕಾರದ ಪ್ರದೇಶಕ್ಕೆ ಪ್ರದಕ್ಷಿಣವಾಗಿ ಬಂದು ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಸ್ವಲ್ಪ ಕಾಲದವರೆಗೆ ಅಲ್ಲಿಯೇ ನಿಂತು, ಆಚಾರ್ಯ ಭಗವತ್ಪಾದರನ್ನು ಸ್ಮರಣೆಗೆ

ತಂದುಕೊಂಡು, ಅವರ ಸ್ಮರಣದಿಂದುಂಟಾದ ಹರ್ಷಶೋಕಗಳನ್ನು ಅನುಭವಿಸಿ ತಮ್ಮ ವಾಸಸ್ಥಾನಕ್ಕೆ ಬಂದರು. ಸ್ನಾನಾಹ್ನಿಕಾದಿ ನಿತ್ಯಾನುಷ್ಠಾನಗಳೆಲ್ಲವೂ ಪೂರ್ಣವಾದ ಬಳಿಕ ಸಾಯಂಕಾಲ ನಾಲ್ಕು ಘಂಟೆಯ ಸಮಯದಲ್ಲಿ ಪಾದಚಾರಿಗಳಾಗಿ ಹೊರಟು ದೇವತಾಪ್ರತಿಷ್ಠೆಗೆ ಸಿದ್ಧವಾಗಿದ್ದ ಆಲಯಗಳನ್ನೂ ಉತ್ಸವದರ್ಶನಕ್ಕೆ ಬರತಕ್ಕ ತಮ್ಮ ಶಿಷ್ಯವರ್ಗಗಳ ವಾಸಕ್ಕೆಂದು ಕಲ್ಪಿಸಿದ್ದ ಗೃಹಪಜ್ಕ್ತಿಗಳನ್ನೂ, ಬ್ರಾಹ್ಮಣಸುವಾಸಿನೀ ಸಂತರ್ಪಣೆ ಅತಿಥಿ ಸತ್ಕಾರಗಳಿಗಾಗಿ ಶೇಖರಿಸಿದ್ದ ಪದಾರ್ಥ ರಾಶಿಗಳನ್ನೂ, ಹಗಲುರಾತ್ರಿಗಳ ಭೇದ ತಿಳಿಯದ ಹಾಗೆ ಕಾಲಟಿ ಭೂಮಿಯೆಲ್ಲವೂ ಪ್ರಕಾಶಮಾನವಾಗಿರುವಂತೆ ಮಾಡಿದ್ದ ದೀಪಗಳ ವ್ಯವಸ್ಥೆಯನ್ನೂ ಸಾವಧಾನವಾಗಿ ಕಟಾಕ್ಷಿಸಿ ಸಂತುಷ್ಟಚಿತ್ತರಾಗಿ ಸ್ವಸ್ಥಾನಕ್ಕೆ ತೆರಳಿ ಶ್ರೀಮದಾಚಾರ್ಯಪ್ರಭಾವದಿಂದಲೇ ತಮ್ಮ ಸಂಕಲ್ಪಕ್ಕಿಂತಲೂ ಶತಾಂಶಾಧಿಕ್ಯದಿಂದ ತೃಪ್ತಿಕರವಾಗಿ ಮಾಡಲ್ಪಟ್ಟಿರುವುದೆಂದೂ, ಭಾವಿಕಾರ್ಯವೂ ವ್ಯವಸ್ಥಾನುಗುಣವಾಗಿ ಸರ್ವೋತ್ತಮರೀತಿಯಿಂದ ನಡೆವುದೆಂಬ ನಂಬಿಕೆಯು ತಮ್ಮ ಮನಸ್ಸಿಗೆ ಬಂದಿರುವುದೆಂದೂ ಸ್ವಾಭಿಪ್ರಾಯವನ್ನು ಪ್ರಕಟಗೊಳಿಸಿ ತಮ್ಮ ಪರಿವಾರವನ್ನು ಉತ್ಸಾಹಗೊಳಿಸಿದರು. ಮೂರ್ತಿಪ್ರತಿಷ್ಠಾ ಸಂಬಂಧವಾದ ಯಾಗವನ್ನು ನಡೆಸುವುದಕ್ಕೆ ಉಭಯ ದೇವಸ್ಥಾನಗಳ ಮಧ್ಯ ಪ್ರದೇಶದಲ್ಲಿ ವಿಸ್ತಾರವಾದ ಯಾಗಶಾಲೆಯು ಶಾಸ್ತ್ರೋಕ್ತವಿಧಾನದಿಂದ ಕಲ್ಪಿಸಲ್ಪಟ್ಟಿತ್ತು. ಆಚಾರ್ಯಾದಿಋತ್ವಿಗ್ಬ್ರಾಹ್ಮಣರುಗಳನ್ನು ಶೃಂಗೇರಿಯಿಂದಲೂ ಮೈಸೂರು ಪ್ರಾಂತದಿಂದಲೂ ಬರಮಾಡಿಸಿ, ಯಥಾವಿಧಿಯಿಂದ ಸ್ವಲ್ಪವೂ ನ್ಯೂನಾತಿರೇಕಗಳಿಗೆ ಅವಕಾಶವಿಲ್ಲದಂತೆ ಕರ್ಮಕಲಾಪವನ್ನು ನಡೆಸುವುದಕ್ಕೆ ಆಸ್ಥಾನ ಪಂಡಿತರಾದ ಕುಣಿಗಲ್ ರಾಮಶಾಸ್ತ್ರಿಗಳೇ ಮೊದಲಾದ ವಿದ್ವಾಂಸರುಗಳನ್ನು ನಿಯಮಿಸಿ, ಅವರಿಗೆ ಸಹಾಯಕರಾಗಿದ್ದು ಯಾಗಶಾಲೆಯ ಸಕಲಕಾರ್ಯಗಳನ್ನೂ ನಿರ್ವಹಿಸಲೋಸುಗ ತಿನ್ನವೆಲ್ಲಿ ಜಿಲ್ಲೆಯಲ್ಲಿ ಪ್ರಸಿದ್ಧರೂ ಶ್ರೀಗಳವರ ಅನುಗ್ರಹಕ್ಕೆ ಪಾತ್ರರೂ ಆ ಪ್ರಾಂತಕ್ಕೆ ಸಂಸ್ಥಾನದ ಕಡೆಯ ಅಧಿಕಾರಿಯೂ ಆಗಿದ್ದ ಧರ್ಮಶೀಲ ಕೃಷ್ಣಸ್ವಾಮಯ್ಯರು ನಿಯಮಿಸಲ್ಪಟ್ಟರು. ಶ್ರೀಗಳವರ ಆಜ್ಞೆಯಂತೆ ಶೃಂಗಗಿರಿ ಶಾರದಾಂಬಾಮೂರ್ತಿ, ಶ್ರೀಮಠದಲ್ಲಿ ಅತಿ ಪ್ರಾಚೀನಕಾಲದಿಂದಲೂ ಪೂಜಿಸಲ್ಪಡುತ್ತಿರುವ ಆಚಾರ್ಯಮೂರ್ತಿ ಇವುಗಳನ್ನು ಅನುಸರಿಸಿ ಪ್ರಮಾಣದಲ್ಲಿ ದೊಡ್ಡದಾಗಿಯೂ ಅತಿ ಸುಂದರವಾಗಿಯೂ ಇರುವಂತೆ ಪಂಚಲೋಹದಿಂದ ಕಾರಗುಡಿಯೆಂಬ ಗ್ರಾಮದಲ್ಲಿ ಮಾಡಿಸಿದ್ದ ಶಾರದಾಬಿಂಬವೂ ಆಚಾರ್ಯಮೂರ್ತಿಯೂ ಕಾಲಕ್ಕೆ ಸರಿಯಾಗಿ ಬಂದೊದಗಿದವು. ಶಾರದಾಂಬಾಲಯದ ಹೊರಭಾಗದಲ್ಲಿ ಪ್ರತಿಷ್ಠಿಸಲು ಉದ್ದಿಷ್ಟವಾಗಿದ್ದ ಸಪ್ತಮಾತೃಕೆಗಳ ಶಿಲಾಮಯವಿಗ್ರಹಗಳೂ ಸಿದ್ಧವಾಗಿ ಬಂದವು. ವಕೀಲ್ ಕೃಷ್ಣಸ್ವಾಮಯ್ಯರ ಮೂಲಕ ತಿನ್ನವೆಲ್ಲಿಯಲ್ಲಿ ಸಿದ್ಧ ಮಾಡಲ್ಪಟ್ಟ ಬಂಗಾರದ ಪ್ರಾಸಾದಕಲಶಗಳೂ ಬಂದು

ಸೇರಿದವು. ಹೀಗೆ ಪ್ರತಿಷ್ಠಾನುಕೂಲ ಸಾಧನಗಳೆಲ್ಲವೂ ಪೂರ್ಣವಾಗಿರಲು, ಮಾಘ ಶುಕ್ಲ ಪಂಚಮೀ ಸೋಮವಾರ ಪ್ರಾತಃಕಾಲದಲ್ಲಿ ಶ್ರೀಗಳವರು ಯಾಗಶಾಲೆಗೆ ಚಿತ್ತೈಸಿ ಯಾಗಸಂಕಲ್ಪವನ್ನು ಮಾಡಿಸಿ ಈ ದೇವಯಾಗದಲ್ಲಿ ಆಚಾರ್ಯಾದಿ ಋತ್ವಿಗ್ವರಣವಾದ ಬಳಿಕ ಆ ಬ್ರಾಹ್ಮಣರನ್ನೂ ಉಪದ್ರಷ್ಟ್ರುಗಳಾದ ಪಂಡಿತರನ್ನೂ ಕುರಿತು ನಿಯಮದಿಂದಲೂ ಭಕ್ತಿ ವಿಶ್ವಾಸಗಳಿಂದಲೂ ಯಥೋಕ್ತವಾಗಿ ಕರ್ಮಾನುಷ್ಠಾನ ಮಾಡಿ ಆಚಾರ್ಯಾನುಗ್ರಹ ಪಾತ್ರರಾಗತಕ್ಕದ್ದೆಂದು ಬುದ್ಧಿವಾದಗಳಿಂದ ಆಶೀರ್ವದಿಸಿ ದಯಮಾಡಿದರು. ಆ ದಿನದಿಂದ ಕರ್ಮಪ್ರಾರಂಭವಾಗಿ ಜಲಾಧಿವಾಸ, ಧಾನ್ಯಾಧಿವಾಸ, ಶಯ್ಯಾಧಿವಾಸ, ಸ್ಥಲಾಧಿವಾಸಗಳೂ ಆಯಾ ಹೋಮಗಳೂ ಪ್ರತಿಷ್ಠಾಕರ್ಮಾಂಗವಾದ ಮಂತ್ರಪುರಶ್ಚರಣೆಗಳೂ ಯಥಾವಿಧಿ ಯಾಗಿ ಸಪ್ತರಾತ್ರಿಗಳು ಜರುಗಿ, ಶಾ|| 1832ನೆಯ ಸೌಮ್ಯ ಸಂವತ್ಸರ (1910ನೇ ಇಸವಿ) ಮಾಘಶುದ್ಧ ದ್ವಾದಶೀ ಸೋಮವಾರದ ಅಭಿಜಿನ್ಮುಹೂರ್ತದಲ್ಲಿ ಮೂರ್ತಿಪ್ರತಿಷ್ಠೆಯು ಮಾಡಲ್ಪಟ್ಟಿತು. ಪ್ರತಿಷ್ಠಾ ನಂತರ ಶ್ರೀಗಳವರು ಆಲಯಗಳಿಗೆ ದಯಮಾಡಿ ಮೂರ್ತಿಗಳಲ್ಲಿ ಚತುಷ್ಷಷ್ಟಿ ಕಲಾವಾಹನಪುರಸ್ಸರ ಪ್ರಾಣಪ್ರತಿಷ್ಠೆಯನ್ನು ಮಾಡಿಸಿ, ಯಥೋಕ್ತ ಪೂಜಾನಂತರ ಅಲ್ಲಿ ಬಂದಿದ್ದ ಶಿಷ್ಯವರ್ಗಕ್ಕೆ ತೀರ್ಥಪ್ರಸಾದಗಳನ್ನು ಕೊಡಿಸಿ ಅನುಗ್ರಹಿಸಿದರು. ಈ ಮಹೋತ್ಸವದ ದರ್ಶನಕ್ಕೆ ಭರತಖಂಡದ ಎಲ್ಲಾ ಭಾಗಗಳಿಂದಲೂ ಆಚಾರ್ಯಭಕ್ತ ಜನರು ಬಂದಿದ್ದರು. ಆಗ ಕಾಲಟಿ ಭೂಮಿಯಲ್ಲಿ ಸುಮಾರು 50 ಸಹಸ್ರ ಜನರು ಸೇರಿದ್ದರೆಂದರೆ ಆಶ್ಚರ್ಯಕರವಲ್ಲವು. ಆ ದಿನದಲ್ಲಿ ಪ್ರಾತಃಕಾಲ ಎಂಟುಗಂಟೆಗೆ ಪ್ರಾರಂಭಿಸಿ ಮಧ್ಯಾಹ್ನ ಎರಡು ಗಂಟೆಗಳವರೆಗೂ ಅವಿಚ್ಛಿನ್ನವಾಗಿ ಅನೇಕ ಪಜ್ಕ್ತಿಗಳಿಂದ ಬ್ರಾಹ್ಮಣಸುವಾಸಿನೀ ಭೋಜನವನ್ನು ಮಾಡಿಸಿದ್ದಾಯಿತು. ಮಧ್ಯಾಹ್ನ ನಾಲ್ಕುಗಂಟೆಗೆ ಶ್ರೀಗಳವರು ವಿಸ್ತಾರವಾದ ಮಠದ ಮುಂಭಾಗದಲ್ಲಿ ಆಸನಸ್ಥರಾಗಿ ಉತ್ಸವದರ್ಶನಕ್ಕೆ ಬಂದಿದ್ದ ಶಿಷ್ಯಮಂಡಲಿಗೆ ಧರ್ಮಸ್ವರೂಪ, ತದನುಷ್ಠಾನಕ್ರಮ, ಅದರ ಪ್ರಯೋಜನ, ಆಚಾರ್ಯ ಭಗವತ್ಪಾದರವರ ಮಹಿಮೆ, ಆ ಮಹನೀಯರಿಂದ ಪ್ರಪಂಚಕ್ಕೆ ಉಂಟಾದ ಉಪಕಾರ, ಇವು ಮೊದಲಾದ ವಿಷಯಗಳನ್ನು ವಿಸ್ತಾರವಾಗಿ ಉಪದೇಶಿಸಿ ಜನಗಳ ಅಭ್ಯುದಯಕ್ಕೋಸ್ಕರವೇ ಆಚಾರ್ಯರಿಂದ ಪ್ರೇರಿತರಾಗಿ ಕಾಲಟಿ ಕ್ಷೇತ್ರದಲ್ಲಿ ಆಚಾರ್ಯಮೂರ್ತಿ ಪ್ರತಿಷ್ಠೆಯನ್ನು ಮಾಡಿರುವುದರಿಂದ ಆಗಾಗ್ಗೆ ತಮ್ಮ ತಮ್ಮ ಅವಕಾಶ ಕಾಲಗಳಲ್ಲಿ ಬಂದು ಆಚಾರ್ಯದರ್ಶನ ತತ್ಸೇವಾದಿಗಳಿಂದ ಚಿತ್ತಶುದ್ಧಿಯನ್ನು ಪಡೆದು ಕೃತಾರ್ಥರಾಗಲು ಯತ್ನಿಸುವುದು ಕರ್ತವ್ಯವೆಂದೂ ತಿಳಿಸಿದರು. ಈ ಮಹಾಕಾರ್ಯದಲ್ಲಿ ಮೊದಲಿಂದಲೂ ತಮ್ಮ ಆಜ್ಞೆಗೆ ವಶರಾಗಿ ಮನಸ್ಸಿನಿಂದಲೂ ಶರೀರದಿಂದಲೂ ವಿಶೇಷವಾಗಿ ಪ್ರಯಾಸಪಟ್ಟು ಜಗದ್ಗುರು ಸೇವೆಯನ್ನು ಮಾಡಿ ಗುರುಪ್ರಸಾದಕ್ಕೂ ಆಚಾರ್ಯಶಿಷ್ಯಕೋಟಿಗಳ

ಪ್ರೀತಿಗೌರವಗಳಿಗೂ ಸರಿಯಾದ ಪಾತ್ರವೆನಿಸಿಕೊಂಡ ರಾಮಚಂದ್ರಯ್ಯರವರ ಗುಣಾತಿಶಯಗಳನ್ನು ಅಭಿನಂದಿಸಿ ಮಹಾಸಭೆಯಲ್ಲಿ ಗುರುಭಕ್ತಕೇಸರಿ ಎಂಬ ಅನ್ವರ್ಥ ನಾಮದಿಂದ ಅವರನ್ನನುಗ್ರಹಿಸಿ, ರತ್ನಖಚಿತವಾದ ರುದ್ರಾಕ್ಷಿಕಂಠಿ ಮೊದಲಾದವುಗಳಿಂದ ಸನ್ಮಾನಿಸಿದರು. ಮತ್ತು ಇವರಿಗೆ ಸಹಾಯಕರಾಗಿದ್ದು ತಮ್ಮ ಶಿಲ್ಪವಿದ್ಯಾಪಾಂಡಿತ್ಯವನ್ನು ಗುರುಸೇವೆಯಲ್ಲಿ ಉಪಯೋಗಿಸಿದ ಸುಬ್ಬರಾಯಯ್ಯರನ್ನೂ ಶ್ಲಾಘಿಸಿ ಅನುಗ್ರಹಿಸಿದರು. ಆ ದಿನದ ಸಭೆಯಲ್ಲಿ ಶಿವಗಂಗಾಮಠಾಧಿಪತಿಗಳಾಗಿದ್ದ ಶ್ರೀ ಸುಬ್ರಹ್ಮಣ್ಯಾಭಿನವ ಸಚ್ಚಿದಾನಂದ ಭಾರತೀಸ್ವಾಮಿಗಳವರು, ಮೈಸೂರು ಅನಂತಶಯನಸಂಸ್ಥಾನಗಳಲ್ಲಿ ರಾಜಾಮಾತ್ಯ ಪದವಿಯಲ್ಲಿದ್ದು ವಿಶ್ರಾಂತರಾಗಿ ಶ್ರೀಗಳವರ ಭಕ್ತಾಗ್ರಗಣ್ಯರೆನಿಸಿಕೊಂಡಿದ್ದ ವಿ. ಪಿ. ಮಾಧವರಾಯರು, ಅನಂತಶಯನ ಸಂಸ್ಥಾನದ ದಿವಾನರಾಗಿದ್ದ ರಾಜಗೋಪಾಲಾಚಾರ್ಯರು. ಮೈಸೂರು ಸಂಸ್ಥಾನದ ರಾಜಮಂತ್ರಾಲೋಚನ ಸಭೆಯಲ್ಲಿ ಅಧಿಕೃತರಾಗಿದ್ದ ಹೆಚ್.ವಿ. ನಂಜುಂಡಯ್ಯನವರು, ಮಹಾಮಹೋಪಾಧ್ಯಾಯ ಹರಿಹರ ಶಾಸ್ತ್ರಿಗಳು ಇವರು ಮೊದಲಾದ ಅನೇಕ ಸಹಸ್ರ ಜನ ಲೌಕಿಕ ವೈದಿಕ ಪ್ರಮುಖರು ಸೇರಿದ್ದರು. ಈ ರೀತಿಯಿಂದ ಉದ್ದಿಷ್ಟ ಮಹಾಕಾರ್ಯವು ನಿರಂತರವಾಗಿಯೂ ನಿರುಪಮವಾಗಿಯೂ ಶ್ರೀಮದಾಚಾರ್ಯಾನುಗ್ರಹದಿಂದ ನೆರವೇರಿದ ನಂತರ ಅಲ್ಲಿ ಬಂದಿದ್ದ ವಿದ್ವಾಂಸರಿಗೂ, ಬಡವರಿಗೂ ಅವರವರ ಯೋಗ್ಯತೆಗನುಸಾರವಾಗಿ ಸನ್ಮಾನಗಳನ್ನು ಕೊಡಿಸಿ ಬಂದವರಿಗೆಲ್ಲಾ ತೀರ್ಥಪ್ರಸಾದಗಳನ್ನಿತ್ತು ಅವರವರ ಸ್ಥಳಗಳಿಗೆ ಪ್ರಯಾಣ ಮಾಡಲು ಅಪ್ಪಣೆ ಕೊಟ್ಟರು. ಪ್ರತಿಷ್ಠಿತವಾದ ಮೂರ್ತಿಗಳಲ್ಲಿ ವಿಶೇಷವಾದ ದೇವತಾ ಸಾನ್ನಿಧ್ಯವುಂಟಾಗುವುದಕ್ಕೂ ಆಚಾರ್ಯ ಭಕ್ತಿಕ್ರಮವನ್ನು ತಮ್ಮ ಅನುಷ್ಠಾನದಿಂದ ಜನಗಳಿಗೆ ತಿಳಿಯ ಪಡಿಸುವುದಕ್ಕೂ ಕುಂಭಾಭಿಷೇಕ ಕಾಲದಲ್ಲಿ ಕಾಲಟಿಗೆ ಬರಲು ಅವಕಾಶವಿಲ್ಲದೆ ನಿಂತಶಿಷ್ಯರು ಅನಂತರ ಕಾಲದಲ್ಲಿಯಾದರೂ ಬಂದು ದರ್ಶನ ಮಾಡಿ ಕೃತಾರ್ಥರಾಗಲು ಅನುಕೂಲ್ಯವನ್ನು ಕಲ್ಪಿಸುವುದಕ್ಕೂ ಶ್ರೀಗಳವರು ಮೂರು ತಿಂಗಳ ಕಾಲ ಕಾಲಟಿ ಕ್ಷೇತ್ರದಲ್ಲಿ ವಾಸಮಾಡಿ ಪ್ರತಿದಿನವೂ ಆಚಾರ್ಯ ಸನ್ನಿಧಿಯಲ್ಲಿಯೂ ಶಾರದಾ ಸನ್ನಿಧಿಯಲ್ಲಿಯೂ ಕೆಲವು ಗಂಟೆಗಳ ಕಾಲ ಮಹಾಮಂತ್ರಗಳನ್ನು ಜಪಿಸಿ ಆ ಮೂರ್ತಿಗಳನ್ನು ಆರಾಧಿಸುತ್ತಲೂ ಆಚಾರ್ಯದರ್ಶನಕ್ಕೆಂದು ಬರುವ ಜನರಿಗೆ ಸದುಪದೇಶವನ್ನು ಮಾಡುತ್ತಲೂ ಆನಂದಭರಿತರಾಗಿದ್ದರು. ಆಗ ಕೊಚ್ಚಿ ಸಂಸ್ಥಾನದ ರಾಜರು ಕಾಲಟಿಗೆ ಬಂದು ಆಚಾರ್ಯದರ್ಶನವನ್ನು ಮಾಡಿ ಶ್ರೀಗಳವರನ್ನು ಸತ್ಕರಿಸಿ ಇವರ ಅನುಗ್ರಹವನ್ನು ಪಡೆದರು. ಮತ್ತು ತರ್ಕ ವ್ಯಾಕರಣಶಾಸ್ತ್ರಗಳಲ್ಲಿ ಪಂಡಿತರಾಗಿದ್ದ ಆ ರಾಜರು ಶ್ರೀಗಳವರ ಸನ್ನಿಧಿಯಲ್ಲಿ ಆಸ್ಥಾನವಿದ್ವಾಂಸರೊಡನೆ ಶಾಸ್ತ್ರಾರ್ಥವಿಚಾರವನ್ನು ನಡೆಸಿ ಶ್ರೀಗಳವರಿಂದ ತತ್ಸಂಬಂಧವಾದ ವಿಶೇಷಾರ್ಥಗಳನ್ನು ಗ್ರಹಿಸಿ ಆನಂದಪಟ್ಟು

ಶ್ರೀಗಳವರ ಅಪ್ಪಣೆಯನ್ನು ಪಡೆದರು. ಶ್ರೀಗಳವರ ಅಂತರಂಗಭಕ್ತರೂ ಅವರ ಪ್ರಾಣಸಮರೂ ಆದ ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಪ್ರಭುಗಳು ಕಾಲಟಿ ಕ್ಷೇತ್ರಗತರಾದ ಆಚಾರ್ಯ ಭಗವತ್ಪಾದರವರ ದರ್ಶನಕ್ಕೂ ಆ ಮಹನೀಯರ ದರ್ಶನವನ್ನು ತಮಗೆ ಆ ಕ್ಷೇತ್ರದಲ್ಲಿ ಮಾಡಿಸಿ ತಮ್ಮನ್ನು ಅನುಗ್ರಹಿಸಲೋಸುಗ ಅಲ್ಲಿಯೇ ವಸತಿ ಮಾಡಿದ್ದ ಶ್ರೀಗಳವರ ದರ್ಶನಕ್ಕೂ ಮಿತಪರಿವಾರದೊಡನೆ ಬಂದು ಎರಡು ದಿನಗಳು ಶ್ರೀಗಳವರ ಅತಿಥಿಗಳಾಗಿದ್ದು ಶಾರದಾಂಬಾ ಸನ್ನಿಧಾನಕ್ಕೂ ಆಚಾರ್ಯ ಸನ್ನಿಧಾನಕ್ಕೂ ಅಮೂಲ್ಯ ವಸ್ತ್ರಾಭರಣರೂಪವಾದ ಉಪಹಾರಗಳನ್ನು ಸಮರ್ಪಿಸಿ ಶ್ರೀಮದಾಚಾರ್ಯ ಸನ್ನಿಧಿಯಲ್ಲಿ ಶ್ರೀಗಳವರಿಂದ ಅನುಗೃಹೀತವಾದ "ಧರ್ಮಮೂಲ" ಎಂಬ ಸಾರ್ಥಕನಾಮವನ್ನು ಭಕ್ತಿಭಾವದಿಂದ ಸ್ವೀಕರಿಸಿ, ಶ್ರೀಗಳವರನ್ನು ಆನಂದಗೊಳಿಸಿ ತಾವೂ ಆನಂದಭರಿತರಾಗಿ ಪ್ರಯಾಣ ಬೆಳೆಸಿದರು. ಶ್ರೀಗಳವರು ತಮ್ಮ ಸಂಕಲ್ಪದಂತೆ ಕಾಲಟಿ ಕ್ಷೇತ್ರದಲ್ಲಿ ವಿಜನವಾಗಿ ದಯಮಾಡಿಸಿದ್ದ ಸಮಯದಲ್ಲಿ ಅವರಲ್ಲಿಗೆ ಬಂದು ಮಂತ್ರೋಪದೇಶಗಳನ್ನೂ ಹಿತೋಪದೇಶಗಳನ್ನೂ ಆಚಾರ್ಯ ವಿರಚಿತ ಭಾಷ್ಯಾದಿ ಗ್ರಂಥೋಪದೇಶಗಳನ್ನೂ ಪಡೆದು ಅಸಂಖ್ಯಾಕ ಜನರು ಕೃತಾರ್ಥರಾದರು. ಈ ರೀತಿಯಿಂದ ಕೃತಕೃತ್ಯರಾದ ಶ್ರೀಗಳವರು ಅಲ್ಲಿ ಮುಂದೆ ನಿರಂತರವಾಸ ಮಾಡುವ ಜನರ ರಕ್ಷಣೆಗಾಗಿ ಒಂದು ಅಶ್ವತ್ಥವೃಕ್ಷದಲ್ಲಿ ಆಂಜನೇಯನನ್ನೂ ಅಶೋಕವೃಕ್ಷದಲ್ಲಿ ಕಾರ್ತವೀರ್ಯಾರ್ಜುನನನ್ನೂ ಸನ್ನಿಹಿತರಾಗಿರುವಂತೆ ಪ್ರಾರ್ಥಿಸಿ, ಆ ದೇವತೆಗಳ ಭಾವನೆಯಿಂದ ಆ ವೃಕ್ಷಗಳನ್ನು ತಾವೂ ಪೂಜಿಸಿ ಮುಂದೆ ಸ್ಥಿರವಾದ ಗುರುವಾರಗಳಲ್ಲಿ ಉಕ್ತದೇವತಾಭಾವನೆಯಿಂದ ಪೂಜಾ ನಿವೇದನಾದಿಗಳನ್ನು ನಡೆಸಿಕೊಂಡು ಬರುವಂತೆ ಅಲ್ಲಿಯ ವಿಚಾರಣೆಯ ಭಾರವನ್ನು ವಹಿಸಿಕೊಂಡ ರಾಮಚಂದ್ರಯ್ಯರಿಗೆ ನಿರೂಪಿಸಿ ಆ ಕ್ಷೇತ್ರದಿಂದ ಶೃಂಗೇರಿಯನ್ನುದ್ದೇಶಿಸಿ ಪ್ರಯಾಣ ಮಾಡಿದರು.

ಅನನ್ಯಭಾವದಿಂದ ಗುರುಭಕ್ತಿಯನ್ನೂ ಗುರುಸೇವೆಯನ್ನೂ ಅನೇಕ ಪ್ರಕಾರದಿಂದ ಮಾಡಿ ಅನನ್ಯ ಸಾಧಾರಣವಾದ ಗುರುಪ್ರಸಾದವನ್ನು ಪಡೆದು ಗುರುಭಕ್ತಕೇಸರಿ ಎಂದು ಗುರುಗಳಿಂದ ಅನುಗ್ರಹಿಸಲ್ಪಟ್ಟು ಲೋಕಪ್ರಸಿದ್ಧಿಯನ್ನು ಪಡೆದಿರುವ ರಾಮಚಂದ್ರಯ್ಯರ ವಿಷಯವಾಗಿ ಈ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಪ್ರಸ್ತಾಪಿಸೋಣವು ಇತರ ಜನರಿಗೆ ಪ್ರಯೋಜನಕಾರಿಯಾಗುವುದರಿಂದ ಅಪ್ರಸ್ತುತವೂ ಅಸಂಬದ್ಧವೂ ಆಗಲಾರದು. ಈ ರಾಮಚಂದ್ರಯ್ಯರು ತಂಜಾವೂರು ಜಿಲ್ಲಾ ನನ್ನಿಲಂ ತಾಲ್ಲೂಕು ಪನಂಗುಡಿ ಗ್ರಾಮದಲ್ಲಿ ಸಾಧಾರಣಗೃಹಸ್ಥರಾಗಿದ್ದ ಅಯ್ಯಾ ಸಾಮಯ್ಯರ ಮಕ್ಕಳು. ವಿಶೇಷವಾಗಿ ರಾಮಭಕ್ತರಾದ ಅಯ್ಯಾಸಾಮಯ್ಯರಿಗೆ ಈ ಪುತ್ರನೊಬ್ಬನೇ. ಸ್ತ್ರೀಪ್ರಜೆಯು ಹೆಚ್ಚು. ಅವರು ಕುಟುಂಬ ನಿರ್ವಾಹವನ್ನು ಅತಿಕಷ್ಟದಿಂದ ನಡೆಸುವ ಸ್ಥಿತಿಯಲ್ಲಿದ್ದರು. ತಮ್ಮ ಪುತ್ರನಿಗೆ ಜಾತಕರೀತಿಯಿಂದ

ವೇದಶಾಸ್ತ್ರಗಳಲ್ಲಿ ಶ್ರದ್ಧೆಯುಂಟಾಗಲಾರದೆಂದೂ ಇತರ ಭಾಷಾಜ್ಞಾನವನ್ನು ಸಂಪಾದಿಸಿ ಅದರಿಂದ ವರ್ಧಿಷ್ಣುವಾಗಿ ಪ್ರಸಿದ್ಧಿಗೆ ಬರುವನೆಂದೂ ತಿಳಿದು ರಾಜಕೀಯ ಭಾಷಾಭ್ಯಾಸವನ್ನು ಬಹುಶ್ರಮಪಟ್ಟು ಮಾಡಿಸಿದರು. ಪ್ರಾಕ್ತನ ವಾಸನಾ ಬಲದಿಂದ ಅದರಲ್ಲಿ ಹೆಚ್ಚಿನ ಅಭಿರುಚಿಯುಂಟಾಗಿ ಇವರು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಉತ್ತೀರ್ಣರಾದರು. ಮೊದಲು ಮಲಬಾರಿನಲ್ಲಿ ಎಪ್ಪತ್ತು ರೂಪಾಯಿಗಳ ವೇತನದ ಆಂಗ್ಲೇಯ ಪಾಠಶಾಲೋಪಾಧ್ಯಾಯರಾಗಿ ನಿಯಮಿಸಲ್ಪಟ್ಟರು. ಯೋಗಕಾಲವೊದಗಲು ಇವರು ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬಳಿಕ ಸ್ಕೂಲಿನಿಂದ ನಿವೃತ್ತರಾಗಿ ಚೆನ್ನಪಟ್ಟಣಕ್ಕೆ (ಮದರಾಸು) ಬಂದು ಅಲ್ಲಿ ವಕೀಲರಾಗಿ ನಿಂತರು. ಪ್ರಾಮಾಣಿಕತ್ವ ಸ್ಥೈರ್ಯ ವಾಙ್ಮಾಧುರ್ಯಾದಿಗಳಿಂದ ಅತಿಕ್ಷಿಪ್ರಕಾಲದಲ್ಲಿ ಹೆಚ್ಚಾದ ಪ್ರಸಿದ್ಧಿಗೆ ಬಂದು ವಿಶೇಷವಾಗಿ ದ್ರವ್ಯವನ್ನು ಅರ್ಜಿಸಿ ತಮ್ಮ ಗ್ರಾಮದಲ್ಲಿ ಯೋಗ್ಯವಾದ ಭೂಮಿಯನ್ನೂ ಗೃಹವನ್ನೂ ಕಲ್ಪಿಸಿ ಕುಟುಂಬನಿರ್ವಾಹವನ್ನು ಉತ್ತಮ ರೀತಿಯಿಂದ ನಡೆಸುತ್ತ ಬಂದು, ಬಾಲ್ಯದಲ್ಲಿ ಚಾತಕಭಾವದಿಂದ ತಮ್ಮ ಪುರೋಭಿವೃದ್ಧಿಯನ್ನು ತಿಳಿದು ಅನನುಕೂಲಗಳನ್ನು ಲಕ್ಷ್ಯಮಾಡದೆ ತಮಗೆ ಆಂಗ್ಲೇಯ ವಿದ್ಯಾಭ್ಯಾಸ ಮಾಡಿಸಿ ತಮ್ಮ ಅಭ್ಯುದಯವನ್ನು ನಿರೀಕ್ಷಿಸುತ್ತಿದ್ದ ತಂದೆಯನ್ನು ಸಂತೋಷಗೊಳಿಸಿದರು. ಇವರ ತಂದೆಯವರು ಅವಸಾನ ಕಾಲದಲ್ಲಿ ಸ್ವಹಸ್ತಲಿಖಿತವಾದ ವಾಲ್ಮೀಕಿ ರಾಮಾಯಣ ಸುಂದರಕಾಂಡ ಪುಸ್ತಕವನ್ನು ಇವರಿಗೆ ಕೊಟ್ಟು 45-46 ಸಂವತ್ಸರದ ವಯಸ್ಸಾದ ನಂತರ ಸದ್ಗುರುಲಾಭವೂ ಸನ್ಮತಸದಾಚಾರಗಳಲ್ಲಿ ವಿಶ್ವಾಸವೂ ಉಂಟಾಗುವುದೆಂದು ಆಶೀರ್ವದಿಸಿ ನಿರ್ಯಾಣ ಹೊಂದಿದರೆಂದು ತಿಳಿದು ಬರುವುದು. ಈ ರಾಮಚಂದ್ರಯ್ಯರು ಬಹಳ ಪ್ರಾಮಾಣಿಕರಾಗಿ ವಕೀಲತನದಿಂದ ವಿಶೇಷವಾಗಿ ಅರ್ಥಾರ್ಜನೆಮಾಡಿ ಆಗಿನ ಕಾಲದಲ್ಲಿ ಪ್ರಸಿದ್ಧಿಗೆ ಬಂದಿದ್ದರೂ ಇವರ ಸ್ವಭಾವಗುಣಕ್ಕೆ ಅದು ರುಚಿಕರವಾಗಿಯೂ ಉತ್ಸಾಹಕರವಾಗಿಯೂ ಇರಲಿಲ್ಲ. ಈ ಸಂದರ್ಭದಲ್ಲಿ ಅನಂತಶಯನದ ಮಹಾರಾಜರು ಹೈಕೋರ್ಟಿನ ಮೊದಲನೆಯ ಜಡ್ಜಿ ಸ್ಥಾನಕ್ಕೆ ಯೋಗ್ಯರಾದ ಒಬ್ಬರನ್ನು ಅಪೇಕ್ಷಿಸಲು ಚೆನ್ನಪಟ್ಟಣದ ಹೈಕೋರ್ಟು ಜಡ್ಜಿಗಳೆಲ್ಲರೂ ಭಿನ್ನಾಭಿಪ್ರಾಯವಿಲ್ಲದೆ ಈ ರಾಮಚಂದ್ರಯ್ಯರನ್ನೇ ಚುನಾಯಿಸಿದರು. ಆ ಪದವಿಯಿಂದ ಹೆಚ್ಚಿನ ದ್ರವ್ಯವು ಲಭಿಸಲಾರದೆಂದು ತಿಳಿದಿದ್ದರೂ ಅದು ತಮ್ಮ ಸ್ವಭಾವಕ್ಕೆ ಅನುಗುಣವಾದುದೆಂದು ಒಪ್ಪಿ ಅದುವರೆಗೆ ತಮ್ಮಲ್ಲಿ ಬಂದಿದ್ದ ಅನೇಕ ವ್ಯವಹಾರಗಳನ್ನು ಹನ್ನೆರಡು ಸಹಸ್ರ ರೂಪಾಯಿಗಳೊಂದಿಗೆ ಇತರರಿಗೆ ವಹಿಸಿಕೊಟ್ಟು ಅನಂತಶಯನ ಸಂಸ್ಥಾನದಲ್ಲಿ ಉತ್ತಮ ಪ್ರಾಡ್ವಿವಾಕ ಪದವಿಯನ್ನು ಪಡೆದರು. ಒಂದು ವರ್ಷ ಅಲ್ಲಿ ಕೆಲಸ ಮಾಡುವಷ್ಟರಲ್ಲಿ ಮೈಸೂರು ಸಂಸ್ಥಾನದ ಚೀಫ್‌ಕೋರ್ಟು ಜಡ್ಜಿಯಾಗಿ ಇರಬೇಕೆಂದು ಈ

ಸಂಸ್ಥಾನದ ಅಧಿಕಾರಿಗಳು ಅಪೇಕ್ಷಿಸಲು ಅನಂತಶಯನದಿಂದ ಮೈಸೂರಿಗೆ ಬಂದು ಚೀಫ್‌ಕೋರ್ಟಿನ ಮೂರನೆಯ ಜಡ್ಜಿಯಧಿಕಾರವನ್ನು ಒಪ್ಪಿಕೊಂಡರು. ಸತ್ಯ, ಅಹಿಂಸೆ, ಪರೋಪಕಾರ ಇವುಗಳೇ ಮನುಷ್ಯ ಜನ್ಮಸಾಫಲ್ಯಕ್ಕೆ ಕಾರಣವಾದವುಗಳೆಂದು ತಿಳಿದು, ಈ ಸಾಮಾನ್ಯ ಧರ್ಮಗಳನ್ನು ಸಂಪೂರ್ಣವಾಗಿ ಆಚರಣೆಯಲ್ಲಿಟ್ಟುಕೊಂಡಿದ್ದರು. ಇವರು ಸಂತಾನವಿಲ್ಲದವರಾದರೂ ಸಹೋದರಿಯರುಗಳನ್ನೂ ಅವರ ಸಂತತಿಗಳನ್ನೂ ಆದರಿಸಿ ವಿದ್ಯಾಭ್ಯಾಸ ಮಾಡಿಸಿ ಭಾಗಿನೇಯರನ್ನು ಅಭಿವೃದ್ಧಿಗೆ ತಂದರು. ಅತ್ಯಂತ ದರಿದ್ರರಾದ ಸಂಸಾರಿಗಳನೇಕರಿಗೆ ಮಾಸಾಶನಗಳನ್ನು ಕೊಟ್ಟು ಸಹಕರಿಸಿದರು. ಬಹುಮಂದಿ ವಿದ್ಯಾರ್ಥಿಗಳಿಗೆ ಅಶನವಸನಪುಸ್ತಕಾರ್ಥವಾಗಿ ವೇತನಗಳನ್ನು ಕೊಟ್ಟು ಉಪಕರಿಸಿದರು. ಹೀಗಿದ್ದರೂ ಇವರ ಜನ್ಮಾಂತರಸತ್ಕರ್ಮ ಪರಿಪಾಕಕಾಲವು ಒದಗಿ ಬಾರದಿದ್ದುದರಿಂದ ಇವರಿಗೆ ಕರ್ಮಶ್ರದ್ಧೆಯೂ ಗುರುದೇವತಾ ವಿಶ್ವಾಸವೂ ಉಂಟಾಗಿ ಅದರ ಪ್ರಯೋಜನವನ್ನು ಪಡೆಯಲು ಅವಕಾಶವಿರಲಿಲ್ಲವು. ಖರಸಂವತ್ಸರದಲ್ಲಿ (1891ನೇ ಇಸವಿ) ಶ್ರೀಗಳವರ ಸವಾರಿಯು ರಾಮಸೇತು ಯಾತ್ರಾರ್ಥವಾಗಿ ಹೊರಟು ಮೈಸೂರು ರಾಜಧಾನಿಗೆ ದಯ ಮಾಡಿಸಿದ್ದಾಗ ಇವರು ತಮ್ಮ ಅತ್ಯಂತ ಮಿತ್ರರಾದ ದಿವಾನ್ ಶೇಷಾದ್ರಯ್ಯರಿಂದ ಆಹೂತರಾಗಿ ಅವರ ಗೃಹದಲ್ಲಿ ಸಕೃದಾವೃತ್ತಿ ಶ್ರೀಗಳವರ ಸಂದರ್ಶನವನ್ನು ಮಾಡಿದರು. ಅದೂ ಇವರ ಸತ್ಕರ್ಮ ಪರಿಪಾಕ ಕಾಲವಾಗಿರಲಿಲ್ಲವಾದುದರಿಂದ ಇವರಿಗೆ ಗುರುಭಕ್ತಿಯೂ ವಿಶ್ವಾಸವೂ ಉಂಟಾಗಲಿಲ್ಲ. ಶ್ರೀಗಳವರು ರಾಮಸೇತುಯಾತ್ರೆಯನ್ನು ಪೂರ್ತಿಮಾಡಿಕೊಂಡು ಹಿಂತಿರುಗಿ ಬಿಜಯ ಮಾಡುವ ಸಂದರ್ಭದಲ್ಲಿ ಹಿಂದೆ ಹೇಳಿರುವಂತೆ ಮನ್ಮಥ ಸಂವತ್ಸರದಲ್ಲಿ (1895ನೇ ಇಸವಿ) ಬೆಂಗಳೂರಿನಲ್ಲಿ ಎರಡನೆಯ ಸಾರಿ ಶ್ರೀಗಳವರ ದರ್ಶನವಾಯಿತು. ಆಗ ಇವರ ಸುಕೃತಪರಿಪಾಕದಿಂದ ಶ್ರೀಗಳವರ ವಿಷಯದಲ್ಲಿ ಇವರಿಗೆ ಸ್ವಲ್ಪ ಗೌರವ ಬುದ್ಧಿಯು ಅಂಕುರಿತವಾಯಿತು. ಮಹನೀಯರಾದ ಶ್ರೀಗಳವರಿಗೆ ಇವರ ಕರ್ಮಪರಿಪಾಕಕಾಲವೂ ಮನೋಭಾವವೂ ಗೋಚರವಾಯಿತೋ ಎಂಬಂತೆ ತಾವು ಶೃಂಗೇರಿಯನ್ನು ಸೇರಿದಕೂಡಲೇ ಅಲ್ಲಿ ಸಾವಕಾಶವಾಗಿ ಬರಬೇಕೆಂದು ಅಪ್ಪಣೆ ಕೊಡಲು, ಹಾಗೆಯೇ ಆಗಲೆಂದು ತಿಳಿಸಿ ಕೆಲವು ದಿನಗಳ ನಂತರ ತಮ್ಮ ಅವಕಾಶ ಕಾಲದಲ್ಲಿ ಇವರು ಶೃಂಗೇರಿಗೆ ಬಂದರು. ಆಗ ಶ್ರೀಗಳವರು ಉಪದೇಶಿಸಿದ ಹಿತೋಕ್ತಿಗಳೆಲ್ಲವೂ ಸಕೃಚ್ಛ್ರವಣದಿಂದಲೇ ಇವರ ಮನಶ್ಶುದ್ಧಿಯನ್ನು ಮಾಡುವುದರಲ್ಲಿ ಅತ್ಯಂತ ಸಮರ್ಥಗಳಾದವು. ಇವರಿಗೆ ಕರ್ಮಸ್ವರೂಪವನ್ನೂ ಕರ್ಮಾನುಷ್ಠಾನರೀತಿ ಪ್ರಯೋಜನಗಳನ್ನೂ ಸಂಗ್ರಹವಾಗಿ ಬೋಧಿಸಿ ಚಿತ್ತಶುದ್ಧಿಯ ಮೂಲಕ ಮೋಕ್ಷಪ್ರದವಾದ ಶಿವಪಂಚಾಕ್ಷರೀಮಂತ್ರವನ್ನುಪದೇಶಿಸಿ ಅನುಗ್ರಹ ಮಾಡಿ ಕಳುಹಿದರು. ಮಹಾತ್ಮರ ಅನುಗ್ರಹಬಲದಿಂದಲೂ ಪ್ರಾಕ್ತನ

ಸದ್ವಾಸನಾಪ್ರಭಾವದಿಂದಲೂ ದಿನದಿನಕ್ಕೆ ಇವರಿಗೆ ಆಸ್ತಿಕ್ಯವು ಹೆಚ್ಚಲು, ಪ್ರತಿ ವರ್ಷವೂ ತಪ್ಪದೆ ವಿರಾಮ ಕಾಲದಲ್ಲಿ ಶೃಂಗೇರಿಗೆ ಬಂದು ಶ್ರೀಗಳವರ ಸನ್ನಿಧಿಯಲ್ಲಿ ಕೆಲವು ದಿನಗಳು ವಾಸಮಾಡಿ ಅವರ ಮುಖದಿಂದ ಅನೇಕ ಸದ್ವಿಷಯಗಳನ್ನು ಸಂಗ್ರಹಿಸುತ್ತ ಅನೇಕ ಮಂತ್ರಗಳನ್ನೂ ಮಂತ್ರಾನುಷ್ಠಾನಕ್ರಮಗಳನ್ನೂ ಸಂಪಾದಿಸುತ್ತ ಸಗುಣೋಪಾಸನಾಕ್ರಮವನ್ನು ತಿಳಿದು ಸಗುಣಮೂರ್ತ್ಯಾರಾಧನೆಯನ್ನು ಮಾಡಲು ಉಪಕ್ರಮಿಸಿದರು. ಈ ರೀತಿಯಿಂದ ಪೂರ್ವವಾಸನೆಯೊಡನೆ ವರ್ತಮಾನ ಜನ್ಮ ಸದ್ವಾಸನೆಯು ಸೇರಿ ರಾಮಚಂದ್ರಯ್ಯರನ್ನು ಅನನ್ಯ ಕಾರ್ಯಾಸಕ್ತರನ್ನಾಗಿ ಮಾಡಿ ಇವರಿಗೆ ಸತ್ಕರ್ಮಾನುಷ್ಠಾನ ಸದ್ವಿಷಯ ವಿಚಾರಗಳಲ್ಲಿಯೇ ಕಾಲವನ್ನು ಕಳೆಯಬೇಕೆಂಬ ವಿಷಯದಲ್ಲಿ ಆಸಕ್ತಿಯನ್ನು ಹೆಚ್ಚಿಸುತ್ತ ಬಂದಿತು. ಆದರೂ ಲೌಕಿಕ ಕಾರ್ಯದಿಂದ ನಿವೃತ್ತರಾಗಲು ಗುರ್ವಾಜ್ಞೆಯು ಆವಶ್ಯಕವಾಗಿದ್ದುದರಿಂದ ಗುರುಗಳ ಆಜ್ಞೆಗಾಗಿ ಮೂರು ವರ್ಷ ನಿರೀಕ್ಷಿಸಿದರು. ಈ ಶಿಷ್ಯವರ್ಯರ ಮನಃಪರಿಪಾಕವನ್ನು ಬಹುಪ್ರಕಾರವಾಗಿ ಪರೀಕ್ಷಿಸಿ ರಾಜಸೇವಾನಿರ್ಬಂಧದಿಂದ ನಿವೃತ್ತರಾಗಲು ಶ್ರೀಗಳವರು ಅನುಮತಿಯನ್ನಿತ್ತ ಕೂಡಲೇ ತಮ್ಮ ಅಭಿಪ್ರಾಯವನ್ನು ಮಹಾರಾಜರವರಲ್ಲಿ ತಿಳಿಸಿಕೊಂಡು ಇಂತಹ ಪ್ರಾಮಾಣಿಕಾಧಿಕಾರಿಯನ್ನು ಬಿಡುವುದರಲ್ಲಿ ಪ್ರಭುಗಳಿಗೆ ಅಭಿಪ್ರಾಯವಿಲ್ಲದಿದ್ದರೂ ಅವರಿಂದ ಅಪ್ಪಣೆಯನ್ನು ಪಡೆದು ನಿವೃತ್ತರಾದರು. ಅದು ಮೊದಲುಗೊಂಡು ಗುರುಸೇವೆ, ಗುರ್ವಾಜ್ಞಾ ಪರಿಪಾಲನೆ, ಗುರೂಪದಿಷ್ಟಾರ್ಥ ವಿಚಾರ, ಗುರೂಪದಿಷ್ಟ ಮಂತ್ರೋಪಾಸನೆ ಇವುಗಳಲ್ಲಿಯೇ ನಿರತರಾಗಿ ವಿಜನವಾಗಿಯೂ ಪರಿಶುದ್ಧವಾಗಿಯೂ ಇರತಕ್ಕ ಪ್ರದೇಶದಲ್ಲಿ ಕಾಲವನ್ನು ಆನಂದವಾಗಿ ಕಳೆಯುತ್ತಲಿರುವರು. ಈ ಮಹಾಫಲವು ಗುರುಪ್ರಸಾದದಿಂದ ಉಂಟಾದುದೋ! ಜನ್ಮಾಂತರೀಯ ಸಂಸ್ಕಾರದಿಂದ ಉಂಟಾದುದೋ ಎಂಬ ಸಂಶಯವು ಬರಬಹುದು. ಆಚಾರ್ಯ ಭಗವತ್ಪಾದರವರು

ದುರ್ಲಭಂ ತ್ರಯಮೇವೈತದ್ದೈವಾನುಗ್ರಹಹೇತುಕಮ್ ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥

ಎಂದು ವಿವೇಕ ಚೂಡಾಮಣಿಯಲ್ಲಿ ಹೇಳಿರುವಂತೆ ಈಶ್ವರಾನುಗ್ರಹದಿಂದ ಲಬ್ಧವಾದ ಮನುಷ್ಯ ಜನ್ಮದಲ್ಲಿ ಸತ್ಕರ್ಮ ಪರಿಪಾಕ ಕಾಲವು ಒದಗಿದ ಕೂಡಲೇ ಇವರಿಗೆ ಮಹಾಪುರುಷರ ಆಶ್ರಯವು ಲಬ್ಧವಾಯಿತು. ಮಹನೀಯರ ಉಪದೇಶದಿಂದ ಮೋಕ್ಷೇಚ್ಛೆಯುಂಟಾಗಿ ಅದಕ್ಕೆ ಸಾಧಕವಾದ ಉಪಾಸನೆಯಲ್ಲಿ ಪ್ರೇರಣೆಯಾಯಿತೆಂದು ಹೇಳಬಹುದು. ಇವರಿಗೆ ಸುಮಾರು 74 ವರುಷದ ವಯಸ್ಸಾಗಿರುವುದು. ಈ ವಯಸ್ಸಿನಲ್ಲಿಯೂ ಇವರು ಕಾಲಟಿ ಕ್ಷೇತ್ರದಲ್ಲಿ ವಾಸಿಸುತ್ತ ಗುರುಸೇವೆಯನ್ನೇ ಮಾಡುತ್ತಲಿರುವರು.

ಶ್ರೀಗಳವರು ಕಾಲಟಿಯಿಂದ ಹೊರಟು ಕೊಚ್ಚಿ ಸಂಸ್ಥಾನವನ್ನು ಪ್ರವೇಶಿಸಿ ಮದರಾಸು

ರಾಜಧಾನಿಯಲ್ಲಿ ಪ್ರಸಿದ್ಧರಾಗಿಯೂ ಹೈಕೋರ್ಟು ಜಡ್ಜಿಗಳಾಗಿಯೂ ಇದ್ದ ಪಿ. ಆರ್. ಸುಂದರಮಯ್ಯರ ಪ್ರಾರ್ಥನೆಯಂತೆ ಅವರ ಗ್ರಾಮವಾದ ಪುದುಕೋಡಿಗೆ ದಯಮಾಡಿಸಿ ಅವರ ಗೃಹದಲ್ಲಿ 5 ದಿನಗಳ ಪರ್ಯಂತ ಶ್ರೀಮದಾಚಾರ್ಯರವರ ಜಯಂತ್ಯುತ್ಸವವನ್ನು ನೆರವೇರಿಸಿ ಅಲ್ಲಿಂದ ಮುಂದೆ ಕೊಯಂಬತ್ತೂರು ನಾಮಕಲ್ಲುಗಳ ಮಾರ್ಗವಾಗಿ ಹೊರಟು ಸಾಧಾರಣ ಸಂವತ್ಸರದ ಚಾತುರ್ಮಾಸ್ಯ ಸಂಕಲ್ಪ ವ್ಯಾಸಪೂಜಾದ್ಯನುಷ್ಠಾನಗಳನ್ನು ಜರುಗಿಸಲು ಕಾವೇರೀತೀರದ ಅಯ್ಯಂಪಾಳಯವನ್ನು ಪ್ರವೇಶಿಸಿದರು. ಆ ಗ್ರಾಮದ ಮಿರಾಸುದಾರರಾದ ತಾಂಡವರಾಯಪಿಳ್ಳೆಯವರು ಪರಮಭಕ್ತರೆಂದೂ, ಅವರ ಪ್ರಾರ್ಥನೆಯಂತೆ ಹಿಂದಿನ ಯಾತ್ರೆಯಲ್ಲಿ ದಂಡಾಯುಧ ಸುಬ್ರಹ್ಮಣ್ಯ ಸ್ವಾಮಿ ಪ್ರತಿಷ್ಠೆಯು ಶ್ರೀಗಳವರ ಆಜ್ಞೆಗನುಸಾರವಾಗಿ ನಡೆಸಲ್ಪಟ್ಟಿರುವುದೆಂದೂ ಹಿಂದಿನ ಅಧ್ಯಾಯದಲ್ಲಿ ವಿಸ್ತರಿಸಿ ಹೇಳಿರುವುದಷ್ಟೆ? ಈಗಿನ ಯಾತ್ರೆಯಲ್ಲಿ ಶ್ರೀಗಳವರು ತಿರುಚಿನಾಪಳ್ಳಿಯಿಂದ ಅಯ್ಯಂಪಾಳಯ ಗ್ರಾಮಕ್ಕೆ ಪ್ಲವಂಗ ಸಂವತ್ಸರದ ಮಾಘಕೃಷ್ಣ ದ್ವಾದಶೀದಿನ ದಯಮಾಡಿಸಿ ಒಂದು ತಿಂಗಳು ಅಲ್ಲಿ ವಸತಿಯನ್ನು ಮಾಡಿದ್ದರು. ಆ ಕಾಲದಲ್ಲಿ ತಾಂಡವರಾಯ ಪಿಳ್ಳೆಯವರ ಪ್ರಾರ್ಥನೆಯಂತೆ ದಂಡಾಯುಧ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಮಹಾಮಂಟಪದ ಒಂದು ಭಾಗದಲ್ಲಿ ಶ್ರೀಶಂಕರ ಭಗವತ್ಪಾದಾಚಾರ್ಯರವರ ಮೂರ್ತಿಯನ್ನು ಪ್ರತಿಷ್ಠಿಸಿದ್ದಾಯಿತು. ಅದರಂತೆ ಶ್ರೀಗಳವರ 50ನೆಯ ವರ್ಷವು ಪೂರ್ತಿಯಾದ ಫಾಲ್ಗುಣ ಬಹುಳೈಕಾದಶಿಯಲ್ಲಿ ತಾಂಡವರಾಯಪಿಳ್ಳೆಯವರ ಕೋರಿಕೆಯಂತೆ ಶ್ರೀಗಳವರ ಆಜ್ಞೆಯನ್ನು ಪಡೆದು ಈ ಲೇಖಕನಿಂದ ಶ್ರೀಗಳವರ ಜ್ಞಾಪಕವಾಗಿ ಇವರ ಮೂರ್ತಿಯೂ ಆಚಾರ್ಯಮೂರ್ತಿಯ ಬಲಭಾಗದಲ್ಲಿ ಪ್ರತಿಷ್ಠಿಸಲ್ಪಟ್ಟಿತು. ಈ ರೀತಿಯಿಂದ ತಾಂಡವರಾಯ ಪಿಳ್ಳೆಯವರು ಶ್ರೀಗಳವರ ಶರಣಾಗತರಾಗಿ ತೋರಿಸುತ್ತಿದ್ದ ಅಚಂಚಲವಾದ ಭಕ್ತಿಯಿಂದಲೂ, ಶ್ರೀಗಳವರಿಂದ ಪ್ರತಿಷ್ಠಿತವಾದ ದಂಡಾಯುಧ ಸುಬ್ರಹ್ಮಣ್ಯ ಸ್ವಾಮಿಯ ಸಾನ್ನಿಧ್ಯದಿಂದಲೂ, ವಿಜನವಾದ ಕಾವೇರೀತೀರದಿಂದಲೂ ಶ್ರೀಗಳವರಿಗೆ ಆ ಗ್ರಾಮದಲ್ಲಿ ನಿಲ್ಲಲು ಅಭಿರುಚಿ ಇದ್ದದ್ದೂ ಸಹಜವಷ್ಟೆ ? ಅಲ್ಲಿ ಚಾತುರ್ಮಾಸ್ಯ ಸಂಕಲ್ಪವನ್ನು ಪೂರ್ತಿಮಾಡಿ ತಾಂಡವರಾಯ ಪಿಳ್ಳೆಯವರಿಗೆ ಭಕ್ತರತ್ನಂ ಎಂಬ ನಾಮಧೇಯವನ್ನನುಗ್ರಹಿಸಿ ಸೇಲಂ, ಧರ್ಮಪುರಿ, ಕೃಷ್ಣಗಿರಿಗಳ ಮಾರ್ಗವಾಗಿ ಮೈಸೂರು ಸಂಸ್ಥಾನಕ್ಕೆ ಸೇರಿದ ಕೋಲಾರ ಡಿಸ್ಟ್ರಿಕ್ಟಿಗೆ ದಯಮಾಡಿಸಿದರು. ಆ ಪ್ರಾಂತದ ಜನರಿಗೆ ಶ್ರೀಗಳವರ ದರ್ಶನವು ಲಭಿಸಿ ಬಹಳ ವರ್ಷಗಳಾಗಿದ್ದುವು. ಆ ಜನರ ನಿರ್ಬಂಧವಾದ ಪ್ರಾರ್ಥನೆಯಂತೆ ಶ್ರೀಗಳವರು ಆ ಪ್ರಾಂತಕ್ಕೆ ಬಿಜಯ ಮಾಡಿದ ಸಂದರ್ಭದಲ್ಲಿ ಸಿ. ಶ್ರೀಕಂಠೇಶ್ವರಯ್ಯರು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರಾಗಿದ್ದರು. ಇವರು ಪ್ರಸಿದ್ಧರಾದ ಶೇಷಾದ್ರಯ್ಯರವರ ಪ್ರೀತಿಗೆ ಪಾತ್ರರಾಗಿ

ಅವರಿಂದ ಅಭಿವೃದ್ಧಿಗೆ ತರಲ್ಪಟ್ಟು ಅವರ ಶಿಕ್ಷಾಬಲದಿಂದ ಲೋಕವ್ಯವಹಾರ ಜ್ಞಾನವನ್ನು ಚೆನ್ನಾಗಿ ಸಂಪಾದಿಸಿದವರು. ರಾಜಾಜ್ಞೆಯಂತೆ ಶ್ರೀಗಳವರನ್ನು ಸತ್ಕರಿಸುವುದು ಇವರಿಗೆ ಕರ್ತವ್ಯವಾಗಿಯೇ ಇದ್ದಿತು. ಅದರ ಜೊತೆಗೆ ಇವರು ಅನೇಕಾವೃತ್ತಿ ಶೇಷಾದ್ರಯ್ಯರ ಸಂಗಡ ಬಂದು ಶ್ರೀಗಳವರ ದರ್ಶನವನ್ನು ಮಾಡಿ ಅವರ ಪ್ರಭಾವವನ್ನೂ ಶೇಷಾದ್ರಯ್ಯರು ಅವರಲ್ಲಿ ಮಾಡುತ್ತಲಿದ್ದ ಭಕ್ತಿಯನ್ನೂ ನೋಡಿದ್ದುದರಿಂದ ಇವರಿಗುಂಟಾಗಿದ್ದ ಭಕ್ತಿಯೂ ಸೇರಿ ಶ್ರೀಗಳವರನ್ನು ಸತ್ಕರಿಸುವುದರಲ್ಲಿ ಇವರ ಉತ್ಸಾಹವನ್ನು ಬಲಪಡಿಸಿತು. ಭಕ್ತಿ ವಿಶ್ವಾಸಗಳಿಂದ ಶ್ರೀಗಳವರ ಸೇವೆಯನ್ನು ಮಾಡಿ ಅವರ ಅನುಗ್ರಹವನ್ನು ಸಂಪಾದಿಸಲು ಆಸಕ್ತರಾಗಿದ್ದ ಆ ಪ್ರಾಂತದ ಜನಗಳ ಸಹಾಯವೂ ಇವರಿಗೆ ಒದಗಿತು. ಈ ಕಾರಣಗಳಿಂದ ಶ್ರೀಗಳವರನ್ನು 46 ದಿನಗಳ ಪರ್ಯಂತ ತಮ್ಮ ಡಿಸ್ಟ್ರಿಕ್ಟಿನಲ್ಲಿ ನಿಲ್ಲಿಸಿಕೊಂಡು ಉತ್ತಮ ರೀತಿಯಿಂದ ಸತ್ಕರಿಸಿ ಪ್ರಸಾದವನ್ನು ಪಡೆದರು. ಈ ಸಮಯದಲ್ಲಿ ಚಿಕ್ಕಬಳ್ಳಾಪುರದ ಸಮೀಪದಲ್ಲಿರುವ ನಂದಿಬೆಟ್ಟಕ್ಕೆ ಬಹಳ ಬಾಲ್ಯವಯಸ್ಸಿನಲ್ಲಿ ತಮ್ಮ ಗುರುಗಳೊಡನೆ ಹೋಗಿದ್ದ ಸ್ಮರಣೆಯಿಂದ ಆ ಬೆಟ್ಟಕ್ಕೆ ಹೋಗಿ ಬರಬೇಕೆಂಬ ಅಭಿಪ್ರಾಯವು ಶ್ರೀಗಳವರಿಗೆ ಇದ್ದಂತೆ ಕಂಡುಬಂದಿತು. ಇದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿ ಅಲ್ಲಿಗೆ ಶ್ರೀಗಳವರನ್ನು ಬಿಜಯಮಾಡಿಸಿದ್ದಾಯಿತು. ಯಾವ ಸಂದರ್ಭದಲ್ಲಿಯಾಗಲಿ ಪರ್ವತಪ್ರಾಂತಕ್ಕೂ ವನಭೂಮಿಗೂ ನಿರ್ಜನ ಪ್ರದೇಶಕ್ಕೂ ಬಂದ ಕೂಡಲೇ ಅತ್ಯಂತೋತ್ಸಾಹದಿಂದ ಇಷ್ಟಾನುಸಾರ ಸಂಚರಿಸುವುದು ಶ್ರೀಗಳವರ ಸ್ವಭಾವಗುಣವಾಗಿದ್ದಿತು. ನಂದಿಬೆಟ್ಟದ ಮೇಲಕ್ಕೆ ಬಂದ ಕೂಡಲೇ ಅಮೃತ ಸರೋವರದಲ್ಲಿ ಸ್ನಾನ ಮಾಡಲು ಯತ್ನಿಸಿದರು. ಬಹಳ ಶೀತಲವಾದ ಆ ಜಲದಲ್ಲಿ ಸ್ನಾನ ಮಾಡುವುದರಿಂದ ಶೀತೋಪದ್ರವವುಂಟಾಗಬಹುದೆಂದು ಶ್ರೀಗಳವರಲ್ಲಿ ಡೆಪ್ಯುಟಿ ಕಮೀಷನರೂ ಇತರರೂ ತಿಳಿಸಿದರು. ಆದರೆ ಇವರ ಉತ್ಸಾಹವನ್ನು ತಡೆವುದು ಯಾರಿಗೂ ಸಾಧ್ಯವಾಗಿರಲಿಲ್ಲ. ಸರೋವರ ಸ್ನಾನಕ್ಕೆ ಶ್ರೀಗಳವರು ಏಕಾಂತವಾಗಿ ದಯಮಾಡಿಸಿ ಸ್ವಚ್ಛಂದವಾಗಿ ಸ್ನಾನ ಮಾಡಿ ಕೌಪೀನವನ್ನು ಮಾತ್ರ ಧರಿಸಿ ಶರೀರಕ್ಕೆಲ್ಲಾ ವಿಭೂತ್ಯುದ್ಧೂಳನವನ್ನು ಮಾಡಿಕೊಂಡು ಜಲದ ಸಮೀಪದಲ್ಲಿಯೇ ಅನುಷ್ಠಾನಗಳನ್ನು ನೆರವೇರಿಸುತ್ತ ಬಹಳ ಕಾಲ ಆಸನಸ್ಥರಾಗಿದ್ದರು. ಚಿರಕಾಲ ಉಷ್ಣದೇಶ ಸಂಚಾರ ಮಾಡಿ ಮಾರ್ಗಾಯಾಸದಿಂದ ಬಂದ ಶ್ರೀಗಳವರು ಥಟ್ಟನೆ ಅತ್ಯಂತ ಶೀತಲವಾದ ಆ ಉದಕದಲ್ಲಿ ಸ್ನಾನ ಮಾಡಿ ಅಲ್ಲಿಯೇ ದೀರ್ಘಕಾಲ ದಿಗಂಬರರಾಗಿದ್ದು ಮೇಲಕ್ಕೆ ಬರಲಾಗಿ ಆಗ ಶೀತಲವಾದ ಅಸ್ತಮಯಸಮಯವೂ ಪ್ರಾಪ್ತವಾಗುತ್ತಲಿದ್ದುದರಿಂದ ಶೀತವು ಶರೀರದಲ್ಲಿ ವ್ಯಾಪಿಸಿ ಒಂದು ವಿಧವಾದ ಹೃದಯಶೂಲೆ ಹುಟ್ಟಿ ಆ ರಾತ್ರಿಯೆಲ್ಲಾ ಬಹಳವಾಗಿ ಶ್ರೀಗಳವರನ್ನು ಪೀಡಿಸಿತು. ರಾಜಕೀಯಾಧಿಕಾರಿಗಳೂ ಪರಿಜನರೂ ಬಹಳ ಭೀತಿಗೊಂಡು

ಖಿನ್ನರಾದರು. ಈಶ್ವರಾನುಗ್ರಹದಿಂದ ಅತಿಪ್ರಬಲವಾಗಿ ಪ್ರಾಪ್ತವಾದ ಆ ಪೀಡೆಯು ಸುಲಭವಾಗಿ ದೂರವಾಗಲು, ಚಿಕ್ಕಬಳ್ಳಾಪುರಕ್ಕೆ ಬಂದು ಕೆಲವು ದಿನಗಳು ವಿಶ್ರಾಂತಿಯನ್ನು ಹೊಂದಿ ಬೆಂಗಳೂರಿಗೆ ಹೊರಟರು. ಕೀಲಕ ವರ್ಷದಲ್ಲಿ (1907ನೇ ಇಸವಿ) ಪ್ರಾರಂಭಿಸಲ್ಪಟ್ಟಿದ್ದ ಅಲ್ಲಿಯ ಮಠವು ವಿಶಾಲವಾಗಿಯೂ ಅತ್ಯುನ್ನತವಾಗಿಯೂ, ಶಿಲ್ಪಚಾತುರ್ಯವುಳ್ಳದ್ದಾಗಿಯೂ ಪೂರ್ಣವಾಗಿ ಕಟ್ಟಿಸಲ್ಪಟ್ಟಿತು. ಶ್ರೀಗಳವರು ರಾಜಕೀಯಾಧಿಕಾರಿಗಳು ಮತ್ತು ಪುರನಿವಾಸಿಗಳೊಡನೆ ವಿಭವದಿಂದ ಬೆಂಗಳೂರು ನಗರವನ್ನು ಪ್ರವೇಶಿಸಿ ಮಠದ ಬಾಗಿಲಿಗೆ ಬಂದು ಆಚಾರ್ಯ ಭಗವತ್ಪಾದಮೂರ್ತಿಯನ್ನು ಶಾರದಾ ಚಂದ್ರಮೌಳೀಶ್ವರ ದೇವರನ್ನೂ ಕಟ್ಟಡಕ್ಕೆ ಮುಂದಾಗಿ ಪ್ರವೇಶ ಮಾಡಿಸಿ, ಅಲ್ಲಿ ಪ್ರತಿಷ್ಠಿತರಾಗಿದ್ದ ಶ್ರೀಮದಾಚಾರ್ಯ ಭಗವತ್ಪಾದರವರ ದರ್ಶನವನ್ನು ಮಾಡಿಕೊಂಡು ಮಠವನ್ನು ಪ್ರವೇಶಿಸಿದರು. ಧೂಳಿಪಾದ ಪೂಜಾದಿ ಸತ್ಕಾರಗಳು ನಡೆದ ನಂತರ ಎಲ್ಲರಿಗೂ ಫಲಮಂತ್ರಾಕ್ಷತೆಗಳನ್ನು ಕೊಟ್ಟು ಕಳುಹಿಸಿ, ಇಂತಹ ದೊಡ್ಡ ಕಟ್ಟಡವನ್ನು ಅತ್ಯಲ್ಪ ಕಾಲದಲ್ಲಿ ಪೂರ್ತಿಗೊಳಿಸಿದ ತಮ್ಮ ಶಿಷ್ಯರಾದ ಮಾಧವರಾಯರೊಡನೆ ಸಂಚರಿಸಿ ಎಲ್ಲಾ ಭಾಗಗಳನ್ನೂ ನೋಡಿ ಆನಂದಿಸಿ ಅವರನ್ನನುಗ್ರಹಿಸಿದರು. ಆಗ ದರ್ಶನಾಕಾಂಕ್ಷಿಗಳಾಗಿ ಬೆಂಗಳೂರು ರಾಜಧಾನಿಯಲ್ಲಿ ಪ್ರತೀಕ್ಷಿಸಿಕೊಂಡಿದ್ದ ಶ್ರೀ ಮನ್ಮಹಾರಾಜ ಕೃಷ್ಣರಾಜ ಪ್ರಭುಗಳವರನ್ನು ತಮ್ಮ ನೂತನ ಮಠಕ್ಕೆ ಬರಮಾಡಿಕೊಂಡು ದೇವತಾ ಸಂದರ್ಶನ ತೀರ್ಥಪ್ರಸಾದಗಳನ್ನು ಅಲ್ಲಿಯೇ ಅನುಗ್ರಹಿಸಿ ಮಹಾರಾಜರಿಗೂ ರಾಜಕುಟುಂಬದವರಿಗೂ ಮಠದಲ್ಲಿ ಆತಿಥ್ಯವನ್ನು ಮಾಡಿಸಬೇಕೆಂಬ ಶ್ರೀಗಳವರ ಅಭಿಪ್ರಾಯವನ್ನು ಗುರುಭಕ್ತಿ ಪರಾಯಣರಾದ ಶ್ರೀಮನ್ಮಹಾರಾಜರು ಗುರ್ವಾಜ್ಞೆಯಂತೆ ಸಕುಟುಂಬರಾಗಿ ಮಠಕ್ಕೆ ಬಂದು ಶ್ರೀಗಳವರ ಸಂದರ್ಶನವನ್ನು ಮಾಡಿ ಪಾದಪೂಜಾದಿಗಳಿಂದ ಶ್ರೀಗಳವರನ್ನು ಸತ್ಕರಿಸಿ ತೀರ್ಥಪ್ರಸಾದಗಳನ್ನು ಹೊಂದಿ ಭೋಜನಾನಂತರ ಶ್ರೀಗಳವರ ಅನುಜ್ಞೆಯನ್ನು ಪಡೆದು ರಾಜಮಂದಿರಕ್ಕೆ ದಯಮಾಡಿಸಿದರು. ಶಾ|| 1833ನೆಯ ಸಾಧಾರಣ ಸಂವತ್ಸರ ಮಾಘಶುಕ್ಲ ಚತುರ್ಥಿಯ (3-2-1911) ಸಾಯಂಕಾಲ 6 ಘಂಟೆಯ ಸಮಯದಲ್ಲಿ ಮತ್ತೆ ಶ್ರೀಮನ್ಮಹಾರಾಜರವರನ್ನೂ ಶಿಷ್ಯಮಂಡಲಿಯಲ್ಲಿ ಪ್ರಮುಖರಾದ ಕೆಲವರನ್ನೂ ಬರಮಾಡಿಕೊಂಡು ಬೆಂಗಳೂರಿನಲ್ಲಿ ಮಠವನ್ನು ಕಲ್ಪಿಸಲು ಉದ್ದೇಶವನ್ನೂ ಅದರ ಉಪಯೋಗವನ್ನೂ ವಿಸ್ತಾರವಾಗಿ ತಿಳಿಯಪಡಿಸಿ, ಭಾರತೀಯ ಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀ ಎಂಬ ಹೆಸರಿನಿಂದ ಒಂದು ಪಾಠಶಾಲೆಯನ್ನು ಏರ್ಪಡಿಸುವುದಾಗಿಯೂ, ಈ ಪಾಠಶಾಲೆಯಲ್ಲಿ 50 ಮಂದಿ ಪ್ರೌಢವಿದ್ಯಾರ್ಥಿಗಳನ್ನು ಸೇರಿಸಿ ಆ ವಿದ್ಯಾರ್ಥಿಗಳಿಗೆ ಅನುಕೂಲವಾದ ವಾಸಗೃಹವನ್ನು ಕಲ್ಪಿಸಿಕೊಟ್ಟು ಅಶನ ವಸನಗಳಿಗೆ ತಕ್ಕಷ್ಟು ವೇತನಗಳನ್ನು ಕೊಡಿಸಿ, ಪೂರ್ವೋತ್ತರ

ಮೀಮಾಂಸಾಶಾಸ್ತ್ರಗಳನ್ನೂ ವೇದಭಾಷ್ಯ ಧರ್ಮಶಾಸ್ತ್ರಗಳನ್ನೂ ಪ್ರಾಚೀನ ಸಂಪ್ರದಾಯಾನುಗುಣವಾಗಿ ಅಧ್ಯಯನ ಮಾಡಿಸಿ, ಸಂಪ್ರತಿ ಪನ್ನವಾದ ಪಾಂಡಿತ್ಯವನ್ನು ಸಂಪಾದಿಸಿದವರಿಗೆ ಯಥಾಸಂಭವ ಜೀವನವನ್ನೂ ಕಲ್ಪಿಸಿಕೊಡುವುದರ ಮೂಲಕ ಖಿಲವಾಗುತ್ತಿರುವ ವೇದಶಾಸ್ತ್ರಗಳನ್ನು ಪ್ರಚಾರಗೊಳಿಸಬೇಕೆಂದೂ ಈ ಕಾರ್ಯವು ಧಾರ್ಮಿಕರಾದ ಮಹಾರಾಜರೂ ಶ್ರೀಮಂತರೂ ಆದವರಿಂದ ನಡೆಯತಕ್ಕದಾಗಿದ್ದರೂ ಅಂತಹ ಹಿಂದಿನ ಮಹಾರಾಜರುಗಳು ಶ್ರೀಮಠದಲ್ಲಿ ಧರ್ಮಾಚರಣೆಗೋಸ್ಕರ ಕೊಟ್ಟಿರುವ ಸ್ಥಿರವಾದ ವರಮಾನದಲ್ಲಿ ಸಾಧ್ಯವಾದ ಮಟ್ಟಿಗೆ ಒಂದು ಭಾಗವನ್ನು ಈ ಕಾರ್ಯಕ್ಕೆ ವಿನಿಯೋಗಿಸಿ ಸ್ವಲ್ಪವಾಗಿ ಕಾರ್ಯವನ್ನಾರಂಭಿಸಿ ನಡೆಸಿಕೊಂಡು ಬಂದ ನಂತರ ಅದರ ಪ್ರಯೋಜನವನ್ನು ತಿಳಿದು ಸಹಾಯ ಮಾಡಲು ಜನರಿಗೆ ಉತ್ಸಾಹವುಂಟಾದಲ್ಲಿ ಸುಲಭವಾಗಿ ಜನಗಳಿಂದ ಸಹಾಯವೊದಗಿ ಉದ್ದಿಷ್ಟ ಕಾರ್ಯವು ಸಂಕಲ್ಪಾನುಗುಣವಾಗಿ ಸಂಪೂರ್ಣವಾಗುವುದೆಂದೂ, ಪ್ರಕೃತ 8 ಮಂದಿ ವಿದ್ಯಾರ್ಥಿಗಳನ್ನು ಸೇರಿಸಿ ಎರಡು ಜನ ಪಂಡಿತರನ್ನು ನಿಯಮಿಸಿ ಪೂರ್ವೋತ್ತರ ಮೀಮಾಂಸಾಶಾಸ್ತ್ರಾಧ್ಯಯನವು ಪ್ರಾರಂಭಿಸಲ್ಪಡುವುದೆಂದೂ ನಿರೂಪಿಸಲು, ಶ್ರೀಮನ್ಮಹಾರಾಜರೂ ಶಿಷ್ಯಜನರೂ ಧರ್ಮರಕ್ಷಣೆಗಾಗಿ ಶ್ರೀಗಳವರು ಸಂಕಲ್ಪಿಸಿರುವ ಯತ್ನವನ್ನು ನೋಡಿ ಸಂತೋಷದಿಂದ ತಮ್ಮ ಧನ್ಯವಾದಗಳನ್ನು ಶ್ರೀಗಳವರಿಗೆ ಅರ್ಪಿಸಿ ಆಜ್ಞೆಯನ್ನು ಪಡೆದರು. ದಿವಾನ್ ಮಾಧವರಾಯರವರು ಒಂದು ಅಗ್ರಹಾರವನ್ನು ಕಟ್ಟಿಸಿ ಸತ್ಕುಲಪ್ರಸೂತರಾದ ರಿಕ್ತ ಕುಟುಂಬಿಗಳಿಗೆ ಕೊಡಬೇಕೆಂದು ಸಂಕಲ್ಪಿಸಿ, ಬೆಂಗಳೂರು ಮಠದ ಆವರಣದಲ್ಲಿ ಶ್ರೀಗಳವರ ಆಜ್ಞೆಯನ್ನು ಪಡೆದು ಸಂಸಾರಿಗಳ ವಾಸಕ್ಕೂ ಆರೋಗ್ಯ ಶಾಸ್ತ್ರಕ್ಕೂ ಬ್ರಾಹ್ಮಣ ವಾಸಗೃಹ ಲಕ್ಷಣವನ್ನು ಹೇಳುವ ಧರ್ಮಶಾಸ್ತ್ರಕ್ಕೂ ಅನುಗುಣವಾಗಿ ಏಳು ಗೃಹಗಳನ್ನು ಕಲ್ಪಿಸಿ ಬ್ರಾಹ್ಮಣರಿಗೆ ದಾನ ಮಾಡಲು ಎಲ್ಲಾ ಸಾಧನಗಳನ್ನೂ ಸಿದ್ಧ ಪಡಿಸಿಕೊಂಡಿದ್ದರು. ಶ್ರೀಗಳವರು ವೇದಶಾಸ್ತ್ರ ಪ್ರಚಾರದಿಂದ ಧರ್ಮರಕ್ಷಣೆಯನ್ನು ಮಾಡಬೇಕೆಂದು ಸಂಕಲ್ಪಿಸಿರುವುದನ್ನೂ ಅದಕ್ಕೋಸ್ಕರ ಬರುವ ಸಹಾಯವನ್ನು ಸಂತೋಷದಿಂದ ಅಂಗೀಕರಿಸುವರೆಂಬುದನ್ನೂ ತಿಳಿದು, ತಾವು ಮಾಡುವುದಾಗಿ ಆಲೋಚಿಸಿರುವುದಕ್ಕಿಂತ ಸದ್ವಿದ್ಯಾಪ್ರಚಾರಕ್ಕೆ ಮಾಡುವ ಸಹಾಯವು ಶಾಶ್ವತ ಧರ್ಮವಾಗುವುದೆಂದು ನಿಶ್ಚಯಿಸಿ ತಾವು ಕಟ್ಟಿಸಿದ ಗೃಹಗಳನ್ನು ಸೋಪಸ್ಕರವಾಗಿ ಶ್ರೀಗಳವರಿಗೆ ಅರ್ಪಿಸಿ ಶ್ರೀಗಳವರು ಉದ್ದೇಶಿಸಿರುವ ಧರ್ಮಕಾರ್ಯಕ್ಕೆ ಇಚ್ಛಾನುಸಾರವಾಗಿ ಉಪಯೋಗಿಸಿ ತನ್ನನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿಕೊಂಡರು. ಸಂಕಲ್ಪಿತಕಾರ್ಯವನ್ನು ಕಾಲವಿಳಂಬವಿಲ್ಲದೆ ಪ್ರಾರಂಭಿಸಲು ಅನುಕೂಲವಾಗಿಯೂ ಅಪ್ರಾರ್ಥಿತವಾಗಿಯೂ ಒದಗಿ ಬಂದ ಶಿಷ್ಯ ಸಹಾಯವನ್ನು ಆದರದಿಂದ ಅಂಗೀಕರಿಸಿ ರಾಯರ ದೀರ್ಘಾಲೋಚನೆಯನ್ನು ಶ್ಲಾಘಿಸಿ ಅವರನ್ನು ಅನುಗ್ರಹಿಸಿದರು.

ಬೆಂಗಳೂರಿನಲ್ಲಿ 13 ದಿನಗಳು ಮಾತ್ರ ವಾಸಮಾಡಿ ಅಲ್ಲಿಂದ ಮುಂದಕ್ಕೆ ಜಾಗ್ರತೆಯಾಗಿ ಪ್ರಯಾಣ ಬೆಳೆಸಿ ಅರಸೀಕೆರೆಯ ಸಮೀಪದ ಮಾಲೆಕಲ್ಲು ತಿರುಪತಿಯಲ್ಲಿ ವಸತಿ ಮಾಡಿರಲು, ಶೃಂಗೇರಿಯಲ್ಲಿ ಕಟ್ಟುತ್ತಲಿದ್ದ ಶಿಲಾಮಯ ಶಾರದಾಲಯದಲ್ಲಿ ಆಕಸ್ಮಿಕವಾದ ಅಗ್ನಿಪ್ರವೇಶದಿಂದ ಅನೇಕ ಶಿಲೆಗಳು ಒಡೆದು ತುಂಬಾ ನಷ್ಟವುಂಟಾಗಿರುವು ದೆಂದೂ ಅಮ್ಮನವರ ಬಿಂಬಕ್ಕೆ ಅಚ್ಛಾದಕವಾಗಿದ್ದ ದಾರುಮಯ ಮಂಟಪವನ್ನು ಅಗ್ನಿಜ್ವಾಲೆಯು ಮುಟ್ಟಿದರೂ ಬಿಂಬಕ್ಕೆ ಯಾವ ರೀತಿಯಿಂದಲೂ ಅಪಾಯವುಂಟಾಗಿಲ್ಲ ವೆಂದೂ ವರ್ತಮಾನವು ಬಂದಿತು. ಇದನ್ನು ಕೇಳಿದ ಜನರು, ಇದು ಬಲವಾದ ಅನಿಷ್ಟ ಸೂಚಕವೆಂದು ಶಂಕಿಸಿದರು. ಈ ಸಮಾಚಾರವನ್ನು ಈ ಲೇಖಕನು ಅತ್ಯಂತ ಭೀತಿಗೊಂಡು ತಿಳಿಸಲು, ಶ್ರೀಗಳವರು ಸ್ವಲ್ಪವೂ ವಿಕಾರಭಾವವನ್ನು ಹೊಂದದೆ ಕೇನೋಪನಿಷತ್ತಿನಲ್ಲಿ ಹೇಳಿರುವ ಅರ್ಥವನ್ನು ಚಪಲಸ್ವಭಾವವುಳ್ಳ ಅಸ್ಮದಾದಿಗಳಿಗೆ ಪ್ರತ್ಯಕ್ಷವಾಗಿ ತಿಳಿಸಿ ನಮ್ಮ ಮನಸ್ಸನ್ನು ದಾರ್ಢ್ಯಗೊಳಿಸಿ ಅನುಗ್ರಹಿಸುವುದಕ್ಕೆ ಜಗನ್ಮಾತೆಯು ತೋರಿಸಿದ ಮಹಿಮೆಯೇ ಹೊರತು ಇದು ಮತ್ತೆ ಯಾವ ವಿಧವಾದ ಅನಿಷ್ಟದ ಸೂಚಕವೂ ಅಲ್ಲವೆಂದು ಭೀತರಾಗಿದ್ದ ಆ ಜನರನ್ನು ಸಮಾಧಾನ ಗೊಳಿಸಿದರು. ಬಳಿಕ ತರೀಕೆರೆ, ಶಿವಮೊಗ್ಗ, ತೀರ್ಥಹಳ್ಳಿಗಳ ಮಾರ್ಗವಾಗಿ ಪ್ರಯಾಣ ಮಾಡಿ ಸಾಧಾರಣ ಸಂವತ್ಸರದ ಫಾಲ್ಗುಣ ಬಹುಳ ದ್ವಿತೀಯೆಯ ಪ್ರಾತಃಕಾಲ ಒಂಬತ್ತು ಘಂಟೆಯ ಸಮಯದಲ್ಲಿ ಶೃಂಗೇರಿಯನ್ನು ಸೇರಿ ಪುರದ ನಾಲ್ಕು ಬೀದಿಗಳಲ್ಲಿಯೂ ಪ್ರದಕ್ಷಿಣವಾಗಿ ಬಂದು ಮಠವನ್ನು ಪ್ರವೇಶಿಸಿ ಅಮ್ಮನವರ ಸಂದರ್ಶನವನ್ನು ಮಾಡಿ, ತತ್ಕ್ಷಣದಲ್ಲಿಯೇ ರಚಿಸಿದ

ಪ್ರೋಕ್ತಂ ಕೇನಾಗಮಾನ್ತೇ ಕಿಮುಪರಮಮಹಸ್ಸನ್ನಿಧೌ ಸ್ವಸ್ವಕಾರ್ಯಾ
ಶಕ್ತಾದೇವಾಬಭೂವುಃ ಶುಚಿಪವನಮುಖಾ ಇತ್ಯಮುಂ ಮುಖ್ಯಮರ್ಥಮ್ ।
ಜಾನುತ್ವಾತ್ಮಾಂಘ್ರಿನಮ್ರಾ ಇತಿವಿಧಿರಮಣೀ ದಾರುಗೇಹೇಸ್ಥಿತಾಽಸೀತ್
ಜ್ವಾಲಾಮಾಲಾಕುಲೇಽಸ್ಮಿನ್ ಸುಮವಸನಯುತಾ ದಾಹಗಂಧೇನಶೂನ್ಯಾ ॥

ಎಂಬೀ ಪದ್ಯದಿಂದ ಸ್ತುತಿಸಿ, ಅನಂತರ ತಮ್ಮ ಗುರುಗಳ ಅಧಿಷ್ಠಾನದ ದರ್ಶನವನ್ನು ಮಾಡಿ ವಿದ್ಯಾಶಂಕರರ ಆಲಯಕ್ಕೆ ಬಂದು ಅಲ್ಲಿ ದಂಡನಮಸ್ಕಾರಾದಿಗಳಿಂದ ವಿದ್ಯಾತೀರ್ಥರನ್ನು ಸೇವಿಸಿ, ಅಗ್ರಹಾರ ಬ್ರಾಹ್ಮಣರು ಮಾಡಿದ ಧೂಳೀ ಪಾದಪೂಜಾ ಸತ್ಕಾರವನ್ನು ಸ್ವೀಕರಿಸಿ, ಸಂಸ್ಥಾನದ ಎಲ್ಲಾ ವಸ್ತುಗಳನ್ನೂ ಮಠದಲ್ಲಿ ಬಿಟ್ಟು ಪಾದಚಾರಿಗಳಾಗಿ ಮಿತಪರಿವಾರದೊಡನೆ ತುಂಗಾನದಿಯನ್ನು ದಾಟಿ ನರಸಿಂಹವನಕ್ಕೆ ದಯಮಾಡಿದರು. ತಮ್ಮ ಆಶ್ರಮವನ್ನು ಪ್ರವೇಶಿಸಿದ ನಂತರ ಶ್ರೀಗಳವರಿಗೆ ಉಂಟಾದ ಮನೋಭಾವವು ಅವರ ಸಮೀಪವರ್ತಿ

ಯಾಗಿದ್ದ ಈ ಲೇಖಕನಿಗೂ ಶ್ರೀಗಳವರ ಪರಮಾನುಗ್ರಹಕ್ಕೆ ಪಾತ್ರರಾದ ಅವರ ಯಾತ್ರೆಗಳಲ್ಲಿ ಅನವರತವೂ ಸಮೀಪದಲ್ಲಿದ್ದು ಸಂಸ್ಥಾನದ ಕಾರ್ಯಗಳನ್ನು ನಡೆಸುವವರಲ್ಲಿ ಒಬ್ಬರಾಗಿದ್ದ ಮೈಸೂರು ಅರಮನೆಯ ಧರ್ಮಾಧಿಕಾರಿ ಕುಣಿಗಲ್ ರಾಮಶಾಸ್ತ್ರಿಗಳಿಗೂ ಗೋಚರವಿಲ್ಲದೆ ಇತರರಿಗೆ ಗೋಚರವಾಗಲು ಅವಕಾಶವಿರಲಿಲ್ಲವು. ಕೇವಲ ನಿರ್ಬಂಧದಿಂದ ಒಬ್ಬ ಮನುಷ್ಯನನ್ನು ಕಾರಾಗೃಹದಲ್ಲಿಟ್ಟು ಕೆಲವು ಕಾಲದ ಮೇಲೆ ಆ ಮನುಷ್ಯನ ವಿಷಯದಲ್ಲಿ ನಡೆಸಿದ ಆಚರಣೆಯು ಅನ್ಯಾಯವಾದುದೆಂದು ತಿಳಿದು ನಿರ್ಬಂಧಿಸಿದವರು ಆತನನ್ನು ಗೌರವದಿಂದ ಕರೆತಂದು ಸ್ವಗೃಹದಲ್ಲಿ ಬಿಟ್ಟುಹೋದರೆ ಆತನಿಗೆ ಹೇಗೆ ಸ್ವಾತಂತ್ರ್ಯವೂ ಸಂತೋಷವೂ ಉಂಟಾಗುವುದೋ ಹಾಗೆ ಕರ್ಮವಶದಿಂದ ನಾಲ್ಕು ವರ್ಷಗಳ ಕಾಲ ಎಡೆಬಿಡದೆ ಜನಸಂಘದಲ್ಲಿ ಕಲೆತು ತಮ್ಮ ಆಶ್ರಮಧರ್ಮಕ್ಕೂ ಮನೋವೃತ್ತಿಗೂ ವಿರುದ್ಧವಾಗಿ ಅನವರತ ಕಾಯಿಕವಾಚಿಕವ್ಯಾಪಾರಗಳಿಂದ ಚಿತ್ತಕ್ಷೋಭೆಯನ್ನು ಪಡೆದು ಲೋಕ ವ್ಯವಹಾರದಲ್ಲಿ ಆಸಕ್ತರಾದವರಂತೆ ಇದ್ದುಕೊಂಡು, ಸ್ವಚ್ಛಂದವಾಗಿ ಆತ್ಮಸುಖವನ್ನನು ಭವಿಸಲು ಅವಕಾಶವಿಲ್ಲದಂತೆ ಪ್ರಾಪ್ತವಾಗಿದ್ದ ನಿರ್ಬಂಧವು ತಪ್ಪಿ, ವಿಜನವಾಗಿಯೂ ನಿರ್ಮಲವಾಗಿಯೂ ಇರುವ ತಮ್ಮ ಆಶ್ರಮಕ್ಕೆ ಹಿಂತಿರುಗಿ ಬಂದ ಶ್ರೀಗಳವರು ನಿರಂಕುಶವಾಗಿ ಆತ್ಮಾನಂದವನ್ನನುಭವಿಸುತ್ತಲಿದ್ದರೆಂದು ಸ್ಪಷ್ಟವಾಗಿ ತಿಳಿದುಕೊಳ್ಳುವಂತೆ ಅವರ ಮನೋಭಾವವಿದ್ದಿತು. ಈ ರೀತಿಯಿಂದ ಅನೇಕ ಕ್ಷೇತ್ರ ಯಾತ್ರೆಗಳನ್ನು ಮಾಡಿ ಕಾಲಟಿ ಕ್ಷೇತ್ರ ಪರಿಷ್ಕಾರಕಾರ್ಯವನ್ನು ಶ್ರೀಮದಾಚಾರ್ಯಭಗವತ್ಪಾದರವರ ಪರಮಾನುಗ್ರಹದ ಬಲದಿಂದ ನೆರವೇರಿಸಿ ಕೃತಕೃತ್ಯರಾಗಿ ಬಂದ ಶ್ರೀಗಳವರು ತಮ್ಮ ಸ್ವಭಾವಗುಣವನ್ನು ತಾಳಿ ಶೃಂಗೇರಿಯಲ್ಲಿ ಆತ್ಮಧ್ಯಾನ ನಿರತರಾಗಿದ್ದರು.

★ ★ ★

ಅಧ್ಯಾಯ - ೧೨.

ಸ್ವಾಮಿಗಳವರ ವಿದೇಹ ಕೈವಲ್ಯ.

ಹಿಂದಿನ ಅಧ್ಯಾಯಗಳನ್ನು ಓದುವುದರಿಂದ ಈಶ್ವರ ಪ್ರಸಾದಲಬ್ಧಜನ್ಮರೂ, ಭಗವದಂಶಸಂಭೂತರೂ, ಸತ್ಯಸಂಕಲ್ಪರೂ, ಸರ್ವಭೂತದಯಾಶಾಲಿಗಳೂ, ಸರ್ವಸಮರೂ, ಜೀವನ್ಮುಕ್ತರೂ ಆದ ಈ ಗುರುವರ್ಯರು ಲೋಕಾನುಗ್ರಹಾರ್ಥವಾಗಿಯೇ ಭಾರತಭೂಮಿಯನ್ನಲಂಕರಿಸಿದ್ದರೆಂದೂ, ಧರ್ಮಪ್ರಚಾರದಿಂದಲೇ ಪ್ರಪಂಚವು ರಕ್ಷಿತವಾಗತಕ್ಕದ್ದೆಂಬ ನಿಶ್ಚಯದಿಂದ ಆ ವಿಷಯದಲ್ಲಿ ಬಹುವಿಧ ಯತ್ನಗಳನ್ನು ನಡೆಸಿದರೆಂದೂ ತಿಳಿಯಬರುವುದು. ಅನೇಕ ಸಾಧರ್ಮ್ಯಗಳಿಂದ ಇವರು ಶ್ರೀ ಶಂಕರ ಭಗವತ್ಪಾದಾಚಾರ್ಯರಂತೆಯೇ ಅವತರಿಸಿದ್ದರೆಂದು ಹೇಳಬಹುದು. ಹೇಗೆಂದರೆ :

ಅತ್ಯಂತ ನಿಯಮದಿಂದ ಈಶ್ವರೋಪಾಸನೆಯನ್ನು ಮಾಡಿದವರೂ ಪರಮ ಶಾಂತರೂ ಸತ್ಕುಲಪ್ರಸೂತರೂ ವಿದ್ವದ್ಗರಿಷ್ಠರೂ ಆದ ಶಿವಗುರುಗಳ ತಪಸ್ಸಿಗೆ ಫಲವೆನಿಸಿ ಶ್ರೀಮದಾಚಾರ್ಯ ಭಗವತ್ಪಾದರವರು ಆ ಬ್ರಾಹ್ಮಣೋತ್ತಮರಲ್ಲಿ ಜನ್ಮವನ್ನು ಪಡೆದರು. ಶ್ರೀಮೇಧಾದಕ್ಷಿಣಾಮೂರ್ತಿಯ ಉಪಾಸನೆಯನ್ನು ಮಾಡಿ ಆ ಮೂರ್ತಿಯ ಪ್ರಸಾದಕ್ಕೆ ಭಾಜನರೂ ಕುಲೀನರೂ ಮೇಧಾವಿಗಳೂ ಸತ್ಕರ್ಮಾನುಷ್ಠಾನಪರರೂ ಪಂಡಿತೋತ್ತಮರೂ ಆದ ಕುಣಿಗಲ್ ರಾಮಶಾಸ್ತ್ರಿಗಳ ತಪಃಫಲವಾಗಿ ಅವರಲ್ಲಿ ಈ ಶ್ರೀಗಳವರು ಜನಿಸಿದರು.

ಜಗದೀಶ್ವರನ ಅಂಶದಿಂದ ತಮ್ಮಲ್ಲಿ ಆವಿರ್ಭವಿಸಿದ್ದ ಪುತ್ರನ ಅಭ್ಯುದಯವನ್ನು ನೋಡಿ ಆನಂದಿಸುವ ಭಾಗ್ಯವಿಲ್ಲದವರಾಗಿ ತಂದೆಯವರಾದ ಶಿವಗುರುಗಳು ಶ್ರೀಮದಾಚಾರ್ಯರವರ ಅತ್ಯಂತ ಬಾಲ್ಯವಾದ ಮೂರನೆಯ ವರ್ಷದ ವಯಸ್ಸಿನಲ್ಲಿ ವಿಧಿ ವಶರಾದರು. ಈ ಶ್ರೀಗಳವರ ತಾತಪಾದರಾದ ರಾಮಶಾಸ್ತ್ರಿಗಳ ಸ್ಥಿತಿಯೂ ಹಾಗೆಯೇ ಪರಿಣತವಾಯಿತು.

ಆರ್ಯಮಾತೆ ಆರ್ಯಾಂಬಿಕೆ ಆಚಾರ್ಯರವರ ಅಸಾಧಾರಣವೂ ಅದ್ಭುತವೂ ಆದ ಬಾಲಲೀಲೆ ಮತ್ತು ಬಾಲಚರಿತ್ರೆಗಳನ್ನು ನೋಡಿ ಆನಂದಿಸಿದಂತೆ ಸಾಧ್ವೀಮಣೀ, ಜನನಿ ಲಕ್ಷ್ಮಮ್ಮನವರು ಶ್ರೀಗಳವರ ಅಪೂರ್ವ ಬಾಲಲೀಲೆಗಳಿಂದ ಆನಂದಿಸಿದರು.

ಶ್ರೀಮದಾಚಾರ್ಯರವರು ಎಂಟನೆಯ ವರ್ಷದಲ್ಲಿ ಈಶ್ವರನಿಯೋಗದಂತೆ

ತುರ್ಯಾಶ್ರಮವನ್ನು ಸ್ವೀಕರಿಸಲು ಯತ್ನಿಸಿ ಮಾತೃಶಾಸನಕ್ಕೆ ಚಿಂತಿಸುತ್ತಿರಲು, ಮೊಸಳೆಯ ರೂಪದಿಂದ ದೈವವು ಒದಗಿಬಂದು ಬಲಾತ್ಕಾರದಿಂದ ಮಾತೃಶಾಸನವನ್ನು ದೊರಕಿಸಿಕೊಟ್ಟು ಸಂನ್ಯಾಸಾಶ್ರಮ ಸ್ವೀಕಾರವನ್ನು ಮಾಡಿಸಿದಂತೆ, ಜ್ಯೇಷ್ಠಭ್ರಾತೃ ಕುಣಿಗಲ್ ಲಕ್ಷ್ಮೀನರಸಿಂಹ ಶಾಸ್ತ್ರಿಗಳಿಂದ ಪುತ್ರಾಧಿಕವಾಗಿ ಪ್ರೀತಿಸಲ್ಪಟ್ಟು ಅವರಿಗೆ ಪ್ರಾಣವಾಗಿದ್ದ ಈ ಶ್ರೀಗಳವರ ಒಂಬತ್ತನೆಯ ವರ್ಷದಲ್ಲಿ ಬಲವತ್ತರವಾದ ಈಶ್ವರಾಜ್ಞೆಯಿಂದ ಆಕಸ್ಮಿಕವಾಗಿ ಶೃಂಗಗಿರಿ ಶ್ರೀಮಠದ ನರಸಿಂಹಭಾರತೀ ಸ್ವಾಮಿಗಳ ರೂಪದಿಂದ ಒದಗಿಬಂದ ಸದ್ವಿಧಿಯು ಆ ಶಾಸ್ತ್ರಿಗಳು ಮಾಡಿದ ಪ್ರತಿಬಂಧಕಗಳನ್ನು ನಿವಾರಿಸಿ ಅವರಿಂದಲೇ ಅನುಮತಿಯನ್ನು ಒದಗಿಸಿಕೊಟ್ಟು ಇವರು ಸಂನ್ಯಾಸಾಶ್ರಮವನ್ನು ಸ್ವೀಕರಿಸುವಂತೆ ಮಾಡಿತು.

ಶ್ರೀಮದಾಚಾರ್ಯ ಭಗವತ್ಪಾದರವರು ಆಗರ್ಭ ಬ್ರಹ್ಮನಿಷ್ಠರೆಂದು ತಿಳಿಯಲು ಆ ಮಹನೀಯರ ಪ್ರತಿಯೊಂದು ಚರ್ಯೆಯೂ ಪ್ರಮಾಣವಾಗಿರುವುದು. ಈ ಶ್ರೀಗಳವರ ವಿಷಯದಲ್ಲಾದರೋ ಒಂಬತ್ತು ವರ್ಷದ ವಯಸ್ಸಿನ ಇವರು ಸಂನ್ಯಾಸ ಸ್ವೀಕಾರ ಮಾಡಿದ ದಿನದ ರಾತ್ರಿಯಲ್ಲಿ ಗುರುಗಳ ಸಮೀಪವಾಗಿ ಕೃಷ್ಣಾಜಿನದ ಮೇಲೆ ವಿಶ್ರಾಂತರಾಗಿದ್ದ ಸಮಯದಲ್ಲಿ ''ಸರ್ವೋಹಂ'' ಎಂದು ಮೂರುಸಾರಿ ಸ್ಪಷ್ಟವಾಗಿ ಸ್ವಪ್ನಭಾಷಣ ಮಾಡಿದುದನ್ನು ಗುರುಗಳು ಕೇಳಿ ಆನಂದಿಸಿದರೆಂಬ ಸಂಗತಿಯು ಪ್ರಮಾಣತಮವಾಗಿರುವುದು.

ಶ್ರೀಮದಾಚಾರ್ಯರವರು ಸರ್ವಜ್ಞರೆನಿಸಿಕೊಂಡಿದ್ದರೂ ಸಂಪ್ರದಾಯ ಪರಿಪಾಲನಾದರದಿಂದ ಗೋವಿಂದ ಭಗವತ್ಪಾದರವರ ಆಶ್ರಮಕ್ಕೆ ಬಂದು ಅವರಲ್ಲಿ ಮಾಡಿದ ಗುರುಭಕ್ತಿಕ್ರಮವು ಮಾಧವೀಯ ಶಂಕರವಿಜಯ ಗ್ರಂಥದಿಂದ ವಿಸ್ತಾರವಾಗಿ ತಿಳಿದು ಬರುವುದು. ಗುರುಭಕ್ತಿ ಪ್ರದರ್ಶನ ವಿಷಯದಲ್ಲಿ ಆಚಾರ್ಯರವರಿಗೂ ಈ ಶ್ರೀಗಳವರಿಗೂ ಅಧಿಕ ತಾರತಮ್ಯವಿದ್ದಂತೆ ಅನುಭವದಿಂದ ತಿಳಿದು ಬರುವುದಿಲ್ಲವು.

ಬ್ರಹ್ಮಜ್ಞಾನಿಗಳೂ ಜ್ಞಾನಮಾರ್ಗವನ್ನುದ್ಧರಿಸುವುದಕ್ಕೋಸ್ಕರವೇ ಭೂಮಿಯಲ್ಲಿ ಅವತೀರ್ಣರೂ ಆಗಿದ್ದ ಶ್ರೀ ಭಗವತ್ಪಾದರವರು ಶಿವ, ವಿಷ್ಣು, ಶಕ್ತಿಭೇದವಿಲ್ಲದಂತೆ ಸಗುಣೋಪಾಸನೆಯನ್ನು ಮಾಡಿ ಭಕ್ತಿಮಾರ್ಗವನ್ನು ಪ್ರತಿಷ್ಠಿಸಿರುವರೆಂಬುದು ಆಚಾರ್ಯ ವಿಜಯದಿಂದಲೂ ಆಚಾರ್ಯಕೃತವೆಂದು ಲೋಕದಲ್ಲಿ ಪ್ರಸಿದ್ಧವಾಗಿರುವ ಅನೇಕ ಸ್ತೋತ್ರಕದಂಬದಿಂದಲೂ ಸ್ಪಷ್ಟಪಡುವುದು. ಈ ಶ್ರೀಗಳವರಿಂದ ರಚಿಸಲ್ಪಟ್ಟಿರುವ ಭಕ್ತಿಸುಧಾತರಂಗಿಣೀ ಎಂಬ ಪುಸ್ತಕದಲ್ಲಿರುವ ಸ್ತೋತ್ರಮಾಲಿಕೆಗಳಿಂದಲೂ ಈ ಗ್ರಂಥದ ಹಿಂದಿನ ಅಧ್ಯಾಯಗಳಿಂದಲೂ ಶ್ರೀಗಳವರ ಭಕ್ತಿ ಮಾರ್ಗಾನುವರ್ತನವು ಸ್ಪಷ್ಟವಾಗುವುದು.

ಆಚಾರ್ಯರವರು ದಕ್ಷಿಣ ಕನ್ನಡ ಜಿಲ್ಲೆಯ ಶಂಕರನಾರಾಯಣ ಕ್ಷೇತ್ರಕ್ಕೆ ಬಿಜಯ

ಮಾಡಿದ್ದ ಸಂದರ್ಭದಲ್ಲಿ ಒಬ್ಬ ಬ್ರಾಹ್ಮಣಪುತ್ರನು ಮೃತನಾಗಿರಲು ಆ ಬಾಲಕನ ಮಾತಾಪಿತೃಗಳು ಅತಿದುಃಖಿತರಾಗಿ ಪ್ರಲಾಪಿಸುತ್ತಿದ್ದುದನ್ನು ಕಂಡು ತಮ್ಮ ಯೋಗಶಕ್ತಿಯಿಂದ ಅವನು ಜೀವಿಸುವಂತೆ ಅನುಗ್ರಹಿಸಿ ಅವನ ತಂದೆತಾಯಿಗಳನ್ನೂ ಆ ಪ್ರಾಂತದ ಜನಗಳನ್ನೂ ನಿರವಧಿಕಾನಂದಾಶ್ಚರ್ಯ ಪಾತ್ರರನ್ನಾಗಿ ಮಾಡಿದರು. ತಪಸ್ಸಿದ್ಧರಾಗಿದ್ದ ಈ ಶ್ರೀಗಳವರು ಕೇರಳ ದೇಶದಲ್ಲಿರುವ ಆಶ್ರಮಗ್ರಾಮದ ಒಬ್ಬ ವಿಪ್ರಕುಮಾರನ ಜನ್ಮಸಿದ್ಧವಾದ ಮೂಕತ್ವವನ್ನು ತೊಲಗಿಸಿ ಆತನ ಜನನೀಜನಕರು ದುಸ್ಸಹದುಃಖಸಾಗರವನ್ನು ಉತ್ತರಿಸುವಂತೆ ಮಾಡಿದರು. ಅಚಿಕಿತ್ಸ್ಯರೋಗಗ್ರಸ್ತರಾದ ಜನರನೇಕರು ಶ್ರೀಗಳವರಿಂದ ಅನುಗ್ರಹಿಸಲ್ಪಟ್ಟ ಸಂಜೀವಿನೀ ಸಮಾನವಾದ ವಿಭೂತಿ ಪ್ರಸಾದಗಳ ಸೇವನೆಯಿಂದ ಆರೋಗರಾಗಿ ಜೀವಿಸಿರುವರು. ಸಂತಾನವಿಲ್ಲದ ಬಹುಜನರು ಮಂತ್ರೋಪದೇಶಗಳಿಂದಲೂ ಯಂತ್ರಧಾರಣಗಳಿಂದಲೂ ಉಪದೇಶಕ್ರಮದಿಂದ ನಡೆಸಿದ ದೇವತಾರಾಧನೆಯಿಂದಲೂ ಪ್ರತಿಬಂಧಕ ನಿವೃತ್ತಿಯಾಗಿ ಪುತ್ರವಂತರಾದರು.

ಗಿರಿಗಳೆಂಬ ಶಿಷ್ಯರು ಆಚಾರ್ಯರ ವಸ್ತ್ರಶೋಧನಪಾದಸಂವಾಹನಾದಿ ಶುಶ್ರೂಷೆಯನ್ನು ಮಾಡಿಕೊಂಡು ಅವರಲ್ಲಿ ಅಧ್ಯಯನ ಮಾಡುತ್ತಲಿದ್ದರು. ಜನ್ಮಾಂತರೀಯ ಸಂಸ್ಕಾರದಿಂದ ಅವರು ಕೇವಲ ಮಂದಪ್ರಜ್ಞರಾಗಿದ್ದರು. ಒಂದು ದಿನ ಗುರು ಶುಶ್ರೂಷಾಕಾರ್ಯದಿಂದ ಗಿರಿಗಳು ಪಾಠಕ್ಕೆ ಬರಲು ವಿಲಂಬವಾಯಿತು. ಶ್ರೀಮದಾಚಾರ್ಯರವರು ಅವರ ನಿರೀಕ್ಷಣೆಯಿಂದ ಪ್ರವಚನಕ್ಕೆ ಪ್ರಾರಂಭಿಸದಿರಲು ಮೇಧಾವಿಗಳಾದ ಪದ್ಮಪಾದರೆಂಬ ಮತ್ತೊಬ್ಬ ಶಿಷ್ಯರು ಗಿರಿಯು ಮಂದಪ್ರಜ್ಞನು, ಶಾಸ್ತ್ರಾನಧಿಕಾರಿಯು, ಅವನ ನಿರೀಕ್ಷೆಯಿಂದ ವಿಲಂಬ ಮಾಡುವುದು ಅನಾವಶ್ಯಕವೆಂದು ತಮ್ಮ ಅಹಂಕಾರವನ್ನು ಪ್ರಕಟಗೊಳಿಸಿದರು. ಆಗ ಸರ್ವಜ್ಞರೂ ಕರುಣಾಮೂರ್ತಿಗಳೂ ಆದ ಶ್ರೀಮದಾಚಾರ್ಯರವರು ಗಿರಿಗಳಿಗೆ ಚತುರ್ದಶ ವಿದ್ಯೆಗಳೂ ಸ್ವಾಧೀನವಾಗಲೆಂದು ಸಂಕಲ್ಪ ಮಾಡಲಾಗಿ ಆ ಕ್ಷಣದಲ್ಲಿಯೇ ಜಡತ್ವವು ದೂರಾಪಾಸ್ತವಾಗಿ ಗಿರಿಗಳು ಅದ್ಭುತ ಪಾಂಡಿತ್ಯದಿಂದ ಪಿಂಡೀಕೃತವೇದಾಂತ ಸಾರವೆನಿಸಿ ಶ್ರುತಿಸಾರಸಮುದ್ಧರಣವೆಂಬ ನಾಮಧೇಯದಿಂದ ಈಗಲೂ ಪ್ರಸಿದ್ಧವಾಗಿರುವ ಸ್ತೋತ್ರಗ್ರಂಥವನ್ನು ರಚಿಸಿ ಪರಿಸುತ್ತ ನದೀತೀರದಿಂದ ಬಂದು ಆಚಾರ್ಯರನ್ನು ಸಾಷ್ಟಾಂಗವಾಗಿ ನಮಸ್ಕರಿಸಿ ಅವರ ಪರಮಾನುಗ್ರಹಕ್ಕೆ ಪಾತ್ರರಾದರೆಂದೂ, ತೋಟಕವೃತ್ತದ ಪದ್ಯಗಳನ್ನು ಹೇಳಿದ್ದರಿಂದ ತೋಟಕಾಚಾರ್ಯರೆಂಬ ಪ್ರಸಿದ್ಧಿಯನ್ನು ಪಡೆದರೆಂದೂ, ಮುಖ್ಯರಾದ ನಾಲ್ಕುಜನ ಶಿಷ್ಯರಲ್ಲೊಬ್ಬರಾಗಿ ಉತ್ತರಾಮ್ನಾಯಪೀಠದಲ್ಲಿ ಆಚಾರ್ಯ ರವರಿಂದ ಸ್ಥಾಪಿಸಲ್ಪಟ್ಟರೆಂದೂ ತಿಳಿದು ಬರುವುದು. ಈ ಲೇಖಕನು ತನ್ನ 12ನೆಯ ವರ್ಷದ ವಯಸ್ಸಿನಲ್ಲಿ ಅನೇಕಜನ್ಮ ಪುಣ್ಯಪರಿಪಾಕದಿಂದ ಈ ಶ್ರೀಗಳವರ ಸನ್ನಿಧಿಯನ್ನು

ಸೇರಿದನು. ಕೇವಲ ಮಂದಪ್ರಜ್ಞನೂ ವಿದ್ಯಾಹೀನನೂ ಆಗಿದ್ದ ಈ ಅಲ್ಪ ಜಂತುವಿಗೆ ಶರೀರ ಪ್ರಯಾಸದಿಂದ ಈ ಮಹನೀಯರ ಸೇವೆಯನ್ನು ಮಾಡಲು ಸ್ವಲ್ಪ ಅವಕಾಶವು ದೊರೆಯಲು, ಸೇವೆಯನ್ನು ತಕ್ಕ ಮಟ್ಟಿಗೆ ಮಾಡಿ ಇವರ ಪೂರ್ಣಾನುಗ್ರಹಕ್ಕೆ ಪಾತ್ರನಾದನು. ಪ್ರಾರಬ್ಧ ಕರ್ಮದಿಂದ ವಿಶೇಷವಾಗಿ ಶಾಸ್ತ್ರಾಧ್ಯಯನ ಮಾಡಿ ಜ್ಞಾನವನ್ನು ಸಂಪಾದಿಸಲು ಅವಕಾಶವಿಲ್ಲದವನಾಗಿದ್ದರೂ ಶ್ರೀಗಳವರು ನಿರವಧಿಕವಾದ ಕರುಣೆಯಿಂದ ತಾನೂ ಮನುಷ್ಯನೆಂದು ತಿಳಿದುಕೊಳ್ಳುವಂತೆ ಇವನನ್ನು ಅನುಗ್ರಹಿಸಿದರೆಂಬ ಸ್ವಾನುಭವವು ಈ ಲೇಖಕನಿಗೆ ಚೆನ್ನಾಗಿಯೇ ಇರುವುದು. ಈ ಅಂಶವನ್ನು ಕೇವಲ ಗುರುಪ್ರಸಾದಬಲದಿಂದ ಈ ಲೇಖಕನು ರಚಿಸಿ ಮುದ್ರಿಸಿರುವ ಗುರುಪ್ರಸಾದಮಹಿಮಾದರ್ಶವೆಂಬ ಸಾರ್ಥಕ ನಾಮವುಳ್ಳ ಪುಸ್ತಕವನ್ನು ನೋಡುವುದರಿಂದ ತಿಳಿಯಬಹುದು. ಮತ್ತು ಶ್ರೀಗಳವರ ಸಂಕಲ್ಪಕ್ಕನುಗುಣವಾಗಿ ಅವರ ನಿರ್ಯಾಣದ ನಂತರ ಶೃಂಗಗಿರಿಮಠದಲ್ಲಿ ಆಶ್ರಮಸ್ವೀಕಾರ ಮಾಡಿ ಈಗ ವ್ಯಾಖ್ಯಾನ ಪೀಠದಲ್ಲಿ ನೆಲೆಗೊಂಡಿರುವ ಶ್ರೀ ಸ್ವಾಮಿಗಳವರ ನಿಷ್ಕೃಷ್ಟವಾದ ಶಾಸ್ತ್ರಜ್ಞಾನಕ್ಕೂ, ಅನುಷ್ಠಾನಕ್ಕೂ, ಪ್ರವಚನ ಸಾಮರ್ಥ್ಯಕ್ಕೂ ಪ್ರತಿಭೆಗೂ ನಮ್ಮ ಶ್ರೀಗಳವರ ಸಂಕಲ್ಪವೂ, ಅವರ ಪ್ರಾರ್ಥನೆಯೂ ಮುಖ್ಯವಾದ ದೃಷ್ಟಕಾರಣವಾಗಿರುವುದೆಂದು ಈಗಿನ ಶ್ರೀ ಸ್ವಾಮಿಗಳವರಿಗೂ ಈ ಲೇಖಕನಿಗೂ ನಿಸ್ಸಂಶಯವಾಗಿ ತಿಳಿದಿರುವುದು.

ವೈದಿಕಾಭಾಸಗಳೂ ವೇದವಿರುದ್ಧಗಳೂ ಆದ ಅನೇಕ ಮತಗಳಿಂದ ಆವರಿಸಲ್ಪಟ್ಟು ಅವ್ಯವಸ್ಥಿತವಾಗಿದ್ದ ನಮ್ಮ ಈ ಕರ್ಮಭೂಮಿಯಲ್ಲಿ ಆಚಾರ್ಯರವರು ಅವತರಿಸಿ ಅಲ್ಪಕಾಲದಲ್ಲಿ ಭರತ ಖಂಡದ ಎಲ್ಲಾ ಭಾಗಗಳಲ್ಲಿಯೂ ಸಂಚರಿಸಿ, ತಮ್ಮ ಪಾಂಡಿತ್ಯದಿಂದಲೂ ಮಾಹಾತ್ಮ್ಯದಿಂದಲೂ ಯೋಗಶಕ್ತಿಯಿಂದಲೂ ಯುಕ್ತಿಯುಕ್ತವಾಗಿ ಪ್ರಾಮಾಣಿಕವಾದ ವಾದದಿಂದಲೇ ದುರ್ವಾದಿಗಳನ್ನು ಜಯಿಸಿ ಅಬಾಧಿತವಾದ ಶುದ್ಧಾದ್ವೈತ ಮತವನ್ನು ಸ್ಥಾಪಿಸಿದರೆಂಬುದು ಲೋಕಪ್ರಸಿದ್ಧವಷ್ಟೆ! ಈಚೆಗೆ ಕಾಲವೈಷಮ್ಯದಿಂದಲೂ ಜನರ ದುಷ್ಕರ್ಮ ಪರಿಪಾಕದಿಂದಲೂ ಅಧರ್ಮಪ್ರಚಾರವುಂಟಾಗಿ ಈ ಭಾರತಭೂಮಿಯು ಪ್ರಾಯಃ ಲೋಕಾಯತ ಮತಸಿದ್ಧಾಂತದಿಂದಲೇ ವ್ಯಾಪ್ತವಾಗಿರುವಂತೆ ತೋರುತ್ತಿರಲು, ಈ ಶ್ರೀಗಳವರು ಅವತರಿಸಿ ನಾಲ್ಕು ಸಾರಿ ದೇಶ ಸಂಚಾರ ಮಾಡಿ ತಮ್ಮ ಆಚರಣೆಯಿಂದಲೂ ಹಿತೋಪದೇಶಗಳಿಂದಲೂ, ಯುಕ್ತಿವಾದಗಳಿಂದಲೂ ಜನಗಳಲ್ಲಿ ದೈವಭಕ್ತಿಯನ್ನೂ ಹಿತಾಹಿತ ಪರಿಜ್ಞಾನವನ್ನೂ ಸತ್ಕರ್ಮ ಸದಾಚಾರಗಳನ್ನನುಸರಿಸುವ ವಿಷಯದಲ್ಲಿ ಆದರವನ್ನೂ ಉಂಟು ಮಾಡುವುದರ ಮೂಲಕ ಧರ್ಮಮಾರ್ಗ ಪ್ರಚಾರಕ್ಕೆ ಬಹಳ ಮಟ್ಟಿಗೆ ಉತ್ತೇಜನವನ್ನು ಕೊಟ್ಟರು.

ತಂತ್ರಗಳೆಲ್ಲವೂ ಅವೈದಿಕರ ಅನುಷ್ಠಾನಕ್ಕೋಸ್ಕರ ಭಗವಂತನಿಂದ ಕಲ್ಪಿಸಲ್ಪಟ್ಟವೆಂದೂ

ಅವುಗಳನ್ನಾಚರಿಸುವುದರಲ್ಲಿ ಆ ಜನರೇ ಅಧಿಕಾರಿಗಳೆಂದೂ ಆಚಾರ್ಯರು ಸಿದ್ಧಾಂತ ಮಾಡಿ ತದನುಯಾಯಿಗಳಾಗಿದ್ದ ವೈದಿಕರನ್ನು ತಿರಸ್ಕರಿಸಿದರೆಂದು ತಿಳಿದು ಬರುವುದು. ನಮ್ಮ ಈ ಶ್ರೀಗಳವರು ವೇದೋಕ್ತವಿಧಾನದಿಂದ ಅನೇಕ ದೇವಾಲಯಗಳನ್ನು ಪರಿಷ್ಕರಿಸಿ, ಬ್ರಾಹ್ಮಣರ ಮೂಲಕವಾಗಿ ವೇದಮಂತ್ರಗಳಿಂದ ಪೂಜಾದಿಗಳು ನಡೆದು ಬರುವಂತೆ ವ್ಯವಸ್ಥೆ ಮಾಡಿ ತಾಂತ್ರಿಕ ಮಾರ್ಗವನ್ನು ತಿರಸ್ಕರಿಸಿರುವರು.

ಹೀಗೆ ಅನೇಕ ಚರ್ಯೆಗಳಿಂದ ಆಚಾರ್ಯ ಸಾಧರ್ಮ್ಯವನ್ನು ಪಡೆದು ಸಮಸ್ತ ಜನರಿಂದಲೂ ಗೌರವಿಸಲ್ಪಟ್ಟು ಅಸ್ಮದಾದಿಗಳನ್ನು ಕೃತಾರ್ಥರನ್ನಾಗಿಸಿ ಶ್ರೀಗಳವರು ಧರ್ಮಪ್ರಚಾರಕ್ಕೋಸ್ಕರ ಮಾಡಿದ ಅನೇಕ ಕಾರ್ಯಗಳಲ್ಲಿ ಪ್ರಧಾನತಮವಾದ ಆಚಾರ್ಯ ಜನ್ಮಭೂಪರಿಷ್ಕಾರವೆಂಬ ಮಹಾಕಾರ್ಯವನ್ನು ಆಚಾರ್ಯಾನುಗ್ರಹದಿಂದ ಪೂರ್ಣಮಾಡಿ ಕೃತಕೃತ್ಯರಾಗಿ ಶೃಂಗೇರಿಗೆ ತೆರಳಿ ಬಂದಬಳಿಕ ಕಲ್ಯಾಣ ನಗರದಲ್ಲಿ ಸದ್ವಿದ್ಯಾಪ್ರಚಾರಕ್ಕೆ ವಿದ್ಯಾಶಾಲೆಯನ್ನು ಸ್ಥಾಪಿಸುವುದೊಂದಲ್ಲದೆ ಬೇರೆ ಕರ್ತವ್ಯಾಂಶವೇನೂ ಉಳಿದಿರಲಿಲ್ಲ. ಆ ಶಾಲೆಯ ನಿರ್ಮಾಣದ ವಿಷಯವಾಗಿ ತಮ್ಮ ಅಧಿಕಾರಿಗಳೊಡನೆ ಶೃಂಗೇರಿಯಲ್ಲಿ ಸಾವಕಾಶವಾಗಿ ವಿಚಾರನಡೆಸಿ ತಾತ್ಕಾಲಿಕವಾದ ಆಸ್ಥಾನದ ವರಮಾನದಲ್ಲಿ ಹಿಂದಿನ ಧರ್ಮಸ್ಥಾಪಕರ ಉದ್ದೇಶದಂತೆ ಪರಂಪರೆಯಾಗಿ ಏರ್ಪಟ್ಟು ನಡೆದುಬಂದಿರುವ ಆಸ್ಥಾನದ ಧರ್ಮಕಾರ್ಯಗಳಿಗೆ ಯಾವ ರೀತಿಯಿಂದಲೂ ಲೋಪಬಾರದಂತೆ ಅವುಗಳನ್ನು ನಡೆಸಿಕೊಂಡು ವರ್ಷವೊಂದಕ್ಕೆ ಐದುಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆಯೂ ಆರುಸಾವಿರ ರೂಪಾಯಿಗಳಿಗೆ ಮೀರದಂತೆಯೂ ಸ್ಥಿರವಾಗಿ ಸದ್ವಿದ್ಯಾಪ್ರಚಾರಕ್ಕೆ ವಿನಿಯೋಗಿಸಬಹುದೆಂದು ದ್ರವ್ಯವನ್ನು ವಿಭಾಗಿಸಿಕೊಟ್ಟು ತೀರ್ಮಾನಿಸಿದರು. ಅನಂತರ ಕಾಲಯಾಪನವು ತಕ್ಕುದಲ್ಲವೆಂದಾಲೋಚಿಸಿ ವಿರೋಧಿಕೃತ್ ಸಂವತ್ಸರದ ಶ್ರೀಮದಾಚಾರ್ಯವತಾರ ದಿನವಾದ ವೈಶಾಖಶುದ್ಧ ಪಂಚಮಿಯಲ್ಲಿ ಅವರ ಜ್ಞಾಪಕವಾಗಿಯೂ, ಆಜ್ಞಾಪರಿಪಾಲನೆಗಾಗಿಯೂ, ಬೆಂಗಳೂರು ಶಂಕರಮಠದಲ್ಲಿ ವಿದ್ಯಾಶಾಲೆಯನ್ನು ಸ್ಥಾಪಿಸತಕ್ಕುದೆಂದೂ, ದ್ರವ್ಯಾನುಕೂಲ್ಯಕ್ಕೆ ತಕ್ಕಂತೆ ಪ್ರಕೃತದಲ್ಲಿ ಎಂಟುಜನ ವಿದ್ಯಾರ್ಥಿಗಳನ್ನೂ ಇಬ್ಬರು ಉಪಾಧ್ಯಾಯರನ್ನೂ ಸೇರಿಸಿ ಪೂರ್ವೋತ್ತರ ಮೀಮಾಂಸಾ ಶಾಸ್ತ್ರಾಧ್ಯಯನಕ್ಕೆ ಎರಡು ವರ್ಗಗಳನ್ನು ಏರ್ಪಡಿಸಿ ಎರಡುಶಾಸ್ತ್ರಗಳನ್ನು ಮಾತ್ರ ಅಭ್ಯಸಿಸುವ ವ್ಯವಸ್ಥೆಯಿಂದ ಪಾಠಶಾಲಾರಂಭವಾಗತಕ್ಕುದೆಂದೂ ನಿರೂಪಿಸಿ, ವೇದಾಧ್ಯಯನಮಾಡಿ ಕರ್ಮಾನುಷ್ಠಾನ ಪರರಾಗಿ ಪ್ರಸಿದ್ಧ ಪಂಡಿತರಲ್ಲಿ ವೇದಾಂತ ಶಾಸ್ತ್ರವನ್ನಭ್ಯಸಿಸಿ ತಮ್ಮಲ್ಲಿ ವೇದಾಂತ ಪ್ರೌಢಭಾಗಾಧ್ಯಯನಮಾಡಿದ್ದ ವೆಳ್ಳೂರು ಸುಬ್ರಹ್ಮಣ್ಯಶಾಸ್ತ್ರಿಗಳನ್ನು ಅದ್ವೈತವೇದಾಂತ ಪಾಠಕರನ್ನಾಗಿಯೂ ಪಳಮಾನೇರಿ ಗ್ರಾಮದ ರಾಮಶಾಸ್ತ್ರಿಗಳಲ್ಲಿ ಪೂರ್ವಮೀಮಾಂಸಾ

ಶಾಸ್ತ್ರಾಧ್ಯಯನವನ್ನು ಪೂರೈಸಿ ಸಂಪ್ರತಿಪನ್ನರಾದ ಪಂಡಿತರೆನ್ನಿಸಿಕೊಂಡು ತಮ್ಮಲ್ಲಿ ಉತ್ತರ ಮೀಮಾಂಸಾಧ್ಯಯನಮಾಡಿದ್ದ ವೈದ್ಯನಾಥ ಶಾಸ್ತ್ರಿಗಳನ್ನು ಪೂರ್ವಮೀಮಾಂಸಾಧ್ಯಾಪಕರನ್ನಾಗಿಯೂ ನಿಯಮಿಸಿ, ಬೆಂಗಳೂರು ನಗರವಾಸಿಗಳಲ್ಲಿ ಪ್ರಧಾನರಾದ ಕೆಲವರನ್ನು ಬರಮಾಡಿಕೊಂಡು ಶಾಲಾರಂಭವನ್ನು ಮಾಡಿಬರುವಂತೆ ಆಸ್ಥಾನ ಪಂಡಿತರಾದ ಕುಣಿಗಲ್ ರಾಮಶಾಸ್ತ್ರಿಗಳನ್ನು ಕಳುಹಿಸಿದರು. ಈ ಶಾಸ್ತ್ರಿಗಳು ಉಭಯಪಂಡಿತರೊಡನೆ ಬೆಂಗಳೂರಿಗೆ ಪ್ರಯಾಣಮಾಡಿ ಮೈಸೂರು ರಾಜ್ಯದಲ್ಲಿ ಪ್ರಸಿದ್ಧರಾದ ಪೂರ್ಣಯ್ಯನವರ ವಂಶಸ್ಥರಾದ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಗಳು, ದಿವಾನ್ ವಿ. ಪಿ. ಮಾಧವರಾಯರು, ರಾಜ್ಯಕಾರ್ಯನಿರ್ವಹಣ ಸಭಾಸದರಾಗಿದ್ದ ಹೆಚ್. ವಿ. ನಂಜುಂಡಯ್ಯನವರು, ಇವರೇ ಮೊದಲಾದ ಲೌಕಿಕ ಮಹಾಜನರನ್ನೂ ಅನೇಕ ಪಂಡಿತರನ್ನೂ ಬೆಂಗಳೂರು ಶಂಕರಮಠಕ್ಕೆ ಬರಮಾಡಿ ಶ್ರೀಗಳವರ ಆಜ್ಞೆಯನ್ನು ಮಹಾಸಭೆಯಲ್ಲಿ ತಿಳಿಯಪಡಿಸಿದರು. ಆ ಕಾಲದಲ್ಲಿ ಸಭಾಧ್ಯಕ್ಷತೆಯನ್ನು ವಹಿಸಿದ್ದ ಸರ್ ಪಿ. ಎನ್. ಕೃಷ್ಣಮೂರ್ತಿಗಳು ಶ್ರೀಗಳವರನ್ನು ಅನೇಕ ಸಾಧರ್ಮ್ಯಗಳಿಂದ ಶ್ರೀಮದಾಚಾರ್ಯ ಭಗವತ್ಪಾದರವರಿಗೆ ಹೋಲಿಸಿ ಅವರ ಗುಣಗಳನ್ನು ಅವರಿಂದ ಧರ್ಮರಕ್ಷಣಾರ್ಥವಾಗಿ ಮಾಡಲ್ಪಟ್ಟ ಅನೇಕ ಪ್ರಯತ್ನಗಳನ್ನೂ ಸಭಾಸದರ ಸ್ಮೃತಿಗೆ ತಂದು ಸಭಾಸದರಪರವಾಗಿಯೂ ಭರತಖಂಡ ನಿವಾಸಿಗಳಾದ ಆಸ್ತಿಕಮಂಡಲಿಯವರ ಪರವಾಗಿಯೂ ತಮ್ಮ ಸಾಷ್ಟಾಂಗ ಪ್ರಣಾಮಗಳನ್ನೂ ಧನ್ಯವಾದಗಳನ್ನೂ ಶ್ರೀಗಳವರ ಸನ್ನಿಧಿಯಲ್ಲಿ ಶ್ರುತಪಡಿಸುವಂತೆ ಕುಣಿಗಲ್ ರಾಮಶಾಸ್ತ್ರಿಗಳಲ್ಲಿ ತಿಳಿಸಿ, ಆ ದಿನವೇ (ಶಾ|| 1834 ವಿರೋಧಿ ಕೃತ್ಸಂವತ್ಸರ (1911) ವೈಶಾಖ ಶುಕ್ಲ ಪಂಚಮಿಯಲ್ಲಿ) ಪೂರ್ವೋತ್ತರ ಮೀಮಾಂಸಾಶಾಸ್ತ್ರಗಳ ಪ್ರವಚನಕ್ಕೆ ಪ್ರಾರಂಭಮಾಡಿಸಿದರು. ಪಾಠಶಾಲಾರಂಭದಲ್ಲಿ ಸೇರಿಸಲ್ಪಟ್ಟ ಎಂಟುಜನ ವಿದ್ಯಾರ್ಥಿಗಳಲ್ಲಿ ನಾಲ್ಕುಜನ ಶೃಂಗಗಿರಿ ಸ್ಥಳವಾದರೂ ಅಲ್ಲಿಯ ಸಂಸ್ಕೃತಪಾಠಶಾಲೆಯಲ್ಲಿ ತರ್ಕ ವ್ಯಾಕರಣ ಶಾಸ್ತ್ರಗಳಲ್ಲಿ ಸ್ವಲ್ಪದೂರ ಪರಿಶ್ರಮಪಟ್ಟವರೂ ಆಗಿದ್ದರು. ಮೂರುಜನ ಪಾಲ್ಘಾಟ್ ಪ್ರಾಂತದವರು. ಈ ವಿದ್ಯಾರ್ಥಿಗಳಿಗೆ ತಿಂಗಳಿಗೆ ಇಪ್ಪತ್ತು ರೂಪಾಯಿಗಳಂತೆ ವೇತನವನ್ನು ಕೊಡುವುದೆಂದು ಏರ್ಪಡಿಸಿ, ದಿವಾನ್ ಮಾಧವರಾಯರಿಂದ ಶ್ರೀಗಳ ಸನ್ನಿಧಿಯಲ್ಲಿ ಸದ್ವಿದ್ಯಾಪ್ರಚಾರಕಾರ್ಯಕ್ಕೆ ಉಪಯುಕ್ತವಾಗಲು ಒಪ್ಪಿಸಲ್ಪಟ್ಟಿದ್ದ ಅಗ್ರಹಾರಗೃಹಗಳಲ್ಲಿ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿ ವಿದ್ಯಾರ್ಥಿಗಳ ಪಾಠಶಾಲೆಯಲ್ಲಿ ಶಾಲಾನಿಬಂಧನೆಗಳನ್ನನುಸರಿಸಿ ಪ್ರಾಚೀನ ಸಂಪ್ರದಾಯಾನುಗುಣವಾಗಿ ಎಂಟು ವರ್ಷಗಳು ಶಾಸ್ತ್ರಾಭ್ಯಾಸಂಗಮಾಡಿ ಪಾಂಡಿತ್ಯವನ್ನು ಸಂಪಾದಿಸಿ ವಿದ್ಯಾರ್ಥಿಗಳನ್ನು ಈಗಿನ ಗುರುಗಳವರ ಆಜ್ಞೆಯಂತೆ ಪ್ರಸಿದ್ಧರಾದ ಪಂಡಿತರನ್ನು ಪರೀಕ್ಷಕರನ್ನಾಗಿ ಬರಮಾಡಿಕೊಂಡು ದೀರ್ಘಕಾಲ ಪರೀಕ್ಷಿಸಿದ್ದಾಯಿತು. ಪರೀಕ್ಷೆಗೆ ಬಂದವರಲ್ಲಿ ನಾಲ್ಕುಜನ

ವಿದ್ಯಾರ್ಥಿಗಳು ಉತ್ತಮಕಕ್ಷ್ಯೆಯಲ್ಲಿಯೂ ಮೂರುಮಂದಿ ಮಧ್ಯಮ ಕಕ್ಷ್ಯೆಯಲ್ಲಿಯೂ ಉತ್ತೀರ್ಣರಾದರು. ಕಳೆದ ಸಿದ್ಧಾರ್ಥಿ ಸಂವತ್ಸರದ ನವರಾತ್ರಿ ಮಹೋತ್ಸವ ಕಾಲದಲ್ಲಿ ಈಗಿನ ಶ್ರೀಸ್ವಾಮಿಗಳವರು ಆ ಉತ್ತೀರ್ಣ ವಿದ್ಯಾರ್ಥಿಗಳನ್ನು ಶ್ರೀ ಶಾರದಾಂಬಾಸನ್ನಿಧಾನದಲ್ಲಿ ಸ್ವರ್ಣಕಟಕ ರಾಂಕವಾದಿಗಳಿಂದ ಸನ್ಮಾನಿಸಿ ಪಂಡಿತಪ್ರವರರೆಂದು ತಮ್ಮ ವಾಕ್ಕಿನಿಂದ ಅನುಮೋದಿಸಿ ಯೋಗ್ಯತಾಪತ್ರವನ್ನು ಅನುಗ್ರಹಿಸಿದರು. ಈ ಪಂಡಿತರಲ್ಲಿ ಮೂರು ಜನರಿಗೆ ಮಾಸಾಶನಗಳನ್ನು ಕೊಡಿಸಿ ಅವರನ್ನು ಆಸ್ಥಾನ ಪಂಡಿತರನ್ನಾಗಿ ನಿಯಮಿಸಿದರು. ಪಾಲ್ಘಾಟಿನಿಂದ ಬಂದ ಮೂರುಜನರಲ್ಲಿ ಒಬ್ಬರು ಮದ್ರಾಸು ರಾಜಧಾನಿಯಲ್ಲಿ ಪ್ರಸಿದ್ಧರಾಗಿದ್ದ ವಿ. ಕೃಷ್ಣಸ್ವಾಮಯ್ಯರವರ ವಿಶೇಷ ಸಾಹಾಯ್ಯದಿಂದ ಅಭಿವೃದ್ಧಿಯನ್ನು ಪಡೆಯುತ್ತಲಿರುವ ಮೈಲಾಪುರ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿಯೂ, ಮತ್ತೊಬ್ಬರು ಪಿ.ಆರ್. ಸುಂದರಮಯ್ಯರವರಿಂದ ಸ್ವಜನ್ಮ ಭೂಮಿಯಲ್ಲಿ ಸ್ಥಾಪಿಸಲ್ಪಟ್ಟು ವೃದ್ಧಿ ಹೊಂದುತ್ತಲಿರುವ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾಗಿಯೂ ನಿಯಮಿಸಲ್ಪಟ್ಟಿರುವರು. ಮತ್ತೊಬ್ಬರಿಗೆ ಮೈಸೂರು ರಾಜಕೀಯ ಪುಸ್ತಕ ಭಾಂಡಾಗಾರದಲ್ಲಿ ಆಶ್ರಯವು ದೊರಕಿಸಲ್ಪಟ್ಟಿದೆ. ಈ ರೀತಿಯಿಂದ ಶ್ರೀಗಳವರ ಸಂಕಲ್ಪದಂತೆ ಸದ್ವಿದ್ಯಾಪ್ರಚಾರಕ್ಕೆ ಕಲ್ಪಿಸಲ್ಪಟ್ಟ ವಿದ್ಯಾಶಾಲೆಯಲ್ಲಿ ಸಂಪ್ರದಾಯಾನುಸಾರವಾಗಿ ಶಾಸ್ತ್ರಾಧ್ಯಯನ ಮಾಡಿ ನಿಷ್ಕೃಷ್ಟವಾದ ಜ್ಞಾನವನ್ನು ಸಂಪಾದಿಸಿ ಬ್ರಾಹ್ಮಣ್ಯಕ್ಕೆ ಅವಿರುದ್ಧವಾದ ಜೀವನ ಕಲ್ಪನೆಯಿಂದ ಆ ಪಂಡಿತರು ಸದ್ವೃತ್ತರಾಗಿರುವರು. ಇದು ಶ್ರೀಗಳವರ ಸಂಕಲ್ಪ ಪ್ರಭಾವವೇ ಹೊರತು ಬೇರೆಯಲ್ಲವು. ಈಚೆಗೆ ಎರಡನೆಸಾರಿ ಎಂಟುಮಂದಿ ವಿದ್ಯಾರ್ಥಿಗಳನ್ನು ಸೇರಿಸಿ ಅವರಿಗೆ ಶಾಸ್ತ್ರಾಧ್ಯಯನವನ್ನು ಮಾಡಿಸುತ್ತಾ ಬರುವುದರ ಮೂಲಕ ಬೆಂಗಳೂರು ಭಾರತೀಯಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀ ಪಾಠಶಾಲೆಯು ಉತ್ತಮರೀತಿಯಿಂದ ನಡೆದುಬರುತ್ತಿರುವುದು.

ಭೂಮಿಯಲ್ಲಿ ಕೃತಕಾರ್ಯರಾದ ಈ ಶ್ರೀಗಳವರು ವಿಧಿಸಂಕಲ್ಪವಶದಿಂದ ಅಂತರಿಸಬೇಕಾದ ಕಾಲವು ಒದಗಿರುವುದೋ ಎಂದು ಶಂಕಿಸುವುದಕ್ಕೆ ಅನುಕೂಲವಾದ ಸೂಚನೆಗಳೊಂದೊಂದಾಗಿ ಗೋಚರವಾದುವು. ಪ್ರಸಿದ್ಧರೂ ತೇಜಸ್ವಿಗಳೂ ಆದ ಮಹಾಪುರುಷರು ಅಂತರಿಸತಕ್ಕ ಕಾಲವು ಸಮೀಪವಾಗುತ್ತಿರಲು ಮುಂದಾಗಿ ಅರಿಷ್ಟ ಸೂಚನೆಗಳು ಏರ್ಪಡುವುವೆಂದು ಲೋಕಪ್ರಸಿದ್ಧಿಯುಂಟು. ಅದಕ್ಕೆ ತಕ್ಕಂತೆ ಶ್ರೀ ಶಾರದಾಂಬೆಯವರ ಆಲಯವು ಅಗ್ನಿಗೆ ಆಸ್ಪದವಾದದ್ದು ಒಂದು ಅರಿಷ್ಟ ಸೂಚಕವೆಂದು ಜನಗಳಿಗೆ ತೋರುವಂತಾಯಿತು. ವೈದೇಶಿಕ ವಿದ್ಯಾಭ್ಯಾಸದಿಂದಲೂ ಉಡುಗೆತೊಡುಗೆಗಳಿಂದಲೂ ಪರದೇಶೀಯರ ಸಹವಾಸ ಸಹಯೋಗ ಕ್ಷೇಮಾದಿಗಳಿಂದಲೂ ಪ್ರತಿಕ್ಷಣವೂ ವೃದ್ಧಿಹೊಂದುತ್ತಲಿರುವ ನವನಾಗರೀಕತೆಯ ಪ್ರವೇಶಕ್ಕೆ ಅವಕಾಶವಿಲ್ಲದಂತೆ ವನಪ್ರಾಂತದಲ್ಲಿ

ದೂರವಾಗಿದ್ದ ಶೃಂಗೇರಿಯಲ್ಲಿ ದೃಷ್ಟಸಾಧನಗಳು ಯಾವುವೂ ಇಲ್ಲದಿದ್ದರೂ ಕಾಲಸ್ವಭಾವದಿಂದ ಅಲ್ಲಿಯ ಜನರೂ ತಮ್ಮ ಕುಲಧರ್ಮಗಳನ್ನು ಬಿಟ್ಟು ಸ್ವಚ್ಛಂದಾಚರಣೆಗಳನ್ನು ನಡೆಯಿಸುವರೆಂದೂ, ಇದಕ್ಕೆ ಸಹಕಾರಿಯಾಗಿ ಶೃಂಗೇರಿಯಲ್ಲಿ ಕಾಫಿ ಮತ್ತು ತಿಂಡಿಯ ಪದಾರ್ಥಗಳನ್ನು ಸಿದ್ಧಪಡಿಸಿ ಮಾರತಕ್ಕ ಅಂಗಡಿಗಳು ಏರ್ಪಟ್ಟಿರುವುವೆಂದೂ, ಬ್ರಾಹ್ಮಣರಲ್ಲಿ ಅನೇಕರು ಪ್ರಾತಸ್ಸ್ನಾನಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಬಿಟ್ಟು ಕ್ರಯಲಬ್ಧವಾದ ಆಹಾರಪದಾರ್ಥಗಳನ್ನು ಸೇವಿಸುವರೆಂದೂ ಶ್ರೀಗಳವರ ಶ್ರವಣಗೋಚರವಾಗುತ್ತಾ ಬಂದಿತು. ಬ್ರಾಹ್ಮಣೇತರ ಸಂಬಂಧವು ಯಾವವಿಧದಿಂದಲೂ ಉಂಟಾಗದಿರುವಂತೆ ನಿರ್ಬಂಧಗಳನ್ನು ಕಲ್ಪಿಸಿ ಹಿಂದಿನವರಿಂದ ಬ್ರಾಹ್ಮಣರ ವಸತಿಗಾಗಿ ಮಾತ್ರ ಏರ್ಪಡಿಸಲ್ಪಟ್ಟಿದ್ದ ಅಗ್ರಹಾರದ ಮಧ್ಯದಲ್ಲಿ ದುರ್ವೃತ್ತರೂ ಮತಾಂತರ ಪ್ರವಿಷ್ಟರೂ ಆದ ಜನರಿಗೆ ನಿರಾಕ್ಷೇಪವಾಗಿ ವಸತಿಮಾಡಲು ಅವಕಾಶವು ಶೃಂಗೇರಿಯ ಜನರಿಂದ ಕೊಡಲ್ಪಟ್ಟಿರುವುದೆಂದು ಶ್ರೀಗಳವರಿಗೆ ಅಭಿವ್ಯಕ್ತವಾಯಿತು. ಇವು ಮೊದಲಾದ ಅಧರ್ಮ ಪ್ರವೃತ್ತಿಗಳು ಧರ್ಮಾಚರಣೆಗೆ ಮೂಲವಾದ ಶೃಂಗೇರಿಯಲ್ಲಿಯೂ ಪ್ರಚಾರಕ್ಕೆ ಬಂದುದರಿಂದ ಶ್ರೀಗಳವರ ಮನಸ್ಸಿಗೆ ಉಂಟಾದ ಉದ್ವೇಗವು ದಿನದಿನಕ್ಕೆ ಅವರ ಆರೋಗ್ಯವನ್ನು ತಗ್ಗಿಸುತ್ತಲೇ ಬಂದಿತು. ಇವರ ಉತ್ಸಾಹವೂ ಸಂತೋಷವೂ ಅದೃಶ್ಯಭಾವವನ್ನು ಹೊಂದಿತು. ವೇದಾಂತ ಶಾಸ್ತ್ರಾಭ್ಯಾಸಕ್ಕೋಸ್ಕರ ಬಂದು ಕಾದುಕೊಂಡಿದ್ದ ಶಿಷ್ಯರಿಗೆ ಪಾಠ ಹೇಳುವ ವಿಷಯದಲ್ಲಿ ಯಾವಾಗಲೂ ನಿರುತ್ಸಾಹರಾಗಿರಿದ ಶ್ರೀಗಳವರಿಗೆ ಆ ವಿಷಯದಲ್ಲಿಯೂ ಉತ್ಸಾಹವು ತಗ್ಗುತ್ತಲೇ ಬಂದಿತು. ಈ ಸಂದರ್ಭದಲ್ಲಿ

ಕಿಂ ಪಾಠಯೇಯಂ ಲಘುಚಂದ್ರಿಕಾಂ ವಾ
ಕಿಂ ವಾ ತ್ಯಜೇಯಂ ಸಕಲಪ್ರಪಂಚಮ್ ।
ಸ್ವಪ್ನೇದ್ಯ ಮೇ ಬ್ರೂಹಿ ಕಿಮತ್ರ ಕಾರ್ಯಂ
ಡೋಲಾಯಿತಂ ಮಾಮಕಮಂಬ ಚೇತಃ ॥

ಎಂದು ಶ್ರೀ ಶಾರದಾಂಬೆಯನ್ನು ಪ್ರಾರ್ಥಿಸಲು ಆ ಕಾಲಕ್ಕೆ ತಕ್ಕಂತೆ ಅಮ್ಮನವರ ಆಜ್ಞೆಯು ಶ್ರೀಗಳವರಿಗೆ ಸ್ವಪ್ನಲಬ್ಧವಾಗಿ ಇವರು ಪಾಠಹೇಳುವುದನ್ನು ನಿಲ್ಲಿಸಿರಬಹುದು. ಈ ರೀತಿಯಾದ ಶ್ರೀಗಳವರ ವರ್ತನವು ಸಮೀಪವರ್ತಿಗಳಿಗೆ ಆತಂಕವನ್ನುಂಟು ಮಾಡತಕ್ಕದ್ದಾಗಿ ಆ ಜನರಿಗೂ ಉತ್ಸಾಹ ಸಂತೋಷಗಳು ಕಡಿಮೆಯಾಗುತ್ತಬಂದುವು. ಈ ಸಮಯದಲ್ಲಿ ಶಿಷ್ಯಪರಿಗ್ರಹವನ್ನು ಮಾಡಿ ಅವರಿಗೆ ಸಂಸ್ಥಾನಭಾರವನ್ನು ವಹಿಸಿ ಆ ಸಂಬಂಧದಿಂದ ನಿವೃತ್ತರಾಗಬೇಕೆಂಬ ಅಭಿಪ್ರಾಯವು ಶ್ರೀಗಳವರಿಗೆ ದೃಢವಾಗಿ ತೋರಿತು.

ತಮ್ಮ ಸ್ಥಾನಕ್ಕೆ ಬರಲು ಅರ್ಹರೆಂದು ಕೆಲವು ವರ್ಷಗಳಿಂದ ತಮ್ಮ ಹೃದಯದಲ್ಲಿಯೇ ತೀರ್ಮಾನಿಸಿಕೊಂಡಿದ್ದಂತೆ ಶೃಂಗಗಿರಿಯ ನರಸಿಂಹಶಾಸ್ತ್ರಿಗಳಿಗೆ ಆಶ್ರಮವನ್ನು ಕೊಡಿಸಿ ಅವರನ್ನು ಆಸ್ಥಾನಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡತಕ್ಕದ್ದೆಂದು ನಿಷ್ಕರ್ಷೆಮಾಡಿದರು. ತಮ್ಮ ಈ ಅಭಿಪ್ರಾಯವನ್ನು ಮೈಸೂರು ದೇಶಕ್ಕೆ ಅಧಿಪತಿಗಳೂ ತಮಗೆ ಆಪ್ತತಮರೂ ಆದ ಮಹಾರಾಜ ಕೃಷ್ಣರಾಜ ಪ್ರಭುಗಳಿಗೆ ತಿಳಿಸಿ ಬೆಂಗಳೂರು ಶಂಕರಮಠೀಯ ಪಾಠಶಾಲೆಯಲ್ಲಿ ಶಾಸ್ತ್ರಾಧ್ಯಯನ ಮಾಡುತ್ತಲಿರುವ ಶೃಂಗಗಿರಿ ನರಸಿಂಹಶಾಸ್ತ್ರಿಗಳನ್ನು ಪ್ರಭುಗಳದೃಷ್ಟಿಗೆ ತರತಕ್ಕದ್ದೆಂದು ನಿರೂಪಿಸಿ ಅಂತರಂಗಶಿಷ್ಯರಾದ ಕುಣಿಗಲ್ ರಾಮಶಾಸ್ತ್ರಿಗಳನ್ನು ಕಳುಹಿಸಿದರು. ಅವರು ಶೃಂಗೇರಿಯಿಂದ ಬೆಂಗಳೂರಿಗೆ ಹೋಗಿ ಪ್ರಭುಗಳವರು ಬೆಂಗಳೂರಿನಲ್ಲಿಯೇ ವಸತಿಮಾಡಿರುವರೆಂದು ತಿಳಿದು, ಅವರ ದರ್ಶನಮಾಡಿ ಶ್ರೀಗಳವರ ನಿಯೋಗವನ್ನು ಶ್ರುತಪಡಿಸಲು; ಗುರುಭಕ್ತ ಶಿರೋಮಣಿಗಳಾದ ಆ ಪ್ರಭುವರ್ಯರು ಶ್ರೀಗಳವರ ಸ್ಥಿತಿಯನ್ನು ತಿಳಿದು ವ್ಯಸನಗೊಂಡು ಶ್ರೀಗಳವರ ಆಜ್ಞೆಯಂತೆ ನಡೆಸುವುದರಲ್ಲಿ ಸಿದ್ಧರಾಗಿರುವೆವೆಂದು ಆ ಶಾಸ್ತ್ರಿಗಳ ಮೂಲಕ ಶ್ರೀಗಳವರಿಗೆ ಶ್ರುತಪಡಿಸಿದರು.

ಇಷ್ಟರಲ್ಲಿ ಕಾಲವು ಸಮೀಪಿಸಿ ಬರಲು ವಿರೋಧಿಕೃತ್ಸಂವತ್ಸರದ ಮಾಘಶುಕ್ಲ ಸಪ್ತಮೀ ದಿನದಲ್ಲಿ ಶ್ರೀಗಳವರಿಗೆ ಕೆಮ್ಮಿಗೆ ಪ್ರಾರಂಭವಾಯಿತು. ಕೆಲವು ವರ್ಷಗಳಿಂದ ಶೀತಕಾಲದಲ್ಲಿ ಕೆಮ್ಮು ಪ್ರಾರಂಭಿಸಿ 2-3 ತಿಂಗಳ ಪರ್ಯಂತ ಶ್ರೀಗಳವರ ವಾಗ್ವ್ಯಾಪಾರಕ್ಕೆ ಮಾತ್ರ ಸ್ವಲ್ಪ ಪ್ರತಿಬಂಧಕವಾಗುತ್ತಲಿದ್ದಿತು. ಅದರಂತೆ ತತ್ಕಾಲದಲ್ಲಿಯೂ ಕೆಮ್ಮು ಉಂಟಾಗಿರುವುದೆಂದು ತಿಳಿದುಕೊಳ್ಳುವಂತೆ ಇದ್ದಿತೇ ಹೊರತು ವಿಶೇಷವೇನೂ ಇರಲಿಲ್ಲ. ಹಾಗಿದ್ದರೂ ಹಿಂದಿನ ವರ್ಷಗಳಂತೆ ಕ್ರಮಕ್ರಮವಾಗಿ ತಗ್ಗಬೇಕಾದ ತೊಂದರೆಯು ದಿನದಿನಕ್ಕೆ ಹೆಚ್ಚುತ್ತ ಬಂದಿತು. ಫಾಲ್ಗುಣ ಶುದ್ಧ ಪೂರ್ಣಿಮಾ ದಿನದಲ್ಲಿ ಕ್ಷೌರಕರ್ಮವಾಗಿ ತುಂಗಾ ನದಿಯಲ್ಲಿ ಸ್ನಾನಮಾಡಿ ಮೇಲಕ್ಕೆ ಬಂದಕೂಡಲೆ ನಾಭಿದೇಶದಿಂದ ಕೆಳಭಾಗದಲ್ಲಿರುವ ನಾಡಿಗಳಲ್ಲಿ ಶೈತ್ಯವುಸೇರಿ ವಾಯುಸಂಚಾರಕ್ಕೆ ಪ್ರತಿಬಂಧವುಂಟಾಗಿ ಋಜುಕಾಯರಾಗಿ ಸಂಚಾರಮಾಡುವುದಕ್ಕೆ ತೊಂದರೆಪಡಿಸಿತು. ಈ ಸಂದರ್ಭದಲ್ಲಿ ಮೈಸೂರು ದೇಶದ ರಾಜಕೀಯ ಔಷಧಶಾಲಾ ಪ್ರಧಾನಾಧಿಕಾರಿಗಳಾಗಿದ್ದ ಡಾಕ್ಟರ್ ಅಚ್ಯುತರಾಯರು ಸಂಚಾರಕ್ರಮದಿಂದ ಶೃಂಗೇರಿಗೆ ಬಂದರು. ಅವರು ಶ್ರೀಗಳವರಲ್ಲಿ ಹೆಚ್ಚಾದ ಗೌರವಗಳನ್ನು ಮಾಡುವವರಾಗಿಯೂ, ಹಿಂದೆ ಕೆಲವು ಸಂದರ್ಭಗಳಲ್ಲಿ ಶ್ರೀಗಳವರಿಗೆ ಅನಾರೋಗ್ಯವುಂಟಾಗಿದ್ದಾಗ ಇವರ ಶರೀರಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡವರಾಗಿಯೂ ಇದ್ದುದರಿಂದ, ಉಪಾಯವಾದ ಚಿಕಿತ್ಸೆಯನ್ನು ಎರಡು ಮೂರು ದಿನಗಳು ಮಾಡುವಷ್ಟರಲ್ಲಿ ಶ್ರೀಗಳವರಿಗೆ ಉಂಟಾಗಿದ್ದ ತೊಂದರೆಯು ನಿವೃತ್ತವಾಗಿ

ಅನುಕೂಲಸ್ಥಿತಿಗೆ ಬಂದಿತು. ಆದರೆ ಕೆಮ್ಮಿನ ಬಾಧೆಯು ತಪ್ಪಲಿಲ್ಲವು. ಶ್ರೀಗಳವರ ಶರೀರ ಸ್ಥಿತಿಯನ್ನು ಪರೀಕ್ಷಿಸಿದ ಆ ವೈದ್ಯಶ್ರೇಷ್ಠರು ಶ್ರೀಗಳವರು ಅಂತರಿಸುವ ಕಾಲವು ಸಮೀಪ ವಾಗಿಯೇ ಇರಬಹುದೆಂದು ಸೂಚಿಸಿ ಹೊರಟುಹೋದರು. ಫಾಲ್ಗುಣ ಬಹುಳ ತ್ರಯೋದಶೀ ರಾತ್ರಿಯಲ್ಲಿ ಸ್ನಾನಾದಿ ಕರ್ತವ್ಯಗಳನ್ನು ನಡೆಸಿ ಶ್ರೀಗಳವರು ವಿಶ್ರಾಂತಿಗೆ ಹೊರಟ ನಂತರ ಸುಮಾರು ಹತ್ತುಘಂಟೆಗೆ ಪ್ರಾರಂಭಿಸಿದ ಕೆಮ್ಮು ಭಯಂಕರವಾಗಿಯೂ ಅನುಸ್ಯೂತವಾಗಿಯೂ ರಾತ್ರಿ ಒಂದು ಘಂಟೆಯವರೆಗೆ ತೊಂದರೆಯನ್ನು ಕೊಟ್ಟಿತು. ಮಾರನೆಯದಿನ ಈ ಲೇಖಕನು ಶ್ರೀಗಳವರ ಅಭಿಪ್ರಾಯದಂತೆ ಶಿಷ್ಯಪರಿಗ್ರಹವನ್ನು ಮಾಡುವ ಸಮಯವು ಸಮೀಪಿಸಿ ಬಂದಿರಬಹುದಾಗಿ ಪ್ರಸ್ತಾಪಿಸಲು; ಮಹಾಪ್ರಭುಗಳವರಲ್ಲಿ ವರದಿಯನ್ನು ಮಾಡಿ, ಬೆಂಗಳೂರಿನಲ್ಲಿ ಶಾಸ್ತ್ರಾಧ್ಯಯನ ಮಾಡುತ್ತಲಿರುವ ನರಸಿಂಹ ಶಾಸ್ತ್ರಿಗಳನ್ನು ಕರೆದುಕೊಂಡು ಬರುವಂತೆ ಕುಣಿಗಲ್ ರಾಮಶಾಸ್ತ್ರಿಗಳಿಗೆ ಪತ್ರವನ್ನು ಕಳುಹಿಸ ಬೇಕೆಂದು ನಿರೂಪಿಸಿದರು. ಶ್ರೀಗಳವರ ನಿರೂಪದಂತೆ ಇವರ ಶರೀರಸ್ಥಿತಿಯನ್ನು ವಿಶದವಾಗಿ ತಿಳಿಸಿ ಪತ್ರವನ್ನು ಮನುಷ್ಯನ ಮೂಲಕ ಕಳುಹಿಸಿದ್ದಾಯಿತು. ಫಾಲ್ಗುಣ ಬಹುಳ ಅಮಾವಾಸ್ಯೆಯಲ್ಲಿ ಮಧ್ಯಾಹ್ನದ ಮೇಲೆ ಶ್ರೀಗಳವರ ಸನ್ನಿಧಿಯಲ್ಲಿ ಸಂಭಾಷಿಸುತ್ತಲಿದ್ದ ಈ ಲೇಖಕನು ಮೊದಲದಿನ ಮೈಸೂರಿಗೆ ಕಳುಹಿಸಿರುವ ಪತ್ರದಂತೆ ರಾಮಶಾಸ್ತ್ರಿಗಳು ಎಷ್ಟು ಜಾಗ್ರತೆಯಾಗಿ ಬಂದರೂ ಮೂರು ದಿನಗಳಾಗುವುವೆಂದೂ, ಅಷ್ಟರಲ್ಲಿ ಶಿಷ್ಯಪರಿಗ್ರಹವನ್ನು ಮಾಡಬೇಕಾದ ಆವಶ್ಯಕತೆಯುಂಟಾದರೆ ಸಮೀಪವರ್ತಿಗಳಲ್ಲಿ ಸಿದ್ಧರಾಗಿರುವವರ ಲ್ಲೊಬ್ಬರನ್ನು ನಿರ್ದೇಶಿಸಿರುವುದು ಅನುಕೂಲವೆಂದೂ ಪ್ರಸ್ತಾಪಿಸಲು, ಈ ಲೇಖಕನ ದೃಷ್ಟಿಯಲ್ಲಿ ಯಾರು ಅರ್ಹರಾದವರೆಂದು ಶ್ರೀಗಳವರು ಪ್ರಶ್ನೆಮಾಡಿದರು. ಆಗ ಮೂರುಜನರನ್ನು ನಿರ್ದೇಶಿಸಿ ಹೇಳಲಾಗಿ; ಅವರಲ್ಲೊಬ್ಬನು ಮಂದಮತಿ. ಅಕ್ಷರಸ್ಥನಾಗ ಲಾರನೆಂದು ತಿರಸ್ಕೃತನಾದನು. ಮತ್ತೊಬ್ಬನನ್ನು ಪರಿಶುದ್ಧವಾದ ಆಚಾರ್ಯ ಸ್ಥಾನದಲ್ಲಿ ನಿಯಮಿಸುವುದಕ್ಕಿಂತಲೂ ಆ ಸ್ಥಾನವನ್ನು ಶೂನ್ಯವಾಗಿರುವಂತೆ ಬಿಡುವುದು ಮೇಲೆಂದು ನಿರೂಪಿಸಿದರು. ಮೂರನೆಯವರ ವಿಷಯವಾಗಿ ಯಾವ ಅಭಿಪ್ರಾಯವನ್ನೂ ವ್ಯಕ್ತಗೊಳಿಸದೆ ''ಪೂರ್ವನಿರ್ದಿಷ್ಟನಾದ ನರಸಿಂಹಶಾಸ್ತ್ರಿಯನ್ನು ರಾಮಶಾಸ್ತ್ರಿಯು ಕರೆತರುವನಷ್ಟೆ. ಅವರು ಬರಲಿ'' ಎಂದು ಈ ಲೇಖಕನಿಗೆ ಉತ್ತರವನ್ನು ಕೊಟ್ಟು ತಮಗೆ ಅತ್ಯಂತಪ್ರೇಮಾಸ್ಪದವಾದ ''ಆತ್ಮವಿದ್ಯಾವಿಲಾಸ'' ವೆಂಬ ಗ್ರಂಥವನ್ನು ಪಠಿಸುವಂತೆ ಆಜ್ಞಾಪಿಸಿ ತದರ್ಥಾನುಸಂಧಾನದಿಂದ ಆನಂದಪರವಶರಾದರು. ಈ ಸಂದರ್ಭದಿಂದಲೂ ಶ್ರೀಗಳವರು ಈ ಲೇಖಕನಿಗೆ ಆಜ್ಞಾಪಿಸಿದ ಇತರ ವಿದ್ಯಮಾನಗಳಿಂದಲೂ ನರಸಿಂಹಶಾಸ್ತ್ರಿಗಳಲ್ಲದೆ ಬೇರೆಯವರನ್ನು ಶೃಂಗಗಿರಿಮಠದ ಅಧಿಪತಿಗಳನ್ನಾಗಿ ಮಾಡುವುದರಲ್ಲಿ ಶ್ರೀಗಳವರ ಸಂಕಲ್ಪವೂ ಈಶ್ವರಾಜ್ಞೆಯೂ ಇಲ್ಲವೆಂದು ಸ್ಪಷ್ಟಪಟ್ಟು ಆ ವಿಚಾರದಿಂದ ವಿರಮಿಸಿದ್ದಾಯಿತು.

ಪರೀಧಾವಿ ಸಂವತ್ಸರದ ಚೈತ್ರಶುಕ್ಲ ಪ್ರಥಮಾ ಮಂಗಳವಾರ ಪ್ರಾತಃಕಾಲದ ಎಂಟು ಘಂಟೆಯ ಸಮಯದಲ್ಲಿ ಶ್ರೀಗಳವರು ಆಸನಸ್ಥರಾಗಿದ್ದ ಹಾಗೆಯೇ ಆತ್ಮಧ್ಯಾನನಿಷ್ಠರಾಗಲು; ಇವರ ಶಿರಸ್ಸು ಹಿಂದಕ್ಕೊಲೆದು ನೇತ್ರಗಳು ಅರ್ಧೋನ್ಮೀಲಿತವಾಗಿ ನಿಶ್ಚಲವಾದುದನ್ನು ಕಂಡು ಸಮೀಪದಲ್ಲಿದ್ದ ಪರಿಜನರು ಗಾಬರಿಪಟ್ಟು ಚಂದ್ರಮೌಳೀಶ್ವರ ಪೂಜೆಯನ್ನು ಮಾಡುತ್ತಲಿದ್ದ ಈ ಲೇಖಕನಿಗೆ ತಿಳಿಸಿದರು. ಈ ಲೇಖಕನು ಪೂಜೆಯನ್ನು ಬಿಟ್ಟು ಶ್ರೀಗಳವರ ಸಮೀಪಕ್ಕೆ ಓಡಿಬಂದು ನೋಡಿದನು. ಇವರು ಆತ್ಮಧ್ಯಾನದಿಂದ ಶರೀರವನ್ನು ಮರೆತು ಸಮಾಧಿಯಲ್ಲಿರುವುದನ್ನು ಅನೇಕಾವೃತ್ತಿ ನೋಡಿದ್ದ ಈ ಲೇಖಕನಿಗೆ ಶ್ರೀಗಳವರ ಸ್ಥಿತಿಯು ಭಯವನ್ನುಂಟುಮಾಡಲಿಲ್ಲವಾಗಿ ಶಬ್ದ ಮಾಡದೆ ಇವರ ಸಮೀಪದಲ್ಲಿಯೇ ಕಾದುಕೊಂಡಿದ್ದನು. ಸುಮಾರು ಅರ್ಧಘಂಟೆಯ ಮೇಲೆ ಬಹಿರ್ಮುಖರಾದ ಶ್ರೀಗಳವರು ಸಮೀಪದಲ್ಲಿದ್ದ ಈ ಲೇಖಕನನ್ನು ಕಂಡು ಪೂಜಾದಿಗಳೆಲ್ಲವೂ ಪೂರೈಸಿದುವೋ ಎಂದು ಪ್ರಶ್ನೆ ಮಾಡಲು, ನಡೆದ ವೃತ್ತಾಂತವನ್ನು ಶ್ರುತಪಡಿಸಿದನು. ಅದನ್ನು ಕೇಳಿ ಶ್ರೀಗಳವರು ''ಅಜ್ಞ ಜನರಿಂದ ಅನರ್ಥವುಂಟಾಗುವುದು ಸಹಜವು. ನಮಗೆ ಶ್ರಮವಾಗಿದ್ದುದರಿಂದ ಶರೀರವನ್ನು ಮರೆತು ಆತ್ಮಸುಖವನ್ನು ಅನುಭವಿಸುತ್ತಲಿದ್ದೆವು. ಆ ಕಾಲದಲ್ಲಿ ಉಂಟಾಗಿರ ಬಹುದಾದ ಶರೀರವ್ಯಾಪಾರವನ್ನು ಕಂಡು ಅನ್ಯಥಾಭಾವಿಸಿ ನಿನ್ನನ್ನು ಗಾಬರಿಪಡಿಸಿರುವರು'' ಎಂದು ನಿರೂಪಿಸಿದರು. ಆ ದಿನವೆಲ್ಲವೂ ಶ್ರೀಗಳವರಿಗೆ ಶ್ರಮವು ಹೆಚ್ಚಾಗಿಯೇ ಇದ್ದಂತೆ ತೋರುತ್ತಿತ್ತು. ಸ್ನಾನಮಾಡಿ ತಮ್ಮ ಆಹ್ನಿಕವನ್ನು ಮಾತ್ರ ಮಾಡಿದರಲ್ಲದೆ ಆ ದಿನ ಭಿಕ್ಷೆಯೇನನ್ನೂ ಸ್ವೀಕರಿಸಲಿಲ್ಲ. ಇತರರೊಡನೆ ಸಂಭಾಷಿಸುವುದನ್ನೂ ಬಹಳ ಕಡಿಮೆ ಮಾಡಿಕೊಂಡರು. ತಮ್ಮ ದರ್ಶನಕ್ಕೆ ಬಂದವರ ವಿಷಯವಾಗಿ ಪರಿಜನರು ವರದಿ ಮಾಡಿದ ನಂತರ ಶಿರಸ್ಸನ್ನೆತ್ತಿ ನೋಡಿ ಮಂದಹಾಸ ಮಾತ್ರದಿಂದ ಅವರನ್ನು ಸಮಾಧಾನಗೊಳಿಸಿ ಕಳುಹಿಸುತ್ತಿದ್ದರು. ಮಾರನೆಯ ದಿನ ಅಂದರೆ ಶಾ|| 1835ನೆಯ ಪರೀಧಾವಿ ಸಂವತ್ಸರದ (1912) ಚೈತ್ರಶುದ್ಧ ದ್ವಿತೀಯಾ ಬುಧವಾರ ಪ್ರಾತಃಕಾಲದ 6 ಘಂಟೆಗೆ ಸರಿಯಾಗಿ ಸ್ನಾನ ಮಾಡಿದರು. ಆ ದಿನ ಈ ಲೇಖಕನ ಪ್ರಾರ್ಥನೆಗೆ ಅಧೀನರಾಗಿ ಕ್ಷೀರಾಹಾರವನ್ನು ಸ್ವಲ್ಪ ತೆಗೆದುಕೊಂಡು ಸುಖವಾಗಿರುವ ಆಸನದಲ್ಲಿ (ಈಜಿಛೇರ್) ಕುಳಿತುಕೊಂಡರು. ಸುಮಾರು ಕಾಲುಘಂಟೆಯೊಳಗೆ ತಮ್ಮ ಶರೀರವನ್ನು ಮರೆತು ಧ್ಯಾನಪರರಾದರು. ಏಳು ಘಂಟೆ ಮೊದಲುಗೊಂಡು ಗಾಬರಿಯಿಂದ ಶ್ರೀಗಳವರನ್ನು ನೋಡುವುದಕ್ಕೆ ಬಂದವರೆಲ್ಲರೂ ಇವರ ಸ್ಥಿತಿಯನ್ನು ಕಂಡು ಪೂರ್ವದಿನದ ರಾತ್ರಿ ವಿಶ್ರಾಂತಿಯಿರಲಿಲ್ಲ. ಈಗ ಶ್ರೀಗಳವರು ನಿದ್ರೆ ಮಾಡುವರೆಂದೂ, ಪೂರ್ವದಿನಕ್ಕಿಂತಲೂ ಆರೋಗ್ಯವು ಮೇಲಾಗಿ ತೋರುವುದೆಂದೂ ಮಾತನಾಡತೊಡಗಿದರು. ಆದರೆ ಈ ಲೇಖಕನಿಗೆ ಅದು ನಿದ್ರೆಯಲ್ಲವೆಂದು ತಿಳಿದಿದ್ದಿತು. ಸುಮಾರು ಒಂಬತ್ತೂಕಾಲು ಘಂಟೆಯವರೆಗೆ ಆತ್ಮಧ್ಯಾನಸುಖವನ್ನು ಅನುಭವಿಸುತ್ತಲಿದ್ದ

ಶ್ರೀಗಳವರಿಗೆ ಪ್ರಾರಬ್ಧ ಕರ್ಮವಶದಿಂದ ಕೆಮ್ಮಿಗೆ ಪ್ರಾರಂಭವಾಯಿತು. ಈ ಕೆಮ್ಮು ಅರ್ಧ ಘಂಟೆಯವರೆಗೆ ಅವಿಚ್ಛಿನ್ನವಾಗಿ ಬಂದು ನಿಂತಕೂಡಲೇ ಒಂದು ವಿಧವಾದ ವಾತೋಪದ್ರವ ವುಂಟಾಗಿ ಹಸ್ತಪಾದಾದಿಸಕಲಾಂಗಗಳನ್ನೂ ಪದೇ ಪದೇ ಸೆಳೆದು ತೊಂದರೆ ಪಡಿಸುತ್ತ ಬಂದಿತು. ಸುಮಾರು ಹನ್ನೊಂದು ಘಂಟೆಗೆ ಎಲ್ಲಾ ವಿಧವಾದ ತೊಂದರೆಗಳೂ ನಿಂತುವು. ಬಳಿಕ ಶ್ರಾಂತರಾಗಿ ಶಿರಸ್ಸನ್ನು ಬಗ್ಗಿಸಿ ಪದ್ಮಾಸನದಲ್ಲಿ ನಿಶ್ಚಲರಾಗಿ ಕುಳಿತುಕೊಂಡು ಶ್ರೀಗಳವರು ಹನ್ನೊಂದು ಘಂಟೆಯೂ ಮೂವತ್ತು ನಿಮಿಷಗಳಿಗೆ ಸರಿಯಾಗಿ ಸ್ವಭಾವವಾದ ತಮ್ಮ ಮಂದಹಾಸವನ್ನು ಪ್ರಕಟಗೊಳಿಸುತ್ತ ಸರ್ವವ್ಯಾಪಕನಾದ ಪರಬ್ರಹ್ಮನಲ್ಲಿ ಲೀನರಾದರು!!! ಆಗ ಶರೀರವು ತಾನಾಗಿಯೇ ಹಿಂದಕ್ಕೆ ಒಸರಿಸಿದ್ದನ್ನು ಕಂಡು ಸಮೀಪವರ್ತಿಗಳು ಸಂದೇಹಪಟ್ಟು ಭೂಮಿಯಲ್ಲಿ ಶಯನ ಮಾಡಿಸಿದರು. ಈ ಯೋಗಿವರ್ಯರ ನಿರ್ಯಾಣ ಕ್ರಮವು ಅದೃಷ್ಟಪೂರ್ವವಾಗಿದ್ದುದರಿಂದ ಥಟ್ಟನೆ ನಿಶ್ಚಯಿಸಲು ಯಾರಿಗೂ ಧೈರ್ಯವುಂಟಾಗ ಲಿಲ್ಲವು. ಅರ್ಧಘಂಟೆಯವರೆಗೆ ನಿರೀಕ್ಷಿಸಿದ ಬಳಿಕ ಶ್ರೀಗಳವರು ವಿದೇಹಕೈವಲ್ಯವನ್ನು ಪಡೆದರೆಂದು ನಿಶ್ಚಯ ಮಾಡಿದರು.

ಅಜಾತಶತ್ರುಗಳೂ ಸರ್ವಭೂತಕರುಣಾಶಾಲಿಗಳೂ ದರ್ಶನ ಮಾತ್ರದಿಂದ ಜನಗಳ ಸಂತಾಪವನ್ನು ಶಮನಪಡಿಸತಕ್ಕವರೂ ಆಗಿದ್ದ ಶ್ರೀಗಳವರ ಆಕಸ್ಮಿಕ ವಿಯೋಗವು ಪ್ರಾಣಿಸಾಮಾನ್ಯಕ್ಕೂ ಅತ್ಯಂತ ದುಸ್ಸಹವಾಗಿದ್ದಿತೆಂದು ಹೇಳುವುದೇನು ವಿಶೇಷ? ಇವರು ಮಠಕ್ಕೆ ದಕ್ಷಿಣಭಾಗದ ಆ ತುಂಗಾನದಿಯಿಂದ ಆಚೆ ನರಸಿಂಹವನದಲ್ಲಿ ಆಶ್ರಮವನ್ನು ಕಲ್ಪಿಸಿಕೊಂಡು ಅಲ್ಲಿಯೇ ವಸತಿ ಮಾಡಿದ್ದರೆಂದು ಹಿಂದೆ ಹೇಳಿರುವುದಷ್ಟೆ! ಆ ತಪೋವನದಲ್ಲಿಯೇ ಶ್ರೀಗಳವರು ಮಾಡಿಕೊಂಡಿದ್ದ ಧ್ಯಾನಮಂದಿರಕ್ಕೆ ದಕ್ಷಿಣಭಾಗದಲ್ಲಿ ತಮ್ಮ ಕಳೇಬರಕ್ಕೆ ಅಧಿಷ್ಠಾನ ಮಾಡತಕ್ಕದ್ದೆಂದೂ, ಐದು ವರ್ಷಗಳಿಂದ ಅವಿಚ್ಛಿನ್ನವಾಗಿ ರಾತ್ರಿ ಕಾಲದಲ್ಲಿ ವಿಶ್ರಾಂತಿಗೆ ಹೊರಡುವುದಕ್ಕೆ ಮೊದಲು ಆರಾಧಿಸುತ್ತಿದ್ದ ನರ್ಮದಾ ಬಾಣಲಿಂಗವನ್ನು ತಮ್ಮ ಅಧಿಷ್ಠಾನದಲ್ಲಿ ಪೂಜಿಸತಕ್ಕದ್ದೆಂದೂ ಕೆಲವು ಕಾಲಕ್ಕೆ ಮುಂದಾಗಿಯೇ ಆಜ್ಞಾಪಿಸಿದ್ದಂತೆ ಎಲ್ಲವನ್ನೂ ನೆರವೇರಿಸಿದ್ದಾಯಿತು.

ಮಾರನೆಯ ದಿನ ಮಧ್ಯಾಹ್ನ ಹನ್ನೆರಡು ಘಂಟೆಗೆ ಡಾಕ್ಟರ್ ಕೃಷ್ಣಸಾಮಯ್ಯರು ನರಸಿಂಹಶಾಸ್ತ್ರಿಗಳು ಇವರುಗಳೊಂದಿಗೆ ಕುಣಿಗಲ್ ರಾಮಶಾಸ್ತ್ರಿಗಳು ಮೈಸೂರಿಂದ ಬಂದು ಸೇರಿದರು. ಅವರು ಬರುವಷ್ಟರಲ್ಲಿಯೇ ದೈವಸಂಕಲ್ಪದಂತೆ ಕಾರ್ಯವು ಅನ್ಯಥಾ ನಡೆದು ಹೋಗಿದ್ದುದರಿಂದ ಶ್ರೀಗಳವರ ಪೂರ್ವಭಾವಿಯಾದ ಆಜ್ಞೆಯಂತೆ ನರಸಿಂಹಶಾಸ್ತ್ರಿಗಳಿಗೆ ಆಶ್ರಮಸ್ವೀಕಾರ ಮಾಡಿಸುವುದನ್ನು ಆಗ್ಗೆ ನಿಲ್ಲಿಸಿದ್ದಾಯಿತು. ಶ್ರೀಗಳವರ ಕಾಲದಲ್ಲಿ ಅವರ ಆಜ್ಞೆಗನುಸಾರವಾಗಿ 23 ವರ್ಷಗಳ ಕಾಲ ಅವಿಚ್ಛಿನ್ನವಾಗಿ ಸಂಸ್ಥಾನದ ಕಾರ್ಯಗಳನ್ನು

ನಡೆಸಿದವನೂ ಅಂತ್ಯಕಾಲದಲ್ಲಿ ಸಂಸ್ಥಾನ ಸಂಬಂಧವಾದ ಮುಂದಿನ ವ್ಯವಸ್ಥೆಯನ್ನು ಮಾಡಬೇಕಾದ ರೀತಿಯನ್ನು ಶ್ರೀಗಳವರ ಮುಖವಚನದಿಂದಲೇ ತಿಳಿದುಕೊಂಡಿದ್ದವನೂ ಆದ ಈ ಲೇಖಕನು ಶ್ರೀಗಳವರ ನಿರ್ಯಾಣದ ಮರುದಿನ ಮೈಸೂರಿಗೆ ಹೊರಟು ಶ್ರೀಮನ್ಮಹಾರಾಜರವರನ್ನು ಸಂದರ್ಶಿಸಿ ಅವರಲ್ಲಿ ಎಲ್ಲಾ ವೃತ್ತಾಂತಗಳನ್ನೂ ಶ್ರುತಪಡಿಸಿ ಅವರ ಅಪ್ಪಣೆಯನ್ನು ಪಡೆದು ಶ್ರೀಗಳವರ ನಿರ್ಯಾಣದ ಸಂಬಂಧವಾಗಿ ಸಂಸ್ಥಾನದ ಪದ್ಧತಿಯಂತೆ ನಡೆಸಬೇಕಾದ ಆರಾಧನಾದಿ ಸತ್ಕಾರಗಳನ್ನು ನಡೆಸುವುದಕ್ಕೆ ಶೃಂಗೇರಿಗೆ ಹಿಂತಿರುಗಿ ಬಂದನು.

ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರ ಆಶ್ರಮ ಸ್ವೀಕಾರ ಮತ್ತು ಪಟ್ಟಾಭಿಷೇಕ.

ಮಹಾಪ್ರಭುಗಳವರು ತಮ್ಮ ಸಕಲ ವಿಧವಾದ ಅಭ್ಯುದಯಗಳಿಗೂ ನಿದಾನಭೂತರಾಗಿಯೂ ತಮ್ಮ ಅಭ್ಯುದಯವನ್ನು ಕಂಡು ನಿರವಧಿಕವಾದ ಆನಂದವನ್ನು ಅನುಭವಿಸತಕ್ಕವರಾಗಿಯೂ ತಮ್ಮ ರಾಷ್ಟ್ರಕ್ಕೆ ಮುಕುಟಪ್ರಾಯರಾಗಿಯೂ ಇದ್ದ ಮಹಾಮಹಿಮಭೂಮಿಗಳಾದ ಶ್ರೀಗಳವರ ವಿಯೋಗಕ್ಕೆ ಬಹಳ ಸಂತಾಪಪಟ್ಟು ಅವರ ಆಜ್ಞೆಯಂತೆ ಅವರ ಸ್ಥಾನದಲ್ಲಿ ಅರ್ಹರಾದವರನ್ನು ಸ್ಥಾಪಿಸುವ ವಿಷಯದಲ್ಲಿ ಎಲ್ಲಾ ಯತ್ನವನ್ನೂ ನಡೆಸಿ ಅದರಿಂದ ಶ್ರೀಗಳವರನ್ನು ತೃಪ್ತಿಗೊಳಿಸಿ ಅವರ ಅನುಗ್ರಹವನ್ನು ಪಡೆವುದು ತಮ್ಮ ಕರ್ತವ್ಯಗಳಲ್ಲಿ ಪ್ರಧಾನತಮವಾದುದೆಂದು ನಿಶ್ಚಯಿಸಿ, ಶ್ರೀಗಳವರಿಗೂ ಅವರ ಅನುಗ್ರಹಕ್ಕೆ ಸಂಪೂರ್ಣ ಪಾತ್ರರೆಂಬ ಕಾರಣದಿಂದ ತಮಗೂ ಆಪ್ತರಾಗಿ ಚಿರಕಾಲ ಪರಿಚಿತರಾದ ಕುಣಿಗಲ್ ರಾಮಶಾಸ್ತ್ರಿಗಳಿಂದಲೂ ಈ ಲೇಖಕನಿಂದಲೂ ಶ್ರೀಗಳವರ ಅಭಿಪ್ರಾಯವನ್ನು ಅವರ ಜೀವಿತ ಕಾಲದಲ್ಲಿಯೂ ಅವರ ನಿರ್ಯಾಣ ನಂತರದಲ್ಲಿಯೂ ವಿಶದವಾಗಿ ತಿಳಿದುಕೊಂಡಿದ್ದರು. ಮತ್ತು ಶ್ರೀಗಳವರಲ್ಲಿ ಅನನ್ಯಭಕ್ತಿಯನ್ನು ಮಾಡಿ ಅವರ ವಿಶೇಷವಾದ ಅನುಗ್ರಹಕ್ಕೆ ಪಾತ್ರರೂ ಲೌಕಿಕ ವ್ಯವಹಾರ ದಕ್ಷತೆಯಿಂದ ಸಂಪ್ರತಿಪನ್ನರೂ ಆಗಿದ್ದ ರಾಮಚಂದ್ರಯ್ಯರು, ವಿ. ಪಿ. ಮಾಧವರಾಯರು ಮೊದಲಾದ ಶಿಷ್ಯ ಜನರಿಂದಲೂ ಗುರ್ವಾಜ್ಞಾಪರಿಪಾಲನ ವಿಷಯದಲ್ಲಿ ಅಭಿಪ್ರಾಯವನ್ನು ತರಿಸಿ ಈ ರೀತಿಯಿಂದ ಶ್ರೀಗಳವರ ಆಶಯವನ್ನು ದೃಢಪಡಿಸಿಕೊಂಡು ಅವರ ಸ್ಥಾನಕ್ಕೆ ಬರಲು ಶೃಂಗೇರಿಯ ನರಸಿಂಹಶಾಸ್ತ್ರಿಗಳೇ ಅರ್ಹರೆಂದು ತೀರ್ಮಾನ ಮಾಡಿ ಅವರಿಗೆ ಶೃಂಗಗಿರಿ ಮಠದಲ್ಲಿ ತುರೀಯಾಶ್ರಮ ಸ್ವೀಕಾರವನ್ನು ಮಾಡಿಸಿ ಅವರನ್ನು ವ್ಯಾಖ್ಯಾನ ಭದ್ರಪೀಠಾಧಿಷ್ಠಿತರನ್ನಾಗಿ ಮಾಡಿ ಬರತಕ್ಕದ್ದೆಂದು ತಮ್ಮ ರಾಜ್ಯದ ಮುಖ್ಯಾಧಿಕಾರಿಗಳನ್ನು ಶೃಂಗೇರಿಗೆ ಕಳುಹಿಸಿ, ಶ್ರೀಗಳವರ ನಿಯೋಗದಂತೆ ಯಥಾವಿಧಿಯಾಗಿ ಆಶ್ರಮಸ್ವೀಕಾರವನ್ನು ಮಾಡಿಸತಕ್ಕದ್ದೆಂದು ಈ

ಲೇಖಕನಿಗೂ ನಿರೂಪಿಸಿದರು. ಶ್ರೀ ಶ್ರೀಗಳವರ ದೃಢಸಂಕಲ್ಪವನ್ನನುಸರಿಸಿ ಅವರ ಪರಮ ಭಕ್ತರೂ ಕರ್ಣಾಟಕರಾಷ್ಟ್ರಾಧಿಪರೂ ಆಗಿರುವ ಶ್ರೀಮನ್ಮಹಾರಾಜರವರ ಆಜ್ಞೆಯಂತೆ ಪರೀಧಾವಿ ಸಂವತ್ಸರ ಚೈತ್ರ ಬಹುಳ ಷಷ್ಠೀ ಗುರುವಾರದಲ್ಲಿ ನರಸಿಂಹಶಾಸ್ತ್ರಿಗಳವರಿಗೆ ಪ್ರಥಮದಲ್ಲಿ ಶೃಂಗಗಿರಿ ಗುರುಪರಂಪರೆಯಿಂದ ಉಪಾಸಿಸಲ್ಪಟ್ಟಿದ್ದ ಶ್ರೀ ವಿದ್ಯಾನಾರಸಿಂಹಾದಿ ಮಹಾಮಂತ್ರ ಗ್ರಾಮಗಳ ಉಪದೇಶವನ್ನು ಕೊಡಿಸಿ, ತುರೀಯಾಶ್ರಮ ಸ್ವೀಕಾರಕ್ಕೆ ಸಂಬಂಧಿಸಿದ ಕರ್ಮಕಲಾಪಗಳೆಲ್ಲವನ್ನೂ ಯಥಾಶಾಸ್ತ್ರವಾಗಿ ನಡೆಸಿ ಪ್ರೇಷೋಚ್ಚಾರಣೆಯಿಂದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ನಂತರ ಶ್ರೀಗಳವರ ಅಧಿಷ್ಠಾನದ ಬಳಿಗೆ ಕರೆತಂದು ಗುರೂಪಾಸನಾದಿ ಶಾಸ್ತ್ರೀಯಾನುಷ್ಠಾನಗಳೆಲ್ಲವನ್ನೂ ಆಚರಿಸಿದ ಬಳಿಕ ಶ್ರೀಗಳವರ ಆಜ್ಞೆಯಂತೆ ಆಶ್ರಮಸ್ವೀಕಾರ ಮಾಡಿ, ಆಶ್ರಮಧರ್ಮಗಳನ್ನೂ ಅನುಷ್ಠಾನ ಕ್ರಮಗಳನ್ನೂ ಶ್ರೀಗಳವರಿಂದಲೇ ಚೆನ್ನಾಗಿ ತಿಳಿದು ಅವರ ಸನ್ನಿಧಿಯಲ್ಲಿಯೇ ದೀರ್ಘಕಾಲ ವಸತಿ ಮಾಡುತ್ತಿದ್ದ ಸಂನ್ಯಾಸಿಗಳಿಂದ ಮಹಾವಾಕ್ಯೋಪದೇಶವನ್ನು ಕೊಡಿಸಿ ಶ್ರೀಗಳವರ ಆಜ್ಞೆಯಂತೆ ''ಶ್ರೀ ಚಂದ್ರಶೇಖರಭಾರತೀ'' ಎಂದು ಯೋಗಪಟ್ಟವನ್ನು ಮಾಡಿಸಿದ್ದಾಯಿತು.

ಶ್ರೀಗಳವರು ನಿರ್ಯಾಣವನ್ನು ಹೊಂದಿದ ಸಮಯದಲ್ಲಿ ಅವರ ಅಧಿಷ್ಠಾನದ ದರ್ಶನಕ್ಕೆಂದು ಶೃಂಗೇರಿಗೆ ಬಂದಿದ್ದ ಶಿಷ್ಯಜನರಲ್ಲಿ ಅನೇಕರು ತಮ್ಮ ಕೃತಜ್ಞತಾ ಪ್ರದರ್ಶನಕ್ಕೂ ಆ ಮಹಾನುಭಾವರ ಸ್ಮರಣಕ್ಕೂ ಅನುಗುಣವಾಗಿ ಅಧಿಷ್ಠಾನ ಸ್ಥಲದಲ್ಲಿ ಶಿಲಾಮಯವಾದ ಒಂದು ಆಲಯವನ್ನು ಕಲ್ಪಿಸಿ ಶ್ರೀಗಳವರ ಪೂರ್ಣಾಕೃತಿಯನ್ನು ಒಳಗೊಂಡ ಬಿಂಬವನ್ನು ಮಾಡಿಸಿ ಪ್ರತಿಷ್ಠಿಸಬೇಕೆಂದೂ, ಈ ಉದ್ದೇಶ್ಯವನ್ನು ಶ್ರೀಗಳವರ ವಿಷಯದಲ್ಲಿ ಭಕ್ತಿ ಗೌರವಗಳುಳ್ಳ ಎಲ್ಲಾ ಶಿಷ್ಯರಿಗೂ ತಿಳಿಸಿ ಅನೇಕರ ಸಹಾಯದಿಂದ ಈ ಲೇಖಕನು ಸಂಪೂರ್ಣಮಾಡಬೇಕೆಂದೂ ತೀರ್ಮಾನಿಸಿ ತಮ್ಮ ತಮ್ಮ ಶಕ್ತಿಮೀರಿ ದ್ರವ್ಯವನ್ನು ಕೊಡುವುದಾಗಿ ವಾಗ್ದಾನ ಮಾಡಿದರು. ಚಿರಕಾಲ ಶ್ರೀಗಳವರ ಸೇವೆಯನ್ನು ಮಾಡಿ ಸರ್ವದಾ ಆ ಮಹನೀಯರ ದರ್ಶನಾನಂದದಿಂದ ಕಾಲವನ್ನು ಕಳೆಯುತ್ತಲಿದ್ದ ಈ ಲೇಖಕನು ದುರದೃಷ್ಟದಿಂದ ಆ ಮಹಾಲಾಭವು ಆಕಸ್ಮಿಕವಾಗಿ ತಪ್ಪಿಹೋಗಲು ಚಿಂತಾಸಾಗರ ಮಗ್ನನಾಗಿದ್ದು, ಸತೀರ್ಥ್ಯರಾದ ಮಿತ್ರರ ಮಂಡಲಿಯಿಂದ ಪ್ರೇರಿತನಾಗಿ, ಶ್ರೀಗಳವರ ಪ್ರತಿಕೃತಿ ದರ್ಶನದಿಂದಲಾದರೂ ಕೃತಾರ್ಥನಾಗುವೆನೆಂಬ ಉತ್ಸಾಹದಿಂದ ಯತ್ನಿಸಲು, ಅತಿ ಸುಲಭವಾಗಿ ಸ್ವಲ್ಪ ದಿನಗಳಲ್ಲಿಯೇ ಮೂವತ್ತು ಸಾವಿರ ರೂಪಾಯಿಗಳು ಶೇಖರವಾದವು. ಆ ಸಮಯದಲ್ಲಿ ಬೊಂಬೈಪಟ್ಟಣದಿಂದ ಮೈಸೂರು ರಾಜಧಾನಿಗೆ ಬಂದಿದ್ದ ಶಿಲ್ಪಚಾತುರ್ಯದಿಂದ ಬಹು ಪ್ರಖ್ಯಾತರಾದ ಗಣಪತಿಕೃಷ್ಣರಾವ್ ಮಾತ್ರೆ ಎಂಬವರಲ್ಲಿ ತಿಳಿಸಲಾಗಿ; ಅವರು ತಮ್ಮ ಕಲಾಕೌಶಲವನ್ನು ಸಾರ್ಥಕ್ಯಗೊಳಿಸಿ ಕೃತಾರ್ಥತೆಯನ್ನು ಪಡೆಯತಕ್ಕ ಸಮಯವು ಒದಗಿರುವುದೆಂದು ಸಂತೋಷಿಸಿ ಶ್ರೀಗಳವರ ಆಕೃತಿಯಂತೆ

ಅಮೃತ ಶಿಲೆಯಿಂದ ಮೂರ್ತಿಯನ್ನು ನಿರ್ಮಿಸಿಕೊಡುವುದಾಗಿ ಒಪ್ಪಿದರು. ಇದರಂತೆ ಕಾನಾಡು ಕಾತ್ತಾನ್ ರಾಮಸ್ವಾಮಿ ಶೆಟ್ಟಿಯಾರೆಂಬವರು ಆಲಯದ ಕೆಲಸವನ್ನು ಉತ್ತಮರೀತಿಯಿಂದ ಜಂಬುಕೇಶ್ವರದಲ್ಲಿ ಮಾಡಿಸಿ ಶೃಂಗೇರಿಗೆ ತಂದು ಅಧಿಷ್ಠಾನ ಪ್ರದೇಶದಲ್ಲಿ ಕಟ್ಟಿಸಿಕೊಡುವ ಭಾರವನ್ನು ವಹಿಸಿಕೊಂಡರು. ಈ ರೀತಿಯಿಂದ ಒದಗಿಬಂದ ಸಹಾಯವನ್ನು ಮುಂದಿರಿಸಿಕೊಂಡು ಪ್ರಾರಂಭಿಸಲು, ಕಾರ್ಯವು ನಿರ್ವಿಘ್ನವಾಗಿ ಪೂರೈಸಲ್ಪಟ್ಟಿತು. ಶ್ರೀಗಳವರ ಸಂಕಲ್ಪದಂತೆ ಪ್ರಾರಂಭಿಸಿ ಅವರ ಜೀವಿತಕಾಲದಲ್ಲಿಯೇ ಬಹಳ ಮಟ್ಟಿಗೆ ನಡೆದಿದ್ದ ಶ್ರೀ ಶಾರದಾಂಬೆಯವರ ದೇವಾಲಯ ನಿರ್ಮಾಣಕಾರ್ಯವೂ ಪೂರ್ಣವಾಗಲು; ಈಗಿನ ಶ್ರೀ ಸ್ವಾಮಿಗಳವರು ಈ ಎರಡು ಆಲಯಗಳಲ್ಲಿಯೂ ಕುಂಭಾಭಿಷೇಕವನ್ನು ನಡೆಸಿ ತಮ್ಮ ಗುರುಗಳವರ ಸಂಕಲ್ಪವನ್ನೂ ಅವರ ಶಿಷ್ಯರುಗಳ ಉದ್ದೇಶ್ಯವನ್ನೂ ಪೂರ್ತಿಗೊಳಿಸಬೇಕೆಂಬ ವಿಷಯದಲ್ಲಿ ಅತ್ಯಂತೋತ್ಸಾಹಿಗಳಾದರು.

ಶೃಂಗೇರಿಯಲ್ಲಿ ಕುಂಭಾಭಿಷೇಕ

ಆಲಯ ನಿರ್ಮಾಣಕಾರ್ಯವು ಪೂರೈಸಿರುವುದೆಂದೂ, ಕುಂಭಾಭಿಷೇಕ ಮಹೋತ್ಸವವನ್ನು ನಡೆಸಲು ಶ್ರೀ ಸ್ವಾಮಿಗಳವರು ತ್ವರೆ ಪಡುತ್ತಲಿರುವರೆಂದೂ, ಆ ಮಹಾಕಾರ್ಯವನ್ನು ಜರುಗಿಸಲು ಆವಶ್ಯಕವಾದ ಅನುಕೂಲಗಳನ್ನು ಕಲ್ಪಿಸಿ ಶೃಂಗೇರಿಗೆ ತೆರಳಿಬಂದು ಶ್ರೀಗಳವರ ಸಂಕಲ್ಪವನ್ನು ಪೂರ್ತಿಗೊಳಿಸಬೇಕೆಂದೂ ಮೈಸೂರು ಶ್ರೀಮನ್ಮಹಾರಾಜ ಕೃಷ್ಣರಾಜ ಪ್ರಭುಗಳವರಲ್ಲಿ ಸೂಚಿಸಲು; ಗುರುಭಕ್ತಶಿರೋಮಣಿಗಳಾದ ಆ ಪ್ರಭುವರ್ಯರು ಅಮಿತವಾಗಿ ಸಂತೋಷಿಸಿ ಉತ್ತೇಜನವನ್ನು ಕೊಟ್ಟರು. ಶಾ।। 1839ನೆಯ ನಳ ಸಂವತ್ಸರದ (1916) ವೈಶಾಖ ಕೃಷ್ಣ ಪ್ರಥಮಾ ಗುರುವಾರದಲ್ಲಿ ಕುಂಭಾಭಿಷೇಕವನ್ನು ನಡೆಸುವಂತೆ ತೀರ್ಮಾನಿಸಿ, ಭರತ ಖಂಡದ ಎಲ್ಲಾ ದೇಶಗಳಲ್ಲಿರುವ ಶಿಷ್ಯರಿಗೂ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದಾಯಿತು. ಯೋಗ್ಯರಾದ ಅನೇಕ ಬ್ರಾಹ್ಮಣರನ್ನು ನಿಯಮಿಸಿ ಕುಂಭಾಭಿಷೇಕ ಸಂಬಂಧವಾದ ಕರ್ಮಕಲಾಪಗಳನ್ನು ಮುಹೂರ್ತದಿನಕ್ಕೆ ಮೊದಲು ಏಳುದಿನ ಯಥಾಶಾಸ್ತ್ರವಾಗಿ ವೈದಿಕ ವಿಧಾನದಿಂದ ನಡೆಸಲಾಯಿತು. ಈ ಮಹೋತ್ಸವದ ದರ್ಶನಕ್ಕೂ ಈಗಿನ ಶ್ರೀಗಳವರ ದರ್ಶನಕ್ಕೂ ಬಹುದೂರದಿಂದ ಶಿಷ್ಯಜನರು ಗುಂಪುಗುಂಪಾಗಿ ಬಂದು ಸೇರಿದರು. ಶ್ರೀಮನ್ಮಹಾರಾಜ ಕೃಷ್ಣರಾಜ ಪ್ರಭುಗಳವರೂ ಮಿತವಾದ ಪರಿವಾರದೊಡನೆ ಶೃಂಗೇರಿಗೆ ದಯಮಾಡಿಸಿದರು. ಶ್ರೀಗಳವರ ಅತಿಥಿಗಳಾಗಿ ಅವರ ಆಶ್ರಮಕ್ಕೆ ಬಂದವರ ತಾರತಮ್ಯಾನುಗುಣವಾಗಿ ನಿವಾಸ ಸ್ಥಳಗಳನ್ನು ಕಲ್ಪಿಸಿ ಎಲ್ಲಾ ಅನುಕೂಲಗಳನ್ನೂ ಸಾಧ್ಯವಾದ ಮಟ್ಟಿಗೆ ಉತ್ತಮ ರೀತಿಯಿಂದ ಒದಗಿಸಲಾಯಿತು. ಮೇಲೆ ನಿರ್ದಿಷ್ಟವಾದ ದಿನದಲ್ಲಿ ಪ್ರಾತಃಕಾಲ 8 ಗಂಟೆಗೆ ಸರಿಯಾಗಿ ತುಂಗಾನದೀ ದಕ್ಷಿಣತೀರದಲ್ಲಿ ಶ್ರೀಗಳವರ ಆಶ್ರಮವಾದ

ನರಸಿಂಹವನದ ಅವರ ಸಮಾಧಿಸ್ಥಳದಲ್ಲಿ ಕಲ್ಪಿಸಿರುವ ಆಲಯಕ್ಕೆ ಈಗಿನ ಶ್ರೀ ಸ್ವಾಮಿಗಳವರು ದಯಮಾಡಿಸಿ ಶ್ರೀಮನ್ಮಹಾರಾಜರವರನ್ನೂ ಇತರ ಶಿಷ್ಯವರ್ಗದವರನ್ನೂ ಅಲ್ಲಿಗೆ ಬರಮಾಡಿಕೊಂಡು ಗುರುಗಳ ಮೂರ್ತಿಯನ್ನು ಪ್ರತಿಷ್ಠಿಸಿ ಕುಂಭಾಭಿಷೇಕ ಪ್ರಾಣ ಪ್ರತಿಷ್ಠಾದಿಗಳನ್ನು ಯಥಾವಿಧಿಯಾಗಿ ನಡೆಸಿ ಪೂಜಾ ನಿವೇದನಾದಿಗಳಿಂದ ಗುರುಗಳವರನ್ನು ಸತ್ಕರಿಸಿ ಸಮಸ್ತ ಶಿಷ್ಯಮಂಡಲಿಗೂ ಪ್ರಸಾದವನ್ನಿತ್ತು ಆನಂದಗೊಳಿಸಿದರು. ಬಳಿಕ 10 ಘಂಟೆಗೆ ತುಂಗಾನದಿಯ ಉತ್ತರ ಭಾಗದಲ್ಲಿರುವ ಶ್ರೀ ಶಾರದಾಂಬೆಯವರ ಆಲಯದಲ್ಲಿ ಕುಂಭಾಭಿಷೇಕ ಪ್ರಾಣ ಪ್ರತಿಷ್ಠಾ ಕಲಾವಾಹನಾದಿ ಕರ್ಮಕಲಾಪಗಳನ್ನು ನೆರವೇರಿಸಿ ಶ್ರೀಮನ್ಮಹಾಪ್ರಭುಗಳವರಿಗೂ ಶಿಷ್ಯಮಂಡಲಿಗೂ ಅಮ್ಮನವರ ಪ್ರಸಾದವನ್ನು ಅನುಗ್ರಹಿಸಿದ ನಂತರ ಅಸಂಖ್ಯಾತರಾದ ಬ್ರಾಹ್ಮಣಸುವಾಸಿನಿಯರುಗಳನ್ನು ಭೋಜನದಿಂದ ವಿಶೇಷವಾಗಿ ತೃಪ್ತಿಗೊಳಿಸಿದ್ದಾಯಿತು. ಆ ದಿನ ರಾತ್ರಿ ಶ್ರೀ ಶಾರದಾಂಬೆಯವರನ್ನು ಮಹಾರಥದಲ್ಲಿ ಬಿಜಯಮಾಡಿಸಿ ಶ್ರೀಗಳವರು ರಜತಮಯವಾದ ಪಾಲಕಿಯನ್ನೂ ಶ್ರೀಮನ್ಮಹಾರಾಜರವರು ಸುವರ್ಣಾಂದೋಳಿಕೆಯನ್ನೂ ಆರೋಹಿಸಿ ಅಪೂರ್ವವೂ ಅದೃಷ್ಟಚರವೂ ಆದ ಮಹೋತ್ಸವವನ್ನು ನಡೆಸಿ ಅಬಾಲವೃದ್ಧರಿಗೂ ನಿರವಧಿಕಾನಂದವನ್ನುಂಟುಮಾಡಿದರು. ಈ ಸಮಯದಲ್ಲಿ ಅಹಮಹಮಿಕೆಯಿಂದ ಸಮಸ್ತ ಜನರೂ ಹಿಂದಿನ ಗುರುಸ್ವಾಮಿಗಳವರನ್ನು ಸ್ಮರಿಸಿಕೊಂಡು ಅವರ ಮಾಹಾತ್ಮ್ಯವನ್ನು ಬಹುಪ್ರಕಾರದಿಂದ ಉದ್ಘೋಷಿಸಿ ಸರ್ವಪ್ರಕಾರದಿಂದಲೂ ಆ ಮಹನೀಯರ ಪ್ರತಿಬಿಂಬದಂತೆ ಅವರ ಸ್ಥಾನದಲ್ಲಿ ಅಭಿಷಿಕ್ತರಾಗಿರುವ ಈಗಿನ ಸ್ವಾಮಿಗಳವರನ್ನು ಸಂದರ್ಶಿಸಿ ಆಕಸ್ಮಿಕವಾಗಿ ಉಂಟಾಗಿದ್ದ ಹಿಂದಿನ ಶ್ರೀಗಳವರ ವಿಯೋಗದ ದುಃಖದಿಂದ ವಿಮುಕ್ತರಾಗಿ ಆನಂದಮಗ್ನರಾದರು.

ಪ್ರಭುಗಳವರು ಪೂರ್ವಪದ್ಧತಿಯನ್ನನುಸರಿಸಿ ಮಾರನೆಯ ದಿನ ನರಸಿಂಹ ವನಕ್ಕೆ ದಯಮಾಡಿಸಿ, ಮೊದಲು ಗುರುಸ್ವಾಮಿಗಳವರ ಮೂರ್ತಿಯನ್ನು ಆರಾಧಿಸಿ ಬಳಿಕ ಈಗಿನ ಶ್ರೀಸ್ವಾಮಿಗಳವರನ್ನು ವಿಶೇಷವಾದ ಪಾದಪೂಜಾದಿ ಸತ್ಕಾರಗಳಿಂದ ಉಪಚರಿಸಿ ಅವರಿಂದ ತೀರ್ಥಪ್ರಸಾದಗಳನ್ನು ಪರಿಗ್ರಹಿಸಿ ಶ್ರೀಮಠದಲ್ಲಿ ಬ್ರಾಹ್ಮಣಸುವಾಸಿನಿಯರುಗಳ ಸಂತರ್ಪಣೆಯನ್ನು ವಿಜೃಂಭಣೆಯಿಂದ ನಡೆಸಿದರು. ಆಗ ಹಿಂದಿನ ಶ್ರೀಗಳವರ ಅಮೋಘವಾದ ಸಂಕಲ್ಪದಂತೆ ಅವರ ಸ್ಥಾನವನ್ನು ಅಲಂಕರಿಸಿ ಲವಮಾತ್ರದಿಂದಲೂ ನ್ಯೂನತೆಯಿಲ್ಲದಂತೆ ಆಚಾರ್ಯಪೀಠವನ್ನು ಆಶ್ರಯಿಸಿ ಶಿಷ್ಯವರ್ಗವನ್ನು ಅನುಗ್ರಹಿಸುತ್ತಲಿರುವ ಈಗಿನ ಶ್ರೀಸ್ವಾಮಿಗಳವರ ಚರ್ಯೆಗಳನ್ನು ಪ್ರಭುಗಳು ಸಾಕ್ಷಾತ್ಕರಿಸಿ ಅನುಪಮವಾದ ಆನಂದವನ್ನೂ ಆಶ್ಚರ್ಯವನ್ನೂ ಒಟ್ಟಿಗೆ ಅನುಭವಿಸಿದರೆಂದು ಪ್ರತಿಯೊಬ್ಬರೂ ಹೇಳಿಕೊಳ್ಳುವಂತೆ ಇದ್ದಿತು. ಶ್ರೀಗಳವರನ್ನೂ ನಾನಾದೇಶಗಳಿಂದ ಉತ್ಸವದರ್ಶನಕ್ಕೆ ಬಂದಿದ್ದ ಜನಸಮೂಹವನ್ನೂ ತಮ್ಮ ಗುರುಭಕ್ತಿ ಶ್ರದ್ಧಾದಿ ಗುರೂಪಚಾರದಿಂದ ಆನಂದಗೊಳಿಸಿ

ಪ್ರಭುಗಳವರು ಶ್ರೀಗಳವರು ಅನುಮತಿಯನ್ನು ಪಡೆದು ತೃತೀಯಾ ಸ್ಥಿರವಾರ ಪ್ರಾತಃಕಾಲದಲ್ಲಿ ರಾಜಧಾನಿಯನ್ನು ಕುರಿತು ಪ್ರಯಾಣ ಮಾಡಿದರು. ಅದೇ ದಿನದ ಮಧ್ಯಾಹ್ನ ಶ್ರೀ ಶಾರದಾಂಬೆಯವರ ಸನ್ನಿಧಿಯಲ್ಲಿ ಈಗಿನ ಶ್ರೀ ಸ್ವಾಮಿಗಳವರು ದಯಮಾಡಿ ವಿದ್ವತ್ಸಭೆಯನ್ನು ನಡೆಸಿ ಆ ಸಭೆಯಲ್ಲಿ ತಮ್ಮ ಅತ್ಯಂತ ಮಧುರವಾದ ಸಂಸ್ಕೃತ ವಾಣಿಯಿಂದ ಶ್ರೀ ಶಂಕರ ಭಗವತ್ಪಾದರವರ ಚರಿತ್ರವನ್ನು ಸಂಗ್ರಹವಾಗಿ ಉಪನ್ಯಾಸಿಸಿ ಶ್ರೀ ಶಾರದಾಂಬೆಯವರನ್ನು ಶೃಂಗೇರಿಯಲ್ಲಿ ಸ್ಥಾಪಿಸಿರುವುದಕ್ಕೆ ಉದ್ದೇಶವನ್ನೂ ಅದನ್ನು ಸಾಂಗವಾಗಿ ನೆರವೇರಿಸುವುದಕ್ಕೋಸ್ಕರವೇ ಹಿಂದಿನ ಗುರುಗಳವರು ಆಲಯವನ್ನು ಸ್ಥಿರವಾಗಿರುವಂತೆ ನೂತನ ಪಡಿಸಿರುವರೆಂಬ ಅಂಶವನ್ನೂ ಈ ಭಾಗದಲ್ಲಿ ಶಿಷ್ಯ ಜನರ ಕರ್ತವ್ಯವನ್ನೂ ವಿಶದವಾಗಿ ಅಪ್ಪಣೆಕೊಡಿಸಿ ಪಂಡಿತರಿಗೂ ಇತರರಿಗೂ ಯೋಗ್ಯತಾನುಗುಣವಾಗಿ ಅನರ್ಘವಾದ ವಸ್ತ್ರಗಳನ್ನು ಕೊಡಿಸಿ ಸನ್ಮಾನಿಸಿದರು. ಈ ಸಮಯದಲ್ಲಿ ಗಾಯಕವಾಡ ಮಹಾರಾಜರ ಸಂಸ್ಥಾನದಿಂದ ಕಳುಹಿಸಲ್ಪಟ್ಟಿದ್ದ ಪ್ರತಿನಿಧಿಗಳು ಶ್ರೀ ಸ್ವಾಮಿಗಳವರ ಸಂದರ್ಶನವನ್ನು ಮಾಡಿ ವಸ್ತ್ರಾಭರಣಾದಿರೂಪವಾದ ಉಪಹಾರಗಳನ್ನು ಶ್ರೀಸ್ವಾಮಿಗಳವರ ಸನ್ನಿಧಾನದಲ್ಲಿ ಸಮರ್ಪಿಸಿ ರಾಜಸಂದೇಶವನ್ನು ತಿಳಿಸಿಕೊಂಡರು. ಆ ರಾಜರ ಅಭಿಪ್ರಾಯವನ್ನು ತಿಳಿದು ಶ್ರೀಸ್ವಾಮಿಗಳವರು ಆನಂದಿಸಿ ಅವರ ಶ್ರೇಯಸ್ಸಿಗಾಗಿ ಶ್ರೀ ಶಾರದಾಂಬೆಯವರ ಪ್ರಸಾದಗಳನ್ನು ಆ ಸಂಸ್ಥಾನದಿಂದ ಬಂದಿದ್ದವರ ವಶಕ್ಕೆ ಕೊಡಿಸಿ ಅಲ್ಲಿಂದ ಬಂದ ಪಂಡಿತರನ್ನೂ ಸನ್ಮಾನಿಸಿದರು.

ಈ ಮಹೋತ್ಸವಕ್ಕೆ ಬಂದಿದ್ದ ಶಿಷ್ಯರಲ್ಲಿ ಪ್ರಮುಖರಾದ ಅನೇಕ ಜನರು ಕುಂಭಾಭಿಷೇಕವಾದ ದಿನದ ಮಧ್ಯಾಹ್ನ ನರಸಿಂಹವನದಲ್ಲಿರುವ ಹಿಂದಿನ ಗುರುಗಳವರ ಆಲಯದಲ್ಲಿ ಸಭೆಸೇರಿ ಅವರ ಮಾಹಾತ್ಮ್ಯವನ್ನೂ ಅಪೂರ್ವವಾದ ಅವರ ಗುಣಗಳನ್ನೂ ಆ ಪುಣ್ಯಪುರುಷರಿಂದ ಶಿಷ್ಯ ಜನರಿಗೆ ಉಂಟಾದ ಪ್ರಯೋಜನವನ್ನೂ ವಿಶೇಷವಾಗಿ ಕೊಂಡಾಡಿ ತಮ್ಮ ಅಭ್ಯುದಯಕ್ಕೂ ಕೃತಜ್ಞತಾಪ್ರದರ್ಶನಕ್ಕೂ ತಕ್ಕಂತೆ ಅವರಿಗೆ ಅಧಿಷ್ಠಾನದ ಬಳಿಯಲ್ಲಿ ಪ್ರತಿದಿನವೂ ನಡೆಯಬೇಕಾದ ಪೂಜಾ ನಿವೇದನಾದಿಗಳೂ ಆ ಗುರುಗಳವರ ಅವತಾರದಿನವಾದ ಫಾಲ್ಗುಣ ಕೃಷ್ಣೈಕಾದಶಿಯಲ್ಲಿ ಜನ್ಮೋತ್ಸವ ಸಮಾರಂಭವೂ ಅವರ ನಿರ್ಯಾಣ ದಿನವಾದ ಚೈತ್ರಶುದ್ಧ ದ್ವಿತೀಯೆಯಲ್ಲಿ ಆರಾಧನೆಯೂ ಶಾಶ್ವತವಾಗಿ ನಡೆದು ಬರುವಂತೆ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕವೆಂದೂ, ಇದಕ್ಕೋಸ್ಕರ 50 ಸಾವಿರ ರೂಪಾಯಿಗಳನ್ನು ಮೂಲಧನವಾಗಿ ಶೇಖರಿಸಿ ಆ ದ್ರವ್ಯವನ್ನು ಶ್ರೀಮಠದಲ್ಲಿಡಿಸಿ ಅದರ ವೃದ್ಧ್ಯಂಶದಿಂದ ಈ ಗುರುಸೇವೆಯನ್ನು ನಡೆಸಬೇಕೆಂದೂ ಆಗ ಸನ್ನಿಹಿತರಾದವರು ತಮ್ಮ ತಮ್ಮ ಶಕ್ತಿಗೆ ತಕ್ಕಂತೆ ದ್ರವ್ಯವನ್ನು ಸಮರ್ಪಿಸಬಹುದೆಂದೂ, ಇನ್ನೂ ಬೇಕಾಗಬಹುದಾದ ದ್ರವ್ಯವನ್ನು ಇತರರಿಂದ ಸಂಗ್ರಹಿಸಿ ಉದ್ದಿಷ್ಟ ಕಾರ್ಯವನ್ನು ಪೂರ್ತಿಗೊಳಿಸಬೇಕೆಂದೂ

ತೀರ್ಮಾನಿಸಿಕೊಂಡು ಅದರಂತೆ ಒಂದು ಚಂದಾಪಟ್ಟಿಯನ್ನು ಮಾಡಿದರು. ಆ ದಿನವೇ ಗುರುಸೇವಾರೂಪವಾದ ಈ ಕಾರ್ಯಕ್ಕೆ 20 ಸಾವಿರ ರೂಪಾಯಿಗಳ ವಾಗ್ದಾನವು ಮಾಡಲ್ಪಟ್ಟಿತು. ತಮ್ಮ ಈ ಸಂಕಲ್ಪವು ಶಾಶ್ವತವಾಗಿ ನಡೆದು ಬರುವಂತೆ ಆಜ್ಞಾಪಿಸಿ ತಕ್ಕ ವ್ಯವಸ್ಥೆಯನ್ನು ಮಾಡಿಸಬೇಕೆಂದು ಶ್ರೀಸ್ವಾಮಿಗಳವರ ಸನ್ನಿಧಿಯಲ್ಲಿ ತಿಳಿಸಿಕೊಂಡು ವಿಜ್ಞಾಪನಪತ್ರಿಕೆಯನ್ನು ಒಪ್ಪಿಸಿದರು. ಈ ರೀತಿಯಿಂದ ಮಾಡಿದ ಶಿಷ್ಯಜನರ ಸತ್ಪ್ರಯತ್ನವು ಇದುವರೆಗೆ ಕೆಲವು ದೂರ ನಡೆದು ಅವರ ಸಂಕಲ್ಪದಂತೆ ಗುರುಸೇವೆಯು ಆಚರಿಸಲ್ಪಡುತ್ತಲಿರುವುದು. ಹೀಗೆ ಉತ್ಸವಕ್ಕೆ ಬಂದ ಶಿಷ್ಯರೆಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ಅತ್ಯಂತ ಶ್ಲಾಘ್ಯ ರೀತಿಯಿಂದಾಚರಿಸಿ ಶ್ರೀಗಳವರಿಂದ ಪ್ರಸಾದಗಳನ್ನು ಹೊಂದಿ ಅವರ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ಸ್ಥಳಗಳನ್ನು ಕುರಿತು ತೆರಳಿದರು.

ಈಗ ಶೃಂಗಗಿರಿ ಸಂಸ್ಥಾನದ ವ್ಯಾಖ್ಯಾನ ಭದ್ರಪೀಠವನ್ನಲಂಕರಿಸಿರುವ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳವರಿಗೆ ಶೃಂಗೇರಿಯೇ ಜನ್ಮಭೂಮಿಯು. ಇವರ ಪೂರ್ವಾಶ್ರಮದ ಪಿತಾಮಹರು ವ್ಯಾಕರಣಶಾಸ್ತ್ರದಲ್ಲಿ ನಿಷ್ಕೃಷ್ಟವಾದ ಪಾಂಡಿತ್ಯವನ್ನು ಸಂಪಾದಿಸಿದ್ದರೆಂದೂ, ಅನೇಕ ಸಂವತ್ಸರಗಳ ಪರ್ಯಂತ ಉತ್ತರ ದೇಶದ ಪುಣ್ಯ ಸ್ಥಳಗಳಲ್ಲಿ ವಾಸಮಾಡಿ ಪರಮಶಾಂತರಾಗಿಯೂ ವಿರಕ್ತರಾಗಿಯೂ ಇದ್ದು ದೇವತೋಪಾಸನೆಯನ್ನು ಮಾಡಿದರೆಂದೂ, ಬಳಿಕ ಪೂರ್ವದ ನರಸಿಂಹಭಾರತೀ ಸ್ವಾಮಿಗಳವರನ್ನಾಶ್ರಯಿಸಿ ಆಸ್ಥಾನ ಪಂಡಿತರಾಗಿ ಶೃಂಗೇರಿಗೆ ಬಂದು ವಾಸ ಮಾಡಿದರೆಂದೂ ತಿಳಿದು ಬಂದಿದೆ. ಅಂತಹ ಪಂಡಿತವರ್ಯರ ವಂಶದಲ್ಲಿ ಜನಿಸಿದ ಈಗಿನ ಗುರುಗಳು ಬಾಲ್ಯದಿಂದಲೂ ಅತ್ಯಂತ ಮೇಧಾವಿಗಳೂ ವಿನೀತರೂ ಶಾಂತರೂ ಮಿತಭಾಷಿಗಳೂ ಆಗಿದ್ದರು. ಇವರೊಡನೆ ಜನಿಸಿದ ಹದಿಮೂರು ಮಂದಿ ಸಹೋದರ ಸಹೋದರಿಯರುಗಳು ಅಲ್ಪಾಯುಸ್ಸಿನಿಂದ ವಿಧಿವಶರಾದರು. ಇವರು ಬಾಲ್ಯದಲ್ಲಿ ರಾಜಕೀಯಪಾಠಶಾಲೆಯಲ್ಲಿ ತಕ್ಕಮಟ್ಟಿಗೆ ದೇಶಭಾಷಾಭ್ಯಾಸವನ್ನು ಮಾಡಿ ಕೆಲವು ದೂರ ಆಂಗ್ಲೇಯಭಾಷೆಯನ್ನೂ ಕಲಿತು ತಮ್ಮ ಸಹಪಾಠಿಗಳ ಮಧ್ಯದಲ್ಲಿ ಅಗ್ರಗಣ್ಯರೆನಿಸಿಕೊಂಡರು. ಇವರ ವಿನಯಾದಿ ಗುಣಗಳನ್ನೂ ವಿದ್ಯಾಭ್ಯಾಸದಲ್ಲಿದ್ದ ಆದರವನ್ನೂ ಬುದ್ಧಿಶಕ್ತಿಯನ್ನೂ ಒಂದು ಸಂದರ್ಭದಲ್ಲಿ ಕಂಡು ಇವರು ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿದರೆ ಪ್ರಸಿದ್ಧ ಪಂಡಿತರಾಗುವರೆಂದು ತಿಳಿದು ಈ ಲೇಖಕನು ಶ್ರೀಗಳವರಲ್ಲಿ ಪ್ರಸ್ತಾಪಿಸಲಾಗಿ ಶ್ರೀಗಳವರು ಅಂತಹ ಬುದ್ಧಿಶಾಲಿಗಳನ್ನಾಧರಿಸಿ ಕಾಲವಿಶೇಷದಿಂದ ಮಲಿನಭಾವವನ್ನು ಹೊಂದುತ್ತಲಿರುವ ಶಾಸ್ತ್ರಾಭ್ಯಾಸವನ್ನು ಮಾಡಿಸುವುದು ಧರ್ಮೋನ್ನತಿಗೆ ಕಾರಣವಾಗುವುದೆಂದೂ ಹಾಗೆ ಮಾಡುವುದು ಕರ್ತವ್ಯವೆಂದೂ ಈ ಲೇಖಕನಿಗೆ ನಿರೂಪಿಸಿದರು. ಕೇವಲ ದರಿದ್ರರಾಗಿಯೂ ಹಲವು ಮಂದಿ ಮಕ್ಕಳ

ವಿಯೋಗದಿಂದ ಖಿನ್ನರಾಗಿಯೂ ಇದ್ದ ಇವರ ಮಾತಾಪಿತೃಗಳಿಗೆ ಶ್ರೀಗಳವರ ನಿಯೋಗವನ್ನು ತಿಳಿಸಿ ಅವರ ಅನುಮತಿಯಿಂದ ಇವರನ್ನು ಆಂಗ್ಲೇಯ ಶಾಲೆಯಿಂದ ಹಿಂದಕ್ಕೆ ಬರಮಾಡಿ ಶೃಂಗಗಿರಿ ಸದ್ವಿದ್ಯಾ ಸಂಜೀವಿನೀ ಪಾಠಶಾಲೆಯಲ್ಲಿ ಸೇರಿಸಿ, ಸಂಸ್ಕೃತ ವಿದ್ಯಾಭ್ಯಾಸಕ್ಕೆ ಅನುಕೂಲ ಪಡಿಸಲಾಯಿತು. ಇವರು ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ವಿದ್ಯಾವ್ಯಾಸಂಗ ಮಾಡಿ ಅತಿಕ್ಷಿಪ್ರ ಕಾಲದಲ್ಲಿ ಕಾವ್ಯನಾಟಕಾಲಂಕಾರಗಳಲ್ಲಿ ಜ್ಞಾನವನ್ನು ಸಂಪಾದಿಸಿದರು. ಈ ಪಾಠಶಾಲೆಯ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ಅವರನ್ನು ಪ್ರೋತ್ಸಾಹಿಸುವುದಕ್ಕೆ ಶ್ರೀಗಳವರು ವರ್ಷಕ್ಕೊಂದು ಸಾರಿ ಪಾಠಶಾಲೆಗೆ ದಯಮಾಡಿಸುತ್ತಲಿದ್ದ ಸಂದರ್ಭದಲ್ಲಿ ಅಲ್ಲಿಯ ವಿದ್ಯಾರ್ಥಿಗಳ ಮಧ್ಯದಲ್ಲಿ ನಮ್ರತೆಯಿಂದಲೂ ಸಮಾನಾಧಿಕರಣಜ್ಞಾನದಿಂದಲೂ ಕೇಳಿದ ಪ್ರಶ್ನೆಗೆ ಕೂಡಲೇ ತಕ್ಕ ಉತ್ತರಗಳನ್ನು ಕೊಡುವುದರಿಂದಲೂ ಎಲ್ಲರನ್ನೂ ಮೀರುತ್ತಲಿದ್ದ ಈ ವಿದ್ಯಾರ್ಥಿಯನ್ನು ನೋಡಿ ಶ್ರೀಗಳವರು ಆಶ್ಚರ್ಯಪಟ್ಟು ಈತನು ಪ್ರಸಿದ್ಧ ಪಂಡಿತನಾಗುವನೆಂದೂ ಈತನಿಗೆ ತರ್ಕಶಾಸ್ತ್ರಾಧ್ಯಯನವನ್ನು ಮಾಡಿಸತಕ್ಕುದೆಂದೂ ಈ ಲೇಖಕನಿಗೆ ಆಜ್ಞಾಪಿಸಿ ಈ ವಿದ್ಯಾರ್ಥಿಯನ್ನು ಅನುರೂಪವಾದ ಬಹುಮಾನದಿಂದ ಪ್ರೋತ್ಸಾಹಿಸಿದರು. ಶ್ರೀಗಳವರ ನಿರೂಪದಂತೆ ಇವರಿಗೆ ತರ್ಕಶಾಸ್ತ್ರಾಧ್ಯಯನಕ್ಕೆ ಅನುಕೂಲಪಡಿಸಿದ್ದಾಯಿತು. ಒಂದು ಕಾಲದಲ್ಲಿ ಶ್ರೀಗಳವರು ಅಪ್ಪಣೆ ಕೊಡಿಸಿರುವ ದೇವೀ ಸ್ತೋತ್ರಪದ್ಯಗಳ ಅರ್ಥವನ್ನು ವಿಚಾರ ಮಾಡಿದರೆ ಈ ವಿದ್ಯಾರ್ಥಿಯನ್ನು ತಮ್ಮ ಶಿಷ್ಯರನ್ನಾಗಿ ಪರಿಗ್ರಹಿಸಬೇಕೆಂಬ ಉದ್ದೇಶವು ಕೆಲವು ವರ್ಷಗಳಿಗೆ ಪೂರ್ವವೇ ಶ್ರೀಗಳವರ ಚಿತ್ತದಲ್ಲಿ ಅಂಕುರಿಸಿದ್ದಂತೆ ಧಾರಾಳವಾಗಿ ತಿಳಿದುಕೊಳ್ಳಬಹುದು. ಅವು ಯಾವುವೆಂದರೆ :

ಭಕ್ತಿಸುಧಾತರಂಗಿಣಿಯ ಪುಟ 445

ಕಾಲಾಹಂಕಾರನಿರ್ವಾಪಣಕುಣಹೃದಯಾಂಭೋಜಜಾಲಾರುಣಾಭೇ
ಕಾಯಕ್ಲೇಶಾದಿಹೀನ್ಯೈರಪಿಸುಖಿಸುಲಭ್ಯೈಃ ಸೇವನ್ಯೈಃ ಪ್ರೀಯಮಾಣೇ ।
ಕಾಣಾದಾಕ್ಷಾಂಘ್ರಿ ಶೇಷಪ್ರಮುಖಬುಧವರ್ಯೈಃ ಚಿಂತ್ಯಮಾನಾಂಘ್ರಿ ಪದ್ಮೇ
ಸರ್ವಜ್ಞಂ ಶ್ರೀನೃಸಿಂಹಂ ಕುರು ಶಿವದಯಿತೇ ಸತ್ವರಂ ಮದ್ವಿನಮ್ರಮ್ ॥1॥

ಯತ್ಪಾದಾಂಭಃ ಪ್ರಭೂತಪ್ರಣತಿರತಿ ಜಪಾತ್ಕರ್ತುಮೀಷ್ಟೇಜಗತ್ಯಾಂ
ಕಾದಾಚಿತ್ಕ್ಯಾಪಿ ಮೂಕಂ ಸುರಗುರುಜಯಿನಂ ವಾಗ್ಭಿರನ್ಯಾದೃಶೀಭಿಃ ।
ಸಾತ್ವಂ ವೇಲಾವಿಹೀನಪ್ರಸೃಮರ ಕರುಣಾಪೂರಪೂರ್ಣೈಃ ಕಟಾಕ್ಷೈಃ
ಸರ್ವಜ್ಞಂ ಶ್ರೀನೃಸಿಂಹಂಕುರು ಶಿವದಯಿತೇ ಸತ್ವರಂ ಮದ್ವಿನಮ್ರಮ್ ॥2॥

ಯಾಂಬೋದ್ಧುಂ ಶಾನ್ತಿದಾನ್ತಿಪ್ರಮುಖಗುಣವರ್ಯೈಃ ಸಂಯತಂತೇಯತೀನ್ದ್ರಾಃ
ಯಸ್ಯಾಃ ಕಾರುಣ್ಯಲೇಶಾಜ್ಜಗತಿ ಜನತತಿ ರ್ಜನ್ಮಮೃತ್ಯೂಜಹಾತಿ ।
ಸಾತ್ವಂ ಸಚ್ಚಿತ್ಸ್ವರೂಪಾಶುಕಮುಖಮುನಿಭಿಶ್ಚಿನ್ತ್ಯಮಾನಾನಿತಾಂತಂ
ಸರ್ವಜ್ಞಂ ಶ್ರೀನೃಸಿಂಹಂಕುರು ಶಿವದಯಿತೇ ಸತ್ವರಂ ಮದ್ವಿನಮ್ರಮ್ ॥3॥

ವಿದ್ಯಾನಾಥಾಬ್ಜನೇತ್ರ ಪ್ರಮುಖಸುರವರಾರಾಧ್ಯಪಾದಾರವಿನ್ದೇ
ವಿದ್ಯಾದಾನಪ್ರವೀಣೇ ಪ್ರಣತಜನಮನೋ ಬೋಧದಾನವ್ರತಾಢ್ಯೇ ।
ಕಾಯಶ್ರೀಧಿಕ್ಕೃತೋದ್ಯದ್ದಿನಕರ ನಿಕರೇ ಚಕ್ರರಾಜಾಸನಸ್ಥೇ
ಸರ್ವಜ್ಞಂ ಶ್ರೀನೃಸಿಂಹಂಕುರು ಶಿವದಯಿತೇ ಸತ್ವರಂ ಮದ್ವಿನಮ್ರಮ್ ॥4॥

ಈ ಪದ್ಯಗಳಿಂದ ಸ್ತುತಿಸಲ್ಪಟ್ಟ ಪರದೇವತೆಯ ಅನುಗ್ರಹದಿಂದಲೂ ಜನ್ಮಾಂತರೀಯ ಸುಕೃತಪರಿಪಾಕದಿಂದಲೂ ಇವರಿಗೆ ತರ್ಕಶಾಸ್ತ್ರದಲ್ಲಿ ಪ್ರಕರಣಗ್ರಂಥಪಾಠಗಳೆಲ್ಲವೂ ಪೂರ್ಣವಾಗಿ ಆ ಶಾಸ್ತ್ರದಲ್ಲಿ ಒಳ್ಳೆಯ ಪ್ರವೇಶವುಂಟಾಯಿತು. ಶ್ರೀಗಳವರು ತಮ್ಮ ಯಾತ್ರೆಯನ್ನು ಪೂರ್ತಿಮಾಡಿಕೊಂಡು ಶೃಂಗೇರಿಗೆ ಚಿತ್ತೈಸಿದ ಬಳಿಕ ಇವರು ವ್ಯಾಸಂಗ ಮಾಡಿದ್ದ ಗ್ರಂಥಗಳಲ್ಲಿ ಪರೀಕ್ಷಿಸಲು ತೃಪ್ತಿಕರವಾದ ಉತ್ತರಗಳನ್ನು ಕೊಟ್ಟು ಶ್ರೀಗಳವರನ್ನು ಸಂತೋಷಗೊಳಿಸಿದರು. ತಮ್ಮ ಆಶ್ರಮವಾದ ಬ್ರಹ್ಮಚರ್ಯವನ್ನು ಸ್ನಾನಸಂಧ್ಯಾಗ್ನಿ ಕಾರ್ಯಾನುಷ್ಠಾನದಿಂದ ಸಾಧ್ಯವಾದಷ್ಟು ಕಾಪಾಡಿಕೊಂಡು ಬರುತ್ತಲಿದ್ದುದನ್ನು ಶ್ರೀಗಳವರು ತಿಳಿದು ಆನಂದಿಸಿ :

ತಿಷ್ಠಾಮ್ಯತ್ರೈವಮಾತಸ್ತವಪದಯುಗಳಂ ವೀಕ್ಷಮಾಣಃ ಪ್ರಮೋದಾತ್
ನಾಹಂ ತ್ಯಕ್ತ್ವಾ ತವಾಂಘ್ರಿಂ ಸಕಲ ಸುಖಕರಂ ಕ್ವಾಪಿಗಚ್ಛಾಮಿನೂನಂ ।
ಛಾಯಾಂಮತ್ಕಾಂ ವಿಧತ್ಸ್ವಪ್ರವಚನನಮನಧ್ಯಾನಪೂಜಾಸು ಶಕ್ತಾಂ
ಶುದ್ಧಾಮೇಕಾಂತ್ರಿಲೋಕೀಜನನ ಪಟುವಿಧಿಪ್ರಾಣಕಾಂತೇ ನಮಸ್ತೇ ॥

ಭಕ್ತಿ ಸುಧಾತರಂಗಿಣಿ ಪುಟ 159

ಎಂಬ ಪದ್ಯದಿಂದ ಅಮ್ಮನವರನ್ನು ಪ್ರಾರ್ಥಿಸಿ ಆ ದೇವಿಯು ತಮ್ಮ ಪ್ರಾರ್ಥನೆಯನ್ನು ನೆರವೇರಿಸುವುದಕ್ಕೋಸ್ಕರವೇ ಈ ವ್ಯಕ್ತಿಯನ್ನು ಸಿದ್ಧ ಪಡಿಸುತ್ತಲಿರುವಳೆಂದು ನಂಬಿ ಈ ವಿದ್ಯಾರ್ಥಿಗೆ ವೇದಾಂತಶಾಸ್ತ್ರೋಪಯೋಗಿಯಾದ ಪೂರ್ವ ಮೀಮಾಂಸಾಶಾಸ್ತ್ರವನ್ನು ತಿಳಿಸುವುದಕ್ಕೋಸ್ಕರ ಇವರನ್ನು ಅಂತರಂಗಕ್ಕೆ ಕರೆದು ವಿಶೇಷವಾಗಿ ಅನುಗ್ರಹಿಸಿ ಬೆಂಗಳೂರು ಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀ ಪಾಠಶಾಲೆಗೆ ಕಳುಹಿಸಿದರು. ಒಂದು ವರ್ಷಕಾಲ

ಪೂರ್ವಮೀಮಾಂಸಾ ಶಾಸ್ತ್ರ ವ್ಯಾಸಂಗವನ್ನು ಮಾಡುವಷ್ಟರಲ್ಲಿ ಶ್ರೀಗಳವರ ಅನುಗ್ರಹಕ್ಕೆ ಭಾಜನರಾದ ಇವರಿಗೆ ಆ ಮಹನೀಯರ ಸಂಕಲ್ಪದಂತೆ ತುರೀಯಾಶ್ರಮ ಪ್ರಾಪ್ತಿಯಾಗಿ ಇವರು ಶ್ರೀಗಳವರ ಸ್ಥಾನಕ್ಕೆ ಬಂದರು. ಆಶ್ರಮವಾದ ಎರಡು ವರ್ಷಗಳ ಕಾಲದಲ್ಲಿ ಶ್ರೀಗಳವರಲ್ಲಿ ವ್ಯಾಸಂಗ ಮಾಡಿ ಅವರ ಅನುಗ್ರಹಕ್ಕೆ ಪಾತ್ರರಾಗಿದ್ದ ಹಾನಗಲ್ಲು ಸ್ಥಳದ ಪಂಡಿತ ವಿರೂಪಾಕ್ಷ ಶಾಸ್ತ್ರಿಗಳ ಮುಖದಿಂದ ತರ್ಕವೇದಾಂತ ಶಾಸ್ತ್ರ ಶ್ರವಣ ಮಾಡಿದರು. ಈ ಶಾಸ್ತ್ರಗಳನ್ನು ಸರಿಯಾಗಿ ಓದಿ ವ್ಯಾಸಂಗ ಮಾಡಬೇಕಾದರೆ ಎಂತಹ ಧಾರಣಶಕ್ತರಿಗೂ ಮೇಧಾವಿಗಳಿಗೂ ಆರುವರ್ಷಗಳಿಗಿಂತಲೂ ಅಧಿಕ ಕಾಲವು ಬೇಕಾಗುವುದಲ್ಲದೆ ಯಾವ ರೀತಿಯಿಂದಲೂ ಅದಕ್ಕಿಂತ ನ್ಯೂನಕಾಲದಲ್ಲಿ ಸಾಧಿಸಲು ಆಗುವುದಿಲ್ಲವೆಂಬ ಸಂಗತಿಯು ಶಾಸ್ತ್ರಾಧ್ಯಯನ ಮಾಡಿದ ಪಂಡಿತರಿಗೇ ವೇದ್ಯವು. ಈ ರೀತಿಯಿಂದ ಅಧ್ಯಯನ ಮಾಡಿದ ಶ್ರೀಗಳವರ ಗ್ರಂಥೋಪಸ್ಥಿತಿಯನ್ನೂ ನಿಷ್ಕೃಷ್ಟ ಜ್ಞಾನವನ್ನೂ ಪ್ರವಚನ ಸಾಮರ್ಥ್ಯವನ್ನೂ ನೋಡಿದರೆ ಗಿರಿಗಳೆನಿಸಿದ್ದು ಬಳಿಕ ತೋಟಕಾಚಾರ್ಯರೆಂದು ಪ್ರಸಿದ್ಧಿಯನ್ನು ಪಡೆದವರಿಗೆ ಆಚಾರ್ಯ ಭಗವತ್ಪಾದರವರ ಸಂಕಲ್ಪ ಮಾತ್ರದಿಂದ ಶಾಸ್ತ್ರ ಪಾಂಡಿತ್ಯಶಕ್ತಿಯುಂಟಾದಂತೆ ಹಿಂದಿನ ಶ್ರೀಗಳವರ ಸಂಕಲ್ಪ ಮಾತ್ರದಿಂದಲೂ ಅವರ ಪ್ರಾರ್ಥನಾ ಬಲದಿಂದಲೂ ಇವರಿಗೆ ಈ ಶಕ್ತಿಯು ಬಂದಿರುವುದೆಂದು ಹೇಳಲು ಸ್ವಲ್ಪವೂ ಸಂಕೋಚ ಪಡಬೇಕಾದುದಿಲ್ಲವು.

ಈ ರೀತಿಯಾಗಿ ಮಹಾಮಹಿಮಭೂಮಿಗಳಾದ ಶ್ರೀಮತ್ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳವರ ಅಮೋಘವಾದ ಸಂಕಲ್ಪದಿಂದ ಅವರ ಶಿಷ್ಯಭಾವವನ್ನು ಪಡೆದಿರುವ ಈಗಿನ ಗುರುಗಳಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಆ ಮಹನೀಯರ ದಿಗಂತವಿಶ್ರಾಂತವಾದ ಕೀರ್ತಿಗೂ ಅಂತಹ ಕೀರ್ತಿಶಾಲಿಗಳಿಂದ ಅಲಂಕರಿಸಿಲ್ಪಟ್ಟಿದ್ದ ಪರಮ ಪವಿತ್ರವಾದ ಆಚಾರ್ಯಸ್ಥಾನಕ್ಕೂ ಲೇಶಮಾತ್ರವೂ ಕೊರತೆಯನ್ನುಂಟುಮಾಡದೆ ತಮ್ಮ ಗುರುಗಳು ಆಚರಿಸುತ್ತಲಿದ್ದ ಕಾರ್ಯಗಳನ್ನು ಸಮಗ್ರವಾಗಿ ಆಚರಿಸುತ್ತ ಲೋಕಪ್ರಸಿದ್ಧರಾದ ತಮ್ಮ ಗುರುಗಳಿಗೆ ಎಲ್ಲಾ ವಿಧದಿಂದಲೂ ಅನುರೂಪರಾದ ಶಿಷ್ಯರೆಂದು ಸಕಲ ಜನರಿಂದಲೂ ಪ್ರಸಿದ್ಧಿಯನ್ನು ಪಡೆದು ಅದ್ವೈತಮತಾವಲಂಬಿಗಳ ಸುಕೃತಪರಿಪಾಕಫಲವೆನಿಸಿ ಶ್ರೀ ಶಂಕರ ಭಗವತ್ಪಾದಾಚಾರ್ಯಸ್ಥಾಪಿತವಾದ ದಕ್ಷಿಣಾಮ್ನಾಯ ಪೀಠದಲ್ಲಿ ಸರ್ವೋತ್ತಮರಾಗಿ ಪ್ರಕಾಶಿಸುತ್ತಲಿರುವರು.

★ ★ ★

ನಖ್ಯಾತ್ಯೈ ನಚಮಾನ ಸಂಗ್ರಹಕೃತೇ ನದ್ರವ್ಯಲಾಭಾಯ ವಾ
ಯತ್ನಸ್ಸ್ವಚರಿತಃ ಕೃತಾವಿಹಮಯಾ ಸನ್ಮಿತ್ರಸಂಚೋದನಾತ್ ।
ಯದ್ದೃಷ್ಟಂ ಬಹುಧಾಶ್ರುತಂ ಗುರುಮುಖಾದ್ಯಚ್ಚಾಭವಚ್ಚಿತ್ತಗಂ
ತದ್‌ವೃತ್ತಂ ವ್ಯಲಿಖಂ ಗುರೋಃ ಪದನತಸ್ಸಾಫಲ್ಯಸಿದ್ಧ್ಯೈಜನೇಃ ॥

ಜಯತು ಜಯತು ದೇವೀ ಶಾರದಾ ಪಾರದಾಭಾ
ಜಯತು ಜಯತು ಧರ್ಮಃ ಶ್ರೌತಮಾರ್ಗಾನುಯಾಯೀ ।
ಜಯತು ಜಯತು ವೃತ್ತಂ ಸದ್ಗುರೋರ್ಮರ್ತ್ಯಲೋಕೇ
ಜಯತು ಜಯತು ಶೃಂಗಾದ್ರೀಶ್ವರಸ್ಸಂಯಮೀಂದ್ರಃ ॥

ಶ್ರೀ ಗುರುಭ್ಯೋ ನಮಃ

ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸದ್ಗುರು
ಚರಣಾರವಿಂದಾರ್ಪಿತಮಸ್ತು.

★ ★ ★